ಕರ್ನಾಟಕದಲ್ಲಿ ಹಸ್ತಪ್ರತಿಗಳ ಅಧ್ಯಯನದ ಸ್ವರೂಪ ಹಾಗೂ ಅದರ ತಾತ್ವಿಕ ನೆಲೆಗಳು

(ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ
ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧ)

ಸಂಶೋಧಕರು
ಪ್ರವೀಣ ಆರ್.

ಮಾರ್ಗದರ್ಶಕರು
ಡಾ. ವೀರೇಶ ಬಡಿಗೇರ
ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೨೦

ಕರ್ನಾಟಕದಲ್ಲಿ ಹಸ್ತಪ್ರತಿಗಳ ಅಧ್ಯಯನದ ಸ್ವರೂಪ ಹಾಗೂ ಅದರ ತಾತ್ವಿಕ ನೆಲೆಗಳು

(ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ
ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧ)

ಸಂಶೋಧಕರು
ಪ್ರವೀಣ ಆರ್.

ಮಾರ್ಗದರ್ಶಕರು
ಡಾ. ವೀರೇಶ ಬಡಿಗೇರ
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೨೦

ಮಾರ್ಗದರ್ಶಕರ ದೃಢೀಕರಣ ಪತ್ರ

ಪ್ರವೀಣ ಆರ್. ಅವರು ನನ್ನ ಮಾರ್ಗದರ್ಶನದಲ್ಲಿ **ಕರ್ನಾಟಕದಲ್ಲಿ ಹಸ್ತಪ್ರತಿಗಳ ಅಧ್ಯಯನದ ಸ್ವರೂಪ ಹಾಗೂ ಅದರ ತಾತ್ವಿಕ ನೆಲೆಗಳು** ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ವೀರೇಶ ಬಡಿಗೇರ
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: 15/12/2020

ಸಂಶೋಧಕರ ಪ್ರಮಾಣ ಪತ್ರ

ಕರ್ನಾಟಕದಲ್ಲಿ ಹಸ್ತಪ್ರತಿಗಳ ಅಧ್ಯಯನದ ಸ್ವರೂಪ ಹಾಗೂ ಅದರ ತಾತ್ವಿಕ ನೆಲೆಗಳು ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾದ **ಡಾ. ವೀರೇಶ ಬಡಿಗೇರ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸಿರುತ್ತೇನೆ. ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗೆ ಅಥವಾ ಇದರ ಯಾವುದೇ ಭಾಗವನ್ನು ಎಲ್ಲಿಯೂ ಪ್ರಕಟಣೆಗೆ ಸಲ್ಲಿಸಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಪ್ರವೀಣ ಆರ್.
ಸಂಶೋಧನ ವಿದ್ಯಾರ್ಥಿ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ:

ಪರಿವಿಡಿ

ಅಧ್ಯಾಯ : ಒಂದು

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಸ್ವರೂಪ

ಅಧ್ಯಾಯ : ಒಂದು

ಪ್ರಸ್ತಾವನೆ

ಪ್ರಾಚೀನ ಕನ್ನಡ ಸಾಹಿತ್ಯ, ಸಂಸ್ಕೃತಿ, ಲಿಪಿ, ಭಾಷೆ ಮುಂತಾದ ಸಂಗತಿಗಳ ಬಗ್ಗೆ ತಿಳಿದುಕೊಳ್ಳುವಲ್ಲಿ ಹಲವಾರು ಆಕರಗಳು ನೆರವಾಗುತ್ತವೆ. ಅವುಗಳಲ್ಲಿ ಹಸ್ತಪ್ರತಿಗಳು ಮುಖ್ಯವಾಗಿವೆ. ದೇಸಿ ಹಾಗೂ ವಿದೇಶಿ ವಿದ್ವಾಂಸರು ವೈಯಕ್ತಿಕವಾಗಿ ಹಾಗೂ ಸಾಂಸ್ಥಿಕವಾಗಿ ಹಸ್ತಪ್ರತಿಗಳನ್ನು ಸಂಗ್ರಹಿಸಿ ಸಂರಕ್ಷಿಸಿ ಪರಿಷ್ಕರಿಸಿ ಗ್ರಂಥರೂಪದಲ್ಲಿ ಪ್ರಕಟಿಸುತ್ತಾ ಬಂದಿದ್ದಾರೆ. ಇದೊಂದು ಶ್ಲಾಘನೀಯ ಕೆಲಸವಾಗಿದೆ. ಆದರೆ ಅದೇ ಹೊತ್ತಿಗೆ ಪ್ರಾಚೀನ ಹಸ್ತಪ್ರತಿಗಳು ಮತ್ತು ಅವುಗಳ ಅಧ್ಯಯನ ನಿರ್ಲಕ್ಷ್ಯಕ್ಕೆ ಒಳಗಾಗುತ್ತ ಬಂದಿರುವುದನ್ನು ಮರೆಯಲಾಗದು. ನಮ್ಮ ಸಾಂಸ್ಕೃತಿಕ ಅರಿವನ್ನು ವಿಸ್ತರಿಸುವಲ್ಲಿ ನೆರವಾದ ಪ್ರಾಚೀನ ಪಠ್ಯಗಳು ಮತ್ತು ಅವುಗಳ ಕುರಿತು ಬಹುಸಾಧ್ಯತೆಯ ಅಧ್ಯಯನ ಇಂದು ನಡೆಯಬೇಕಾದ ಅಗತ್ಯವಿದೆ.

ಆಯಾ ಕಾಲದ ವಿವಿಧ ಸಾಂಸ್ಕೃತಿಕ ಅಗತ್ಯಗಳಿಗಾಗಿ ರೂಪುಗೊಂಡ ಇಂಥ ಪ್ರಾಚೀನ ಪಠ್ಯಗಳು ನಿರ್ದಿಷ್ಟ ಮಾದರಿಗಳ ಮೂಲಕ ವ್ಯಕ್ತಿ ಮತ್ತು ಮತ ಕೇಂದ್ರಿತ ಸ್ಥಗಿತರೂಪಿ ಸಂಪಾದನೆ ಮತ್ತು ಓದಿಗೆ ಒಳಗು ಮಾಡಿರುವ ಕಾರಣ ಅವುಗಳು ನಮ್ಮ ಅರಿವಿನ ಭಾಗವಾಗುವುದರಲ್ಲಿ ಹಿನ್ನೆಡೆಯಾಗಿದೆ. ಈ ಧೋರಣೆಗಳು ಜ್ಞಾನದ ಬಹುರೂಪಗಳನ್ನು ನಿರಾಕರಿಸುತ್ತ ಬಂದಿವೆ. "ಕನ್ನಡ ಹಸ್ತಪ್ರತಿಗಳು ನನ್ನ ದೃಷ್ಟಿಯಲ್ಲಿ ಸಂಯೋಜಿತ ಜ್ಞಾನಪರಂಪರೆಯ ಮಾದರಿಗಳು. ಇದರೊಳಗಿನ ತಿಳುವಳಿಕೆ ಬಹುಕೇಂದ್ರಿತವಾದುದು.[೧] ಈ ಜ್ಞಾನ ಪರಂಪರೆಯ ಬಹುಮುಖ್ಯ ಗುಣವೆಂದರೆ ಜ್ಞಾನದ ಸೃಷ್ಟಿ ಮತ್ತು ಕಟ್ಟುಪಿಕೆ ಸಂಯೋಜಕ ಸ್ವಭಾವದ ಈ ಗುಣ ಒಂದು ಅಖಂಡ ಚರಿತ್ರೆಯ ಶೋಧವಾಗಿದೆ. ಹಾಗೆ ಇದಕ್ಕೆ ಸಾಮುದಾಯಿಕ ಜವಾಬ್ದಾರಿಯೂ ಇರುತ್ತದೆ ಎನ್ನುವುದು ಬಹುಮುಖ್ಯ ವಿಚಾರ.

ಇಂಥ ಸಾಮುದಾಯಿಕ ಪ್ರಜ್ಞೆಯ ತಿಳುವಳಿಕೆಯನ್ನು ವ್ಯಕ್ತಿ ಪ್ರಜ್ಞೆಯ ಖಾಸಗಿತನಗಳು ಹಾಗೂ ಸಾಂಸ್ಥಿಕ ಪ್ರಜ್ಞೆಯ ಮತಧರ್ಮಗಳು ಆಳುತ್ತ ಬಂದವು. ಕನ್ನಡ ಸಾಹಿತ್ಯ ಚರಿತ್ರೆ ಇದಕ್ಕೆ ಜ್ವಲಂತ ನಿದರ್ಶನ. ಇದರಿಂದಾಗಿ ಸಾರ್ವತ್ರಿಕ ಮತ್ತು ಸಾಂಸ್ಕೃತಿಕ ಚಹರೆಯುಳ್ಳ ಸಾಹಿತ್ಯ ಪರಂಪರೆ ನಿರ್ದಿಷ್ಟ ಮತಧರ್ಮ ಮನೋಧರ್ಮದ ನೆಲೆಯಲ್ಲಿ ಓದಲ್ಪಟ್ಟಿತು. ಪವಿತ್ರ ಮತ್ತು ಶ್ರೇಷ್ಠತೆಯ ಸೊಂಕು ತಗುಲಿತು. ಸಾಹಿತ್ಯ ಮತ್ತು ಅಸಾಹಿತ್ಯ, ಪಾಂಡಿತ್ಯ ಮತ್ತು ಪಾಮರ ಎನ್ನುವ ಶ್ರೇಣೀಕರಣಗಳು ರೂಪಗೊಂಡವು. ಇಂದಿನ ಪ್ರಕಟಿತ ಸಾಹಿತ್ಯದ ಸ್ವರೂಪದಲ್ಲಿ ಈ ಸಂಗತಿಗಳನ್ನು ಢಾಳಾಗಿ ಕಾಣಬಹುದು.

ಕನ್ನಡ ಹಸ್ತಪ್ರತಿಗಳ ಹೊಸ ಓದಿನ ಮೂಲಕ ಕನ್ನಡ ಸಾಹಿತ್ಯ ಅಧ್ಯಯನದಲ್ಲಿ ರೂಢಿಗೊಂಡಿರುವ ನಿರ್ದಿಷ್ಟ ಓದಿನ ಹಾಗೂ ವ್ಯಾಖ್ಯಾನದ ಮಾದರಿಗಳನ್ನು ಮರು ಪರಿಶೀಲಿಸುವ ತುರ್ತು ಇದೆ. ಕನ್ನಡ ಹಸ್ತಪ್ರತಿಗಳ ಮತ್ತು ಸಮುದಾಯದ ಸಂಬಂಧ ತುಂಬಾ ಕುತೂಹಲವಾದದ್ದು. ಹಾಗೆ ನೋಡಿದರೆ ಸಾಹಿತ್ಯ ಎನ್ನುವುದು ನಿರ್ದಿಷ್ಟ ಸಾಮಾಜಿಕ ಪಠ್ಯಾಧಾರಿತ ಸಮುದಾಯಗಳನ್ನು ಉದ್ದೇಶಿಸಿ ಹುಟ್ಟಿರುವಂಥದ್ದು ಅಥವಾ ಅಂತಹ ಸಮುದಾಯ ಗಳ ಅಸ್ತಿತ್ವಕ್ಕಾಗಿಯೇ ಉಪಯೋಗವಾಗುವಂಥದ್ದು. ಈ ಸಮುದಾಯಗಳು ತಮ್ಮನ್ನೇ ತಾವು ಬೇರೆ ರೀತಿಯಲ್ಲಿ ನಿರ್ವಹಿಸಿಕೊಳ್ಳುವುದು, ತಾವು ಹಂಚಿಕೊಳ್ಳುವ ಸಾಹಿತ್ಯಗಳು ಇದಕ್ಕಾಗಿ ಹೊಸ ಹೊಸ ವ್ಯಾಖ್ಯಾನಗಳನ್ನು ಹೊಸ ಹೊಸ ಚಿಂತನಾ ಕ್ರಮಗಳನ್ನು ಸೃಷ್ಟಿಸಿಕೊಳ್ಳುತ್ತವೆ. ಅಂದರೆ ಒಂದು ನಿರ್ದಿಷ್ಟ ಭಾಷೆಯನ್ನು, ಒಂದು ನಿರ್ದಿಷ್ಟ ಸಮುದಾಯವನ್ನು ಆಯ್ದು ಕೊಳ್ಳುವ ಪ್ರಕ್ರಿಯೆಯೆ ಇಲ್ಲಿ ಇರುತ್ತದೆ. ಇಂತಹ ಆಯ್ಕೆಗಳ ಹಿಂದಿರುವ ಮನೋಧರ್ಮವನ್ನು ಅರಿಯುವುದು ಬಹಳ ಮುಖ್ಯ. ಇಂದು ಕನ್ನಡದಲ್ಲಿ ಸಿಗುವ ಸಾವಿರಾರು ಹಸ್ತಪ್ರತಿಗಳು ಮತ್ತು ಹಲವು ಸಾಹಿತ್ಯಿಕ ಪ್ರಕಾರಗಳಲ್ಲಿ ಈ ಸಂಗತಿಯನ್ನು ಕಾಣಬಹುದು. ಎಷ್ಟೋ ಬಾರಿ ಮತೀಯ ಹಾಗೂ ಬೌದ್ಧಿಕ ಸಂಘರ್ಷಗಳು ಕೂಡ ಹಸ್ತಪ್ರತಿಗಳ ನಾಶ ಹಾಗೂ ವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದ್ದಿದೆ.

ಇಂತಹ ನಿರ್ದಿಷ್ಟ ಮನೋಧರ್ಮಗಳು ನಿರ್ದಿಷ್ಟ ಹಸ್ತಪ್ರತಿಯೊಂದನ್ನು ಬಹುಪಠ್ಯಗಳಿಗೆ ಕಾರಣವಾಗಿಸಿದರೆ ಅಷ್ಟೇ ಪ್ರಮಾಣದಲ್ಲಿ ಉಪೇಕ್ಷೆಗೂ ತಳ್ಳಿವೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಚರಿತ್ರೆಯ ಪ್ರಕ್ರಿಯೆಗಳು ಹೆಚ್ಚಾಗಿ ವೈದಿಕ ರೂಪದ ಶಾಸ್ತ್ರೀಯ ಹಿಂದೂ ವಾದದ ಒಳಗೇ ನಡೆದ ಸೈದ್ಧಾಂತಿಕ ಚರ್ಚೆಗಳಾಗಿ ಕಾಣುತ್ತವೆ. ಧರ್ಮ ಮತ್ತು ಸಾಹಿತ್ಯದ ಸಂದರ್ಭ ಕೆಲಸಲ ಅಂತಿಮವಾಗಿರಬಹುದು. ಅದೇ ಅಂತಿಮ ಎನ್ನುವಂತೆ ಉತ್ಪ್ರೇಕ್ಷೆಗೊಳಿಸಲಾಗಿದೆ. ಆಧುನಿಕ ಪೂರ್ವಸಾಹಿತ್ಯದ ಅಧ್ಯಯನ ಸಂಸ್ಕೃತದ ಮತ್ತು ಐರೋಪ್ಯ ಮಾದರಿಯಲ್ಲಿ ನಡೆಯಿತು. ಹೀಗೆ ಕನ್ನಡ ಭಾಷೆ ಮತ್ತು ಸಮಾಜ ಮೊದಲಿನಿಂದಲೂ ರಾಜಪ್ರಭುತ್ವ,

ಪಾಳೆಗಾರಿಕೆ, ಪುರೋಹಿತಶಾಹಿ, ವಸಾಹತುಶಾಹಿ ಪ್ರಭಾವಗಳಿಗೆ ಒಳಗಾಗುತ್ತ ಅದೇ ಹೊತ್ತಿಗೆ ಅದನ್ನು ವಿರೋಧಿಸುತ್ತ ಬೆಳೆದೇನೋ ಬಂದಿದೆಯಾದರೂ ನಮ್ಮದಲ್ಲದ ಭಾಷೆ ಸಂಸ್ಕೃತಿ ಓದು ಬರಹ ಅಧ್ಯಯನ ವ್ಯಾಮೋಹದಿಂದ ನಾವು ಮುಕ್ತರಾಗಿಲ್ಲ. ಸಾಮಾನ್ಯವಾಗಿ ಭಾಷೆಯ ಆಯ್ಕೆ ಮತ್ತು ಬರವಣಿಗೆ ಎಂದರೆ ಪ್ರಾದೇಶಿಕತೆ ಮತ್ತು ಸಾಮಾಜಿಕ ಪರಿಸರಗಳ ಜೊತೆ ತಮ್ಮ ಸಂಬಂಧವನ್ನು ಜನ ತಾವೇ ವ್ಯಾಖ್ಯಾನಿಸಿ ಕೊಳ್ಳುವುದೇ ಆಗಿರುತ್ತದೆ. ಹೀಗೆ ಬರವಣಿಗೆಯ ಸಂಸ್ಕೃತಿಯ ರೂಪಧಾರಣೆಯ ಹಿಂದೆ ಮನುಷ್ಯನ ಶ್ರಮ ಸೃಜನಶೀಲತೆಗಳೆರಡೂ ಜೀವ ವಾಹಿನಿಯಾಗಿರುತ್ತವೆ. ಯಾಕೆಂದರೆ ಬರವಣಿಗೆ(ಲಿಪಿಕರಣ) ಎನ್ನುವುದು ಶ್ರಮ ಪ್ರಧಾನವಾದ ಕ್ರಿಯೆ. ಭಾರತೀಯ ಸಂಸ್ಕೃತಿಯಲ್ಲಿ ಮಾತು, ಮೌನ ಹಾಗೂ ಬುದ್ದಿಗೆ ಇದ್ದ ಪಾವಿತ್ರ್ಯವನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಇಂದಿನ ಬಹುಮುಖಿ ಅಧ್ಯಯನ ಪ್ರೇರಣೆಗಳು ಹಾಗೂ ಮಾದರಿಗಳ ಹಸ್ತಪ್ರತಿಗಳೊಳಗೆ ಅಡಗಿದ ಕನ್ನಡ ಸಾಹಿತ್ಯ ಸಂಸ್ಕೃತಿಗಳನ್ನು ಆ ಮೂಲಕ ಪ್ರಕಟಗೊಂಡ ಸಂಪಾದನಾ ವಿಧಾನಗಳನ್ನು ಹೊಸದಾಗಿ ನಿರ್ವಚಿಸಲ ಒತ್ತಾಯಿಸುತ್ತದೆ.

ಹಸ್ತಪ್ರತಿಗಳಂತಹ ಪ್ರಾಚೀನ ಸಾಹಿತ್ಯ ಆಕರಗಳು ಕನ್ನಡ ಸಂಸ್ಕೃತಿಯೊಂದಿಗೆ ಹೊಂದಿದ ಸಂಬಂಧ ಹಾಗೂ ನಡೆಸಿದ ವಾಗ್ವಾದಗಳು ನನ್ನ ಮಟ್ಟಿಗೆ ಮುಖ್ಯವಾದವು. ಆಧುನಿಕ ತಿಳುವಳಿಕೆಯ ಮೂಲಕ ಇಂತಹ ಹಳೆಯ ಪಠ್ಯಗಳನ್ನು ಅರ್ಥೈಸಿಕೊಳ್ಳುವ ಹಾಗೂ ಇವುಗಳ ಓದಿನ ಮೂಲಕ ಇಂದಿನ ತಿಳುವಳಿಕೆಯ ಹಿನ್ನೆಲೆಯಲ್ಲಿ ಹೊಸ ಆಯಾಮವನ್ನು ಕಟ್ಟಿಕೊಳ್ಳುವ ನೆಲೆ ಈ ಅಧ್ಯಯನದ್ದಾಗಿದೆ.

ಹಸ್ತಪ್ರತಿಗಳನ್ನು ಕೇವಲ ಆಕರ ಅಥವಾ ಶುದ್ದಪಠ್ಯ, ಶುದ್ದಸಾಹಿತ್ಯ ಎನ್ನುವ ಸ್ಥಾಪಿತ ಮನೋಧರ್ಮಗಳಿಂದ ಹೊರಬಂದು ಅದನ್ನೊಂದು ಸಾಂಸ್ಕೃತಿಕ ಪಠ್ಯವಾಗಿಸಿ ಬಹುಕೇಂದ್ರಿತ ನೆಲೆಗಳಲ್ಲಿ ಓದುವ ಅಥವಾ ಅಧ್ಯಯನ ಮಾಡುವ ಅಗತ್ಯವಿದೆ. ನಿರ್ದಿಷ್ಟ ಪಠ್ಯದ ಅಧ್ಯಯನದ ಮೂಲಕ ನಿರ್ದಿಷ್ಟ ಚಿಂತನಾ ಮಾದರಿಗಳನ್ನು ಏಕಮುಖಿ ವ್ಯಾಖ್ಯಾನಗಳನ್ನು ಪಡೆದ ಗ್ರಂಥ ಸಂಪಾದನೆಯ ಮಾದರಿಯು ಹಸ್ತಪ್ರತಿಗಳನ್ನು ಬಳಸಿ ಬೀಸಾಕುವ ಹಾಗೂ ಶುದ್ದ, ಅಶುದ್ಧ ಎನ್ನುವ ವಿಭಾಗೀಕೃತ ನೆಲೆಯಲ್ಲಿ ಮಂಡಿಸುವುದರ ಜೊತೆಗೆ ಸಾಹಿತ್ಯಿಕ ಅಸಾಹಿತ್ಯಿಕ ಆಗಮಿಕ ಲೌಕಿಕ ಎನ್ನುವ ವಿಂಗಡಣೆಗೆ ಕಾರಣವಾದವು. ಈ ಸಂಗತಿ ಸಾಹಿತ್ಯ ಗುಣವುಳ್ಳ ಕೃತಿಗಳನ್ನಷ್ಟೇ ಆಯ್ದುಕೊಂಡು ಸಾಂಸ್ಕೃತಿಕ ಗುಣವುಳ್ಳ ಕೃತಿಗಳನ್ನು ಅಸಾಹಿತ್ಯಕವಾಗಿಸಿದವು.

“ಹಸ್ತಪ್ರತಿಗಳನ್ನು ಪಠ್ಯದ ವಿಷಯಕ್ಕೆ ಮಾತ್ರ ಸೀಮಿತಗೊಳಿಸಿ ಸ್ವೀಕರಿಸುವ ಮನೋಭಾವದ ಅಧ್ಯಯನಗಳು ನಡೆದಿವೆ. ನಂತರ “ಆಧುನಿಕ ಸಂದರ್ಭದಲ್ಲಿ ಇದು ಶಾಸ್ತ್ರ ಮರ್ಯಾದೆಯನ್ನು ಪಡೆದುಕೊಂಡು ಸರ್ವೇಕ್ಷಣೆ, ಸಂಗ್ರಹ, ಸಂರಕ್ಷಣೆ, ಸೂಚಿಕರಣ, ಪರಿಷ್ಕರಣೆ, ಪ್ರಕಟಣೆ,

ಅಧ್ಯಯನ, ಅಧ್ಯಾಪನ ಹೀಗೆ ವಿವಿಧ ಮಾರ್ಗಗಳಲ್ಲೂ ಮುನ್ನಡೆಯುತ್ತಿದೆ. ಈ ಮಾರ್ಗದಲ್ಲಿ ನಾಡಿನ ಹೆಸರಾಂತ ವಿದ್ವಾಂಸರುಗಳು, ಮಠಗಳು, ಸರಕಾರಿ ಇಲಾಖೆಗಳು, ಸಾರ್ವಜನಿಕ ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಹಸ್ತಪ್ರತಿ ಅಧ್ಯಯನ ಕುರಿತು ಕಾರ್ಯನಿರ್ವಹಿಸುತ್ತ ಬಂದಿವೆ".[೨]

ಹಸ್ತಪ್ರತಿಗಳ ಕುರಿತು ನಡೆದ ಹೆಚ್ಚಿನ ಅಧ್ಯಯನಗಳ ಪ್ರಭುತ್ವಗಳು ಹಸ್ತಪ್ರತಿಗಳನ್ನು ಪೋಷಿಸಿ ಮರೆಸಿದ ಆಯಾಮಗಳನ್ನೇ ವೈಭವೀಕರಿಸಿವೆ. ಶುದ್ಧ ಮತ್ತು ಸ್ಖಾಲಿತ್ಯದ ಹೆಸರಿನಲ್ಲಿ ಸಂಸ್ಕೃತಿಯೊಂದು ತನ್ನ ಕಾಲದ ಅಗತ್ಯಗಳಿಗೆ ತಕ್ಕಂತೆ ನಿರ್ಮಿಸಿಕೊಂಡ ಹಸ್ತಪ್ರತಿಗಳಂತಹ ಬಹುಪಠ್ಯ ಮತ್ತು ಬಹುಸಂವೇದನೆಗಳನ್ನು ಅದರ ಸಾಮಾಜಿಕ ವಾಸ್ತವಗಳನ್ನು ಧಿಕ್ಕರಿಸಿ ಶಾಸ್ತ್ರೀಯಗೊಳಿಸುತ್ತ ಬರಲಾಗಿದೆ. ಇದರಿಂದಾಗಿ ಕ್ರಿಯೆ ಮತ್ತು ಅರಿವು ಬುದ್ಧಿ ಮತ್ತು ಭಾವದ ಸಂಯೋಜನೆಯಿಂದ ಸೃಷ್ಟಿಸಿಕೊಂಡ ಇಂಥ ನೆಲೆಗಳು ಉಪೇಕ್ಷೆಗೆ ಒಳಗಾದವು. ಪಾಂಡಿತ್ಯ ಪ್ರತಿಷ್ಠೆ ಪ್ರಮಾಣೀಕರಣದಂತಹ ಶಾಸ್ತ್ರೀಯ ಪರಿಕಲ್ಪನೆಗಳು ಹಸ್ತಪ್ರತಿಗಳನ್ನು ಸನಾತನ ಸಂಸ್ಕೃತಿಯ ಫಲಿತಗಳನ್ನಾಗಿ ತಟಸ್ಥವಾಗಿ ಪರಿಗಣಿಸಿದವು.

ಹಸ್ತಪ್ರತಿಗಳ ಪ್ರಾಚೀನ ಜನಸಮುದಾಯ ರೀತಿ ನೀತಿಗಳನ್ನು ರೂಪಿಸುವ ದಾಖಲೆಗಳಾಗಿವೆ. ಬರಹಪೂರ್ವದ ಹಸ್ತಪ್ರತಿ ತಯಾರಿಕೆಯಲ್ಲಿ ಕುಶಲಕರ್ಮಿಗಳು, ಚಿತ್ರಕಲಾ, ಸಾಹಿತ್ಯ, ಲಿಪಿಕಾರರ ಭಾವಕೋಶದಲ್ಲಿ ಅಡಗಿರುವ ಸಾಮಾಜಿಕ ಧಾರ್ಮಿಕ, ಕೌಟುಂಬಿಕ ಹಾಗೂ ಆರ್ಥಿಕ ಬದುಕಿನ ಚಿತ್ರಗಳ ಅಧ್ಯಯನಗಳು ಪ್ರಮೇಯಗಳಾಗಿವೆ. ಪ್ರಯೋಗ ಪ್ರಯೋಜನ ಮತ್ತು ಸಂಯೋಜನಮುಖಿಯಾದ ಕನ್ನಡ ಹಸ್ತಪ್ರತಿಗಳ ಬಹುವಿಧ ಜ್ಞಾನ ಶಿಸ್ತನ್ನು ಗರ್ಭೀಕರಿಸಿಕೊಂಡಂಥವು. ಸಾಹಿತ್ಯವೆಂದು ಪರಿಗಣಿಸುವ ಪ್ರಧಾನ ವಿಷಯಗಳಿಂದ ಹಿಡಿದು ವಿಷವೈದ್ಯ, ಶಿಲ್ಪಶಾಸ್ತ್ರ, ಮಾಟ ಮಂತ್ರ, ಹಾಡು, ಶಕುನ, ಲೆಕ್ಕಪತ್ರ, ವಶೀಕರಣ, ಮಳೆ-ಬೆಳೆ, ಪ್ರಶ್ನೆ, ಭವಿಷ್ಯ, ಜ್ಯೋತಿಷ್ಯ, ವಾಸ್ತು, ಅಡುಗೆ, ಆರೋಗ್ಯ, ಜಲಶಾಸ್ತ್ರ ಇವೆಲ್ಲ ಜನರಿಂದ ಜನರ ಅಗತ್ಯಗಳಿಗಾಗಿಯೇ ರೂಪಗೊಂಡಿವೆ. ಇವೆಲ್ಲವುಗಳಿಗೆ ಪ್ರಾದೇಶಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಲಿಂಗ ಹಾಗೂ ಜಾತಿ ಇತ್ಯಾದಿ ಆಯಾಮಗಳಿವೆ. ಹೀಗಾಗಿ ಇಂಥ ಕೃತಿಗಳನ್ನು ಕೇವಲ ಶುದ್ಧಶಾಸ್ತ್ರ ಅಥವಾ ಕೃತಿ, ಕರ್ತೃನಿಷ್ಠ ನೆಲೆಯ ಪರಿಶೀಲನೆಗಿಂತ ಭಿನ್ನವಾದ ಅನುಸಂಧಾನದಡಿಯಲ್ಲಿ ಮುಖಾಮುಖಿ ಮಾಡಬೇಕಾಗಿದೆ. ವಿಶೇಷವಾಗಿ ಮಾನವಶಾಸ್ತ್ರದ ಅಧ್ಯಯನದ ನೆಲೆಗಳಿಂದ ವಿಶ್ಲೇಷಿಸುವ ಅಗತ್ಯವಿದೆ.

ಹಸ್ತಪ್ರತಿ ಅಧ್ಯಯನಗಳ ಸಂಯೋಜನಮುಖಿ ಅಧ್ಯಯನಗಳಿಗೆ ಒತ್ತು ಕೊಟ್ಟಿದ್ದು, ಇತ್ತೀಚಿನ ದಿನಗಳಲ್ಲಿ ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಶಾಸ್ತ್ರ ವಿಭಾಗವು ಪ್ರಯೋಗ ಹಾಗೂ ಪ್ರಯೋಜನಮುಖಿ ಅಧ್ಯಯನಕ್ಕೆ ಒತ್ತು ಕೊಟ್ಟಿರುವುದನ್ನು ಗಮನಿಸಬಹುದು. ಆದರೂ

ಹಸ್ತಪ್ರತಿಗಳ ಒಡಲೊಳಗೆ ಅಂದರೆ ಕನ್ನಡ ಸಂವೇದನೆಯ ಒಳಗೆ ಕೇಳಿಬರುವ 'ಹಲವು ಕನ್ನಡಂಗಳ್, ಸುಳಿವ ಶಾಸನ, ಪೊಸತಾಗಿ ವಿರಚಿಸಿದೆ, ಸಕಲನ ಜನಹಿತಾರ್ಥವಾಗಿ ಹೇಳಿದೆ. ಕೇಳು ಜನಮೇಯ ಧರಿತ್ರಿ, ಕೇಳುವವರಿಗೂ ಹೇಳುವವರಿಗೂ, ಸನ್ಮಂಗಳವಾಗಲಿ ಇತ್ಯಾದಿ ಉಲ್ಲೇಖಗಳು ಹಸ್ತಪ್ರತಿಗಳ ಹೊಸ ಮಾದರಿಯ ಅಧ್ಯಯನಗಳಿಗೆ ಎಡೆಮಾಡಿಕೊಟ್ಟಿವೆ.

ಕನ್ನಡ ಸಾಹಿತ್ಯ ಲಿಖಿತ ರೂಪಕ್ಕಿಂತ ಮುನ್ನವೇ ಜನರ ನಾಲಿಗೆಯ ಮೇಲೆ ಹುಟ್ಟಿ ಬೆಳೆದಿದೆ. ಆದರೆ ನಮ್ಮ ಅಧ್ಯಯನ ಕ್ರಮಗಳ ಇಂಥ ಸೃಜನಶೀಲ ಸಂವೇದನೆಗಳನ್ನು ಸವರಿ ಏಕೀಕೃತಗೊಳಿಸುವ ಶುದ್ಧಗೊಳಿಸುವ ಕೆಲಸದಲ್ಲಿ ನಿರತವಾಗುತ್ತ ಬಂದವು. ಜ್ಞಾನ ಹಾಗೂ ಅದರ ಪ್ರತಿನಿಧೀಕರಣದ ಮೇಲೆ ಇಂಥ ಶೈಕ್ಷಣಿಕ ಚಿಂತನೆಗಳ ಸಾಧಿಸಿರುವ ಪ್ರಾಬಲ್ಯವನ್ನು ಪ್ರಶ್ನೆಮಾಡುವುದು ಈ ಕಾಲದ ಅಧ್ಯಯನಗಳಲ್ಲಿ ಮುಖ್ಯವಾಗಬೇಕಿದೆ.

ಈ ನಿಟ್ಟಿನಲ್ಲಿ ನಡೆದಿರುವ ಅಧ್ಯಯನಗಳ ನಿಲುವು ಮತ್ತು ಅವುಗಳ ಸ್ವರೂಪ ತಾತ್ವಿಕತೆ ಏನೆಂಬುದನ್ನು ಅರಿಯುವ ಸಲುವಾಗಿ "ಕರ್ನಾಟಕದಲ್ಲಿ ಹಸ್ತಪ್ರತಿಗಳ ಅಧ್ಯಯನದ ಸ್ವರೂಪ ಹಾಗೂ ಅದರ ತಾತ್ವಿಕ ನೆಲೆಗಳು" ಎಂಬ ವಿಷಯವನ್ನು ಈ ಸಂಶೋಧನ ಅಧ್ಯಯನದ ಮುಖ್ಯ ವಿಷಯವನ್ನಾಗಿಸಿಕೊಳ್ಳಲಾಗಿದೆ.

೧.೧. ಅಧ್ಯಯನದ ಉದ್ದೇಶ

ಹಸ್ತಪ್ರತಿ ಅಧ್ಯಯನವು ಒಂದು ಶಾಸ್ತ್ರ ಮರ್ಯಾದೆಯನ್ನು ಪಡೆದ ಮೇಲೆ ದೇಸಿ ಹಾಗೂ ವಿದೇಶಿ ವಿದ್ವಾಂಸರು ವೈಯಕ್ತಿಕವಾಗಿ ಹಾಗೂ ಸಾಂಸ್ಥಿಕವಾಗಿ ಹಸ್ತಪ್ರತಿಗಳನ್ನು ಸಂಗ್ರಹಿಸುವ, ಸಂರಕ್ಷಿಸಿ, ಪರಿಷ್ಕರಿಸಿ ಗ್ರಂಥರೂಪದಲ್ಲಿ ಪ್ರಕಟಿಸುತ್ತಾ ಬಂದಿದ್ದರು. ಇದೊಂದು ಶ್ಲಾಘನೀಯ. ಗ್ರಂಥಸಂಪಾದನಶಾಸ್ತ್ರದ ಒಂದು ಭಾಗವಾಗಿ ಅಧ್ಯಯನಗಳು ಮತ್ತು ಪ್ರಕಟಣೆಗಳು ಆರಂಭವಾದವು. ಅವುಗಳಲ್ಲಿ ಕನ್ನಡ ಗ್ರಂಥಸಂಪಾದನೆ, ಡಿ.ಎಲ್. ನರಸಿಂಹಾಚಾರ್ ಅವರ ಕನ್ನಡ ಗ್ರಂಥಸಂಪಾದನಾ ಶಾಸ್ತ್ರ (೧೯೬೪), ಎಚ್. ದೇವಿರಪ್ಪ ಅವರ ಹಸ್ತಪ್ರತಿಶಾಸ್ತ್ರ (೧೯೭೭), ಸೀತಾರಾಮ ಜಾಗೀರಾದಾರ್ ಅವರ ಕನ್ನಡ ಗ್ರಂಥಸಂಪಾದನ ಶಾಸ್ತ್ರ ಪರಿಚಯ (೧೯೭೮), ಎಂ.ಎಂ. ಕಲಬುರ್ಗಿ ಅವರ ಕನ್ನಡ ಗ್ರಂಥಸಂಪಾದನಾಶಾಸ್ತ್ರ (೧೯೭೯), ಬಿ.ಎಸ್. ಸಣ್ಣಯ್ಯ ಅವರ ಹಸ್ತಪ್ರತಿ ಪರಿಚಯ (೧೯೯೨), ಬಿ.ಎಸ್. ಸಣ್ಣಯ್ಯ ಅವರ ಕನ್ನಡ ಹಸ್ತಪ್ರತಿಗಳ ಇತಿಹಾಸ (೧೯೯೩), ಮುಂತಾದ ಕೃತಿಗಳು ರಚನೆಯಾದವು. ಬಹುತೇಕ ಈ ಎಲ್ಲಾ ಕೃತಿಗಳು ಹಸ್ತಪ್ರತಿ ಅರ್ಥ, ಲಕ್ಷಣ, ಸ್ವರೂಪ, ಸಂಗ್ರಹ, ಸಂರಕ್ಷಣೆ, ಪ್ರಕಾರ, ವಿಷಯ, ಹಸ್ತಪ್ರತಿ ಆಪತ್ತುಗಳು, ಸ್ಖಾಲಿತಗಳು, ನಿವಾರಣೋಪಾಯಗಳು, ಪರಿಷ್ಕರಣ ಸೂಚಿ ರಚನೆ, ಭಂಡಾರ, ಲೇಖನಸಾಮಗ್ರಿ, ಪ್ರಸಾರ, ವ್ಯವಸ್ಥಾಪನ, ಪ್ರಯೋಜನ ಮತ್ತು ಉತ್ಪಾದನ ಹೀಗೆ ಹಸ್ತಪ್ರತಿಗಳ ತಾಂತ್ರಿಕ ಅಗತ್ಯಗಳ ಕಡೆಗೆ ಒತ್ತುಕೊಟ್ಟಿವೆ. ಈ ಕ್ಷೇತ್ರದಲ್ಲಿ ಮಹತ್ವದ

ಅಧ್ಯಯನವೆಂದರೆ ಬಿ.ಕೆ. ಹಿರೇಮಠ ಅವರ ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ. ಇದೊಂದು ವಿಭಿನ್ನ ಹಾಗೂ ವಿಶೇಷ ಸಾಂಸ್ಕೃತಿಕ ಅಧ್ಯಯನವಾಗಿದೆ. ಇದು ಹಸ್ತಪ್ರತಿಗಳನ್ನ ವಿಭಿನ್ನ ಆಯಾಮಗಳಿಂದ ನೋಡಿದ ಮೊದಲ ಕೃತಿ. ನಂತರ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ, ಜಿಎಂಶ್ರೀ ಪ್ರತಿಷ್ಠಾನಗಳು ಪ್ರಯೋಗ ಮತ್ತು ಪ್ರಯೋಜನಮುಖಿ ಸಾಧ್ಯತೆಗಳನ್ನು ಮುಂದಿಟ್ಟುಕೊಂಡು ಹಸ್ತಪ್ರತಿಗಳಲ್ಲಿ ತನ್ನದೇ ಆದ ಸಾಂಸ್ಕೃತಿಕ ಸಂಗತಿಗಳು ಅಡಗಿವೆ. ಅವುಗಳನ್ನು ಪುನರ್ ವ್ಯಾಖ್ಯಾನ ಮಾಡುವ ಮೂಲಕ ಅವುಗಳ ಸ್ವರೂಪ ಮತ್ತು ತಾತ್ವಿಕತೆಯನ್ನು ಅರಿಯುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಹಸ್ತಪ್ರತಿಗಳ ಒಡಲೊಳಗೆ ಕೇಳಿಬರುವ 'ಹಲವು ಕನ್ನಡಂಗಳ್', 'ಸುಳಿವಶಾಸನ', 'ಪೊಸತಾಗಿ ವಿರಚಿಸಿದೆ'. 'ಸಕಲ ಜನಹಿತಾರ್ಥವಾಗಿ ಹೇಳಿದೆ'. 'ಕೇಳು ಜನಮೇಜಯ ಧರಿತ್ರಿ', 'ಕೇಳಿದವರಿಗೂ ಹೇಳಿದವರಿಗೂ ಸನ್ಮಂಗಲವಾಗಲಿ' ಇತ್ಯಾದಿ ಧ್ವನಿಗಳು, ಹಸ್ತಪ್ರತಿಗಳ ಲಿಖಿತ ರೂಪಕ್ಕಿಂತ ಅದರ ಬಹು ಸಂವಹನ ಹಾಗೂ ಪ್ರಯೋಜನಮುಖಿ ಸಾಧ್ಯತೆಗಳತ್ತ ನಮ್ಮ ಗಮನ ಸೆಳೆಯುತ್ತವೆ. ಆದರೆ ನಮ್ಮ ಅಧ್ಯಯನದ ದಾರಿಗಳು ಇಂಥ ಸೃಜನಶೀಲವಾದ ಸಂವೇದನೆಗಳನ್ನು ಏಕೀಕೃತಗೊಳಿಸುವ, ಶುದ್ಧಗೊಳಿಸುವ ಕೆಲಸದಲ್ಲಿ ನಿರತವಾಗುತ್ತ ಬಂದವು. ಕವಿಕೇಂದ್ರಿತ, ಕೃತಿಕೇಂದ್ರಿತ, ಪಠ್ಯಕೇಂದ್ರಿತ, ಜಾತಿಕೇಂದ್ರಿತವೆಂದು ನಿರ್ದಿಷ್ಟಗೊಳಿಸಿದ ಜ್ಞಾನ ಹಾಗೂ ಅದರ ಪ್ರತಿನಿಧೀಕರಣದ ಮೇಲೆ ಇಂತಹ ಶೈಕ್ಷಣಿಕ ಚಿಂತನೆಗಳು ಸಾಧಿಸಿರುವ ಪ್ರಾಬಲ್ಯವನ್ನು ಮರು ವಿಮರ್ಶೆಗೆ ಒಡ್ಡುವುದು ಈ ಅಧ್ಯಯನದ ಉದ್ದೇಶವಾಗಿದೆ.

ಕನ್ನಡ ಹಸ್ತಪ್ರತಿಗಳ ವಸ್ತು, ವಿಷಯ ಸ್ವರೂಪವು ಏಕಮೂಲವಾದದ ಸ್ಪಷ್ಟ ನಿರಾಕರಣೆಯನ್ನು ಮಾಡುತ್ತವೆ. ಹಸ್ತಪ್ರತಿಯೊಡಲೊಳಗೆ ಕವಿ, ಗಮಕಿ, ಕಥೆಗಾರ, ತಾತ್ವಿಕ, ಧಾರ್ಮಿಕ, ಲೌಕಿಕ, ಸಾಧಕ, ಪೂಜಕ, ಓದು, ಕೇಳುಗ, ಲಿಪಿಕಾರ, ಕುಶಲಕರ್ಮಿ ಹೀಗೆ ಅನೇಕರಿದ್ದಾರೆ. ಜಾತಿ, ಲಿಂಗ, ಶುದ್ದ ಹಾಗೂ ಶ್ರೇಷ್ಠ ಎನ್ನುವ ವ್ಯಾಖ್ಯಾನಗಳನ್ನು ಮೀರಿದ ಮುಕ್ತತೆಯಿದೆ. ಬರವಣಿಗೆ ಹಾಗೂ ಗ್ರಂಥವನ್ನು ಅತಿಮಾನುಷ, ಅಪೌರುಷೇಯ ಎಂದು ನಿಯಮಬದ್ಧಗೊಳಿಸಿದ ಧೋರಣೆಗಳನ್ನು ಇವು ಪ್ರಶ್ನಿಸುತ್ತವೆ. ಕೃತಿಯನ್ನು ಓದಿ ಅದರ ಪ್ರಯೋಜನ ಪಡೆಯುವ ಬದಲು ಅದನ್ನು ಪೂಜಿಸಿ ಅದರ ಅನುಸಂಧಾನದ ದಾರಿಗಳನ್ನು ದೂರ ಮಾಡಿದ ಸಂಗತಿಗಳತ್ತ ಹಸ್ತಪ್ರತಿಗಳು ಬೆಳಕು ಚೆಲ್ಲುತ್ತವೆ. ಸಾಹಿತ್ಯವಾಗಲಿ ಸಂಸ್ಕೃತಿಕ ಚಿಂತನೆಯಾಗಲೀ ವಿದ್ವತ್ಪೂರ್ಣ ಸಂಶೋಧನೆಯಾಗಲಿ ರಾಜಕೀಯ ಹಿತಾಸಕ್ತಿಗಳಿಂದ ಮುಕ್ತವಾಗಿರಲು ಸಾಧ್ಯವಿಲ್ಲ ಭಾರತೀಯರಾದ ನಾವು ಧರ್ಮ ಮತ್ತು ಧಾರ್ಮಿಕತೆಗೂ ಒತ್ತು ಕೊಟ್ಟವರು ಇಲ್ಲಿ ರಾಜಕಾರಣವನ್ನು ಸಾಹಿತ್ಯ ಸಂಸ್ಕೃತಿಗಳ ಹಣೇಬರಹವನ್ನು ನಿರ್ಧರಿಸುವುದು ಧರ್ಮವೇ ನಮ್ಮ ಪ್ರಾಚೀನ ಕನ್ನಡ ಕೃತಿಗಳೆಲ್ಲವೂ ರಚನೆಗೊಂಡಿದ್ದು

ಧಾರ್ಮಿಕ ಹಿನ್ನೆಲೆಯಲ್ಲಿಯೇ ಮೋಕ್ಷ, ಸಾಧನೆ, ಪುತ್ರ ಸಂತಾನ, ಸಕಲೈಶ್ವರ್ಯ ಸಿದ್ಧಿ, ಸಂಕಟ ನೀವಾರಣೆಗಾಗಿಯೇ ನಮ್ಮ ಹಸ್ತಪ್ರತಿಗಳು ರೂಪಿಸಿಕೊಂಡಿವೆ. ಇಂತಹ ವೈವಿಧ್ಯತೆಯನ್ನು ಅದರೊಳಗಿನ ಸಾಂಸ್ಕೃತಿಕ ಒತ್ತಡಗಳನ್ನು ಅಧ್ಯಯನ ಮಾಡದೆ ಶುದ್ಧಸಾಹಿತ್ಯ ಮತ್ತು ಶುದ್ಧಶಾಸ್ತ್ರ ಎಂದು ಹುಡುಕುತ್ತ ಬರಲಾಗಿದೆ. ಇಂತಹ ಶುದ್ಧಶಾಸ್ತ್ರದ ನೆಲೆಗಳನ್ನು ಮರು ವಿವೇಚಿಸುವ ಮೂಲಕ ಮಹಿಳೆಯರ, ದುಡಿಯುವ ವರ್ಗಗಳ ಅಭಿವ್ಯಕ್ತಿಯ ಸ್ವರೂಪವನ್ನು ಗ್ರಹಿಸುವುದು ಈ ಅಧ್ಯಯನದ ಪ್ರಧಾನ ಉದ್ದೇಶವಾಗಿದೆ. ಪಠ್ಯದ ರಚನೆಯಲ್ಲಿ ಕೆಲವು ಹಿತಾಸಕ್ತಿಗಳಿದ್ದರೆ ಅದರ ಸ್ವಹಿತಾಸಕ್ತಿಗಳು ಹಸ್ತಪ್ರತಿಗಳ ಬಹುಮುಖಿ ಅಧ್ಯಯನಕ್ಕೆ ಮಾಡಿರುವ ತೊಡಕುಗಳನ್ನು ಗುರುತಿಸುವುದು ಈ ಅಧ್ಯಯನದ ಮುಖ್ಯ ಆಸಕ್ತಿಯಾಗಿದೆ.

ಲಿಪಿನಿಷ್ಠ ಭೌತಿಕ ವಿನ್ಯಾಸಗಳು ಪ್ರತಿಪಾದಿಸುವ ಅಧಿಕೃತ ಪಠ್ಯ ಅಥವಾ ಪ್ರಾಮಾಣಿಕರಣ ಎನ್ನುವುದೇ ತನ್ನ ಇರುವಿಕೆಯ ಅಗತ್ಯವನ್ನು ಒತ್ತಾಯಪೂರ್ವಕವಾಗಿ ಹೇರುವಂಥದ್ದು. ಇಂಥ ಏಕತೆಯ ಹಂಬಲಗಳು ಬಹುಮುಖತೆಯ ನಿರಾಕರಣೆಗಳು ಮನುಷ್ಯನ ಬಹುಮುಖಿ ಚಿಂತನೆಗೆ ವಿರೋಧವಾದಂಥವು. ಸಾಮಾಜಿಕ ಗುಣವನ್ನು ಒಪ್ಪಿಕೊಳ್ಳದಂಥ ಅಹಂಕಾರದಿಂದ ಹುಟ್ಟಿದಂಥವು. ಇವು ಸಾಹಿತ್ಯ ಮತ್ತು ಸಂಸ್ಕೃತಿಯ ಹಿಂದಿನ ಲೋಕಗ್ರಹಿಕೆಯನ್ನು ನಿಯಂತ್ರಿಸುತ್ತ ಬಂದಿವೆ. ಎಲ್ಲವನ್ನು ಏಕಾಕಾರಕ್ಕೆ ಎರಕ ಹೊಯ್ದು ಬ್ರಾಹ್ಮಣ್ಯಕ್ಕೆ ಅರ್ಪಿಸುವ ವಿಕಲ್ಪದಿಂದ ಬಿಡುಗೆಗೊಳ್ಳಲು ಕನ್ನಡ ಪ್ರಜ್ಞೆ ಹವಣಿಸುತ್ತಲೇ ಬಂದಿದ್ದನ್ನು ತಿಳಿಯುವುದು ಈ ಅಧ್ಯಯನದ ಉದ್ದೇಶವಾಗಿದೆ.

ಹಸ್ತಪ್ರತಿಗಳಲ್ಲಿ ಅಡಗಿರುವ ಸಾಂಸ್ಕೃತಿಕ ಸಂಗತಿಗಳನ್ನು ಪುನರ್ ವ್ಯಾಖ್ಯಾನ ಮಾಡುವುದು ಈ ಅಧ್ಯಯನದ ಬಹುಮುಖ್ಯ ಉದ್ದೇಶವಾಗಿದೆ. ಆರಂಭ ಕಾಲಘಟ್ಟದಿಂದ ಇಂದಿನ ವರೆಗೆ ನಡೆದ ಅಧ್ಯಯನಗಳ ಪರಂಪರೆಯ ಸ್ವರೂಪ ಹಾಗೂ ಅದರ ನೆಲೆಗಟ್ಟನ್ನು ತಿಳಿಯುವುದು ಅಧ್ಯಯನದ ಉದ್ದೇಶವಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಈ ಅಧ್ಯಯನದ ಶೈಕ್ಷಣಿಕ ಶಿಸ್ತಿಗಾಗಿ ಒಂದು ವ್ಯಾಪ್ತಿಯನ್ನು ಗುರುತಿಸಿಕೊಂಡಿದ್ದೇನೆ. ಹತ್ತತ್ತರ ಒಂದು ಶತಮಾನಕಾಲ ಕನ್ನಡದಲ್ಲಿ ನಡೆದ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಗೆ ಸಂಬಂಧಿಸಿದ ಅಧ್ಯಯನಗಳನ್ನು ಪ್ರಾತಿನಿಧಿಕವಾಗಿ ಅರ್ಥಮಾಡಿಕೊಳ್ಳುವುದು ಮತ್ತು ಅಧ್ಯಯನದ ಹಿಂದಿನ ಮನೋಧರ್ಮಗಳನ್ನು ಮರುವ್ಯಾಖ್ಯಾನಿಸಿಕೊಳ್ಳುವುದು ನನ್ನ ಅಧ್ಯಯನದ ವ್ಯಾಪ್ತಿಗೆ ಸೇರುತ್ತದೆ. ನೂರು ವರ್ಷಗಳ ಹರವು ದೊಡ್ಡದೆನಿಸಿದರೂ ಕನ್ನಡದಲ್ಲಿ ಬಳಕೆಯಾದ ವಿವಿಧ ರೀತಿಯ ಮನೋಧರ್ಮಗಳನ್ನು ಅರ್ಥಮಾಡಿಕೊಳ್ಳುವ ಮೂಲಕ

ಪ್ರಾಚೀನ ಹಸ್ತಪ್ರತಿಯೊಂದಿಗಿನ ಅನುಸಂದಾನದ ವೈವಿಧ್ಯತೆಗಳನ್ನು ಗುರುತಿಸುವುದು ಈ ಅಧ್ಯಯನದ ವ್ಯಾಪ್ತಿಯಾಗಿದೆ.

ಕರ್ನಲ್ ಮೆಕೆಂಜಿಯಂತಹ ವಿದೇಶಿ ವಿದ್ವಾಂಸರಿಂದ ಹಿಡಿದು ಎಚ್. ದೇವಿರಪ್ಪ ರಂತಹ ಸ್ವದೇಶಿ ವಿದ್ವಾಂಸರು ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳು ಧಾರ್ಮಿಕ ಸಾಮಾಜಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳು ಹಸ್ತಪ್ರತಿ ಸರ್ವೇಕಣೆ, ಸಂಗ್ರಹ, ಸಂರಕ್ಷಣೆ, ಸೂಚಿಕರಣ, ಅಧ್ಯಯನಕ್ಕೆ ಹಸ್ತಪ್ರತಿಗಳನ್ನ ಬಳಸಿಕೊಂಡ ರೀತಿ ಕುರಿತು ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಅದಕ್ಕಾಗಿ ವಿವಿಧ ಉದ್ದೇಶಗಳಿಗಾಗಿ ಪ್ರಕಟಗೊಂಡ ಕೃತಿಗಳು, ಲೇಖನಗಳು, ಅಧ್ಯಯನಗಳನ್ನು ಪರಿಶೀಲಿಸುವುದು, ತಜ್ಞ ವಿದ್ವಾಂಸರೊಂದಿಗೆ ಚರ್ಚಿಸುವುದು, ಹೊಸ ತಲೆಮಾರಿನ ಬರಹಗಾರರೊಂದಿಗೆ ಸಂವಾದಿಸುವ ಮೂಲಕ ಸಂಬಂಧಿಸಿದ ಆಕರಗಳನ್ನು ಕ್ರೋಢೀಕರಿಸಿಕೊಂಡು ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನ ಮಾಡಲಾಗಿದೆ.

೧.೩. ಅಧ್ಯಯನದ ಸ್ವರೂಪ

ಈ ಅಧ್ಯಯನದಲ್ಲಿ ಏಳು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಈ ಅಧ್ಯಯನದ ಸ್ಥೂಲ ಸ್ವರೂಪ ಹೀಗಿದೆ.

ಒಂದನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪಗಳನ್ನು ಖಚಿತ ಮಾಡಿಕೊಳ್ಳಲಾಗಿದೆ. ಕರ್ನಾಟಕದಲ್ಲಿ ಹಸ್ತಪ್ರತಿಗಳ ಪರಂಪರೆ, ಬೆಳವಣಿಗೆ ಮತ್ತು ಹಸ್ತಪ್ರತಿ ಕುರಿತು ನಡೆದಿರುವ ಅಧ್ಯಯನಗಳ ರೀತಿ, ಮನೋಧರ್ಮ ಹಾಗೂ ಅದರ ತಾತ್ವಿಕ ನೆಲೆಗಳ ಪರಿಚಯ ಮಾಡಿಕೊಡಲಾಗಿದೆ.

ಅಧ್ಯಯನಗಳ ತಾತ್ವಿಕತೆ ಎಂಬ ಎರಡನೆಯ ಅಧ್ಯಾಯದಲ್ಲಿ ಹಸ್ತಪ್ರತಿಗಳ ಕುರಿತು ಕನ್ನಡದಲ್ಲಿ ವಿವಿಧ ಅಗತ್ಯಗಳಿಗಾಗಿ ನಡೆದ ಅಧ್ಯಯನಗಗಳ ಸ್ಥೂಲ ಸಮೀಕ್ಷೆಯೊಂದನ್ನು ಮಾಡಲಾಗಿದೆ. ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಅಗತ್ಯಗಳಿಗಾಗಿ ಕನ್ನಡ ಜಗತ್ತು ಹಸ್ತಪ್ರತಿಗಳನ್ನು ಮುಖಾಮುಖಿ ಮಾಡಿದ ವಿಚಾರಗಳನ್ನು ಶೋಧಿಸಿ ಅವು ಅನುಸರಿಸಿದ ವಿಧಾನಗಳನ್ನು ಅದರ ತಾತ್ವಿಕ ಆಕೃತಿಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಆ ಮೂಲಕ ಈ ಅಧ್ಯಯನಕ್ಕೆ ಬೇಕಾದ ದಾರಿಗಳನ್ನು ಹುಡುಕಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಅದಕ್ಕಾಗಿ ಹಲವು ಮೂಲಗಳಿಂದ ಆಕರಗಳನ್ನು ಸಂಗ್ರಹಿಸಲಾಗಿದೆ.

'ಕನ್ನಡ ಹಸ್ತಪ್ರತಿ ಅಧ್ಯಯನದ ಪ್ರೇರಣೆ ಹಾಗೂ ಪ್ರಭಾವಗಳು' ಎಂಬ ಮೂರನೆಯ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ಹಸ್ತಪ್ರತಿ ಅಧ್ಯಯನ ಅಗತ್ಯತೆ ಮತ್ತು ಅವುಗಳ ಅಧ್ಯಯನಕ್ಕೆ ಸಂಬಂಧಿಸಿದ ಪ್ರೇರಣೆ, ಪ್ರಭಾವಗಳು ಯಾವುವು ಎಂಬುದನ್ನು ಗುರುತಿಸಿದ್ದೇನೆ. ಇದರಲ್ಲಿ

ಮುಖ್ಯವಾಗಿ ದೇಶಿ ಹಾಗೂ ವಿದೇಶಿ ವಿದ್ವಾಂಸರ ಅಧ್ಯಯನ ವಿಧಾನಗಳ ಒಟ್ಟು ಸ್ವರೂಪವನ್ನು ಚರ್ಚಿಸಿದೇನೆ.

'ಸಂಗ್ರಹ ಮತ್ತು ಸಂಪಾದನರೂಪಿ ಅಧ್ಯಯನಗಳು' ಶೀರ್ಷಿಕೆಯ ನಾಲ್ಕನೆಯ ಅಧ್ಯಾಯದಲ್ಲಿ ಸಂಪಾದಕರು ವಿವಿಧ ಸಾಂಸ್ಕೃತಿಕ ಅಗತ್ಯಗಳಿಗೆ ಸಂಗ್ರಹ ಮತ್ತು ಸಂಪಾದನೆ ಮಾಡಿದ ಪ್ರಾಚೀನ ಪಠ್ಯಗಳನ್ನು ನಿರ್ದಿಷ್ಟ ವ್ಯಕ್ತಿ ಮತ್ತು ಮತಕೇಂದ್ರಿತ ಸ್ಥಗಿತರೂಪಿ ಸಂಪಾದನೆ ಮತ್ತು ಓದಿಗೆ ಒಳಗು ಮಾಡಿರುವ ಬೌದ್ಧಿಕ ರಾಜಕಾರಣದ ಕುರಿತು ವಿಶ್ಲೇಷಿಸಿದ್ದೇನೆ. ಹಸ್ತಪ್ರತಿ ಸಂಗ್ರಹ, ಸಂಪಾದನೆ, ಹಸ್ತಪ್ರತಿ ಸಂಗ್ರಹಾಲಯಗಳು ಹಸ್ತಪ್ರತಿ ಸೂಚಿ ರಚನೆ ಹಾಗೂ ಕನ್ನಡ ಗ್ರಂಥ ಸಂಪಾದನೆಯಲ್ಲಿ ರೂಢಿಸಿಕೊಂಡ ವಿವಿಧ ಅಂಶಗಳ ಕುರಿತು ವ್ಯಾಖ್ಯಾನಿಸಿದ್ದೇನೆ.

ಐದನೆಯ ಅಧ್ಯಾಯದಲ್ಲಿ 'ಮತ ಧರ್ಮಾಧಾರಿತ ಅಧ್ಯಯನದ ಮಾದರಿಗಳು' ಕುರಿತು ಮತ ಮತ್ತು ಧರ್ಮ ಪ್ರಚಾರದ ಉದ್ದೇಶಕ್ಕೆ ಅನೇಕ ಕೃತಿಗಳು ರಚನೆಯಾದವು ಹಾಗೂ ಸಂಗ್ರಹ ಸಂಪಾದನೆಯೂ ಆದವು. ಮುಖ್ಯವಾಗಿ ಇಂತಹ ಮತನಿಷ್ಠ ಅಧ್ಯಯನಗಳನ್ನು ಜೈನ, ಶೈವ, ವೈದಿಕ ಹಾಗೂ ಮತಾತೀತ ಅಧ್ಯಯನಗಳೆಂದು ಗುರುತಿಸಿ ಚರ್ಚಿಸಿದ್ದೇನೆ

ಆರನೆಯ ಅಧ್ಯಾಯದಲ್ಲಿ 'ಶೈಕ್ಷಣಿಕ ಅಧ್ಯಯನಗಳ ತಾತ್ವಿಕತೆ' ಎಂಬ ವಿಚಾರಗಳ ಕುರಿತು ಚರ್ಚಿಸಿದ್ದೇನೆ. ಪಠ್ಯ ಎನ್ನುವ ಪರಿಕಲ್ಪನೆಯೇ ಒಂದು ನಿರ್ದಿಷ್ಟ ಚಾರಿತ್ರಿಕ ಸಂದರ್ಭದ ಫಲ. ಚರಿತ್ರೆಯು ರೂಪಿಸಿದ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಅಂಶಗಳು ಇದ್ದೇ ಇರುತ್ತದೆ. ಸೃಜನಶೀಲ ರಚನೆಯೊಂದನ್ನು ಸ್ಥಿರ ಮತ್ತು ಶುದ್ದ ಸಾಹಿತ್ಯ, ಹಾಗೂ ಅಧಿಕೃತ ಸ್ವಯಂಸಿದ್ಧ, ಸ್ವಯಂಪೂರ್ಣವೆಂದು ಕಾಣುವ ಪ್ರಮೇಯಗಳು ನಿರ್ದಿಷ್ಟ ಕೇಂದ್ರಕ್ಕೆ ಪಠ್ಯವೊಂದನ್ನು ಕಟ್ಟಿಹಾಕಿ ಅದರ ಬಹುಮುಖಿ ಚಲನೆಗಳನ್ನು ತೊಡೆದು ಹಾಕಿದ ಶೈಕ್ಷಣಿಕ ಅಧ್ಯಯನಗಳ ತಾತ್ವಿಕತೆಯನ್ನು ಕುರಿತು ಚರ್ಚಿಸಲಾಗಿದೆ. ಹಸ್ತಪ್ರತಿಶಾಸ್ತ್ರ ಕುರಿತಾಗಿ ಶೈಕ್ಷಣಿಕವಾಗಿ ನಡೆದ ಎಂ.ಫಿಲ್., ಪಿಎಚ್.ಡಿ. ಅಧ್ಯಯನಗಳು, ಲೇಖನಗಳು, ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆ ಕುರಿತಾಗಿ ನಡೆಯುವ ವಿಚಾರ ಸಂಕಿರಣ, ಸಮ್ಮೇಳನ, ಸಂವಾದ, ಸಂದರ್ಶನ, ಅನೌಪಚಾರಿಕ ವಲಯಗಳಲ್ಲಿ ನಡೆದಿರುವ ಅಧ್ಯಯನದ ನಿಲುವುಗಳನ್ನು ಈ ಅಧ್ಯನದ ಆಕರಗಳನ್ನಾಗಿ ಬಳಸಿಕೊಂಡಿದ್ದೇನೆ.

ಏಳನೆಯ ಅಧ್ಯಾಯ ಸಮಾರೋಪವಾಗಿದ್ದು, ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ದಾಖಲಿಸಿದ್ದೇನೆ. ಕೊನೆಯಲ್ಲಿ ಅಧ್ಯಯನಕ್ಕೆ ಆಕರವಾಗಿ ಮತ್ತು ಅಧ್ಯಯನದ ಸ್ವರೂಪ ಕಟ್ಟಿಕೊಳ್ಳುವಲ್ಲಿ ಸಹಾಯಕವಾದ ಗ್ರಂಥಗಳು, ಲೇಖನಗಳು, ಸೂಚಿಸಂಪುಟ, ಮತ್ತು ಶೈಕ್ಷಣಿಕ ಅಧ್ಯಯನಗಳಾದ ಎಂಫಿಲ್., ಪಿಎಚ್.ಡಿ ಮಹಾಪ್ರಬಂಧಗಳ ಅಕಾರಾದಿ ಪಟ್ಟಿಸಿಡಲಾಗಿದೆ. ಅನುಬಂಧದಲ್ಲಿ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ನೀಡಲಾಗಿದೆ.

ಅಡಿಟಿಪ್ಪಣಿಗಳು

೧. ವೀರೇಶ ಬಡಿಗೇರ, ಹಸ್ತಪ್ರತಿ ಅಧ್ಯಯನ, ಸಂಪುಟ ೧, ಸಂಚಿಕೆ ಪೀಠಿಕೆ ಭಾಗ; ೨೦೦೩

೨. ರವೀಂದ್ರನಾಥ ಕೆ., ಹಸ್ತಪ್ರತಿಗಳ ಕನ್ನಡಿಗರ ಬದುಕು, ಪು.೧-೨; ೨೦೧೪

ಅಧ್ಯಾಯ : ಎರಡು

ಅಧ್ಯಯನದ ತಾತ್ವಿಕತೆ

೨.೧ ಪ್ರಕಟಿತ ಪೂರಕ ಕೃತಿಗಳು

೨.೨ ಪ್ರಕಟಿತ ಸ್ವತಂತ್ರ ಕೃತಿಗಳು

೨.೩ ಹಸ್ತಪ್ರತಿ ವ್ಯಾಸಂಗ ಕೃತಿಗಳು

೨.೪ ಹಸ್ತಪ್ರತಿ ಅಧ್ಯಯನ ನಿಯತಕಾಲಿಕೆಗಳು

೨.೫ ಲೇಖನಗಳು

೨.೬ ಹಸ್ತಪ್ರತಿ ಸೂಚಿಸಂಪುಟಗಳು

೨.೭ ಎಂ.ಫಿಲ್. ಅಧ್ಯಯನಗಳು

೨.೮ ಪಿಎಚ್.ಡಿ. ಅಧ್ಯಯನಗಳು

ಅಧ್ಯಾಯ : ಎರಡು

ಅಧ್ಯಯನದ ತಾತ್ವಿಕತೆ

ಹಸ್ತಪ್ರತಿಗಳ ಕುರಿತು ಕನ್ನಡದಲ್ಲಿ ವಿವಿಧ ಅಗತ್ಯಗಳಿಗಾಗಿ ನಡೆದ ಅಧ್ಯಯನಗಗಳ ಸ್ಥೂಲ ಸಮೀಕ್ಷೆಯೊಂದನ್ನು ಮಾಡಲಾಗಿದೆ. ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಅಗತ್ಯಗಳಿಗಾಗಿ ಕನ್ನಡ ಜಗತ್ತು ಹಸ್ತಪ್ರತಿಗಳನ್ನು ಮುಖಾಮುಖಿ ಮಾಡಿದ ವಿಚಾರಗಳನ್ನು ಶೋಧಿಸಿ ಅವು ಅನುಸರಿಸಿದ ವಿಧಾನಗಳನ್ನು ಅದರ ತಾತ್ವಿಕ ಆಕೃತಿಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಆ ಮೂಲಕ ಈ ಅಧ್ಯಯನಕ್ಕೆ ಬೇಕಾದ ದಾರಿಗಳನ್ನು ಹುಡುಕಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಅದಕ್ಕಾಗಿ ಹಲವು ಮೂಲಗಳಿಂದ ಆಕರಗಳನ್ನು ಸಂಗ್ರಹಿಸಲಾಗಿದೆ.

೨.೧ ಪ್ರಕಟಿತ ಪೂರಕ ಕೃತಿಗಳು

ಕನ್ನಡದಲ್ಲಿ ಹಸ್ತಪ್ರತಿ ಕುರಿತ ಪ್ರಕಟಣೆಗಳು ತಕ್ಕಮಟ್ಟಿಗಿದ್ದರೂ, ಕನ್ನಡದಲ್ಲಿ ಶಾಸ್ತ್ರ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಅವುಗಳಿಗಿರುವ ಮಹತ್ವ ಬಲುದೊಡ್ಡದು. ಹಸ್ತಪ್ರತಿಶಾಸ್ತ್ರ ಹಾಗೂ ಗ್ರಂಥಸಂಪಾದನೆ ಕುರಿತು ಇದುವರೆಗೂ ನಡೆದ ಅಧ್ಯಯನಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

ವಿಶೇಷವಾಗಿ ಗ್ರಂಥಸಂಪಾದನೆಗೆ ಸಂಬಂಧಿಸಿದಂತೆ ಎಸ್.ಎಮ್. ಕತ್ರೆಯವರ An Introduction to Indion Textual Criticism ಎನ್ನುವ ಆಂಗ್ಲ ಭಾಷಾ ಕೃತಿಯನ್ನು 'ಭಾರತೀಯ ಗ್ರಂಥ ಸಂಪಾದನ ಪರಿಚಯ' ಎಂದು ಎನ್.ಎಸ್. ಲಕ್ಷ್ಮೀನಾರಾಯಣಭಟ್ ಕನ್ನಡಕ್ಕೆ ಅನುವಾದ ಮಾಡಿ ೧೯೬೮ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಎಂಟು ಅಧ್ಯಾಯಗಳಿವೆ. ಪೀಠಿಕೆಯಲ್ಲಿ ಭಾರತೀಯ ಬರವಣಿಗೆಯ ಇತಿಹಾಸ ಹಾಗೂ ಗ್ರಂಥ ಸಂಪಾದನೆ ಕ್ಷೇತ್ರಕ್ಕೆ ಪಾಶ್ಚಾತ್ಯ ವಿದ್ವಾಂಸರು ನೀಡಿದ ವ್ಯಾಖ್ಯಾನವನ್ನು ಕುರಿತು ಚರ್ಚಿಸಿದ್ದಾರೆ.

ಲಿಪಿದೋಷಗಳ ವಿವರಗಳನ್ನು ಉದಾಹರಣೆಯ ಮೂಲಕ ಗುರುತಿಸಿದ್ದಾರೆ. ಗ್ರಂಥ ಸಂಪಾದನೆಯ ಮೂಲಭೂತ ಸಮಸ್ಯೆಗಳನ್ನು ಹಾಗೂ ಪರಂಪರಾಗತವಾಗಿ ಬಂದ ಪ್ರತಿಲೇಖನ ಕಾರ್ಯದಲ್ಲಿ ಒಳಸೇರಿದ ತಪ್ಪುಗಳನ್ನು ಸಂಪಾದಕನಾದವನು ತಿದ್ದುವ ಮೊದಲು ತಾನು ಆಕರವಾಗಿ ಉಪಯೋಗಿಸುತ್ತಿರುವ ಗ್ರಂಥಚರಿತ್ರೆಯನ್ನು ಗಮನಿಸಲೇಬೇಕು ಎಂದಿದ್ದಾರೆ. ಸಾಹಿತ್ಯ ರೂಪಗಳ ಅಥವಾ ಸ್ವೇಚ್ಛಾ ಪ್ರಯೋಗಗಳ ಆಧಾರದ ಮೇಲೆ ರೂಪುಗೊಂಡು ಸಂಪಾದನ ವಿಧಿಗಳ ಸಾಮಾನ್ಯ ಸೂತ್ರಗಳನ್ನು ಬಳಸುವಾಗ ಸಂಪಾದಕನು ಅವುಗಳ ಪ್ರಯೋಜನಗಳನ್ನು ತಿಳಿದಿರಬೇಕು. ಗ್ರಂಥದ ಅಭ್ಯಾಸಕ್ಕೆ ಬಳಸಲಾದ ಪ್ರಾಚೀನ ವ್ಯಾಖ್ಯಾನಗಳನ್ನು ಸಂಗ್ರಹ ಹಾಗೂ ರೂಪಾಂತರಗಳನ್ನು ಮತ್ತು ಕಾವ್ಯಮಂಜರಿಗಳಂಥ ಸಾಮಾಗ್ರಿಗಳ ಕುರಿತು ವಿಶ್ಲೇಷಿಸಿದ್ದಾರೆ. ಅನುಬಂಧದಲ್ಲಿ ಪಾಠ ಪರಿಷ್ಕರಣ ಇತ್ಯಾದಿ ವಿಷಯಗಳನ್ನು ಕುರಿತು ವಿವರ ನೀಡಿದ್ದಾರೆ. ಭಾರತೀಯ ಗ್ರಂಥಸಂಪಾದನೆಯನ್ನು ಅಭಿಜಾತ ಮಾದರಿಯಲ್ಲಿ ಕಟ್ಟಿಕೊಟ್ಟ ಮೊದಲ ಗ್ರಂಥ ಇದಾಗಿದೆ.

ಡಿ.ಎಲ್. ನರಸಿಂಹಾಚಾರ್ಯ ಅವರ 'ಕನ್ನಡ ಗ್ರಂಥ ಸಂಪಾದನೆ' ಕೃತಿ (೧೯೬೪) ಕನ್ನಡದಲ್ಲಿ ಪ್ರಕಟಗೊಂಡ ಮೊದಲ ಕೃತಿಯಾಗಿದೆ. ಲೇಖಕರು ಇಂಗ್ಲಿಷ್‌ನಲ್ಲಿ ದೊರೆತ ಗ್ರಂಥಗಳನ್ನು ಆಕರಗಳನ್ನಾಗಿ ಆಶ್ರಯಿಸಿ ಈ ಕೃತಿ ರಚನೆ ಮಾಡಿದ್ದಾರೆ.

ಈ ಕೃತಿಯಲ್ಲಿ ಒಟ್ಟು ೧೨ ಪ್ರಕರಣಗಳಿವೆ. ಮೊದಲ ಪ್ರಕರಣದಲ್ಲಿ ಜಾಗತಿಕಗ್ರಂಥ ಸಂಪಾದನೆಯ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ. ೪ ರಿಂದ ೧೨ರ ವರೆಗಿನ ಪ್ರಕರಣಗಳಲ್ಲಿ ಕನ್ನಡ ಗ್ರಂಥಸಂಪಾದನ ಶಾಸ್ತ್ರದ ಸಮಗ್ರ ಕಲ್ಪನೆಯನ್ನು ಒಡಮೂಡಿಸಿದ್ದಾರೆ. ಅನಂತರದ ಐದು ಅನುಬಂಧಗಳು ಈ ಗ್ರಂಥಕ್ಕೆ ಪೂರಕವಾಗಿವೆ. ಕನ್ನಡದಲ್ಲಿ ಗ್ರಂಥಸಂಪಾದನಾ ಸಿದ್ಧಾಂತವನ್ನು ಮಂಡಿಸಿದ ಮೊದಲ ಗ್ರಂಥವಿದು.

ಎಂ.ಎಂ. ಕಲಬುರ್ಗಿಯವರ 'ಕನ್ನಡ ಗ್ರಂಥ ಸಂಪಾದನಶಾಸ್ತ್ರ'ವು ಈ ನಿಟ್ಟಿನಲ್ಲಿ ಎರಡನೆಯ ಮಹತ್ವದ ಕೃತಿ. ಇದಕ್ಕೆ ಮುನ್ನುಡಿ ಬರೆದ ದೇಜಗೌ ಅವರು ಗ್ರಂಥ ಸಂಪಾದನ ಇನ್ನೂ ಬೆಳೆಯುವ ಶಾಸ್ತ್ರ. ವರ್ಷ ವರ್ಷ ಹೊಸ ಗ್ರಂಥಗಳು ಸಂಪಾದನೆಗೊಂಡು ಹೊರಬರುವಾಗ ಹೊಸ ಹೊಸ ಸಮಸ್ಯೆಗಳು ಪರಿಹಾರಗಳೂ ತಲೆದೋರುವುದುಂಟು. ಅವುಗಳಲ್ಲ ಒಳಗೊಳ್ಳುವ ಗ್ರಂಥಗಳು ಮೇಲಿಂದ ಮೇಲೆ ಬರಬೇಕಾಗುತ್ತದೆ ಎಂದು ಹೇಳುತ್ತಾರೆ. ವಿಶೇಷವಾಗಿ ಪ್ರಸ್ತುತ ಗ್ರಂಥದ ಹಾಗೂ ಮುಂದೆ ಬರಬೇಕಾದ ಇಂತಹ ಗ್ರಂಥಗಳ ಅಗತ್ಯವನ್ನು ಮನಗಾಣಿಸಿದ್ದಾರೆ.

ಗ್ರಂಥಸಂಪಾದನ ಶಾಸ್ತ್ರದ ಒಟ್ಟು ರೂಪದ ಪರಿಕಲ್ಪನೆಯನ್ನು ಕೊಡುವ ಗ್ರಂಥದ ಇತಿಹಾಸಕಾಂಡವು ಈ ಶಾಸ್ತ್ರದ ಚಾರಿತ್ರಿಕ ಬೆಳವಣಿಗೆಯನ್ನು ಚಿತ್ರಿಸುತ್ತದೆ. ಮುಂದೆ ಸ್ಖಾಲಿತ್ಯ

ಕಾಂಡದೊಂದಿಗೆ ಗ್ರಂಥಸಂಪಾದನಶಾಸ್ತ್ರ ಪ್ರವೇಶ ಪಡೆಯುತ್ತದೆ. ಶಾಸ್ತ್ರ ವಿಷಯದ ಖಚಿತತೆ ಹಾಗೂ ವಿಪುಲ ನಿದರ್ಶನಗಳೊಂದಿಗೆ ವಿಷಯವನ್ನು ಮನದಟ್ಟು ಮಾಡುವ ಈ ಕೃತಿ ನವೀನ ಸೃಷ್ಟಿ, ಸ್ವತಂತ್ರ ಪ್ರಯೋಗ ಶಾಸ್ತ್ರ ಅನುಬಂಧಗಳು ಗುರುತಿಸಿ ಹೇಳುವ ವಿಧಾನ ಈ ಗ್ರಂಥದ ವೈಶಿಷ್ಠವಾಗಿದೆ.

ಸೀತಾರಾಮ ಜಾಗೀರದಾರರ ಕನ್ನಡ ಗ್ರಂಥಸಂಪಾದನಾಶಾಸ್ತ್ರ ಪರಿಚಯವು ಈ ಸಾಲಿನಲ್ಲಿ ಮೂರನೆಯದು. ಒಟ್ಟು ಏಳು ಅಧ್ಯಾಯಗಳಿವೆ. ಈ ಗ್ರಂಥ ಮೊದಲ ಹಾಗೂ ಆನಂತರದ ಎರಡನೆಯ ಅಧ್ಯಾಯಗಳು ಗ್ರಂಥಸಂಪಾದನ ಶಾಸ್ತ್ರದ ಚರಿತ್ರೆಯನ್ನು ಹೇಳುತ್ತದೆ. ಪಾಠ ಸಂಯೋಜನೆ ಭಾಗವು ತುಂಬಾ ವಿಸ್ತಾರವಾದ ಭಾಗವಾಗಿದ್ದು ಸಾಕಷ್ಟು ಉದಾಹರಣೆಗಳನ್ನು ಒಳಗೊಂಡಿದೆ. ಈ ಗ್ರಂಥದ ಮೊದಲ ಅಧ್ಯಾಯವಾದ ವಿಷಯ ಪ್ರವೇಶದಲ್ಲಿಯೇ ಲೇಖನ ಸಾಮಾಗ್ರಿ ಹಾಗೂ ಲೇಖಕರ ಬಗೆಗೆ ಮೇಲೆ ಸೂಚಿಸಿದ ಇಬ್ಬರು ಗ್ರಂಥಕಾರರು ನಿರೂಪಿಸಿದ ಅಂಶಗಳನ್ನು ಸಂಕ್ಷಿಪ್ತವಾಗಿ ಕೊಟ್ಟಿದ್ದಾರೆ.

ಬಿ.ಎಸ್. ಸಣ್ಣಯ್ಯನವರ 'ಗ್ರಂಥ ಸಂರಕ್ಷಣೆ' ಕೃತಿಯು ಹಸ್ತಪ್ರತಿಗಳ ಆಂತರಿಕ ಮತ್ತು ಬಾಹ್ಯ ಸಂರಕ್ಷಣೆ ಕುರಿತು ತಿಳಿಸುವ ಕೃತಿಯಾಗಿದೆ.

'ಗ್ರಂಥ ಸಂಪಾದನೆ ಕೆಲವು ಅಧ್ಯಯನಗಳು' ಎಂಬ ಕೃತಿಯಲ್ಲಿ ವೈ.ಸಿ. ಭಾನುಮತಿ ಅವರು ಕನ್ನಡದಲ್ಲಿ ಪ್ರಾಚೀನ ಆಯುರ್ವೇದ ಗ್ರಂಥಗಳು ಎಂಬ ದೀರ್ಘ ಪ್ರಬಂಧವನ್ನು ಬರೆದಿದ್ದಾರೆ. ಈ ಪ್ರಬಂಧದಲ್ಲಿ ದೇಶಿ ವೈದ್ಯಶಾಸ್ತ್ರದ ಮಹತ್ವ ಅದರ ಪ್ರಾಚೀನತೆಯನ್ನು ವಿವರಿಸಿದ್ದಾರೆ. ಪ್ರಸ್ತುತ ಪ್ರಬಂಧದಲ್ಲಿ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ಇರುವ ಸುಮಾರು ೩೨ ಶೀರ್ಷಿಕೆಗಳ ೧೨೨ ಹಸ್ತಪ್ರತಿಗಳನ್ನು ಗುರುತಿಸಿದ್ದಾರೆ. ಅವುಗಳಲ್ಲಿ ಪ್ರಮುಖ ಕೃತಿಗಳ ವಿಷಯ ವಸ್ತು ಸ್ವರೂಪ ಮತ್ತು ವೈವಿಧ್ಯತೆಯನ್ನು ವಿವರಿಸಿದ್ದಾರೆ.

ಬಿ.ಎಸ್. ಸಣ್ಣಯ್ಯನವರು 'ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ' (೨೦೦೨) ಕೃತಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟವಾಗಿದೆ. ಈ ಗ್ರಂಥದಲ್ಲಿ ಹದಿಮೂರು ಅಧ್ಯಾಯಗಳನ್ನು ಮಾಡಿಕೊಂಡಿದ್ದಾರೆ. ಚಂಪು, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ, ಧಾರ್ಮಿಕ ಗ್ರಂಥಗಳು, ಶಾಸ್ತ್ರಗ್ರಂಥಗಳು, ಇವುಗಳ ಸಂಪಾದನ ವಿಧಾನಗಳ ಕುರಿತು ಚರ್ಚಿಸಿದ್ದಾರೆ. ಒಂದು ರೀತಿಯಲ್ಲಿ ಕನ್ನಡ ಗ್ರಂಥಪ್ರಕಟಣೆಯ ಇತಿಹಾಸವೆಂದು ಬೇಕಾದರು ಕರೆಯಬಹುದು. ಪ್ರಸ್ತುತ ಈ ಕೃತಿಯಲ್ಲಿ ೧೯೦೦ ರಿಂದ ೧೯೯೯ ರವರೆಗೆ ಕನ್ನಡದಲ್ಲಿ ನಡೆದ ಕೆಲಸವನ್ನು ಪರಿಚಯಿಸಿದ್ದಾರೆ.

ವೈ.ಸಿ. ಭಾನುಮತಿ ಅವರು 'ಗ್ರಂಥ ಸಂಪಾದನ' ವ್ಯಾಸಂಗ ಕೃತಿಯನ್ನು ೨೦೧೨ರಲ್ಲಿ ಸಂವಹನ ಪ್ರಕಾಶನ ಮೈಸೂರಿನಿಂದ ಪ್ರಕಟಿಸಿದ್ದಾರೆ. ಇಲ್ಲಿ ಅಧ್ಯಯನದ ಅನುಕೂಲಕ್ಕಾಗಿ

ಹಸ್ತಪ್ರತಿ ಸಂಗ್ರಹ, ಶಾಸ್ತ್ರಕೃತಿಗಳ ರಚನೆ, ಪ್ರಾಚೀನ ಕಾವ್ಯಗಳ ಸಂಪಾದನೆ, ಸಾಂಸ್ಥಿಕ ಸಂಪಾದನೆ, ಬಿಡಿ ಬರಹಗಳು ಎಂದು ವಿಭಾಗ ಮಾಡಿಕೊಂಡಿದ್ದಾರೆ. ಆರು ಸಂಪುಟಗಳಲ್ಲಿ ಹಂಚಿ ಹೋಗಿದ್ದ ಗ್ರಂಥ ಸಂಪಾದನೆ ಹಸ್ತಪ್ರತಿ ಕುರಿತು ಲೇಖನಗಳನ್ನು ಮಾತ್ರ ಸಂಗ್ರಹಿಸಿ ಪರಿಷ್ಕರಣದ ವಿಧಿ-ವಿಧಾನಗಳನ್ನು ಗುರುತಿಸಿದ್ದಾರೆ. ವಸ್ತುವಿಗೆ ಅನುಗುಣವಾಗಿ ಶಾಸ್ತ್ರಸಾಧನೆ. ವಚನ ಸಾಹಿತ್ಯ, ಹಸ್ತಪ್ರತಿ ಭಂಡಾರ, ಪಾಠ ಪರಿಷ್ಕರಣ ಎಂದು ನಾಲ್ಕು ವಿಭಾಗಗಳಲ್ಲಿ ಈ ಪ್ರಬಂಧಗಳನ್ನು ಚರ್ಚಿಸಿದ್ದಾರೆ. ಮೇಲಿನ ಎಲ್ಲಾ ಕೃತಿಗಳು ಕನ್ನಡ ಹಸ್ತಪ್ರತಿ, ಗ್ರಂಥ ಸಂಪಾದನೆ, ವೈಧಾನಿಕತೆ, ಇತಿಹಾಸ ಹಾಗೂ ಸ್ವರೂಪ ಕುರಿತು ಚರ್ಚಿಸುವ ಸೈದ್ಧಾಂತಿಕ ಕೃತಿಗಳಾಗಿವೆ.

ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆಯ ವಿವಿಧ ಆಯಾಮಗಳ ಕುರಿತು ಮಹಿಳೆಯಿಂದ ರಚಿತವಾದ ಮೊದಲ ಸೈದ್ಧಾಂತಿಕ ಕೃತಿ 'ಗ್ರಂಥ ಸಂಪಾದನ ಸಂಕಥನ'. ಪ್ರಸ್ತುತ ಈ ಕೃತಿಯನ್ನು ವೈ.ಸಿ.ಭಾನುಮತಿ ಅವರು ೨೦೦೩ರಲ್ಲಿ ಸಿವಿಜಿ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಲೇಖನ ಸಂಕಲನದಲ್ಲಿ ಮೊದಲನೆ ಭಾಗದಲ್ಲಿ ಹಸ್ತಪ್ರತಿಯನ್ನು ಕುರಿತು ಲೇಖನಗಳಿದ್ದರೆ ಎರಡನೇ ಭಾಗದಲ್ಲಿ ಗ್ರಂಥ ಸಂಪಾದನೆ ಕುರಿತಂತೆ ಲೇಖನಗಳಿವೆ.

ಗ್ರಂಥ ಸಂಪಾದನಶಾಸ್ತ್ರ ಈ ಪ್ರಬಂಧದಲ್ಲಿ ಗ್ರಂಥ ಸಂಪಾದನೆಯ ಇತಿಹಾಸ, ಸ್ವರೂಪ, ತಾತ್ವಿಕ ಬೆಳವಣಿಗೆ, ಅನ್ವಯಿಕ ಬೆಳವಣಿಗೆ ಹಾಗೂ ಇಪ್ಪತ್ತೊಂದನೆಯ ಶತಮಾನದ ಹೊಸ್ತಿಲಲ್ಲಿ ನಿಂತು ಗ್ರಂಥಸಂಪಾದನ ಶಾಸ್ತ್ರದ ಸುಮಾರು ೧೪೦ ವರ್ಷಗಳ ಸುದೀರ್ಘ ಚರಿತ್ರೆಯನ್ನು ಹೆಣೆದುಕೊಟ್ಟಿದ್ದಾರೆ. ಹಸ್ತಪ್ರತಿ ಸಂಗ್ರಹ, ಸಂಪಾದನೆ ವ್ಯಾಖ್ಯಾನದ ಮಾದರಿಗಳ ಲೇಖನದಲ್ಲಿ ಕರ್ನಾಟಕದಲ್ಲಿ ಹಸ್ತಪ್ರತಿ ಭಂಡಾರಗಳನ್ನು ಹೊಂದಿರುವ ಇಪ್ಪತ್ತೈದಕ್ಕೂ ಹೆಚ್ಚು ಸಂಸ್ಥೆಗಳು, ವಿಶ್ವವಿದ್ಯಾಲಯ ಖಾಸಗಿಯವರ ಆಶ್ರಯದಲ್ಲಿರುವ ಹಸ್ತಪ್ರತಿಗಳ ಸಂಗ್ರಹವನ್ನು ಕುರಿತು ಚರ್ಚಿಸಿದ್ದಾರೆ. ಹಸ್ತಪ್ರತಿಗಳ ಅಧ್ಯಯನ ಸಂಪಾದನೆ ವ್ಯಾಖ್ಯಾನದ ಮಾದರಿಗಳು ಸಂಪಾದನೆಯಲ್ಲಿ ಅನೇಕ ಮಾದರಿಗಳಾದ ಮಾರ್ಗ ಸಾಹಿತ್ಯ ಸಂಪಾದನೆ, ದೇಶಿ ಸಾಹಿತ್ಯ ಸಂಪಾದನೆ, ವಚನ ಸಾಹಿತ್ಯ ಸಂಪಾದನೆ, ಲಕ್ಷಣ ಗ್ರಂಥಗಳ ಸಂಪಾದನೆ, ದಾಸಸಾಹಿತ್ಯ ಸಂಪಾದನೆ, ಸ್ವರ ವಚನ ಸಾಹಿತ್ಯ ಸಂಪಾದನೆಯ ವಿವಿಧ ವ್ಯಾಖ್ಯಾನದ ಮಾದರಿಗಳನ್ನು ಕುರಿತು ವಿಭಿನ್ನವಾಗಿ ಚರ್ಚಿಸಿದ್ದಾರೆ.

ಎಸ್.ಎಸ್. ಅಂಗಡಿ ಅವರು 'ಕರ್ನಾಟಕ ಗ್ರಂಥಸಂಪಾದನೆ' (೨೦೧೨) ಎಂಬ ಕೃತಿಯನ್ನು ಸಂಪಾದಿಸಿದ್ದಾರೆ. ಈ ಕೃತಿಯಲ್ಲಿ ಗ್ರಂಥ ಸಂಪಾದನೆ, ಪಾಠ ಪರಿಷ್ಕರಣೆ, ಗ್ರಂಥಸಂಪಾದನೆ, ವಿದ್ವಾಂಸರ ಸಾಧನೆ, ಗ್ರಂಥಸಂಪಾದನೆ ಜನಪದ ಸಾಹಿತ್ಯ ಹೀಗೆ ವಿಭಾಗ ಮಾಡಿಕೊಂಡು ವಿಶ್ಲೇಷಣೆ ಮಾಡಿದ್ದಾರೆ. ಹಾಗೂ ಗ್ರಂಥ ಸಂಪಾದನೆಯ ತಾತ್ವಿಕತೆಯ

ಚರ್ಚೆಯನ್ನು ಸಂಕ್ಷಿಪ್ತವಾಗಿ ಮಾಡಿದ್ದಾರೆ. ಮಾರ್ಗಸಂಪ್ರದಾಯದ ಮೂಲ ಪಾಠ ನಿರ್ಣಯಕ್ಕೆ ಎಷ್ಟು ಸಹಾಯಕವೆಂಬುದನ್ನು ಉದಾಹರಣೆಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಹಾಗೆಯೇ ದೇಶಿ ಶೈಲಿಯ ಕೃತಿಗಳಲ್ಲಿ ಮೂಲ ಪಾಠವಷ್ಟೇ ಪಾಠಾಂತರಗಳೂ ಮುಖ್ಯವೆಂಬುದನ್ನು ಉದಾಹರಿಸಿದ್ದಾರೆ. ಹೀಗೆ ಪ್ರಾಚೀನ ಕೃತಿಗಳ ಶಾಸ್ತ್ರೀಯ ಪರಿಷ್ಕರಣವನ್ನು ಅನೇಕ ವಿಧಿ ವಿಧಾನಗಳ ಮೂಲಕ ಚರ್ಚಿಸಿದ್ದಾರೆ.

ಎಸ್. ಶಿವಾನಂದ ವಿರಕ್ತಮಠ ಅವರ 'ಕನ್ನಡ ಗ್ರಂಥ ಸಂಪಾದನೆಯ ಸಮೀಕ್ಷೆ' ಎಂಬ ಕೃತಿಯು ಗ್ರಂಥ ಸಂಪಾದನೆಯ ಇತಿಹಾಸ ಆಕರಗಳ ವೈಧಾನಿಕತೆ ಲೇಖನ ಸಾಮಗ್ರಿ ಮತ್ತು ಹಸ್ತಪ್ರತಿಗಳ ಸಂಬಂಧ ಸೂಚಕ ಸಾಹಿತ್ಯಗಳ ಬಗ್ಗೆ ತಿಳಿಸುತ್ತದೆ.

ವೈ.ಸಿ. ಭಾನುಮತಿಯವರ 'ಗ್ರಂಥ ಸಂಪಾದನೆ' ಮತ್ತು ಸಿದ್ಧಪ್ಪ ಅವರ 'ಕನ್ನಡ ಗ್ರಂಥ ಸಂಪಾದನೆಗೆ ಆರ್.ಸಿ. ಹಿರೇಮಠ ಕೊಡುಗೆ' ಎಂಬ ಕೃತಿಗಳನ್ನು ಅನುಷಂಗಿಕವಾಗಿ ಸಮೀಕ್ಷೆಗೆ ಒಳಪಡಿಸಿದ್ದಾರೆ.

ಹಸ್ತಪ್ರತಿಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳ ಪ್ರಧಾನ ನಿರೂಪಣೆಯ ಜೊತೆಗೆ ಸ್ವಲ್ಪಮಟ್ಟಿಗೆ ಗ್ರಂಥಸಂಪಾದನೆಗೆ ಸಂಬಂಧಿಸಿದ ವಿಷಯಗಳು ವಿವರಿಸಿದ ಗ್ರಂಥಗಳು ಮಣಿಹ, ಹಸ್ತಪ್ರತಿಶಾಸ್ತ್ರ, ಸಿರಿಸಂಪದ ಇದಕ್ಕೆ ಸಂಬಂಧಿಸಿದ ಕೃತಿಗಳಾಗಿವೆ.

ಪ್ರಾಚೀನ ಹಸ್ತಪ್ರತಿಗಳು ಎಚ್.ಎಲ್.ಎನ್. ಭಾರತೀಯವರ ಈ ಪುಸ್ತಕವು ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಗೊಂಡಿದೆ. ಏಳು ಪರಿಮಿತವಾದ ಭಾಗ ಮತ್ತು ಮೂಲತಃ ಇವು ಲೇಖನಗಳಲ್ಲಿ ಜನ ಸಾಮಾನ್ಯರಿಗೆ ಹಸ್ತಪ್ರತಿಗಳ ಚರಿತ್ರೆ, ಗ್ರಂಥ ಸಂಪಾದನಶಾಸ್ತ್ರದ ಪರಿಚಯ ಮಾಡಿಕೊಡುತ್ತದೆ. ಇಲ್ಲಿನ ವೈಜ್ಞಾನಿಕ ವಿಷಯಗಳ ಹಸ್ತಪ್ರತಿಗಳು ಎಂಬ ಭಾಗ ಗಮನಾರ್ಹವಾದುದು.

ಫ.ಗು. ಹಳಕಟ್ಟಿ ಜನ್ಮಶತಮಾನೋತ್ಸವ ಸಂಸ್ಕರಣ ಸಂಪುಟವಾದ 'ಮಣಿಹ' (೧೯೮೨) ಎಂ.ವಿ. ಸೀತಾರಾಮಯ್ಯ ಮತ್ತು ಬದುಕು ಸಾಧನೆಯನ್ನು ಕುರಿತು ಹಲವು ವಿದ್ವಾಂಸರು ಪ್ರಬಂಧ ಮಂಡಿಸಿದ ವಿವರಗಳು ಇವೆ. ಹಸ್ತಪ್ರತಿ ಮತ್ತು ಗ್ರಂಥಸಂಪಾದನ ಕ್ಷೇತ್ರವನ್ನು ಪ್ರವೇಶಿಸುವವರಿಗೆ ಇದೊಂದು ಮಾರ್ಗದರ್ಶಕ ಕೃತಿಯಾಗಿದೆ. ಹಾಗೆಯೇ ಇತರ ಭಾಷೆಗಳಲ್ಲಿರುವ ಹಸ್ತಪ್ರತಿ ಪರಿಚಯ, ಲಿಪಿ ವಿನ್ಯಾಸ, ಸಾಹಿತ್ಯೇತರ ಹಸ್ತಪ್ರತಿಗಳ ಪರಿಚಯ ಮೊದಲಾದ ಬರಹಗಳು ಹಸ್ತಪ್ರತಿಶಾಸ್ತ್ರಕ್ಕೆ ಪೂರಕವಾಗಿವೆ. ಈ ಗ್ರಂಥದ ಪ್ರೇರಕ ಶಕ್ತಿಯಾದ ಫ.ಗು.ಹಳಕಟ್ಟಿಯವರ ಬದುಕು ಬರಹಗಳನ್ನು ಇಡಿಯಾಗಿ ಸಮೀಕ್ಷಿಸುತ್ತದೆ. ಬಿ.ಎಂ.ಶ್ರೀ ಪ್ರತಿಷ್ಠಾನದಿಂದ ೧೯೮೧ ಜನವರಿ ೩೦ ರಂದು ಜರುಗಿದ ವಿಚಾರಗೋಷ್ಠಿಯಲ್ಲಿ ಬಲ್ಲವರಿಂದ ಮಂಡಿಸಲಾದ ಪ್ರಬಂಧಗಳ ಸಂಕಲನವನ್ನು ೧೯೮೩ರಲ್ಲಿ 'ಹಸ್ತಪ್ರತಿಶಾಸ್ತ್ರ' ಎಂಬ ಹೆಸರಿನಲ್ಲಿ

ಪ್ರಕಟಿಸಿದೆ. ಇಲ್ಲಿ ಒಟ್ಟು ೧೩ ಪ್ರಬಂಧಗಳಿವೆ. ಎಂ.ವಿ. ಸೀತಾರಾಮಯ್ಯನವರ ಮೊದಲ ಲೇಖನವು ಹಸ್ತಪ್ರತಿಗಳ ಸಂಗ್ರಹ ಸಂಪಾದಿಸುವಾಗ ಎದುರಾಗುವ ಸಮಸ್ಯೆಗಳು, ಅವುಗಳ ಪರಿಹಾರ, ಅದರೊಟ್ಟಿಗೆ ಪ್ರತಿಷ್ಠಾನ, ಗೊತ್ತು ಗುರಿಗಳ ದಿಕ್ಸೂಚಿ ನೀಡಲಾಗಿದೆ. ಎಚ್. ದೇವೀರಪ್ಪನವರು ಕನ್ನಡ ಹಸ್ತಪ್ರತಿಗಳ ಚರಿತ್ರೆ ಮುಂದಿನ ಲೇಖನಗಳಿಗೆ ಹಿನ್ನೆಲೆಯಾಗಿ ನಿಲ್ಲುತ್ತದೆ.

ಸಿರಿಸಂಪದ (ಬಿ.ವ್ಹಿ.ಶಿರೂರ ಅಭಿನಂದನ ಗ್ರಂಥ) ಕೃತಿಯನ್ನು ಎಫ್.ಟಿ. ಹಳ್ಳಿಕೇರಿ, ಕೆ. ರವೀಂದ್ರನಾಥ ಅವರು ಸಂಪಾದಿಸಿ, ೨೦೦೨ರಲ್ಲಿ ಬಿ.ವಿ. ಶಿರೂರ ಅಭಿನಂದ ಸಮಿತಿ ಯಲಬುರ್ಗಾ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಭಾಗ ೧ರಲ್ಲಿ ಕನ್ನಡ ಗ್ರಂಥಸಂಪಾದನೆ, ವಿದ್ವಾಂಸರ ಸಾಧನೆಯನ್ನು ಕುರಿತು ಲೇಖನಗಳು, ಭಾಗ ೨ರಲ್ಲಿ ಬಿ.ವಿ. ಶಿರೂರರ ವ್ಯಕ್ತಿತ್ವ, ಭಾಗ ೩ರಲ್ಲಿ ಬಿ.ವಿ. ಶಿರೂರರ ಸಾಹಿತ್ಯ ಅನುಬಂಧಗಳು ಇವೆ. ಅದರಲ್ಲಿ ಮುಖ್ಯವಾಗಿ ಪಂಡಿತರ ಆವೃತ್ತಿಗಳನ್ನು ಸಂಪಾದಿಸಿ ಸಾಮಾನ್ಯ ಜನರಿಗೆ ತಲುಪಿಸುವ ಉದ್ದೇಶದಿಂದ ಪ್ರಕಟಿಸಿದ ಕೃತಿಗಳ ವೈಶಿಷ್ಟಗಳನ್ನು ಚರ್ಚಿಸಿದ್ದಾರೆ.

೨.೨ ಪ್ರಕಟಿತ ಸ್ವತಂತ್ರ ಕೃತಿಗಳು

ಸ್ವತಂತ್ರವೆಂದರೆ ಗ್ರಂಥಸಂಪಾದನಾ ವಿಷಯವನ್ನು ಬಿಟ್ಟು ಕೇವಲ ಹಸ್ತಪ್ರತಿ ಶಾಸ್ತ್ರದ ಕಕ್ಷೆಯಲ್ಲಿ ಬರುವ ವಿಷಯದ ನಿರೂಪಣೆಯನ್ನು ಒಳಗೊಂಡ ಗ್ರಂಥಗಳು. ಬಿ.ಎಸ್. ಸಣ್ಣಯ್ಯನವರ 'ಗ್ರಂಥಸಂರಕ್ಷಣೆ,' ಎಚ್. ದೇವಿರಪ್ಪ ಅವರ 'ಕನ್ನಡ ಹಸ್ತಪ್ರತಿಗಳ ಇತಿಹಾಸ,' ಎಂ.ಎಂ. ಕಲಬುರ್ಗಿ ಅವರ 'ಹಸ್ತಪ್ರತಿ ಶಾಸ್ತ್ರ,' ಬಿ.ಎಸ್. ಸಣ್ಣಯ್ಯನವರ 'ಹಸ್ತಪ್ರತಿ ಶಾಸ್ತ್ರ ಪರಿಚಯ,' ಬಿ.ಆರ್. ಹಿರೇಮಠ ಅವರ 'ಕನ್ನಡ ಹಸ್ತಪ್ರತಿ ಲಿಪಿಕಾರರ ಪ್ರಶಸ್ತಿಗಳು,' ನಾ. ಗೀತಾಚಾರ್ಯರ 'ಹಸ್ತಪ್ರತಿ ಅಧ್ಯಯನ ಶಾಸ್ತ್ರ,' ಎಸ್. ಶಿವಣ್ಣ ಅವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು,' ಎಚ್.ಎಲ್. ಎನ್. ಭಾರತಿ ಅವರ 'ಪ್ರಾಚೀನ ಹಸ್ತಪ್ರತಿಗಳು,' ನಾ. ಗೀತಾಚಾರ್‌ರ 'ಹಸ್ತಪ್ರತಿ ವಿವೇಚನೆ,' ಆಲ್ಬರ್ಟಿನ್ ಗೌರರ 'ಹಸ್ತಪ್ರತಿ ಅಧ್ಯಯನಶಾಸ್ತ್ರ'(ಅನುವಾದ, ಶ್ರೀನಿವಾಸ ಹಾವನೂರ ಲಕ್ಷ್ಮಿನಾರಾಯಣ ಆರೋರಾ) ಪ್ರಾಚೀನ ಲೇಖನ ಸಾಮಗ್ರಿಗಳು, ಎಂ.ವಿ. ಸೀತಾರಾಮಯ್ಯ 'ಹಸ್ತಪ್ರತಿಶಾಸ್ತ್ರ', ವೀರೇಶ ಬಡಿಗೇರ ಅವರ 'ಹಲಗೆ ಬಳಪ', 'ಹಸ್ತಪ್ರತಿ ಸಂಕಥನ', 'ಕೃತಿ ಪ್ರತಿ ಸಂಸ್ಕೃತಿ', 'ಕನ್ನಡ ಹಸ್ತಪ್ರತಿಗಳ ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನ', 'ಕನ್ನಡ ಹಸ್ತಪ್ರತಿಗಳು ಬಹುಪರ್ಶ್ವೀಯ ನೆಲೆಗಳು', 'ಜಲಶಾಸ್ತ್ರ ಹಸ್ತಪ್ರತಿಗಳು ಮತ್ತು ದೇಶಿ ವಿವೇಕ', 'ಕನ್ನಡ ಹಸ್ತಪ್ರತಿಗಳ ಮೌಖಿಕ ಸಂಕಥನ', 'ಸೀತಾರಾಮಯ್ಯ ಮತ್ತು ಎಂ. ಚಿದಾನಂದಮೂರ್ತಿ ಅವರ 'ಹಸ್ತಪ್ರತಿಶಾಸ್ತ್ರ', ಗೋವರ್ಧನ ಸು.ಕಂ.(ಸಂ) ಶಾಮಲರತ್ನ ಕುಮಾರಿ ಬೆಂ.ಶಾಂ(ಸಂ), 'ಹಸ್ತಪ್ರತಿ ಅಧ್ಯಯನ ಸಮಾವೇಶ ಸಂಪುಟ' ೧–೨.

ದುರ್ಗಾದಾಸ್ ಕೆ.ಆರ್. 'ಬಳ್ಳಾರಿಯ ಜಿಲ್ಲೆಯ ಬಯಲಾಟಗಳು', ಎಸ್.ಎಸ್. ಅಂಗಡಿ ಅವರ 'ಕನ್ನಡ ಹಸ್ತಪ್ರತಿ ರಚನೆ: ಭಾಷಿಕ ವಿವೇಚನೆ', ಕೆ. ರವೀಂದ್ರನಾಥ ಅವರ 'ಹಸ್ತಪ್ರತಿಗಳು ಕನ್ನಡಿಗರ ಬದುಕು', ಎಫ್.ಟಿ. ಹಳ್ಳಿಕೇರಿ ಅವರ 'ಕಂಠಪತ್ರ, ೧, ೨ ಮತ್ತು ೩ ಸಂಪುಟಗಳು ಮತ್ತು 'ಹಸ್ತಪ್ರತಿ ಕ್ಷೇತ್ರಕಾರ್ಯ', ಕೃಷ್ಣಪ್ಪ ಅವರ 'ಕನ್ನಡ ಹಸ್ತಪ್ರತಿಗಳ ದೈವೀ ನೆಲೆಗಳು' ಪ್ರಮುಖವಾದಂಥವು.

ಜನಪ್ರಿಯ ಶಿಕ್ಷಣದ ಗುರಿ ಅಂದರೆ ಜ್ಞಾನವನ್ನು ಹರಡುವುದು ಮತ್ತು ಅದರಲ್ಲಿ ಜನರ ಆಸಕ್ತಿಯನ್ನು ಹೆಚ್ಚಿಸುವುದು. ಈ ಉದ್ದೇಶವನ್ನು ಹೊತ್ತು ಮೈಸೂರು ವಿಶ್ವವಿದ್ಯಾನಿಲಯ ಗೃಹ ಸರಸ್ವತಿ ಮಾಲೆಯಲ್ಲಿ ೧೯೭೧ರಲ್ಲಿ ಪ್ರಕಟಗೊಂಡ ಕೃತಿ 'ಗ್ರಂಥಸಂರಕ್ಷಣೆ'. ಇದು ಹಸ್ತಪ್ರತಿಶಾಸ್ತ್ರದ ಒಂದು ಮುಖವನ್ನು ಮಾತ್ರ ಅಂದರೆ ಅವುಗಳ ಸಂರಕ್ಷಣೆಗೆ ಕುರಿತು ದೀರ್ಘವಾದ ಮಾಹಿತಿ ನೀಡುತ್ತದೆ. ಮಹಾಯುದ್ಧಗಳಿಂದೀಚೆಗೆ ಬೆಳೆದು ಬರುತ್ತಲಿರುವ ಜ್ಞಾನ ಸಂಪತ್ತು, ಅದರೊಟ್ಟಿಗೆ ನಮಗೆ ಪರಂಪರಗತವಾಗಿ ಬಂದ ಜ್ಞಾನರಾಶಿಗಳ ಮಹತ್ವ ಹಾಗೂ ಅದನ್ನು ರಕ್ಷಿಸಿಕೊಳ್ಳಬೇಕಾದ ಅಗತ್ಯವನ್ನು ಕುರಿತು ಹೇಳುವ ಪೀಠಿಕೆಯೊಂದಿಗೆ ಐದು ಅಧ್ಯಾಯ ಹಾಗೂ ಅನುಬಂಧಗಳನ್ನು ಈ ಕೃತಿ ಹೊಂದಿದೆ.

ಎಚ್. ದೇವಿರಪ್ಪ ಅವರ 'ಕನ್ನಡ ಹಸ್ತಪ್ರತಿಗಳ ಇತಿಹಾಸ' ಎಂಬ ಗ್ರಂಥವು ಹಸ್ತಪ್ರತಿಶಾಸ್ತ್ರಕ್ಕೆ ಸಂಬಂಧಿಸಿದ ಬಹಳಷ್ಟು ವಿಷಯಗಳನ್ನು ಒಳಗೊಂಡಿದೆ. ಒಟ್ಟು ಹತ್ತು ಭಾಗಗಳು ಹಸ್ತಪ್ರತಿ ಇತಿಹಾಸಕ್ಕೆ ಸಂಬಂಧಿಸಿದ್ದಾಗಿವೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಲೇಖನ ಸಾಮಗ್ರಿಯ ಉಲ್ಲೇಖ, ಲೇಖನ ಸಾಮಗ್ರಿ, ಹಸ್ತಪ್ರತಿಗಳಲ್ಲಿ ಲಿಪಿ ವೈವಿಧ್ಯ, ಭಾಷಾ ವೈವಿಧ್ಯತೆ, ಕಲೆಗಾರಿಕೆ, ಹಸ್ತಪ್ರತಿಗಳ ಹುಟ್ಟಿನ ಬಗ್ಗೆ ಹಸ್ತಪ್ರತಿಗಳ ವರ್ಗೀಕರಣ, ಪ್ರತಿಕಾರರು, ಹಸ್ತಪ್ರತಿಗಳ ಅಳಿವು, ಈಗೆ ಪ್ರತ್ಯೇಕವಾದ ಮಾಹಿತಿಯನ್ನು ತಿಳಿಸಿಕೊಡುತ್ತದೆ.

ಎಂ.ಎಂ. ಕಲಬುರ್ಗಿಯವರ 'ಕನ್ನಡ ಹಸ್ತಪ್ರತಿಶಾಸ್ತ್ರ' ಕೃತಿಯು ಹಸ್ತಪ್ರತಿಯು ಹುಟ್ಟಿನಿಂದ ಅದು ಹಸ್ತಪ್ರತಿ ಭಂಡಾರದಲ್ಲಿ ವಿದ್ವಾಂಸರಿಗೆ ಉಪಯಕ್ತವಾಗುವ ವರೆಗಿನ ಎಲ್ಲಾ ನೆಲೆಗಳ ಕುರಿತ ಅಧ್ಯಯನವಾಗಿದೆ. ಹಸ್ತಪ್ರತಿಗಳ ಉತ್ಪಾದನೆ ಪ್ರಸರಣ, ಸಂಗ್ರಹ, ವ್ಯವಸ್ಥಾಪನೆ ಮತ್ತು ಪ್ರಯೋಜನಗಳ ಅಧ್ಯಯನ ಇಲ್ಲಿದೆ. ಕನ್ನಡ ಹಸ್ತಪ್ರತಿಗಳನ್ನು ಶಾಸ್ತ್ರವಾಗಿ ನೋಡುವ ಪ್ರಾಚೀನ ಜ್ಞಾನ ಸಾಮಗ್ರಿಗಳಾದ ಹಸ್ತಪ್ರತಿಗಳ ಸಂಗ್ರಹ ವಿಧಾನ ಲಿಪಿಕಾರರ ಚರಿತ್ರೆಯನ್ನು ತಿಳಿಸುತ್ತದೆ.

ಜಿ.ಆರ್. ಹಿರೇಮಠ 'ಕನ್ನಡ ಹಸ್ತಪ್ರತಿ ಲಿಪಿಕಾರರ ಪ್ರಶಸ್ತಿಗಳು' ಎಂಬ ಕೃತಿಯಲ್ಲಿ ಲಿಪಿಕಾರರ ಪರಂಪರೆ ಮತ್ತು ವಿಭಾಗೀಯ ಕ್ರಮಗಳನ್ನು ತಿಳಿಸುತ್ತ ಲಿಪಿಕಾರರು ಬರೆದಿರುವ ಪ್ರಶಸ್ತಿಗಳಿಂದ ಸಂಸ್ಕೃತಿ ಅಧ್ಯಯನ ಮಾಡಲಾಗಿದೆ. ಇದು ಈ ಕ್ಷೇತ್ರದಲ್ಲಿ ವಿಶಿಷ್ಟ ಗ್ರಂಥವಾಗಿದೆ.

ಬಿ.ಎಸ್. ಸಣ್ಣಯ್ಯನವರ 'ಹಸ್ತಪ್ರತಿಶಾಸ್ತ್ರ ಪರಿಚಯ' ಕೃತಿಯಲ್ಲಿ ಹಸ್ತಪ್ರತಿಗಳ ತಯಾರಿಕೆ, ಸಂಗ್ರಹ ಮಾಡುವ ವಿಧಾನವನ್ನು ಕುರಿತು ಚರ್ಚಿಸಲಾಗಿದೆ. ೧೯೯೨ ಪ್ರಕಟವಾಗಿದ್ದ ಈ ಗ್ರಂಥವೂ ವಿನೂತವಾಗಿದ್ದು ಹಸ್ತಪ್ರತಿ ತಜ್ಞರಾದ ಅವರು ಸಮಗ್ರವಾಗಿ ಕರ್ನಾಟಕ ಹಸ್ತಪ್ರತಿ ಕಲಾ ಕೃತಿಗಳನ್ನು ಸಂಗ್ರಹಿಸಿದ್ದಾರೆ. ಇವರದ್ದೆ 'ಹಸ್ತಪ್ರತಿಶಾಸ್ತ್ರ' ಕೃತಿಯಲ್ಲಿ ೧೨ ಅಧ್ಯಾಯಗಳಿವೆ. ಈ ಗ್ರಂಥದಲ್ಲಿ ಕೇಂದ್ರ ಹಸ್ತಪ್ರತಿ ಭಂಡಾರದ ಅಗತ್ಯತೆಯನ್ನು ಕುರಿತು ಹೇಳಿದ್ದಾರೆ. ಮುಖ್ಯವಾಗಿ ಲೇಖನ ಸಾಮಾಗ್ರಿಗಳ ಕುರಿತು ಈ ಕೃತಿಯಲ್ಲಿ ಚರ್ಚಿಸಿದ್ದಾರೆ. ಹಸ್ತಪ್ರತಿಗಳ ಸಂಗ್ರಹ ಕುರಿತಾಗಿ ಕೇಂದ್ರಿಯ ನೆಲೆಗಳು, ಕ್ಷೇತ್ರಿಯ ನೆಲೆಗಳ ಕುರಿತು ತಿಳಿಸಿದ್ದಾರೆ ಹಸ್ತಪ್ರತಿಗಳ ಸ್ವರೂಪ ವಿಂಗಡನೆ ಕುರಿತು ಚರ್ಚಿಸಿದ್ದು, ಹಸ್ತಪ್ರತಿ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಿದೆ.

ನಾ. ಗೀತಾಚಾರ್ಯರು ರಚಿಸಿರುವ 'ಹಸ್ತಪ್ರತಿಶಾಸ್ತ್ರ ವಿವೇಚನೆ' (೧೯೯೦) ಗ್ರಂಥದಲ್ಲಿ ಲೇಖಕರು ಹಸ್ತಪ್ರತಿಗಳ ಮಹತ್ವ ಅವುಗಳಿಗಿರುವ ಆಪತ್ತು ಮತ್ತು ಅವುಗಳ ನಿವಾರಣೆಗಳ ಕುರಿತು ಸಂರಕ್ಷಣಾ ಉಪಯೋಗಗಳನ್ನು ಉಳಿಸಿಕೊಳ್ಳುವ ವಿಧಾನವನ್ನು ವಿವರಿಸಿದ್ದಾರೆ.

ಆಲ್ಬರ್ಟಿನ್ ಗೌರ (ಅನುವಾದ– ಶ್ರೀನಿವಾಸ ಹಾವನೂರ ಲಕ್ಷ್ಮೀನಾರಾಯಣ ಆರೋರಾ) ಅವರ ಪ್ರಾಚೀನ ಲೇಖನ ಸಾಮಗ್ರಿಗಳು ಕೃತಿಯಲ್ಲಿ ಹಸ್ತಪ್ರತಿ ಬಳಕೆಯಲ್ಲಿ ಬಳಸಲಾದ ಸಾಮಗ್ರಿಗಳ ಸಂಪೂರ್ಣ ಚಿತ್ರಣವನ್ನು ನೀಡಿದ್ದಾರೆ.

ಎಫ್.ಟಿ. ಹಳ್ಳಿಕೇರಿಯವರು ರಚಿಸಿರುವ 'ಹಸ್ತಪ್ರತಿ ಕ್ಷೇತ್ರಕಾರ್ಯ' (೨೦೦೦) ಗ್ರಂಥದಲ್ಲಿ ಹಸ್ತಪ್ರತಿಗಳ ಬಗೆಗೂ ಮತ್ತು ಸಂರಕ್ಷಣಾ ಕ್ರಮಗಳ ಬಗೆಗೂ ಮಾಹಿತಿ ಇದೆ. ಇವದದ್ದೆ 'ಕಂಠ ಪತ್ರ' ೧, ೨ ಮತ್ತು ೩ ಗ್ರಂಥಗಳನ್ನು ಸಮೀಕ್ಷೆಗೆ ಒಳಪಡಿಸಿ ಕೊಂಡಿದ್ದು, ಕಂಠಪತ್ರ ಗ್ರಂಥದಲ್ಲಿ ಹಸ್ತಪ್ರತಿ ಭಂಡಾರಗಳಲ್ಲಿ ಇರಬಹುದಾದ ಅನೇಕ ಹಸ್ತಪ್ರತಿಗಳ ಕುರಿತು ವಿವೇಚಿಸಿದ್ದಾರೆ.

ಕೆ. ರವೀಂದ್ರನಾಥ ಅವರ 'ಹಸ್ತಪ್ರತಿಗಳು ಕನ್ನಡಿಗರ ಬದುಕು' ಎಂಬ ಕೃತಿಯು ಹಸ್ತಪ್ರತಿಯ ಸಿದ್ಧತೆಯಲ್ಲಿ ಒಂದು ಸಮುದಾಯದ ಕಲಾ ಬದುಕು ಅದರಲ್ಲಿಯ ಜ್ಞಾನ ಪಸರಿಸುವ ಲಿಪಿಕಾರರ ವೃತ್ತಿ ಬದುಕು, ಪೋಷಕರ ಸಂರಕ್ಷಣಾ ಕ್ರಮಗಳ ಬಗೆಗೂ ಮಾಹಿತಿಯನ್ನು ಒದಗಿಸುತ್ತದೆ. ವಿವಿಧ ನೈಪುಣ್ಯತೆ ಬದುಕಿನ ಹಲವು ಆಯಾಮಗಳನ್ನು ಕುರಿತು ತಿಳಿಸುತ್ತದೆ.

ಎಸ್.ಎಸ್. ಅಂಗಡಿಯವರ 'ಹಸ್ತಪ್ರತಿ ರಚನೆ: ಭಾಷಿಕ ವಿವೇಚನೆ ಎನ್ನುವ ಕೃತಿಯು ಹಸ್ತಪ್ರತಿಗಳ ಭಾಷಾ ಸ್ವರೂಪ ವಿಶಿಷ್ಟವಾದದು ಮತ್ತು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ವಾದುದು. ಹಸ್ತಪ್ರತಿಗಳಲ್ಲಿ ಕಾಣಿಸಿಕೊಳ್ಳುವ ಪ್ರಶಸ್ತಿ ಸ್ವಪಿವರ ಮಂಗಳದಂತಹ ವಿವರಗಳ

ಬಗ್ಗೆ ಮತ್ತು ಸ್ವರೂಪ, ಅಷ್ಟೇ ಅಲ್ಲದೆ ವಸ್ತು ವಿಷಯಗಳಿಗೆ ಸಂಬಂಧಪಟ್ಟಂತೆ ಅನೇಕ ಸಂಗತಿಗಳು ಇಲ್ಲಿ ದೊರೆಯುತ್ತವೆ. ಒಂದು ಹಸ್ತಪ್ರತಿಯನ್ನು ಬರೆಯಲು ಆರಂಭ ಮಾಡಿದ ಸಂದರ್ಭ ಮತ್ತು ದಿನಾಂಕದಿಂದ ಆರಂಭವಾಗಿ ಮುಕ್ತಾಯದವರೆಗೆ ವಿಶಿಷ್ಟ ಭಾಷಾಭಿವ್ಯಕ್ತಿ ಹಾಗೂ ವೈಲಕ್ಷಣಗಳನ್ನು ಹಸ್ತಪ್ರತಿಗಳಲ್ಲಿ ದೊರೆಯುವುದರ ಮಾಹಿತಿಯನ್ನು ಈ ಕೃತಿಯಲ್ಲಿ ಚರ್ಚಿಸಿದ್ದಾರೆ.

ಸು.ಕ. ಗೋವರ್ಧನ ಅವರ 'ಹಸ್ತಪ್ರತಿ ಅಧ್ಯಯನ ಸಮಾವೇಶ' ಎಂಬ ಗ್ರಂಥದ ೧ ಮತ್ತು ೨ ಸಂಪುಟದಲ್ಲಿ ಒಟ್ಟು ೩೦ ಲೇಖನಗಳಿವೆ. ಇಲ್ಲಿಯ ಲೇಖನಗಳನ್ನು ಎರಡು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯ ಭಾಗದಲ್ಲಿ ಹಸ್ತಪ್ರತಿಶಾಸ್ತ್ರ ವಿವಿಧ ಆಯಾಮಗಳ ಬಗೆಗಿನ ೧೧ ಲೇಖನಗಳಿದ್ದರೆ, ಎರಡನೆಯ ಭಾಗದಲ್ಲಿ ನಿರ್ದಿಷ್ಟ ಹಸ್ತಪ್ರತಿಯನ್ನು ಕುರಿತು ತಲಸ್ಪರ್ಶಿಯಾದ ೧೯ ಲೇಖನಗಳಿವೆ. ಇದರಲ್ಲಿ ಮೂರು ತಲೆಮಾರಿನ ವಿದ್ವಾಂಸರ ಲೇಖನಗಳು ಸಮಾವೇಶಗೊಂಡಿವೆ. ಕೆಲವರು ಹಸ್ತಪ್ರತಿಶಾಸ್ತ್ರದ ಪ್ರಾಥಮಿಕ ಮಾಹಿತಿಯನ್ನು ಒದಗಿಸಿದ್ದರೆ, ಕೆಲವರು ಇದುವರೆಗೂ ಪ್ರಕಟವಾಗಿರುವ ಹಸ್ತಪ್ರತಿಗಳನ್ನು ಪರಿಚಯಿಸಿದ್ದಾರೆ. ಕೆಲವರು ವಿವಿಧ ಶಿಸ್ತುಗಳನ್ನು ಕುರಿತು ಪರಿಚಯಿಸಿದ್ದಾರೆ. ಕೆಲವರು ಹಸ್ತಪ್ರತಿ ಸಂಗ್ರಹಾಲಯಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಒಟ್ಟಿನಲ್ಲಿ ಹಸ್ತಪ್ರತಿ ಕುರಿತ ಹಲವು ಆಯಾಮಗಳ ಬಗ್ಗೆ ಈ ಗ್ರಂಥದಲ್ಲಿ ಲೇಖಗಳಿವೆ. ಹಸ್ತಪ್ರತಿಗಳ ಸ್ವರೂಪ ಮಹತ್ವ ಸಂರಕ್ಷಣೆಗಳ ಜೊತೆಗೆ ಚಿತ್ರಕಲೆ, ವೈದಕೀಯ, ಸ್ತೋತ್ರ, ನಿಘಂಟು, ವಿವಿಧ ಶಾಸ್ತ್ರ ಸಾಹಿತ್ಯ ಗ್ರಂಥಗಳ ಬಗ್ಗೆ ಅಪೂರ್ವವಾದ ಮಾಹಿತಿ ಇಲ್ಲಿ ಲಭ್ಯವಿದೆ.

ವೀರೇಶ ಬಡಿಗೇರ ಅವರ 'ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು' ಈ ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷದ ಎಂಬ ನಾಲ್ಕು ಪುರುಷಾರ್ಥಗಳ ನೆಲೆಯಲ್ಲಿ ಕನ್ನಡ ಹಸ್ತಪ್ರತಿಗಳನ್ನ ನಿವೇಚಿಸುತ್ತದೆ. ಒಂದು ಪಠ್ಯದಲ್ಲಿಯೇ ಬಹುಪಠ್ಯವನ್ನು ನೋಡುವ ಮಹತ್ವದ ಕೃತಿಯಾಗಿದೆ. ಇದೊಂದು ಈ ಕ್ಷೇತ್ರದಲ್ಲಿ ವಿನೂತನ ಅಧ್ಯಯನವಾಗಿದೆ.

ವೀರೇಶ ಬಡಿಗೇರ ಅವರ 'ಕನ್ನಡ ಹಸ್ತಪ್ರತಿಗಳ ಮೌಖಿಕ ಸಂಕಥನ' ಕೃತಿಯು ಹೊಸ ವಿಚಾರದತ್ತ ನಮ್ಮ ಗಮನ ಹರಿಯುವಂತೆ ಮಾಡುತ್ತದೆ. ಹಸ್ತಪ್ರತಿಗಳನ್ನು ಮೌನವಾಗಿ ಓದಿಕೊಂಡು ತಿಳಿದು ಆನಂದಿಸುವುದು ಸಾಧ್ಯವಿರುವಂತೆ, ಅದನ್ನು ಗಟ್ಟಿಯಾಗಿ ಓದಿ ಹೇಳುತ್ತಾ, ಹಾಡುತ್ತಾ, ಓದಲಾಗದ ಅಕ್ಷರ ವಂಚಿತ ಸಮುದಾಯಕ್ಕೂ ಅದನ್ನು ತಲುಪಿಸುವ ಆಶಯವು ಹೇಗೆ ಅಭಿವ್ಯಕ್ತವಾಗಿದೆ ಎಂಬುದನ್ನು ಲೇಖಕರು ಹಲವಾರು ಉದಾಹರಣೆಗಳ ಮೂಲಕ ವಿವರಿಸಿದ್ದಾರೆ. ಓದುವ, ಕೇಳುವ ಮೂಲಕ ಒಂದು ಪಠ್ಯವು ಹಲವಾರು ಪಠ್ಯವಾಗುವ ವಿಸ್ಮಯಕರ ಸಂತಿಯ ಕಡೆ ಮೊದಲ ಬಾರಿಗೆ ಲೇಖಕರು ನಮ್ಮ ಗಮನವನ್ನು

ಸೆಳೆದಿದ್ದಾರೆ. ತಮಗಿರುವ ಹಸ್ತಪ್ರತಿಗಳೊಂದಿಗೆ ಬಹುಕಾಲದ ಒಡನಾಟದಿಂದ ಅವುಗಳ ಸೂಕ್ಷ್ಮ ಅವಲೋಕನದಿಂದ ಇಂಥ ಒಳನೋಟದ ಕೃತಿ ರಚನೆ ಲೇಖಕರಿಗೆ ಸಾಧ್ಯವಾಗಿದೆ. ಓದು, ಬರಹ ಲೋಕದ ಆಚೆಗೆ ಇದ್ದ ಕೆಳಸಮುದಾಯದವರು ಮಾತ್ರವಲ್ಲ ಮೇಲುಸ್ತರದ ಸಮುದಾಯಗಳಲ್ಲಿನ ಮಹಿಳೆಯರಿಗೂ ಸಹ ಕಲಿಕೆಯ ಅವಕಾಶ ತುಂಬ ಸೀಮಿತವೂ ಅಥವಾ ಸಾಧ್ಯವೇ ಇಲ್ಲವಾಗಿತ್ತು. ಅಂಥದರಲ್ಲಿ ಎಲ್ಲರನ್ನು ತಲುಪುವ ಆಶಯವು ಹಸ್ತಪ್ರತಿಗಳಲ್ಲಿ ಸ್ಪಷ್ಟವಾಗಿರುವುದನ್ನು ಇಲ್ಲಿ ಕೊಟ್ಟಿರುವ ಹಲವು ಉದಾಹರಣೆಗಳಲ್ಲಿ ಕಾಣಬಹುದು.

ನಮ್ಮ ಸಾಹಿತ್ಯದಲ್ಲಿ ಲಿಖಿತ ಅಲಿಖಿತ ಹಾಗೂ ತೋಂಡಿ ಪರಂಪರೆ ಎಂಬ ಮೂರು ಬಗೆ ಪರಂಪರೆಗಳು ಹೇಗೆ ಒಟ್ಟೊಟ್ಟಿಗೆ ಸಾಗಿ ಬಂದವು ಎಂಬುದನ್ನು ಭಾಷೆಯ ದ್ರವಣಗುಣದಿಂದಾದ ಪ್ರಯೋಜನಗಳನ್ನು ಈ ಕೃತಿ ಮೊದಲಬಾರಿಗೆ ವಿವೇಚಿಸಿದೆ. ಹಸ್ತಪ್ರತಿಗಳಲ್ಲಿ ಸ್ಪಷ್ಟವಾಗಿಯೇ ಇದ್ದರು ಸಹ ಓದುಗರು ವಿಮರ್ಶಕರು ಗಮನಿಸದೆ ಇದ್ದ ಹೊಸ ವಿಚಾರವೊಂದರತ್ತ ಈ ಕೃತಿ ಗಮನ ಸೆಳೆಯುತ್ತದೆ. ಆ ಮೂಲಕ ಇದು ಹಸ್ತಪ್ರತಿ ಅಧ್ಯಯನದಲ್ಲಿ ಹೊಸ ಮೈಲುಗಲ್ಲಾಗಿದೆ.

ವೀರೇಶ ಬಡಿಗೇರ ಅವರ 'ಜಲಶಾಸ್ತ್ರದ ಹಸ್ತಪ್ರತಿಗಳು ಮತ್ತು ದೇಶಿ ವಿವೇಕ' ಎಂಬ ಕೃತಿಯಲ್ಲಿ ದೈವವನ್ನು ಹಿಂದೆ ಸರಿಸಿ ಮಾನವನ ಹಲವು ಕ್ರಿಯೆಗಳನ್ನು ಸಕಲ ಜೀವರಾಶಿಗಳ ಪೋಷಣೆ ಹಾಗೂ ಪ್ರಗತಿಗೆ ಆಧಾರವಾಗಿಸಿದ್ದು ಜಲಶಾಸ್ತ್ರದ ಹಸ್ತಪ್ರತಿಗಳ ವಿಶಿಷ್ಟತೆಯಾಗಿದೆ. ಸಕಲವೂ ತನಗೆ ಸೇರಬೇಕು ಎಲ್ಲವನ್ನು ಒಬ್ಬನೇ ಅನುಭವಿಸಬೇಕೆಂದು ಭೂಮಿ, ನೀರು, ಕಾಡು, ಆಕಾಶದಂತಹ ಪಂಚಭೂತಗಳ ಮೇಲೆ ಹಕ್ಕು ಸಾಧಿಸುತ್ತಿರುವ ಆಧುನಿಕ ಮನಸ್ಸಿನ ವಿಕಾರಗಳಿಗೆ ಎದುರಾಗಿ ಜಲಶಾಸ್ತ್ರದ ಹಸ್ತಪ್ರತಿಗಳು ಮಂಡಿಸಿರುವ ನೈತಿಕ ಪ್ರಜ್ಞೆ ದೇಶಿ ವಿವೇಕದ ಪ್ರತೀಕವಾಗಿದೆ. ಆಧುನೀಕರಣದ ಹಿತಾಸಕ್ತಿಗಳು ಕೆರೆ ಕುಂಟೆ ಅರಣ್ಯ ಪ್ರದೇಶಗಳ ಮೇಲೆ ಮಾಡುತ್ತಿರುವ ಆಕ್ರಮಣಗಳು, ಜಲಮೂಲಗಳ ಅನಿಯಮಿತ ಬಳಕೆ, ಕೃಷಿ ಭೂಮಿಯ ನಾಶ ಇವೆಲ್ಲ ಜೀವಜಾಲದ ನಾಶಕ್ಕೆ ಕಾರಣವಾಗುತ್ತಿವೆ. ಸಂಪ್ರದಾಯಿಕ ಕೃಷಿ ಸಮಾಜ ಯಾವುದನ್ನು ಸಕಲ ಜಗತ್ತಿನ ಸಮೃದ್ಧಿಯ ನೆಲೆಗಳನ್ನಾಗಿ ಪರಿಭಾವಿಸಿಕೊಂಡು ಬಂದಿತ್ತೋ ಅವೆಲ್ಲಾ ಇಂದು ನಾಶದ ಸ್ಥಿತಿಯಲ್ಲಿವೆ. ಇಂಥ ಸಂದರ್ಭದಲ್ಲಿ ಹೊಸ ಮಜಲುಗಳನ್ನು ತಿಳಿಸುವಲ್ಲಿ ಈ ಕೃತಿಯು ಪ್ರಾಮುಖ್ಯತೆವಹಿಸಿದೆ.

ವೀರೇಶ ಬಡಿಗೇರ ಅವರ 'ಹಸ್ತಪ್ರತಿ ಸಂಕಥನ' ಎಂಬ ಕೃತಿಯಲ್ಲಿ ಹಸ್ತಪ್ರತಿಗಳಂಥ ಉಪೇಕ್ಷಿತ ಹಾಗೂ ಪ್ರಾಚೀನ ಸಂವೇದನೆಗಳು ಕನ್ನಡ ಸಂಸ್ಕೃತಿಯೊಂದಿಗೆ ಹೊಂದಿದ ಸಂಬಂಧ ಹಾಗೂ ನಡೆಸಿದ ವಾಗ್ವಾದಗಳನ್ನು ಬಹುಮುಖ್ಯವಾಗಿ ಚರ್ಚಿಸಲಾಗಿದೆ. ಆಧುನಿಕ

ತಿಳುವಳಿಕೆಯ ಮೂಲಕ ಇಂಥ ಹಳೆಯ ಪಠ್ಯಗಳನ್ನು ಅರ್ಥೈಸಿಕೊಳ್ಳುವ ಹಾಗೂ ಇವುಗಳ ಓದಿನ ಮೂಲಕ ಇಂದಿನ ತಿಳುವಳಿಕೆಗೆ ಹೊಸ ಆಯಾಮವನ್ನು ಕಟ್ಟಿಕೊಳ್ಳುವ ವಿಷಯ ಕುರಿತಂತೆ ಚರ್ಚಿಸಿದ್ದು ಹಸ್ತಪ್ರತಿಗಳನ್ನು ಕೇವಲ ಆಕರ ಅಥವಾ ಶುದ್ಧಪಠ್ಯ, ಶುದ್ಧಸಾಹಿತ್ಯ ಎನ್ನುವ ಸ್ಥಾಪಿತ ಮನೋಧರ್ಮಗಳಿಂದ ಹೊರಬಂದು ಅದನ್ನೊಂದು ಸಾಂಸ್ಕೃತಿಕ ಪಠ್ಯವಾಗಿ ಬಹುಕೇಂದ್ರಿತ ನೆಲೆಯಿಂದ ಓದಬೇಕಾದ ಅಗತ್ಯವನ್ನು ಈ ಕೃತಿಯಲ್ಲಿ ಚರ್ಚಿಸಿದ್ದಾರೆ.

ವೀರೇಶ ಬಡಿಗೇರರ 'ಕೃತಿ ಪ್ರತಿ ಸಂಸ್ಕೃತಿ', ಕನ್ನಡ ಹಸ್ತಪ್ರತಿಗಳು ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನ, ಹಲಗೆ ಬಳಪದಂತಹ ಕೃತಿಗಳು ಹಸ್ತಪ್ರತಿ ಕ್ಷೇತ್ರವನ್ನು ಭಿನ್ನ ಆಯಾಮದಲ್ಲಿ ಚರ್ಚಿಸುತ್ತೇವೆ.

ವೀರೇಶ ಬಡಿಗೇರ ಅವರ 'ಕೃತಿ ಪ್ರತಿ ಮತ್ತು ಸಂಸ್ಕೃತಿ' (೨೦೧೫), ಮಯ ಪ್ರಕಾಶನ, ಕಮಲಾಪುರ ಇವರಿಂದ ಪ್ರಕಟವಾಗಿದೆ. ಕೃತಿ ಪ್ರತಿ ಮತ್ತು ಸಂಸ್ಕೃತಿ ಲೇಖನಗಳ ಕೌತುಕದ ಸಂಗ್ರಹ. ಆಗಾಗ ಬರೆಯಿಸಿಕೊಂಡ ಲೇಖನಗಳು ಆಗಾಗ ನಡೆಸಿದ ಸಂವಾದಗಳ ಹದಿನೇಳು ಲೇಖನಗಳು ನಾಲ್ಕು ಪ್ರಮುಖ ಸಂದರ್ಶನಗಳು ಮುಖ್ಯವಾಗಿ ಹಸ್ತಪ್ರತಿ ಗ್ರಂಥ ಸಂಪಾದನೆ ಶಾಸನ, ವಾಸ್ತುಶಾಸ್ತ್ರ ಸಾಹಿತ್ಯ ಮುಂತಾದ ವಲಯಗಳನ್ನು ವ್ಯಾಪಿಸಿ ನಿಲ್ಲುವ ಬರಹಗಳು ಇಲ್ಲಿವೆ. ಒಂದರ್ಥದಲ್ಲಿ ಒಂದೇ ನಿಟ್ಟಿನ ಚಿಂತನೆಗಳು ಟಿಸಿಲೊಡೆದಂತೆ ಎಲ್ಲ ಸಂಸ್ಕೃತಿಯನ್ನು ತಮ್ಮ ಒಡಲನ್ನಾಗಿಸಿಕೊಳ್ಳುತ್ತವೆ. ಅದು ಕೂಡ ದೇಶಿ ಸಂಸ್ಕೃತಿಯನ್ನು. ಹಾಗಾಗಿ ಸಂಸ್ಕೃತಿ ನಿರ್ವಚನದ ದೃಷ್ಟಿಯಿಂದ ಈ ಕೃತಿಯು ಹೃದ್ಯವಾಗುತ್ತದೆ.

ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಕುರಿತಂತೆ ಹುಟ್ಟಿಕೊಳ್ಳುವ ಸಂವಾದಗಳು ಕೆಲವು ಲೇಖನಗಳ ಮೌಖಿಕ ಪರಂಪರೆ, ಬರಹದ ಪರಂಪರೆ, ಮುದ್ರಣ ಪರಂಪರೆ, ವಿದ್ಯುನ್ಮಾನ ಸವಲತ್ತಿನ ಪರಂಪರೆ, ದೇಶಿ, ವಿದೇಶಿ ಇವುಗಳ ನಡುವೆ ಕನ್ನಡಕ್ಕೆ ಒದಗುವ ಲಾಭ ನಷ್ಟ ಹೀಗೆ ಹಲವು ವಿಚಾರಗಳ ಸುತ್ತುವರೆಯುವ ಇಲ್ಲಿನ ಲೇಖನ ಮತ್ತು ಸಂವಾದಗಳು ಕುತೂಹಲ ಮೂಡಿಸುತ್ತವೆ. ಒಂದು ಹಂತದಲ್ಲಿ ಕವಿ ಕೃತಿ ಎಂಬುದು ಒಂದು ಸಂಭಾವ್ಯ. ಆ ಸಂಭಾವ್ಯತೆ ಕಾರಣ ಪ್ರತಿಕಾರರು. ಇದು ಇನ್ನೊಂದು ನೆಲೆಯಲ್ಲಿ ಅಧಿಕೃತ, ಅಧೀನ, ಪರಾಧೀನ, ಕೃತಿ ಮತ್ತು ಪ್ರತಿಗಳ ನಿಷ್ಕರ್ಷೆಯತ್ತಲೂ ಪ್ರಧಾನ ಅಧೀನ ಸಂಸ್ಕೃತಿಗಳ ವ್ಯಾಖ್ಯಾನವಾಗಿಯೂ ತೋರುತ್ತದೆ. ಹಾಗೆ ಕೃತಿ ಪ್ರತಿಗಳ ಪರಂಪರೆಯಲ್ಲಿ ಯಾವುದೂ ಸತ್ಯ, ಯಾವುದು ಸತ್ವಯುತ ಎಂಬ ಜಿಜ್ಞಾಸೆಯೂ ಸುಳಿದಾಡಿದೆ. ಈ ನಡುವೆ ನಿರಾಕರಿತ ರೂಪಗಳ ಚರ್ಚೆಯೂ ಚಾಚಿ ಕೊಳ್ಳುತ್ತದೆ. ಸಂಗ್ರಹ ಸಂಕಲನ ಸಂಪಾದನೆಗಳು ನಿರಾಕರಿತ ರೂಪಗಳು ಆಗುವಂತೆ ಹೊಸ ರೂಪಗಳು ದಾರಿ ತೋರುವ ಪಠ್ಯಗಳು ಆಗಬಲ್ಲವು. ಇದು

ಮೌಖಿಕ ಪರಂಪರೆಯ ಬಹುಮುಖಿ ಜೀವಂತಿಕೆಯನ್ನು ಬರಹದ ಏಕಮುಖಿ ಪರಿಭಾಷೆಯನ್ನು ಮುಂದಿಡುತ್ತದೆ. ಇದೆಲ್ಲವೂ ಲೇಖಕರನ್ನು ಕಾಡಿದ ಕಾಡುತ್ತಲೇ ಇರುವ ಸಮಸ್ಯೆಗಳು.

ಅಲ್ಲದೇ ಮೊದಲ ಬಾರಿಗೆ ಕನ್ನಡ ಪ್ರಜ್ಞೆಯೊಂದನ್ನು ಅದರ ದೇಶಿ ಹಾಗೂ ಅನ್ಯ ದೇಶಿ ಮಾದರಿಗಳ ಸಹ ಸಂಘದೊಂದಿಗೆ ಗುರುತಿಸುವ ಚಾರಿತ್ರಿಕ ಹಾಗೂ ತೌಲನಿಕ ಅಧ್ಯಯನ ಮಾದರಿಗಳನ್ನು ಕನ್ನಡ ಗ್ರಂಥ ಸಂಪಾದನೆಗೆ ನೀಡಿದ ಕೀರ್ತಿ ಲೇಖಕರದಾಗಿದೆ. ಈ ಕಾಲದಲ್ಲಿ ಮೊಗ್ಲಿಂಗ್ ಗ್ಯಾರೇಟ್, ಮೆಕೆಂಜಿಯಿಂದ ವಿದ್ವಾಂಸರು ಕೇವಲ ಮಿಶನರಿಗಳನ್ನಾಗಿಯೇ ಭಾವಿಸಿದರೆ, ಅದರಿಂದ ಏನನ್ನು ಕಲಿಯಲಾಗುವುದಿಲ್ಲ.

ಕೈ ಬರಹವು ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ಸೃಜನಶೀಲ ಕೌಶಲವಾಗಿತ್ತು. ಮುದ್ರಣ ಕಾರಣದಿಂದ ಸಾಕ್ಷರತೆಗೆ ಹೊಸರೂಪ ಬಂತಾದರೂ ಅದು ಜ್ಞಾನದಿಂದ ಅನುಭವವನ್ನು ಅನುಭವದಿಂದ ಕೌಶಲವನ್ನು ಬೇರ್ಪಡಿಸಿತು. ಈ ಮುಂತಾದ ಹಲವು ಲೇಖನಗಳಲ್ಲಿ ಲೇಖಕರು ಹೇಳಿಕೆಗಳು ಆ ಅಧ್ಯಯನದ ಭಿನ್ನ ನೆಲೆಯನ್ನು ಕಾಣಿಸುತ್ತದೆ. ಈ ಸಂಗ್ರಹದ ಉಳಿದ ಲೇಖನಗಳು ಹಲವು ಮೂಲಗಳನ್ನಾಧರಿಸಿ ಚಾರಿತ್ರಿಕ ನೋಟ, ಆಯಾ ವಿಷಯಗಳ ವಿಸ್ತರಿತ ನಿರೂಪಣೆ, ಕಾಲ ಸನ್ನಿವೇಶಗಳ ಇತಿಹಾಸದ ಅರಿವನ್ನು ಮೂಡಿಸುವ ಇರಾದೆಯವು. ಅವುಗಳಲ್ಲಿಯೂ ತನ್ನತನದ ಛಾಯೆಗಳಿವೆ. ಒಟ್ಟಿನಲ್ಲಿ ಇಲ್ಲಿನ ಬರಹಗಳು ಮರೆಯಾಗುತ್ತಿರುವ ದೇಶಿಜ್ಞಾನ, ಮರೆತಂತಾಗುತ್ತಿರುವ ದೇಶಿ ಕೌಶಲ, ನಿತ್ಯದ ಬದುಕಿನೊಂದಿಗೆ ಅವುಗಳ ಸಾತತ್ಯವನ್ನು ಕಂಡುಕೊಳ್ಳಬೇಕಾದ ಜರೂರುಗಳತ್ತ ಗಮನ ಸೆಳೆಯುತ್ತವೆ.

ವೀರೇಶ ಬಡಿಗೇರರ 'ಹಲಗೆ ಬಳಪ' ಕೃತಿಯು ೨೦೦೫ರಲ್ಲಿ ಮಯ ಪ್ರಕಾಶನ ಪ್ರಕಟವಾಗಿದೆ. ಈ ಕೃತಿಯು ಗ್ರಂಥ ಸಂಪಾದನೆ ಮತ್ತ ಹಸ್ತಪ್ರತಿ ಕ್ಷೇತ್ರದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಹೊಸ ವಿನ್ಯಾಸಗಳನ್ನು ಮತ್ತು ಅಧ್ಯಯನ ಆಸಕ್ತಿಯನ್ನು ಪ್ರಮುಖವಾಗಿ ಒಳಗೊಂಡಿದೆ.

ಈ ಕೃತಿಯ ಉದ್ದೇಶವೆಂದರೆ ವಿದ್ವಾಂಸರಿಂದ ವಿದ್ಯಾರ್ಥಿಗಳಿಂದ ತೀರಾ ಉಪೇಕ್ಷೆಗೆ ಗುರಿಯಾಗಿರುವ ಈ ಕ್ಷೇತ್ರವನ್ನು ಸಮಕಾಲೀನ ಚಿಂತನೆಗಳೊಂದಿಗೆ ಹುರಿಗೊಳಿಸುವುದಾಗಿದೆ. ಈ ಕ್ಷೇತ್ರದಲ್ಲಿ ವಿನೂತವಾದ ಪ್ರಯೋಗವೆನ್ನುವಂತಹ ಹಸ್ತಪ್ರತಿ ಅಧ್ಯಯನ ಪತ್ರಿಕೆಯ ಮೊದಲ ಸಂಪಾದಕತ್ವ ಗೌರವ, ಹಸ್ತಪ್ರತಿ ಸಮ್ಮೇಳನಗಳನ್ನು ಮೊದಲ ಬಾರಿಗೆ ಸಂಘಟಿಸಿದ ಅನುಭವ, ರಾಷ್ಟ್ರೀ ವಿಚಾರ ಸಂಕಿರಣಗಳ ಆಯೋಜನೆ ಮತ್ತು ಭಾಗವಹಿಸುವಿಕೆಯ ಅವಕಾಶಗಳಿಂದಾಗಿ ಲೇಖಕರ ವಿಚಾರಗಳು ಒಳ ಮತ್ತು ಹೊರ ಆವರಣವನ್ನು ನಿರ್ಮಿಸಿಕೊಂಡವು. ಇವೆಲ್ಲವುಗಳ ಫಲಿತವೇ ಈ ಕೃತಿಯಾಗಿದೆ.

ವೀರೇಶ ಬಡಿಗೇರರ 'ಕನ್ನಡ ಹಸ್ತಪ್ರತಿಗಳು ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನ' (೧೯೯೯), ಕನ್ನಡ ವಿಶ್ವವಿದ್ಯಾಲಯ ಹಂಪಿಯ ಪ್ರಸಾರಾಂಗದಿಂದ ಪ್ರಕಟವಾಗಿದೆ. ಈ ಕೃತಿಯು ಕಂಪ್ಯೂಟರ್ ಬಳಸಿಕೊಂಡು ಹಸ್ತಪ್ರತಿಗಳನ್ನು ಸ್ಕ್ಯಾನಿಂಗ್, ಮಾನಿಟರಿ ರೀಡಿಂಗ್, ಟೈಂಪಿಗ್, ಓಸಿ.ಆರ್, ಈ ಮೇಲ್, ಇಂಟರ್‌ನೆಟ್‌ನಂತಹ ಅವಕಾಶಗಳ ಮಹತ್ವಪೂರ್ಣ ದಾರಿಗಳನ್ನು ತೆರೆದಿದೆ. ಗ್ರಾಫಿಕ್ ಸಾಫ್ಟ್‌ವೇರ್ ಸಹಾಯದಿಂದ ಕಂಪ್ಯೂಟರ್‌ನಲ್ಲಿ ಹಸ್ತಪ್ರತಿಗಳ ಸ್ಕ್ಯಾನಿಂಗ್ ಮಾಡಿ ಪುನರ್ ಮುದ್ರಿಸಿಕೊಳ್ಳಬಹುದಾಗಿದೆ. ಹಾಳಾದ ಹಸ್ತಪ್ರತಿಗಳ ಆಯುಷ್ಯ ಮುಗಿತಾ ಹೋಯಿತು ಎನ್ನುವ ಸಂದರ್ಭದಲ್ಲಿ ಕಂಪ್ಯೂಟರ್ ಬಳಕೆಯಿಂದ ಹಸ್ತಪ್ರತಿಗಳ ಸ್ಕ್ಯಾನಿಂಗ್ ಮಾಡಿ ಅವುಗಳನ್ನು ಸಂರಕ್ಷಿಸುವ ಮತ್ತು ಪ್ರಯತ್ನ ಮಾಡಿ ಹಸ್ತಪ್ರತಿಗಳ ಎಲ್ಲರಿಗೂ ತಲುಪುವಂತೆ ಮಾಡಬಹುದು ಎಂಬ ವಿಚಾರಧಾರೆಯನ್ನು ಇಲ್ಲಿ ಚರ್ಚಿಸಿದ್ದಾರೆ.

ಕೃಷ್ಣಪ್ಪ ಅವರ 'ಕನ್ನಡ ಹಸ್ತಪ್ರತಿಗಳು ಮತ್ತು ದೈವತ್ವದ ನೆಲೆ' (೨೦೧೪) ಕೃತಿಯು ಮಯ ಪ್ರಕಾಶನದಿಂದ ಪ್ರಕಟವಾಗಿದೆ. ಈ ಕೃತಿಯಲ್ಲಿ ಬಹುಮುಖ್ಯವಾಗಿ ಕನ್ನಡ ಸಂಸ್ಕೃತಿಯು ಹಸ್ತಪ್ರತಿಗಳಂಥ ಜ್ಞಾನ ಸಾಮಗ್ರಿಗಳನ್ನು ಬಳಸಿಕೊಂಡು ಬಂದ ಬಗೆಯನ್ನು ನಿರ್ವಚಿಸಿದ್ದಾರೆ. ಭಾಷೆ, ಲಿಪಿ, ಬರವಣಿಗೆಯ ಸಾತತ್ಯತೆ ಒಂದು ಸಂಸ್ಕೃತಿ ನಿರ್ಮಾಣದಲ್ಲಿ ವಹಿಸುವ ಪಾತ್ರ ಬಹುಮುಖ್ಯವಾದುದು. ಭಾಷೆ, ಲಿಪಿ, ಬರವಣಿಗೆಗಳು ಮನುಷ್ಯನ ಬೌದ್ಧಿಕ ವಿಕಾಸಕ್ಕೆ ಕಾರಣ ವಾದಂತೆ ಸ್ವಾರ್ಥಪರ ಹಿತಾಸಕ್ತಿಗಳ ಜಿಗುಟುತನದಿಂದಾಗಿ ಅಧಃಪತನಕ್ಕೂ ಕಾರಣವಾಗುವ ನೆಲೆಗಳನ್ನು ಇಲ್ಲಿ ಲೇಖಕರು ಗುರುತಿಸಿದ್ದಾರೆ. ಶ್ರೇಣೀಕರಣದ ನೆಲೆಗಳು ಭಾಷೆ, ಲಿಪಿ ಹಾಗೂ ಬರವಣಿಗೆಗಳನ್ನು ಪವಿತ್ರೀಕರಿಸುವ ಮೂಲಕ ಅವರನ್ನು ಜನರಿಂದ ದೂರ ಮಾಡಿದ ಸಂಗತಿಗಳನ್ನು ಕುರಿತು ಸಂಶೋಧಕರು ಚರ್ಚಿಸುತ್ತಾರೆ. ಬರವಣಿಗೆ ಎನ್ನುವುದು ದೇಹಮೂಲ ಕ್ರಿಯೆಯಾದರೂ ಬರೆಯುವ ವರ್ಗಗಳನ್ನು ಬರಹ ಸಾಮಗ್ರಿಗಳನ್ನು ತಯಾರಿಸುವ ವರ್ಗಗಳನ್ನು ಅವರ ಕೌಶಲ್ಯವನ್ನು ಉಪೇಕ್ಷಿಸಿದ ನೆಲೆಗಳ ಕಡೆ ನನ್ನ ಗಮನ ಸೆಳೆಯು ತ್ತಾರೆ. ಲಿಪಿ ಹಾಗೂ ಬರಹದ ವಾರಸುದಾರರಾಗಿದ್ದ ಶೂದ್ರ ವರ್ಗಗಳನ್ನು ವ್ಯವಸ್ಥಿತವಾಗಿ ಹತ್ತಿಕ್ಕಲ್ಪಟ್ಟ ನೆಲೆಗಳ ಕುರಿತು ವಿವರಿಸುತ್ತಾರೆ. ರಟ್ಟಮತ, ಕುಮಾರವ್ಯಾಸ ಭಾರತದಂತಹ, ಕಥಾನಕಗಳು ಕನ್ನಡ ಸಾಂಸ್ಕೃತಿಕ ಪಠ್ಯಗಳಾಗಿ ಸ್ಥಾಪಿತ ಹಿತಾಸಕ್ತಿಗಳು ಹುಟ್ಟು ಹಾಕಿದ ಶ್ರೇಣೀಕೃತ ನೆಲೆಗಳನ್ನು ಮೀರಿ ಜಾತ್ಯಾತೀತವಾಗಿ ಧರ್ಮಾತೀತವಾಗಿ ವಿಸ್ತೃತಗೊಂಡಿದ್ದನ್ನು ಕನ್ನಡದ ಪ್ರಜ್ಞೆಯ ವಿಶೇಷತೆಯನ್ನಾಗಿ ಚರ್ಚಿಸುತ್ತಾರೆ. ಲಿಖಿತ ರೂಪದ ಪಠ್ಯ ಮೌಖಿಕ ರೂಪದಲ್ಲಿ ಜನಪ್ರಿಯವಾಗುವ ಸಂಗತಿಗಳನ್ನು ವಿವರಿಸುವ ಇವರು ಕನ್ನಡ ಓದಿನ ಭಿನ್ನ ಬಗೆಯನ್ನು ಕಲ್ಪಿಸಿಕೊಡುತ್ತಾರೆ. ಹಸ್ತಪ್ರತಿಗಳ ದೈವಿರೂಪದ ಚರ್ಚೆ ಇದಾದರೂ ಅದನ್ನು ಮೀರಿದ ಸಾಂಸ್ಕೃತಿಕ ರೂಪದ ಚರ್ಚೆಯನ್ನು ಮಾಡುವ ಪ್ರಯತ್ನವನ್ನು ಲೇಖಕರು ಇಲ್ಲಿ ಮಾಡಿದ್ದು ಗಮನಾರ್ಹವಗಿದೆ.

ಕೆ. ರವೀಂದ್ರನಾಥ್ ಅವರ 'ಹಸ್ತಪ್ರತಿಶಾಸ್ತ್ರ' (೨೦೧೪), ಕೃತಿಯು ಶಾಸ್ತ್ರಿಯ ಕನ್ನಡ ಅಧ್ಯಯನ ಮಾಲೆ, ಶಾಸ್ತ್ರೀಯ ಕನ್ನಡ ಕೇಂದ್ರ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿಯಿಂದ ಪ್ರಕಟವಾಗಿದೆ. ಈ ಕೃತಿಯಲ್ಲಿ ಲೇಖಕರು ಕನ್ನಡ ತಿಳುವಳಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪ್ರತಿಯೊಂದು ಕ್ಷೇತ್ರದ ಅಧ್ಯಯನಗಳು ತಮ್ಮದೇ ಆದ ಶಿಸ್ತನ್ನು ರೂಪಿಸಿಕೊಂಡು ಬೆಳೆಯುತ್ತಲಿವೆ ಅಥವಾ ಅಧ್ಯಯನ ಶಿಸ್ತುಗಳಲ್ಲಿ ಹಸ್ತಪ್ರತಿಶಾಸ್ತ್ರವು ಸೇರುತ್ತದೆ. ಹಸ್ತಪ್ರತಿಗಳು ಒಂದು ನಾಡಿನ ಆಸ್ತಿ. ಅವುಗಳ ರಕ್ಷಣೆಯೆಂದರೆ ಗ್ರಂಥಗಳ ರಕ್ಷಣೆ. ಗ್ರಂಥಗಳ ರಕ್ಷಣೆಯೆಂದರೆ ಅಕ್ಷರ ರೂಪದಲ್ಲಿರುವ ಒಂದು ನಾಡಿನ ಸಾಂಸ್ಕೃತಿಕ ಚಟುವಟಿಕೆಗಳ ಸಂರಕ್ಷಣೆಯಾಗಿದೆ. ಕರ್ನಾಟಕದಲ್ಲಿ ಜನತೆ ಬರೆಯುವುದರ ಮೂಲಕ ಉತ್ಪಾದಕರಾಗಿ ಬರೆಸುವುದರ ಮೂಲಕ ಪೋಷಕರಾಗಿ ಹಸ್ತಪ್ರತಿಗಳ ನಿರ್ಮಾಣ ಕಾರ್ಯವನ್ನು ಜೀವಂತವಾಗಿಟ್ಟು, ಹಸ್ತಪ್ರತಿ ಭಂಡಾರದ ಆಗರವನ್ನಾಗಿಸಿದ್ದಾರೆ. ಈ ಪ್ರಕ್ರಿಯೆ ವ್ಯಕ್ತಿಯಿಂದ ವ್ಯಕ್ತಿಗೆ ಜನಾಂಗದಿಂದ ಜನಾಂಗಕ್ಕೆ ತಲೆಮಾರಿನಿಂದ ತಲೆಮಾರಿಗೆ ಬಳುವಳಿಯಾಗಿ ಬಂದಿದೆ. ಇದೊಂದು ಜ್ಞಾನ ಪರಂಪರೆ ಹೀಗಾಗಿ ಹಸ್ತಪ್ರತಿಗಳ ಮೂಲಕ ಅವುಗಳ ಅರ್ಥ ಸ್ವರೂಪ ಉತ್ಪಾದನೆ ಪ್ರಸಾರ, ಸಂಗ್ರಹ, ಸಂರಕ್ಷಣೆ, ಮಹತ್ವ ಮುಂತಾದ ಸಂಗತಿಗಳನ್ನು ಸೈದ್ಧಾಂತಿಕವಾಗಿ ನಿರೂಪಿಸುವ ಉದ್ದೇಶ ಈ ಕೃತಿಯದ್ದಾಗಿದೆ.

ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಹಸ್ತಪ್ರತಿಗಳಲ್ಲಿ ಎರಡು ರೀತಿಯ ಅವಕಾಶಗಳಿವೆ. ಒಂದು ಅವುಗಳಲ್ಲಿಯ ಪಠ್ಯಕೇಂದ್ರಿತ ಮತ್ತೊಂದು ಸಾಮಗ್ರಿ ಕೇಂದ್ರಿತ ಪಠ್ಯಕೇಂದ್ರಿತ ಹಸ್ತಪ್ರತಿಗಳ ವಸ್ತು, ವಿಷಯ, ಚಿತ್ರ, ಸಾಹಿತ್ಯ, ಶಾಸ್ತ್ರ ಮುಖವನ್ನು ಚರ್ಚಿಸುವುದು ಸಾಮಗ್ರಿ ಕೇಂದ್ರಿತವಾಗಿ ಅವುಗಳ ರಚನೆ, ಪ್ರಕಾರ ಸ್ವರೂಪ ಇತ್ಯಾದಿಗಳಲ್ಲದೆ, ಸಾಮಾಜಿಕ ಹಾಗೂ ಧಾರ್ಮಿಕ ಮನೋಧರ್ಮಗಳನ್ನು ವಿಶ್ಲೇಷಿಸುವಂತಹ ಕೆಲಸವನ್ನು ಲೇಖಕರು ಈ ಕೃತಿಯಲ್ಲಿ ಮಾಡಿದ್ದಾರೆ.

ಎಫ್.ಟಿ. ಹಳ್ಳಿಕೇರಿ ಅವರ 'ಕಂಠಪತ್ರ' (೨೦೦೬), ವಿಕಾಸ ಪ್ರಕಾಶನ, ಹೊಸಪೇಟೆ ಇಲ್ಲಿ ಪ್ರಕಟಗೊಂಡಿದೆ. ಈ ಕೃತಿಯ ಮೂಲಕ ದೇಶಿಪಠ್ಯಗಳ ರೂಪ ಸ್ವರೂಪಗಳ ತಾತ್ವಿಕ ಮುಖಗಳನ್ನು ತಿಳಿಯುವ ಹಂಬಲ ಪ್ರಧಾನವಾಗಿ ಎದ್ದು ಕಾಣುತ್ತದೆ. ದೇಶಿ ಎಂಬುದು ಮಾರ್ಗವನ್ನು ತನ್ನ ಒಳಗೆ ಇಟ್ಟುಕೊಂಡು ಬೆಳೆದ ಒಂದು ಮುಖ್ಯ ಬೆಳವಣಿಗೆಯೇ ಸರಿ. ದೇಶಿ ಭಾಷೆಯು ಮಾರ್ಗವನ್ನು ನುಂಗಿ ಬೆಳೆದದ್ದನ್ನೂ ಕಾಣುತ್ತೇವಷ್ಟೆ. ಅದೇ ರೀತಿ ಇಂಗ್ಲಿಷ್ ಶಾಸ್ತ್ರ ವಿಧಾನಗಳು, ಸ್ಥಾನದಲ್ಲಿ ಭಾರತೀಯ ಶಾಸ್ತ್ರ, ವಿಧಾನಗಳು ಎದ್ದು ಕಾಣುತ್ತವೆ. ಭಾರತೀಯ ಶಾಸ್ತ್ರ ವಿಧಾನಗಳ ಸ್ಥಾನದಲ್ಲಿ ಕನ್ನಡ ಶಾಸ್ತ್ರ ನೆಲೆಯೂರಿದವು. ಕನ್ನಡ ಶಾಸ್ತ್ರ ವಿಧಾನದ ಆಶಯಗಳ ಪರಿವರ್ತನೆಯ ತೆಕ್ಕೆಯಲ್ಲಿ ದೇಶಿ ಶಾಸ್ತ್ರ ವಿಧಾನಗಳು ಈಗೀಗ

ಆಕಾರವನ್ನು ತಾಳುತ್ತಿವೆ. ಇದು ಕಳೆದ ಎರಡು ಶತಮಾನಗಳ ನಡುವೆ ಅಗಮ್ಯವಾಗಿ ರೂಪು ತಳೆಯುತ್ತಿರುವ ದೇಶಿ ಹಸ್ತಪ್ರತಿಗಳ ಇತಿಹಾಸ. ಈ ಇತಿಹಾಸದ ರಹಸ್ಯವನ್ನು ಲೇಖಕರು ಬಲ್ಲವರಾಗಿದ್ದು ಇದು ಬಲ್ಲದ ಆಸ್ಥಾನ, ಪಂಪ ಸರ್ವಜ್ಞರ ಹಸ್ತಪ್ರತಿಗಳ ಶಾಸ್ತ್ರವಿಧಾನಗಳು ಒಂದೇ ತೆರನಲ್ಲ. ಅವುಗಳ ಓದೂ ಒಂದೇ ಬಗೆಯದಲ್ಲ, ಅವು ಬೇರೆ ಬೇರೆ. ಕಾಲಕಾಲಕ್ಕೆ ಸೇರಿದ ಪಠ್ಯಗಳೇ ಅವು. ಕೇವಲ ಪಠ್ಯಗಳಲ್ಲಿ ಅವು ಸಾಂಸ್ಕೃತಿಕ ಪಠ್ಯಗಳೇ ಸರಿ. ಇಂಥ ಪಠ್ಯಗಳ ಸಮಾಜದ ವಿಧಿ ನಿಷೇಧಗಳನ್ನು ತಿಳಿಯಬಲ್ಲವು. ಸಂಸ್ಕೃತಿಯ ಆಗಮ್ಯ ಮುಖಗಳನ್ನು ತೋರಿಸಬಲ್ಲವು. ಆದರೆ ಅದಕ್ಕೆ ತಕ್ಕುದಾದ ಉಸಿರನ್ನು ನಾವು ಪಡೆಯಬೇಕು ಅಷ್ಟೇ.

ಹಸ್ತಪ್ರತಿಶಾಸ್ತ್ರಕ್ಕೆ ಸಂಬಂಧಿಸಿದ ಚಟುವಟಿಕೆಗಳ ಬಾಹ್ಯ ವಿವರಗಳು ಇರುವಂತೆ ಅವುಗಳಿಗೆ ಅಂತರಿಕ ಮುಖಗಳು ಇರುತ್ತವೆ. ಕಂಠಪತ್ರ, ತಾಡವೋಲೆ, ಕವಿ ಸಂಪ್ರತಿಕಾರ ಪ್ರತಿಕಾರ ಹೀಗೆ ಹಲವು ಕ್ರಿಯಾ ವಿಧಾನಗಳು ಸಾಗುತ್ತಲೇ ಇರುತ್ತವೆ. ಉತ್ತರ ಭಾರತದ ಹಸ್ತಪ್ರತಿಶಾಸ್ತ್ರ ಇತಿಹಾಸಕ್ಕೂ, ದಕ್ಷಿಣ ಭಾರತದ ಹಸ್ತಪ್ರತಿಶಾಸ್ತ್ರ ಇತಿಹಾಸಕ್ಕೂ ಹಲವು ಬಗೆಯ ನಂಟುಗಳು ಇರುವಂತೆ ನಿಷೇಧಗಳು ಇವೆ. ನಾವು ಇಂಥ ವಿಶಾಲ ಹಸ್ತಪ್ರತಿಶಾಸ್ತ್ರದ ಕ್ರಿಯಾ ವಿಧಾನದಲ್ಲಿ ಸಾಗಬೇಕಾಗಿದೆ. ಲೇಖಕರು ಲಾವಣಿ, ಕಾಲಜ್ಞಾನ, ತತ್ವಪದ, ಅನುಭವ, ವಚನ ಮುಂತಾದ ವಿಷಯಗಳನ್ನು ಹೇಳುವಾಗ ಹಸ್ತಪ್ರತಿ ಕಟ್ಟುಗಳ ಜೊತೆ ಮಾತಾಡುತ್ತಲೇ ಈ ಕಟ್ಟುಗಳ ಹಿಂದಿನ ಕ್ರಿಯಾ ಇತಿಹಾಸ ಯಾವುದೆಂಬುದರ ಕಡೆಗೆ ಆಸಕ್ತಿಯನ್ನು ತೋರಿಸುತ್ತಾರೆ. ಲೇಖಕರಿಗೆ ಅನುಕ್ರಮವಾದ ಚಾರಿತ್ರಿಕ ನೆಲೆಗೊತ್ತು ಅದರ ಹಿಂದಿರುವ ಸಾಂಸ್ಕೃತಿಕ ನೆಲೆಯ ಬಗೆಗಳಾವುವು, ಅವುಗಳ ಒತ್ತಡಗಳು ಯಾವ ಬಗೆಯವು, ನಾವು ಸಾಗಬೇಕಾದ ಹಾದಿ ಏನಾದರೂ ಉಂಟೇ ಇಂತ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಿಕೊಳ್ಳುವ ಹಾದಿಯಲ್ಲಿ ಇಲ್ಲಿರುವ ಕಿರು-ದೀರ್ಘ ಲೇಖನಗಳ ಕಟ್ಟುಗಳನ್ನು ಒಡೆಯುವ ಕಟ್ಟುಗಳನ್ನು ಮುರಿದು ಪುನಾರೂಪಿಸಿಕೊಳ್ಳುವಂತಹವನ್ನು ಅವರು ಈ ಕೃತಿಯಲ್ಲಿ ಚರ್ಚಿಸಿದ್ದಾರೆ.

ಎಫ್.ಟಿ. ಹಳ್ಳಿಕೇರಿಯವರ ಕಂಠಪತ್ರ ೨ ಈ ಕೃತಿಯು ವೀರಶೈವ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ಇಪ್ಪತ್ತು ಸಂಶೋಧನಾತ್ಮಕ ಲೇಖನಗಳು ಇವುಗಳಲ್ಲಿ ವೀರಶೈವ ಸಾಹಿತ್ಯ, ಶರಣರನ್ನ ಕುರಿತ, ನಂತರ ಮಧ್ಯಕಾಲೀನ ಕನ್ನಡ ಸಾಹಿತ್ಯ ಸಂಸ್ಕೃತಿಯ ಕುರಿತ ಲೇಖನ ಕುರಿತು ಚರ್ಚಿಸಲಾಗಿದೆ.

ಎಫ್.ಟಿ. ಹಳ್ಳಿಕೇರಿಯವರ ಕಂಠಪತ್ರ ೩ರಲ್ಲಿ ಒಟ್ಟು ೩೨ ಸಂಪ್ರಬಂಧಗಳಿಂದ ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನಶಾಸ್ತ್ರ ಎಂಬ ಮೊದಲನೆಯ ಪತ್ರದಲ್ಲಿನ ೧೯ ಸಂಪ್ರಬಂಧಗಳಲ್ಲಿ ಈ ಕ್ಷೇತ್ರಗಳಿಗೆ ಸಂಬಂಧಿಸಿದ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಬರಹಗಳಿವೆ. ಹಸ್ತಪ್ರತಿ

ಲಿಪಿಕಾರರ ಶೋಧ ಈ ಭಾಗದ ಒಂದು ಮುಖ್ಯ ಕೊಡುಗೆ. ಒಳಗದಾಟಿಯ ನಾಗನೂರು ಮಠದ ಲಿಪಿಕಾರರು ಕೋಗಳಿ ನಾಡಿನ ಲಿಪಿಕಾರರು, ಹಂಡಿ ಪರಿಸರದ ಲಿಪಿಕಾರರು ಹಂಪಸಾಗರದ ಶೇಷೇಂದ್ರಚಾರ್ ಮಹಿಳಾ ಹಸ್ತಪ್ರತಿ ಲಿಪಿಕಾರರು ಮತ್ತು ಜೈನ ಹಸ್ತಪ್ರತಿ ಲಿಪಿಕಾರರು ಈ ಲೇಖನಗಳು ಮಹತ್ವದ ಹೊಸ ಶೋಧಗಳು. ನಮ್ಮ ಹಿಂದಿನ ಅಧ್ಯಯನಗಳಲ್ಲಿ ಹಸ್ತಪ್ರತಿಗಳಿಗೆ ಕೊಟ್ಟಷ್ಟು ಪ್ರಾಶಸ್ತ್ಯವನ್ನು ಅವುಗಳ ಲಿಪಿಕಾರರಿಗೆ ಕೊಟ್ಟಿಲ್ಲ. ಇತ್ತೀಚಿಗೆ ಪ್ರಕಟವಾಗಿರುವ ಷ. ಶೆಟ್ಟರ್ ಅವರ ಹಳಗನ್ನಡ ಲಿಪಿ ಲಿಪಿಕಾರ, ಲಿಪಿ ವ್ಯವಸಾಯ ಗ್ರಂಥವು ಲಿಪಿಕಾರರನ್ನು ಕೇಂದ್ರೀಕರಿಸಿದೆ. ಲೇಖಕರು, ಲಿಪಿಕಾರರನ್ನು ಗುರುತಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ.

ಈಗಾಗಲೇ ಸಂಪಾದನೆಯಾಗಿರುವ ಗ್ರಂಥಗಳ ಸಂಪಾದನಾ ವಿಧಾನದ ವಿವೇಚನೆಯು ಸೈದ್ಧಾಂತಿಕ ನೆಲೆಯಲ್ಲಿ ವಿಶಿಷ್ಟವಾಗಿ ಇಲ್ಲಿ ನಡೆದಿದೆ. ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿಗಳನ್ನು ಭಾರತೀಯ ಭಾಷೆಗಳಲ್ಲಿ ತಾಡವೋಲೆ ಮತ್ತು ಇತರ ಹಸ್ತಪ್ರತಿಗಳು ಗ್ರಂಥಾವಲೋಕನ ಕನ್ನಡ ಕವಿಚರಿತೆ ಮತ್ತು ಪರಿಷ್ಕರಣೆಯ ಅಗತ್ಯದ ಪಂಪಭಾರತ ದೀಪಿಕೆ, ರಚನೆಯ ವಿನ್ಯಾಸ ಇವು ಈ ದೃಷ್ಟಿಯಲ್ಲಿ ಮುಖ್ಯವಾದ ಬರಹಗಳು. ತುಂಬಾ ಶೈಕ್ಷಣಿಕ ನೆಲೆಯಲ್ಲಿ ಚರ್ಚಿಸಿದ್ದರೆ. ಹಸ್ತಪ್ರತಿಗಳಲ್ಲಿ ಮತಾಲೋಕ, ಚಿತ್ರಕಲೆ ಒಂದು ಅಪೂರ್ವ ಲೇಖವಾಗಿದೆ. ಸಂಶೋಧನ ಸೂಕ್ಷ್ಮ, ಅವಲೋಕನ ಶಕ್ತಿ, ಅಪಾರ ಶ್ರಮ ಮತ್ತು ವಿಶ್ಲೇಷಣಾ ಸಾಮರ್ಥ್ಯ ಇಲ್ಲಿ ಪ್ರಕಟವಾಗಿದ್ದು, ಹಸ್ತಪ್ರತಿಗಳಲ್ಲಿ ಜೈನ ಹಾಡುಗಳ ಸಂಶೋಧನೆಯ ದೃಷ್ಟಿಯಿಂದ ಮುಖ್ಯವಾಗುತ್ತದೆ. ಮೌಖಿಕ ಪರಂಪರೆಯ ಜೈನ ಹಾಡುಗಳು ಹಸ್ತಪ್ರತಿಗಳ ರೂಪದಲ್ಲಿ ಲಿಖಿತ ಪರಂಪರೆಗೆ ಬಂಧಮುಕ್ತ ಮೌಖಿಕವಾಗಿ ಹಾಡುವ ಪರಂಪರೆಗೆ ಸೇರುವುದು. ಒಂದು ಅಪೂರ್ವ ಪ್ರಕ್ರಿಯೆ ಸೈದ್ಧಾಂತಿಕ ಚರ್ಚೆಯಲ್ಲಿ ಕೂಡ ಇಂತಹ ಹಸ್ತಪ್ರತಿಗಳಿಗೆ ವಿಶೇಷ ಸ್ಥಾನವಿದೆ. ದಿವಾನ್ ಪೂರ್ಣಯ್ಯ ಅವರ ವ್ಯಕ್ತಿ ಚಿತ್ರಣವನ್ನು ಕೈಫಿಯತ್ತುಗಳ ಆಧಾರದಿಂದ ಕಟ್ಟಿಕೊಡುವ ಅಧ್ಯಯನ ವಿಧಾನ ಬಹುಶಿಸ್ತೀಯ ನೆಲೆಯದ್ದು. ಕೈಫಿಯತ್ತುಗಳ ಬಳಕೆಯು ಇನ್ನೊಂದು ದಾರಿಯನ್ನು ಇದು ತೆರೆದು ತೋರಿಸುತ್ತದೆ.

ಇರುವ ಲೌಕಿಕ ಶಾಸ್ತ್ರದ ಹಸ್ತಪ್ರತಿಗಳನ್ನು ಕುರಿತು ಲೇಖನಗಳು ಕನ್ನಡದಲ್ಲಿನ ಅವರ್ಗೀಕೃತ ಶಾಸ್ತ್ರಗಳ ನೆಲೆಯಿಂದ ಮುಖ್ಯವಾದವು. ವೈದ್ಯಶಾಸ್ತ್ರ, ಕರ್ಮಶಾಸ್ತ್ರ, ಸಮಾಧಿ ಕ್ರಿಯಾಶಾಸ್ತ್ರ, ಯೋಗಶಾಸ್ತ್ರ ಮತ್ತು ಶಕುನಶಾಸ್ತ್ರ, ಕನ್ನಡದಲ್ಲಿ ಈ ಶಾಸ್ತ್ರಗಳ ಉದ್ದೇಶ ತಾತ್ವಿಕತೆ, ಉಪಯುಕ್ತತೆಗಳ ಚರ್ಚೆಯ ದೃಷ್ಟಿಗಳಿಂದ ಇಂತಹ ಹಸ್ತಪ್ರತಿಗಳ ಅಧ್ಯಯನ ಲೌಕಿಕ ಕನ್ನಡ ಸಾಹಿತ್ಯ ಚರಿತ್ರೆಯ ರಚನೆಗೆ ನೆರವಾಗಬಲ್ಲವು. ಜೊತೆಗೆ ಆಧುನಿಕ ಸನ್ನಿವೇಶದಲ್ಲಿ ಇಂತಹ ಶಾಸ್ತ್ರಗಳ ಮರುಪರಿಶೀಲನೆಗೆ ಕೂಡಾ ಇವು ಉಪಯೋಗ ಆಗಬಹುದು.

ಇಲ್ಲಿ ಹಸ್ತಪ್ರತಿ ಮತ್ತು ಗ್ರಂಥ ಸಂಪಾದನ ಶಾಸ್ತ್ರದಲ್ಲಿ ಅಪಾರ ಸಾಧನೆ ಮಾಡಿದ ಎ.ವೇ. ಶಾಮಿನಾಥೈಯರ್, ಎಚ್. ದೇವಿರಪ್ಪ, ಎನ್. ಬಸವರಾಧ್ಯ, ಗೌ.ಮಾ. ಉಮಾಪತಿಶಾಸ್ತ್ರಿ ಅವರ ಕೊಡುಗೆಗಳನ್ನು ಎಳೆಎಳೆಯಾಗಿ ಬಿಡಿಸಿ ತೋರಿಸಿದ್ದಾರೆ. ಕನ್ನಡ ನಾಡಿನಲ್ಲಿ ಸಾಹಿತ್ಯ ಲೋಕದ ಪ್ರಚಾರ ಮತ್ತು ಜನಪ್ರಿಯತೆ ಕಣ್ಣು ಕೋರೈಸುವ ಪ್ರಖರತೆಯ ನಡುವೆ ಇಂತಹ ಹಿರಿಯ ಸಂಶೋಧಕರ ಹೆಸರುಗಳು ಮಂಜು ಮುಸುಕಿನಲ್ಲಿ ಕಣ್ಮರೆಯಾಗಿವೆ. ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯ ಹಿರಿಯ ಕಣ್ಣುಗಳು ತಮ್ಮ ಪ್ರಾಮಾಣಿಕ ಕಾರ್ಯದ ಕಾರಣವಾಗಿದೆ. ಇಂಥವರನ್ನು ಕನ್ನಡನಾಡು ಮರೆತಿದೆ, ಕಡೆಗಣಿಸಿದೆ. ಲೇಖಕರು ಈ ಕೃತಿಯಲ್ಲಿ ಹಿರಿಯರ ಬಗ್ಗೆ ನಮ್ಮ ಕಣ್ಣು ತೆರೆಸಿದ್ದಾರೆ.

ಈ ಕೃತಿಯು ಮತ್ತೊಂದು ವಿಶಿಷ್ಟತೆ ನಾಲ್ಕು ಮಂದಿ ವಿದ್ವಾಂಸರೊಡನೆ ಹಳ್ಳಿಕೇರಿ ಯವರು ನಡೆಸಿದ ಮಾತುಕತೆಯ ದಾಖಲೆಗಳಿವೆ. ಬಿ.ಎಸ್. ಸಣ್ಣಯ್ಯ, ಸಿ. ಮಹದೇವಪ್ಪ, ಜಿ.ಜಿ. ಮಂಜುನಾಥ, ಟಿ.ಎನ್. ನಾಗರತ್ನ ಇವರು ಅಪಾರ ಅನುಭವಗಳನ್ನು ಹಂಚಿಕೊಂಡಿದ್ದಾರೆ ಮತ್ತು ಪ್ರಸ್ತುತ ಹಸ್ತಪ್ರತಿಗಳ ಸಂರಕ್ಷಣೆ ಸಾಗಬೇಕಾದ ದಾರಿಗಳ ಬಗ್ಗೆ, ವಿಧಾನಗಳ ಬಗ್ಗೆ ಆಧುನಿಕ ತಂತ್ರಜ್ಞಾನದ ಅಳವಡಿಕೆಯ ಬಗ್ಗೆ ಮಾತನಾಡಿದ್ದಾರೆ. ಪ್ರಾಯೋಗಿಕವಾಗಿಯೂ ಇಲ್ಲಿನ ಸಂವಾದಗಳಿಗೆ ಅನ್ವಯಿಕತೆಯ ಆಯಾಮವಿದೆ. ಕೇಂದ್ರ ಹಸ್ತಪ್ರತಿ ಭಂಡಾರದ ಸ್ಥಾಪನೆ ಸಂರಕ್ಷಣೆಯ ಅಭಿಪ್ರಾಯ ಕಾರ್ಯ ರೂಪಕ್ಕೆ ಬರುವ ಅಗತ್ಯದ ಹಿಂದಿಗಿಂತಲೂ ಈಗ ಹೆಚ್ಚಾಗಿದೆ. ಇದು ಪ್ರಸ್ತುತ ಜರೂರಾಗಿ ಆಗಬೇಕಾದ ಕಾರ್ಯ ಎಂದು ಕೃತಿಯಲ್ಲಿ ಚರ್ಚಿಸ ಲಾಗಿದೆ.

ಸಿರಿಕಂಟ ಹೆಸರಿನ ಸಂಪುಟವನ್ನು ಬಿ.ಎಂ.ಶ್ರೀ. ಪ್ರತಿಷ್ಠಾನದಿಂದ ಎನ್. ಬಸವರಾಧ್ಯ ಅವರು ಪ್ರಧಾನ ಸಂಪಾದಕರಾಗಿಯೂ, ನಾ. ಗೀತಾಚಾರ್ಯ ಅವರು ಸಂಪಾದಕರಾಗಿಯೂ ಸಿದ್ಧಪಡಿಸಿದ್ದಾರೆ. ಈ ಹಿಂದೆ ಪ್ರತಿಷ್ಠಾನದಿಂದ ಪ್ರಕಟಿಸಿದ್ದ ಹಸ್ತಪ್ರತಿಶಾಸ್ತ್ರ ಸಂಪುಗಳಲ್ಲಿನ ಬಹಳಷ್ಟು ಲೇಖನಗಳು ಇಲ್ಲಿ ಚರ್ಚಿಸಲಾಗಿದೆ. ಪ್ರಸ್ತುತ ಕೃತಿಯಲ್ಲಿ ನಾಲ್ಕು ಭಾಗಗಳಿವೆ. ಮೊದಲನೆಯ ಭಾಗ ಎಂ.ವಿ. ಸೀತಾರಾಮಯ್ಯನವರು ಹಸ್ತಪ್ರತಿ ಕ್ಷೇತ್ರಕ್ಕೆ ನೀಡಿದ ಕೊಡುಗೆಗೆ ಸಂಬಂಧಿಸಿದೆ. ಎರಡನೆಯ ಭಾಗ ಗ್ರಂಥಸಂಪಾದನೆಗೂ, ಮೂರನೆಯದು ಹಸ್ತಪ್ರತಿಶಾಸ್ತ್ರಕ್ಕೂ ಹಾಗೂ ನಾಲ್ಕನೆಯ ಭಾಗ ಹಸ್ತಪ್ರತಿ ಅಧ್ಯಯನದ ಶಾಸ್ತ್ರಕ್ಕೆ ಸಂಬಂಧಿಸಿದ್ದು, ಈ ಕೃತಿಯು ಹಸ್ತಪ್ರತಿ ಅಧ್ಯಯನ ರೂಪರೇಷೆಗಳ ಮತ್ತು ಬಹುಶಿಸ್ತೀಯ ಅಧ್ಯಯನಕ್ಕೆ ದಾರಿ ಮಾಡಿಕೊಡುವ ಕೃತಿಯಾಗಿದೆ.

ಕೆ. ಆರ್. ದುರ್ಗಾದಾಸ್ ಅವರ 'ಬಳ್ಳಾರಿ ಜಿಲ್ಲೆಯ ಬಯಲಾಟಗಳು' (೧೯೯೬) ಕೃತಿಯು ಸಮತ ಪ್ರಕಾಶನದಿಂದ ಪ್ರಕಟವಾಗಿದ್ದು, ಈ ಕೃತಿಯು ಸಾಂದರ್ಭಿಕವಾಗಿ ಬಳ್ಳಾರಿ

ಜಿಲ್ಲೆಯ ಹಸ್ತಪ್ರತಿಗಳ ವೈಶಿಷ್ಟ್ಯತೆ ಕುರಿತು ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ದೊರಕಿರುವ ಬಯಲಾಟ ಹಸ್ತಪ್ರತಿಗಳು ಮತ್ತು ಬಯಲಾಟ ಹಸ್ತಪ್ರತಿಗಳ ಲಿಪಿಕಾರರ ಕುರಿತಂತೆ ಚರ್ಚಿಸಿದ್ದಾರೆ.

ನಾ. ಗೀತಾಚಾರ್ಯ ಅವರ 'ಹಸ್ತಪ್ರತಿ ಅಧ್ಯಯನಶಾಸ್ತ್ರ' (೨೦೦೯) ಕೃತಿಯು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಿಂದ ಪ್ರಕಟವಾಗಿದ್ದು, ಹಸ್ತಪ್ರತಿ ಅಧ್ಯಯನದ ಬಹುಶಿಸ್ತೀಯ ಆಯಾಮ ಕುರಿತು ಚರ್ಚಿಸಲಾಗಿದೆ.

ನಾ. ಗೀತಾಚಾರ್ಯ ಅವರ ಸಂಪಾದನೆಯ 'ಎಂ.ವೀ. ಸೀತಾರಾಮಯ್ಯ ಸಮಗ್ರ ಸಾಹಿತ್ಯ ಸಂಪುಟ' ೬ (೨೦೧೩), ಗ್ರಂಥಸಂಪಾದನೆ ಹಸ್ತಪ್ರತಿಶಾಸ್ತ್ರ ಮತ್ತು ಶಾಸ್ತ್ರ ಸಾಹಿತ್ಯ ಸಂಪುಟ ಕೃತಿಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟವಾಗಿದೆ. ಈ ಕೃತಿಯು ಗ್ರಂಥಸಂಪಾದನೆಯ ಕ್ಷೇತ್ರಕ್ಕೆ ವಿದ್ವಾಂಸರ ಕೊಡುಗೆ ಕುರಿತು ಮತ್ತು ಹಸ್ತಪ್ರತಿಶಾಸ್ತ್ರ ವಿಭಾಗದ ಹಸ್ತಪ್ರತಿಶಾಸ್ತ್ರದ ಸಮಸ್ಯೆಗಳು, ಸಂಗ್ರಹ, ಸಂರಕ್ಷಣ ಸೂಚಿ, ಮುನ್ನುಡಿ ಕುರಿತು ಸಂವೇದನ ನೆಲೆಯಲ್ಲಿ ಚರ್ಚಿಸಿದ್ದಾರೆ.

ವೈ.ಸಿ. ಭಾನುಮತಿ ಅವರು ಸಂಪಾದಿಸಿರುವ 'ಗ್ರಂಥ ಸಂಪಾದನ ವ್ಯಾಸಂಗ', ಎಂಬ ಎಂ.ಎಂ. ಕಲಬುರ್ಗಿಯವರ ಪ್ರಬಂಧಗಳ ಸಂಕಲನ ಕೃತಿಯು ೨೦೧೨ರಲ್ಲಿ ಸಂವಹನ ಪ್ರಕಾಶನದಿಂದ ಪ್ರಕಟಗೊಂಡಿದೆ. ಈ ಕೃತಿಯು ಹಸ್ತಪ್ರತಿ ವಾಚನ, ಪಾಠ ಸಂಗ್ರಹಣ, ಪಾಠ ಪರಿಷ್ಕರಣೆ ಇತ್ಯಾದಿ ನೆಲೆಗಳಲ್ಲಿ ಜೀವನದುದ್ದಕ್ಕು ದುಡಿಯುತ್ತ ಬಂದ ವಿದ್ವಾಂಸರಾದ ಎಂ.ಎಂ. ಕಲಬುರ್ಗಿಯವರ ಹಸ್ತಪ್ರತಿ ಶಾಸ್ತ್ರ ಕುರಿತ ಲೇಖನಗಳ ಸಂಗ್ರಹಿಸಿ ಈ ಕೃತಿಯಲ್ಲಿ ಚರ್ಚಿಸಿದ್ದಾರೆ.

ನಂಜುಂಡಸ್ವಾಮಿಯವರ 'ಹಸ್ತಪ್ರತಿತಜ್ಞ ಎಸ್. ಶಿವಣ್ಣ' ಕೃತಿಯು ೨೦೧೮ರಲ್ಲಿ ಎಂ.ಎಂ. ಕಲಬುರ್ಗಿ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ-ಗದಗ ಇವರು ಪ್ರಕಟಿಸಿದ್ದಾರೆ. ಶಿವಣ್ಣ ನಮ್ಮ ನಾಡು ಕಂಡ ಶ್ರೇಷ್ಠ ಹಸ್ತಪ್ರತಿ ತಜ್ಞರು, ಕರ್ನಾಟಕದ ಮೂಲೆ ಮೂಲೆಯಲ್ಲಿ ಅಡಗಿ ಕುಳಿತಿದ್ದ ಹಸ್ತಪ್ರತಿಗಳನ್ನು ಶೇಖರಿಸಿ ಕನ್ನಡ ಸಾಹಿತ್ಯದ ಹಾಸುಬೀಸುಗಳನ್ನು ಎತ್ತರದ ಬಿತ್ತರಗಳನ್ನು ಲೋಕದ ಮುಂದೆ ತೆರೆದು ತೋರಿದ ಸಾಹಸ ಅವರದ್ದು. ಅದರಲ್ಲೂ ಪ್ರಕಟಿತ ವಚನ ಸ್ವರವಚನ ಸಾಹಿತ್ಯವನ್ನು ಅಗಾಧ ಪ್ರಮಾಣದಲ್ಲಿ ಸಂಶೋಧಿಸಿದ ಮಹತ್ವದ ಗ್ರಂಥ ಸಂಪಾದಕರು ನಮ್ಮ ಶ್ರೀಮಠದ ಪ್ರಾಚೀನ ಅಪ್ರಕಟಿತ ಸಾಹಿತ್ಯ ಮಾಲೆಗೆ ಅನೇಕ ಕೃತಿಗಳನ್ನು ಶೋಧಿಸಿಕೊಟ್ಟ ಶ್ರೇಯಸ್ಸು ಶಿವಣ್ಣನವರದು. ಅಗರ್ಭ ಶ್ರೀಮಂತ ಮನೆತನದಲ್ಲಿ ಹುಟ್ಟಿದ್ದರೂ ದರ್ಪ ದೌಲತ್ತುಗಳಿಲ್ಲದ ನಯನಾಜೂಕಾಗಿ. ಸಂಪನ್ನರಾಗಿದ್ದ ಶ್ರೀ ಶಿವಣ್ಣನವರ ಬದ್ಧತೆ ಒಂದು ವಿಸ್ಮಯ ಪವಾಡ. ಇಂತಹ ಲೇಖಕರನ್ನು ಓದುಗರಿಗೆ ಪರಿಚಯಸುವ ಈ ಕೃತಿಯೂ ಮಹತ್ತರವಾಗಿದೆ.

ಬಿ.ಎಸ್. ಸ್ವಾಮಿಯವರ 'ಹಸ್ತಪ್ರತಿಶಾಸ್ತ್ರಜ್ಞ ಎಸ್. ಶಿವಣ್ಣ' (೨೦೦೭) ಕೃತಿಯು ಬಿ.ಎಂ.ಶ್ರೀ ಪ್ರತಿಷ್ಠಾನದಿಂದ ಪ್ರಕಟಗೊಂಡಿದೆ. ಇದು ಕೂಡ ಹಸ್ತಪ್ರತಿ ಗ್ರಂಥಸಂಪಾದನಾ ಕ್ಷೇತ್ರದಲ್ಲಿ ದುಡಿದಂತ ಲೇಖಕರನ್ನು ಸಾಹಿತ್ಯಲೋಕಕ್ಕೆ ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ಎ.ವಿ. ನಾವಡ, ರವೀಂದ್ರನಾಥ ಕೆ. ಅವರು ಸಂಪಾದಿಸಿರುವ ಹಸ್ತಪ್ರತಿಶಾಸ್ತ್ರ ವಿಭಾಗದ ದಶಮಾನೋತ್ಸವ ನೆನಪಿನ ಸಂಪುಟ 'ಕವಳಿಗೆ' ಕೃತಿಯು ೨೦೦೬ರಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗದ ಸಾಧನೆ, ಹಸ್ತಪ್ರತಿಗಳು ಅಥವಾ ಗ್ರಂಥಸಂಪಾದನೆ, ವಿದ್ವಾಂಸರ ಚಿಂತನೆ, ಜಾಹೀರಾತುಗಳ ಕುರಿತಂತೆ ಚರ್ಚಿಸಲಾಗಿದೆ.

ಎ.ಆರ್. ಗುರುರವರ 'ಅಲಗೆ ಮೇಲಿನ ಮನೆಯ ಹಸ್ತಪ್ರತಿಗಳು' ಮತ್ತು 'ಅಲಗೆ ಕೆಳಗಣ ಮನೆಯ ಹಸ್ತಪ್ರತಿಗಳು' ಎಂಬ ಕೃತಿಗಳು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದಿಂದ ಪ್ರಕಟವಾಗಿದ್ದು, ಈ ಕೃತಿಗಳು ಹಸ್ತಪ್ರತಿಗಳ ಅಕಾರಾದಿ, ವರ್ಣನಾತ್ಮಕ ಸೂಚಿ ರಚನೆ, ದಾಖಲೆಗಳ ಕುರಿತಂತೆ ಚರ್ಚಿಸಿದ್ದಾರೆ ಮತ್ತು ಹಸ್ತಪ್ರತಿಗಳ ಸಂರಕ್ಷಣೆ ಕುರಿತು ತಿಳಿಸಿದ್ದಾರೆ.

ಕೇಶವಮೂರ್ತಿ ಕೆ.ಆರ್., 'ಹಸ್ತಪ್ರತಿ ಸಂರಕ್ಷಣೆ' (೨೦೧೦) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಈ ಕೃತಿಯಲ್ಲಿ ಲೇಖಕರು ಹಸ್ತಪ್ರತಿಯ ಆಂತರಿಕ ಸಂರಕ್ಷಣೆ, ಬಾಹ್ಯ ಸಂರಕ್ಷಣೆ, ಸಂಪ್ರದಾಯ ಮತ್ತು ಆಧುನಿಕ ಸಂರಕ್ಷಣಾ ವಿಧಾನಗಳನ್ನು ಕುರಿತು ಚರ್ಚಿಸಿದ್ದಾರೆ. ಇಂತಹ ಕೃತಿಗಳು ಬಹುಶಿಸ್ತೀಯ ನೆಲೆಯ ಅಧ್ಯಯನಗಳು ನಡೆದಿದ್ದು, ಅವುಗಳ ಸ್ವರೂಪ ಮತ್ತು ತಾತ್ವಿಕ ನೆಲೆಗಳನ್ನು ಚರ್ಚಿಸುವ ಸಲುವಾಗಿ ಅಧ್ಯಯನಕ್ಕೆ ಸಮೀಕ್ಷಿಸಿಕೊಳ್ಳಲಾಗಿದೆ.

೨.೩ ಹಸ್ತಪ್ರತಿ ವ್ಯಾಸಂಗ ಸಂಪುಟಗಳು

ಕನ್ನಡ ವಿಶ್ವವಿದ್ಯಾಲಯದ ವಿಚಾರ ಸಂಕಿರಣ ಮತ್ತು ಹಸ್ತಪ್ರತಿ ಸಮ್ಮೇಳನದ ಫಲವೇ ಹಸ್ತಪ್ರತಿ ವ್ಯಾಸಂಗ.

ಹಸ್ತಪ್ರತಿ ವ್ಯಾಸಂಗ ಒಂದು, ಎ.ವಿ. ನಾವಡ, ಎಸ್.ಎಸ್. ಅಂಗಡಿ ಅವರು ಸಂಪಾದಿಸಿದ್ದಾರೆ. ಈ ಕೃತಿ ಧರ್ಮಸ್ಥಳದಲ್ಲಿ ಆಯೋಜಿಸಿದ ಗ್ರಂಥ ಸಂಪಾದನೆಯ ವಿಧಿ ವಿಧಾನಗಳು ಎಂಬ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ. ಪ್ರಸ್ತುತ ಕೃತಿಯು ೬ ಲೇಖನಗಳ ಗ್ರಂಥಸಂಪಾದನೆಯ ಹಸ್ತಪ್ರತಿಗಳ ಭೌಗೋಳಿಕ ನೆಲೆಯನ್ನು ಕುರಿತು ಚರ್ಚಿಸುತ್ತದೆ. ಮೌಖಿಕ ದೇಶಿ ಮಾರ್ಗ ಶಾಸನ ಹಾಗೂ ಸಚಿತ್ರ ಪಠ್ಯಗಳ ಸಂಪಾದನೆಯ ವಿಧಾನಗಳಲ್ಲಿ ತಲೆದೋರಬಹುದಾದ ಸಮಸ್ಯೆಗಳು, ಅವುಗಳ ಪರಿಹಾರಕ್ಕೆ ಸಂಪಾದಕ ಅನುಸರಿಸಬೇಕಾದ ವಿಧಾನಗಳನ್ನು ಅಧ್ಯಯನ ಪೂರ್ಣವಾಗಿ ಪ್ರಸ್ತುತಪಡಿಸಲಾಗಿದೆ. ವ್ಯಾಕರಣಗಳಂತಹ ಶುದ್ಧ ಶಾಸ್ತ್ರೀಯ ಕೃತಿಯ ಪಾಠ ಪರಿಷ್ಕರಣಕ್ಕೆ ತನ್ನದೇ ಆದ

ಸಂಪಾದನೆಯ ವಿಧಾನವಿರುವುದನ್ನು ಇಲ್ಲಿ ಚರ್ಚಿಸಲಾಗಿದೆ. ಕ್ಷೇತ್ರಕಾರ್ಯಗಳ ಮೂಲಕ ಕರಾವಳಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಭಾಗದ ಹಸ್ತಪ್ರತಿ ನೆಲೆಗಳನ್ನು ಗುರುತಿಸಿದ ಇಲ್ಲಿಯ ಲೇಖನಗಳ ಪರಿಶ್ರಮಕ್ಕೆ ನಿದರ್ಶನಗಳಾಗಿವೆ. ಗ್ರಂಥಸಂಪಾದನಾ ಶಾಸ್ತ್ರವನ್ನು ಪಠ್ಯಮುಖಿಯಾಗಿ ಪ್ರಾಯೋಗಿಕಗೊಳಿಸಿದ ಇಲ್ಲಿನ ಲೇಖಗಳಿಗೆ ಹಲವು ರೀತಿಯ ಹಿರಿಮೆಗಳಿವೆ.

ಹಸ್ತಪ್ರತಿ ವ್ಯಾಸಂಗ–೨: ಎಫ್.ಟಿ. ಹಳ್ಳಿಕೇರಿ, ಕೆ. ರವೀಂದ್ರನಾಥ ಇವರು ಸಂಪಾದಿಸಿದ ಈ ಕೃತಿ ಮೇಲುಕೋಟೆಯಲ್ಲಿ ಆಯೋಜಿಸಿದ್ದ ಕನ್ನಡ ಹಸ್ತಪ್ರತಿ ಭಂಡಾರಗಳು ಎಂಬ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ. ೯ ಜನ ವಿದ್ವಾಂಸರು ಹಸ್ತಪ್ರತಿ ಭಂಡಾರಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಪ್ರಬಂಧ ರೂಪದಲ್ಲಿ ಹೆಣೆದಿದ್ದಾರೆ. ಸರ್ಕಾರಿ ಸಾರ್ವಜನಿಕ ಮಠಮಾನ್ಯ, ಭಂಡಾರಗಳು, ಹೊರನಾಡು, ವಿದೇಶಿ ಭಂಡಾರಗಳಲ್ಲದೆ, ಕೇಂದ್ರ ಹಸ್ತಪ್ರತಿ ಭಂಡಾರದ ಅಗತ್ಯವನ್ನು ಕುರಿತಾದ ಚಿಂತನೆಗಳು ಇಲ್ಲಿ ಹರಡಿವೆ. ಅನುಬಂಧಗಳಲ್ಲಿ ಅಧ್ಯಯನ ಪೀಠದ ಭಂಡಾರ, ಬೆಂಗಳೂರು, ಬಿ.ಎಂ.ಶ್ರೀ ಪ್ರತಿಷ್ಠಾನ ಭಂಡಾರ ಮತ್ತು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರಗಳ ವಿಶೇಷ ಲೇಖನಗಳು ಸೇರ್ಪಡೆಗೊಂಡಿವೆ. ಆಧುನಿಕ ಗ್ರಂಥ ಭಂಡಾರಗಳಂತೆ ಪ್ರಾಚೀನ ಹಸ್ತಪ್ರತಿ ಭಂಡಾರಗಳು ಮಹತ್ವದ ಮಾಹಿತಿ ಕೇಂದ್ರಗಳಾಗಿದ್ದವು. ಅವುಗಳನ್ನು ಪೋಷಣೆ ಮಾಡಿಕೊಂಡು ಬಂದ ಅನೇಕ ಸಂಸ್ಥೆಗಳು ಇವೆ. ಹೀಗಾಗಿ ಸೂಕ್ತ ಮತ್ತು ಆಧುನಿಕ ಸೌಲಭ್ಯಗಳಿಂದ ವಂಚಿತವಾಗದಂತೆ ಈ ಭಂಡಾರಗಳ ಸಂರಕ್ಷಣೆಯ ಅನುಕೂಲಗಳು ದೊರೆಯಬೇಕೆಂಬುದು ಇಲ್ಲಿ ಮಂಡಿತವಾದ ಪ್ರಬಂಧಗಳ ಏಕಾಭಿಪ್ರಾಯವಾಗಿದೆ.

ಹಸ್ತಪ್ರತಿ ವ್ಯಾಸಂಗ–೩: ವೀರೇಶ ಬಡಿಗೇರ ಹಾಗೂ ಎಸ್.ಆರ್. ಚನ್ನವೀರಪ್ಪ ಸಂಪಾದಿಸಿದ್ದಾರೆ. ಈ ಕೃತಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಕಂಪ್ಯೂಟರ್ ಮತ್ತು ಕನ್ನಡ ಅಭಿವೃದ್ಧಿ ಎಂಬ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ. ಕಂಪ್ಯೂಟರ್‌ನ್ನು ಕೇಂದ್ರವಾಗಿಟ್ಟುಕೊಂಡು ಕನ್ನಡ ಅಭಿವೃದ್ಧಿ, ಭಾಷೆ, ಜನಪದ, ಹಸ್ತಪ್ರತಿಗಳು, ಕಾವ್ಯ, ನಿಘಂಟು ಇತ್ಯಾದಿ ಅಧ್ಯಯನಗಳನ್ನು ನಡೆಸಬಹುದಾದ ಸಾಧ್ಯತೆಗಳನ್ನು ಕುರಿತು ೧೨ ಜನ ವಿದ್ವಾಂಸರ ಪ್ರಬಂಧಗಳು ಇಲ್ಲಿ ಸಂಕಲನವಾಗಿವೆ. ಜಾಗತೀಕರಣದ ಈ ಸಂದರ್ಭದಲ್ಲಿ ಕನ್ನಡ ಭಾಷೆಯ ಮತ್ತು ಆ ಭಾಷಾ ಉತ್ಪಾದನೆಗಳಾದ ಹಸ್ತಪ್ರತಿ ಶಾಸನ ಪ್ರತಿ ಇತ್ಯಾದಿ ಪ್ರಾಚೀನ ಆಧುನಿಕ ಲೇಖನ ಸಾಮಗ್ರಿಗಳನ್ನು ಸಂರಕ್ಷಿಸುವ ಅಧ್ಯಯನ ಮಾಡುವ ಹಾಗೂ ಪ್ರಸರಿಸುವ ಬಹುದೊಡ್ಡ ಕಾರ್ಯವನ್ನು ಕಂಪ್ಯೂಟರ್ ಸಹಾಯ ಬಳಸಿಕೊಂಡು ಹೇಗೆ ನಿರ್ವಹಿಸಿ ಬಹುದೆಂಬುದರ ಕುರಿತು ಇಲ್ಲಿಯ ಪ್ರಬಂಧಗಳು ವಿವರಿಸುತ್ತವೆ.

ಹಸ್ತಪ್ರತಿ ವ್ಯಾಸಂಗ-೪: ವೀರೇಶ ಬಡಿಗೇರ ಹಾಗೂ ಎಸ್.ಆರ್. ಚನ್ನವೀರಪ್ಪ ಸಂಪಾದಿಸಿರುವ ಈ ಕೃತಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಕೇಂದ್ರ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರಮಟ್ಟದ ಕಾರ್ಯಗಾರದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ, 'ಹಸ್ತಪ್ರತಿ ಅಧ್ಯಯನ ಹೊಸ ಸಾಧ್ಯತೆಗಳು' ಎಂಬ ವಿಷಯದ ಮೇಲೂ ೩೭ ಜನ ವಿದ್ವಾಂಸರು ವಿಚಾರ ಮಂಡಿಸಿದ್ದಾರೆ. ೮ ಜನರು ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಇಲ್ಲಿಯ ಚಿಂತನೆಗಳಿಗೆ ಪ್ರಾಚೀನ ಹಾಗೂ ಆಧುನಿಕ ಸ್ಪರ್ಶಗಳಿರುವುದು ವಿಶೇಷ. ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ ಸಾಂಸ್ಕೃತಿಕ ಅಧ್ಯಯನಗಳಕ್ರಮ ಭಾಷಿಕೆ ಸಂರಚನೆ ಇತ್ಯಾದಿ ಸಂಗತಿಗಳಲ್ಲಿ ಈ ಹಿಂದೆ ತೊಡಗಿಸಿದ, ಮುಂದೆ ತೊಡಗಿಸಿ ಇದುವರೆಗೆ ನಡೆದ ಹಸ್ತಪ್ರತಿಗಳ ಅಧ್ಯಯನದ ವಿವಿಧ ಮುಖಗಳನ್ನು ಪರಿಚಯ ಮಾಡಿಸುವ ದೃಷ್ಟಿಯಿಂದ ಈ ಕೃತಿಗೆ ದಾಖಲೀಕರಣದ ಗೌರವ ಸಲ್ಲುತ್ತದೆ. ಹಲವು ಪ್ರಬಂಧಗಳಲ್ಲಿ ಕೆಲವು ವಿಚಾರಗಳು ಪುನರುಕ್ತಿಗೊಂಡಿವೆ.

ಹಸ್ತಪ್ರತಿ ವ್ಯಾಸಂಗ-೫: ವೀರೇಶ ಬಡಿಗೇರ ಸಂಪಾದಿಸಿರುವ ಈ ಕೃತಿ ಮಂಗಳೂರಿನಲ್ಲಿ ೨೦೦೫ರಲ್ಲಿ ನಡೆದ ಅಖಿಲ ಕರ್ನಾಟಕ ಹಸ್ತಪ್ರತಿ ಮೊದಲ ಸಮ್ಮೇಳನದಲ್ಲಿ ಮಂಡಿಸಲಾದ ಪ್ರಬಂಧಗಳ ಪುಸ್ತಕ. ಈ ಸಮ್ಮೇಳನದಲ್ಲಿ ಹರ್ಮನ್ ಮೊಂಗ್ಲಿಂಗ್ ಸಂಸ್ಮರಣೆ ಎಂಬ ವಿಶೇಷ ಗೋಷ್ಠಿ ನೆರವೇರಿತು. ಇಲ್ಲಿ ಗ್ರಂಥ ಸಂಪಾದನೆ ಕೊಡುವ ಚರಿತ್ರೆಶೋಧ ಮೌಖಿಕ ಸಾಹಿತ್ಯ ಸಂಪಾದನೆ ಹಾಗೂ ಕನ್ನಡ ಪತ್ರಿಕೋದ್ಯಮ ಕುರಿತಂತೆ ಮೊಂಗ್ಲಿಂನ್ ಅವರ ಸಾಧನೆಗಳನ್ನು ವಿದ್ವಾಂಸರು ಚರ್ಚಿಸಿದ್ದಾರೆ. ಗ್ರಂಥ ಸಂಪಾದನೆಗೆ ಟಿ.ವಿ. ವೆಂಕಟಾಚಲ ಶಾಸ್ತ್ರಿಯವರ ಸಾಧನೆ ಹಾಗೂ ಗ್ರಂಥಸಂಪಾದನೆಯ ಹಿಂದಿನ ಮನೋಧರ್ಮ ಎಂಬ ವಿಷಯ ಕುರಿತು ವಿಷಯ ಮಂಡನೆ, ಪ್ರತಿಕ್ರಿಯೆಗಳಿಂದ ಸಂಪಾದನ ವೈಧಾನಿಕತೆಯ ಹೊಸ ಆಲೋಚನೆಗಳನ್ನು ಸ್ಥಾಪಿಸಲಾಯಿತು. ಒಟ್ಟಿನಲ್ಲಿ ಈ ವ್ಯಾಸಂಗ ಗ್ರಂಥ ಸಂಪಾದನಾ ಶಾಸ್ತ್ರದ ಪುನರಾವಲೋಕನಕ್ಕೆ ಹಿಡಿದ ಕನ್ನಡಿಯಾಗಿ ರೂಪುಗೊಂಡಿದೆ. ಈ ಚಿಂತನೆಗಳನ್ನು ಕುರಿತಾದ ಪ್ರಾಸ್ತವಿಕ ಮಾತುಗಳಲ್ಲಿ ವೀರೇಶ ಬಡಿಗೇರ ಅವರು ಪ್ರಸ್ತುತ ವ್ಯಾಸಂಗದ ಮಹತ್ವ ಹಾಗೂ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ.

ಹಸ್ತಪ್ರತಿ ವ್ಯಾಸಂಗ-೬: ಎಸ್.ಆರ್. ಚನ್ನವೀರಪ್ಪ ಸಂಪಾದಿಸಿದ ಈ ಕೃತಿ ೨೦೦೪ರ ಅಕ್ಟೋಬರ್ ೪-೫ರಂದು ಸಂಕೇಶ್ವರದಲ್ಲಿ ನಡೆದ ಅಖಿಲ ಕರ್ನಾಟಕ ಹಸ್ತಪ್ರತಿ ೨ನೆಯ ಸಮ್ಮೇಳನದಲ್ಲಿ ಮಂಡಿಸಲಾದ ಪ್ರಬಂಧಗಳ ಪುಸ್ತಕ. ಈ ಸಮ್ಮೇಳನದಲ್ಲಿ ಕೆ.ಜಿ. ಕುಂದಣಗಾರರ ಸಾಹಿತ್ಯ ಸಾಧನೆ ಕುರಿತು ವಿಶೇಷ ಅಧ್ಯಯನ ಗೋಷ್ಠಿ ನಡೆಯಿತು. ಆ ಗೋಷ್ಠಿಯಲ್ಲಿ ಎ.ವಿ. ನಾವಡರು ಕುಂದಣಗಾರರ ಪರಂಪರೆ, ನಿರ್ಮಾಣ ಮತ್ತು ಸಂಸ್ಕೃತಿ ಮುಖಿ ಸಂಕಥನ ಕುರಿತು ಈಗೆ ಅನೇಕ ಬಹುಶಾಸ್ತ್ರೀಯ ವಿಷಯಗಳನ್ನು ಕುರಿತು

ಚರ್ಚಿಸಲಾಗಿದ್ದು, ಎಲ್ಲ ಗೋಷ್ಠಿಗಳಲ್ಲಿ ಮಂಡಿತವಾದ ಪ್ರಬಂಧಗಳನ್ನು ಇಲ್ಲಿ ಅಡಕಗೊಳಿಸಲಾಗಿದೆ. ಒಟ್ಟಾರೆ ಇಲ್ಲಿನ ಬರಹಗಳು ಹಸ್ತಪ್ರತಿ, ಗ್ರಂಥ ಸಂಪಾದನೆ ಕುರಿತಂತೆ ಹೊಸ ಮೌಲ್ಯ ಸಂಗತಿಗಳನ್ನು ಹೇಳುತ್ತವೆ. ಹೊಸ ತಾತ್ವಿಕ ಚರ್ಚೆಗಳನ್ನು ಹುಟ್ಟು ಹಾಕುತ್ತವೆ. ಪ್ರಸ್ತುತ ಕೃತಿ ಅವುಗಳ ಅರ್ಥ, ಚರ್ಚೆಗಳ ದಾಖಲೀಕರಣವಾಗಿದೆ.

ಹಸ್ತಪ್ರತಿ ವ್ಯಾಸಂಗ–೭ : ಎಫ್.ಟಿ. ಹಳ್ಳಿಕೇರಿ ಸಂಪಾದಿಸಿರುವ ಈ ಕೃತಿ ಬಿಜಾಪುರದ ಬಿ.ಎಲ್.ಡಿ ಶಿಕ್ಷಣ ಸಂಸ್ಥೆಯ ವಚನ ಪಿತಾಮಹ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರದ ಸಹಯೋಗದಲ್ಲಿ ೧೬–೧೭ ೨೦೦೫ರಂದು ನಡೆದ ಅಖಿಲ ಕರ್ನಾಟಕ ಮೂರನೆಯ ಹಸ್ತಪ್ರತಿ ಸಮ್ಮೇಳನವನ್ನು ಕನ್ನಡ ಹಿರಿಯ ಸಂಶೋಧಕರಾದ ಎಂ.ಎಂ. ಕಲಬುರ್ಗಿ ಅವರ ಸಭಾಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಆ ಸಮ್ಮೇಳನದಲ್ಲಿ ಮಂಡಿತವಾದ ಸಂಪ್ರಬಂಧವನ್ನು ಹಸ್ತಪ್ರತಿ ವ್ಯಾಸಂಗದ ೭ನೇ ಸಂಪುಟದ ಮೂಲಕ ತರಲಾಗಿದ್ದು ಫ.ಗು. ಹಳಕಟ್ಟಿ ಸಾಹಿತ್ಯ ಸಂಸ್ಮರಣೆ ಹಸ್ತಪ್ರತಿ ಗ್ರಂಥ ಸಂಪಾದನೆಗೆ ಎಂ.ಎಂ. ಕಲಬುರ್ಗಿ ಅವರ ಕೊಡುಗೆ ಬಿಜಾಪುರ ಜಿಲ್ಲಾವಾರು ಹಸ್ತಪ್ರತಿ ಸಂಪತ್ತು, ಲೌಕಿಕಶಾಸ್ತ್ರ ಸಾಹಿತ್ಯದ ಹಸ್ತಪ್ರತಿಗಳ ಹಾಗೂ ಸಮಾರೋಪ ಭಾಷಣ ಎಂಬ ಐದು ಭಾಗಗಳಲ್ಲಿ ಇಲ್ಲಿಯ ಸಂಪ್ರಬಂಧಗಳನ್ನು ವಿಂಗಡಿಸಲಾಗಿದೆ. ಶರಣರ ವಚನಗಳನ್ನು ಹಸ್ತಪ್ರತಿಗಳ ಒಡಲಿನಿಂದ ಹೊರತಂದ ವಿದ್ವಾಂಸರುಗಳು ಅಗ್ರಗಣ್ಯರಾದ ಫ.ಗು. ಹಳಕಟ್ಟಿ, ಅವರ ಸಮಗ್ರ ಸಾಹಿತ್ಯವನ್ನು ಒಂದೆಡೆ ಮತ್ತು ವಿಶ್ಲೇಷಣೆ ಮತ್ತು ಚರ್ಚೆ ಗೊಳಪಡಿಸಿದ್ದು ಕನ್ನಡ ಲೌಖಿಕ ಶಾಸ್ತ್ರಗಳಲ್ಲಿ ಪ್ರಮುಖವಾದ ಗೃಹವಾಸ್ತು, ಶಿಲ್ಪಶಾಸ್ತ್ರ, ಅಶ್ವಶಾಸ್ತ್ರ, ವೈದ್ಯಶಾಸ್ತ್ರ ಮತ್ತು ಸೂಪಶಾಸ್ತ್ರ ಕುರಿತು ಹಸ್ತಪ್ರತಿಗಳ ಅವಲೋಕನ ಬಿಜಾಪುರ ಜಿಲ್ಲೆಯ ಹಸ್ತಪ್ರತಿಗಳ ಸ್ವರೂಪ ಮತ್ತು ವ್ಯಾಪ್ತಿ ಮತ್ತು ಮಹತ್ವಗಳ ಬಗ್ಗೆ ವಿದ್ವಾಂಸರು ಮಂಡಿಸಿದ ಪ್ರಬಂಧಗಳು ಚರ್ಚೆ ಕುತೂಹಲಕಾರಿಯಾಗಿವೆ.

ಹಸ್ತಪ್ರತಿ ವ್ಯಾಸಂಗ–೮: ಎಫ್.ಟಿ. ಹಳ್ಳಿಕೇರಿಯವರು ಸಂಪಾದಿಸಿರುವ ಈ ಕೃತಿಯು, ಆರ್. ನರಸಿಂಹಾಚಾರ್, ಸಾಹಿತ್ಯ ಸಂಸ್ಮರಣೆ ಲೌಕಿಕ ಶಾಸ್ತ್ರ, ಹಸ್ತಪ್ರತಿಗಳು ತುಮಕೂರು ಜಿಲ್ಲೆಯ ಹಸ್ತಪ್ರತಿ ಸಂಪತ್ತು. ಸಮ್ಮೇಳನಾಧ್ಯಕ್ಷರು ಬಿ.ಎಸ್. ಸಣ್ಣಯ್ಯನವರ ಸಾಧನೆ ಕುರಿತು ವಿಶೇಷ ಉಪನ್ಯಾಸ ಹಾಗೂ ಹಿರಿಯ ವಿದ್ವಂಸರಾದ ಸಿ. ಮಹಾದೇವಪ್ಪನವರು ಸಮಾರೋಪ ಭಾಷಣ. ಹೀಗೆ ಐದು ಭಾಗಗಳನ್ನು ಈ ಸಂಪುಟವನ್ನು ಒಳಗೊಂಡಿದೆ. ಕನ್ನಡ ಕವಿ ಚರಿತ್ರೆಕಾರರಾದ ಆರ್. ನರಸಿಂಹಾಚಾರ್ ಅವರ ಸಮಗ್ರ ಸಾಹಿತ್ಯವನ್ನು ಹೊಸ ದೃಷ್ಟಿಕೋನದಿಂದ ಚರ್ಚಿಸಲಾಗಿದೆ. ಗಜಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಕಾವ್ಯಶಾಸ್ತ್ರ ಹಾಗೂ ರಟ್ಟಮತ ಶಾಸ್ತ್ರ ಅಥವಾ ಕುರಿತ ಸಂಪ್ರಬಂಧಗಳು ಲೌಕಿಕಶಾಸ್ತ್ರ ಅಧ್ಯಯನಕ್ಕೆ ಹೊಸ ಮಾಹಿತಿಗಳನ್ನು ಮೊದಬಾರಿಗೆ ಸೇರಿಸಿದ ಹಾಗೆಯೇ ತುಮಕೂರು ಜಿಲ್ಲೆಯ ಹಸ್ತಪ್ರತಿಗಳ ವಿಶೇಷತೆಯನ್ನು

ಗುರುತಿಸುವ ಲೇಖನಗಳು ಕುತೂಹಲಕರವಾಗಿದೆ. ಜೊತೆಗೆ ಹೀಗೆ ಹಸ್ತಪ್ರತಿ ಅಧ್ಯಯನ ಕುರಿತಂತೆ ವಿವಿಧ ಆಯಾಮಗಳನ್ನು ತಿಳಿಸಿಕೊಡುತ್ತದೆ.

ಹಸ್ತಪ್ರತಿ ವ್ಯಾಸಂಗ-೯: ಎಸ್.ಎಸ್. ಅಂಗಡಿಯವರು ಸಂಪಾದಿಸಿರುವ ಈ ಕೃತಿಯಲ್ಲಿ ಗೊರೇಬಾಳ ಹನುಮಂತರಾಯರ ಸಾಹಿತ್ಯ ಸಂಸ್ಕರಣೆ, ಲೌಕಿಕಶಾಸ್ತ್ರ, ಹಸ್ತಪ್ರತಿಗಳ ಗುಲಬರ್ಗಾ ಜಿಲ್ಲೆಯ ಹಸ್ತಪ್ರತಿ ಸಂಪತ್ತು, ಸಮ್ಮೇಳನಾಧ್ಯಕ್ಷರಾದ ಬಿ.ವಿ. ಮಲ್ಲಾಪುರ ಅವರ ಸಾಧನೆ ಕುರಿತು ವಿಶೇಷ ಉಪನ್ಯಾಸ. ಹೀಗೆ ನಾಲ್ಕು ಭಾಗಗಳನ್ನು ಈ ಸಂಪುಟವು ಒಳಗೊಂಡಿದೆ. ದಾಸ ಸಾಹಿತ್ಯದ ಸಂಪಾದನೆಗೆ ಗೊರೇಬಾಳರ ಕೊಡುಗೆ ಅಪಾರವಾದುದು. ಅವರ ಸಮಗ್ರ ಸಾಹಿತ್ಯವನ್ನು ಹೊಸ ದೃಷ್ಟಿಕೋನದಿಂದ ಚರ್ಚಿಸಲಾಗಿದೆ. ಕೃಷಿಶಾಸ್ತ್ರ, ಖಗೋಳಶಾಸ್ತ್ರ ಹಾಗೂ ಸಮಾಧಿ ಕ್ರಿಯಾಶಾಸ್ತ್ರಗಳ ಕುರಿತು ಸಂಪ್ರಬಂಧಗಳು, ಲೌಕಿಕಶಾಸ್ತ್ರ ಅಧ್ಯಯನಕ್ಕೆ ಹೊಸ ಮಾಹಿತಿಯನ್ನು ಮೊದಲ ಬಾರಿಗೆ ಸೇರಿಸಿವೆ. ಹಾಗೆಯೇ ಗುಲಬರ್ಗಾ, ಜಿಲ್ಲೆಯ ಹಸ್ತಪ್ರತಿಗಳ ವಿಶೇಷತೆಯನ್ನು ಗುರುತಿಸುವ ಲೇಖನಗಳು ತುಂಬಾ ಕುತೂಹಲಕರವಾಗಿವೆ. ಜೊತೆಗೆ ಬಿ.ವಿ. ಮಲ್ಲಾಪುರ ಅವರ ಕೊಡುಗೆಯನ್ನು ಸ್ಥೂಲವಾಗಿ ಮೇಲಕು ಹಾಕಲಾಗಿದೆ. ಈ ಸಂಪುಟವು ಹಸ್ತಪ್ರತಿಶಾಸ್ತ್ರದ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ಸಹಾಯಕಾರಿಯಾಗಿದೆ.

ಹಸ್ತಪ್ರತಿ ವ್ಯಾಸಂಗ-೧೦: ಎಸ್.ಆರ್. ಚನ್ನವೀರಪ್ಪರವರು ಸಂಪಾದಿಸಿರುವ ಈ ಕೃತಿಯು ಶಿ.ಶಿ. ಬಸವನಾಳರ ಸಾಹಿತ್ಯ ಲೌಕಿಕಶಾಸ್ತ್ರ, ಹಸ್ತಪ್ರತಿಗಳು ಬಸವನ ಬಾಗೇವಾಡಿ ಪರಿಸರದ ಹಸ್ತಪ್ರತಿ ಸಂಪತ್ತು ಸಮ್ಮೇಳನಾಧ್ಯಕ್ಷರಾದ ಸಿ. ಮಹಾದೇವಪ್ಪ ಅವರ ಸಾಧನೆ ಕುರಿತು ವಿಶೇಷ ಉಪನ್ಯಾಸ ಹೀಗೆ ನಾಲ್ಕು ಭಾಗಗಳನ್ನು ಈ ಸಂಪುಟದ ಒಳಗೊಂಡಿದೆ. ಶಿಕ್ಷಣ, ಪ್ರತಿಕೋದ್ಯಮ ವಚನ ಸಾಹಿತ್ಯ, ಕಾವ್ಯ ಸಂಪಾದನೆ, ಲಕ್ಷಣ ಗ್ರಂಥಗಳ ಸಂಪಾದನೆಗೆ ಶಿ.ಶಿ. ಬಸವನಾಳರ ಅವರ ಸಾಹಿತ್ಯದ ಸಮಗ್ರ ಅವಲೋಕನ ಇಲ್ಲಿ ಸಾಧ್ಯವಾಗಿದೆ. ಯೋಗ, ಗಣಿತ, ನೀತಿ ಹಾಗೂ ಪ್ರಶ್ನಾಶಾಸ್ತ್ರ ಹಸ್ತಪ್ರತಿಗಳ ವಿಶೇಷತೆಯನ್ನು ಮೊದಲ ಬಾರಿಗೆ ದಾಖಲಿಸಲಾಗಿದೆ. ಹಾಗೆಯೇ ಬಸವನ ಬಾಗೇವಾಡಿ ಪರಿಸರದ ಹಸ್ತಪ್ರತಿಗಳ ಸಮೀಕ್ಷೆಯನ್ನು ಮಾಡಲಾಗಿದೆ. ಈ ಸಮ್ಮೇಳನದ ಅಧ್ಯಕ್ಷರಾದ ಸಿ.ಮಹಾದೇವಪ್ಪ ಅವರು ಹಸ್ತಪ್ರತಿ ಗ್ರಂಥ ಸಂಪಾದನೆಗೆ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆಯನ್ನು ಕುರಿತು ಚರ್ಚಿಸಲಾಗಿದೆ.

ಹಸ್ತಪ್ರತಿ ವ್ಯಾಸಂಗ-೧೧: ಕೆ. ರವೀಂದ್ರನಾಥ ಸಂಪಾದಿಸಿರುವ ಈ ಕೃತಿಯಲ್ಲಿ ಶಿ.ಚ. ನಂದೀಮಠ ಸಾಹಿತ್ಯ ಸ್ಮರಣೆ, ಶಾಸ್ತ್ರಸಾಹಿತ್ಯ ಹಸ್ತಪ್ರತಿಗಳು ಮೈಸೂರು ಪರಿಸರದ ಹಸ್ತಪ್ರತಿ ಸಂಪತ್ತು ಸಮ್ಮೇಳನಾಧ್ಯಕ್ಷರಾದ ಜಿ.ವ್ಹಿ. ಶಿರೂರ ಅವರ ಸಾಧನೆ ಕುರಿತಾದ ವಿದ್ವತ್‌ಪೂರ್ಣ ಲೇಕನಗಳಿವೆ. ನಾಲ್ಕು ಭಾಗಗಳಲ್ಲಿ ಈ ಸಂಪುಟ ವಿನ್ಯಾಸಗೊಂಡಿದೆ. ನಂದೀಮಠರು ಕರ್ನಾಟಕ ಕಂಡ ಒಬ್ಬ ಅಪರೂಪದ ಶಿಕ್ಷಣ ತಜ್ಞರು. ಅವರ ಸಮಗ್ರ ಸಾಹಿತ್ಯ ಬದುಕನ್ನು

ಚರ್ಚಿಸಿರುವುದು ಇಲ್ಲಿ ಸಮಯೋಜಿತ. ಜಲಶಾಸ್ತ್ರ, ಶಕುನಶಾಸ್ತ್ರ, ರತ್ನಶಾಸ್ತ್ರ, ಮುಲ್ಲಾಶಾಸ್ತ್ರ ಕುರಿತು ಸಂಪ್ರಬಂಧಗಳು ಕುತೂಹಲಕಾರಿಯಾಗಿವೆ. ಹಾಗೆಯೇ ಮೈಸೂರು ಪರಿಸರದ ಹಸ್ತಪ್ರತಿಗಳ ವಿಶೇಷತೆ ಸಮ್ಮೇಳನಾಧ್ಯಕ್ಷರ ಸಾಹಿತ್ಯ ಕೊಡುಗೆಗಳನ್ನು ಇಲ್ಲಿ ಸಂಯೋಜಿಸಲಾಗಿದೆ. ಹೀಗೆ ಈ ಸಂಪುಟ ಹಸ್ತಪ್ರತಿ ಶಾಸ್ತ್ರದ ಕೆಲವು ಹಲವು ಆಯಾಮಗಳನ್ನು ವಿಸ್ತರಿಸುವಲ್ಲಿ ಸಹಕಾರಿಯಾಗುತ್ತದೆ.

ಹಸ್ತಪ್ರತಿ ವ್ಯಾಸಂಗ ೧೨: ಕೆ. ರವೀಂದ್ರನಾಥ ಸಂಪಾದಿಸಿರುವ ಈ ಕೃತಿಯು ಶ್ರೀ ಚನ್ನಮಲ್ಲಿಕಾರ್ಜುನರ ಸಾಹಿತ್ಯ ಸ್ಮರಣೆ ಶಾಸ್ತ್ರಸಾಹಿತ್ಯ ಹಸ್ತಪ್ರತಿಗಳು, ಶಿವಮೊಗ್ಗ ಜಿಲ್ಲೆಯ ಹಸ್ತಪ್ರತಿ ಸಂಪತ್ತು, ಸಮ್ಮೇಳನಾಧ್ಯಕ್ಷರಾದ ಉಮಾಪತಿಶಾಸ್ತ್ರಿ ಅವರ ಸಾಧನೆ ಕುರಿತಾದ ವಿದ್ವತ್‌ಪೂರ್ಣವಾದ ೩ ಭಾಗಗಳಲ್ಲಿ ಈ ಸಂಪುಟ ವಿನ್ಯಾಸಗೊಂಡಿದೆ. ಚನ್ನಮಲ್ಲಿಕಾರ್ಜುನರು ಕರ್ನಾಟಕ ಕಂಡ ಒಬ್ಬ ಅಪರೂಪದ ವಿದ್ವಾಂಸರು. ಅವರ ವೀರಶೈವ ಸಂಬಂಧ ಕೃತಿಗಳ ಸಂಪಾದನ ಕಾರ್ಯ ಅಧ್ಯಯನ ಯೋಗ್ಯ. ಹೀಗಾಗಿ ಎರಡು ಗೋಷ್ಠಿಗಳಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಚರ್ಚಿಸಿರುವುದು ಸಮಯೋಚಿತ. ಒಟ್ಟಿನಲ್ಲಿ ಹಸ್ತಪ್ರತಿಶಾಸ್ತ್ರ ಕ್ಷೇತ್ರದ ಹಲವು ಆಯಾಮಗಳನ್ನು ವಿಸ್ತರಿಸುವಲ್ಲಿ ಈ ಸಂಪುಟ ಸಹಕಾರಿಯಾಗಿದೆ.

ಹಸ್ತಪ್ರತಿ ವ್ಯಾಸಂಗ–೧೩: ವೀರೇಶ ಬಡಿಗೇರರವರು ಸಂಪಾದಿಸಿರುವ ಈ ಕೃತಿಯಲ್ಲಿ ಹಸ್ತಪ್ರತಿಗಳ ತಯಾರಿಕೆ, ಪೋಷಣೆ ಮಾಡುತ್ತಿದ್ದ ಕಲಾವಿದ ವರ್ಗಗಳು ಹಾಗೂ ಮಠಗಳ ಬಗೆಗೆ ಹೊಸ ರೀತಿಯ ಚರ್ಚೆಗಳಿವೆ. ಬಿ.ಕೆ. ಹಿರೇಮಠರ ಬದುಕು ಬರಹ ಕುರಿತು ವಿದ್ವಾಂಸರು ಮಂಡಿಸಿದ ಪ್ರಬಂಧಗಳಿವೆ. ಕನ್ನಡ ಹಸ್ತಪ್ರತಿಗಳ ಮತ್ತು ಕುಶಲಕರ್ಮಿ ವರ್ಗಗಳು ಕುರಿತು ವಿವಿಧ ನೆಲೆಯಲ್ಲಿ ಒಂಬತ್ತು ಜನ ವಿದ್ವಾಂಸರು ಚರ್ಚಿಸಿದ್ದಾರೆ. ನಂತರ ಬಾಗಲಕೋಟ ಪರಿಸರದ ಹಸ್ತಪ್ರತಿ ನೆಲೆಗಳ ಕುರಿತು ಚರ್ಚೆಗಳಿವೆ. ಮತ್ತು ಹಸ್ತಪ್ರತಿ ನಿರ್ಮಾಣ ಕೇಂದ್ರಗಳಾಗಿ ಮಠಮಾನ್ಯಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ. ಒಟ್ಟಿನಲ್ಲಿ ಹಸ್ತಪ್ರತಿಗಳು ನಿರ್ಮಿಸಿದ ಮತ್ತು ಪೋಷಿಸಿದ ಕಲಾವಿದರ ಕುರಿತು ನಾಡಿನ ವಿವಿಧ ವಿದ್ವಾಂಸರು ಗಂಭೀರವಾಗಿ ಚರ್ಚಿಸಿದ್ದ ವಿಷಯಗಳನ್ನೊಳಗೊಂಡಿದೆ.

ಹಸ್ತಪ್ರತಿ ವ್ಯಾಸಂಗ–೧೪: ವೀರೇಶ ಬಡಿಗೇರ ಅವರು ಸಂಪಾದಿಸಿದ ಈ ಕೃತಿಯು ಹಸ್ತಪ್ರತಿಗಳನ್ನು ಮೊದಲ ಬಾರಿಗೆ ಬಹುತ್ವದ ನೆಲೆಯಲ್ಲಿ ವಿಶ್ಲೇಷಣೆಗೆ ಅಳವಡಿಸಿರುವುದು ಗಮನಿಸುವಂಥದ್ದು. ಅಂಥ ವಿಭಿನ್ನ ಹಾಗೂ ವಿಶಿಷ್ಟ ಕೆಲಸದ ಫಲಿತ ಹಸ್ತಪ್ರತಿ ವ್ಯಾಸಂಗ ೧೪. ಸಾಂಪ್ರದಾಯಿಕ ಅಧ್ಯಯನಗಳಿಗಿಂತ ಭಿನ್ನವಾದ ಹಲವು ಗಂಭೀರ ಚಿಂತಕರ ಚಿಂತನೆಗಳು ಇಲ್ಲಿ ಸಂಕಲಿತಗೊಂಡಿವೆ. ಸಾಂಪ್ರದಾಯಿಕ ವಿದ್ವತ್ತು ಹಾಗೂ ವಿದ್ವಾಂಸರೊಂದಿಗೆ ಈ ಕಾಲದ ಚಿಂತನೆ ಹಾಗೂ ಚಿಂತಕರು ಒಂದೇ ವೇದಿಕೆಯಲ್ಲಿ ಅನುಸಂಧಾನ ಮಾಡಿದ

ಈ ಕ್ರಮ ಅರ್ಥಪೂರ್ಣವಾದುದು. ಪಠ್ಯ ಹಾಗೂ ಪ್ರತೀಕರಣದ ಕಲ್ಪನೆಯನ್ನು ಸಮಾಜ ಸಾಹಿತ್ಯ ಸಂಸ್ಕೃತಿ ವಿವಿಧ ಲಲಿತಕಲೆ ಹಾಗೂ ರಂಗಕಲೆಗಳೊಂದಿಗೆ ಮುಖಾಮುಖಿ ಮಾಡುವ ಮೂಲಕ ಶುದ್ಧ ಹಾಗೂ ಪ್ರಾಮಾಣಿಕ ಎನ್ನುವ ಚಿಂತನೆಯ ನೆಲೆಗಳನ್ನು ದಾಟಿ ಹಸ್ತಪ್ರತಿ ಹಾಗೂ ಗ್ರಂಥ ಸಂಪಾದನೆಯ ಚರ್ಚೆಗಳನ್ನು ಬೆಳೆಸಲಾಗಿದೆ. ಬಹುಶಾಸ್ತ್ರೀಯ ಹಾಗೂ ಅಂತರ್ ಶಾಸ್ತ್ರೀಯವಾದಂಥ ಇಂಥ ಅಧ್ಯಯನಗಳು ಹಸ್ತಪ್ರತಿ ಅಧ್ಯಯನ ಕ್ಷೇತ್ರದಲ್ಲಿ ಹೊಸ ಸಂಚಲನೆ ಮೂಡಿಸುವ ಕೃತಿಯಾಗಿದೆ.

ಹಸ್ತಪ್ರತಿ ವ್ಯಾಸಂಗ–೧೫: ವೀರೇಶ ಬಡಿಗೇರ ಸಂಪಾದಿಸಿರುವ ಈ ಕೃತಿಯಲ್ಲಿ ವಿಶೇಷವಾಗಿ ನಡುಗನ್ನಡ ಸಾಹಿತ್ಯ ಮತ್ತು ಆಧುನಿಕ ಸಾಹಿತ್ಯದ ಕಾಲಘಟ್ಟಗಳಲ್ಲಿ ಪಠ್ಯಗಳ ಸಂಗ್ರಹ, ಸಂಪಾದನೆ, ಮುದ್ರಣ ಹಾಗೂ ವಿಶ್ಲೇಷಣೆಗಳನ್ನು ಮರುನಿರ್ವಚಿಸುವ ಪ್ರಯತ್ನ ಮಾಡಲಾಗಿದೆ. ಆ ಮೂಲಕ ಶಾಸ್ತ್ರೀಯ ಮತ್ತು ಧಾರ್ಮಿಕ ಒತ್ತಾಸೆಗಳು ಕನ್ನಡದ ಪಠ್ಯ ಗಳನ್ನು ಎದುರುಗೊಂಡು ವಿವಿಧ ಸಾಧ್ಯತೆ ಮತ್ತು ಮಿತಿಗಳನ್ನು ಕುರಿತು ಅನುಸಂಧಾನ ಮಾಡಲಾಯಿತು. ಸಮ್ಮೇಳನದ ಸರ್ವಾಧ್ಯಕ್ಷರಾದ ದೇ. ಜವರೇಗೌಡರಂಥ ಹಿರಿಯರಿಂದ ಕೆ.ವಿ. ನಾರಾಯಣರ ವರೆಗಿನ ಸಮಾರೋಪ ನುಡಿಗಳ ವರೆಗೆ ಗ್ರಂಥಸಂಪಾದನೆಗೆ ಮತ್ತು ಅದರ ವಿವಿಧ ನೆಲೆಗಳನ್ನು ಹೊಸ ತಿಳಿವಳಿಕೆಯೊಂದಿಗೆ ಎದುರು ಬದಿರಾಗಿಸುವ ಸಮರ್ಥ ಕೆಲಸ ಮಾಡಿದ್ದಾರೆ. ಪಠ್ಯದಲ್ಲಿ ಕಾಣುವ ಪ್ರಕ್ಷೇಪ ಅಥವಾ ನಿರಾಕರಿತ ರೂಪಗಳನ್ನು ದೋಷಗಳನ್ನಾಗಿ ಗ್ರಹಿಸದೆ ಒಂದು ಪಠ್ಯವನ್ನು ಆಯಾ ಕಾಲದ ಸಾಹಿತ್ಯಕ್ಕೆ ಹಾಗೂ ಸಾಹಿತ್ಯೋತ್ತರ ವಲಯಗಳ ಅನುಸಂಧಾನ ಮಾಡಿದ ಪ್ರತಿಕ್ರಿಯಿಸಿದ ಮತ್ತು ಪುನರ್‌ರಚನೆ ಮಾಡಿಕೊಂಡು ಪ್ರಕ್ರಿಯಾತ್ಮಕ ನೆಲೆಯಲ್ಲಿ ವಿಶ್ಲೇಷಿಸಿಕೊಳ್ಳಲಾಗಿದೆ.

ಸಂಗ್ರಹ, ಸಂಕಲನ, ಸಂಪಾದನೆ, ವಸಾಹತುಪೂರ್ಣ ಸಂದರ್ಭ ಎನ್ನುವ ಮೊದಲ ಗೋಷ್ಠಿಯಲ್ಲಿ ಸ್ಥಾವರ ಜಂಗಮದ ನಡುವಿನ ದ್ವಂದ್ವಗಳಾಗಿ ಸಂಪಾದನೆಗಳು ಎನ್ನುವ ವಿಚಾರ ಕುರಿತು ಅಮರೇಶ ನುಗಡೋಣಿ ಅವರು, ವಚನ ಸಾಹಿತ್ಯ ಸಂಗೋಪನ ನೆಲೆಗಳ ಕುರಿತು ಎಸ್.ಆರ್. ಚನ್ನವೀರಪ್ಪ ಅವರು, ನಿರಾಕರಿತ ರೂಪಗಳು ಮತ್ತು ಪ್ರಕ್ಷೇಪಗಳ ಕುರಿತು ವೀರೇಶ ಬಡಿಗೇರ ಅವರು ವಿಭಿನ್ನವಾಗಿ ಚರ್ಚಿಸಿದ್ದಾರೆ. ಅದೇ ರೀತಿ ಸಂಗ್ರಹ ಸಂಕಲನ ಸಂಪಾದನೆ, ವಸಾಹತೋತ್ತರ ಸಂದರ್ಭ ಕುರಿತು ಚರ್ಚಿಸಿದ್ದಾರೆ. ಮಾರ್ಗಸಾಹಿತ್ಯ ಸಂಪಾದನೆ ಮತ್ತು ಪರಿಷ್ಕರಣ ಕುರಿತು ಡಿ. ಡಾಮಿನಿಕ್ ದೇಶಿ ಸಾಹಿತ್ಯ ಸಂಪಾದನೆ ಮತ್ತು ಪ್ರಕ್ಷೇಪಗಳ ಸಮಸ್ಯೆ ಕುರಿತು ಕೆ. ರವೀಂದ್ರನಾಥ ಲಕ್ಷಣ ಗ್ರಂಥಗಳ ಸಂಪಾದನೆ ಕುರಿತು ಪಿ.ವಿ. ನಾರಾಯಣ ಅವರು ಹೊಸ ರೀತಿಯಲ್ಲಿ ಚರ್ಚಿಸಿದ್ದಾರೆ.

ಸಮ್ಮೇಳದ ಅಂಗವಾಗಿ ನಡೆಸುತ್ತ ಬಂದಿರುವ ಹಿರಿಯ ವಿದ್ವಾಂಸರ ಸಾಹಿತ್ಯ ಸ್ಮರಣೆಯಲ್ಲಿ ಎಸ್. ಅನಂತರಂಗಾಚಾರ್ಯ ಅವರನ್ನು ಕುರಿತು ಚರ್ಚಿಸಲಾಗಿದೆ. ಎಸ್.

ಅನಂತರಂಗಾಚಾರ್ಯ ಅವರ ಗ್ರಂಥಸಂಪಾದನೆ ಕುರಿತು ಎಫ್.ಟಿ. ಹಳ್ಳಿಕೇರಿ ಸಂಶೋಧನೆ ಕುರಿತು ಎಸ್.ಎಸ್. ಅಂಗಡಿ ಅವರು ಮಂಡಿಸಿದ ವಿಚಾರಗಳಿಂದ ಸರ್ವಾಧ್ಯಕ್ಷರ ಕುರಿತು ಸಾಹಿತ್ಯಾವಲೋಕನದಲ್ಲಿ ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆಗೆ ದೇಜೇಗೌ ಅವರ ಕೊಡುಗೆ ಕುರಿತು ಬಿ.ಕೆ. ಕೆಂಪೇಗೌಡ ಅವರು ಅರ್ಥಪೂರ್ಣ ಪ್ರಬಂಧ ಮಂಡಿಸಿ ಸಮ್ಮೇಳನದ ಅಂಗವಾಗಿ ನಡೆಸಿದ ಬಳ್ಳಾರಿ ಪರಿಸರದ ಹಸ್ತಪ್ರತಿ ಸಂಪತ್ತು ಕುರಿತು ಮುಖ್ಯ ಪ್ರಬಂಧವನ್ನು ಮೃತ್ಯುಂಜಯ್ಯ ರುಮಾಲೆಯವರು ಬಹಳ ಸವಿಸ್ತಾರವಾಗಿ ಬರೆದಿದ್ದಾರೆ. ಅದರ ವಿಷಯ ವಿಸ್ತರಣೆ, ರೂಪದಲ್ಲಿ ಎಂ. ಗೋವಿಂದ, ಪ್ರವೀಣ ಆರ್. ಅವರು ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ಮಂಜುನಾಥ ಬೇವಿನಕಟ್ಟಿ ಅವರು ಬಳ್ಳಾರಿ ಪರಿಸರದ ಹಸ್ತಪ್ರತಿಗಳ ವಿಶೇಷತೆ ಕುರಿತು ಚರ್ಚಿಸಿದ್ದಾರೆ.

ಒಟ್ಟಿನಲ್ಲಿ ಹಸ್ತಪ್ರತಿಗಳ ಸಂಗ್ರಹ ಸಂಕಲನ ಸಂಪಾದನೆ ಎನ್ನುವುದು ಕೇವಲ ಒಂದು ಪಠ್ಯ ಸಂಬಂಧಿ ಚರ್ಚೆ ಮಾತ್ರವಾಗಿರದೆ ಅದನ್ನೊಂದು ಬಹುಮುಖಿಯಾದ ಸಾಂಸ್ಕೃತಿಕ ಪ್ರಕ್ರಿಯೆಯನ್ನಾಗಿ ಒಟ್ಟು ಪ್ರಬಂಧಗಳ ಅನುಸಂಧಾನ ಮಾಡಿವೆ.

ಹಸ್ತಪ್ರತಿ ವ್ಯಾಸಂಗ-೧೬: ಎಫ್.ಟಿ. ಹಳ್ಳಿಕೇರಿಯವರು ಸಂಪಾದಿಸಿರುವ ಕೃತಿಯಲ್ಲಿ ನಮ್ಮ ಪ್ರಾಚೀನ ಜ್ಞಾನ ಪರಂಪರೆಯನ್ನು ಒಡಲಲ್ಲಿಟ್ಟುಕೊಂಡಿರುವ ಹಸ್ತಪ್ರತಿಗಳು ನಮ್ಮ ಸಂಪತ್ತು ಈ ಸಂಪತ್ತಿನ ಕುರಿತಂತೆ ಇಂದಿನ ಆಧುನಿಕ ಯುಗ, ಮೌನ ಮತ್ತು ಅವಜ್ಞತೆಯನ್ನು ಹೊಂದಿದೆ. ಪರಂಪರೆಯ ಪ್ರತೀಕವಾದ ಹಸ್ತಪ್ರತಿಗಳ ಕುರಿತು ಚಿಂತನ ಮಂಥನ ನಡೆಯಬೇಕು ಎಂಬ ಆಶಯದಿಂದ ಸಮ್ಮೇಳನದಲ್ಲಿ ಮಂಡಿಸಿದ ವಿದ್ವತ್‌ಪೂರ್ಣ ಪ್ರಬಂಧಗಳ ಸಂಪುಟ ಇದಾಗಿದೆ.

ಹಸ್ತಪ್ರತಿ ವ್ಯಾಸಂಗ ೧೭: ಎಫ್.ಟಿ. ಹಳ್ಳಿಕೇರಿಯವರು ಸಂಪಾದಿಸಿರುವ ಪ್ರಸ್ತುತ ಸಂಪುಟವು ಐದು ಭಾಗಗಳಲ್ಲಿ ಹದಿನಾರು ಸಂಪ್ರಬಂಧಗಳನ್ನು ಒಳಗೊಂಡಿದೆ. ಮೊದಲ ಭಾಗದಲ್ಲಿ ನುಡಿ ಹಾಗೂ ಸಮ್ಮೇಳನಾಧ್ಯಕ್ಷರ ಭಾಷಣಗಳಿವೆ. ಎರಡನೆಯ ಭಾಗವು ಕನ್ನಡ ಹಿರಿಯ ವಿದ್ವಾಂಸರಾಗಿದ್ದ ಎಂ.ಎಸ್. ಸುಂಕಾಪುರ ಅವರ ಸಾಹಿತ್ಯ, ಅವರ ಸಾಹಿತ್ಯ ಸಾಧನೆಯ ವಿವರಗಳಿವೆ. ಸುಂಕಾಪುರ ಅವರು ನಡೆದು ಬಂದ ಜೀವನ ಮಾರ್ಗ ಹಾಗೂ ಅವರ ಸಾಹಿತ್ಯವನ್ನು ಸಂಶೋಧನೆ, ಸೃಜನ ಸಾಹಿತ್ಯ, ಜನಪದ ಸಾಹಿತ್ಯ, ಗ್ರಂಥ ಸಂಪಾದನೆಗಳಲ್ಲಿನ ಕೃಷಿಯನ್ನು ಆರು ಸಂಪ್ರಬಂಧಗಳಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ. ನಾಗವರ್ಮನ ಛಂದೋಂಬುಧಿ ನಾಗಚಂದ್ರನ ಪಂಪರಾಮಾಯಣ, ಕೇಶಿರಾಜನ ಶಬ್ದಮಣಿದರ್ಪಣ ಹಾಗೂ ಬಸವಣ್ಣನವರ ವಚನಗಳ ಬಗ್ಗೆ ಈವರೆಗೆ ಬಂದ ಪರಿಷ್ಕರಣಗಳ ಅಧ್ಯಯನ ಮೂರನೇಯ ಭಾಗದಲ್ಲಿದೆ. ಗದಗ ಜಿಲ್ಲೆಯ ಹಸ್ತಪ್ರತಿಗಳ ವಿಷಯ ವೈವಿಧ್ಯತೆಯ ಕುರಿತಂತೆ

ಮೂರು ಸಂಪ್ರಬಂಧಗಳು ನಾಲ್ಕನೆಯ ಭಾಗದಲ್ಲಿವೆ. ಜಿಲ್ಲೆಯ ವಿವಿಧ ಮಾಠಮಾನ್ಯಗಳು, ವ್ಯಕ್ತಿಗತ ಒಡತನದಲ್ಲಿರುವ ಹಸ್ತಪ್ರತಿಗಳು, ಅವುಗಳಲ್ಲಿರುವ ಮಾಹಿತಿಗಳು, ಕುತೂಹಲಕಾರಿಯಾದ ಕೊನೆಯ ಭಾಗವು ಸಮ್ಮೇಳನಾಧ್ಯಕ್ಷರಾದ ವೈ.ಸಿ. ಭಾನುಮತಿ ಅವರು ಹಸ್ತಪ್ರತಿ ಗ್ರಂಥ ಸಂಪಾದನೆಯಲ್ಲಿ ಮಾಡಿದ ಸಾಧನೆಗಳ ವಿಶ್ಲೇಷಣೆಯನ್ನು ಒಳಗೊಂಡಿದೆ. ಅನುಬಂಧದಲ್ಲಿ ಎರಡು ದಿವಸದ ಸಮ್ಮೇಳನದ ಸಂಪೂರ್ಣ ವರದಿಯಾಗಿದೆ. ಹೀಗೆ ಈ ಸಂಪುಟವು ಬಹುಮುಖ್ಯವಾಗಿ ಹಸ್ತಪ್ರತಿ ಗ್ರಂಥ ಸಂಪಾದನ ಕ್ಷೇತ್ರದಲ್ಲಿ ದುಡಿದ ಎಂ.ಎಸ್. ಸುಂಕಾಪುರ ಅವರ ಸಾಹಿತ್ಯ ಸಾಧನೆ ಗದಗ ಜಿಲ್ಲೆಯ ಹಸ್ತಪ್ರತಿ ಸಂಪತ್ತು, ಸಮ್ಮೇಳನಾಧ್ಯಕ್ಷರ ಸಾಹಿತ್ಯ ಸಾಧನೆಗಳನ್ನು ತಿಳಿದುಕೊಳ್ಳಲು ಸಹಾಯಕಾರಿಯಾಗುತ್ತದೆ.

ಹಸ್ತಪ್ರತಿ ವ್ಯಾಸಂಗ–೧೮: ಕೆ. ರವೀಂದ್ರನಾಥರವರು ಸಂಪಾದಿಸಿರುವ ಕೃತಿಯು ಸಮ್ಮೇಳನದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಗ್ರಂಥ ಸಂಪಾದನೆ ವಿಭಾಗದಲ್ಲಿ ದುಡಿದು ದಂತಕಥೆಯಾಗಿ ಉಳಿದಿರುವ ಹಸ್ತಪ್ರತಿತಜ್ಞ ದಿವಂಗತ ಎಸ್. ಶಿವಣ್ಣ ಅವರ ಸಾಹಿತ್ಯ ಸಂಸ್ಮರನೆ ಕುರಿತು ಚರ್ಚಿಸಲಾಗಿದೆ. ನಂತರ ದೇಶಿ ಸಾಹಿತ್ಯ ಕೃತಿಗಳು, ಪರಿಷ್ಕರಣೆ ಅಧ್ಯಯನ ವಿಷಯಗಳ ಚರ್ಚೆ, ಬಳ್ಳಾರಿ ಜಿಲ್ಲೆಯ ಬಯಲಾಟ, ಹಸ್ತಪ್ರತಿಗಳ ಕುರಿತು ಚರ್ಚಿಸಿದ್ದು, ಸಭಾಧ್ಯಕ್ಷರಾದ ಎಂ.ಪಿ. ಮಂಜಪ್ಪಶೆಟ್ಟಿಯವರ ಹಸ್ತಪ್ರತಿ ಗ್ರಂಥ ಸಂಪಾದನೆಗೆ ನೀಡಿದ ಕೊಡುಗೆ ಯನ್ನು ಕುರಿತು ಚರ್ಚಿಸಲಾಗಿದೆ. ಈ ಕೃತಿಯಲ್ಲಿ ಹಸ್ತಪ್ರತಿ ಅಧ್ಯಯನದ ಆಯಾಮಗಳ ಕುರಿತು ತಿಳಿಯಲು ಸಹಾಯಕಾರಿಯಾಗಿದೆ.

೨.೪ ಹಸ್ತಪ್ರತಿ ಅಧ್ಯಯನ ನಿಯತಕಾಲಿಕೆ

ಕರ್ನಾಟಕ ಮತ್ತು ಕನ್ನಡ ಭಾಷೆಯ ಸಮಗ್ರ ಅಧ್ಯಯನ ಸಂಶೋಧನೆ ಮತ್ತು ಪ್ರಸಾರಗಳಿಗಾಗಿ ೧೯೯೧ ಅಕ್ಟೋಬರ್ ೨೩ ರಂದು ಅಸಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗವು ೧೯೯೬ರಲ್ಲಿ ಆರಂಭವಾಗಿ ಇಲ್ಲಿಯವರೆಗೂ ಯಶಸ್ವಿಕಾರ್ಯ ನಿರ್ವಹಿಸುತ್ತ ಬಂದಿದೆ.

ಹಸ್ತಪ್ರತಿಗಳ ಸರ್ವೇಕ್ಷಣೆ ಸಂಗ್ರಹ, ಸಂಪಾದನೆ ಮತ್ತು ಅಧ್ಯಯನಗಳನ್ನು ಪ್ರಧಾನ ಕಾರ್ಯಕ್ಷೇತ್ರವಾಗಿ ಮಾಡಿಕೊಂಡು ಈ ವಿಭಾಗವು ಅಷ್ಟೇ ಪ್ರಧಾನವಾಗಿ ಹಸ್ತಪ್ರತಿ ಕ್ಷೇತ್ರದಲ್ಲಿ ಅನುಭವವಿರುವ ವಿದ್ವಾಂಸರನ್ನು ಬಳಸಿಕೊಂಡಿತು. ನಮ್ಮ ಪರಂಪರೆ ಮತ್ತು ಸಂಸ್ಕೃತಿಯ ಅಪೂರ್ವ ಆಕರ ಸಾಮಗ್ರಿಯಾಗಿರುವ ಹಸ್ತಪ್ರತಿಗಳ ಕ್ರಮಬದ್ದ ಸಂಗ್ರಹ ವೈಜ್ಞಾನಿಕ ಸೂಚಿ ರಚನೆ ಮತ್ತು ಸಂಪಾದನೆ, ವಿಭಾಗದ ವಿದ್ವಾಂಸರಿಂದ ಮುಂದುವರೆದಿದೆ. ಇದಕ್ಕೆ ಪೂರಕವಾಗಿ ಈ ವಿಭಾಗದ ಪ್ರಧಾನ ಅಂಗವೆಂಬಂತೆ ಹಸ್ತಪ್ರತಿ ಭಂಡಾರವೂ ಇದೆ.

ಹಸ್ತಪ್ರತಿಗಳ ಅಧ್ಯಯನದ ವ್ಯಾಪ್ತಿಯನ್ನು ಇನ್ನೂ ವಿಸ್ತರಿಸುವ ದೃಷ್ಟಿಯಿಂದ ವಿಭಾಗವು ವೀರೇಶ ಬಡಿಗೇರ ಇವರ ಸಂಪಾದಕತ್ವದಲ್ಲಿ "ಹಸ್ತಪ್ರತಿ ಅಧ್ಯಯನ"ವೆಂಬ ಅರ್ಧವಾರ್ಷಿಕ ಪತ್ರಿಕೆಯನ್ನು ಹೊರತಂದಿದೆ. ಸಂಪಾದಕರು ಹೇಳುವಂತೆ ಓದಿನ ಕ್ರಮಗಳನ್ನು ಪುನರ್ ವಿಮರ್ಶೆಗೆ ಒಳಪಡಿಸುವ ಮೂಲಕ ಹೊಸ ರೀತಿಯ ಪ್ರೇರಣೆಗಳನ್ನು ಪಡೆದುಕೊಳ್ಳುತ್ತಾ ನಮ್ಮ ಕಾಲಕ್ಕೆ ಬೇಕಾದ ಅರ್ಥಪೂರ್ಣ ಹೊಸ ಸಂವಾದ ಮತ್ತು ಸಂಪಾದನ ಮಾದರಿಗಳನ್ನೇ ಹುಡುಕಿಕೊಳ್ಳಬೇಕಾಗಿದೆ. ಸರಳರೇಖಾತ್ಮಕವಾದ ಮತ್ತು ಏಕಾಕೃತಿ ಗುಣಹೊಂದಿದ ಹಸ್ತಪ್ರತಿ ಮತ್ತು ಗ್ರಂಥ ಸಂಪಾದನ ಮಾದರಿಗಳನ್ನು ಪುನರ್ ವಿಮರ್ಶಿಸುತ್ತಾ ಸಂಸ್ಕೃತಿ ನಿಷ್ಠ ಅಧ್ಯನದ ಹೊಸ ಸಾಧ್ಯತೆಗಳನ್ನು ಕಟ್ಟಿಕೊಳ್ಳುವುದು ಹಸ್ತಪ್ರತಿ ಅಧ್ಯಯನ ಪತ್ರಿಕೆಯ ಉದ್ದೇಶವಾಗಿದೆ" ಎಂದಿದ್ದಾರೆ. ಈ ರೀತಿಯ ಆಲೋಚನೆಯನಿಟ್ಟಿಕೊಂಡು ಹೊರಬಂದ ಪತ್ರಿಕೆ ಆ ನಿಟ್ಟಿನಲ್ಲಿ ಈವರೆಗೆ ಯಶಸ್ವಿಯಾಗಿ ಸಾಗದೆ ಪ್ರಯೋಗಾತ್ಮಕವಾಗಿ ಹೊರಬಂದ ಪತ್ರಿಕೆ ಈವರೆಗೆ ತುಂಬಾ ರಚನಾತ್ಮಕವಾಗಿ ಹಾಗೂ ಅರ್ಥಪೂರ್ಣ ಲೇಖನಗಳಿಂದ ಯಶಸ್ವಿಯಾಗಿ ಹೊರಬಂದಿದ್ದು, ಓದುಗರಿಂದ ವಿದ್ವಾಂಸರಿಂದ ಅಪಾರ ಮೆಚ್ಚುಗೆಗಳಿಸಿರುವುದು ಪತ್ರಿಕೆಯ ಬೆಳವಣಿಗೆಗೆ ಪ್ರೇರಕ ಶಕ್ತಿಯಾಗಿದೆ.

ಪತ್ರಿಕೆಯ ಒಡಲು ಹಲವು ವೈಶಿಷ್ಠತೆಯನ್ನು ಒಳಗೊಂಡಿದೆ. ಹಂಬಲ ಎನ್ನುವ ಸಂಪಾದಕರ ಆಸಕ್ತಿಯ ಮತ್ತು ವಿದ್ವತ್ ಪೂರ್ಣ ಲೇಖನದಿಂದ ಆರಂಭವಾಗಿ ಪರಿವಿಡಿಯಲ್ಲಿ 'ಅಲೇಖ' 'ವಿಲೋಕ' 'ವರಸೆ' 'ಅವಲೋಕ' 'ಸಂವಾದ' 'ಹಳೆಯ ಹೊನ್ನು' ಮತ್ತು 'ಸಂಚಿ' ಎನ್ನುವ ವಿಭಾಗಳಿಂದ ಕೂಡಿದೆ. ಈ ಶೀರ್ಷಿಕೆಯ ಭಾಗಗಳು ಓದುಗರಿಗೆ ಆಸಕ್ತಿ ಮೂಡಿಸುತ್ತವೆ.

ಹಂಬಲ: ಇದು ಹೊಸ ಓದಿನ ಹಂಬಲ ಕೃತಿಯೊಂದರ ಹುಟ್ಟು ಮತ್ತು ಅದರ ಆಶಯಗಳು, ವಿಭಿನ್ನ ನೆಲೆಯ ಅಧ್ಯಯನದಿಂದ ಓದುಗನಿಗೆ ಪ್ರೇರಣೆಯಾಗಿ ನಿಲ್ಲುವ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವ ಹಂಬಲವಿದೆ.

ಅಲೇಖ: ಗ್ರಂಥ ಸಂಪಾದನೆ ಮತ್ತು ಹಸ್ತಪ್ರತಿಶಾಸ್ತ್ರದ ಪ್ರಾಯೋಗಿಕ ಚರಿತ್ರೆಯ ಭಾಗ ಕನ್ನಡ ಲಕ್ಷಣ ಗ್ರಂಥಗಳು, ಸಂಕಲನ ಗ್ರಂಥಗಳು, ಪ್ರಾಚೀನ ಹಸ್ತಪ್ರತಿಗಳು ಮತ್ತು ಅವುಗಳ ಲಿಪಿಕಾರ ಮಾಹಿತಿಯನ್ನು ಒಳಗೊಂಡಂತೆ ಕೆಲ ಮತ್ತು ಕೃತಿ ಪಾಠಗಳ ಪರಿಷ್ಕರಣೆ ಸೇರಿದ ವಿದ್ವತ್‌ಪೂರ್ಣ ಲೇಖನಗಳು ಈ ಭಾಗದಲ್ಲಿರುತ್ತವೆ.

ಕನ್ನಡವಲ್ಲದೆ ಇತರೆ ಭಾಷೆಗಳಲ್ಲಿನ ತಾಳೆಗರಿಯ ಹಸ್ತಪ್ರತಿಗಳ ಕುರಿತಾದ ಅನುವಾದಗಳು ಪ್ರಟಕಗೊಂಡಿವೆ. ಈತನಕ ರನ್ನ ಕವಿಯ ಕೃತಿಗಳು, ಕೃತಿಪಾಠಗಳು, ಕುಮಾರವ್ಯಾಸ ಭಾರತದ ಸವಿವಂಶೀಪರಿಷ್ಕರಣ ಹಸ್ತಪ್ರತಿಗಳು, ಆಕರಗಳು ಮುಂತಾದವನ್ನೊಳಗೊಂಡಂತೆ ಸಂಸ್ಕೃತ,

ಓರಿಸ್ಸಾ, ಮಲೆಯಾಳಂ, ತಮಿಳು, ತೆಲುಗು, ಮರಾಠಿ ಭಾಷೆಯಲ್ಲಿನ ಹಸ್ತಪ್ರತಿಗಳು ಮತ್ತು ಲಿಪಿಕಾರರ ಮಾಹಿತಿಗಳು ಪ್ರಕಟಗೊಂಡಿವೆ.

ವಿಲೋಕ: ಸ್ವತಂತ್ರ ಮತ್ತು ಚಿಂತನಾರ್ಹ ಲೇಖನಗಳಿಂದ ಕೂಡಿದ ಭಾಗ. ಪ್ರಾಚೀನ ಕೃತಿಗಳನ್ನು ವಿಭಿನ್ನ ದೃಷ್ಟಿಕೋನಗಳಿಂದ ಅಧ್ಯಯನ ಮಾಡುವ ಕ್ರಮವಿರುತ್ತದೆ. ಪ್ರಾಚೀನ ಕೃತಿಗಳ ಸಾಂಸ್ಕೃತಿಕ ಮುಖಾಮುಖಿ ಮತ್ತು ಅನುಸಂಧಾನ ಹೊಸ ಸಾಧ್ಯತೆಗಳು, ಈ ಭಾಗದ ಲೇಖನಗಳಿರುತ್ತದೆ. ಮುಖ್ಯವಾಗಿ ಹಸ್ತಪ್ರತಿಗಳ ಸಂರಕ್ಷಣೆಯ ಮಾಹಿತಿಯು ಈಗಾಗಲೇ ಪ್ರಕಟಗೊಂಡಿದ್ದು, ಓದುಗರ ಮೆಚ್ಚುಗೆಯನ್ನು ಪಡೆದಿದೆ. ಈವರೆಗೆ ಪ್ರಾಚೀನ ಕೃತಿಗಳ ಸಂಸ್ಕೃತಿ ಮುಖಾಮುಖಿ ಹೇಗೆ ಮತ್ತು ಏಕೆ, ಶೂನ್ಯ ಸಂಪಾದನೆಗಳು ಅನುಸಂಧಾನದ ಹೊಸ ಸಾದ್ಯತೆಗಳು, ಗ್ರಂಥ ಸಂಪಾದನೆ ಅನುಮಾನಗಳು ಮತ್ತು ಅನುಸಂಧಾನದ ಭಿನ್ನ ದಾರಿಗಳನ್ನು ಕನ್ನಡ ಪಠ್ಯಗಳ ಸಂದರ್ಭನಿಷ್ಠ ಸಂಪಾದನೆ ಮತ್ತು ವ್ಯಾಖ್ಯಾನದ ತಾತ್ವಿಕ ನೆಲೆಗಳು ಹೀಗೆ. ವಿವಿಧ ಲೇಖನಗಳೊಂದಿಗೆ ತಾಳೆಗರಿ ಹಸ್ತಪ್ರತಿಗಳ ಸಂರಕ್ಷಣೆ ಹಸ್ತಪ್ರತಿಗಳ ಹದಗೆಡುವಿಕೆಯ ಕಾರಣಗಳು ಮತ್ತು ಅದರ ನಿಯಂತ್ರಣ. ಕಾಗದ ಹಸ್ತಪ್ರತಿಯ ತಯಾರಿಕೆ ಮತ್ತು ತಾಂತ್ರಿಕೆಯನ್ನು ಕುರಿತು ಬೇರೆ ಭಾಷೆಯ ಲೇಖನಗಳೂ ಅನುವಾದಗೊಂಡಿದೆ.

ವರಸೆ: ಒಂದು ನಿರ್ದಿಷ್ಟ ಪದ, ಸಾಲು, ವಚನ, ಪಾಠ ಪರಿಷ್ಕರಣೆಗೆ ಸಂಬಂಧಿಸಿದಂತೆ ಮೂಲ ಆಶಯಗಳ ಹಿನ್ನೆಲೆಯಲ್ಲಿ ವೈಚಾರಿಕವಾಗಿ ಅಧ್ಯಯನ ಮಾಡುವ ಪದ್ಧತಿ ಈ ವಿಭಾಗದಲ್ಲಿರುತ್ತದೆ. ಪಾಠ ಪರಿಷ್ಕರಣದ ಸಾಮಾನ್ಯ ಅಸಾಮಾನ್ಯ ತೊಡಕುಗಳು ಅಲ್ಲಮನ ಎರಡು ವಚನಗಳ ಪಾಠ ವಿಚಾರ ಹೀಗೆ ವಿವಿಧ ಲೇಖನಗಳು ಪ್ರಕಟಗೊಂಡಿವೆ.

ಅವಲೋಕನ: ಅನುವಾದ ಮತ್ತು ವಿಮರ್ಶೆಗಳನ್ನೊಳಗೊಂಡ ಭಾಗ ಇಂಗ್ಲಿಷ್ ಭಾಷೆಯ ಲೇಖನ ಸೇರಿದಂತೆ ಇತರೆ ಭಾಷೆಯಲ್ಲಿ ಪ್ರಕಟಗೊಂಡಿರುವ ಕೃತಿಗಳ ಚಾರಿತ್ರಿಕ ಭಾಷಿಕ ಮತ್ತು ಭೌಗೋಳಿಕ ಮಾಹಿತಿಯ ಅನುವಾದ ಲೇಖನಗಳು ಪ್ರಕಟಗೊಂಡಿವೆ. ರಾಮಾಭ್ಯುದಯ ಕಾವ್ಯದ ಚಾರಿತ್ರಿಕ ಭಾಷಿಕ ಮತ್ತು ಭೌಗೋಳಿಕ ಮಹತ್ವ ಡಿ.ಎಲ್.ನರಸಿಂಹಚಾರ್ ಕನ್ನಡ ಗ್ರಂಥಸಂಪಾದನೆ 'ಪಾಮ್‌ಲೀಫ್ ಆ್ಯಂಡ್ ಅದರ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ಇಂಡಿಯನ್ ಲಾಂಗ್ವೇಜಸ್' ಎನ್ನುವ ಲೇಖನಗಳು ಈವರೆಗೆ ಪ್ರಕಟಗೊಂಡಿವೆ.

ಹಳೆಯ ಹೊನ್ನು: ಸಂಪಾದಿತಗೊಂಡಿರುವ ಕೃತಿಗಳ ಉಪೋದ್ಘಾತದ ಭಾಗಗಳನ್ನು ಮರು ಚಿಂತನೆಗೆ ಒಳಪಡಿಸುವ ಲೇಖನಗಳ ಭಾಗ ಪ್ರಾಚೀನ ಕೃತಿಯೊಂದರ ಸಂಪಾದನೆಗೆ ವೈಜ್ಞಾನಿಕ ಶಿಸ್ತನ್ನು ಅಳವಡಿಸಿ ಅದಕ್ಕೊಂದು ಹೊಸ ಆಯಾಮ ತಂಡುಕೊಡುವ ಪ್ರಯತ್ನವಿದೆ. ಪ್ರಾಚೀನ ಹಸ್ತಪ್ರತಿಗಳ ಆಶಯದಂತೆ ಲೋಪಗಳು ಮತ್ತು ಜಟಿಲತೆಗಳನ್ನು ಬಗೆಹರಿಸಿ ಸಂಪಾದಿಸಿದ

ಆವೃತ್ತಿಯನ್ನು ಕುರಿತು ಲೇಖನವಾಗಿರುತ್ತವೆ. ಆದಿಪುರಾಣದ ಪ್ರಸ್ತಾವನೆ ಉದಯಾದಿತ್ಯಾಲಂಕಾರದ ಪ್ರಸ್ತಾವನೆ, ಛಂದೋಬುದ್ಧಿ ಹೀಗೆ ಇನ್ನಿತರ ಲೇಖನಗಳು ಈಗಾಗಲೇ ಪ್ರಕಟಗೊಂಡಿದ್ದು ಚರ್ಚಿಸಲಾಗಿದೆ.

ಸಂಚಿ: ಹಸ್ತಪ್ರತಿಯೊಂದರ ಚಾರಿತ್ರಿಕ ಅಧ್ಯಯನದ ವಿವರಣಾತ್ಮಕ ಸೂಚಿಯ ಭಾಗ. ಒಂದು ಕೃತಿಯೊಂದರ ಬಗ್ಗೆ ಈವರಗೆ ನಡೆಯುವ ಅಧ್ಯಯನದ ಅಥವಾ ಅನುವಾದಗೊಂಡಿರುವ ಲೇಖನಗಳ ಸೂಚಿ ಇದಾಗಿದ್ದು, ನಿರ್ದಿಷ್ಟ ಅಧ್ಯಯನದಲ್ಲಿ ತೊಡಗಿರುವರೆಗೆ ಉಪಯುಕ್ತ ಸೂಚಿ ಇದಾಗಿದೆ. ಬಸವಣ್ಣನವರ ವಚನಗಳ ಇಂಗ್ಲಿಷ್ ಅನುವಾದಗಳ ಅಧ್ಯಯನ ೧ನೇ ನಾಗವರ್ಮನ ಕರ್ಣಾಟಕ ಕಾದಂಬರಿಯ ಅಧ್ಯಯನಗಳನ್ನೊಳಗೊಂಡಂತೆ ವಿವಿಧ ಕೃತಿಗಳ ಬಗೆ ನಡೆದಿರುವ ಅಧ್ಯಯನ ಸೂಚಿ ಪ್ರಕಟಗೊಂಡಿವೆ.

ಸಂವಾದ: ಗ್ರಂಥಸಂಪಾದನೆ ಮತ್ತು ಹಸ್ತಪ್ರತಿಗಳ ಕ್ಷೇತ್ರದಲ್ಲಿ ಅರ್ಥಪೂರ್ಣ ಸೇವೆಗೈದ ಪರಿಣಿತರಾದ ಹಿರಿಯ ವಿದ್ವಾಂಸರೊಂದಿಗೆ ಚರ್ಚೆ ಅವರ ಅನುಭವ ಹಾಗೂ ಚಿಂತನೆಗಳನ್ನು ವ್ಯಕ್ತಗೊಳಿಸುವ ಭಾಗ ಪಠ್ಯವೊಂದರ ರಚನೆ ಪುನಾರಚನೆ ಹಿಂದಿನ ಸಹವರ್ತಿ ಚಿಂತನೆಗಳನ್ನು ಕೆ.ವಿ.ನಾರಾಯಣ ಮತ್ತು ಕನ್ನಡ ಹಸ್ತಪ್ರತಿಗಳು ಫಲಿತಗಳ ಕುರಿತಂತೆ ಬಿ.ಕೆ.ಹಿರೇಮಠ ಅವರೊಂದಿಗೆ ಸಂವಾದ, ಎಂ.ಎಂ.ಕಲಬುರ್ಗಿಯವರ ಸಂವಾದ ಮಹತ್ವಪೂರ್ಣ ಅಧ್ಯಯನವಾಗಿದೆ. ಜೊತೆಗೆ ಅಪ್ರಕಟಿತ ಕೃತಿಗಳು ಪ್ರಕಟಗೊಂಡ ಭಾಗಗಳೂ ಈ ಭಾಗದಲ್ಲಿ ಚರ್ಚೆಯಾಗಿದೆ.

ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯಂಥ ಪಾರಂಪರಿಕ ಕ್ಷೇತ್ರಗಳಲ್ಲಿ ಅಧ್ಯಯನಾಸಕ್ತಿಗಳು ಕಡಿಮೆಯಾಗುತ್ತಿರುವ ಈ ಹೊತ್ತಿನಲ್ಲಿ ಹಸ್ತಪ್ರತಿ ಅಧ್ಯಯನದಂತ ನಿಯತಕಾಲಿಕೆಗಳು ಅಧ್ಯಯನದ ಹೊಸ ಸಾಧ್ಯತೆಯನ್ನು ತೆರೆದಿಡುವಲ್ಲಿ ಉತ್ತಮ ಪುರಾಣವಾಗಿ ಕಂಡುಬಂದಿರುವುದಲ್ಲದೆ ಓದುಗರಿಂದ ಬರುತ್ತಿರುವ ಪ್ರತಿಕ್ರಿಯೆಗಳು ಇದರ ಯಶಸ್ಸು ಮತ್ತು ವ್ಯಾಪ್ತಿಯನ್ನು ಸೂಚಿಸುತ್ತವೆ.

ಹಸ್ತಪ್ರತಿ ಮತ್ತು ಗ್ರಂಥಸಂಪಾದನಾ ಶಿಸ್ತುಗಳನ್ನು ಹೊಸ ರೀತಿಯ ಆಲೋಚನಾ ಕ್ರಮಗಳನ್ನು ಚಿಂತನೆಗೊಳಪಡಿಸುವ ಮತ್ತು ಅದರ ವ್ಯಾಪ್ತಿಯನ್ನು ವಿಸ್ತರಿಸುವ ಪ್ರಯತ್ನ ಇದಾಗಿದೆ.

ಹಸ್ತಪ್ರತಿಶಾಸ್ತ್ರ ವಿಭಾಗ ತನ್ನ ಆರಂಭದ ದಿನಗಳಿಂದಲೂ ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ, ಪರಿಷ್ಕರಣೆ, ಸೂಚಿಕರಣ ಹಾಗೂ ಅಧ್ಯಯನದ ಜೊತೆಗೆ ಹಸ್ತಪ್ರತಿಗಳ ತರಬೇತಿ ಶಿಬಿರ, ವಿಚಾರ ಸಂಕಿರಣ, ಹಳಗನ್ನಡ ಬೋಧನಾ ತರಬೇತಿ ಶಿಖರದೊಂದಿಗೆ ಸಮ್ಮೇಳನಗಳನ್ನು ಆಯೋಜಿಸುತ್ತ ಬಂದಿದೆ. ಅವುಗಳ ಉದ್ದೇಶ ಈ ರೀತಿಯಾಗಿದೆ.

ಹಸ್ತಪ್ರತಿಗಳಂತಹ ಸಾಂಪ್ರದಾಯಿಕ ಜ್ಞಾನ ಸಾಮಗ್ರಿಗಳನ್ನು ಕೇವಲ ಸಂಗ್ರಹ ಸಂಪಾದನೆಗಳಂತಹ ಸಾಂಪ್ರದಾಯಿಕ ಶಾಸ್ತ್ರೀಯ ಅಧ್ಯಯನಕ್ಕೆ ಮಾತ್ರ ಮೀಸಲಾಗಿರಸದೆ ಹೊಸ ಜ್ಞಾನ ಶಿಸ್ತುಗಳೊಂದಿಗೆ ಅಭ್ಯಸಿಸುವುದು ಹಾಗೂ ಅವುಗಳ ಮಿತಿ ಹಾಗೂ ಶಕ್ತಿ ಕುರಿತು ಅರಿಯುವುದು ನಮ್ಮ ವಿಭಾಗದ ಕಾಳಜಿಯಾಗಿದೆ. ಸಮಾಜಶಾಸ್ತ್ರ ಸಮುದಾಯ ಅಧ್ಯಯನ, ಮನಶಾಸ್ತ್ರ, ತಂತ್ರಜ್ಞಾನ, ಸಾಹಿತ್ಯ, ಮೌಖಿಕ ಸಂಪ್ರಾಯ, ಗಮಕ, ಕೀರ್ತನ, ಚಿತ್ರ, ಶಿಲ್ಪ, ಸಂಗೀತ, ಲಿಪಿಶಾಸ್ತ್ರ, ಭಾಷಾ ಶಾಸ್ತ್ರ ಹೀಗೆ ಹಲವು ಮಜಲುಗಳನ್ನು ಒಳಗೊಂಡಿದ್ದು, ೧೯೯೬ರಿಂದ ವಿಭಾಗವು ದಿಟ್ಟ ಹೆಜ್ಜೆಯನಿಡುತ್ತಾ ಬರುತ್ತಿದೆ. ಹಸ್ತಪ್ರತಿಗಳನ್ನು ಒಂದು ವಿಶಾಲ ಸಾಂಸ್ಕೃತಿಕ ತಳಹದಿಯ ಮೇಲೆ ಮುಕ್ತವಾಗಿ ಚರ್ಚಿಸುವ ಪ್ರಯತ್ನವಾಗಿದ್ದು, ಕನ್ನಡ ಭಾಷೆ ಹಾಗೂ ಸಂಸ್ಕೃತಿಗಳು ಚಲನಶೀಲವೂ ಹಾಗೂ ಸುಂದರ ಚೈತನ್ಯವುಳ್ಳವೂ ಆಗಿರುವ ಸಾವಿರಾರು ವರ್ಷಗಳ ಇತಿಹಾಸವಿರುವ ಪರಿಕಲ್ಪನೆಗಳು. ಇಂಥ ಸಾಹಿತ್ಯ ಹಾಗೂ ಸಂಸ್ಕೃತಿ ನಿರ್ಮಾಣ ಹಾಗೂ ಪ್ರಸಾರದಲ್ಲಿ ತೊಡಗಿದ್ದ ನಮ್ಮ ಕವಿ ಲಿಪಿಕಾರರು ಪೋಷಕರು ಗುರುಗಳು, ಕೀರ್ತನಕಾರರು, ಟೀಕಾಕಾರರು ಕೂಡ ಭಾಷೆ ಹಾಗೂ ಸಮಸ್ಕೃತಿಗಳನ್ನು ಪುನರುಜ್ಜೀವನಗೊಳಿಸುವ ಸಂಕಲ್ಪ, ಶ್ರದ್ಧೆಯಿಂದ ದುಡಿದವರು. ಅದರಲ್ಲೂ ವಚನಕಾರರು, ದಾಸರು ಹಾಗೂ ತತ್ವಪದಕಾರರಂತಹ ಪ್ರಧಾನವಾದ ಭಕ್ತ ಕವಿಗಳಲ್ಲ. ಇದೂ ಇನ್ನೂ ಉಜ್ವಲವಾಗಿ ಕಾಣು ವಂಥದ್ದು. ಹೊಸ ಸಾಹಿತ್ಯ ಭಾಷೆಯನ್ನು ಹಾಗೂ ಹೊಸ ಸಾಹಿತ್ಯಿಕ ರೂಪಗಣನು ಇವರು ಶೋಧಿಸಿದರು. ಹಸ್ತಪ್ರತಿಗಳ ಒಡಲೊಳಗೆ ಅಂದರೆ ಕನ್ನಡ ಸಂಪಾದನೆಯ ಒಳಗೆ ಕೇಳಿಬರುವ ಹಲವು ಕನ್ನಡಗಳ ಸುಳಿವ ಶಾಸನ ಪೊಸತಾನಿ ವಿರಚಿಸಿದೆ. ಸಕಲ ಜನ ಹಿತಾರ್ಥವಾಗಲಿ ಇತ್ಯಾದಿ ಧ್ವನಿಗಳು ಹಸ್ತಪ್ರತಿಗಳ ನಿರ್ದಿಷ್ಟ ಲಿಖಿತ ರೂಪಕ್ಕಿಂತ ಅದರ ಸಂವಹನ ಹಾಗೂ ಪ್ರಯೋಜನದ ಬಹುಮುಖಿ ಸಾಧ್ಯತೆಗಳನ್ನು ಹೇಳುತ್ತವೆ. ಕನ್ನಡ ಲಿಖಿತ ರೂಪಕ್ಕಿಂತ ಮುನ್ನವೇ ಜನರ ನಾಲಿಗೆಯ ಮೇಲೆ ಹುಟ್ಟಿ ಬೆಳೆದನ್ನು ಇಲ್ಲಿ ಕಾಣುತ್ತದೆ. ಆದರೆ ನಮ್ಮ ಅಧ್ಯಯನ ಕ್ರಮಗಳು ಇಂಥ ಸೃಜನಶೀಲವಾದ ವಿಸ್ತೃತ ಸಂವೇದನಗಳನ್ನು ಸವಾರಿ ಏಕಾಕೃತಿಗೊಳಿಸುವ ಶುದ್ಧಗೊಳಿಸುವ ಕೆಲಸದಲ್ಲಿ ನಿರಂತರವಾಗುತ್ತ ಬಂದವು. ಕವಿಕೇಂದ್ರಿತ ಕೃತಿಕೇಂದ್ರಿ ಪಠ್ಯಕೇಂದ್ರಿತ, ಜಾತಿಕೇಂದ್ರಿತವೆಂದು ನಿರ್ದಿಷ್ಟಗೊಳಿಸಿ ಜ್ಞಾನ ಹಾಗೂ ಅದರ ಪ್ರತಿನಿಧೀಕರಣಗಳ ಮೇಲೆ ಇಂಥ ಶೈಕ್ಷಣಿಕ ಚಿಂತನೆಗಳು ಸಾಧಿಸಿರುವ ಪ್ರಾಬಲ್ಯವನ್ನು ಪ್ರಶ್ನೆ ಮಾಡುವುದರ ಸಲುವಾಗಿ ಇಂತಹ ವಿಚಾರ ಸಂಕಿರಣ ಹಸ್ತಪ್ರತಿ ತರಬೇತಿ ಶಿಬಿರಗಳ ಮತ್ತು ಹಸ್ತಪ್ರತಿ ಸಮ್ಮೇಳನ ಆಶಯವಾಗಿದೆ. ಇಲ್ಲಿ ಚರ್ಚಿತವಾದಂತಹ ವಿಷಯಗಳ ಹಸ್ತಪ್ರತಿ ಅಧ್ಯಯನ ಸಂಚಿಕೆ, ಹಸ್ತಪ್ರತಿ ವ್ಯಾಸಂಗ ಎಂಬ ಸಂಪುಟಗಳು ತಂದಿದ್ದು, ಹಸ್ತಪ್ರತಿ ಅಧ್ಯಯನ ಕ್ಷೇತ್ರವನ್ನು ವಿಸ್ತಾರಿಸುವ ಪ್ರಯತ್ನ ಈ ಕೃತಿಗಳ ಮೂಲಕವಾಗಿದೆ.

೨.೫ ಲೇಖನಗಳು

ಈಚೆಗೆ ಹಸ್ತಪ್ರತಿಶಾಸ್ತ್ರವು ಹಸ್ತಪ್ರತಿ ಅಧ್ಯಯನ ಎಂಬ ಇನ್ನೊಂದು ಶಿಸ್ತನ್ನು ಹುಟ್ಟುಹಾಕಿದೆ. ಈ ನಿಟ್ಟಿನಲ್ಲಿ ಈಗಾಗಲೇ ಹಲವು ಲೇಖನಗಳು ಪ್ರಕಟವಾಗಿವೆ. ನೇರವಾಗಿ ಹಸ್ತಪ್ರತಿಗಳನ್ನು ಅಧ್ಯಯನ ವಸ್ತುಗಳನ್ನಾಗಿಸಿ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಮಾಜ, ಕಲೆ ಇತಿಹಾಸ, ಧರ್ಮಶಾಸ್ತ್ರ, ವೈದ್ಯ, ವಿಜ್ಞಾನ, ತಂತ್ರಜ್ಞಾನ ಹೀಗೆ ಹಲವು ದೃಷ್ಟಿಕೋನಗಳಿಂದ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನಗಳು ನಡೆಯುತ್ತವೆ. ಇವುಗಳ ಅಧ್ಯಯನವನ್ನು ಹಸ್ತಪ್ರತಿಗಳ ಮೂಲಕವೇ ನಡೆಸುವ ಬಹುಶಿಸ್ತೀಯ ಅಧ್ಯಯನ ಇದಾಗಿದೆ.

ಹಸ್ತಪ್ರತಿ ಅಧ್ಯಯನಕ್ಕೆ ಸಂಬಂಧಿಸಿದ ಲೇಖನಗಳೆಲ್ಲ ಬಹುಪಾಲು ಹಸ್ತಪ್ರತಿಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಿಸಿದವುಗಳೇ ಆಗಿವೆ. ಉದಾಹರಣೆಗೆ ಆಕರ ಸಾಮಗ್ರಿಯಾಗಿ ಹಸ್ತಪ್ರತಿಗಳು, ಚಿತ್ರಪ್ರತಿಗಳು, ಕೂಟ ಹಸ್ತಪ್ರತಿ, ವೈದಿಕ ಹಸ್ತಪ್ರತಿಗಳು ಮತ್ತು ಲಿಪಿಕಾರರು ಜೈನಹಸ್ತಪ್ರತಿಗಳ ಚಿತ್ರಕಲೆ ಇತ್ಯಾದಿ ಇದೇ ಮಾದರಿಯ ಬಿಡಿ ಲೇಖನಗಳು ಅಧಿಕವಾಗಿ ಕಾಣಿಸಿಕೊಂಡಿದೆ.

ಕಲಬುರ್ಗಿಯವರ ಹಸ್ತಪ್ರತಿಶಾಸ್ತ್ರ ಅದರ ವಿವಿಧ ಮುಖಗಳು ಎಂಬುದು ಸಂಕಲನದ ಮಹತ್ವದ ಲೇಖನಗಳಲ್ಲಿ ಒಂದು. ಹಸ್ತಪ್ರತಿಶಾಸ್ತ್ರದ ಬಿಸು ಚಿತ್ತರಗಳನ್ನು ವಿಶ್ಲೇಣಾತ್ಮಕವಾಗಿ ನಿರೂಪಿಸಿ ಈ ಶಾಸ್ತ್ರವನ್ನು ೧ ಸಂಯೋಜನಮುಖಿ, ೨. ಪ್ರಯೋಜನಮುಖಿ ಎಂಬುದಾಗಿ ವಿಂಗಡಿಸಿಕೊಂಡಿದ್ದಾರೆ. ಮೊದಲನೆಯದರಲ್ಲಿ ಹಸ್ತಪ್ರತಿಯ ಉಗಮ, ವಿಕಾಸ, ಹಸ್ತಪ್ರತಿಯ ಲೇಖನ ಸಾಮಗ್ರಿ, ಲಿಪಿಕಾರರ ಹಸ್ತಪ್ರತಿ ಭಾಷೆ, ಲಿಪಿ, ಚಿತ್ರಣ ಹಸ್ತಪ್ರತಿಯ ಅಕ್ಷರ ಸ್ಖಾಲಿತ್ಯದ ಕಾರಣ ಸ್ವರೂಪ ಹಸ್ತಪ್ರತಿಯ ಪ್ರಕಾರ, ಸ್ವರೂಪ ಮುಂತಾದವುಗಳು ಮತ್ತು ಎರಡನೆಯದರಲ್ಲಿ ಹಸ್ತಪ್ರತಿ ಸರ್ವೇಕ್ಷಣೆ, ಹಸ್ತಪ್ರತಿ ಸಂರಕ್ಷಣೆ, ಹಸ್ತಪ್ರತಿ ಸದುಪಯೋಗ, ಸೂಚಿಕರಣ ಮುಂತಾದ ಈ ಶಾಸ್ತ್ರದ ಅಂಗಾಂಗಳನ್ನು ಅಭ್ಯಸಿಸುವ ಅರಿಯುವ ಮಹತ್ವದ ಸೂಚನೆಗಳನ್ನು ಮಾಡಿದ್ದು ಗಮನಾರ್ಹ. ತಮ್ಮ ಈ ಲೇಖನ ಹಸ್ತಪ್ರತಿಶಾತ್ರದ ನೀಲನಕ್ಷೆಯೂ ಸಾರಲೇಖವೂ ಆಗಬೇಕೆಂಬ ಅವರ ಧೋರಣೆ ಲೇಖನದುದ್ದಕ್ಕೂ ಢಾಳವಾಗಿ ಕಂಡುಬರುತ್ತದೆ.

ಕೆ. ಕೃಷ್ಣಮೂರ್ತಿಯವರ ಸಂಸ್ಕೃತದಲ್ಲಿ ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನೆ ಜಿ. ವರದರಾಜರಾವ್ ಅವರ ಹಸ್ತಪ್ರತಿ ಸಂಗ್ರಹಕಾರ್ಯ ಮತ್ತು ಸಂರಕ್ಷಣೆ ಎಸ್. ಶಿವಣ್ಣನವರ ಕನ್ನಡ ಹಸ್ತಪ್ರತಿ ಸೂಚಿಗಳು ಹಾಗೂ ಹಸ್ತಪ್ರತಿಗಳ ಸಮಗ್ರ ಗ್ರಂಥ ಸೂಚಿ ನಿರ್ಮಾಣ ಹಾಗೂ ಎನ್.ಬಸವರಾಧ್ಯ ಹಸ್ತಪ್ರತಿಗಳನ್ನು ಓದುವಿಕೆ, ಬಿ.ಎಸ್. ಸಣ್ಣಯ್ಯನವರ ಕನ್ನಡ ಹಸ್ತಪ್ರತಿ ಭಂಡಾರಗಳು ಈ ಲೇಖನಗಳೆಲ್ಲವೂ ತಮ್ಮ ವಿಷಯ ಪ್ರತಿಪಾದನೆಯಿಂದ ಮಹತ್ವ ಪಡೆಯುತ್ತವೆ.

ಅನಂತರದ ಕಾವ್ಯ ಗ್ರಂಥಗಳ ಸಂಪಾದನೆ ಜಿ.ಜಿ. ಮಂಜುನಾಥ ಲಕ್ಷಣ ಗ್ರಂಥಗಳ ಸಂಪಾದನೆ (ಟಿ.ವಿ. ವೆಂಕಟಾಚಲಶಾಸ್ತ್ರಿ, ಶಾಸ್ತ್ರಗ್ರಂಥಗಳ ಸಂಪಾದನೆ (ವಿದ್ವಾನ್, ಎಸ್. ಕೃಷ್ಣ ಜೋಯಿಸ್), ಈ ಲೇಖನಗಳು ಆಯಾ ವಿಶಿಷ್ಟ ಪ್ರಕಾರಗಳ ಸಂಪಾದನಾ ಕಾರ್ಯ ವಿಶೇಷಗಳನ್ನು ಸಾಧರವಾಗಿ ನಿರೂಪಿಸಿದ ಉಪಯುಕ್ತ ಲೇಖನಗಳು.

ಎಂ. ಚಿದಾನಂದಮೂರ್ತಿಯವರ ಪಾಠ ಪರಿಷ್ಕರಣೆ ಮತ್ತು ಉನ್ನತ ವಿಮರ್ಶೆ. ಉನ್ನತ ವಿಮರ್ಶೆ ಕಲ್ಪನೆಯನ್ನು ಖಚಿತಗೊಳಿಸಲು ಯತ್ನಿಸಿದೆ. ಕೊನೆಯದಾದ ಕನ್ನಡ ಗ್ರಂಥಸಂಪಾದನೆಗೆ ಹಿರಿಯ ವಿದ್ವಾಂಸ ವಿದ್ಯಾಶಂಕರ ಕೊಡುಗೆ ಎಂಬ ಲೇಖನವನ್ನು ಕನ್ನಡ ಗ್ರಂಥಸಂಪಾದನೆಯ ಹಿಂದಿನ, ಇಂದಿನ ಕಾರ್ಯಚಟುವಟಿಕೆಗಳನ್ನು ಸಾಧ್ಯವಾದಷ್ಟು ಸಮಗ್ರವಾಗಿಯೇ ಸಮೀಕ್ಷಿಸಿದ ಲೇಖನವಾಗಿದೆ. ಒಟ್ಟಿನಲ್ಲಿ ಹಸ್ತಪ್ರತಿಶಾಸ್ತ್ರ ಗ್ರಂಥವು ಕಂಡ ಬಿ.ಎಂ.ಶ್ರೀ ಪ್ರತಿಷ್ಠಾನವು ಈ ಕ್ಷೇತ್ರಕ್ಕೆ ಕೊಡಮಾಡಿದ ಶ್ರೇಷ್ಠ ಕೊಡುಗೆಯಾಗುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ತ್ರೈಮಾಸಿಕ ಕರ್ನಾಟಕ ಭಾರತೀಯ ವಿಶೇಷಾಂಕವೂ ಮಹತ್ವದ್ದಾಗಿದೆ. ಹಳಕಟ್ಟಿ ಅವರ ಜನ್ಮಶತಮಾನೋತ್ಸವ ಸಂಚಿಕೆಯಾಗಿ ಹೊರಬಂದ ಈ ಸಂಚಿಕೆಯ ಲೇಖನಗಳು ಹಸ್ತಪ್ರತಿ ಅಧ್ಯಯನಕ್ಕೆ ಸಂಬಂಧಿಸಿದವು.

ಎಸ್. ಶಿವಣ್ಣ ಅವರ 'ಪ್ರಾಚೀನ ಲೇಖನ ಸಾಮಗ್ರಿ', ಎಚ್. ದೇವಿರಪ್ಪನವರ 'ಲೇಖನ ವೃತ್ತಿ,' ಎನ್. ಬಸವರಾಧ್ಯರ 'ಭಾಷೆ ಅಕ್ಷರ, ವಾಚನ ಪದ್ಧತಿ,' ಬಿ.ಎಸ್. ಸಣ್ಣಯ್ಯನವರ 'ಹಸ್ತಪ್ರತಿ ರಕ್ಷಣೆ ಮತ್ತು ಪರಿಚಲನೆ' ಈ ಲೇಖನಗಳು ಆ ಕ್ಷೇತ್ರದಲ್ಲಿ ಹಲವಾರು ವರ್ಷಗಳಿಂದ ಪರಿಶ್ರಮಿಸುತ್ತ ಬಂದ ವಿದ್ವಾಂಸರ ಪರಿಪಕ್ವ ಲೇಖನಗಳಾಗಿ ಮಹತ್ವ ಪಡೆಯುತ್ತವೆ.

ಬಿ.ಆರ್. ಹಿರೇಮಠ ಅವರು 'ಹಸ್ತಪ್ರತಿ ಪ್ರತಿಕಾರರು' ಲೇಖನವು ಲಿಪಿಕಾರರನ್ನು ನಿಯುಕ್ತ ವೃತ್ತಿ ಹಾಗೂ ಹವ್ಯಾಸಿಗಳೆಂದು ವರ್ಗೀಕರಿಸಿಕೊಂಡಿದ್ದರೂ ಅನೇಕ ಉದಾಹರಣೆಗಳನ್ನು ಹಸ್ತಪ್ರತಿಗಳ ಅತ್ಯಂತ ಪ್ರಶಸ್ತಿಗಳಿಂದ ಕಲೆ ಹಾಕಿ ಒದಗಿಸಿಕೊಟ್ಟಿದ್ದಾರೆ. ಅಲ್ಲದೆ ಪ್ರತಿಕಾರರರು ಕೊಡುವ ಮಾಹಿತಿಯನ್ನು ಪ್ರತಿಕಾರರ ಗೋತ್ರ, ಸೂತ್ರ ಶಾಖೆ, ಮನೆತನ, ವಂಶಾವಳಿ ವರ ಅಭಿರುಚಿ, ಆಸಕ್ತಿಗಳನ್ನು ಕಂಡುಕೊಳ್ಳಲು ಎಷ್ಟು ಸಹಕಾರಿಯಾಗುತ್ತವೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಜೊತೆಗೆ ಹಸ್ತಪ್ರತಿ ಸೌಂದರ್ಯ ಹೆಚ್ಚಿಸಿದ ಲೇಖನ ಶೈಲಿಗಳ ಬಗ್ಗೆ ಚರ್ಚಿಸಿದುದು ಈ ಲೇಖನದ ವಿಶೇಷತೆ. ವೀರಣ್ಣ ರಾಜೂರ ಅವರ ಲೇಖನ ಕನ್ನಡ ಹಸ್ತಪ್ರತಿಗಳ ವಿಷಯ ವೈವಿಧ್ಯತೆ ಕುರಿತದ್ದು, ಮಾನವನ ಆಲೋಚನೆಗಳ ವೈವಿಧ್ಯವೇ ಹಸ್ತಪ್ರತಿಗಳ ವಿಷಯ ಕನ್ನಡ ಹಸ್ತಪ್ರತಿಗಳು ಕನ್ನಡಿಗರ ಆಲೊಚನೆಗಳ ಕೇಂದ್ರಗಳು ಶ್ರೀಯುತರು ಕನ್ನಡ ಸಾಹಿತ್ಯದ ವಿರಳಿತಗಳನ್ನು ಸಂಕ್ಷೇಪವಾಗಿ ಚಿತ್ರಿಸಿ ಹಸ್ತಪ್ರತಿಗಳ ವಿಷಯಗಳನ್ನು ಧಾರ್ಮಿಕ ಸಾಹಿತ್ಯ ಕವಿಸಾಹಿತ್ಯ ಚರಿತ್ರೆ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಟೀಕಾ

ಸಾಹಿತ್ಯ ಎಂದು ಸ್ಥೂಲವಾಗಿ ಐದು ಭಾಗಗಳಾಗಿ ಹಿಡಿದುಕೊಂಡು ಒಂದೊಂದು ವಿಭಾಗದಲ್ಲಿ ಮತ್ತೆ ಹಲವು ಉಪವಿಭಾಗಗಳನ್ನು ಕಲ್ಪಿಸಿ ಅಭ್ಯಸಿಸುವ ದಾರಿಯನ್ನು ಶಾಸ್ತ್ರೀಯವಾಗಿ ಪ್ರತಿಪಾದಿಸಿದ್ದಾರೆ.

ಬಿ.ಕೆ. ಹಿರೇಮಠ ಹಸ್ತಪ್ರತಿಗಳ ವಿನ್ಯಾಸ, ಸೌಂದರ್ಯ ಲೇಖನವು ಇದುವರೆಗೆ ಹಸ್ತಪ್ರತಿ ಅಧ್ಯಯನಕ್ಕೆ ಹೊರತಾಗಿಯೇ ಉಳಿಯುತ್ತ ಬಂದ ಅಷ್ಟೆ ಏಕೆ ಅಲಕ್ಷಿಸುತ್ತ ಬಂದ ಅಧ್ಯಯನವಾಗಿದೆ. ಹಸ್ತಪ್ರತಿ ಅಧ್ಯಯನದಲ್ಲಿ ಅಲ್ಲಿನ ಚಕ್ರಗಳಿಗೆ ಆಕೃತಿಗಳಿಗೆ ಇರುವ ಮಹತ್ವದ ದೃಷ್ಟಿಹರಿಸಬೇಕಾದ ಅಗತ್ಯವನ್ನು ಒತ್ತಿ ಹೇಳುವ ಹಾಗೂ ನಾಡಿನ ಕಲಾ ಪರಂಪರೆ ಇದರಿಂದ ಶ್ರೀಮಂತವಾಗುವ ವಿಚಾರಗಳನ್ನು ಪ್ರಸ್ತಾಪಿಸಿದೆ.

ಎಂ.ಎಂ. ಕಲಬುರ್ಗಿಯವರ ಹಸ್ತಪ್ರತಿ ಕ್ಷೇತ್ರಕಾರ್ಯ ವಿಧಾನ, ಸಾಧನ ಎಂಬ ಲೇಖನವು ಹಸ್ತಪ್ರತಿ ಶಾಸ್ತ್ರ ಗ್ರಂಥದಲ್ಲಿ ಪ್ರಕಟಗೊಂಡ ಹಸ್ತಪ್ರತಿಶಾಸ್ತ್ರ ಅದರ ವಿವಿಧ ಮುಖಗಳು ಎಂಬ ಲೇಖನದಷ್ಟೆ ಮಹತ್ವದ್ದಾಗಿದೆ. ಸುತ್ತಲೂ ಇರುವ ಸಾಧನ ಸಾಮಗ್ರಿಯನ್ನೆ ಹೊಸ ದೃಷ್ಟಿಕೋನದಿಂದ ಪರಿಶೀಲಿಸುವ ವಿಶಿಷ್ಟಗುಣ ಎಂ.ಎಂ. ಕಲಬುರ್ಗಿವರದು. ಗ್ರಂಥ ಸಂಪಾದನಾ ಶಾಸ್ತ್ರದ ನೆಲೆಯಿಂದ ಮುಕ್ತವಾಗಿ ಸ್ವತಂತ್ರವಾದ ಶಾಸ್ತ್ರ ಮರ್ಯಾದೆ ಪಡೆಯುತ್ತಿರುವ ಹಸ್ತಪ್ರತಿಶಾಸ್ತ್ರದ ಹಲವು ಅಂಗಗಳಲ್ಲಿ ಕ್ಷೇತ್ರಕಾರ್ಯ ಒಂದು.

ಇದು ಪ್ರಮುಖವಾಗಿ ಸಂಗ್ರಹ, ಗೌಣವಾಗಿ ಸಂದರ್ಶನ ನಿರೀಕ್ಷೆಗಳನ್ನು ಒಳಗೊಳ್ಳುವ ಒಂದು ಶೈಕ್ಷಣಿಕ ಶಿಸ್ತು ಎಂದು ವಿವರಿಸಿ ಕ್ಷೇತ್ರಕಾರ್ಯಕರ್ತರಿಗೆ ಹಸ್ತಪ್ರತಿಯ ಸೈದ್ಧಾಂತಿಕ ಪ್ರಾಯೋಗಿಕ ಪರಿಜ್ಞಾನಗಳ ಜೊತೆಗೆ ತಾನು ಬಳಸುವ ಸಾಮಗ್ರಿ ಕುರಿತು ಕ್ಷೇತ್ರಕಾರ್ಯ ಬಂದ ಬಗೆಯನ್ನು ತಿಳಿಸಿದ್ದಾರೆ.

'ಕರ್ನಾಟಕ ಭಾರತಿ' ವಾರ್ಷಿಕ ಪತ್ರಿಕೆ, ಸಂಪುಟ ೩೫, ಸಂಯುಕ್ತ ಸಂಚಿಕೆ ೨೦೦೪-೫, ಸಂಚಿಕೆ ೧-೨ರಲ್ಲಿ 'ಬೆಳಗಾವಿ ಜಿಲ್ಲೆಯ ಪ್ರಾಚೀನ ಹಸ್ತಪ್ರತಿಗಳ ಶೋಧ' ಎಂಬ ಲೇಖನವನ್ನು ರಾಜಶೇಖರ ಇಂಚ್ಚಂಗಿ ಅವರು ರಚಿಸಿದ್ದು, ಬೆಳಗಾವಿಯ ಜಿಲ್ಲಾ ಹಸ್ತಪ್ರತಿ ಶಾಸ್ತ್ರಕ್ಕೆ ನೀಡಿದ ಕೊಡುಗೆಯನ್ನು ವಿವರಿಸಿದ್ದಾರೆ.

ಸಿ. ನಾಗಭೂಷಣ ಅವರು ಕನ್ನಡ ಸಾಹಿತ್ಯ ಸಾಂಸ್ಕೃತಿಕ ಶೋಧ ಎನ್ನುವ ಕೃತಿಯಲ್ಲಿ 'ಕನ್ನಡ ಹಸ್ತಪ್ರತಿಗಳ ಪುಷ್ಟಿಕೆಗಳಲ್ಲಿ ಕಂಡುಬರುವ ಸ್ತ್ರೀಯರುಗಳ ಶಿಕ್ಷಣದ ಚಿತ್ರಣ' ಎನ್ನುವ ಲೇಖನದಲ್ಲಿ ಸ್ತ್ರೀ ಲಿಪಿಕಾರ್ತಿಯರು ಮತ್ತು ಅವರ ಜೀವನದ ಮತ್ತು ಶಿಕ್ಷಣದ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.

೧೯೬೪ರಲ್ಲಿ ಹೆಚ್. ತಿಪ್ಪೇರುದ್ರಸ್ವಾಮಿಯವರು 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಎಂಬ ಗ್ರಂಥದಲ್ಲಿ ಕರ್ನಾಟಕ ಕಲೆಯ ವಿವರವಾದ ಅಧ್ಯಯನವನ್ನು ಕೈಗೊಂಡಿದ್ದಾರೆ. ವಿಶೇಷವಾಗಿ

ಮೈಸೂರು ಪ್ರದೇಶದ ಅನೇಕ ಹಸ್ತಪ್ರತಿಗಳ ಚಿತ್ರಗಳ ಕುರಿತು ವ್ಯಾಪಕವಾಗಿ ಮಾಹಿತಿಯನ್ನು ಸಂಗ್ರಹಿಸಿ ಇವುಗಳ ಅಧ್ಯಯನದ ಮಹತ್ವದೆಂದು ಹೇಳಬಹುದು.

೨೦೦೩ರಲ್ಲಿ ಎಸ್.ಸಿ. ಪಾಟೀಲ್ 'ಕರ್ನಾಟಕ ಹಸ್ತಪ್ರತಿ ಚಿತ್ರಕಲೆ' ಎಂಬ ಲೇಖನದಲ್ಲಿ ಹಸ್ತಪ್ರತಿ ಚಿತ್ರಕಲೆಯ ಸಮಗ್ರ ವಿವರಗಳನ್ನು ವರ್ಗೀಕರಣದದೊಂದಿಗೆ ವಿರವರಿಸಿದ್ದಾರೆ. ಪಿಎಚ್.ಡಿ ವಿದ್ಯಾರ್ಥಿಗಳಿಗೆ ಮತ್ತು ಹಸ್ತಪ್ರತಿ ಕ್ಷೇತ್ರಕಾರ್ಯ ಮಾಡುವವರಿಗೆ ಉಪಯುಕ್ತವಾದ ಈ ಲೇಖನದಲ್ಲಿ ಹಸ್ತಪ್ರತಿ ಚಿತ್ರಕಲೆಯನ್ನು ಜಾನಪದ ಶಿಷ್ಠ ಮತ್ತು ಶಿಷ್ಠ ಜಾನಪದ ಸಮಿಶ್ರ ಹಸ್ತಪ್ರತಿಗಳೆಂದು ವರ್ಗೀಕರಿಸಿ, ಸಮಿಶ್ರ ಹಸ್ತಪ್ರತಿಗಳೆಂದು ವರ್ಗೀಕರಿಸಿ, ಅವುಗಳಲ್ಲಿ ಮತ್ತೆ ಉಪವಿಭಾಗಗಳನ್ನು ಮಾಡಿ ಅಧ್ಯಯನ ಮಾಡಲಾಗಿದೆ. ಹಸ್ತಪ್ರತಿ ಚಿತ್ರ ಕಲೆಯ ಅಧ್ಯಯನಕಾರರಿಗೆ ಇದೊಂದು ಮಾರ್ಗದರ್ಶಿ ಲೇಖನವಾಗಿದೆ.

ಚನ್ನಕ್ಕ ಪಾವಟೆ ಅವರು ಜೈನ ಸಾಹಿತ್ಯ ಚಿತ್ರಕಲೆ ಕುರಿತು ಪ್ರಸ್ತುತ ಪಡಿಸಿದ ಲೇಖನದಲ್ಲಿ ಜೈನ ಹಸ್ತಪ್ರತಿಗಳ ಬಗೆಗೆ ಮತ್ತು ಹಸ್ತಪ್ರತಿಗಳಲ್ಲಿರುವ ಚಿತ್ರಕಲೆಯ ಬಗೆಗೆ ಮಾಹಿತಿ ಒದಗಿಸಿದ್ದಾರೆ.

೨೦೦೩ರಲ್ಲಿ ಬಿ.ಕೆ. ಹಿರೇಮಠ ಅವರು ಔಷಧಿ ಹಸ್ತಪ್ರತಿಗಳು ಲೇಖನದಲ್ಲಿ ಹಸ್ತಪ್ರತಿಗಳಲ್ಲಿರುವ ಔಷಧಿಯ ವಿವರಗಳನ್ನು ಹಾಗೂ ರಸಾಯನಶಾಸ್ತ್ರಗಳ ಮಾಹಿತಿಯನ್ನು ಚರ್ಚಿಸಿದ್ದಾರೆ.

೨೦೦೩ರಲ್ಲಿ ವೈ.ಸಿ. ಭಾನುಮತಿ, ಜೈನ ಹಸ್ತಪ್ರತಿ ಚಿತ್ರಕಲೆ, ಸ್ನೇಹಾ ಬೂಸನೂರರ ವೀರಶೈವ ಹಸ್ತಪ್ರತಿಗಳ ಚಿತ್ರಕಲೆ, ಕೆ. ರವೀಂದ್ರನಾಥರ ಉದ್ದರಣೆಗಳು ಚಿತ್ರಕಲೆ, ಅ.ಲ. ನರಸಿಂಹರವರ ಮುಸ್ಲಿಂ ಹಸ್ತಪ್ರತಿಗಳ ಚಿತ್ರಕಲೆ, ೧೯೭೭ರಲ್ಲಿ ಎ. ಶಿವರಾಮ ಕಾರಂತರ ಕರ್ನಾಟಕದಲ್ಲಿ ಚಿತ್ರಕಲೆ ಲೇಖನಗಳು ಇವು ಹಸ್ತಪ್ರತಿಗಳಲ್ಲಿ ಅಡಗಿರುವ ಚಿತ್ರಕಲೆಯ ಸಂಸ್ಕೃತಿ ಧರ್ಮ ಕಲೆಯನ್ನು ಬಿಂಬಿಸುವಂತಹ ಲೇಖನಗಳಾಗಿದ್ದು, ಈ ಲೇಖನಗಳನ್ನು ಕೂಡ ಅಧ್ಯಯನಕ್ಕೆ ಸಮೀಕ್ಷಿಸಿಲಾಗಿದೆ. (ಹೆಚ್ಚಿನ ಲೇಖನಗಳ ವಿವರಕ್ಕೆ ಅನುಬಂಧ-೧ ನೋಡಿ)

೨.೬ ಸೂಚಿ ಸಂಪುಟಗಳು

ಹಸ್ತಪ್ರತಿಗಳ ಸೂಚಿ ರಚನೆ

ಹಸ್ತಪ್ರತಿಗಳನ್ನು ಕೇವಲ ಸಂಗ್ರಹಿಸಿ ಸಂರಕ್ಷಣೆ ಮಾಡುವುದಷ್ಟೇ ಅಲ್ಲ. ಅವುಗಳನ್ನು ಓದುಗರಿಗೆ ವಿದ್ವಾಂಸರಿಗೆ ಅಧ್ಯಯನಕಾರರಿಗೆ ಉಪಯೋಗಿಸಿಕೊಳ್ಳಲು ಅನುಕೂಲವಾಗುವ ಹಾಗೆ ಮಾಡಬೇಕಾದುದು ಅಗತ್ಯವಾಗಿದೆ. ಹೀಗಾಗಿ ಸರಕಾರಿ\ಅರೆಸರಕಾರಿ ಸಾರ್ವಜನಿಕ ಸಂಘಸಂಸ್ಥೆಗಳು ಮಠಮಾನ್ಯಗಳು) ವೈಯಕ್ತಿಕ ನಲೆಗಳಲ್ಲಿ ಸಂಗ್ರಹಗೊಂಡ ಹಸ್ತಪ್ರತಿಗಳ ಸೂಚಿ (Manuscript Catalogue)ಯನ್ನು ಸಿದ್ದಪಡಿಸಿ ಪ್ರಕಟಿಸಿದರೆ ಅವು ಹೆಚ್ಚು ಪ್ರಯೋಜನಕ್ಕೆ ಬರುತ್ತವೆ.

ಆಧುನಿಕಪೂರ್ವದಲ್ಲಿ ಸೂಚಿಗಳನ್ನು ತಯಾರಿಸದೇ ಹೋದರೂ, ಅವುಗಳ ಪಟ್ಟಿಯನ್ನು ಕೆಲವು ಹಸ್ತಪ್ರತಿಗಳಲ್ಲಿ ನೀಡಿರುವುದು ಗಮನಾರ್ಹ. ಉದಾಹರಣೆಗೆ, ಜೈಮಿನಿ ಭಾರತ (ಮೈಸೂರಿನ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ಸ್ ಲೈಬ್ರರಿಯ ಸಂಖ್ಯೆ ೫) ತಾಳೆಗರಿ ಪ್ರತಿಯಲ್ಲಿ ಆರುನೂರು ಗ್ರಂಥಗಳ ಹೆಸರುಗಳಿರುವ ಸೂಚೀಪತ್ರ ಇದೆ. ಹಾಗೆಯೇ ಜಿ.ಎಂ.ಉಮಾಪತಿಶಾಸ್ತ್ರಿ ಅವರು ಸಂಗ್ರಹಿಸಿದ ಬಸವಪುರಾಣದ ತಾಳೆಗರಿ ಪ್ರತಿಯ ಕೊನೆಯಲ್ಲಿ ೨೪ ಕೃತಿಗಳ ವಿವರಗಳಿರುವ ಉಲ್ಲೇಖ ಹೀಗಿದೆ: "ಶ್ರೀಗುರುವೇ ಗತಿ। ಲೋಚನ ಗುರುಲ್ಲಿಂಗ ಸೊಮಿಗಳು ಕೊಟ್ಟಂಥ ಗುರುಬಸವಪ್ಪನವರು ಪುಸ್ತಕ। ಪದ್ಮರಾಜ ಪುರಾಣಾ। ಸಾನಂದಾ ಪುರಾಣಾ ಸೇರಿದ ಪುಸ್ತಕ ವಂದು। ವರ್ನಕಾ ಪುರಾಣಾ ವಂದು। ವಸ್ತುಕ ಪುರಾಣಾ ವಂದು। ಕಥಾಗರ್ಭ ವಂದು।" ಹೀಗೆ ಪುಸ್ತಕಗಳ ಪಟ್ಟಿ ಬೆಳೆಯುತ್ತ ಹೋಗುತ್ತದೆ.[೧]

ಆಧುನಿಕ ಕಾಲದಲ್ಲಿ ಕನ್ನಡ ಹಸ್ತಪ್ರತಿಗಳ ಸೂಚೀರಚನೆಯ ಕಾರ್ಯವು ೧೮೨೮ರಿಂದ ಆರಂಭವಾದಂತಿದೆ. ಎಚ್.ಎಚ್. ವಿಲ್ಸನ್ ಕರ್ನಲ್ ಮೆಕೆಂಜಿ ಸಂಗ್ರಹಿಸಿದ ೧೫೭೨ ಹಸ್ತಪ್ರತಿಗಳ ಮಾಹಿತಿಯನ್ನು ನೀಡುವ "Meckenzie Cllectioon :A descriptive catalogue of the oriental Manuscripts" ವಿವರಣಾತ್ಮಕ ಸೂಚಿಯೇ ಮೊದಲ ಕನ್ನಡ ಹಸ್ತಪ್ರತಿ ಸೂಚೀ ಸಂಪುಟ ಎಂಬ ಹೆಗ್ಗಳಿಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ಸರಕಾರಿ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಮಠಮಾನ್ಯಗಳು ತಾವು ಸಂಗ್ರಹಿಸಿದ್ದ ಹಸ್ತಪ್ರತಿಗಳ ಸೂಚಿಯನ್ನು ಸಿದ್ಧಪಡಿಸಿ ಪ್ರಕಟಿಸುತ್ತ ಬರುತ್ತಿರುವುದನ್ನು ನಾವು ಈಗಲೂ ಕಾಣಬಹುದು.

ಮದ್ರಾಸ್ ವಿಶ್ವವಿದ್ಯಾಲಯದ ಪ್ರಾಚ್ಯವಿದ್ಯಾ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯ ಹಾಗೂ ಕನ್ನಡ ಅಧ್ಯಯನ ಸಂಸ್ಥೆ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆ ಹಾಗೂ ಕನ್ನಡ ಅಧ್ಯಯನ ಪೀಠ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಗಳು ತಮ್ಮಲ್ಲಿರುವ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿಯನ್ನು ಸಂಪುಟಗಳ ರೂಪದಲ್ಲಿ ಕಾಲಕಾಲಕ್ಕೆ ಪ್ರಕಟಿಸಿವೆ. ಸಾರ್ವಜನಿಕ ಸಂಸ್ಥೆಗಳಾದ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಬಿ.ಎಂ.ಶ್ರೀ. ಪ್ರತಿಷ್ಠಾನ, ಉಡುಪಿಯ ಗೋವಿಂದ ಪೈ ಸಂಶೋಧನ ಕೇಂದ್ರಗಳು, ಧಾರ್ಮಿಕ ಸಂಸ್ಥೆಗಳಾದ ಧರ್ಮಸ್ಥಳದ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಶ್ರವಣಬೆಳಗೊಳದ ಜೈನಮಠ, ಗದುಗಿನ ತೋಂಟದಾರ್ಯಮಠ, ಚಿತ್ರದುರ್ಗದ ಮುರುಘಾಮಠ, ಹುಬ್ಬಳ್ಳಿಯ ಮೂರುಸಾವಿರಮಠ, ಬೆಳಗಾವಿ ನಾಗನೂರು ರುದ್ರಾಕ್ಷಿಮಠ ಮೊದಲಾದವುಗಳು ತಮ್ಮ ತಮ್ಮ ಮಿತಿಯಲ್ಲಿ ಹಸ್ತಪ್ರತಿಗಳ ಸೂಚೀಯನ್ನು ಪ್ರಕಟಿಸುತ್ತ ಬಂದಿವೆ; ಬರುತ್ತಲಿವೆ. ಆದರೂ ಈ ಕಾರ್ಯ ಇನ್ನೂ ಅಪೂರ್ಣವೆಂದೇ ಹೇಳಬೇಕು. ಏಕೆಂದರೆ ಧಾರವಾಡದ ಕನ್ನಡ ಅಧ್ಯಯನ ಪೀಠವು ಈವರೆಗೆ ಕೇವಲ ಆರುನೂರು ಕೃತಿಗಳ ಸೂಚಿಯನ್ನು ಆರು ಸಂಪುಟಗಳಲ್ಲಿ ಮಾತ್ರ ಪ್ರಕಟಿಸಿದೆ. ಕೊಲ್ಲಾಪುರದ ಲಕ್ಷ್ಮೀಸೇನ

ಭಟ್ಟಾರಕ ಜೈನಮಠವು ಬರೀ ಅಕಾರಾದಿ ಸೂಚೀಯನ್ನು ಮಾತ್ರ ಪ್ರಕಟಿಸಿದೆ. ಹೀಗಾಗಿ ನಾಡಿನ ವಿವಿಧೆಡೆ ಇರುವ ಹಸ್ತಪ್ರತಿಗಳ ಸೂಚೀಕಾರ್ಯ ಚುರುಕುಗೊಳಿಸಿ ಅವುಗಳನ್ನು ಪ್ರಕಟಿಸುವುದು ಅವಶ್ಯವಿದೆ. ಆಗ ಮಾತ್ರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಳೆದುಹೋದ ಕವಿ-ಕೃತಿಗಳ ಬಗ್ಗೆ ಮಾಹಿತಿ ಸಿಗುತ್ತದೆ; ಆ ಚರಿತ್ರೆಯಲ್ಲಿ ಹೊಸಹೊಸ ವಿಚಾರಗಳು ಸೇರ್ಪಡೆಯಾಗಲಿಕ್ಕೆ ಸಾಧ್ಯವಿದೆ.

ಈಗಾಗಲೇ ಪ್ರಕಟಗೊಂಡಿರುವ ವಿವರಣಾತ್ಮಕ ಸೂಚೀಸಂಪುಟಗಳಲ್ಲಿ ಒಂದೇ ವಿಧಾನವನ್ನು ಅನುಸರಿಸಿಲ್ಲ. ಹೀಗಾಗಿ ಹಸ್ತಪ್ರತಿ ಸೂಚೀರಚನೆಗೆ ಒಂದು ವಿಧಾನವನ್ನು ಅನುಸರಿಸುವುದು ತುಂಬ ಸೂಕ್ತವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಎಂ.ಎಂ. ಕಲಬುರ್ಗಿ ಅವರು ಲೇಖನವೊಂದರಲ್ಲಿ ಸರಳ ಹಾಗೂ ಸಮರ್ಪಕವಾದ ಸೂಚೀರಚನೆಯ ವಿಧಾನವನ್ನು ತಿಳಿಸಿದ್ದಾರೆ. ಆ ವಿಧಾನ ಹೀಗಿದೆ:

"ಒಂದು ಕೃತಿಯ ಸೂಚಿಯನ್ನು ಕೃತಿ ಪರಿಚಯ ಹಾಗೂ ಪ್ರತಿ ಪರಿಚಯ ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಕೃತಿ ಪರಿಚಯವು ೧. ಕೃತಿಯ ಶೀರ್ಷಿಕೆ ೨. ಕವಿಯ ಹೆಸರು ೩. ಕೃತಿ ಪ್ರಕಾರ ೪. ಕವಿಯ ಕಾಲ ೫. ಕೃತಿ ವಿಷಯ ಎಂಬ ಐದು ಅಂಶಗಳನ್ನು ಒಳಗೊಂಡಿರಬೇಕು. ಇನ್ನು ಪ್ರತಿ ಪರಿಚಯವು ೬. ವಸ್ತು ೭. ಹಸ್ತಪ್ರತಿಯ ಕ್ರಮಸಂಖ್ಯೆ ೮, ಅಕ್ಷರ ೯, ಆಕಾರ ೧೦. ಸ್ವರೂಪ ೧೧. ಗರಿ\ಪುಟ ೧೨. ಸ್ಥಿತಿ(ಪೂರ್ಣ-ಅಪೂರ್ಣ) ೧೩. ಮಿತಿ ೧೪ ಆದಿಭಾಗ ೧೫. ಅಂತ್ಯಭಾಗ ಎಂಬ ಅಂಶಗಳು ಒಳಗೊಳ್ಳಬೇಕು. ಇದು ಒಂದು ಕೃತಿ ಅಥವಾ ಹಸ್ತಪ್ರತಿಯ ವರ್ಣನಾತ್ಮಕ ಸೂಚಿಯನ್ನು ಸಿದ್ಧಪಡಿಸುವ ವಿಧಾನ. ಆ ವಿಧಾನಗಳ ಮಾದರಿಯಲ್ಲಿಯೇ ಧಾರವಾಡದ ಕನ್ನಡ ಅಧ್ಯಯನ ಪೀಠ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚೀ ಸಂಪುಟಗಳು ರೂಪುಗೊಂಡಿವೆ. ಅವುಗಳ ಮಾದರಿಯಲ್ಲಿಯೇ ಮುಂದೆ ನಾವು ಹಸ್ತಪ್ರತಿ ಸೂಚಿಗಳನ್ನು ಸಿದ್ಧಪಡಿಸಬಹುದಾಗಿದೆ.[೨] (ಸೂಚಿ ಸಂಪುಟಗಳ ವಿವರಕ್ಕೆ ಅನುಬಂಧ-೨ ನೋಡಿ)

೨.೭ ಎಂ.ಫಿಲ್ ಅಧ್ಯಯನಗಳು

ರೋಜಾ ಜೆ. ಅವರ 'ಕನ್ನಡ ಹಸ್ತಪ್ರತಿಗಳು ಮತ್ತು ಮಹಿಳಾ ಬರಹಗಾರ್ತಿಯರು' ಎಂಬ ಅಧ್ಯಯನದಲ್ಲಿ ಸಾಂಸ್ಕೃತಿಕವಾಗಿ ಚಾರಿತ್ರಿಕವಾಗಿ ಊನಗೊಂಡ ಮಹಿಳಾ ಪರ ನೆಲೆಗಳ ಕುರಿತು ಚರ್ಚಿಸಿದ್ದಾರೆ. ಮಹಿಳಾ ಲಿಪಿಕಾರ್ತಿಯರ ಮತ್ತು ಅವರ ಬದುಕಿನ ಆಶಯಗಳನ್ನು ಒಳಗೊಂಡಂತೆ ಮತ್ತು ಲಿಪಿಕಾರ್ತಿಯರನ್ನು ಒಳಗೊಂಡಂತೆ ಆಶ್ರಯ ನೀಡಿದ ಬೇರೆ ಬೇರೆ ಕಾರಣಗಳಿಗಾಗಿ ಲಿಪಿ ಮಾಡಿದ ಪೋಷಕರನ್ನು ವಿವಿದ ರೀತಿಯ ಓದುಗರನ್ನು ವಿವಿಧ ಫಲ ಪ್ರಾಪ್ತಿಗಳಿಗಾಗಿ ಸಾಹಿತ್ಯ ಸೇವೆಗೈದ ಒಂದು ಮಹಿಳಾ ಸಾಂಸ್ಕೃತಿಕ ಲೋಕವನನು ಅರಿವಿಗೆ ತರುವಂತ ಕೆಲಸವನ್ನು ಈ ಅಧ್ಯಯನದಲ್ಲಿ ಚರ್ಚಿಸಿದ್ದಾರೆ.

ಐ.ಜೆ. ಮ್ಯಾಗೇರಿ ಅವರ 'ಕನ್ನಡ ಹಸ್ತಪ್ರತಿಗಳ ವಿಷಯ ಸಂಪತ್ತು' ಎಂಬ ಅಧ್ಯಯನದಲ್ಲಿ ಕನ್ನಡ ಹಸ್ತಪ್ರತಿಗಳ ಕಾಲದಿಂದ ಕಾಲಕ್ಕೆ ವೈವಿಧ್ಯಮಯವಾಗಿ ಬೆಳೆದು ಬಂದಿರುವ ಮತ್ತು ಅವುಗಳಲ್ಲಿ ವಿಪುಲವಾಗಿರುವ ಕನ್ನಡ ಸಾಹಿತ್ಯ ಚರಿತ್ರೆಯ ಸ್ವರೂಪವನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಬಹಳ ಪ್ರಾಚೀನ ಕಾಲದಿಂದಲೇ ಸಾಹಿತ್ಯ ನಿರ್ಮಿತಿಗೆ ತೊಡಗಿದ ಬೇರೆ ಬೇರೆ ವರ್ಗಗಳ ಅನೇಕ ಕವಿಗಳಿಂದ ರಚಿತಗೊಂಡ ಹಸ್ತಪ್ರತಿಗಳು ಕನ್ನಡ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆಯ ಜೊತೆಗೆ ಅದು ಕಾಲಕಾಲಕ್ಕೆ ವ್ಯತ್ಯಾಸಗೊಂಡು ರೂಪ ಹಾಗೂ ಪಡೆದ ಪ್ರೇರಣೆ ಈ ಬದಲಾವಣೆಗೆ ಕಾರಣವಾದ ಸಾಂಸ್ಕೃತಿಕ ವೈಪರಿತ್ಯಗಳನ್ನು ಅವು ಉಂಟು ಮಾಡಿದ ಪರಿಣಾಮಗಳಲ್ಲದೆ ಸಾಹಿತ್ಯದ ಅಭಿಜಾತತೆಯನ್ನು ಕುರಿತು ಚರ್ಚಿಸಿದ್ದಾರೆ. ಈ ಅರ್ಥದಲ್ಲಿ ಪರಂಪರೆಯ ಸತ್ವವನ್ನು ಹೀರಿಕೊಂಡು ಉಳಿದ ಕನ್ನಡ ಹಸ್ತಪ್ರತಿಗಳು ಆಯಾ ಕಾಲದ ಸಮಾಜೋಸಾಹಿತ್ಯ ಸ್ವರೂಪವನ್ನು ತಿಳಿಸುವ ಸಾಂಸ್ಕೃತಿಕ ಆಕರಗಳಾಗಿವೆ.

ರವೀಂದ್ರ ನಾಗಪ್ಪ ಬೋಳೆಗಾಂವ ಅವರ 'ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಹಸ್ತಪ್ರತಿ ಸೂಚಿಗಳು ಒಂದು ಅಧ್ಯಯನ' ಎಂಬ ನಿಬಂಧವನ್ನು ರಚಿಸಿದ್ದಾರೆ. ಕನ್ನಡ ಹಸ್ತಪ್ರತಿ ಸೂಚಿಗಳ ಇತಿಹಾಸ ಮತ್ತು ಕನ್ನಡ ಹಸ್ತಪ್ರತಿ ಭಂಡಾರಗಳು ಪ್ರಕಟಿತ ಸೂಚಿ ಹಾಗೂ ಕನ್ನಡ ಹಸ್ತಪ್ರತಿ ಸೂಚಿಕರಣ ಕನ್ನಡ ಸಂಶೋಧನ ಸಂಸ್ಥೆಯ ಕನ್ನಡ ಹಸ್ತಪ್ರತಿ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚೀಕರಣ ಕುರಿತು ಹಂತ ಹಂತವಾಗಿ ಚರ್ಚಿಸಿದ್ದಾರೆ.

ಸುಜಾತ ಎಸ್. ಅವರ 'ಎಂ.ಎಂ. ಕಲಬುರ್ಗಿಯವರು ಹಸ್ತಪ್ರತಿ ಶಾಸ್ತ್ರಕ್ಕೆ ನೀಡಿದ ಕೊಡುಗೆ' ಎಂಬ ನಿಬಂಧದಲ್ಲಿ ಹಸ್ತಪ್ರತಿಶಾಸ್ತ್ರ ಎಂಬ ಗ್ರಂಥವನ್ನು ಹೊರತಂದ ಕಲಬುರ್ಗಿ ಯವರು ಹಸ್ತಪ್ರತಿಶಾಸ್ತ್ರಕ್ಕೆ ನೀಡಿದ ಕೊಡುಗೆಯನ್ನು ಗಮನಿಸಿದಾಗ ಪಾಶ್ಚಾತ್ಯ ನಾಗರಿಕತೆಯ ಪ್ರದೇಶದಿಂದ ಮುದ್ರಣ ಯಂತ್ರಗಳ ಪರಿಚಯವಾಗಿ ಆ ಮೂಲಕ ಮುದ್ರಿತ ಕೃತಿಗಳು ಯಾವುದೇ ಆಯಾಸವಿಲ್ಲದೆ, ಪರಿಶ್ರಮವಿಲ್ಲದೆ ನಮಗೆ ಲಭ್ಯವಾಗುತ್ತದೆ. ಅವುಗಳಿಗೆ ಮೂಲವಾಗಿದ್ದ ಹಸ್ತಪ್ರತಿಗಳು ಅಲಕ್ಷಕ್ಕೆ ತುತ್ತಾದವು. ನಮ್ಮ ಪೂರ್ವಜರು ಸಂಗ್ರಹಿಸಿದ ಹಸ್ತಪ್ರತಿಗಳನ್ನು ಅದಕ್ಕೆ ವರಿಸಲಾಯಿತು. ಕೆಲವು ನೀರು ಪಾಲದವು. ಇನ್ನು ಕೆಲವು ಒಲೆಗಿಕ್ಕಿದರೆ, ಮತ್ತೆ ಕೆಲವು ಹುತ್ತಗಟ್ಟುತ್ತ ಗೆದ್ದಲು ತಿಂದು ತೇಗಿದ ಇಂತಹ ಸಂದರ್ಭದಲ್ಲಿ ಕೆಲವು ಆಸಕ್ತ ವಿದ್ವಾಂಸರು ವಿಶ್ವವಿದ್ಯಾಲಯಗಳು, ಮಠಮಾನ್ಯಗಳು ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸಾಧ್ಯವಾದಷ್ಟು ಜಾಗರೂಕತೆಯಿಂದ ಕಾಪಾಡಲ ಮುಂದಾದರು. ಹಲವಾರು ಕೃತಿಗಳನ್ನು ಸಂಗ್ರಹಿಸಿ ಸಂಪಾದಿಸಿಕೊಟ್ಟವರಲ್ಲಿ ಪ್ರಮುಖರು ಕಲಬುರ್ಗಿ ಒಬ್ಬರು. ಎಂ.ಎಂ. ಕಲಬುರ್ಗಿ ಅವರು ಒಬ್ಬ ಸೃಜನಶೀಲ ಬರವಣಿಗೆಯ ಮೂಲಕ ಹೆಸರಾಗಿದ್ದು, ಕನ್ನಡ ಸಾಹಿತ್ಯ

ಲೋಕದಲ್ಲಿ ಹಸ್ತಪ್ರತಿಶಾಸ್ತ್ರಕ್ಕೆ ತಮ್ಮದೇ ಕೊಡುಗೆ ನೀಡಿದ್ದಾರೆ. ಹಸ್ತಪ್ರತಿಯಲ್ಲಿನ ಲೇಖನ ಸಾಮಗ್ರಿ ತಾಳೆಗರಿ ಕಾಗದ ಅರಿವೆ ಹಲಗೆ, ಚರ್ಮ ಇವುಗಳಿಗೆ ಉಪಯೋಗಿಸಿ, ಲಿಖಿಸಿ, ಮಸಿ ಕಪ್ಪು ಬಳಪ, ಲಿಪಿ ಲಿಕಾರರ ಬಗ್ಗೆ ಅಮೂಲಗ್ರವಾಗಿ ಸಂಶೋಧನೆ ಮಾಡಿ ನಮಗೆ ಮಾಹಿತಿ ನೀಡಿದ್ದಾರೆ. ಹಸ್ತಪ್ರತಿಗಳ ಶೋಧದಲ್ಲಿ ಪ್ರಾಚೀನ ಹಸ್ತಪ್ರತಿ ಭಂಡಾರಗಳನ್ನು ಶೋಧಿಸಿ ಮಠಗಳು, ಮನೆಗಳಲ್ಲಿ ಸಿಗುವ ಹಸ್ತಪ್ರತಿಗಳ ಜೊತೆಗೆ ವೈದಿಕ ಜೈನ ಮತ್ತು ವೀರಶೈವ ಹಸ್ತಪ್ರತಿ ಭಂಡಾರಗಲನ್ನು ಶೋಧಿಸಿ ಧಾರ್ಮಿಕವಾಗಿ ಹಸ್ತಪ್ರತಿಗಳ ವಿಭಜನೆ ಮಾಡಿರುವುದು ಕಲಬುರ್ಗಿಯವರ ಶೋಧನೆಗೆ ಉತ್ತಮ ನಿದರ್ಶನ. ಹಸ್ತಪ್ರತಿ ಅಧ್ಯಯನದ ವಿದ್ವಾಂಸರಿಗೆ ಎಲ್ಲಾ ನೆಲೆಗಳನ್ನೂ ಉಪಯುಕ್ತವಾದ ಅಧ್ಯಯನ ಮಾಡಲು ಹಸ್ತಪ್ರತಿ ಕ್ಷೇತ್ರದಲ್ಲಿ ಬೇರೆ ವಿದ್ವಾಂಸರಿಗಿಂತ ಕಲಬುರ್ಗಿಯವರ ಹೇಗೆ ಭಿನ್ನ ಎಂಬುದನ್ನು ತಿಳಿಸಿದ್ದಾರೆ.

ಮಂಜುನಾಥ ಡಿ.ಕೆ., ಅವರ 'ಬಿ.ಎಂ.ಶ್ರೀ. ಪ್ರತಿಷ್ಠಾನದ ಸಂಗ್ರಹದಲ್ಲಿರುವ ಹಸ್ತಪ್ರತಿಗಳ ಲಿಪಿಕಾರರ ಒಂದು ಅಧ್ಯಯನ' ಎಂಬ ನಿಬಂಧದಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿಗಳ ಲಿಪಿಕಾರರು ಪ್ರತಿ ಮಾಡುವಲ್ಲಿ ತೋರಿಸಿದ ಉತ್ಸಾಹ, ಅವರ ಕಠಿಣ ಪರಿಶ್ರಮದ ಮತ್ತು ಅವರ ತ್ಯಾಗ, ನಿಸ್ವಾರ್ಥ ಮನೋಭಾವನೆ ಕುರಿತು ವಿವರಿಸಿದ್ದಾರೆ. ಇಂದು ನಮಗೆ ನಕಲು ಕಾರ್ಯದ ಮೂಲಕ ಪ್ರಾಚೀನ ಕನ್ನಡ ಸಾಹಿತ್ಯ ನಮಗೆ ತಲುಪಿರುವ ರೀತಿಯನ್ನು ವಿವರಿಸುವುದರೊಂದಿಗೆ ಲಿಪಿಕಾರರ ಐತಿಹಾಸಿಕ ಮಹತ್ವವನ್ನು ಕುರಿತು ಚರ್ಚಿಸಿದ್ದಾರೆ. ಪ್ರತಿಕಾರ ತನಗೆ ಆಸಕ್ತಿಯಿರುವ ತನಕ, ತನ್ನ ಕೈಯಲ್ಲಿ ಕುಂಚ ಹಿಡಿದು ಕೊರೆಯುವ ಶಕ್ತಿ ಕುಂದುವ ತನಕ, ನಿರಂತರವಾಗಿ ಸಂಪ್ರತೀಕರಣ ಮಾಡಬಹುದೆಂದುದನ್ನು ತಿಳಿಸಿರುವುದರೊಂದಿಗೆ ಅವರಿಗೆ ಮತ್ತಷ್ಟು ಬಲ ತುಂಬುವ ಪ್ರಯತ್ನ ಮಾಡುವುದು ಇನ್ನೂ ಅಜ್ಞಾತವಾಗಿದೆ. ಅಜ್ಞಾಗದೇ ಕತ್ತಲೆ ಕೋಣೆಯಲ್ಲಿ ದೇವಾಲಯಗಳ್ಲಲಿ ತಾತ, ಮುತ್ತಾತರ ಪೆಟ್ಟಿಗೆಯಲ್ಲಿ ದೇವರ ಮನೆಗಳಲ್ಲಿ ಹೊರ ರಾಜ್ಯಗಳ ವಿವಿಧ ಮಠ ಸಂಸ್ಥೆಗಳ ಸಂಗ್ರಹದಲ್ಲಿರುವ ಕನ್ನಡ ಹಸ್ತಪ್ರತಿಗಳಲ್ಲಿರುವ ವಿಷಯವನ್ನು ಸಂಗ್ರಹಿಸಿ ಬಿ.ಎಂ.ಶ್ರೀ ಪ್ರತಿಷ್ಠಾನದ ಮೂಲಕ ಪ್ರಕಟಿಸುವುದು ಲಿಪಿಕಾರರ ಬರಹ, ಲಿಪಿ ಭಾಷೆಯಲ್ಲಿ ದೇಶಿಯತೆಯನ್ನು ಗುರುತಿಸುವುದರೊಂದಿಗೆ ಪ್ರತಿ ಮಾಡುವ ವೃತ್ತಿಯನ್ನು ಪವಿತ್ರ ಮತ್ತು ಶಾಶ್ವತ ಎಂದು ತಿಳಿವ ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿಯ ಲಿಪಿಕಾರರ ಕಾರ್ಯವಿಧಾನ ಮತ್ತು ಅವರ ವೈಶಿಷ್ಟಗಳ ಕುರಿತು ಚರ್ಚಿಸಲಾಗಿದೆ.

ಕೃಷ್ಣಪ್ಪ ಯಂಕಪ್ಪ ಕನ್ನಡ ಹಸ್ತಪ್ರತಿಗಳಲ್ಲಿ ದೈವಿನೆಲೆಗಳು ಎಂಬ ನಿಬಂಧದಲ್ಲಿ ಕನ್ನಡ ಹಸ್ತಪ್ರತಿಗಳು ದೈವಿರೂಪಗಳಾಗಿ ವಿಸ್ತೃತಗೊಳ್ಳುತ್ತ ಬಂದಿವೆ. ದೈವಿಕತೆ ಜ್ಞಾನಕ್ಕಿಂತಲೂ ಮೀಗಿಲಾಗಿದ್ದು ಎಂಬುದನ್ನು ನಮ್ಮ ಸಂಸ್ಕೃತಿ ಗುರುತಿಸುತ್ತ, ಪ್ರತಿಯೊಂದು ಕಾರ್ಯಕಲಾಪಗಳಲ್ಲಿಯೂ ಮಾನವನಿಗೆ ಸ್ನೇಹ ಜೀವಿಯಾಗಿದ್ದು, ಇದು ದಾರ್ಶನಿಕ ಗುಣಗಳನ್ನು ತಿಳಿಸಿಕೊಡುತ್ತಾ ಬಂದಿರುವುದನ್ನು ಕಾಣುತ್ತೇವೆ.

ಕೆ. ಸುರೇಶ ಅವರ 'ಮೈಸೂರು ವಿಶ್ವವಿದ್ಯಾಲಯ ಕನ್ನಡ ಹಸ್ತಪ್ರತಿಗಳ ವರ್ಣಾನಾತ್ಮಕ ಸೂಚಿ ಒಂದು ಅಧ್ಯಯನ'ದಲ್ಲಿ ಮೈಸೂರು ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಒಂಬತ್ತು ಸಂಪುಟಗಳ ಸಮಗ್ರ ಸಮೀಕ್ಷೆ ಮಾಡಿ ಅದರ ಗುಣಾವಗುಣಗಳನ್ನು ಒರೆಹಚ್ಚಲಾಗಿದೆ. ಇತರ ವಿಶ್ವವಿದ್ಯಾಲಯಗಳ ಹಾಗೂ ಖಾಸಗಿ ಸಂಸ್ಥೆ ವ್ಯಕ್ತಿಗಳ ಹಸ್ತಪ್ರತಿ ಸೂಚಿಗಳೊಂದಿಗೆ ತೌಲನಿಕವಾಗಿ ಸಮೀಕ್ಷೆ ಮಾಡಿದೆ. ಮೈಸೂರು ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿಗಳ ಇತಿಮಿತಗಳನ್ನು ಗುರುತಿಸಲಾಗಿದೆ. ಮೈಸೂರು ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಹಾಗೂ ಮೈಕ್ರೋಪಿಲ್ಮಂ ಆದ ಸೂಚಿಯನ್ನು ಗಮನಿಸಿ ವಿಶ್ಲೇಷಣೆ ಮಾಡಿದ ಹಸ್ತಪ್ರತಿ ಸೂಚಿ ತಯಾರಿಕೆಗೆ ಈ ಅಧ್ಯಯನದ ಮೂಲಕ ಸೂಕ್ತ ಅಂಶಗಳನ್ನು ಗಮನಕ್ಕೆ ತರಲಾಗಿದೆ. ಸೂಚಿಗಳು ಎಂಬ ಅಂಶವನ್ನು ಮೈಸೂರು ವಿಶ್ವವಿದ್ಯಾನಿಲಯಗಳ ಹಸ್ತಪ್ರತಿ ಸೂಚಿಗಳ ಅಧ್ಯಯನದ ಮೂಲಕ ಕನ್ನಡ ಹಸ್ತಪ್ರತಿಗಳ ಸೂಚಿಗೆ ಗಮನಹರಿಸಿರುವುದರ ಬಗ್ಗೆ ಚರ್ಚಿಸಲಾಗಿದೆ.

ಕೆ. ಬಸವರಾಜಪ್ಪ 'ಕನ್ನಡ ಹಸ್ತಪ್ರತಿಗಳಲ್ಲಿ ಪತ್ರ ಸಾಹಿತ್ಯ ಒಂದು ಅಧ್ಯಯನ'. ಈ ಕೃತಿಯಲ್ಲಿ ಹಸ್ತಪ್ರತಿಗಳು ಮತ್ತು ಪತ್ರ ಸಾಹಿತ್ಯ ರಹದಾರಿ ಪತ್ರಗಳಂತಹ ಸ್ವರೂಪದ ಕುರಿತು ಈ ಕೃತಿಯಲ್ಲಿ ಚರ್ಚಿಸಿದ್ದಾರೆ. ಇಲ್ಲಿ ಸನ್ನದುಗಳಾಗಲಿ, ನಿರೂಪಗಳಾಗಲಿ, ಕಡತಗಳಾಗಲಿ ಒಂದು ವಿಶಿಷ್ಟ ಬಗೆಯ ಸಾಂಸ್ಕೃತಿಕ ಇತಿಹಾಸವನ್ನು ನಮಗೆ ತಿಳಿಸುತ್ತವೆ. ಅದರಲ್ಲಿಯೂ ಆಧುನಿಕ ಸಾಹಿತ್ಯದ ಅನೇಕ ಗಣ್ಯ ಸಾಹಿತ್ಯಗಳ ಪತ್ರ ವ್ಯವಹಾರಗಳ ಕಡೆ ಹೆಚ್ಚು ಗಮನಹರಿಸಿರುವುದನ್ನು ಇಲ್ಲಿ ಕಾಣಬಹುದು.

ಧನಂಜಯ ಜಿ.ಕೆ. ಅವರ 'ಹಸ್ತಪ್ರತಿಗಳಲ್ಲಿ ಕೈ ಬರಹದ ಅಧ್ಯಯನ', ಗ್ರಾಪಾಲಜಿಯ ಬೆಳಕಿನಲ್ಲಿ ಎಂಬ ಅಧ್ಯಯನದಲ್ಲಿ ಗ್ರಾಪಾಲಜಿಯಂತಹ ಆಧುನಿಕ ಅಧ್ಯಯನ ವಿಧಾನಗಳ ಬೆಳಕಿನಲ್ಲಿಯೂ ನಮ್ಮ ಪ್ರಾಚೀನ ಆಸಕ್ತಿಯಾದ ಹಸ್ತಪ್ರತಿಗಳ ಅಧ್ಯಯನ ಮಾಡಲು ಸಾಧ್ಯವಿದೆ ಎಂಬುದನ್ನು ಕುರಿತು ಇಲ್ಲಿ ಚರ್ಚಿಸಿದ್ದಾರೆ.

ದೇವರಾಜ್ ಬಿ.ಕೆ. ಅವರ 'ಹಸ್ತಪ್ರತಿಶಾಸ್ತ್ರಕ್ಕೆ ಬಿ.ಎಂ.ಶ್ರೀ ಪ್ರತಿಷ್ಠಾನದ ಕೊಡುಗೆ ಒಂದು ಅಧ್ಯಯನ'ದಲ್ಲಿ ಯಾವುದೇ ಸರ್ಕಾರಿ ಹಸ್ತಪ್ರತಿ ಸಂಸ್ಥೆ ಖಾಸಗಿ ಹಸ್ತಪ್ರತಿ ಭಂಡಾರ ಮಾಡದೇ ಇರುವ ಒಂದು ವಿಶಿಷ್ಟ ಕಾರ್ಯವನ್ನು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಮಾಡುತ್ತಿದೆ. ಮನೆಬಾಗಿಲಿಗೆ ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಸಿರಿಕಂಟ ವೇದಿಕೆಯಡಿಯಲ್ಲಿ ಹಸ್ತಪ್ರತಿ ಕಾರ್ಯಗಾರ ಶಿಬಿರಗಳು ಈಗ ಅನೇಕ ಹಸ್ತಪ್ರತಿ ಕುರಿತು ಕಾರ್ಯಗಳು, ಹಸ್ತಪ್ರತಿ ಭಂಡಾರದ ಕಾರ್ಯ ಹಸ್ತಪ್ರತಿ ಸಂಪಾದನೆ ಪ್ರಕಟಣೆಯ ಕಾರ್ಯವನ್ನು ಮಾಡಿರುವುದನ್ನು ಅದರಲ್ಲಿಯೂ

ಹಸ್ತಪ್ರತಿ ಅಧ್ಯಯನಕ್ಕೆ ನೀಡಿದ ಕೊಡುಗೆಯನ್ನು ಈ ಕೃತಿಯಲ್ಲಿ ಚರ್ಚಿಸಿರುವುದು ವಿಶಿಷ್ಟವಾಗಿದೆ.

ಹನುಮಂತ ಗೌಡ ರುದ್ರಗೌಡ ಕಲ್ಮನಿ ಅವರ 'ಪಾರಂಪರಿಕ ಸಂರಕ್ಷಣಾ ವಿಧಾನಗಳು: ಒಂದು ಅಧ್ಯಯನ' ಎಂಬ ನಿಬಂಧದಲ್ಲಿ ಪಾರಂಪರಿಕ ಸಂರಕ್ಷಣಾ ವಿಧಾನಗಳಾದ ಹಸ್ತಪ್ರತಿಗಳು ಸಂರಕ್ಷಣೆಯ ದೃಷ್ಟಿಯಿಂದ ಬೇರೆ ಬೇರೆ ಪ್ರದೇಶಗಳಲ್ಲಿ ಅನುಗುಣವಾಗಿದ್ದು, ಸಂವರ್ಧನೆ ಎನ್ನುವುದು ಮೆಟಿರಿಯಲಿಸ್ಟ್ ಆಧಾರದ ಧೋರಣೆಗಳಿಗಿಂತ ಭಿನ್ನವಾಗಿ ಜೀವ ವೈವಿಧ್ಯತೆ ಹಾಗೂ ಜೀವ ಪೋಷಕ ಕ್ರಿಯೆಯನ್ನಾಗಿ ಪ್ರತಿಬಿಂಬಿಸಲಾಗಿದೆ. ಇದರಿಂದಾಗಿ ಸಂಗ್ರಹ ಸಂರಕ್ಷಣೆ ಎನ್ನುವ ಕ್ಷೇತ್ರಧಾರಿತ ಹಾಗೂ ಕೇವಲ ಆಕರಮುಖ ಜೀವಮುಖಿಯಾದ ಜೈವಿಕ ಸಂಪನ್ಮೂಲವಾಗಿ ವಿಸ್ತರಿಸಿಕೊಳ್ಳಲಾಗಿದೆ. ಸಂಗ್ರಹ ಸಂರಕ್ಷಣೆ ಸಂವರ್ಧನೆ ಎನ್ನುವ ಈ ಪರಿಕಲ್ಪನೆಗಳನ್ನು ಒಂದು ಜೀವಶಾಸ್ತ್ರೀಯ ಸತ್ಯಾಗಳನ್ನಾಗಿ ನಿರ್ವಚಿಂತ ಕೆಲಸವನನು ಇಲ್ಲಿ ವಿಶ್ಲೇಷಿಸಿದ್ದಾರೆ.

ರಾಮಚಂದ್ರ ಜಿ.ಹೆಚ್. ಅವರು 'ಕನ್ನಡ ಗ್ರಂಥ ಸಂಪಾದನೆ ಎಂ.ವಿ.ಸೀ ಯವರ ಕೊಡುಗೆ ಒಂದು ಅಧ್ಯಯನ'. ಶಾಂಭವಿ ಎಸ್. ಅವರ 'ಕನ್ನಡ ಗ್ರಂಥ ಸಂಪಾದನೆಗೆ ಎಲ್. ಗುಂಡಪ್ಪನವರ ಕೊಡುಗೆ' ಎಂಬ ಕಿರುಪ್ರಬಂಧ ರಚಿಸಿದ್ದು, ಗ್ರಂಥ ಸಂಪಾದನೆಯ ಜೊತೆಯಲ್ಲಿ ಹಸ್ತಪ್ರತಿಗಳನ್ನು ಅನುಷಂಗಿಕವಾಗಿ ಚರ್ಚಿಸಿರುವುದನ್ನು ಕಾಣಬಹುದಾಗಿದೆ.

೨.೮ ಪಿಎಚ್.ಡಿ. ಅಧ್ಯಯನಗಳು

ಬಿ.ಕೆ. ಹಿರೇಮಠರ 'ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ', ೧೯೯೨ರಲ್ಲಿ ಪ್ರಕಟವಾದ ಈ ಕೃತಿ ಹಸ್ತಪ್ರತಿಗಳ ಕಲಾವಿನ್ಯಾಸ, ಕುಶಲಕರ್ಮಿಗಳ ಸಂಸ್ಕೃತಿ, ಸಾಂಸ್ಕೃತಿಕ ಧಾರ್ಮಿಕ ಮತ್ತು ಹಸ್ತಪ್ರತಿಗಳ ಪಾಲನೆ, ಪೋಷಣೆಯ ದೃಷ್ಟಿಯಿಂದ ಸಂರಕ್ಷಣೆಗೊಂಡ ಅಧ್ಯಯನ ಮಾದರಿಯನ್ನು ತಿಳಿಸುವ ಕೃತಿಯಾಗಿದ್ದು, ಹಸ್ತಪ್ರತಿಗಳ ಸಂಗ್ರಹ ಸೂಚೀಕರಣ ಕೆಲಸಗಳನ್ನು ಅಧ್ಯಯನದಲ್ಲಿ ಒಂದು ಹಂತಕ್ಕೆ ಬಂದು ಕನ್ನಡದಲ್ಲಿ ಹಸ್ತಪ್ರತಿಶಾಸ್ತ್ರ ರೂಪದ ಅಧ್ಯಯನ ಮೊದಲು ಕಾಣಿಸಿಕೊಂಡಿದ್ದು, ಗ್ರಂಥ ಸಂಪಾದನ ಶಾಸ್ತ್ರದ ಭಾಗವಾಗಿ ಆಮೇಲೆ ಅಲ್ಲಲ್ಲಿ ಇದಕ್ಕೆ ಸಂಬಂಧಿಸಿದ ಅಧ್ಯಯನ ನಡೆದರೂ ಸಮಗ್ರವಾಗಿ ಹಸ್ತಪ್ರತಿಯ ಮಹತ್ವ ಕುರಿತು ನಡೆದ ಅಧ್ಯಯನವಾಗಿದ್ದು, ಕನ್ನಡ ಹಸ್ತಪ್ರತಿಗಳು ಮನೆ ಮನೆಗಳಲ್ಲಿ ಪರದೇಶಿಯಮತೆ ಬಿದ್ದುಕೊಂಡಿರುವ ಅರಕ್ಷಿತ ಪ್ರತಿಗಳು ಮಠಮಾನ್ಯಗಳಲ್ಲಿ ಮಟ್ಟಿಗೆ ಕೂಡಿ ಹಾಕಿರುವ ಸಂಗ್ರಹಿತ ಪ್ರತಿಗಳು, ಆಧುನಿಕ ಸಂಶೋಧನೆ ಸಂಸ್ಥೆಗಳಲ್ಲಿರುವ ಸಂರಕ್ಷಿತ ಪ್ರತಿಗಳು ಎಂದು ವರ್ಗೀಕರಿಸಲಾಗಿದೆ. ಪ್ರಾಚೀನರ ವಿದ್ಯಾಭಿಮಾನ ಧರ್ಮಾಭಿಮಾನ, ಬದುಕಿನ ಒಲವು ಇತ್ಯಾದಿಗಳನ್ನು ಅರಿತುಕೊಳ್ಳುವುದೇ ಹಸ್ತಪ್ರತಿಗಳ ಅಧ್ಯಯನ ಎಂಬುದನ್ನು ತಿಳಿಸುತ್ತದೆ.

ಹಸ್ತಪ್ರತಿಗಳ ಅರ್ಥ, ಲಕ್ಷಣಗಳನ್ನು ವಿವರಿಸಿ ಕನ್ನಡ ಹಸ್ತಪ್ರತಿಗಳ ಸಂಪತ್ತು ವೈವಿಧ್ಯ ಪ್ರಾಚೀನತೆಗಳನ್ನು ಪ್ರತಿಪಾದಿಸುವ ಮೂಲಕ ಕ್ರಮೇಣ ಆಳವನ್ನು ಒದಗಿಸಿಕೊಳ್ಳತ್ತ ನಡೆದಿದೆ.

ಹಸ್ತಪ್ರತಿಯ ನಿರ್ಮಾಣ ಕಾರ್ಯವನ್ನು ಓಲೆಯವರು ಬಡಿಗ ಚಿತ್ರಿಕ, ಲೋಹಕಾರ, ಲಿಪಿಕಾರ ವಸ್ತ್ರದವರು ಬರೆಸಕಾರರು ಹೀಗೆ ಹಲವಾರು ಹಸ್ತಪ್ರತಿ ತಯಾರಿಕೆಯಲ್ಲಿ ದುಡಿಯುತ್ತಿರುವುದನ್ನು ಮೊದಲ ಬಾರಿಗೆ ಎಣಿಸಿ ಹೇಳಿದ್ದಾರೆ. ಬರೆಹಕಾರರ ಬಗೆಗೆ ನೀಡಿರುವ ವೈವಿಧ್ಯಪೂರ್ಣವಾದ ವಿವರ ಅಧ್ಯಯನದಲ್ಲಿ ಪ್ರಮುಖವೆನಿಸಿದೆ.

ಹಸ್ತಪ್ರತಿಗಳ ಕಲಾವಿನ್ಯಾಸ ಎಂಬ ಅಧ್ಯಾಯವನ್ನು ಹಸ್ತಪ್ರತಿಗಳ ಬರಹದ ವಿನ್ಯಾಸ ಚಿತ್ರಕಲಾ ವಿನ್ಯಾಸ ಎಂದು ವರ್ಗೀಕರಣಗೊಂಡಿದೆ. ಇದರಲ್ಲಿ ಚಿತ್ರಕಲೆಯ ಜೈನ, ವೀರಶೈವ, ಬ್ರಾಹ್ಮನ, ವಿಶಿಷ್ಟವಾಗದೆಯಲ್ಲದೆ, ಮತಾತೀತವಾಗಿ ಬೆಳೆದು ಬಂದ ರೀತಿಯನ್ನು ವಿವರಿಸಿದ್ದು, ಅಧ್ಯಯನ ಉಪಯುಕ್ತವಾದ ಮಾಹಿತಿಯಾಗಿದೆ.

ಎಸ್.ಎನ್. ಚಿತ್ರಗಾರ ಅವರ 'ಕರ್ನಾಟಕ ಹಸ್ತಪ್ರತಿ ಚಿತ್ರಕಲೆ ಒಂದು ಅಧ್ಯಯನ' ಎಂಬ ಮಹಾಪ್ರಬಂಧದಲ್ಲಿ ಕರ್ನಾಟಕ ಹಸ್ತಪ್ರತಿ ಚಿತ್ರಕಲೆಯ ಅಧ್ಯಯನವು ನಿರ್ಮಾತೃಗಳ ಇತಿಹಾಸ ಪೋಷಕರ ಉದ್ದೇಶ ತಿಳಿಸಿರುವುದರ ಜೊತೆಗೆ ಹಸ್ತಪ್ರತಿ ಚಿತ್ರಕಲೆಯ ರಚನೆಗೊಂಡ ರೀತಿ ಪತ್ರದ ಸಿದ್ದತಾ ವಿಧಾನ, ಚಿತ್ರರಚನೆ ವರ್ಣಗಳ ತಯಾರಿಕೆ, ಚಿತ್ರ ರಚನಾ ಪರಿಕರಗಳ ಮತ್ತು ಚಿತ್ರ ಸಾಹಿತ್ಯ ಕ್ಷೇತ್ರದ ಹಲವಾರು ತಾಂತ್ರಿಕ ಅಂಶಗಳನ್ನು ತಿಳಿಸುತ್ತವೆ. ಈ ಎಲ್ಲ ಅಂಶಗಳೊಂದಿಗೆ ಚಿತ್ರಕಲಾ ಕ್ಷೇತ್ರಕ್ಕೆ ಹಸ್ತಪ್ರತಿ ಚಿತ್ರಕಲೆಯ ಮಹತ್ವವನ್ನು ಮನವರಿಕೆ ಮಾಡಿಕೊಡುವುದರೊಂದಿಗೆ ಈ ಹಸ್ತಪ್ರತಿ ಚಿತ್ರಕಲೆಯನ್ನು ಒಂದು ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಿದ್ದರೆ. ಉದ್ದೇಶ-ಸಂಸ್ಕೃತಿಯನ್ನು ಅರಿಯಲು ಇರುವ ಆಕರಗಳಲ್ಲಿ ಚಿತ್ರಕಲೆಯ ಒಂದು ವಿಶಿಷ್ಟವಾದ ಸ್ಥಾನವಿದೆ. ಆ ದಿಸೆಯಲ್ಲಿ ಚಿತ್ರಕಲೆಯ ಮುಖಾಂತರ ಮಾನವ ತನ್ನ ಸಂಸ್ಕೃತಿಯನ್ನು ಹೇಗೆ ವ್ಯಕ್ತಗೊಳಿಸಿದ್ದಾನೆ ಎಂಬುದನ್ನು ಅಥವಾ ಸಂಸ್ಕೃತಿಯನ್ನು ಅರಿಯಲು ಇರುವ ಆಕರಗಳಲ್ಲು ಚಿತ್ರಕಲೆಯ ಒಂದು ವಿಶಿಷ್ಟವಾದ ಸ್ಥಾನವಿದೆ. ಆ ದಿಸೆಯಲ್ಲಿ ಚಿತ್ರಕಲೆಯ ಮುಖಾಂತರ ಮಾನವ ತನ್ನ ಸಂಸ್ಕೃತಿಯನ್ನು ಹೀಗೆ ವ್ಯಕ್ತಗೊಳಿಸಿದ್ದಾರೆ ಎಂಬುದನ್ನು ಅಥವಾ ಸಂಸ್ಕೃತಿಯ ಒಂದು ಭಾಗವಾಗಿ ಚಿತ್ರಕಲೆ ಇತರ ಆಕರಗಳಿಗಿಂತ ಬೇರೆಯಾಗಿ ಇದು ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ಪುನರ್ ರಚಿಸಲು ಹೀಗೆ ಸಹಾಯ ಮಾಡುತ್ತದೆ ಎಂಬುದನ್ನು ತಿಳಿಸುವ ಹಸ್ತಪ್ರತಿ ಚಿತ್ರಕಲಾ ಪರಂಪರೆಯ ನಮ್ಮ ಪೂರ್ವಜರು ಧರ್ಮ ಪ್ರಚಾರದ ಸಾಧನೆಗಾಗಿ ಸಮಾಜವನ್ನು ರೂಪಿಸುವಲ್ಲಿ ಧಾರ್ಮಿಕ ರಾಜಕೀಯ ಉದ್ದೇಶಗಳಿಗಾಗಿ ಹೀಗೆ ಬಳಸಿಕೊಂಡರು ಎಂಬುದನ್ನು ನೋಡುವುದರ ಜೊತೆಗೆ ಹಸ್ತಪ್ರತಿ ಚಿತ್ರಗಳ ತಂತ್ರ, ಶೈಲಿ, ಕಾಲದಿಂದ ಕಾಲಕ್ಕೆ ಬದಲಾಗಿ ಬೆಳೆದು ಬಂದ ಬಗೆಯ ಹಸ್ತಪ್ರತಿ ಚಿತ್ರಗಳನ್ನು ತೋರಿಸುವ ಪ್ರಯತ್ನ ಮಾಡಿದ್ದಾರೆ.

ಉಮೇಶ ಹಡಗಲಿಯವರ 'ಕನ್ನಡ ಸಂಸ್ಕೃತಿ ಮತ್ತು ಗ್ರಂಥ ಸಂರಕ್ಷಣಾ ಪದ್ಧತಿಗಳು' ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ್ದಾರೆ. ಕನ್ನಡ ಸಂಸ್ಕೃತಿಯನ್ನು ಗ್ರಂಥ ಸಂರಕ್ಷಣೆ ಹಾಗೂ ಸಂವರ್ದನೆಯನ್ನು ಮಾಡಿಕೊಂಡು ಬಂದ ವಿವಿಧ ನೆಲೆಗಳನ್ನು ಪರಿಭಾವಿಸುವುದು ಈ ಪ್ರಬಂಧದ ವೈಶಿಷ್ಟವಾಗಿದೆ. ಸಂರಕ್ಷಣೆಯ ಬಗ್ಗೆ ನಡೆದ ಅಧ್ಯಯನಗಳ ಬರಹದ ನಂತರದ ನೆಲೆಗಳನ್ನು ಕುರಿತು ಸಿಗುತ್ತದೆ. ಆದರೆ ಬರಹ ಪೂರ್ವದಲ್ಲಿ ಬರಹದ ಸಾಧನೆಗಳನ್ನೂ ತಯಾರಿಸಿಕೊಳ್ಳುವ ವಿಧಾನದಲ್ಲಿಯೇ ಬಹುಕಾಲೀಕ ಬಾಳಿಕೆ ಬರುವ ತಾಂತ್ರಿಕತೆಯನ್ನು ನಮ್ಮ ಸಮುದಾಯಗಳು ಒಳಗೊಂಡಿದ್ದು, ಅಂಥ ನೆಲೆಗಳ ಶೋಧ ಈ ಪ್ರಬಂಧದ ವಿಶೇಷತೆಯಾಗಿದೆ.

ಬೋರೇಶಿ ಈ. 'ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಸಾಂಸ್ಕೃತಿಕ ಅನನ್ಯತೆ' ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ್ದಾರೆ. ಹಸ್ತಪ್ರತಿ ಅಧ್ಯಯನ ಎಂಬುದು ಹಸ್ತಪ್ರತಿಗಳಲ್ಲಿರುವ ಅಪಾರ ವಿಷಯ ಸಾಮಾಗ್ರಿಗಳನ್ನು ವಿಶೇಷ ಮಾಹಿತಿಗಳನ್ನು ಹೊರತೆಗೆದು ಅವುಗಳ ಆಧುನಿಕ ಚಿಂತನೆಗಳ ಒಳಪಡಿಸಲಾಗಿದೆ. ಅಲ್ಲದೆ ಪ್ರಾಚೀನ ನಂಬಿಕೆ, ವಿಚಾರ ಮೌಲ್ಯಗಳ ಬಗೆಗೆ ಗಮನ ಸೆಳೆಯುವುದು ಇಂದಿನ ಸಂದರ್ಭದಲ್ಲಿ ಪಾರಂಪರಿಕವಾದಂತಹ ಸಾಹಿತ್ಯ ಸಂಸ್ಕೃತಿಯ ಮೌಲ್ಯಗಳನ್ನು ಮಹತ್ವ ದಾಖಲಿಸುವುದು ಹಾಗೂ ಸಾಮಾಜಿಕ ವಿಧಿ–ವಿಧಾನಗಳನ್ನು ಗ್ರಹಿಸುವುದು ಹಾಗೂ ಇಂದಿನ ಸಂದರ್ಭದಲ್ಲಿ ಪಾರಂಪರಿಕವಾದಂತಹ ಸಾಹಿತ್ಯ ಸಂಸ್ಕೃತಿಯ ಮೌಲ್ಯಗಳನ್ನು ಮಹತ್ವಗ್ಳನ್ನು ದಾಖಲಿಸುವುದು ಹಾಗೂ ಸಾಮಾಜಿಕ ವಿಧಿ–ವಿಧಾನಗಳನ್ನು ಗ್ರಹಿಸುವುದು ಹಾಗೂ ಇಂದಿನ ಸಮಾಜಕ್ಕೆ ಪರಿಚಯವಿಲ್ಲದ ಹಿಂದಿನವರ ಅಪೂರ್ವ ಜ್ಞನ ಕ್ಷೇತ್ರಗಳ ಗ್ರಹಿಸುವುದು ಹಾಗೂ ಇಂದಿನ ಸಮಾಜಕ್ಕೆ ಪರಿಚಯವಿಲ್ಲದ ಅಪೂರ್ವ ಜ್ಞಾನ ಕ್ಷೇತ್ರಗಳ ಮಾಹಿತಿಗಳನ್ನು ಸಂಗ್ರಹಿಸಿರುವುದರ ಚಿತ್ರದುರ್ಗ ಪರಿಸರದ ಅನನ್ಯತೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಚಿತ್ರದುರ್ಗ ಪರಿಸರದಲ್ಲಿ ಇರುವ ಹಲವು ಬಗೆಯ ಹಸ್ತಪ್ರತಿಗಳು ಜನ ಬದುಕಿನ ಪ್ರಗತಿಯ ಚಲನೆಯನ್ನು ಸೂಚಿಸುವಂಥವು. ಇಂತಹ ವೈವಿಧ್ಯಮಯ ಸಾಂಸ್ಕೃತಿಕ ಸಂಪತ್ತನ್ನು ತನ್ನ ಗರ್ಭದಲ್ಲಿ ಹುದುಗಿಸಿಕೊಂಡಿರುವ ಈ ಪರಿಸರದ ಹಸ್ತಪ್ರತಿಗಳ ವಿವಿಧ ಆಯಾಮಗಳನ್ನು ಗುರುತಿಸಲಾಗಿದೆ.

ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು, ಸಾಂಸ್ಕೃತಿಕ ಅನನ್ಯತೆ ಎಂಬ ವಿಷಯದಿಂದ ಹಸ್ತಪ್ರತಿ ನೆಲೆಗಳು ಚರಿತ್ರೆ, ಸಮಾಜಿಕತೆ, ಸಾಹಿತ್ಯಕತೆ, ಧಾರ್ಮಿಕತೆ ಮತ್ತು ಹಸ್ತಪ್ರತಿಗಳ ಪರಿಚಲನೆ ಅಂಶಗಳ ಮೂಲಕ ಒಟ್ಟಾರೆ ಸಾಂಸ್ಕೃತಿಕ ಸಂಗತಿಗಳನ್ನು ಹೊರತೆಗೆದು ಚರ್ಚಿಸುವ ಪ್ರಯತ್ನ ಈ ಪ್ರಬಂಧದಲ್ಲಿ ಮಾಡಲಾಗಿದೆ.

ಬಾಣದ ಮಂಜುನಾಥ ಅವರ 'ಕರ್ನಾಟಕ ಹಸ್ತಪ್ರತಿ ಭಂಡಾರಗಳು: ಪರಂಪರೆ ಮತ್ತು ವರ್ತಮಾನ' ಈ ಅಧ್ಯಯನದಲ್ಲಿ ಕರ್ನಾಟಕ ಹಸ್ತಪ್ರತಿ ಭಂಡಾರಗಳು. ಪರಂಪರೆ,

ವರ್ತಮಾನ ಪ್ರಾಚೀನ ಕೈಬರಹದ ಗ್ರಂಥಗಳ ಸಂಪಾದನ ಕಾರ್ಯಕ್ಕೆ ವಿದ್ವಾಂಸರ ವಿಶೇಷ ಅಧ್ಯಯನದ ಅನುಕೂಲಕ್ಕಾಗಿ ಹಸ್ತಪ್ರತಿಗಳು ಸುಲಭವಾಗಿ ದೊರೆಯುವಂತೆ ಇರಬೇಕಾದುದ್ದು ಅತ್ಯಂತ ಅವಶ್ಯಕ. ಇದು ಸಾಧ್ಯವಾಗಬೇಕಾದರೆ ಪ್ರಮುಖ ಅಧ್ಯಯನ ಯೋಗ್ಯ ಸ್ಥಳದಲ್ಲಿ ಹಸ್ತಪ್ರತಿ ಭಂಡಾರಗಳ ಸ್ಥಾಪನೆಗೆ ಅವಕಾಶ ಕಲ್ಪಿಸುವುದರ ಮೂಲಕ ಹಲವು ಹಸ್ತಪ್ರತಿ ಭಂಡಾರಗಳ ವಿಷಯ-ವಿಚಾರ ವಿನಿಮಯಗಳಿಗೆ ಅನುವು ಮಾಡಿಕೊಟ್ಟಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಹಸ್ತಪ್ರತಿ ಪ್ರತ್ಯೇಕ ಇಲಾಖೆಯನ್ನು ಪ್ರಾರಂಭಿಸಬೇಕಾದ ಅವಶ್ಯಕತೆಯಿದೆ ಎಂಬುದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಬಸಮ್ಮ ಶಿಗ್ಗಾವಿ ಅವರ 'ಕನ್ನಡ ಬಯಲಾಟದ ಹಸ್ತಪ್ರತಿಗಳು ಸರ್ವೆಕ್ಷಣೆ ಮತ್ತು ಅಧ್ಯಯನ' ಎಂಬ ಅಧ್ಯಯನದಲ್ಲಿ ಬಯಲಾಟದ ಹಸ್ತಪ್ರತಿಗಳನ್ನು ಕುರಿತು ನಾಲ್ಕು ನೆಲೆಗಳಲ್ಲಿ ಅಧ್ಯಯನ ಮಾಡಬೇಕಿದೆ. ಬಹುತೇಕ ಜಾನಪದ ಸಾಹಿತ್ಯ ಪ್ರಕಾರಕ್ಕೆ ಕವಿಗಳ ಉಲ್ಲೇಖವಿರುವುದಿಲ್ಲ. ಒಬ್ಬ ವ್ಯಕ್ತಿಯ ರಚನೆ ಸಮೂಹದ ಒಡೆತನದಲ್ಲಿ ಬೆಳೆದು ರಚನಕಾರ ಗೌಣವಾಗುವುದು ಸಹಜವಾಗಿದ್ದು, ರಾಮಾಯಣ, ಮಹಾಭಾರತ ಮತ್ತು ದಿನನಿತ್ಯದ ಬದುಕಿನ ಸಮಸ್ಯೆಗಳನ್ನು ತೆಗೆದುಕೊಂಡು ಬಯಲಾಟಗಳನ್ನು ರಚಿಸಿದ ಕವಿಗಳು ಕಂಡುಬರುತ್ತಾರೆ. ಅಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾವಂತರ ಕೆಲ ಜನರು ಮಹಾಕಾವ್ಯಗಳ ವಾಚನಾಭಿರುಚಿಯಿಂದ ಪ್ರೇರಣೆ ಹೊಂದಿರುವ ಅವರೊಳಗಿನ ಒಂದು ಸನ್ನಿವೇಶವನ್ನು ಬಯಲಾಟವನ್ನಾಗಿ ಬರೆದಿರುವ ನಿದರ್ಶನಗಳಿವೆ. ಹೀಗಾಗಿ ಈ ಸಾಹಿತ್ಯ ಪ್ರಕಾರದ ಕವಿಗಳ ಕುರಿತು ಅಧ್ಯಯನ ಮಾಡಿರು ವುದನ್ನು ಗಮನಿಸಬಹುದು. ಈ ಅಧ್ಯಯನದಲ್ಲಿ ಜನಪದ ಕವಿ ಚರಿತ್ರೆಯನ್ನು ಅಲಕ್ಷಿಸು ವಂತಿಲ್ಲ. ಹೀಗಾಗಿ ಬಯಲಾಟದ ಕವಿಗಳ ಸಂರಕ್ಷಿಸುವ ಕೆಸಲವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಆಯ್.ಎನ್. ಹುರುಳಿ ಅವರ 'ಕನ್ನಡದಲ್ಲಿ ವೈದ್ಯಶಾಸ್ತ್ರದ ಹಸ್ತಪ್ರತಿಗಳು: ಸಾಂಸ್ಕೃತಿಕ ನಿರ್ವಚನ' ಎಂಬ ಅಧ್ಯಯನದಲ್ಲಿ ಕನ್ನಡ ವೈದ್ಯಶಾಸ್ತ್ರವು ಸಮುದ್ರದ ಆಳ ವಿಸ್ತಾರಗಳಂತೆ ಗಂಭೀರವಾಗಿದೆ ಮತ್ತು ವ್ಯಾಪಕವಾಗಿದೆ. ಇದನ್ನು ತಿಳಿಯಬೇಕಾದರೆ, ಪ್ರತ್ಯಕ್ಷ ದರ್ಶನ ಅವಶ್ಯಕ. ಈ ಪ್ರತ್ಯಕ್ಷ ದರ್ಶನದ ಮೂಲ ನೆಲೆಗಳು ಹಸ್ತಪ್ರತಿಗಳು ಇವು ಭಾರತೀಯ ಆರ್ಯುವೇದ ಶಾಸ್ತ್ರದ ಮೂಲ ಸಿದ್ಧಾಂತ ದ್ರವ್ಯಗಳ ರಸ, ವೀರ್ಯ, ಉಪಾಕ ಉಪಯುಕ್ತ ಮನೆಮದ್ದುಗಳ ದ್ರವ್ಯಗುಣ, ಔಷಧ ತಯಾರಿಕೆ, ಹಾಗೂ ರೋಗ ಕಾರಣಗಳು ರೋಗ ಲಕ್ಷಣ ರೋಗ ಪರೀಕ್ಷೆ ಔಷದೋಪಚಾರ ಪಥ್ಯಕ್ರಮ ಮುಂತಾದ ಚಿಕಿತ್ಸೆಯ ಮೂಲ ಸೂತ್ರಗಳನ್ನು ಒಳಗೊಂಡಿರುತ್ತದೆ. ವೈದ್ಯಶಾಸ್ತ್ರದ ಹಸ್ತಪ್ರತಿಗಳು ಮಾನವ ಸ್ವಾಸ್ಥ್ಯ ಸಂರಕ್ಷಣೆಯ ಜೊತೆಗೆ ಆಧ್ಯಾತ್ಮಿಕ ಮಾನಸಿಕ, ಶಾರೀರಿಕ ಹಾಗೂ ಸಾಮಾಜಿಕ ಅಂಶಗಳನ್ನು ಒಳಗೊಂಡಿರುತ್ತದೆ.

ಇಂಥ ಹಸ್ತಪ್ರತಿಗಳಲ್ಲಿರುವ ವೈದ್ಯಶಾಸ್ತ್ರವು ಕೇವಲ ಶಾಸ್ತ್ರವಾಗಿ ಉಳಿಯದೇ ಪ್ರಯೋಗಾಚರಣೆಯಲ್ಲಿ ನಡೆದುಬಂದು ಇಂದು ವಿಜ್ಞಾನವು ಆಗಿದೆ. ಸಂಸ್ಕೃತಿ ಮುಖಿ ಜನಮುಖಿ, ಸಮಾಜಮುಖಿ ಆಯಾಮ ಪಡೆದಿರುವ ಕನ್ನಡ ವೈದ್ಯಶಾಸ್ತ್ರ ಹಸ್ತಪ್ರತಿಗಳಲ್ಲಿರುವ ಸಸ್ಯ, ಔಷಧದ ಅರಿವು ಹೊಸ ವೈದ್ಯಲೋಕಕ್ಕೆ ಚಲನಶಕ್ತಿಯಾಗಬೇಕೆನ್ನುವುದು ಮತ್ತು ಪ್ರಾಚೀನ ಕಾಲದ ವೈದ್ಯಕೀಯ ಪದ್ಧತಿ ಹೇಗಿತ್ತು ಎಂದು ಪರಿಚಯಿಸಿ ಅದನ್ನೇ ಹೊಸ ವೈದ್ಯಕೀಯ ಪದ್ಧತಿಯಲ್ಲಿ ಯಾವ ರೀತಿ ಅಭಿವೃದ್ಧಿ ಪಡಿಸಲಾಗಿದೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಹಾಗೂ ಪ್ರಾಚೀನ ಕಾಲದಲ್ಲಿ ಔಷಧಿಗಳು ಮಾನವ ದೇಹದಲ್ಲಿ ನೈಸರ್ಗಿಕ ಪ್ರತಿಭಂದಕ ಶಕ್ತಿಯನ್ನು ನೀಡುತ್ತಿದ್ದವು. ಈ ದೇಶಿಯ ಜ್ಞಾನ ಆಧುನಿಕ ರೀತಿ ಪೂರ್ಣ ಬೆಳಕು ಕಾಣಬೇಕೆಂಬುದನ್ನು ಈ ಅಧ್ಯಯನ ದಲ್ಲಿ ಚರ್ಚಿಸಲಾಗಿದೆ.

ಅಕ್ಕಮಹಾದೇವಿ ರೊಟ್ಟಿಮಠ ಅವರ 'ಕನ್ನಡ ಹಸ್ತಪ್ರತಿ ಪ್ರಶಸ್ತಿಗಳು ಒಂದು ಅಧ್ಯಯನ' ಎಂಬ ಮಹಾಪ್ರಬಂಧದಲ್ಲಿ ಕನ್ನಡ ಹಸ್ತಪ್ರತಿಗಳಲ್ಲಿ ಕಂಡು ಬರುವ ಭೌಗೋಳಿಕ ಹಿನ್ನೆಲೆ ಕವಿ ಕೃತಿ ಸಂಪೂರ್ಣ ಮಾಹಿತಿಯನ್ನು ಈ ಅಧ್ಯಯನದಲ್ಲಿ ಸಾಂಸ್ಕೃತಿಕ ಅಧ್ಯಯನವಾಗಿ ಚರ್ಚಿಸಿದ್ದಾರೆ.

ರಂಗಸ್ವಾಮಿ ಬಿ.ಟಿ. ಅವರು ಪಿಎಚ್.ಡಿ ಪದವಿಗಾಗಿ ೨೦೦೩ರಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ 'ಕನ್ನಡ ಗ್ರಂಥ ಸಂಪಾದನೆ ಒಂದು ಅಧ್ಯಯನ' ಎಂಬ ಮಹಾಪ್ರಬಂಧದಲ್ಲಿ ಕನ್ನಡ ಗ್ರಂಥಸಂಪಾದನೆಯ ಹಿನ್ನೆಲೆ ಮಹತ್ವ, ಹಸ್ತಪ್ರತಿಗಳ ಮತ್ತು ಸಂರಕ್ಷಣೆ ಹಸ್ತಪ್ರತಿಯ ಪರಂಪರೆ ಕುರಿತು ಅಧ್ಯಾಯ ಒಂದರಲ್ಲಿ ಚರ್ಚಿಸಿದ್ದಾರೆ. ಅಧ್ಯಾಯ ಎರಡರಲ್ಲಿ ಗ್ರಂಥ ಸಂಪಾದನೆ ನಡೆದು ಬಂದ ದಾರಿ ಅಂದರೆ ಪಾಶ್ಚಾತ್ಯ ಸಾಹಿತ್ಯದಲ್ಲಿ ಗ್ರಂಥ ಸಂಪಾದನೆ ಭಾರತೀಯ ಸಾಹಿತ್ಯದಲ್ಲಿ ಕನ್ನಡ ಗ್ರಂಥ ಸಂಪಾದನೆ ಬೆಳೆದು ಬಂದ ಬಗೆಯನ್ನು ವಿಶ್ಲೇಷಣೆ ಮಾಡಿದ್ದಾರೆ.

ಕಲ್ಲಯ್ಯ ಎಸ್. ಹಿರೇಮಠ, ೨೦೦೯, 'ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ' ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದು, ಈ ಅಧ್ಯಯನದಲ್ಲಿ ಅಶ್ವಶಾಸ್ತ್ರ ಕುರಿತು ಸಮಗ್ರವಾಗಿ ತುಲನಾತ್ಮಕವಾಗಿ ವಿಶ್ಲೇಷಿಸಿ ಅದರ ಜೊತೆಗೆ ಒಂದು ಪ್ರಾಣಿಯ ಸುತ್ತ ಹೆಣೆದುಕೊಂಡಿರುವ ನಂಬಿಕೆ ಆಚರಣೆ ವದಂತಿ ಉಪಯುಕ್ತತೆ ಮಹತ್ವ ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಪರ್ಸುನಾಯ್ಕ ಅವರ 'ಕನ್ನಡದಲ್ಲಿ ಗಜಶಾಸ್ತ್ರ' ಮಹಾಪ್ರಬಂಧದಲ್ಲಿ ಕನ್ನಡದಲ್ಲಿ ರಚನೆಗೊಂಡಿರುವ ಗಜಶಾಸ್ತ್ರದ ಉಪಲಬ್ಧ ಕೃತಿಗಳನ್ನು ಆಧರಿಸಿ ಅಧ್ಯಯನ ಮಾಡಲಾಗಿದೆ.

ಕನ್ನಡ ಸಾಹಿತ್ಯಕ್ಕೆ ಹೊರತಾದ ಇತರ ಭಾಷೆಗಳ ಕೃತಿಯನ್ನು ಈ ಅಧ್ಯಯನ ವ್ಯಾಪ್ತಿಗೆ ಒಳಪಡಿಸಿರುವುದಿಲ್ಲ. ಆದರೆ ಗಜಶಾಸ್ತ್ರ ಕುರಿತಾಗಿ ಸಮಗ್ರ ಅಧ್ಯಯನವನ್ನು ಮಾಡಿರುವುದನ್ನು ಗಮನಿಸಬಹುದು.

ಮಂಜುಳಾ ಬಿ. ಅವರ 'ಸೂಪಶಾಸ್ತ್ರ ಒಂದು ಅಧ್ಯಯನ', ಕನ್ನಡದಲ್ಲಿ ಪ್ರಸ್ತಾಪಗೊಂಡಿರುವ ಸೂಪದ ವಿಚಾರಗಳನ್ನೆಲ್ಲ ಒಂದೆಡೆ ಕಲೆ ಹಾಕಿ ವಿಶ್ಲೇಷಣೆಗೆ ಒಳಪಡಿಸಿರುವುದು ಈ ಪ್ರಬಂಧದ ವಿಶಿಷ್ಟತೆಯಾಗಿದೆ.

ವಿರೂಪಾಕ್ಷಿ ಅವರ 'ಕನ್ನಡ ಕೃಷಿಶಾಸ್ತ್ರ ಸಾಹಿತ್ಯ' ಎಂಬ ಪ್ರಬಂಧದಲ್ಲಿ ನಮ್ಮ ದೇಶಿ ಜ್ಞಾನ, ಕೃಷಿ ಸಂಸ್ಕೃತಿ ಕುರಿತ ಕೃತಿಗಳ ಬಗ್ಗೆ ಚರ್ಚಿಸಿರುವುದನ್ನು ಕಾಣಬಹುದು.

ಪರವ್ವಗೋಳ ಕೆಂಪಣ್ಣ ಶಿವಲಿಂಗಪ್ಪ 'ಬೆಳಗಾವಿ ಪರಸರದ ಹಸ್ತಪ್ರತಿಗಳು: ಸಾಂಸ್ಕೃತಿಕ ಅನನ್ಯತೆ'. ಮಹಾಪ್ರಬಂಧವು ಬೆಳಗಾವಿ ಪರಿಸರದ ಹಸ್ತಪ್ರತಿಗಳ ವೈವಿಧ್ಯಮಯ ಮಗ್ಗಲುಗಳನ್ನು ಕುರಿತು ವಿಶ್ಲೇಷಿಸಿಸುವ ಹಸ್ತಪ್ರತಿಗಳ ವಿವರ, ಅವುಗಳ ಸಂಖ್ಯೆ ಮೊದಲಾದವುಗಳನ್ನು ಗುರುತಿಸಿದ್ದಾರೆ. ವ್ಯಕ್ತಿ ಒಡೆತನ, ಧಾರ್ಮಿಕ ಸಂಸ್ಥೆಗಳ ಒಡೆತನದಲ್ಲಿರುವ ಹಸ್ತಪ್ರತಿಗಳ ವಿವರ ಸಂಗ್ರಹಿಸುವುದು, ಅಪ್ರಕಟಿತ ಹಸ್ತಪ್ರತಿಗಳನ್ನು ಗುರುತಿಸುವುದು, ಮೇಲಾಗಿ ಹಸ್ತಪ್ರತಿಗಳ ಸಾಂಸ್ಕೃತಿಕ ಅನನ್ಯತೆಯನ್ನು ಸಾಮಾಜಿಕ, ಸಾಹಿತ್ಯ, ಧಾರ್ಮಿಕ ಚಾರಿತ್ರಿಕ ನೆಲೆಗಳಲ್ಲಿ ಚರ್ಚಿಸಿದ್ದಾರೆ.

ಗೀತಾ ಸಿ. 'ಕನ್ನಡ ಗ್ರಂಥ ಸಂಪಾದನೆಯಲ್ಲಿ ಮಹಿಳಾ ಪ್ರತಿನಿಧೀಕರಣ' ಮಹಾಪ್ರಬಂಧವು ಕನ್ನಡ ಗ್ರಂಥ ಸಂಪಾದನೆ ಕ್ಷೇತ್ರದಲ್ಲಿ ಮಹಿಳಾ ಪ್ರತೀನಿಧಿಕರಣ ಕುರಿತು ಮತ್ತು ಜ್ಞಾನದ ಸ್ವರೂಪದ ಕುರಿತು ಚರ್ಚಿಸಿದ್ದು, ಆಧುನಿಕ ಪೂರ್ವದಲ್ಲಿ ಹಸ್ತಪ್ರತಿ ಲಿಪಿಕರಣ ಪ್ರತಿಕರಣ, ಪ್ರಸರಣ ಕ್ರಿಯೆಯಲ್ಲಿ ಪ್ರತ್ಯಕ್ಷವಾಗಿ ಹಾಗು ಪರೋಕ್ಷವಾಗಿ ತೊಡಗಿಕೊಂಡ ಮಹಿಳೆಯರ ಮೂಲಕ ಕನ್ನಡ ಗ್ರಂಥ ಸಂಪಾದ ಅರಿರುವುದನ್ನು ಚರ್ಚಿಸಿದ್ದಾರೆ. ಪ್ರಾಚೀ ಹಾಗೂ ಆಧುನಿಕ ಕನ್ನಡ ಗ್ರಂಥ ಸಂಪಾದನೆಯ ಪರಿಷ್ಕರಣ ಕಾರ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ಮತ್ತು ಅಂಶಿಕವಾಗಿ ತೊಡಗಿಸಿಕೊಂಡ ಮಹಿಳೆಯರು ಸಂಪಾದಿಸಿರುವ ಕನ್ನಡ ಕೃತಿಗಳ ವೈಧಾನಿಕತೆಯನ್ನು ಗುರುತಿಸುವುದು, ಹಾಗೆಯೇ ಸಮಕಾಲೀನ ಸಂದರ್ಭದಲ್ಲಿ ವಿವಿಧ ಜ್ಞಾನ ಶಾಖೆಗಳಲ್ಲಿ ಸಂಪಾದನಕಾರ್ತಿಯರಾಗಿ ತೊಡಗಿದ ಮಹಿಳೆಯರ ಜ್ಞಾನದ ನೆಲೆಗಳನ್ನು ಕುರಿತು ಚರ್ಚಿಸಿದ್ದಾರೆ.

ಅಡಿಟಿಪ್ಪಣಿಗಳು

೧. ಉದೃತ, ಹಳ್ಳಿಕೇರಿ ಎಫ್.ಟಿ., ಕಂಠಪತ್ರ – ೪ (ಅಪ್ರಕಟಿತ)

೨. ಅದೇ.

ಅಧ್ಯಾಯ :   ಮೂರು

ಕನ್ನಡ ಹಸ್ತಪ್ರತಿಗಳ ಅಧ್ಯಯನದ ಪ್ರೇರಣೆ ಹಾಗೂ ಪ್ರಭಾವಗಳು

೩.೧ ದೇಶಿಯ ನೆಲೆಗಳು

೩.೨ ಅನ್ಯದೇಶಿ ನೆಲೆಗಳು

ಅಧ್ಯಾಯ : ಮೂರು

ಕನ್ನಡ ಹಸ್ತಪ್ರತಿಗಳ ಅಧ್ಯಯನದ ಪ್ರೇರಣೆ ಹಾಗೂ ಪ್ರಭಾವಗಳು

'ಕನ್ನಡದಲ್ಲಿ ಕೃತಿ ಪರಂಪರೆಯಷ್ಟೇ ಸಶಕ್ತವಾದದ್ದು ಪ್ರತಿ ಪರಂಪರೆ. ಕನ್ನಡದ ಕವಿ ಲಿಪಿಕಾರ ಇಂದು ನಮಗೆ ದಕ್ಕಿದ್ದು ಪ್ರತಿ ಪರಂಪರೆಯಿಂದಲೇ. ಕನ್ನಡದಲ್ಲಿ ಪಠ್ಯಗಳಿಲ್ಲ, ಪಠ್ಯಗಳ ಪರಂಪರೆಯಿದೆ. ಸಂಸ್ಕೃತದಲ್ಲಿ ಪಠ್ಯವನ್ನು ರಕ್ಷಿಸುವುದು ಒಂದು ತಂತ್ರವಾಗಿತ್ತು. ನಮ್ಮಂಥ ಭಾಷೆಗಳಿವೆಯಲ್ಲ ಅದಕ್ಕೆ ಈ ರೀತಿ ತಂತ್ರ ರೂಢಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಕಾರಣ ಕನ್ನಡ ಸಂಸ್ಕೃತಿಯಲ್ಲಿ ವಾಚನ, ಗಾಯನ, ಹಾಡು, ಪಠನ ಮೂಲಕ ಕೃತಿ ಮರುಹುಟ್ಟು ಪಡೆಯುತ್ತಾ ಬಂದಿದೆ. ಆ ಕಾರಣದಿಂದ ನಮ್ಮ ಕಾವ್ಯಗಳು ಪ್ರತೀಕರಣಗೊಳ್ಳಲು ಪ್ರಸಾರವಾಗಲು ತುಂಬಾ ಸಮಯ ತೆಗೆದುಕೊಂಡು ಒಂದು ಕೃತಿ ಒಂದು ಪ್ರತಿಯಾಗ ಬೇಕಾದರೆ ಅದಕ್ಕೊಂದು ಬಹುದೊಡ್ಡ ಕ್ರಿಯೆ ಇದೆ. ಮೊದಲ ಓಲೆ ಹೇಗೆ ಕಾಣಿಸುತ್ತೆ ಕೊನೆಯವರೆಗೂ ಹಾಗೆ ಕಾಣಿಸಬೇಕು, ಸುಮ್ನೆ ಅಲ್ಲ ನಮಗೆ ಬೇಕಾದಂತಹ ಮಸಿ ಇತ್ಯಾದಿ ಪ್ರಯೋಗ ಮಾಡಿಕೊಂಡು ಅದನ್ನು ಕೆಡದಂತೆ ರಕ್ಷಿಸುವ ತಂತ್ರಗಳನ್ನು ಹುಡುಕಿಕೊಂಡು ಬರೆಯಬೇಕಾಗಿತ್ತು. ಕನ್ನಡ ಸಂಸ್ಕೃತಿಯಲ್ಲಿ ಓದು ಬರಹ ಅಂದರೆ ಅದು ಯಾಂತ್ರಿಕವಲ್ಲ, ಸಾಂಸ್ಕೃತಿಕವಾದಂಥದ್ದು. ಈ ಅರ್ಥದಲ್ಲಿ ಹಸ್ತಪ್ರತಿ ಗ್ರಂಥ ಸಂಪಾದನೆಯ ಅಧ್ಯಯನದ ನೆಲೆಗಳು ಬದಲಾಗಬೇಕು, ಅವು ಪಠ್ಯದ ಚಲನಶೀಲತೆ, ಪಠ್ಯದ ಬಹುತ್ವವನ್ನು ಒಳಗೊಳ್ಳಬೇಕು. ಅಂದಾಗ ಕನ್ನಡ ಬೆಳೆಯುತ್ತದೆ. ಅಧ್ಯಯನಕ್ಕೆ ಹೊಸ ದಾರಿ ಸಿಗುತ್ತದೆ'.

ಕನ್ನಡ ಹಸ್ತಪ್ರತಿಗಳು ನೈಪುಣ್ಯತೆ ಹಾಗೂ ಜ್ಞಾನದ ಸಂಘಟಿತ ರೂಪಗಳು. ಅಕ್ಷರ ಪ್ರಧಾನ ಶೈಕ್ಷಣಿಕ ಚಿಂತನೆ ಹಾಗೂ ಅದರ ಘಟಕಗಳು ಇರಿಸಬಹುದಾದ ಜ್ಞಾನಶಿಸ್ತುಗಳ ಭೌತಿಕ ಹಾಗೂ ಭಾಷಿಕ ರೂಪಗಳ ಕುರಿತು ತಳೆದ ನಿಲುವುಗಳು ಮಾಡಿದ ವಿಶ್ಲೇಷಣೆಗಳು

ಏಕಪಕ್ಷೀಯವಾದಂಥವು. ಹಸ್ತಪ್ರತಿಗಳು ಮತ್ತು ಅದರ ಬಹುಮುಖಿ ಪಠ್ಯಗಳ ಕುರಿತು ಗ್ರಂಥ ಸಂಪಾದನ ಶಾಸ್ತ್ರವು ತಳೆದ ನಿಲುವು ಬಹುಮುಖಿ ಜ್ಞಾನದ ಕಲ್ಪನೆಯನ್ನೇ ನಿರಾಕರಿಸಿತು.

'ಹಲವು ಕನ್ನಡಂಗಳ್' 'ಪೊಂಸತಾಗಿ ರಚಿಸಿದೆ' ಎನ್ನುವ ನೆಲೆಗಳು ಕನ್ನಡ ಜ್ಞಾನದ ಧ್ವನಿರೂಪದ ನೆಲೆಗಳನ್ನು ಹೇಳುತ್ತವೆ. ಯಾಕೆಂದರೆ ಪ್ರತಿಯೊಂದು ತನ್ನ ಅಸ್ತಿತ್ವ ಹಾಗೂ ಅರ್ಥಕ್ಕಾಗಿ ತನ್ನ ಹಿಂದಿನ ಕೃತಿಗಳನ್ನು ಅವು ನಿರ್ಮಿಸಿದ ಸಾಹಿತ್ಯ ಪರಂಪರೆಯನ್ನು ಅವಲಂಬಿಸಿರುತ್ತದೆ. ಇಂಥ ಅಂಶವನ್ನು ಅಂತರ್ ಪಠ್ಯ ಸ್ವರೂಪ ಎಂದು(Inter textual) ಆಧುನಿಕ ವಿಮರ್ಶೆ ಕರೆಯುತ್ತದೆ. ಕಾರಣ ಸಾಹಿತ್ಯಕ ಸಾಮರ್ಥ್ಯ ಎನ್ನುವುದು ಕವಿ ಕೃತಿಕಾರ ಓದುಗ ಪ್ರತಿಕಾರ ಮತ್ತು ಕೇಳುಗ ಇವರಲ್ಲಿ ಅಂತಸ್ಥಗೊಂಡ ಸಮಾನ ಸಾಮರ್ಥ್ಯವಾಗಿದೆ. ಕೃತಿ ರಚನೆಯೆಂದರೆ ಇಂಥ ಕವಿ, ಕೃತಿಕಾರ, ಓದುಗ, ಲಿಪಿಕಾರ, ಹಸ್ತಪ್ರತಿ ತಯಾರಿಸುವ ಜನಸಮುದಾಯಗಳು ದಕ್ಕಿಸಿಕೊಂಡಿರುವ ಒಂದು ಸಾಂಸ್ಕೃತಿಕ ಪರಂಪರೆಯೊಂದಿಗೆ ಸಾಂಗತ್ಯವನ್ನು ಸಾಧಿಸುವುದು. ಪ್ರತಿ ರಚನೆಯೂ ತನ್ನ ಹಿಂದಿನ ಕೃತಿಯ ರಸವನ್ನು ಹೀರಿಕೊಂಡು, ರೂಪಾಂತರಿಸಿಕೊಂಡು ಸೃಜನಶೀಲವಾಗಿ ಬೆಳೆದು ಬಂದಿರುತ್ತದೆ'.೨

ಹೀಗಾಗಿ ಹಸ್ತಪ್ರತಿಗಳ ಪರಿಭಾಷೆಯಲ್ಲಿ ರಚನೆ ಎಂದರೆ ಕೇವಲ ಸಾಹಿತ್ಯ ಮಾತ್ರವಾಗಿರಲಿಲ್ಲ. ಹಸ್ತಪ್ರತಿ ನಿರ್ಮಾಣ ಕೆಲಸ ದೇವಾಲಯ ನಿರ್ಮಾಣದಷ್ಟೇ ಮಹತ್ವದ್ದಾಗಿತ್ತು. ಅದೊಂದು ಕಾಯಕದ ರೂಪ ಪಡೆದಂತೆ ಧಾರ್ಮಿಕ ಕೆಲಸವೂ ಆಗಿತ್ತು.

ನಮ್ಮ ನಾಡಿನ ಕಾವ್ಯ ಪುರಾಣಗಳ ನಿರೂಪಣ ವಿಧಾನಗಳನ್ನು ಗಮನಿಸಿದಾಗ ಸಹೃದಯ ಕೇಳುಗರಿಗಾಗಿಯೇ ಸಹೃದಯ ಕೇಳುಗರಿಂದಲೇ ರಚಿಸಲ್ಪಟ್ಟಂಥವು. ತನುಗುಣದ ಉನ್ನತದ ಅರಿವನ್ನು ಚೆನ್ನಾಗಿ ಬರೆದೋದಿ ನೋಡಿ ತಿಳಿದ ಬಹುಮುಖಿ ನೆಲೆಗಳನ್ನು ಹೇಳುತ್ತವೆ.

"ಕೇಳಿದ ಸುಖ ಕಿವಿಗೆ ಬೇಟವಾಯಿತು

ಕಿವಿಗಳ ಬೇಟ ಕಂಗಳ ಮುಂದೆ ಮೂರ್ತಿಗೊಂಡಿತ್ತು

*ಕಂಗಳ ಮುಂದೆ ಕಂಡ ಸುಖವು ಮನಕ್ಕೆ ವೇದ್ಯವಾಯಿತು"*೩

ಜ್ಞಾನೇಂದ್ರಿಯ ಮತ್ತು ಶ್ರವಣೇಂದ್ರಿಯಗಳಿಗೆ ಇದ್ದ ಮಹತ್ವ ಅರಿವಿಗೆ ಬರುತ್ತದೆ. ಅಂದರೆ ಜ್ಞಾನದ ಹೊರಮುಖ ಚಲನೆಗಿಂತ ಬಹುಮುಖ ಚಲನೆಗೆ ಒತ್ತು ಕಂಡುಬರುತ್ತದೆ. ಕನ್ನಡ ಕಾವ್ಯದ ಲಿಖಿತ ಹಾಗೂ ಮೌಖಿಕ ಗುಣದ ಅಖಂಡತೆಯನ್ನಿಲ್ಲಿ ಕಾಣುತ್ತೇವೆ.

ಲಿಖಿತ, ಜಾನಪದ, ಜನಪ್ರಿಯತೆ ಎಂದೆಲ್ಲ ಗುರುತಿಸಲ್ಪಡುವ ಪ್ರಕಾರಗಳು ಭಾರತೀಯ ಸಂಸ್ಕೃತಿಯ ಅಖಂಡಧಾರೆಯ ಪರಸ್ಪರ ಪ್ರತಿಕ್ರಿಯಾತ್ಮಕ ಸಂಬಂಧವನ್ನುಳ್ಳ ಭಿನ್ನ ಭಾಗಗಳು ಎನ್ನುವ ಎ.ಕೆ. ರಾಮನುಜನ್ ಅವರ ಮಾತು ಗಮನಾರ್ಹವಾದದ್ದು. ಪಂಪ ಹೇಳುವಂತೆ

ದೇಶಿಯೊಳ್ ಪುಗುವುದ್ ಪೊಕ್ಕು ಮಾರ್ಗದೊಳ್ ತಳ್ವುದು ಎನ್ನುವಂತಾಗಲೀ ಕುಮಾರವ್ಯಾಸ ಭಾರತ ಕನ್ನಡದ ಅನೇಕ ಮೌಖಿಕ ಮಹಾಭಾರತಗಳಿಗೆ ಪ್ರೇರಣೆ ನೀಡಿದ್ದಾಗಲಿ. ಈ ಪ್ರಕ್ರಿಯೆಯ ಭಾಗಗಳೇ ಭಾರತದ ಹಾಗೂ ಕರ್ನಾಟಕದ ಮೌಖಿಕ ಕಾವ್ಯಗಳೆಲ್ಲವೂ ಅನುಸೂಚಿತ ಜಾತಿ ಜನಾಂಗದಿಂದ ನಿರ್ಮಾಣಗೊಂಡಿದ್ದು ಹಾಗೂ ಹಸ್ತಪ್ರತಿಗಳ ನಿರ್ಮಾಣ ಹಾಗೂ ರಚನಕ್ರಿಯೆಗಳು ಇಂಥ ಕಸುಬುದಾರರ ವರ್ಗಗಳಿಂದ ನಡೆದಿದ್ದು ಕುತೂಹಲಕರವಾದದ್ದು. ಆದರೆ ಆಸ್ಥಾನ ಪಂಡಿತರ ಆಸಕ್ತಿ ಹಾಗೂ ಅಭಿರುಚಿಗಳು ಇಂಥ ಅಭಿವ್ಯಕ್ತಿಯ ರೂಪ ಹಾಗೂ ಉದ್ದೇಶವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿದ್ದವು. ವಸಾಹತು ಕಾಲದಲ್ಲಿ ನಡೆದ ಕ್ರಿಶ್ಚಿಯನ್ ಧರ್ಮಪ್ರಣೀತ ಸಂಕಲನ ಹಾಗೂ ಸಂಪಾದನೆ ಮಾದರಿಗಳು ಶುದ್ಧ ಹಾಗೂ ಪ್ರಮಾಣೀಕರಣದ ಹೆಸರಲ್ಲಿ ಕನ್ನಡ ಬಹುಮುಖಿ ಅಭಿವ್ಯಕ್ತಿ ಕ್ರಮವನ್ನು ಸವರಿ ಹಾಕಿದವು. ಧರ್ಮ ಹಾಗೂ ಪ್ರಭುತ್ವ ಕೇಂದ್ರೀತ ಧೋರಣೆಗಳು ಯಾವತ್ತು ಸೃಜನಶೀಲತೆಯ ಬಹು ಸಾಧ್ಯತೆಗಳನ್ನು ನಿರಾಕರಿಸುತ್ತವೆ.

ಕನ್ನಡ ಹಸ್ತಪ್ರತಿಗಳ ವಸ್ತು ಹಾಗೂ ವಿಷಯ ಸ್ವರೂಪವು ಏಕಮೂಲವಾದದ ಸ್ಪಷ್ಟ ನಿರಾಕರಣೆಯನ್ನು ಮಾಡುತ್ತದೆ. ಹಸ್ತಪ್ರತಿಯೊಡಲೊಳಗೆ ಕವಿ, ಗಮಕಿ, ಕಥೆಗಾರ, ತಾತ್ವಿಕ, ಧಾರ್ಮಿಕ, ಲೌಕಿಕ, ಸಾಧಕ, ಪೂಜಕ, ಓದುಗ, ಕೇಳುಗ, ಲಿಪಿಕಾರ, ಕುಶಲಕರ್ಮಿ ಹೀಗೆ ಅನೇಕರಿದ್ದಾರೆ. ಜಾತಿ, ಲಿಂಗ, ಶುದ್ಧ ಹಾಗೂ ಶ್ರೇಷ್ಠ ಎನ್ನುವ ವ್ಯಾಖ್ಯಾನಗಳನ್ನು ಮೀರಿದ ಮುಕ್ತತೆಯಿದೆ. ಬರವಣಿಗೆ ಹಾಗೂ ಗ್ರಂಥವನ್ನು ಅತಿಮಾನುಷ ಅಪೌರುಷೇಯ ಎಂದು ನಿಯಬದ್ಧಗೊಳಿಸಿದ ಧೋರಣೆಗಳನ್ನು ಇವು ಪ್ರಶ್ನಿಸುತ್ತವೆ. ಕೃತಿಯನ್ನು ಓದಿ ಅದರ ಪ್ರಯೋಜನ ಪಡೆಯುವ ಬದಲು ಅದನ್ನು ಪೂಜಿಸಿ ಅನುಸಂಧಾನದ ದಾರಿಗಳನ್ನು ದೂರ ಮಾಡಿದ ಸಂಗತಿಗಳತ್ತ ಹಸ್ತಪ್ರತಿಗಳು ಬೆಳಕು ಚೆಲ್ಲುತ್ತವೆ.

ಲಿಪಿನಿಷ್ಠ ಭಾಷಿಕ ವಿನ್ಯಾಸಗಳು ಪ್ರತಿಪಾದಿಸುವ ಅಧಿಕೃತ ಪಠ್ಯ ಅಥವಾ ಪ್ರಮಾಣೀಕರಣ ಎನ್ನುವುದೇ ತನ್ನ ಇರುವಿಕೆಯ ಅಗತ್ಯವನ್ನು ಒತ್ತಾಯ ಪೂರ್ವಕವಾಗಿ ಹೇರುವಂಥದ್ದು. ಇಂತ ಏಕತೆಯ ಹಂಬಲಗಳು ಬಹುಮುಖತೆಯ ನಿರಾಕರಣೆಗಳು ಮನುಷ್ಯನ ಬಹುಮುಖಿ ಚಿಂತನೆಗೆ ವಿರೋಧವಾದಂಥವು. ನಶ್ವರತೆಯನ್ನು ಸಾಮುದಾಯಿಕ ಗುಣವನ್ನು ಒಪ್ಪಿಕೊಳ್ಳದಂಥ ಅಹಂಕಾರದಿಂದ ಹುಟ್ಟಿದಂಥವು. ಇವು ಸಾಹಿತ್ಯ ಮತ್ತು ಸಂಸ್ಕೃತಿಯ ಹಿಂದಿನ ಲೋಕ ಗ್ರಹಿಕೆಯನ್ನು ನಿಯಂತ್ರಿಸುತ್ತ ಬಂದಿವೆ. ಎಲ್ಲವನ್ನು ಏಕಕ್ಕೆ ಎರಕ ಹೊಯ್ದು ಬ್ರಹ್ಮಕ್ಕೆ ಅರ್ಪಿಸುವ ವಿಕಲ್ಪದಿಂದ ಬಿಡುಗೊಳ್ಳಲು ಕನ್ನಡ ಪ್ರಜ್ಞೆ ಹವಣಿಸುತ್ತಲೇ ಬಂದಿದ್ದನ್ನು ಹಸ್ತಪ್ರತಿಗಳ ಅಧ್ಯಯನದಿಂದ ಅರಿಯಬಹುದಾಗಿದೆ.

'ವಸಾಹತುಶಾಹಿ ಆಧುನಿಕತೆ ಎಂದರೆ ಅದೊಂದು ನಿರ್ದಿಷ್ಟ ಬಗೆಯ ಅಭಿವೃದ್ಧಿಯ ಕಥನ. ನಿರ್ದಿಷ್ಟ ಬಗೆಯ ಜೀವನ ಕ್ರಮ. ಈ ನಿರ್ದಿಷ್ಟ ಮಾನ್ಯಗೊಳ್ಳುವುದು ಇನ್ನೊಂದು ಭಾಷೆ ಹಾಗೂ ಜೀವನ ಕ್ರಮಗಳನ್ನು ಅನ್ಯ ಎಂದು ವ್ಯಾಖ್ಯಾನಿಸುವಾಗ. ಕಾರಣ ಈ ವಸಾಹತುಶಾಹಿ ಭಾಷೆ ಮತ್ತು ಸಂಸ್ಕೃತಿಗಳು ವ್ಯಕ್ತಿ ನೆಲೆಯದಾಗಿದ್ದರೂ ಸಾಮುದಾಯಿಕ ಐಡೆಂಟಿಯ ಭಾಷೆ ಹಾಗೂ ಸಂಸ್ಕೃತಿಯಾಗಿ ರೂಪುಗೊಂಡವು. ಒಂದು ಭಾಷೆ, ಸಂಸ್ಕೃತಿ, ಪಠ್ಯ ವರ್ತನೆಗಳನ್ನು ನಿರ್ದಿಷ್ಟ ಗುರಿಗಳಾಗಿ ಸಂಗ್ರಹಿಸುವ ಹಾಗೂ ಅಧ್ಯಯನಿಸುವ ಹಿತಾಸಕ್ತಿಗಳ ಹಿಂದೆ ಒಂದು ಸಾಂಸ್ಕೃತಿಕ ರಾಜಕಾರಣ ಇರುತ್ತದೆ. ಅದು ಬಹುವಿಧವಾಗಿ ವ್ಯಕ್ತಿ ಹಾಗೂ ಸಮುದಾಯದ ಐಡೆಂಟಿಟಿ, ಪಾಲಿಟಿಕ್ಸ್ ಆಗಿ ಹೊರಹೊಮ್ಮಿದೆ. ಇದಕ್ಕೆ ಎರಡು ಆಯಾಮಗಳಿರುತ್ತವೆ. ಒಂದು ಸಾಂಸ್ಥಿಕ ಸ್ವರೂಪದ್ದು. ಅಂದರೆ ವಸಾಹತುಶಾಹಿ ಪ್ರಭುತ್ವ ತನ್ನದೇ ಆದ ಸಂಸ್ಥೆಗಳನ್ನು ಹೊಂದಿದ್ದು, ಆ ಮೂಲಕ 'ನೇಟಿವ್' ಅನ್ನು ನಿಯಂತ್ರಿಸಿ ಸಂಘಟಿಸುತ್ತದೆ. ಅಂಥ ಸಂಸ್ಥೆಗಳೆಂದರೆ ಕಾನೂನು, ಶಾಲೆ, ಕಾಲೇಜು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಆಡಳಿತಾತ್ಮಕ ವ್ಯವಸ್ಥೆಗಳನ್ನು ಹೆಸರಿಸಬಹುದು. ಎರಡನೆಯದು ಎಲ್ಲವನ್ನು ಸಮರ್ಥಿಸುವಂತಹ ಕಥನ ಕ್ರಮಗಳು. ಈ ಪ್ರಕ್ರಿಯೆ ಎನ್ಲೈಟ್‌ಮೆಂಟ್ ಐಡಿಯಾಲಾಜಿಗೆ ಸಂಬಂಧಿಸಿದ್ದಾಗಿ ಎಲ್ಲವನ್ನು ಏಕೀಕರಿಸುತ್ತಿರುತ್ತದೆ ಎನ್ನುವ ಡಾಮಿನಿಕ್ ಅವರ ಮಾತು ಇಲ್ಲಿ ಪ್ರಸ್ತುತವೆನಿಸುತ್ತದೆ'.[೪] ಅಂದರೆ ಯಾವುದೇ ಒಂದು ನಿರ್ದಿಷ್ಟ ಸಂಗತಿ ಸತ್ಯದ ಪ್ರಮಾಣವಾಗಿ ಸ್ವೀಕೃತವಾಗುವ ಮೂಲಕ ಸಾಂಸ್ಕೃತಿಕ ಚಲನಶೀಲತೆಯಿಂದ ಅನ್ಯವಾಗುಳಿಯುತ್ತದೆ. ವಸಾಹತು ಪ್ರಭುತ್ವಕ್ಕೆ ಯಾವುದು ಪ್ರಯೋಜನವೋ ಅದು ಜ್ಞಾನವಾಗಿ ಪರಿವರ್ತನೆಯಾಗುತ್ತದೆ. ಸ್ಥಳೀಯ ಜ್ಞಾನಪರಂಪರೆಗಳನ್ನು ಹೆಕ್ಕಿ ಸಂಗ್ರಹಿಸುವುದೆಂದರೆ, ಸಂಘಟಿಸುವುದು ಎಂದರೆ ಸ್ಥಳೀಯ ಜ್ಞಾನ ಪರಂಪರೆಗಳನ್ನು ಆಕ್ರಮಿಸುವುದು ಎಂದರ್ಥ. ಸ್ಥಳೀಯ ನುರಿತ ದ್ವಿಭಾಷಿಕ ಪಂಡಿತರನ್ನು ಬಳಸಿಕೊಂಡು ಬ್ರಿಟಿಷ್ ಆಡಳಿತಕ್ಕೆ ಅಗತ್ಯವಾದ ಜ್ಞಾನವನ್ನು ತಯಾರಿಸಿ ಕೊಳ್ಳುವುದು ಎಂದರ್ಥ. ಬ್ರಿಟಿಷರು ಪ್ರತಿಯೊಂದನ್ನು ವ್ಯವಹಾರ ಹಾಗೂ ವಸ್ತುವಿನ ರೂಪದಲ್ಲಿ ಪರಿಭಾವಿಸುತ್ತಿದ್ದರು. ೧೭೭೦ ಹಾಗೂ ೧೯೮೫ರ ಸುಮಾರಿಗೆ ಬ್ರಿಟಿಷರು ತಮ್ಮ ಆಡಳಿತಕ್ಕೆ ಪೂರಕವಾದ ವರ್ಣಾಕ್ಯೂಲರ್ ಭಾಷೆಗಳನ್ನು ಕಲಿಯಲಾರಂಭಿಸುತ್ತಾರೆ. ತಂತ್ರಗಾರಿಕೆಯನ್ನು ಹೂಡಿ ವ್ಯಾಕರಣ, ಅರ್ಥಕೋಶ ಸಿದ್ಧಾಂತಗಳ ತರಗತಿ ಪಠ್ಯಗಳು ಮತ್ತು ಅನುವಾದಗಳು ಶಾಸನ ಹಸ್ತಪ್ರತಿ ಸಂಗ್ರಹಣೆ ಕಾರ್ಯ ಆರಂಭಿಸುತ್ತಾರೆ. ಹೀಗೆ ಸ್ಥಳೀಯರನ್ನು ಬಳಸಿಕೊಂಡು ವಸಾಹತುಶಾಹಿಗೆ ಬಂದು ಐಡಿಯಾಲಾಜಿಕಲ್ ಪ್ರಾತಿನಿಧ್ಯ ನೀಡಿದವನು ಮಾಕ್ಸ್‌ಮುಲ್ಲರ್. ಈತನ ಐಡಿಯಾಲಾಜಿಯಿಂದ ಇಂದಿಗೂ ಹೊರಬರಲಾಗುತ್ತಿಲ್ಲ. ಹೀಗೆ ಉತ್ಪಾದಿತವಾದ ಜ್ಞಾನದ ಕೇಂದ್ರ ಎಂಪಿರಿಸಿಸಮ್ ಆಧರಿಸಿದ ಓರಿಯಂಟಲಿಸ್ಟ್ ವಿದ್ವತ್ತೇ ಆಗಿತ್ತು. ಈ ರೀತಿ ಬ್ರಿಟಿಷ್ ಆಡಳಿತಕ್ಕೆ ಬೇಕಾದ ನೇಟೀವ್ ಕಾನೂನನ್ನು ಓರಿಯಂಟಲಿಸಮ್

ಉತ್ಪತ್ತಿ ಮಾಡುತ್ತದೆ. 'ಈ ಎಂಪಿರಿಕಲ್ ಧೋರಣೆಯು ಪಠ್ಯ ಅಥವಾ ದೇಸೀ ಸಾಮಾಗ್ರಿಗಳನ್ನು ಕಾಪಾಡಬೇಕಾದ, ಒಂದು ಮೂಲವನ್ನು(Pur-tex) ಹೊಂದಿರಬೇಕಾದ ಸಂಗತಿಗಳನ್ನಾಗಿ ಮಂಡಿಸುತ್ತದೆ. ಹೀಗೆ ತೆಗೆದ ಸಂಗತಿಗಳನ್ನು ಮೌಲಿಕರಿಸುವುದು, ಸಂಗೋಪನ ಮಾಡುವುದು ಹಾಗೂ ಪ್ರಕಟಿಸುವುದು ಈ ಪ್ರಕಟಿತ ರೂಪವೇ ಎಲ್ಲದಕ್ಕೂ ಸಾಕ್ಷಿಭೂತವಾಗುಳಿಯುತ್ತದೆ. ಇದರ ಪರಿಣಾಮ ಶುದ್ಧ, ಅಶುದ್ಧ, ಶ್ರೇಷ್ಠ, ಕನಿಷ್ಠ, ಅಧೀನ, ಯಜಮಾನ, ಮೂಲಪ್ರತಿ ಎನ್ನುವ ಭೇದ ಕಲ್ಪನೆಗಳ ಹುಟ್ಟು ಅರ್ಥವಾಗದ ಹಾಗೂ ಜನ ವಿರೋಧವಾದ ಪಠ್ಯ ಪ್ರಾಮಾಣಿಕ ಪಠ್ಯವೆಂದಾಗುತ್ತದೆ. ಅಂದರೆ ಯಾವುದು ಕಠಿಣವೋ ಯಾವುದು ವಿಶಿಷ್ಟವೋ ಅದು ಮೂಲ ಪಠ್ಯವೆಂದು ಮಾನ್ಯವಾಗುತ್ತದೆ. ಬಹುರೂಪಿ ಅಸಂಖ್ಯಾತ ಜೀವಂತ ಪಠ್ಯ ಹಾಗೂ ಪರಂಪರೆಗಳನ್ನು ಆಯ್ದುಕೊಂಡು ಪ್ರಮಾಣೀಕರಿಸಿ, ಅವುಗಳನ್ನು ಅಧಿಕೃತ ಪಠ್ಯಗಳನ್ನಾಗಿಸುತ್ತ ಬರಲಾಯಿತು'.[೫] 'ಒಟ್ಟಿಗೆ ಸ್ಥಳೀಯ ಸಂಸ್ಕೃತಿಗಳ ಮೇಲೆ ಹಿಡಿತ ಸಾಧಿಸುವ ಹಾಗೂ ಇಲ್ಲಿನವರ ಕಣ್ಣಲ್ಲಿ ಮಾನ್ಯತೆಗೊಳ್ಳುವ ಕೆಲಸವನ್ನು ಏಕಕಾಲದಲ್ಲೇ ಮಾಡಲಾಯಿತು. ಬ್ರಿಟಿಷ್ ಪ್ರಯತ್ನದ ಹಿತಾಸಕ್ತಿಯ ಮುಂದಾಗಿಯೇ ಭಾರತದಲ್ಲಿ ಎಲ್ಲ ರೀತಿಯ ಸಂಗ್ರಹ ಸಂಪಾದನ ವಿಶ್ಲೇಷಣ ಕಾರ್ಯಗಳು ನಡೆದುದು ಗಮನಾರ್ಹ'.[೬]

ಪ್ರೇರಣೆ ಹಾಗೂ ಪ್ರಭಾವಗಳು

ಮಿಷನರಿಗಳಿಗೆ ಕ್ರೈಸ್ತಧರ್ಮವನ್ನು ಅರಿಯುವುದಕ್ಕಾಗಿಯೂ ಬೈಬಲನ್ನು ಅನುವಾದಿಸುವುದಕ್ಕಾಗಿಯೂ ಪಾದ್ರಿಗಳಿಗೆ ಬಹುಭಾಷಿಕರಾಗುವ ಅಗತ್ಯವಿತ್ತು. ಇದು ಇವರಿಗೆ ಬಹುಭಾಷಿಕ ವಿದ್ವತ್ ದಕ್ಕಿಸಿತು. ಆಧುನಿಕ ಪೂರ್ವದ ಕನ್ನಡ ಸಾಹಿತ್ಯ ಅರಿಯಲು ಬಹುಭಾಷಿಕ ವಿದ್ವತ್ ಅಗತ್ಯವಿತ್ತು. ಈ ಬಹುಭಾಷಿಕತೆ ಬಹುರೂಪಿ ವಿದ್ವತ್ತಿಗೂ ಚಾಚುತ್ತದೆ. ನಿಘಂಟು, ವ್ಯಾಕರಣ, ಕಾವ್ಯ ಸಂಪಾದನೆ, ಕಾವ್ಯ ಅಧ್ಯಯನ, ಅನುವಾದ ತೌಲನಿಕ ಅಧ್ಯಯನ, ಶಾಸನ, ಸಾಹಿತ್ಯ, ಚರಿತ್ರೆ ಹೀಗೆ ಹಲವು ಕ್ಷೇತ್ರಗಳಲ್ಲಿ ಅವರು ದುಡಿದರು. ಇದನ್ನು ಪಾಂಡಿತ್ಯದ ಬಹುತ್ವ ಎನ್ನಬಹುದು. ಇಂತಹ ಬಹುತ್ವದ ಜ್ಞಾನ ಅಡಗಿರುವುದು ಹಸ್ತಪ್ರತಿಗಳಲ್ಲಿ ಎಂಬುದನ್ನು ಅರಿತ ವಿದ್ವಾಂಸರು ಹಸ್ತಪ್ರತಿ ಸಂಗ್ರಹ ಸಂಪಾದನೆಗೆ ಮುಂದಾದರು.

ಮತ ಪ್ರಚಾರಕ್ಕಾಗಿಯೇ ಬಂದವರು ಉಳಿದವರನ್ನು ಸೆಳೆಯಲು ಶಿಕ್ಷಣ ಕ್ಷೇತ್ರ ಪ್ರವೇಶಿಸಿ, ಪಾಶ್ಚಾತ್ಯ ನವವಿಚಾರಗಳ ಗಾಳಿಯನ್ನು ತಂದರು. ಇಲ್ಲಿನ ಜನರು ಭಾಷೆ ಕಲಿಯಲೆಂದು ಜನಜೀವನ ಅರಿಯಲೆಂದು ಕನ್ನಡ ವ್ಯಾಕರಣ ಶಬ್ದಕೋಶಗಳ ವೈಜ್ಞಾನಿಕ ರಚನೆ ಆರಂಭ ಮಾಡಿದರು. ಇಲ್ಲಿನ ಧರ್ಮ ಸಂಸ್ಕೃತಿಗಳನ್ನು ಚೆನ್ನಾಗಿ ಅರಿಯಲು ಅವುಗಳ ಅಧ್ಯಯನ ನಡೆಸಿ, ಕನ್ನಡ ಪ್ರಾಚೀನ ಗ್ರಂಥಗಳ ಸಂಪಾದನೆ, ಪ್ರಕಟಣೆಗೆ ಮುಂದಾದರು.

ಈ ಕಾರಣದಿಂದ ಹಸ್ತಪ್ರತಿಗಳ ಅಧ್ಯಯನಕ್ಕೆ ಪ್ರೇರಣೆ ಸಿಕ್ಕಿತು. ಇಲ್ಲಿನ ಭಾಷೆ, ಕಲೆ ಸಂಸ್ಕೃತಿ ಸಾಹಿತ್ಯ ಭಾಷೆಗಳ ಅರಿಯುವ ನಿಟ್ಟಿನಲ್ಲಿ ಸ್ಥಳೀಯ ಚರಿತ್ರೆಯನ್ನು ತಿಳಿಯಲು ಮುಂದಾದ ಕಾರಣ ಈ ಸಾಹಿತ್ಯ ಹಸ್ತಪ್ರತಿಗಳಲ್ಲಿ ಅಡಗಿದೆಯೆಂಬುದನ್ನು ಅರಿತ ವಿದ್ವಾಂಸರು ಹಸ್ತಪ್ರತಿಗಳ ಸಂಗ್ರಹ ಸಂಪಾದನೆ ಮಾಡಲು ತೊಡಗಿದರು. ಹಸ್ತಪ್ರತಿಗಳ ಅಧ್ಯಯನದ ಜರೂರು ಭಾರತೀಯರಿಗಿಂತ ಬ್ರಿಟಿಷರಿಗೆ ಮುಖ್ಯವಾಗಿತ್ತು. ಸ್ಥಳೀಯ ಚರಿತ್ರೆಯ ಅರಿವು ಆ ಮೂಲಕ ಹಸ್ತಪ್ರತಿಗಳಂತಹ ಸಾಂಸ್ಕೃತಿಕ ಆಕೃತಿಗಳನ್ನು ವಸ್ತುನಿಷ್ಠಿಕರಿಸುವ ಮೂಲಕ ಜನರ ನಡಾವಳಿ ಹಾಗೂ ಸಂಪ್ರದಾಯಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ನಿಯಂತ್ರಿಸುವ ಕೆಲಸ ಮಾಡಲಾಯಿತು. ಆ ಮೂಲಕ ಜನಗಳನ್ನು ಆಳಲು ಬೇಕಾದಂತಹ ಸಂಗತಿಗಳನ್ನು ಕ್ರೋಡೀಕರಿಸಲು ಸಾಧನಗಳನ್ನಾಗಿಸಿ ಕೊಳ್ಳಲಾಯಿತು. ಪುರಾತನ ವಿವೇಕವನ್ನು ಶೋಧಿಸಿ ವರ್ಗೀಕರಿಸಿ ಶ್ರೇಣೀಕರಿಸಿ ಕ್ರಮಬದ್ಧಗೊಳಿಸುವ ಮೂಲಕ ಅವುಗಳ ಸಾಂಸ್ಕೃತಿಕ ನಡವಳಿಕೆಗಳನ್ನು ಪ್ರಗತಿ ನಾಶವೆಂದು ಸ್ವೀಕರಿಸಲಾಯಿತು. ತಾವು ನಿಯೋಜಿಸುವ ಸ್ಥಳೀಯ ಧಾರ್ಮಿಕ ಸಾಂಸ್ಥಿಕ ಸಾಹಿತ್ಯಕ ಮನಸ್ಸುಗಳಿಂದ ಸಂಗ್ರಹಿಸುವ ಕೆಲಸ ಮಾಡಿದರು. ಸ್ಥಳೀಯ ಮಾನ್ಯತೆ ಪಡೆಯುವ ಹಂತವಾಗಿ ಇದನ್ನು ಬಳಸಿಕೊಳ್ಳಲಾಯಿತು.

ಭಾಷೆ, ಸಂಸ್ಕೃತಿಗಳನ್ನು ಅರಿಯುವ ನೆಪದಲ್ಲಿ ಅವುಗಳ ಮೇಲೆ ತಮ್ಮ ಹಕ್ಕನ್ನು ಸಾಧಿಸುವ ಮಾರ್ಗವಾಗಿ ಪ್ರಾಚೀನ ದಾಖಲೆಗಳ ಸಂಗ್ರಹ ಹಾಗೂ ಸಂಪಾದನೆಗಳು ಈ ಕಾಲದಲ್ಲಿ ರೂಢಿಗೆ ಬಂದವು. ಸಾಂಸ್ಕೃತಿಕ ಅಧ್ಯಯನದಲ್ಲಿ ಎರಡು ಆಯಾಮಗಳನ್ನು ಅರ್ಥಪೂರ್ಣವಾಗಿ ಮಾಡಿಕೊಳ್ಳುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಅಧ್ಯಯನದ ಕೆಲವು ಲಕ್ಷಣಗಳನ್ನು ಹೀಗೆ ಮಂಡಿಸಬಹುದು.

ತಾತ್ವಿಕ ಅಧ್ಯಯನ ಮಾಡುವಾಗ ಆಕರದೊಳಗೆ ಅಡಗಿರುವ ಲೋಕ ಬದುಕಿನ ಸಮಸ್ತ ಸಂಗತಿಗಳನ್ನು ನೋಡುವ ಕ್ರಮವು ಇಲ್ಲಿ ಅನಿವಾರ್ಯವಾಗುತ್ತದೆ. ಹೀಗೆ ಬಹು ಆಯಾಮಗಳನ್ನು ಒಳಗೊಂಡಿರುವ ವಸ್ತುವಿನ ವಿಶ್ಲೇಷಣೆ ವ್ಯಾಖ್ಯಾನಗಳ ಮೂಲಕ ತಿಳುವಳಿಕೆ ಸೃಷ್ಟಿ ಮಾಡುವುದೇ ಮುಖ್ಯವಾಗುತ್ತದೆ. ಬಹುಮೂಲದ ಆಕರಗಳನ್ನು ಆಧರಿಸಿ ಮಾಡುವ ಅಗತ್ಯವಿರುತ್ತದೆ. ಬಹುಮೂಲ ಎಂದರೆ ಭಾಷೆ, ಚಿತ್ರಕಲೆ, ಸಂಗೀತ, ರಂಗಭೂಮಿ, ಶಾಸನ, ಆಚರಣೆ ಇತ್ಯಾದಿ ಭಾಷಿಕ ಮತ್ತು ಭೌತಿಕ ನೆಲೆಯ ಆಕರಗಳು ಭಾಷಿಕದಲ್ಲಿ ಮೌಖಿಕ ಮತ್ತು ಅಕ್ಷರ ರೂಪಿ ಆಕರಗಳ ನೆಲೆಗಳು ಹಸ್ತಪ್ರತಿ ಅಧ್ಯಯನಕ್ಕೆ ಪ್ರೇರೆಪಿಸಿರುವುದನ್ನು ಗಮನಿಸಬಹುದು.

ಆರಂಭದ ಹಂತದಲ್ಲಿ ಕುತೂಹಲದ ದೃಷ್ಟಿಯಿಂದ ಶುರುವಾದ ಪ್ರಾಚೀನ ಆಕರಗಳನ್ನು ಹುಡುಕುವ, ಪ್ರಕಟಿಸುವ, ಓದುವ, ಅಭ್ಯಸಿಸುವ ಮಿಶನರಿಗಳ ಕೆಲಸಗಳು ಫ್ಲೀಟ್ ಹಾಗೂ

ಕಿಟಲ್ ಹೊತ್ತಿಗೆ ಅವು ಕರ್ನಾಟಕದ ಗತಕಾಲದ ಚರಿತ್ರೆ ಹಾಗೂ ಸಂಸ್ಕೃತಿಯ ಪುನಾರಚನೆಯ ಆಕರಗಳಾದವು. ವಸಾಹತುಶಾಹಿಯ ವರ್ಗಕ್ಕೆ ತನ್ನ ಬೇರುಗಳನ್ನು ಈ ನೆಲದಲ್ಲಿ ಇಳಿಸ ಬೇಕೆಂಬ ಒತ್ತಾಸೆ ಇಲ್ಲಿನ ಲಿಖಿತ ಹಾಗೂ ಅಲಿಖಿತ ಸಾಮಗ್ರಿಗಳನ್ನು ಸಂಗ್ರಹಿಸುವ ಹಾಗೂ ತಿಳಿದುಕೊಳ್ಳುವ ಅನಿವಾರ್ಯತೆಯನ್ನು ಮುಂದೊಡ್ಡಿತ್ತು. ಅದಕ್ಕಾಗಿ ಅವರು ಕನ್ನಡಿಗರ ಜೀವನದೊಂದಿಗೆ ಬೆರೆಯಲು ಅನೇಕ ತಂತ್ರಗಳನ್ನು ಕಂಡುಕೊಂಡರು. ಹಸ್ತಪ್ರತಿಗಳಂತಹ ಆಕರ ಸಾಮಗ್ರಿ ಸಂಗ್ರಹಿಸುವಲ್ಲಿ ಪ್ರೇರಣೆ ನೀಡಿದವು.

'ಸಾಮಾನ್ಯ ಜನತೆಯ ಮನಸ್ಸು ಗೆಲ್ಲಲು ಸ್ಥಳೀಯ ಆಕರ ಸಂಗ್ರಹ ಹಾಗೂ ಸಂಶೋಧನೆಗೆ ಒತ್ತು ನೀಡಿದರು. ವಿಶೇಷವಾಗಿ ವಿಲಿಯಂಕೇರಿಯಂಥ ಮಿಶನರಿ ಭಾರತೀಯ ಭಾಷೆ ಕಲಿಯದೇ ಕ್ರೈಸ್ತ ಮತ ಪ್ರಚಾರ ಸಾಧ್ಯವಿಲ್ಲವೆಂದು ಅನೇಕ ಭಾಷೆಗಳನ್ನು ಕಲಿಯುತ್ತಾನೆ. ಅದರ ಮುಂದುವರಿಕೆಯಾಗಿ ಅನೇಕ ಮಿಶನರಿಗಳು ಇಲ್ಲಿನ ಹಸ್ತಪ್ರತಿ, ಶಾಸನ, ಗಾದೆ, ಒಗಟು, ಲಾವಣಿ ಇತ್ಯಾದಿಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ತಿಳಿದುಕೊಳ್ಳುವ ಮುಖೇನ ಇಂಥ ಪ್ರಾಚೀನ ಸಾಮಗ್ರಿಗಳಿಂದ ಹಸ್ತಪ್ರತಿ ಅಧ್ಯಯನಕ್ಕೆ ಮುಖ್ಯವಾಗಿ ಪ್ರೇರಣೆ ದೊರೆಯಿತು'.[೭]

'೧೯ನೇ ಶತಮಾನ ಪೂರ್ವದ ಆಕರಗಳ ಸಂಗ್ರಹ ಸಂಪಾದನೆ ಕಾರ್ಯಗಳಿಗೆ ಮೀಸಲಾಗಿತ್ತು. ಕರ್ನಾಟಕ ಶಾಸನ ಹಾಗೆಯೇ ಕಾವ್ಯಗಳ ಬಗ್ಗೆ ಕೆಲಸ ಮಾಡಿದ ವಿದ್ವಾಂಸರು ಸಂಗ್ರಹ ಸಂಪಾದನೆಗೆ ಒತ್ತು ನೀಡಿದರು. ಫ್ಲೀಟ್, ಕಿಟಲ್‌ರಂಥ ಕೆಲ ಮಿಶನರಿಗಳು ಇಂಥ ಪ್ರಾಚೀನ ಆಕರಗಳ ಕರ್ನಾಟಕ ಇತಿಹಾಸ ಹಾಗೂ ಸಂಸ್ಕೃತಿ ವಿಶ್ಲೇಷಣೆಗೆ ಬಳಸಿಕೊಂಡಿದ್ದು ವಿಶೇಷ. ಅದರಲ್ಲೂ ಕಿಟಲ್ ಕನ್ನಡ ಸಾಹಿತ್ಯದ ಸಂವಹನ ಪಾತಳಿಯಿಂದ ನಾದ-ಲಯಗಳನ್ನು ಹಿಡಿಯಲು ಪ್ರಯತ್ನಿಸಿ ದೇಸಿ ಅಧ್ಯಯನ ದಾರಿಗಳನ್ನು ನೆಲೆಗೊಳಿಸಿದನು. ಇದು ಹಸ್ತಪ್ರತಿ ಅಧ್ಯಯನಕ್ಕೆ ಬಹುಮುಖ್ಯ ಪ್ರೇರಣೆಯಾಗಿರುವುದನ್ನು ಕಾಣಬಹುದು'.[೮]

'ಶುದ್ಧ ಹಾಗೂ ಪ್ರಾಮಾಣೀಕರಣದ ಹೆಸರಲ್ಲಿ ಕವಿ ಪಾಠಕ್ಕೆ ಕಿಮ್ಮತ್ತು ನೀಡಿದ್ದರಿಂದ ಪಠ್ಯದ ನಿಜ ಚಲನೆಗಳು ಊನಗೊಂಡಿದ್ದವು. ಲಿಪಿಕಾರನ ಪಠ್ಯ ಭಾಗವನ್ನು ರಾಗತಾಳಗಳ ನಿರ್ದೇಶನದಂತಹ ಸೂಚನೆಗಳನ್ನು ತೆಗೆದು ಮಾಡಿದ ಶುಷ್ಕ ಪಠ್ಯವು ಪಾಂಡಿತ್ಯ ಪಠ್ಯವಾಗಿ ಪಾಮರರ ಸಂಪರ್ಕವನ್ನು ಕಳೆದುಕೊಂಡಿತ್ತು. ಹೇಳುವ, ಕೇಳುವ ಸಂವಹನಶೀಲ ಗುಣವುಳ್ಳ ಕನ್ನಡ ಕಾವ್ಯವನ್ನು ಕೇವಲ ಓದುಗಬ್ಬವಾಗಿಸಲಾಯಿತು. ಈ ಶುದ್ಧತೆ ಮತ್ತು ಪ್ರಮಾಣೀಕರಣದ ನೆಲೆಗಳು ಜ್ಞಾನವನ್ನು ಕ್ರಿಯೆಯಿಂದ ವಿಚ್ಛೇದನಗೊಳಿಸಿದವು. ಸಂಪಾದಿತ ಪಠ್ಯಗಳು ಸಂವಹನ ಶೀಲತೆಯನ್ನು ಕಳೆದುಕೊಂಡು ಶುಷ್ಕವಾಗಿದ್ದವು'.[೯]

'೧೮೫೦ ಹೊತ್ತಿಗೆ ೪೦೦೦ಕ್ಕೂ ಮಿಶನರಿಗಳು ಭಾರತದಲ್ಲಿದ್ದರು. ಮಿಶನರಿಗಳು ತಮ್ಮ ಉದ್ದೇಶವನ್ನು ಸಾಧಿಸುವ ನಿಟ್ಟಿನಲ್ಲಿ ಶಾಲಾ ಕಾಲೇಜು ಸ್ಥಾಪನೆ ಮಾಡುವ ಮೂಲಕ ಧರ್ಮ

ಪ್ರಚಾರ ಮಾಡಿದವರಾಗಿ ಹಾಗೆಯೇ ಆಯಾ ಪ್ರದೇಶದ ಸಾಮಾಜಿಕ ಹಾಗೂ ಭಾಷಿಕ ರಚನೆಯ ಸ್ವರೂಪ ಅರಿಯುವುದು ಅವರ ಮುಖ್ಯ ಉದ್ದೇಶವಾಗಿತ್ತು. ಅದಕ್ಕಾಗಿ ಭಾಷೆಯ ವ್ಯಾಕರಣ ಹಾಗೂ ಶಬ್ಧಕೋಶಗಳನ್ನು ಮೊದಲು ಪ್ರಕಟಿಸುವುದರ ಮೂಲಕ ಬೈಬಲ್ ಅನುವಾದಕ್ಕೆ ಕೈ ಹಾಕಿದರು. ಈ ನಿಟ್ಟಿನಲ್ಲಿ ಹರ್ಮನ್ ಮೊಂಗ್ಲಿಂಗ್ ೧೮೩೬ರಲ್ಲಿ ಕರ್ನಾಟಕಕ್ಕೆ ಬರುತ್ತಾನೆ. ಕನ್ನಡ ಪರಿಸರ ಅರಿಯಲು ಮೊಂಗ್ಲಿಂಗ್ ಪತ್ಯ ಹಾಗೂ ಪರಿಸರ ಶೋಧಕ್ಕೆ ತೊಡಗುತ್ತಾನೆ. ಇದರಿಂದ ಕನ್ನಡ ಪರಂಪರೆ ಹಾಗೂ ಸಂಪ್ರದಾಯ ಎರಡನ್ನು ಭಿನ್ನ ಸ್ವರಗಳಲ್ಲಿ ಗ್ರಹಿಸಲು ಅವನಿಗೆ ಅನುಕೂಲವಾಗಿತ್ತು. ಇದು ಕನ್ನಡ ಚಾರಿತ್ರಿಕ ಶೋಧ ಹಾಗೂ ವಿವರಣಾತ್ಮಕ ಶೋಧಕ್ಕೆ ದಾರಿ ಮಾಡಿತು. ಇಂಥ ಮಾಹಿತಿಯು ಅಡಗಿರುವುದು ಹಸ್ತಪ್ರತಿಗಳಲ್ಲಿ ಎಂಬುದನ್ನು ಅರಿತು, ಹಸ್ತಪ್ರತಿಗಳ ಸಂಗ್ರಹಕ್ಕೆ ಮುಂದಾದನು. ಹಸ್ತಪ್ರತಿಗಳ ಸಹಾಯದಿಂದ ಸಂಸ್ಕೃತಿಯನ್ನು ತಿಳಿಯಬಹುದು ಎಂಬ ಅಂಶಗಳಿಂದಾಗಿ ಹಸ್ತಪ್ರತಿ ಅಧ್ಯಯನಕ್ಕೆ ಪ್ರೇರಣೆಯಾಗಿದ್ದು ಗಮನಾರ್ಹ ಸಂಗತಿ'.[೧೦]

'ಹಸ್ತಪ್ರತಿಗಳನ್ನು ಪ್ರತಿ ಮಾಡೋದು ಅಥವಾ ಅದನ್ನು ಇದ್ದ ಹಾಗೇ ಸಂರಕ್ಷಣೆ ಮಾಡೋದು ಕನ್ನಡ ಸಾಹಿತ್ಯ ಸಂಸ್ಕೃತಿ ಎಷ್ಟು ಪ್ರಾಚೀನವಾದದ್ದು, ಭವ್ಯವಾದದ್ದು ಅಂತ ತೋರುವುದು ಒಂದು. ಅದರ ಜೊತೆಗೆ ಈ ಹಸ್ತಪ್ರತಿಗಾಗಿ ಜೀವ ಸವೆಸಿದ ಸಮುದಾಯಗಳ ಸಾಮಾಜಿಕ ಸಂಗತಿಗಳೇನು? ಧರ್ಮದ ಕಾರಣಕ್ಕಾಗಿ, ಜಾತಿಯ ಕಾರಣಕ್ಕಾಗಿ, ವ್ಯಕ್ತಿಗತವಾದ ಹಸ್ತಪ್ರತಿಗಳನ್ನು ನಾವು ಹೀಗೆ ಬಳಸುತ್ತ ಬಂದಿದ್ದೇವೆ. ಇದರ ಸಾಂಸ್ಕೃತಿಕ ಆಯಾಮಗಳನ್ನು ಹಾಗೂ ಸಾಮಾಜಿಕ ಆಯಾಮಗಳನ್ನು ಹುಡುಕುವ ಸಲುವಾಗಿ ಹಸ್ತಪ್ರತಿಗಳ ಅಧ್ಯಯನಕ್ಕೆ ಸ್ಫೂರ್ತಿಯಾಗಿರುವುದನ್ನು ನಾವು ಈ ಮೂಲಕ ತಿಳಿಯಬಹುದು'.[೧೧]

೩.೧. ದೇಶಿಯ ನೆಲೆಗಳು

ಕರ್ನಲ್ ಮೆಕೆಂಜಿ ಆಗಮನದಿಂದ ಇಡೀ ಭಾರತದಲ್ಲಿ ಕೈ ಬರಹಗಳ ಇತಿಹಾಸದಲ್ಲಿ ಒಂದು ಹೊಸಯುಗ ಆರಂಭವಾಯಿತೆಂದು ಹೇಳಲಾಗುತ್ತದೆ. ೧೭೮೩ ಮದ್ರಾಸಿಗೆ ಬಂದು, ೧೭೯೬ ರಿಂದ ೧೮೧೧ ರವರೆಗೆ ಇಡೀ ದಕ್ಷಿಣ ಭಾರತವನ್ನು ತನ್ನ ಕಾರ್ಯಕ್ಷೇತ್ರ ಮಾಡಿಕೊಂಡು ಸಾವಿರಾರು ಹಸ್ತಪ್ರತಿಗಳನ್ನು, ಪ್ರಾಚ್ಯವಸ್ತುಗಳನ್ನು, ಕಂದಾಯ ಸಂಬಂಧಿ ದಾಖಲೆಗಳನ್ನು ಸಂಗ್ರಹಿಸಿದನು. ಈತನಿಗೆ ಸಹಾಯಕರಾಗಿ ದೇಸಿ ಪಂಡಿತರಾದ ಕವಲಿ ವೆಂಕಟಬೋರಯ್ಯ, ಧರ್ಮಯ ಪುರುಷೋತ್ತಮ(ಜೈನ ವಿದ್ವಾಂಸ), ವೆಂಕಟರಾವ್(ಬ್ರಾಹ್ಮಣ ವಿದ್ವಾಂಸ), ನಾರಾಯಣರಾವ್(ತಮಿಳು, ಕನ್ನಡ ಪಂಡಿತ), ಬಾಬುರಾವ(ಮರಾಠಿ ಪಂಡಿತ), ಅಬ್ದುಲ್ ಅಜಲ್ ಎಂಬ ಪರ್ಶಿಯನ್ ಪಂಡಿತರು ಕಾರ್ಯ ನಿರ್ವಹಿಸಿದರು. ಇಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದ ಸಂಗತಿ ಎಂದರೆ ಎಂಥ ಜ್ಞಾನ ಎನ್ನುವಾಗ ವಸಾಹತುಶಾಹಿ

ಪ್ರಭುಗಳ ಹಿತಾಸಕ್ತಿಗೆ ಯಾವುದು ಪ್ರಯೋಜನಕಾರಿಯೋ ಅದು. ೧೭ ಹಾಗೂ ೧೮ನೇ ಶತಮಾನದ ಬ್ರಿಟಿಷ್ ದಾಖಲೆಗಳನ್ನು ಕಂಡಾಗ ಅವರಿಗೆ ಮುಖ್ಯರಾದವರು ಹಾಗೂ ಉಪಯುಕ್ತರಾದವರೆಂದರೆ ಮೇಲ್ಕಾಣಿಸಿದ ಸ್ಥಳೀಯ ಪಂಡಿತರು. ದ್ವಿಭಾಷಿಗಳು, ಅನುವಾದಕರು. ಇವರೆಲ್ಲರು ಒಂದು ನಿರ್ದಿಷ್ಟ ಸಮುದಾಯದಿಂದ ಬಂದವರು ಎನ್ನುವುದು ವಿಶೇಷ. 'ಬ್ರಿಟೀಷ್ ಆಡಳಿತಾಧಿಕಾರಿಗಳಿಗೆ ಬೇಕಾಗಿದ್ದು ಜನಸಾಮಾನ್ಯರಲ್ಲ, ಇಲ್ಲಿನ ಭಾಷೆ, ಸಂಸ್ಕೃತಿಗಳನ್ನು ಅರಿತುಕೊಳ್ಳಲು ಅವರು ಕಲಿತ ಮೇಲ್ವರ್ಗದವರನ್ನು ಆಶ್ರಯಿಸಿದರು. ೧೬೧೫ರಲ್ಲಿ ಥಾಮಸ್ ರೋ ಎನ್ನುವವನು ಮೋಗಲ್ ದರ್ಬಾರಿಗೆ ಬಂದಾಗ ಪರ್ಶಿಯನ್ ಗೊತ್ತಿಲ್ಲದೇ ಪೇಚಿಗೊಳಗಾಗುತ್ತಾನೆ. ಹೀಗೆ ಬ್ರಿಟಿಷರು ಇಲ್ಲಿನ ಭಾಷೆ, ಸಂಸ್ಕೃತಿಯನ್ನು ಕಲಿಯುವ ಅನಿವಾರ್ಯತೆಗೆ ಒಳಗಾಗುತ್ತಾರೆ'.[೧೨] ಮೆಕೆಂಜಿ ಸಂಗ್ರಹದಲ್ಲಿ ದಕ್ಷಿಣ ಭಾರತದ ಶಾಸನಗಳ ನಕಲು ೮೦೭೯ ಬರ್ಮ ಹಾಗೂ ಜಪಾನೀಸ್ ಭಾಷೆಗಳು ಸೇರಿ ೧೩ ಭಾಷೆಗಳ ಒಟ್ಟು ೧೫೬೮ ಹಸ್ತಪ್ರತಿಗಳಿದ್ದವು. ಸ್ಥಳಪುರಾಣ ಕೈಫಿಯತ್ತು, ಬಖೈರ್, ರಾಜರ ವಂಶಾವಳಿ ಇತ್ಯಾದಿ ೨೬೪ ಬೃಹತ್ ಸಂಪುಟಗಳು ಹಾಗೂ ಅವುಗಳ ಅನುವಾದವನ್ನೊಳಗೊಂಡ ೭೫ ಸಂಪುಟಗಳು, ನಕ್ಷೆಗಳು ೭೯, ಚಿತ್ರಗಳು ೨೬೩೦ ಹಸ್ತಪ್ರತಿಗಳು ಇದ್ದವು. ಇಡೀ ಯುರೋಪ್ ಹಾಗೂ ಏಷ್ಯಾದಲ್ಲಿಯೇ ಯಾರು ಸಂಗ್ರಹಿಸಲಾರದಷ್ಟು ಪ್ರಾಚ್ಯವಸ್ತುಗಳನ್ನು ಮೆಕೆಂಜಿ ಸಂಗ್ರಹಿಸಿದ. ಸುಮಾರು ೩೮ ವರ್ಷಗಳ ಕಾಲ ಸತತವಾಗಿ ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ಸಂಚಾರ ಮಾಡಿ ಹಸ್ತಪ್ರತಿಗಳ ಸಂಗ್ರಹಣೆಗೆ ತೊಡಗಿದ್ದನ್ನು ಅಧ್ಯಯನದಿಂದ ತಿಳಿಯ ಬಹುದು.

ಮದರಾಸು ಸರ್ಕಾರದ ಪ್ರಾಚೀನ ಹಸ್ತಪ್ರತಿ ಭಂಡಾರ ೧೮೫೮ರಲ್ಲಿ ಸ್ಥಾಪನೆಗೊಂಡಾಗ, ದಕ್ಷಿಣ ಭಾರತದ ಎಲ್ಲಾ ಹಸ್ತಪ್ರತಿ, ಶಾಸನ, ನಕಲು, ಕೈಫಿಯತ್ತುಗಳ ಬಖೈರುಗಳನ್ನು ಇಲ್ಲಿ ಸಂಗ್ರಹಿಸಿ ಇಡಲಾಯಿತು. ಇದರಲ್ಲಿ ೧೫೦ ಕನ್ನಡ ಹಸ್ತಪ್ರತಿಗಳಿದ್ದವು. ಸಿ.ಪಿ. ಬ್ರೌನ್ ಮೊದಲಾದವರ ಪ್ರಯತ್ನದಿಂದಾಗಿ ಇದು ೧೫೪೦ ಕ್ಕೆರಿತು. ೧೯೬೭ರಲ್ಲಿ ಮದ್ರಾಸ್ ಪ್ರಾಚ್ಯಗಾರ ಇಲಾಖೆ ಮೆಕೆಂಜಿ ಸಂಗ್ರಹದ ಹಸ್ತಪ್ರತಿಗಳ ಹೊರತಾಗಿ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಿಗೆ ವರ್ಗಾವಣೆಗೊಂಡಿತ್ತು.

೧೮೮೦ರಲ್ಲಿ ಮೈಸೂರು ಪ್ರಾಚ್ಯವಸ್ತು ಸಂಶೋಧನಾಲಯ ಸ್ಥಾಪನೆಗೊಂಡಿತು. ಬಿ.ಎಲ್. ರೈಸ್ ಅಧಿಕಾರಿಯಾಗಿದ್ದ ಶಾಸನ ಹಸ್ತಪ್ರತಿಗಳನಲ್ಲದೆ ಹಾಗೂ ಶಬ್ದಾನುಶಾಸನ, ಪಂಪ ಭಾರತದಂತಹ ಕನ್ನಡ ಕೃತಿಗಳನ್ನು ಸಂಪಾದನೆ ಮಾಡಿದರು. ನಂತರ ಆರ್. ನರಸಿಂಹಚಾರ್ಯರು ಯಶಸ್ವಿಯಾಗಿ ಈ ಕಾರ್ಯ ಮುಂದುವರಿಸಿದರು. ಇವರ ಕರ್ನಾಟಕ ಕವಿ ಚರಿತೆ ಸಂಪುಟಗಳು ನೆನಪಿಡುವಂತವು.

'೧೮೯೧ರಲ್ಲಿ ಹಸ್ತಪ್ರತಿ ವಿಭಾಗವು ಬೇರೆಯಾಗಿ ಓ.ಆರ್.ಆಯ್ ಎನ್ನುವ ಹೆಸರಿನಲ್ಲಿ ಸ್ಥಾಪಿತವಾಯಿತು. ಈ ಮೂಲಕ ಹಲವು ಪ್ರಮುಖ ಕೃತಿಗಳನ್ನು ಹೊರ ತರಲಾಯಿತು. ೧೯೧೦ರಲ್ಲಿ ಈ ಭಂಡಾರವನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಲಾಯಿತು. ೧೯೪೨ರಲ್ಲಿ ೧೯೮೬ ಸಂಸ್ಕೃತ ಹಾಗೂ ೧೩೩೧ ಕನ್ನಡ ಹಸ್ತಪ್ರತಿಗಳಿದ್ದವು. ೧೯೬೮ರ ಹೊತ್ತಿಗೆ ಅಲ್ಲಿ ಕ್ರಮವಾಗಿ ೧೨,೦೦೦ ಸಂಸ್ಕೃತ ಹಾಗೂ ೫೦೦೦ ದಷ್ಟು ಕನ್ನಡ ಹಸ್ತಪ್ರತಿಗಳು ಸಂಗ್ರಹಗೊಂಡವು. ಈಗ ಸುಮಾರು ೬೦೦೦ ಕನ್ನಡ ಹಸ್ತಪ್ರತಿಗಳು ಕನ್ನಡ ಅಧ್ಯಯನ ಕೇಂದ್ರದಲ್ಲಿವೆ'.[೧೩]

೧೯೩೯ ಧಾರವಾಡದಲ್ಲಿ ಕನ್ನಡ ಸಂಶೋಧನ ಸಂಸ್ಥೆ ಆರಂಭವಾದಾಗ ಅಲ್ಲಿನ ಹಸ್ತಪ್ರತಿಗಳ ಸಂಖ್ಯೆ ೩೦೦೦ ಮತ್ತು ನಂತರ ಇದು ಕನ್ನಡ ಅಧ್ಯಯನ ಪೀಠಕ್ಕೆ ವರ್ಗವಾಯಿತು. ಈ ಪೀಠದಲ್ಲಿ ಈಗ ೪೫೦೦ ಹಸ್ತಪ್ರತಿಗಳಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಸುಮಾರು ೮೦೦೦, ಗುಲಬರ್ಗಾ ವಿಶ್ವವಿದ್ಯಾಲಯಗಳಲ್ಲಿ ಸುಮಾರು ೨೫೦೦, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸುಮಾರು ೩೦೦೦, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರಿನ ಸಂಗ್ರಹದ ೨೫೦೦, ಶಿವಯೋಗ ಮಂದಿರದಲ್ಲಿ ಸುಮಾರು ೨೦೦೦ ಹಸ್ತಪ್ರತಿಗಳು ಇವೆ. ಇವುಗಳಲ್ಲದೆ ಹೈದ್ರಾಬಾದ್, ಬರೋಡಾ, ಗುಜರಾತ್ ವಿಶ್ವವಿದ್ಯಾಲಯ ಲಖನೌ ಇತ್ಯಾದಿ ಕಡೆ ಹಸ್ತಪ್ರತಿ ಇರುವುದು ಗಮನಾರ್ಹವಾಗಿದೆ. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ತನ್ನ ಆರಂಭದ ದಿನಗಳಿಂದಲೂ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ, ಪರಿಷ್ಕರಣೆ, ಸೂಚಿಕರಣ ಹಾಗೂ ಅಧ್ಯಯನದ ಜೊತೆಗೆ ಹಸ್ತಪ್ರತಿ ತರಬೇತಿ ಶಿಬಿರ, ವಿಚಾರ ಸಂಕೀರಣ, ಹಳಗನ್ನಡ ಬೋಧನಾ ತರಬೇತಿ ಶಿಬಿರಗಳೊಂದಿಗೆ ಹಸ್ತಪ್ರತಿ ಸಮ್ಮೇಳನಗಳನ್ನು ಆಯೋಜಿಸುತ್ತಾ ಬಂದಿದ್ದು, ಹಸ್ತಪ್ರತಿ ಅಧ್ಯಯನ ವಿಭಿನ್ನ ರೀತಿಯ ಅಧ್ಯಯನಕ್ಕೊಳಪಟ್ಟಿರುವುದನ್ನು ಕಾಣಬಹುದು.

ಹಸ್ತಪ್ರತಿಗಳಂತಹ ಸಾಂಪ್ರದಾಯಿಕ ಜ್ಞಾನ ಸಾಮಗ್ರಿಗಳನ್ನು ಕೇವಲ ಸಂಗ್ರಹ, ಸಂಪಾದನೆಗಳಂತಹ ಸಾಂಪ್ರದಾಯಿಕ ಶಾಸ್ತ್ರೀಯ ಅಧ್ಯಯನಕ್ಕೆ ಮಾತ್ರ ಮೀಸಲಾಗಿರಿಸದೆ, ಹೊಸ ಕಾಲದ ಹೊಸ ಜ್ಞಾನ ಶಿಸ್ತುಗಳೊಂದಿಗೆ ಅಭ್ಯಾಸಿಸುವುದು ಹಾಗೇ ಅವುಗಳ ಮಿತಿ ಹಾಗೂ ಶಕ್ತಿ ಕುರಿತು ಅರಿಯುವುದು ಹಸ್ತಪ್ರತಿ ವಿಭಾಗದ ಪ್ರಮುಖ ಕಾಳಜಿಯಾಗಿದೆ. ಸಮಾಜಶಾಸ್ತ್ರ, ಸಮುದಾಯ ಅಧ್ಯಯನ, ಮನಶಾಸ್ತ್ರ, ತಂತ್ರಜ್ಞಾನ, ಸಾಹಿತ್ಯ, ಮೌಖಿಕ, ಸಂಪ್ರದಾಯ, ಗಮಕ, ಕೀರ್ತನ, ಚಿತ್ರ, ಶಿಲ್ಪ, ಸಂಗೀತ, ಲಿಪಿಶಾಸ್ತ್ರ, ಭಾಷಾಶಾಸ್ತ್ರ ಹೀಗೆ ಹಲವು ಮಜಲುಗಳನ್ನು ಒಳಗೊಳ್ಳುವಲ್ಲಿ ೧೯೯೬ ರಿಂದ ವಿಭಾಗವು ದಿಟ್ಟ ಹೆಜ್ಜೆಯನ್ನಿಡುತ್ತಾ ಬರುತ್ತಿದೆ.

೧೯೯೫ರಲ್ಲಿ ಆರಂಭವಾದ ಹಸ್ತಪ್ರತಿಶಾಸ್ತ್ರ ವಿಭಾಗದ ಅಧ್ಯಾಪಕರು ನಾಡಿನಾದ್ಯಂತ ಸರ್ವೇಕ್ಷಣ ಕಾರ್ಯ ಕೈಗೊಂಡಿದ್ದಾರೆ. ಐದು ಸಾವಿರಕ್ಕೂ ಹೆಚ್ಚು ತಾಡೋಲೆ ಕೋರಿ ಕಾಗದ ಕಡತ ರೂಪದ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಇವುಗಳ ಸಂರಕ್ಷಣೆಗಾಗಿ ವಿಭಾಗದಲ್ಲಿ ಒಂದು ಸುಸಜ್ಜಿತವಾದ ಹಸ್ತಪ್ರತಿ ಭಂಡಾರವನ್ನು ಸ್ಥಾಪಿಸಲಾಗಿದೆ. ಹಸ್ತಪ್ರತಿಗಳು ಧೂಳು, ಕ್ರಿಮಿಕೀಟಗಳು ತಾಗದಂತೆ ವೈಜ್ಞಾನಿಕ ರೀತಿಯಲ್ಲಿ ಸಂರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಕಟ್ಟಿಗೆಯ ಫಲಕಗಳಲ್ಲಿ ಹಸ್ತಪ್ರತಿಗಳನ್ನಿಟ್ಟು ದಾರದಿಂದ ಭದ್ರವಾಗಿ ಕಟ್ಟಲಾಗಿದೆ. ಸಿಟ್ರಿನಲ್ ಆಯಿಲ್‌ನ್ನು ತಾಡೋಲೆ, ಪ್ರತಿಗಳಿಗೆ ಲೇಪನ ಮಾಡಿ ಸಂರಕ್ಷಿಸಲಾಗುತ್ತಿದೆ. ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಹಸ್ತಪ್ರತಿಗಳನ್ನು ಸ್ಕ್ಯಾನ್ ಮಾಡುವುದರ ಮೂಲಕ ಡಿಜಿಟಲೈಷನ್ ಮಾಡಲಾಗುತ್ತಿದೆ. ಹೀಗೆ ಸಂರಕ್ಷಿಸಿದ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿಗಳನ್ನು ಸಿದ್ಧಪಡಿಸಿ, ಸಂಪುಟಗಳಲ್ಲಿ ಪ್ರಕಟಿಸಲಾಗುತ್ತಿದೆ.

ಈಗಾಗಲೇ ಐದು ಸಂಪುಟಗಳು ಪ್ರಕಟವಾಗಿವೆ. ಇದರಿಂದ ಒಂದು ಕಟ್ಟಿನಲ್ಲಿರುವ ಕೃತಿ ಮತ್ತು ಪ್ರತಿಯ ಸಮಗ್ರ ಮಾಹಿತಿ ಅಧ್ಯಯನಾಸ್ತಕರಿಗೆ ಲಭ್ಯವಾದಂತಾಗಿದೆ. ಪ್ರಾಚೀನ ಪಠ್ಯಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ ವಿಭಾಗದ ಅಧ್ಯಾಪಕರು, ಸಾಕಷ್ಟು ಕೆಲಸ ಮಾಡಿದ್ದಾರೆ, ಮಾಡುತ್ತಿದ್ದಾರೆ. ಉಪೇಕ್ಷೆಗೆ ಒಳಗಾಗಿದ್ದ ಅಪ್ರಕಟಿತ ರೂಪದಲ್ಲಿದ್ದ ಅನೇಕ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸುವ ಕಾರ್ಯ ಮುಂದುವರೆದಿದೆ. ಅವುಗಳಲ್ಲಿ ಎಮ್ಮೆ ಬಸವಣ್ಣನ ಕಾಲಜ್ಞಾನ ಸಾಹಿತ್ಯ ಹಳೆಯ ಲಾವಣಿಗಳ ಉದ್ಧಾರಣೆ, ಸಾಹಿತ್ಯ ಸ್ವರವಚನ ಸಂಪುಟ ಹಯರತ್ನ ಶ್ರೇಣಿ ಚಿಂದಾನಂದಚಾರಿತ್ಯ ಚಾರಿತ್ಯದಂತ ಕೃತಿಗಳು ಪ್ರಮುಖವಾಗಿವೆ.

ಈ ಮೊದಲು ಹಸ್ತಪ್ರತಿಗಳನ್ನು ಪರಿಷ್ಕರಣ ಕಾರ್ಯಕ್ಕೆ ಮಾತ್ರ ಉಪಯೋಗಿಸಲಾಗುತ್ತಿತ್ತು. ಆದರೆ ವಿಭಾಗ ಆರಂಭವಾದಂದಿನಿಂದ ಹಸ್ತಪ್ರತಿಗಳನ್ನು ವಿವಿಧ ಅಧ್ಯಯನ ಶಿಸ್ತುಗಳಲ್ಲಿ ಮತ್ತು ವೈಯಕ್ತಿಕ ಯೋಜನೆಯಡಿ ಅಧ್ಯಾಪಕರು ಪ್ರತಿವರ್ಷ ಯೋಜನೆಗಳನ್ನು ಪೂರೈಸುತ್ತಲಿದ್ದಾರೆ. ಹಸ್ತಪ್ರತಿಗಳ ಸರ್ವೇಕ್ಷಣೆ, ಸಂಗ್ರಹ, ಸಂರಕ್ಷಣೆ, ಸೂಚಿರಚನೆ, ಹಸ್ತಪ್ರತಿಗಳ ಗಣಕೀಕರಣ, ಹಸ್ತಪ್ರತಿ ಲಿಪಿಕಾರರ ಚರಿತ್ರೆ, ಕನ್ನಡ ದಾಖಲು ಸಾಹಿತ್ಯ, ಕನ್ನಡ ಹಸ್ತಪ್ರತಿಗಳ ಭಾಷಿಕ ರಚನೆ, ಹಸ್ತಪ್ರತಿಗಳ ಸಾಂಸ್ಕೃತಿಕ ಸಂಕಥನ, ಹಾಲುಮತ ಸಂಸ್ಕೃತಿ, ದಾಖಲೀಕರಣ ಮತ್ತು ಕನ್ನಡೀಕರಣ ಇತ್ಯಾದಿ ಯೋಜನೆಗಳನ್ನು ಕಾಲಬದ್ಧವಾಗಿ ಪೂರೈಸಲಾಗಿದೆ. ಇಂತಹ ಎಲ್ಲ ಯೋಜನೆಗಳಿಗೆ ಕನ್ನಡ ವಿಶ್ವವಿದ್ಯಾಲಯ, ಕರ್ನಾಟಕ ಸರ್ಕಾರ, ಭಾರತ ಸರ್ಕಾರ, ವಿಶ್ವವಿದ್ಯಾಲಯದ ಧನಸಹಾಯ ಆಯೋಗ, ಪತ್ರಗಾರ ಇಲಾಖೆ, ನ್ಯಾಷನಲ್ ಮಿಷನ್ ಫಾರ್ ಮ್ಯಾನ್‌ಸ್ಕ್ರಿಪ್ಟ್ ಮಿಷನ್, ಭಾಷಾ ಸಂಸ್ಥಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಂತಹ ಅನೇಕ ಸರಕಾರಿ, ಸಾರ್ವಜನಿಕ ಸಂಘ-ಸಂಸ್ಥೆಗಳು, ಅನೇಕ ಯೋಜನೆಗಳ ಮುಖಾಂತರ

ಹಸ್ತಪ್ರತಿಗಳ ಕುರಿತು ಕಾರ್ಯಕ್ರಮ, ವಿಚಾರ ಸಂಕಿರಣದಂತಹ ಕಾರ್ಯಕ್ರಮದ ಮುಖಾಂತರ ಹಸ್ತಪ್ರತಿ ಅಧ್ಯಯನಕ್ಕೆ ಹೊಸ ತಿರುವು ನೀಡಿರುವುದರ ಮೂಲಕ ಕನ್ನಡದ ಲಿಪಿ, ಬರಹ, ಭಾಷೆ ಕುರಿತು ಈಗಾಗಲೇ ರೂಢಿಗತವಾಗಿರುವ ಚಿಂತನಾ ಮಾದರಿಗಳನ್ನು ಹಸ್ತಪ್ರತಿಗಳ ಸಹಾಯದಿಂದ ಮರು ನಿರ್ವಚಿಸುವ ಕೆಲಸ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಮಾಡಿರುವುದು ಗಮನಾರ್ಹ ಸಂಗತಿಯಾಗಿದೆ.

೩.೨. ಅನ್ಯದೇಶಿ ನೆಲೆಗಳು

ಆರಂಭದ ಹಂತದಲ್ಲಿ ಕುತೂಹಲದ ದೃಷ್ಟಿಯಿಂದ ಪ್ರಾಚೀನ ಆಕರಗಳನ್ನು ಹುಡುಕುವ ಪ್ರಕಟಿಸುವ, ಓದುವ, ಅರ್ಥೈಸುವ ಕೆಲಸಗಳು ಫ್ಲೀಟ್ ಹಾಗೂ ಕಿಟಲ್ ಹೊತ್ತಿಗೆ ಅವು ಕರ್ನಾಟಕದ ಗತಕಾಲದ ಚರಿತ್ರೆ ಹಾಗೂ ಸಂಸ್ಕೃತಿಯ ಪುನಾರಚನೆಯ ಆಕರಗಳಾದವು. ವಸಾಹತುಶಾಹಿ ವರ್ಗಕ್ಕೆ ತನ್ನ ಬೇರುಗಳನ್ನು ಈ ನೆಲದಲ್ಲಿ ಇಳಿಸಬೇಕೆಂಬ ಒತ್ತಾಸೆ ಇಲ್ಲಿನ ಲಿಖಿತ ಹಾಗೂ ಅಲಿಖಿತ ಸಾಮಗ್ರಿಗಳನ್ನು ಸಂಗ್ರಹಿಸುವ ಹಾಗೂ ತಿಳಿದುಕೊಳ್ಳುವ ಅನಿವಾರ್ಯತೆಯನ್ನು ಮುಂದೊಡ್ಡಿತು. ಅದಕ್ಕಾಗಿ ಅವರು ಕನ್ನಡಿಗರ ಜೀವನದೊಂದಿಗೆ ಬೆರೆಯಲು ಅನೇಕ ತಂತ್ರಗಳನ್ನು ಕಂಡುಕೊಂಡರು ಸಾಮಾನ್ಯ ಜನತೆಯ ಮನಸ್ಸು ಗೆಲ್ಲಲ್ಲು ಸ್ಥಳೀಯ ಆಕರ ಸಂಗ್ರಹ ಹಾಗೂ ಸಂಯೋಜನೆಗೆ ಒತ್ತು ನೀಡಿದರು. ವಿಶೇಷವಾಗಿ ವಿಲಿಯಂ ಕ್ಯಾರಿಯಂಥ ಮಿಶನರಿಯು ಭಾರತೀಯ ಭಾಷೆ ಕಲಿಯದೆ ಕ್ರೈಸ್ತ ಮತ ಪ್ರಚಾರ ಸಾಧ್ಯವಿಲ್ಲವೆಂದು ಮನಗಂಡು ಸ್ಥಳೀಯರ ನೆರವಿನಿಂದ ಸಂಸ್ಕೃತ, ಬಂಗಾಳಿ, ಮರಾಠಿಯಂತಹ ಅನೇಕ ಭಾಷೆಗಳನ್ನು ಕಲಿಯುತ್ತಾನೆ. ಅದರ ಮುಂದವರಿಕೆಯಾಗಿ ಅನೇಕ ಮಿಶನರಿಗಳು ಇಲ್ಲಿನ ಹಸ್ತಪ್ರತಿಗಳನ್ನು ಸಂಗ್ರಹಿಸಿ ಸಂರಕ್ಷಿಸಿ ಪ್ರಕಟಿಸುವ ಕೆಲಸಗಳಿಗೆ ಕೈ ಹಾಕಿದವು. ವಸಾಹತುಪೂರ್ವ ಕರ್ನಾಟಕ ಚರಿತ್ರೆಯನ್ನು ತಿಳಿದುಕೊಳ್ಳಬೇಕೆನ್ನುವ ಆಸಕ್ತಿ ಕೂಡ ಇಂಥ ಪ್ರಾಚೀನ ಸಾಮಗ್ರಿಗಳ ಹುಡುಕಾಟದ ಮುಖ್ಯ ಧ್ಯೇಯವಾಗಿತ್ತು. ವಿದ್ವಾಂಸರು ಸಂಗ್ರಹ, ಸಂಪಾದನೆಗೆ ಒತ್ತು ನೀಡಿದ್ದರು. ಮುಂದೆ ಫ್ಲೀಟ್, ಕಿಟಲ್‌ರಂಥ ಕೆಲವು ವಿದೇಶಿ ವಿದ್ವಾಂಸರು ಪ್ರಾಚೀನ ಆಕರಗಳನ್ನು ಕರ್ನಾಟಕ ಇತಿಹಾಸ ಹಾಗೂ ಸಂಸ್ಕೃತಿ ವಿಶ್ಲೇಷಣೆಗೆ ಬಳಸಿಕೊಂಡದ್ದು ವಿಶೇಷ. ಅದರಲ್ಲಿ ಕಿಟಲ್ ಕನ್ನಡ ಸಾಹಿತ್ಯದ ಸಂವಹನದ ಪಾತಳಿಯಾದ ನಾದ ಲಯಗಳನ್ನು ಹಿಡಿಯಲು ಪ್ರಯತ್ನಿಸಿ ದೇಸಿ ಅಧ್ಯಯನ ದಾರಿಗಳನ್ನು ನೆಲೆಗೊಳಿಸಿದ್ದನು ಮರೆಯಲಾಗದು.

'ಕ್ರಿ.ಶ. ೧೮೫೦ರ ಹೊತ್ತಿಗೆ ೪೦೦ಕ್ಕೂ ಹೆಚ್ಚು ಮಿಶನರಿಗಳು ಭಾರತದಲ್ಲಿದ್ದವು. ಇದರಲ್ಲಿ ಸುಮಾರು ೨೦ ಮಿಷನರಿಗಳು ಕರ್ನಾಟಕದಲ್ಲಿದ್ದರು. ಇಂಥ ಮಿಶನರಿಗಳು ನಮ್ಮ ಉದ್ದೇಶ ಗಳನ್ನು ಸಾಧಿಸಲು ಮೂರು ರೀತಿಯ ಕಾರ್ಯಯೋಜನೆಯನ್ನು ರೂಢಿಸಿಕೊಂಡಿದ್ದರು. ಒಂದು ಮುದ್ರಣಾಲಯಗಳ ಸ್ಥಾಪನೆ, ಎರಡು ಶಾಲೆ-ಕಾಲೇಜು, ಆಸ್ಪತ್ರೆ ಸ್ಥಾಪನೆ, ಮೂರು

ಕನ್ನಡ ಕಲಿತು ಆ ಮೂಲಕ ಕ್ರೈಸ್ತಮತ ಪ್ರಚಾರ ಮಾಡುವುದು'.[೧೪] ಆದರೆ ಆಯಾ ಪ್ರದೇಶದ ಸಾಮಾಜಿಕ ಹಾಗೂ ಭಾಷಿಕ ರಚನೆಯ ಸ್ವರೂಪವನ್ನು ಅರಿಯುವುದು ಅವರ ಮುಖ್ಯ ಉದ್ದೇಶವಾಗಿತ್ತು. ಅದಕ್ಕಾಗಿ ಭಾಷೆಯ ವ್ಯಾಕರಣ ಹಾಗೂ ಶಬ್ದಕೋಶಗಳನ್ನು ಮಾಡಿ ಪ್ರಕಟಿಸಿದರು. ಆ ಮೂಲಕ ಬೈಬಲ್ ಅನುವಾದಕ್ಕೂ ಕೈಹಾಕಿದರು.

ಹರ್ಮನ್ ಮೊಂಗ್ಲಿಂಗ್ ಕ್ರಿ.ಶ. ೧೮೩೬ರಲ್ಲಿ ಕರ್ನಾಟಕಕ್ಕೆ ಬರುತ್ತಾನೆ. ಕನ್ನಡ ಪರಿಸರವನ್ನು ಅರಿಯಲು ಮೊಂಗ್ಲಿಂಗ್ ಪಠ್ಯ ಹಾಗೂ ಪರಿಸರದ ಶೋಧಕ್ಕೆ ತೊಡಗುತ್ತಾನೆ. ಇದರಿಂದ ಕನ್ನಡ ಪರಂಪರೆ ಹಾಗೂ ಸಂಪ್ರದಾಯ ಎರಡನ್ನು ಭಿನ್ನ ಸ್ತರಗಳಲ್ಲಿ ಗ್ರಹಿಸಲು ಆತನಿಗೆ ಅನುಕೂಲವಾಗುತ್ತದೆ. ಇದು ಕನ್ನಡದ ಚಾರಿತ್ರಿಕ ಶೋಧ ಹಾಗೂ ವಿವರಣಾತ್ಮಕ ಶೋಧದ ಮಾದರಿಗಳ ರೂಡಿಗೆ ಕಾರಣವಾಯಿತು. ಇದು ಕೂರ್ಗ ಮೆಮೋರಿಸ್(೧೮೫೨), ರಾಜೇಂದ್ರನಾಮೆ(೧೮೫೪)ದಂತಹ ಬರಹಗಳು ಉತ್ತಮ ಉದಾಹರಣೆಯಾಗಿವೆ. ೧೮೪೫ರಲ್ಲಿ ಬಿಬ್ಲಿಯಾಥಿಕ್ ಕರ್ನಾಟಕವನ್ನು ಆರಂಭಿಸಿ ಅದರ ಮೂಲಕ ಹಸ್ತಪ್ರತಿಗಳ ಸಂಗ್ರಹದ ಜೊತೆಗೆ ಜೈಮಿನಿ ಭಾರತ(೧೮೪೮), ೩೦೦ ಗಾದೆಗಳು(೧೮೪೭), ತೊರವೆ ರಾಮಾಯಣ, ಬಸವಪುರಾಣ, ದಾಸರಪದಗಳು(೧೮೫೦), ಕೃತಿಗಳನ್ನು ಪ್ರಕಟಿಸುತ್ತಾನೆ. ಮೊಂಗ್ಲಿಂಗ್ ದಾಸರ ಪದಗಳನ್ನು ಜರ್ಮನ್ ಭಾಷೆಗೆ ಅನುವಾದಿಸುತ್ತಾನೆ. ವಿಶೇಷ ಮಾದರಿಗಳಿಲ್ಲದ ಕಾಲದಲ್ಲಿ ಮೊಂಗ್ಲಿಂಗ್‌ನು ಕನ್ನಡ ಪ್ರಾಚೀನ ಕಾವ್ಯ ಕೃತಿಗಳನ್ನು ಆಧುನಿಕ ಕಾಲದ ಓದಿಗೆ ಅನುವಾಗುವಂತೆ ಮಾಡಿರುವುದ ಶ್ಲಾಘನೀಯವಾದದ್ದು. ಹೀಗೆ ಕಿಟಲ್ ಮುಂತಾದ ವಿದ್ವಾಂಸರು ಅನೇಕ ಪ್ರಾಚೀನ ಕಾವ್ಯಗಳನ್ನು ಸಂಗ್ರಹ ಮಾಡಿ ಪ್ರಕಟಿಸುವ ಕೆಲಸವನ್ನು ಮಾಡುತ್ತ ಬಂದಿದ್ದನ್ನು ಗಮನಿಸಬಹುದು.

ಬಿ.ಎಲ್.ರೈಸ್ ಕನ್ನಡ ಸಾಹಿತ್ಯ, ಶಿಕ್ಷಣ ಹಾಗೂ ಇತಿಹಾಸ ರಂಗದಲ್ಲಿ ೩೦ ವರ್ಷಗಳ ಕಾಲ ದುಡಿದು ಕನ್ನಡ ಸಾಹಿತ್ಯಕ್ಕೊಂದು ಹೊಸ ದಿಕ್ಕು ತೋರಿಸಿದರು. ಪ್ರಾಚೀನ ಕಾವ್ಯಗಳನ್ನು ಶೋಧಿಸಿ ಪ್ರಕಟಿಸಿದರು. ಕನ್ನಡದ ಮೊದಲ ಗ್ರಂಥ ಕವಿರಾಜಮಾರ್ಗವನ್ನು ಸಂಗ್ರಹಿಸಿದರು. ಪಂಪ ಹಾಗೂ ಅಭಿನವ ಪಂಪರನ್ನು ಕನ್ನಡಿಗರಿಗೆ ತೆರೆದು ತೋರಿದ ಕೀರ್ತಿ ಇವರದ್ದಾಗಿದೆ.

ಹಸ್ತಪ್ರತಿ ಸಂಗ್ರಹ ಸಂಪಾದನೆಯನ್ನು ಮುಖ್ಯ ಗುರಿಯಾಗಿಸಿಕೊಂಡಿದ್ದ ರೈಸ್ ಸಾವಿರಾರು ಹಸ್ತಪ್ರತಿಗಳನ್ನು ಸಂಗ್ರಹಿಸಿ ಅವುಗಳ ರಕ್ಷಣೆಗಾಗಿ ಮೈಸೂರು ಓರಿಯಂಟಲ್ ಲೈಬ್ರರಿಗೆ ನೀಡಿದರು. ಸಂಗ್ರಹಿತ ಸಂಸ್ಕೃತ ಹಸ್ತಪ್ರತಿಗಳ ಪಟ್ಟಿಯನ್ನು ತಯಾರಿಸಿದರು.

ಬಿಬ್ಲಿಯಾಥಿಕ್ ಕರ್ನಾಟಕ ಗ್ರಂಥಮಾಲೆಯ ಮೂಲಕ ನಾಗವರ್ಮನ ಕರ್ನಾಟಕ ಭಾಷಾ ಭೂಷಣವನ್ನು ಪರಿಷ್ಕರಿಸಿ ಪ್ರಕಟಿಸಿದರು. ೧೮೪೭ ಜೂನ್ ಎಫ್. ಕಿಟಲ್ ಅವರಿಂದ ಕನ್ನಡ ಹಸ್ತಪ್ರತಿ ಸಂಗ್ರಹ ಹಾಗೂ ಸಂಪಾದನೆಯ ಕ್ಷೇತ್ರ ಒಂದು ಅಂತರ್‌ಶಿಸ್ತೀಯ

ಅಧ್ಯಯನದತ್ತ ತಿರುಗಿ ಶಾಸ್ತ್ರೀಯ ರೂಪ ಪಡೆದುಕೊಂಡಿತು. ಕುತೂಹಲಕರವಾಗಿದ್ದ ಸಂಗ್ರಹ ಸಂಪಾದನೆಯ ಕೆಲಸಗಳು ಅಧ್ಯಯನದ ಸ್ವರೂಪವನ್ನು ಪಡೆದುಕೊಂಡಿದ್ದವು. ಈ ಕಾಲದಲ್ಲಿ ೧೮೫೩ರಲ್ಲಿ ಮಂಗಳೂರಿಗೆ ಬಂದ ಕಿಟಲ್ ೧೮೯೨ರ ವರೆಗೆ ಸುದೀರ್ಘಕಾಲ ಕನ್ನಡ ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ನಿಘಂಟು ಮೊದಲಾದ ಕ್ಷೇತ್ರಗಳಲ್ಲಿ ತಮ್ಮನ್ನು ಆಳವಾಗಿ ತೊಡಗಿಸಿ ಕೊಂಡರು. ಕೇಶಿರಾಜನ ಶಬ್ದಮಣಿ ದರ್ಪಣ, ನಾಗವರ್ಮನ ಛಂಧೋಂಬುಧಿ ಮತ್ತು ಕನ್ನಡ–ಇಂಗ್ಲಿಷ್ ನಿಘಂಟು ಕಿಟೆಲ್ ಅವರ ಕನ್ನಡ ವಿದ್ವತ್ತಿನ ಹಿರಿಮೆಗಳಾಗಿವೆ. ಶಬ್ದಮಣಿ ದರ್ಪಣ ಆವೃತ್ತಿ ಕಿಟಲ್ ಶಾಸ್ತ್ರೀಯ ವಿದ್ವತ್ತಿನ ಪ್ರತೀಕವಾಗಿದೆ.

ಜಾನ್ ಗ್ಯಾರಟ್ ಅವರ ಪರಿಷ್ಕರಣದ ಆವೃತ್ತಿಯನ್ನು ಕಿಟಲ್ ೯ ಹಸ್ತಪ್ರತಿಗಳ ಸಹಾಯದಿಂದ ಪುನಃ ಪರಿಷ್ಕರಿಸಿ ಪ್ರತಿ ಪದಕ್ಕೂ ಟೀಕೂ ಬರೆದಿದ್ದರು. ಇದನ್ನು ಮುಂದೆ ಡಿ.ಎಲ್.ನರಸಿಂಹಚಾರ್ ಅವರಂಥ ದೇಶಿ ವಿದ್ವಾಂಸರು ಪರಿಷ್ಕರಿಸುತ್ತಾರೆ.

ಕಿಟಲ್ ಅವರು ಮಾಡಿದ ಇನ್ನೊಂದು ಮೈಲುಗಲ್ಲು ಕನ್ನಡದ ಅದ್ವಿತೀಯ ಕೃತಿಯಾದ ನಾಗವರ್ಮ ಛಂದೋಂಬುಧಿಯನ್ನು ನಾಗವರ್ಮನ ಕನ್ನಡ ಛಂದಸ್ಸು ಎಂಬ ಹೆಸರಿನಲ್ಲಿ ಸಂಪಾದಿಸಿ ಮಂಗಳೂರಿನ ಬಾಷೆಲ್ ಮಿಶನ್ ಬುಕ್ ಅಂಡ್ ಟ್ರ್ಯಾಕ್ ಮೂಲಕ(೧೮೭೫) ಪ್ರಕಟಿಸಿ ಸೂತ್ರಗಳ ಸಾರಾಂಶವನ್ನು ಹಾಗೂ ಟಿಪ್ಪಣಿಗಳನ್ನು ಇಂಗ್ಲಿಷ್‌ನಲ್ಲಿ ನೀಡಿದ್ದಾರೆ. ಕೃತಿಯ ಸಂಪಾದನೆಗೆ ಕಿಟಲ್ ಹದಿನೇಳು ಹಸ್ತಪ್ರತಿಗಳ ಸಹಾಯ ಪಡೆದಿದ್ದು, ಇದೊಂದು ಶಾಸ್ತ್ರೀಯ ಸಂಪಾದನೆ ಎಂದು ವಿದ್ವತ್ ವಲಯ ಗುರುತಿಸಿದೆ. ಕನ್ನಡೇತರರಿಗೆ ಕನ್ನಡ ಛಂದಸ್ಸಿನ ಬಗೆಯನ್ನು ತಿಳಿಯಲು ಇದು ನೆರವಾಗುತ್ತದೆ. ಈ ಕೃತಿ ಸಂಪಾದನೆಯ ಮತ್ತೊಂದು ವಿಶೇಷತೆ ಎಂದರೇ ಕನ್ನಡ ಸಾಹಿತ್ಯ ಚರಿತ್ರೆಯ ರೂಪುರೇಷೆಗಳ ಕುರಿತು ಮೊದಲ ಬಾರಿಗೆ ಪೀಠಿಕೆಯಲ್ಲಿ (೧೯೭೮) ಕಿಟಲ್ ಕವಿಗಳ ಕಾಲ, ಮತ, ಪರಿಸರ ಕುರಿತು ಸ್ಥೂಲ ಪರಿಚಯ ಮಾಡಿದ್ದಾರೆ. ಮುಂದೆ ಬಿ.ಎಲ್.ರೈಸ್ ಮತ್ತು ಆರ್.ನರಸಿಂಹಾಚಾರ್ಯ ಅವರಿಗೆ ಪೂರ್ಣ ಪ್ರಮಾಣದ ಕವಿಚರಿತೆ ರಚಿಸಲು ಈ ಸಂಗತಿಗಳು ಸಹಕಾರಿಯಾಗಿದ್ದವು ಎಂಬುದು ಗಮನಿಸತಕ್ಕ ಸಂಗತಿಯಾಗಿದೆ.

ಕಿಟಲ್ ನಾಗವರ್ಮನ ಬಗ್ಗೆ ಚರ್ಚಿಸುತ್ತ ಕನ್ನಡ ಭಾಷೆಯ ಆ ಮೂಲಕ ದ್ರಾವಿಡ ಭಾಷೆಗಳ ಪರಿಪಕ್ವತೆಯನ್ನು ಮೊದಲ ಬಾರಿಗೆ ಕಟ್ಟಿಕೊಡುತ್ತಾರೆ. ಪದಗಳ ಚಾರಿತ್ರಿಕ ಮೂಲ ಹುಡುಕುತ್ತ ಸಂಸ್ಕೃತದಿಂದ ಕನ್ನಡವು ಅಥವಾ ದ್ರಾವಿಡ ಭಾಷೆಗಳು ಪ್ರಭಾವಗೊಂಡಿವೆ ಎನ್ನುತ್ತಾರೆ. ಸಂಸ್ಕೃತವೂ ದ್ರಾವಿಡ ಪದಗಳನ್ನು ಸ್ವೀಕರಿಸಿದೆ. ಅದರ ಪ್ರಭಾವಕ್ಕೆ ಒಳಗಾಗಿದೆ ಎಂದು ಹೇಳಿದ್ದು ವಿಶೇಷ. ಕನ್ನಡ ಪದರಚನೆ. ವಾಕ್ಯರಚನೆ. ಮಹಾಪ್ರಾಣಗಳ ಬಗ್ಗೆ ಕಿಟಲ್ ಎತ್ತುವ ಪ್ರಶ್ನೆಗಳು ಸಾರ್ವಕಾಲಿಕ ಸಂವಾದಕ್ಕೆ ಪುಟ ನೀಡುವಂಥವು.

"ಮೊದಲಬಾರಿಗೆ ಕನ್ನಡ ಪ್ರಜ್ಞೆಯೊಂದನ್ನು ಅದರ ದೇಸಿ ಹಾಗೂ ಅನ್ಯದೇಸಿ ಮೊದಲಾದ ಸಹ ಸಂಘದೊಂದಿಗೆ ಗುರುತಿಸುವ ಚಾರಿತ್ರಿಕ ಹಾಗೂ ತೌಲನಿಕ ಅಧ್ಯಯನ ಮಾದರಿಗಳನ್ನು ಕನ್ನಡ ಗ್ರಂಥಸಂಪಾದನೆಗೆ ಕಿಟೆಲ್ ನೀಡುತ್ತಾರೆ. ಪಠ್ಯವೊಂದು ಅದರ ಪರಿಸರದ ಎಲ್ಲಾ ಅಂತಃ ಸತ್ವಗಳೊಡನೆ ಸಂವಹನ ಸಾಧ್ಯತೆಗಳೊಡನೆ ಪ್ರಭಾವಗಳೊಂದಿಗೆ ಅನುಸಂಧಾನ ಮಾಡಿದ ರೀತಿಯನ್ನು ಗುರುತಿಸುವುದು ಕಿಟಲ್ ವೈಧಾನಿಕತೆಯ ಪ್ರತೀಕವಾಗಿದೆ. ಕಿಟೆಲ್ ವೈಧಾನಿಕತೆ ಬಗ್ಗೆ ಬರೆಯುತ್ತಾ ಬಸವರಾಜ ಕಲ್ಗುಡಿಯವರು ಕಿಟೆಲ್ ಸಾವಯವ ಸಾತತ್ಯದ ಕಲ್ಪನೆಯನ್ನು ರೂಪಿಸಿದರೂ ಪರಂಪರೆಯನ್ನು ಸಾತತ್ಯದ ಮೂಲಕ ನೋಡುವ ಕೆಲಸವನ್ನು ಕಿಟೆಲ್ ಮಾಡಿದರು. ಒಂದು ಸಂವಾದದ ಮೂಲಕ ಸಾತತ್ಯವನ್ನು ಕಟ್ಟಿಕೊಡುವ ಕೆಲಸವನ್ನು ಕಿಟೆಲ್ ಮಾಡಿದರು'[೧೫] ಎನ್ನುವ ಮಾತು ಗಮನಾರ್ಹವಾದದು.

'ಆರಂಭದಲ್ಲಿ ಚರ್ಚಿಸಿದಂತೆ ಕನ್ನಡ ಸಾಹಿತ್ಯ ಸಂವಹನ ಪಾತಳಿಯ ಮರುಶೋಧವನ್ನು ಕಿಟೆಲ್ ಮಾಡುತ್ತಾರೆ. ಧ್ವನಿ, ಲಯ, ತಾಳಗಳ ಅರಿವಿಲ್ಲದೆ ಕನ್ನಡದ ಛಂದಸ್ಸನ್ನಾಗಲಿ ದೇಸಿ ಕಾವ್ಯಗಳನ್ನಾಗಿ ಅರ್ಥಮಾಡಿಕೊಳ್ಳುವುದು ಆಗುವುದಿಲ್ಲ. ಹೇಳುವ ಕೇಳುವ ಅನುಸಂಧಾನ ಸ್ವರೂಪದ ಕನ್ನಡ ಕಾವ್ಯದ ಮೌಖಿಕ ಗುಣ ಬಹುಶಃ ಶುಷ್ಕ ಪಾಂಡಿತ್ಯದಿಂದಾಗಿ ೧೯ನೆಯ ಶತಮಾನದಲ್ಲಿ ಬತ್ತಿ ಹೋಗುತ್ತಿತ್ತು. ಕನ್ನಡ ಸಾಹಿತ್ಯ ಪರಂಪರೆ ತನ್ನ ಅಸ್ಮಿತೆಯನ್ನು ಕಳೆದುಕೊಳ್ಳುತ್ತಿದ್ದ ಕಾಲದಲ್ಲಿ ಕಿಟೆಲ್‌ರಂತಹ ವಿದ್ವಾಂಸರು ಕನ್ನಡ ಪರಂಪರೆಗೆ ಮುಖ್ಯವಾಗಿದ್ದ ಮೌಖಿಕ ಗುಣವನ್ನು ಪುನಃ ಕಟ್ಟಿಕೊಡುವ ದೊಡ್ಡ ಪ್ರಯತ್ನ ಮಾಡುತ್ತಾರೆ. ಅದಕ್ಕಾಗಿ 'ಈ ಬಡವನಿಗೆ ಒಂದು ಧ್ವನಿ ಹಬ್ಬವನ್ನು ದಯಪಾಲಿಸು Grant this poor one dwani utsava the festival of songs ಎಂದು ದೇವರಲ್ಲಿ ಪ್ರಾರ್ಥಿಸುವ ಕ್ರಮ ಕನ್ನಡ ಕಾವ್ಯಾಧ್ಯಯನದ ದಿಕ್ಕನು ಸೂಚಿಸುತ್ತದೆ. ಕಿಟೆಲ್ ಅವರ ಈ ಪರಿಕಲ್ಪನೆ ಕನ್ನಡ ಕಾವ್ಯದ ಬಹುಮುಖ್ಯ ಶಾರೀರವಾಗಿದ್ದ ನಾದ ಅಥವಾ ಸಂವಹನಶೀಲತೆಯನ್ನು ಮರಳಿ ಕಟ್ಟಿಕೊಡುವುದಾಗಿತ್ತು'.[೧೬]

ಕನ್ನಡ ಸಂಸ್ಕೃತಿಯ ಸಾತತ್ಯವನ್ನು ಕಾಪಾಡಲು ಕಿಟೆಲ್ ಮಾಡಿದ ಪ್ರಯೋಗವೆಂದರೆ ಏಸುವಿನ ಕತೆಯನ್ನು ಭಾಮಿನಿ ಷಟ್ಪದಿಯಂತಹ ದೇಸಿ ಛಂದಸ್ಸುಗಳಲ್ಲಿ ಹೇಳುವ ಪ್ರಯತ್ನ ಮಾಡಿದ್ದು, ಪುರಾಣೀಕರಣಗೊಳಿಸಿ ವಿವರಿಸಲು ಪ್ರಯತ್ನಸಿದ್ದು. ಕಿಟೆಲ್ ಸಂಪಾದಿತ ಛಂದೋಂಬುಧಿ ಶಬ್ದಮಣಿ ದರ್ಪಣ, ಹಾಗೂ ಗ್ರಾಮರ್ ಆಫ್ ಕೆನರಿಸ್ ಲಾಂಗ್ವೇಜ್ ಇವನ್ನು ಕೇವಲ ಗ್ರಂಥಸಂಪಾದನೆ ಹಾಗೂ ವ್ಯಾಕರಣ ರಚನೆ ದೃಷ್ಟಿಯಿಂದ ನೋಡಿದರೆ ಸಾಲದು ಈ ಮೂರು ನೆಲೆಗಳ ಮೂಲಕ ಕಿಟೆಲ್ ಕನ್ನಡದ ಪ್ರಮಾಣೀಕರಣದ ನೆಲೆಗಳನ್ನು ಹುಡುಕಲು ಯತ್ನಿಸಿದರು ಎನ್ನುವುದು ಬಹುಮುಖ್ಯ.

ಫ್ಲೀಟ್ ಅಂಥವರೂ ಸಹಿತ ಶಾಸನಗಳ ಬಗ್ಗೆ ಕನ್ನಡ ಭಾಷೆ ಮತ್ತು ಸಂಸ್ಕೃತದ ಬಗ್ಗೆ ಮಾಡುವ ಹರಿತವಾದ ಚರ್ಚೆಗಳು ಆಳವಾದ ವಿವೇಚನಾ ಸ್ವರೂಪಗಳು ಕನ್ನಡ ಸಾಂಸ್ಕೃತಿಕ ಅಧ್ಯಯನದ ದಾರಿಗಳು ಹುಲುಸಾಗುತ್ತಿರುವ ನೆಲೆಯನ್ನು ತೋರುವಂಥವು. ನಿಷಿದ್ಧಿ ಗುಡ್ಡ ಮುಂತಾದ ಸಾಂಸ್ಕೃತಿಕ ಪದಗಳ ಕುರಿತು ಫ್ಲೀಟ್ ಅವರ ಸಾಂಸ್ಕೃತಿಕ ಜಿಜ್ಞಾಸೆ ಸ್ವಮತ ಪ್ರಚಾರದ ಲಾಭವನ್ನು ಮೀರಿದ ಕನ್ನಡದ ಕಾಳಜಿಯನ್ನು ತೋರುವಂಥದ್ದು.

'ಬ್ರಿಟಿಷ್ ಅಧಿಕಾರಿಗಳಾದ ಡ್ಯಾನಿಯಲ್ ಸ್ಯಾಂಡರ್ಸನ್, ಕರ್ನಲ್ ಮೆಕೆಂಜಿ, ರೆವರೆಂಡ್ ಲೂಥಿಯಾ, ವಿಲಿಯಂ ಲಿವ್ ನಂತಹ ಅಧಿಕಾರಿಗಳು ಹಸ್ತಪ್ರತಿಗಳ ಸಂಸ್ಕೃತಿ ಅಧ್ಯಯನ ಮಾಡಲು ಪ್ರೇರಣೆಯಾಗಿರುವುದನ್ನು ಕಾಣಬಹುದಾಗಿದೆ. ಬಾಸೆಲ್ ವಿದ್ವಾಂಸರು ಪ್ರಾಚೀನ ಹಸ್ತಪ್ರತಿಗಳಿಂದ ಕಾವ್ಯಭಾಗಗಳನ್ನು ಆಯ್ದು ಕರ್ನಾಟಕ ಕಾವ್ಯಮಾಲೆ ಕಾವ್ಯ ಮಂಜರಿ ಇತ್ಯಾದಿ ಸಂಕಲನಗಳನ್ನು ಪ್ರಕಟಿಸಿದರು. ಇವುಗಳಲ್ಲಿ ಕುಮಾರವ್ಯಾಸ, ಲಕ್ಷ್ಮೀಶ, ನಿಜಗುಣ, ಮಹಲಿಂಗರಂಗ, ಪುರಂದರದಾಸ, ಕನಕದಾಸ ಸರ್ವಜ್ಞ, ಚಾಮರಸ, ನಾಗಚಂದ್ರ ಮಾತ್ರವಲ್ಲ ಶಿಕ್ಷಿತ ಜನರಲ್ಲಿ ಕಾವ್ಯಾಭಿರುಚಿ ನಿರ್ಮಾಣ ಮಾಡುವುದು ಎಂದು ಕರ್ನಾಟಕ ಕಾವ್ಯಮಾಲೆ ಮುನ್ನುಡಿಯಲ್ಲಿ ಕಿಟಲ್ ಸ್ಪಷ್ಟಪಡಿಸಿದ್ದು, ಅವುಗಳನ್ನು ಸಂಪಾದಿಸಿ ಪ್ರಕಟಿಸುವಾಗ ಬಾಸೆಲ್ ವಿದ್ವಾಂಸರು ಶಿಷ್ಟ ಮತ್ತು ಜನಪದ ಎಂದು ಭೇದ ಮಾಡಲಿಲ್ಲ. ಗಾದೆಗಳ ಮೇಲೆ ಕಿಟೆಲ್ ಮತ್ತು ಮೋಗ್ಲಿಂಗ್ ಮಾಡಿದ ಕೆಲಸ ಅಮೋಘವಾದುದು. ಪಂಜೆಯವರಿಂದ ಸಂಪಾದಿಸಿ ಬಾಸೆಲ್ ಪ್ರಕಟಿಸಿದ ಎ ಫಸ್ಟ್‌ಬುಕ್ ಆಫ್ ಕೆನರಿಜ್ ಪೊಯಟ್ರಿಯಲ್ಲಿ ಜನಪದ ಹಾಡು ಕೀರ್ತನೆ ಹೊಸಗನ್ನಡ ಪದ್ಯಗಳು ಇವೆ. ಆಧುನಿಕ ಕಾಲದ ಕನ್ನಡ ವಿದ್ವತ್ತು ಸಾಹಿತ್ಯಿಕ ಮಹತ್ವದ ಅನೇಕ ಪಠ್ಯಗಳನ್ನು ಅವಗಣಿಸಿದೆ. ಈ ಹಿನ್ನೆಲೆಯಲ್ಲಿ ಎಲ್ಲ ಬಗೆಯ ಪಠ್ಯಗಳನ್ನು ಒಂದು ನಾಡಿನ ಸಾಂಸ್ಕೃತಿಕ ಅಭಿವ್ಯಕ್ತಿ ಎಂಬ ಇಂಡಿಯಾದ ದೃಷ್ಟಿಕೋನವನ್ನು ಬಾಸೆಲ್ ವಿದ್ವಾಂಸರು ತೋರಿಸಿದರು'.[೧೭]

ಮಿಷನರಿಗಳಿಗೆ ಕ್ರೈಸ್ತ ಧರ್ಮವನ್ನು ಅರಿಯುವುದಕ್ಕಾಗಿಯೂ ಬೈಬಲನ್ನು ಅನುವಾದಿಸುವುದಕ್ಕಾಗಿಯೂ ಪಾದ್ರಿಗಳಿಗೆ ಬಹುಭಾಷಿಕವಾಗುವ ಅಗತ್ಯವಿತ್ತು. ಆದರೆ ಇದು ಇವರಿಗೆ ಬಹುಭಾಷಿಕ ವಿದ್ವತ್ತು ದಕ್ಕಿಸಿತು. ಆಧುನಿಕ ಪೂರ್ವದ ಕನ್ನಡ ಸಾಹಿತ್ಯ ಅರಿಯಲು ಬಹುಭಾಷಿಕ ವಿದ್ವತ್ ಅಗತ್ಯವಿತ್ತು. ಈ ಬಹುಭಾಷಿಕತೆ ಬಹುರೂಪಿ ವಿದ್ವತ್ತಿಗೂ ಚಾಚುತ್ತದೆ. ಬಾಸೆಲ್ ನಿಘಂಟು, ವ್ಯಾಕರಣ, ಕಾವ್ಯ ಸಂಪಾದನೆ, ಕಾವ್ಯ ಅಧ್ಯಯನ, ಅನುವಾದ, ತೌಲನಿಕ ಅಧ್ಯಯನ, ಶಾಸನ, ಚರಿತ್ರೆ ಹಲವು ಕ್ಷೇತ್ರಗಳಲ್ಲಿ ಅವರು ದುಡಿದಿದ್ದರು. ಇದನ್ನು ಪಾಂಡಿತ್ಯದ ಬಹುತ್ವ ಎನ್ನಬಹುದು. ಇಂತಹ ಬಹುತ್ವ ಜ್ಞಾನ ಅಡಗಿರುವುದು ಹಸ್ತಪ್ರತಿಗಳಲ್ಲಿ ಎಂಬುದನ್ನು ಅರಿತ ಪಾದ್ರಿಗಳು ಹಸ್ತಪ್ರತಿಗಳ ಸಂಗ್ರಹ ಸಂಪಾದನೆಗೆ ಮುಂದಾದರು.

ಕರ್ನಾಟಕ ಸಂಸ್ಕೃತಿಯಲ್ಲಿ ಸಾಹಿತ್ಯವು ಹಲವು ಜ್ಞಾನಶಾಸ್ತ್ರದ ಕೆಲಸವನ್ನು ಮಾಡುತ್ತದೆ. ಅದಕ್ಕೆ ಸಮಾಜ, ಚರಿತ್ರೆ, ರಾಜಕಾರಣ, ಧರ್ಮ, ತತ್ವಶಾಸ್ತ್ರ, ಸೌಂದರ್ಯ ಮೀಮಾಂಸೆ, ಛಂದಸ್ಸು, ಇವುಗಳ ಜತೆ ಸಂಬಂಧವಿದೆ. ನಾಗವರ್ಮನ ಸಾಹಿತ್ಯಾಧ್ಯಯನಗಳಲ್ಲಿ ಪ್ರಧಾನವಾಗಿ ಕೆಲಸ ಮಾಡುತ್ತಿರುವುದು ಚರಿತ್ರೆ ಮತ್ತು ಸಾಹಿತ್ಯಿಕ ನೆಲೆಗಳು. ಇದರಿಂದ ಪ್ರಾಚೀನ ಪಠ್ಯಗಳಿಗಿರುವ ಹಲವು ಆಯಾಮ ಕಡೆಗಣಿತವಾಗಿದೆ. ಈಚೆಗೆ ನಮ್ಮ ಪ್ರಾಚೀನ ಪಠ್ಯಗಳನ್ನು ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡುವ ವಿಧಾನವು ಮುಂಚೂಣಿಗೆ ಬರುತ್ತದೆ. ಆದರೂ ಸಾಲದು ಈ ವಿಧಾನವು ಬಾಸೆಲ್ ವಿದ್ವಾಂಸರು ಆರಂಭಿಸಿದರೂ ಕಿಟೆಲ್ ನಿಜಗುಣಾಸ್ ನೋಟ್ಸ್ ಆನ್ ಇಂಡಿಯಾ ಮ್ಯೂಸಿಕ್ ೧೮೭೪ರಲ್ಲಿ ಲೇಖನ ಬರೆದರು ಕ್ರೈಸ್ತ ಧರ್ಮದ ಹಾಡುಗಳಿಗೆ ದೇಶಿ ರಾಗಸಂಯೋಜನೆ ಮಾಡುವ ಆಶಯ ಅದರಲ್ಲಿತ್ತು. ಇದರ ಜತೆಯಲ್ಲಿ ಪಠ್ಯಗಳಾಗಿರುವ ಸಾಹಿತ್ಯಿಕ ಆಯಾಮ ನೋಡುವ ಗುಣವು ಪ್ರಕಟವಾಯಿತು. ಇದಕ್ಕೆ ಮಿಶನರಿ ವಿದ್ವತ್ತಿಗಿದ್ದ ತತ್ವಶಾಸ್ತ್ರ, ಧರ್ಮಶಾಸ್ತ್ರ, ಸಂಗೀತಶಾಸ್ತ್ರಗಳ ತರಬೇತಿಯೂ ಕಾರಣವಾಗಿತ್ತು.

ಬಾಸೆಲ್ ವಿದ್ವಾಂಸರು ಬರೆದ ಲೇಖನಗಳ ಪಟ್ಟಿ ನೋಡಿದರೆ ಅವರ ವಿದ್ವತ್ತಿಗಿದ್ದ ಬಹುತ್ವದ ಚಿತ್ರ ಸಿಗುತ್ತದೆ. ಕೊಡವರ ಬಹುಪತ್ನಿತ್ವ, ಬಲಿಪದ್ಧತಿ, ಕರ್ನಾಟಕ ವೈಷ್ಣವ ದಾಸರು, ಲಿಂಗಾಯತ ಐತಿಹ್ಯಗಳು, ವೈದಿಕ ಬಹುದೇವತಾರಾದನೆ ಹೀಗೆ ಹಲವು ವಿಷಯಗಳ ಮೇಲೆ ಬರೆದರೆ ಸ್ಥಳೀಯ ಧರ್ಮ ಸಂಸ್ಕೃತಿಗಳನ್ನು ಕ್ರೈಸ್ತ ಧಾರ್ಮಿಕ ಹಿನ್ನೆಲೆಯಿಂದ ನೋಡುವ ಮೌಲ್ಯಮಾಪನ ಮಾಡುವ ಅವರ ದೃಷ್ಟಿಕೋನವನ್ನು ಒಪ್ಪಲಾಗದು. ಆದರೆ ಭಾಷೆ ಮತ್ತು ಸಾಹಿತ್ಯಗಳ ಮೇಲೆ ಕೆಲಸ ಮಾಡುವ ವಿದ್ವಾಂಸರು ಸಂಸ್ಕೃತಿ ಸಮಾಜ ಮತ್ತು ಧರ್ಮಗಳ ಮೇಲೆ ಕೂಡ ಅಧ್ಯಯನ ಮಾಡುವ ಬಹುಶಿಸ್ತೀಯ ವಿಧಾನವನ್ನು ಅಗತ್ಯವನ್ನು ಅವರು ತೋರಿಸಿಕೊಟ್ಟರು. ವಿದ್ವತ್ತಿನಲ್ಲಿ ಬಹುಭಾಷಿಕತೆ, ಬಹುಶಿಸ್ತೀಯತೆ ಹಾಗೂ ಸಾಂಸ್ಕೃತಿಕ ಬಹುತ್ವದ ಆಯಾಮವನ್ನು ಪಡೆಯುತ್ತದೆ.

ಭಾರತದಾದ್ಯಂತ ನಡೆದ ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ ಹಾಗೂ ಅಧ್ಯಯನದ ನೆಲೆಗಳನ್ನು ಗಮನಿಸಿದಾಗ ಆರಂಭದಲ್ಲಿ ಅದು ಪ್ರಾಚ್ಯವಸ್ತುಗಳ ಸಂಗ್ರಹದ ಭಾಗವಾಗಿ ಆರಂಭವಾದದ್ದು ಎದ್ದು ಕಾಣುತ್ತದೆ. ೧೮ನೆಯ ಶತಮಾನದ ಮಧ್ಯಭಾಗದಿಂದ ೧೯ನೆಯ ಶತಮಾನದ ಮಧ್ಯಭಾಗದ ವರೆಗೆ ಅದಕ್ಕೆ ಒಂದು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಮಹತ್ವ ಬಂದಿತ್ತು. ವಿಶೇಷವಾಗಿ ದಕ್ಷಿಣ ಭಾರತದ ರಾಜ್ಯಗಳಲ್ಲಿ ಹಸ್ತಪ್ರತಿಗಳು ಸಾಹಿತ್ಯ ಸಂಸ್ಕೃತಿಯ ಭಾಗವಾಗಿ ಸಂಪಾದನೆಗೊಂಡವು. ಈ ಮೂಲಕ ಬ್ರಿಟಿಷ್ ನಮ್ಮ ಆಲೋಚನಕ್ರಮಗಳನ್ನು ನಿರ್ದಿಷ್ಟ ಪಾತಳಿಯಲ್ಲಿ ರೂಢಿಸಿತು ಹಾಗೂ ಸ್ಥಿರೀಕರಿಸಿತು. ಇದು ಎಷ್ಟರ ಮಟ್ಟಿಗೆಂದರೆ ಶ್ರೇಣೀಕೃತ ಮಾದರಿಯಲ್ಲಿ ನಮ್ಮ ತಿಳುವಳಿಕೆಯನ್ನು ನಾವೇ ಉಪೇಕ್ಷಿಸುವಂತಾಯಿತು.

ಮಾಹಿತಿ ಪ್ರಧಾನ ಈ ಅಧ್ಯಯನ ಬ್ರಿಟಿಷ್ ಆಡಳಿತಶಾಹಿಯನ್ನು ಗಟ್ಟಿಗೊಳಿಸಿತು. ಅದೇ ಹೊತ್ತಿಗೆ ಸ್ಥಳೀಯ ಬಹುಮುಖಿ ಸಂಸ್ಕೃತಿಯ ನೆಲೆಗಳನ್ನು ನಾಶಮಾಡಿ ಪರಿಷ್ಕೃತ ಏಕೀಕೃತ ರೂಪವೊಂದನ್ನು ಭಾರತೀಯ ಆದರ್ಶ ಮಾದರಿಯನ್ನು ಪ್ರತಿಷ್ಠಾಪಿಸಿತು. ವ್ಯಾಕರಣ ಲಕ್ಷಣ ಗ್ರಂಥಗಳು ಕೆಲವು ಪಂಡಿತಮಾನ್ಯ ಕೃತಿಗಳೇ ಮುಖ್ಯವಾಗಿ ಜನಸಂಸ್ಕೃತಿಯ ಭಾಗವಾಗಿದ್ದ ಹಲವು ಕೃತಿಗಳು ಮೂಲ, ಪಾಠಾಂತರ, ಶುದ್ಧ, ತ್ರುಟಿತ ಎನ್ನುವ ಪರಿಕಲ್ಪನೆಯಲ್ಲಿ ನಿವಾರಿ ಸಲ್ಪಟ್ಟವು. ಸ್ಥಳೀಯ ಚರಿತ್ರೆಯನ್ನು ಸಶಕ್ತವಾಗಿ ಕಟ್ಟುವ ಹಲವು ಜೀವಂತ ಕೃತಿಗಳು ಮೌಢ್ಯತೆಯ ದೀಕ್ಷೆ ಪಡೆದವು. ಇದರಿಂದ ಕನ್ನಡ ಸಾಹಿತ್ಯ ಚರಿತ್ರೆ ಎನ್ನುವುದು ಸವರಲ್ಪಟ್ಟ ಮರವಾಗಿ ಬಗಲೊಡೆಯದೆ ಬಂಜೆಯಾಯಿತು. ಅಂದರೆ ವಸಾಹತುಶಾಹಿಗಿಂತ ಮೊದಲಿದ್ದ ಸಮುದಾಯ ಸಂಸ್ಕೃತಿ ಆಕೃತಿಗಳು ವಸಾಹತಿನ ವ್ಯಕ್ತಿ ಸಮುದಾಯ ಹಾಗೂ ಕಲಾಕೃತಿಗಳಾಗಿ ಬದಲಾಗುವ ಪ್ರಕ್ರಿಯೆಯನ್ನು ವೈಭವೀಕರಿಸುವ ಆವೇಗದಲ್ಲಿ ಅದರ ಹಿಂಸಾತ್ಮಕ ಕ್ರೌರ್ಯವನ್ನು ಭಸ್ಮಾಸುರ ಪ್ರವೃತ್ತಿಯನ್ನು ಅವಗಣಿಸಲಾಯಿತು. ಇದಕ್ಕೆ ಪೂರಕವಾದದ್ದು ವಸಾಹತು ಶಿಕ್ಷಣ.

ಒಟ್ಟಿನಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಅಧ್ಯಯನ ನಡೆದ ಸಂದರ್ಭದ ಹಿಂದಿನ ಒತ್ತಡಗಳು ರಾಷ್ಟ್ರೀಯವಾದಿ ಚಳುವಳಿ, ಜನಾಂಗೀಯ ಸಿದ್ಧಾಂತಗಳು, ಕ್ರಿಶ್ಚಿಯನರ ಚಟುವಟಿಕೆಗಳು, ಪ್ಲಾಸಿಕದನ, ಇಂಡೋಚೈನಾ ಯುದ್ಧಗಳು, ಸುಧಾರಣಾವಾದ ಇವೆಲ್ಲ ಜಾತಿ ಹಾಗೂ ಭಾಷಾಶಾಸ್ತ್ರವನ್ನು ತಮ್ಮ ಧೋರಣೆಗಳ ಅನುಷ್ಠಾನಕ್ಕೆ ಬಳಸಿಕೊಂಡವು. ಇದರಿಂದ ಜನಾಂಗದ ಸಿದ್ಧಾಂತಕ್ಕೆ ಭಾಷಾಶಾಸ್ತ್ರೀಯ ಸಮರ್ಥನೆಯನ್ನು ನೀಡುವ ಮೂಲಕ ಬ್ರಾಹ್ಮಣ, ಶೂದ್ರ, ಮೇಲು ಕೀಳು, ಶುದ್ಧ ಅಶುದ್ಧ, ಪ್ರಮಾಣ ಅಪ್ರಮಾಣ ಇತ್ಯಾದಿ ಸೀಳು ಕಲ್ಪನೆಯನ್ನು ಬಳಸಲಾಯಿತು. ಇದು ಇಂದಿಗೂ ಹಸ್ತಪ್ರತಿಗಳ ಸಂಗ್ರಹ ಸಂಪಾದನೆ ಅಧ್ಯಯನಗಳಲ್ಲಿ ಕಾಣುತ್ತಿರುವ ಸಂಗತಿಯಾಗಿದೆ. ಇದನ್ನು ಮೀರಿ ಹೊರಬಂದಾಗ ಮಾತ್ರ ಹಸ್ತಪ್ರತಿ ಅಧ್ಯಯನ ಹೊಸ ಆಯಾಮಕ್ಕೆ ದಕ್ಕುತ್ತದೆ ಎಂಬುದನ್ನು ಗಮನಿಸಬಹುದಾಗಿದೆ.

ಅಡಿಟಿಪ್ಪಣಿಗಳು

೧. ವೀರೇಶ ಬಡಿಗೇರ, *ಕೃತಿ : ಪ್ರತಿ ಮತ್ತು ಸಂಸ್ಕೃತಿ*, ಪುಸ್ತಕದ ಬೆನ್ನುಡಿ, ಕಿ.ರಂ. ನಾಗರಾಜ, ೨೦೧೫

೨. ವೀರೇಶ ಬಡಿಗೇರ, *ಹಸ್ತಪ್ರತಿ ವ್ಯಾಸಂಗ-೧೫*, ಪು.೪೭

೩. ಉಧೃತ ಅದೇ, ಪು.೪೮

೪. ವೀರೇಶ ಬಡಿಗೇರ, *ಹಸ್ತಪ್ರತಿ ಸಂಕಥನ*, ಪು.೧; ೨೦೧೪

೫. ಅದೇ, ಪು.೭; ೨೦೧೪

೬. ಅದೇ, ಪು.೭; ೨೦೧೪

೭. ವೀರೇಶ ಬಡಿಗೇರ, *ಕೃತಿ : ಪ್ರತಿ ಮತ್ತು ಸಂಸ್ಕೃತಿ,* ಪು.೩; ೨೦೧೫

೮. ಅದೇ, ಪು.೪; ೨೦೧೫

೯. ಅದೇ, ಪು.೪; ೨೦೧೫

೧೦. ಅದೇ, ಪು.೪; ೨೦೧೫

೧೧. ವೀರೇಶ ಬಡಿಗೇರ, *ಹಸ್ತಪ್ರತಿ ವ್ಯಾಸಂಗ–೧೪,* ಪು.೨೯; ೨೦೧೫

೧೨. ವೀರೇಶ ಬಡಿಗೇರ, *ಹಸ್ತಪ್ರತಿ ಸಂಕಥನ,* ಪು.೬; ೨೦೧೯

೧೩. ಅದೇ, ಪು.೭; ೨೦೧೯

೧೪. ಅದೇ, ಪು.೪ ; ೨೦೧೯

೧೫. ಅದೇ, ಪು.೭; ೨೦೧೯

೧೬. ಅದೇ, ಪು.೮; ೨೦೧೯

೧೭. ರಹಮತ್ ತರೀಕೆರೆ, *ಬಾಸೆಲ್ ಸ್ಮರಣೆ,* ನ್ಯಾಯಪಥ, ಪು.೧೧, ಮಾರ್ಚ್ ೨೦೧೯

ಅಧ್ಯಾಯ : ನಾಲ್ಕು

ಸಂಗ್ರಹ ಮತ್ತು ಸಂಪಾದನ ರೂಪಿ ಅಧ್ಯಯನಗಳು

೪.೧. ಸಂಗ್ರಹರೂಪಿ ಅಧ್ಯಯನಗಳು

೪.೨. ಸಂಪಾದನರೂಪಿ ಅಧ್ಯಯನಗಳು

ಅಧ್ಯಾಯ : ನಾಲ್ಕು

ಸಂಗ್ರಹ ಮತ್ತು ಸಂಪಾದನರೂಪಿ ಅಧ್ಯಯನಗಳು

೧೯ನೆಯ ಶತಮಾನದಲ್ಲಿ ಪ್ರಾರಂಭವಾದ ಸಾಮಾಜಿಕ ಶಿಕ್ಷಣದ ಫಲಿತವಾಗಿ ಹಸ್ತಪ್ರತಿ ಅಧ್ಯಯನದಲ್ಲಿ ಹೊಸ ಶಕೆ ಆರಂಭವಾಯಿತು. ಭಾರತದಾದ್ಯಂತ ಹಸ್ತಪ್ರತಿ ಸಂಗ್ರಹ, ಸಂಪಾದನೆ, ಸಂರಕ್ಷಣೆ, ಅಧ್ಯಯನ ಆರಂಭವಾಯಿತು. ಕನ್ನಡ ಹಸ್ತಪ್ರತಿಗಳು ನೈಪುಣ್ಯತೆ ಹಾಗೂ ಜ್ಞಾನದ ಸಂಘಟಿತ ರೂಪಗಳು ಅಕ್ಷರ ಪ್ರಧಾನ ಶೈಕ್ಷಣಿಕ ಚಿಂತನೆ ಹಾಗೂ ಅದರ ಘಟಕಗಳು ಇಂಥ ಬಹುಜ್ಞಾನಶಿಸ್ತುಗಳ ಭೌತಿಕ ಹಾಗೂ ಭಾಷಿಕ ರೂಪಗಳ ಕುರಿತು ತಳೆದ ನಿಲುವುಗಳು ಮಾಡಿದ ವಿಶ್ಲೇಷಣೆಗಳು ಏಕಪಕ್ಷೀಯವಾದಂಥವು. ಹಸ್ತಪ್ರತಿಗಳು ಮತ್ತು ಅದರ ಬಹುಮುಖಿ ಪಠ್ಯಗಳ ಕುರಿತು ಗ್ರಂಥಸಂಪಾದನ ಶಾಸ್ತ್ರವು ತಳೆದ ನಿಲುವು ಬಹುಮುಖಿ ಜ್ಞಾನದ ಕಲ್ಪನೆಯನ್ನೂ ನಿರಾಕರಿಸಿತು.

'ಹಲವು ಕನ್ನಡಂಗಳ್, ಪೊಸತಾಗಿ ರಚಿಸಿದೆ ಎನ್ನುವ ನೆಲೆಗಳು ಕನ್ನಡ ಜ್ಞಾನದ ಧ್ವನಿರೂಪದ ನೆಲೆಗಳನ್ನು ಹೇಳುವಂಥವು. ಏಕೆಂದರೆ ಪ್ರತಿಯೊಂದು ಕೃತಿಯು ತನ್ನ ಅಸ್ತಿತ್ವ ಹಾಗೂ ಅರ್ಥಕ್ಕಾಗಿ ತನ್ನ ಹಿಂದಿನ ಕೃತಿಗಳನ್ನು ಹಾಗೂ ಅವು ನಿರ್ಮಿಸಿದ ಸಾಹಿತ್ಯ ಪರಂಪರೆಯನ್ನು ಅವಲಂಬಿಸಿರುತ್ತದೆ. ಇಂಥ ಅಂಶವನ್ನು 'ಅಂತರ್ ಕೃತಿ ಸ್ವರೂಪ' ಎಂದು ಆಧುನಿಕ ವಿಮರ್ಶೆ ಕರೆಯುತ್ತದೆ. ಕಾರಣ ಸಾಹಿತ್ಯಿಕ ಸಾಮರ್ಥ್ಯ ಎನ್ನುವುದು ಕವಿ, ಕೃತಿಕಾರ, ಓದುಗ, ಪ್ರತಿಕಾರ ಮತ್ತು ಕೇಳುಗ ಇವರಲ್ಲಿ ಅಂತಸ್ಥಗೊಂಡ ಸಮಾನ ಸಾಮರ್ಥ್ಯವಾಗಿದೆ. ಕೃತಿ ರಚನೆಯೆಂದರೆ ಇಂಥ ಕವಿ, ಕೃತಿಕಾರ, ಓದುಗ, ಲಿಪಿಕಾರ, ಹಸ್ತಪ್ರತಿ ತಯಾರಿಸುವ ಜನಸಮುದಾಯಗಳು ದಕ್ಕಿಸಿಕೊಂಡಿರುವ ಒಂದು ಸಾಂಸ್ಕೃತಿಕ ಪರಂಪರೆಯೊಂದಿಗೆ ಸಾತತ್ಯವನ್ನು ಸಾಧಿಸುವುದು ಪ್ರತಿ ರಚನೆಯು ತನ್ನ ಹಿಂದಿನ ಕೃತಿಯ ರಸವನ್ನು ಹೀರಿಕೊಂಡು ಅದನ್ನು ರೂಪಾಂತರಿಸಿ ಕೊಂಡು ಸೃಜನಶೀಲವಾಗಿ ಬೆಳೆದು ಬಂದಿರುತ್ತದೆ'.[೧]

ಹೀಗಾಗಿ ಹಸ್ತಪ್ರತಿಗಳ ಪರಿಭಾಷೆಯಲ್ಲಿ ರಚನೆ ಎಂದರೆ ಕೇವಲ ಸಾಹಿತ್ಯ ಮಾತ್ರವಾಗಿರಲಿಲ್ಲ. ಹಸ್ತಪ್ರತಿ ನಿರ್ಮಾಣದ ಕೆಲಸ ದೇವಾಲಯ ನಿರ್ಮಾಣದಷ್ಟೇ ಮಹತ್ವದ್ದಾಗಿತ್ತು. ಅದೊಂದು ಕಾಯಕದ ರೂಪ ಪಡೆದಂತೆ ಧಾರ್ಮಿಕ ಕೆಲಸವು ಆಗಿತ್ತು. ನಮ್ಮ ನಾಡಿನ ಕಾವ್ಯ ಪುರಾಣಗಳ ನಿರೂಪಣ ವಿಧಾನಗಳನ್ನು ಗಮನಿಸಿದಾಗ ಸಹೃದಯ ಕೇಳುಗರಿಗಾಗಿಯೇ ಸಹೃದಯ ಕೇಳುಗರಿಂದಲೇ ರಚಿಸಲ್ಪಟ್ಟಂಥವು. ತನಗುಣದ ಉನ್ನತದ ಅರಿವನ್ನು ಚೆನ್ನಾಗಿ ಬರೆದೋದಿ ನೋಡಿ ತಿಳಿದ ಬಹುಮುಖಿ ನೆಲೆಗಳನ್ನು ಹೇಳುತ್ತವೆ.

'ಕೇಳಿದ ಸುಖ ಕಿವಿಗೆ ಬೇಟವಾಯಿತು

ಕಿವಿಗಳ ಬೇಟ ಕಂಗಳ ಮುಂದೆ ಮೂರ್ತಿಗೊಂಡಿತ್ತು

ಕಂಗಳ ಮುಂದೆ ಕಂಡ ಸುಖವು ಮನಕ್ಕೆ ವೇದ್ಯವಾಯಿತು'.[೨]

ಜ್ಞಾನೇಂದ್ರಿಯಗಳಲ್ಲಿ ಶ್ರವಣೇಂದ್ರಿಯ ಮತ್ತು ಗ್ರಹಣೇಂದ್ರಿಯಗಳಿಗೆ ಇದ್ದ ಮಹತ್ವ ಅರಿವಿಗೆ ಬರುತ್ತದೆ. ಅಂದರೆ ಜ್ಞಾನದ ಹೊರಮುಖ ಚಲನೆಗಿಂತ ಒಳಮುಖ ಚಲನೆಗೆ ಒತ್ತು ಕಂಡುಬರುತ್ತದೆ. ಅಂದರೆ ಕನ್ನಡ ಕಾವ್ಯದ ಲಿಖಿತ ಹಾಗೂ ಮೌಖಿಕ ಗುಣದ ಅಖಂಡತೆಯನ್ನಿಲ್ಲಿ ಕಾಣುತ್ತೇವೆ.

'ಲಿಖಿತ, ಜಾನಪದ, ಜನಪ್ರಿಯ ಎಂದೆಲ್ಲ ಗುರುತಿಸಲ್ಪಡುವ ಪ್ರಕಾರಗಳು ಭಾರತೀಯ ಸಂಸ್ಕೃತಿಯ ಅಖಂಡಧಾರೆಯ ಪರಸ್ಪರ ಪ್ರತಿಕ್ರಿಯಾತ್ಮಕ ಸಂಬಂಧವುಳ್ಳ ಭಿನ್ನ ಭಾಗಗಳು ಎನ್ನುವ ಎ.ಕೆ. ರಾಮಾನುಜನ್ ಅವರ ಮಾತು ಗಮನಾರ್ಹವಾದುದು'[೩]

'ಪಂಪ ಹೇಳುವಂತೆ ದೇಶಿಯೊಳ್ ಪೊಗುವುದು, ಪೊಕ್ಕು ಮಾರ್ಗದೊಳ್ ತಳ್ವುದು' ಎನ್ನುವುದಾಗಲೀ ಕುಮಾರವ್ಯಾಸ ಭಾರತ ಕನ್ನಡದ ಅನೇಕ ಮೌಖಿಕ ಮಹಾಭಾರತಗಳಿಗೆ ಪ್ರೇರಣೆ ನಿಡಿದ್ದಾಗಲೀ ಈ ಪ್ರಕ್ರಿಯೆಯ ಭಾಗಗಳ ಭಾರತದ ಹಾಗೂ ಕರ್ನಾಟಕದ ಮೌಖಿಕ ಕಾವ್ಯಗಳೆಲ್ಲವೂ ಅನುಸೂಚಿತ ಜಾತಿ ಜನಾಂಗದಿಂದ ನಿರ್ಮಾಣ ಗೊಂಡಿದ್ದು ಹಾಗೂ ಹಸ್ತಪ್ರತಿಗಳ ನಿರ್ಮಾಣ ಹಾಗೂ ರಚನಕ್ರಿಯೆಗಳು ಇಂಥ ಕಸುಬುದಾರ ವರ್ಗಗಳಿಂದ ನಡೆದಿದ್ದು ಕುತೂಹಲಕರವಾದದ್ದು. ಆದರೆ ಆಸ್ಥಾನ ಪಂಡಿತ ಆಸಕ್ತಿ ಹಾಗೂ ಅಭಿರುಚಿಗಳು ಇಂಥ ಅಭಿವ್ಯಕ್ತಿಯ ರೂಪ ಹಾಗೂ ಉದ್ದೇಶವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿದ್ದವು. ವಸಾಹತುಕಾಲದಲ್ಲಿ ನಡೆದ ಕ್ರಿಶ್ಚಿಯನ್ ಧರ್ಮಪ್ರಣೀತ ಸಂಕಲನ ಹಾಗೂ ಸಂಪಾದನೆ ಮಾದರಿಗಳು ಶುದ್ಧ ಹಾಗೂ ಪ್ರಮಾಣೀಕರಣದ ಹೆಸರಲ್ಲಿ ಕನ್ನಡದ ಬಹುಮುಖಿ ಅಭಿವ್ಯಕ್ತಿ ಕ್ರಮವನ್ನು ಸವರಿ ಹಾಕಿದವು. ಧರ್ಮ ಹಾಗೂ ಪ್ರಭುತ್ವ ಕೇಂದ್ರಿಕೃತ ಧೋರಣೆಗಳು ಯಾವತ್ತು ಸೃಜನಶೀಲತೆಯ ಬಹು ಸಾಧ್ಯತೆಗಳನ್ನು ನಿರಾಕರಿಸುತ್ತವೆ.[೪]

೧೨ನೆಯ ಶತಮಾನದ ನಂತರ ಕನ್ನಡದ ಸ್ಥಿತಿ ಬದಲಾಯಿತು. ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ, ರೂಪಗಳು ಓದು, ಬರಹ ಬಾರದವರಿಗೂ ಓದು ಬಲ್ಲವರು ಓದಿ ಹೇಳಿದರೆ ತಿಳಿಯುಷ್ಟು ಸುಲಭದ ಭಾಷೆಯಲ್ಲಿ ರಚಿತವಾದವು. ಆದರೂ ಕನ್ನಡ ನಾಡಿನ ಓದುಗರನ್ನು ಆಕ್ರಮಿಸಿಕೊಂಡಿದ್ದ ಧಾರ್ಮಿಕ ಹಾಗೂ ಮತೀಯ ನಂಬಿಕೆಗಳು ಅವರ ಅಭಿರುಚಿಯನ್ನು ನಿಯಂತ್ರಿಸಿದ್ದವು. ಕಾವ್ಯವೆನ್ನುವುದು ಸಾಹಿತ್ಯ ಕೃತಿಗಿಂತ ಪಾರಾಯಣದ ವಿಷಯವಾಗಿತ್ತು. ಅದೊಂದು ಧಾರ್ಮಿಕ ಕ್ರಿಯೆಯಾಗಿತ್ತೆನ್ನುವುದಕ್ಕೆ ಪ್ರತಿಯೊಂದು ಹಸ್ತಪ್ರತಿಗಳ ಆದಿ ಅಂತ್ಯ ಹಾಗೂ ಮಧ್ಯದಲ್ಲಿ ಕಾಣುವ ಸ್ತುತಿರೂಪಗಳು, ಆಚರಣೆಗಳು ಇದಕ್ಕೆ ಉತ್ತಮ ನಿದರ್ಶನಗಳಾಗಿವೆ.

ಧರ್ಮವೆಂಬುದು ತನ್ನ ಕಾಲದ ಕವಿಗಳಿಂದ ಕಾವ್ಯರೂಪದ ಕಾಣಿಕೆಯನ್ನು ನಿರೀಕ್ಷಿಸಿದ್ದರಿಂದ ಧಾರ್ಮಿಕವಲ್ಲದ ಶುದ್ಧ ಲೌಕಿಕ ಕಾವ್ಯಗಳ ರಚನೆ ವಿರಳವಾಯಿತು. ಕೃತಿಯ ಆಯ್ಕೆ ಹಾಗೂ ಪ್ರಸಾರದ ಸಾರಥ್ಯವನ್ನು ಧರ್ಮವಹಿಸಿತು. ಇದರಿಂದಾಗಿ ಧಾರ್ಮಿಕವಲ್ಲದ ಕಾವ್ಯಗಳ ಓದು ಹಾಗೂ ಪ್ರತೀಕರಣದ ವಿಚಾರ ತಿರಸ್ಕಾರಕ್ಕೆ ಒಳಗಾಯಿತು. ಇದರಿಂದ ನಿರ್ದಿಷ್ಟ ಕಾವ್ಯದ ಬಳಕೆ ಶುರುವಾಯಿತು.

ಧರ್ಮ ಪ್ರಚಾರಕ್ಕೆ ಆಧ್ಯಾತ್ಮದ ಅಭಿವ್ಯಕ್ತಿಗೆ ಜನರಿಗೆ ತಿಳಿಯುವಂಥ ಕನ್ನಡವನ್ನು ದುಡಿಸಿಕೊಂಡವರು ಶರಣರು, ಕೀರ್ತನಕಾರರು ಮತ್ತು ತತ್ವಪದಕಾರರು. ಕೀರ್ತಿ ಪೂಜೆ ಲಾಭ ಹಾಗೂ ಆಧ್ಯಾತ್ಮಿಕವಾದ ಸಂತೃಪ್ತಿ ಕಾವ್ಯಾಧ್ಯಯನದಿಂದ ದೊರೆಯುವ ಪ್ರಯೋಜನ ಎನ್ನುವ ಅರಿವಿದ್ದಾಗಲೂ ಓದುಗರ ಹಾಗೂ ಕೇಳುಗರ ಮನಸ್ಥಿತಿಯೇ ಕಾವ್ಯದ ಬಹುಮುಖ್ಯ ಲೌಕಿಕ ಪ್ರಯೋಜನವೆಂದು ಭಾವಿಸಿದ್ದು ಕಂಡುಬರುತ್ತದೆ. 'ಕವಿ ಅಧಿಕನಿದ್ದೊಡೆ ಕೇಳ್ವರಿಲ್ಲದೊಡೆ ಸಜ್ಜನರ್ಗೆ ಸೇವ್ಯಂವಾದೊಡೆ ಅದು ಸಾಲದೆ'. ಇಂಥ ಮುಕ್ತ ಹಾಗೂ ಸೃಜನಶೀಲ ನಡೆಗಳು ದೋಷಗಳಾಗಿ ನಿರಾಕರಣೆಗೊಳಪಟ್ಟಿದ್ದು ಗಮನಾರ್ಹ. ಪ್ರತಿಕಾರನೊಬ್ಬ ತನ್ನ ಲಿಪೀಕರಣ ಕ್ರಿಯೆಯಿಂದಾಗಿ ಪ್ರಾಚೀನ ಕವಿಯನ್ನುಳಿಸಿಕೊಟ್ಟ ಮಹತ್ವದ ಸಂಗತಿಗಳನ್ನು ಹಿಂದಿಟ್ಟು ಸಹಜ ತಪ್ಪುಗಳು ಹಾಗೂ ವಿಕಲ್ಪಗಳನ್ನು ಮುಂದು ಮಾಡಿ ಅವನನ್ನು ಹೊಣೆಗೇಡಿ, ಕಿಡಿಗೇಡಿ ಎಂದು ವ್ಯಾಖ್ಯಾನಿಸುತ್ತ ಬರಲಾಗಿದೆ. ಇಂಥ ಶಿಷ್ಟ ಮನೋಧರ್ಮಗಳ ಕಿರಿಕಿರಿಗೆ ಬೇಸತ್ತ ರಾಘವಾಂಕನಂತ ಕವಿಯು ಉಗ್ರವಾಗಿ ಪ್ರತಿಕ್ರಿಯಿಸಿದ್ದಾನೆ.

'ಎಡೆವಾಯ್ದು ಬಂದ ತಪ್ಪಂ ಪಿಡಿದು ಸಾಧಿಸದೆ

ಕಡೆತನಕ ಬಂದ ಲೇಸಿಂಗೆ ತಲೆದೂಗೆ ಪತಿ

ಒಡೆಯುವುದೇ? ಬೇನೆಯರಿಯದ ನೀರಸನ್ ಏಕೆ

ಪುಟ್ಟಿಸಿದಂಬುಜ ಭುವನು"

‘ಲಕ್ಷ್ಮೀಶನೂ ಕೂಡ ಕೆನೆ ಹಾಲನ್ನು ಕಡಿದು ನವನೀತವನ್ನು ತೆಗೆದು ಬಾಯಿಗೆ ರುಚಿಯಾಗುವಂತೆ ಸವಿಯದೆ ಹಾಲಲ್ಲಿ ಹುಳಿ ಹಿಂಡಿ ರಸವನ್ನೇ ಕೇಡಿಸಿದರೆ ಕರೆದ ಕಾಮಧೇನುವಿಗೆ ಆ ಮೋಕ್ಷ ತಟ್ಟುತ್ತದೆ. ತಪ್ಪಿದ್ದರೆ ತಿದ್ದಿವೊದುದು ಸುಜನರು ತಪ್ಪಿದೆಯೆಂದುಲಿವ ನರಾಧಮರ ಬಾಯಲಿ ಗ್ರಾಮ ಸೂಕರನ ಮಾಂಸ’[೬] ಎನ್ನುವ ಮಾತುಗಳು ಭಿನ್ನತೆಗಳನ್ನು ನಿರಾಕರಿಸುವ ಹಾಗೂ ಅಂಥ ಅಭಿವ್ಯಕ್ತಿ ಕ್ರಮಗಳೊಳಗೆ ತಪ್ಪು ಹುಡುಕುವ ಪಂಡಿತ ಧೋರಣೆಗಳನ್ನು ಪ್ರಶ್ನಿಸುತ್ತವೆ. ಬಹುಸಂವೇದನೆಗಳನ್ನು ಕೊಲ್ಲುವ ಬರಹದ ಅಧಿಕಾರಶಾಹಿ ಗುಣವನ್ನು ವಿರೋಧಿಸುತ್ತವೆ. ಓದು ಬರಹದ ಹೊರ ರೂಪಗಳನ್ನು ಹೇಳುವ ಇಂಥ ಕೇಂದ್ರೀಕೃತ ನೆಲೆಗಳು ಸ್ಥಳೀಯ ಅಂತಸ್ಥ ಸಂವೇದನಗಳನ್ನು ನಿರಾಕರಿಸುತ್ತವೆ.

ನಮ್ಮ ಬಹುಪಾಲು ಆಧುನಿಕ ಸಾಹಿತ್ಯ ತತ್ವಗಳು ಹಾಗೂ ಸಂಸ್ಕೃತ ಕಾವ್ಯ ಮೀಮಾಂಸೆಯ ತತ್ವಗಳು ಕಾವ್ಯದ ಬಾಹ್ಯ ರೂಪದ ನಿರ್ಣಯ ಪ್ರಕ್ರಿಯೆಯಲ್ಲಿಯೇ ಸೋತು ಸುಣ್ಣವಾದವು. ಛಂದಸ್ಸು, ಅಲಂಕಾರ, ರೀತಿ, ಧ್ವನಿ, ರಸ, ಶೈಲಿ ಹಾಗೂ ಪ್ರಸ್ಥಾನಗಳ ಚರ್ಚೆಗಳು ಭಾಷೆಯ ಹೊರ ರೂಪವನ್ನೇ ಕುರಿತು ನಡೆದಂಥವು. ಈ ಗ್ರಹಿಕೆಗಳು ಕನ್ನಡ ಭಾಷೆಯ ಅನಂತಶಕ್ತಿಯನ್ನು ಅರಿಯುವಲ್ಲಿ ವಿಫಲವಾದವು. ಲೋಕವನ್ನು ತನ್ನ ರೀತಿಯಲ್ಲಿ ಅರಿಯುವ ಅದರೊಂದಿಗೆ ವಾಗ್ವಾದವನ್ನು ನಿರ್ಮಿಸುವ ಭಾಷೆಯ ಅನಂತಶಕ್ತಿಯನ್ನು ಕುರಿತು ಇವು ಯೋಚಿಸಲಿಲ್ಲ. ನೋಮ್‌ಚಾಮಸ್ಕಿಯಂಥ ಆಧುನಿಕ ಭಾಷಾ ವಿಜ್ಞಾನಿಗಳು ಭಾಷೆಯ ಇಂಥ ಆಳವನ್ನು ಅರಿಯುವುದರೊಂದಿಗೆ ರಚನಾತ್ಮಕ ಸಂವಾದ ಬೆಳೆಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾದರು. ಮನುಷ್ಯನ ಮನೋಭಕ್ತಿಯೊಂದಿಗೆ ಭಾಷೆ ಮತ್ತು ಮನಸ್ಸು ಕಾರ್ಯಶೀಲ ಗೊಳ್ಳುವಲ್ಲಿ ಮುಖ್ಯವಾದ ಮೆದುಳಿನ ನಿಗೂಢತೆ ಕುರಿತು ಚರ್ಚೆ ಆತನ ಮುಖ್ಯ ಭಿತ್ತಿ.

ಕನ್ನಡ ಪ್ರಜ್ಞೆ ಸಂಸ್ಕೃತದ ಇಂಥ ನಿಯಮಬದ್ಧ ಕಾವ್ಯರಚನೆ ಹಾಗೂ ಅಧ್ಯಯನದ ಜಂಜಾಟಗಳನ್ನು ನಿರಾಕರಿಸಿತು. ತನ್ನ ಭಾಷೆ ಹಾಗೂ ಅಭಿವ್ಯಕ್ತಿ ಕ್ರಮಕ್ಕಿದ್ದ ಸ್ವತಂತ್ರ ಸ್ಥಿತಿಯ ಮೂಲಕ ಸಮುದಾಯಗಳನ್ನು ಅರಿವಿನಿಂದ ಕ್ರಿಯಾಶೀಲದ ಕಡೆಗೆ ಚಲಿಸುವಂತೆ ಮಾಡಿತು. ವ್ಯಕ್ತಿಗತ ಹಾಗೂ ಕ್ರಿಯಾರಹಿತ ಮಿಥ್ಯಾ ತಿಳುವಳಿಕೆಯನ್ನು ವಿಸರ್ಜಿಸಿತು. ನಮ್ಮ ಪ್ರಜ್ಞೆಯನ್ನು ರೂಪಿಸುವ ಸಾಂಸ್ಕೃತಿಕ ಪರಿಸರ ಮತ್ತು ನಮ್ಮ ಚಿಂತನೆಯನ್ನು ನಿಯಂತ್ರಿಸುವ ಯಜಮಾನಿಕೆ ಒತ್ತಡಗಳಿಂದ ಮುಕ್ತವಾಗುವುದು ಅಷ್ಟು ಸುಲಭವಲ್ಲ. ಅಂದರೆ ಅರಿವನ್ನು ಸ್ವಯಂವಾಗಿಸಿಕೊಳ್ಳುವ ಮೂಲಕ ಕನ್ನಡ ಪ್ರಜ್ಞೆ ಅಂಥ ಐತಿಹಾಸಿಕ ಮಹತ್ವವನ್ನು ಸಾಧಿಸಿತು.

ಕನ್ನಡ ಹಸ್ತಪ್ರತಿಗಳ ವಸ್ತು ಹಾಗೂ ವಿಷಯ ಸ್ವರೂಪವು ಏಕಮೂಲವಾದದ ಸ್ಪಷ್ಟ ನಿರಾಕರಣೆಯನ್ನು ಮಾಡುತ್ತದೆ. ಹಸ್ತಪ್ರತಿಯೊಡಲೊಳಗೆ ಕವಿ, ಗಮಕಿ ಕಥೆಗಾರ, ತಾತ್ವಿಕ ಧಾರ್ಮಿಕ, ಲೌಕಿಕ, ಸಾಧಕ, ಪೂಜಕ, ಓದುಗ, ಕೇಳುಗ, ಲಿಪಿಕಾರ, ಕರಕುಶಲಕರ್ಮಿ

ಹೀಗೆ ಅನೇಕರಿದ್ದಾರೆ. ಜಾತಿ ಲಿಂಗ ಶುದ್ಧ ಹಾಗೂ ಶ್ರೇಷ್ಠ ಎನ್ನುವ ವ್ಯಾಖ್ಯಾನಗಳನ್ನು ಮೀರಿದ ಮುಕ್ತತೆಯಿದೆ. ಬರವಣಿಗೆಗೆ ಹಾಗೂ ಗ್ರಂಥವನ್ನು ಅತಿಮಾನುಷ ಅಪೌರುಷೆಯ ಎಂದು ನಿಯಮಬದ್ಧಗೊಳಿಸಿದ ಧೋರಣೆಗಳನ್ನು ಇವು ಪ್ರಶ್ನಿಸುತ್ತವೆ. ಕೃತಿಯನ್ನು ಓದಿ ಅದರ ಪ್ರಯೋಜನ ಪಡೆಯುವ ಬದಲು ಅದನ್ನು ಪೂಜಿಸಿ ಅದರ ಅನುಸಂಧಾನದ ದಾರಿಗಳನ್ನು ದೂರ ಮಾಡಿದ ಸಂಗತಿಗಳತ್ತ ಹಸ್ತಪ್ರತಿಗಳು ಬೆಳಕು ಚೆಲ್ಲುತ್ತವೆ. ಒಂದು ಕೃತಿಯನ್ನು ಉದಾತ್ತಗೊಳಿಸಿದ್ದು, ಆ ಸಾಹಿತ್ಯ ಅಭ್ಯಾಸ ಮಾಡಿ ಅದರಿಂದ ಸ್ಫೂರ್ತಿ ಪಡೆದ ಜನರಲ್ಲಿ ಆ ಸಾಹಿತ್ಯದಿಂದ ತಮ್ಮ ವರ್ಗದ ಶ್ರೇಷ್ಠತೆಯನ್ನು ಎತ್ತಿ ಹಿಡಿದು ಅದರ ಪಾವಿತ್ರ್ಯದ ಅಸ್ತ್ರದಿಂದ ಬೇರೆ ವರ್ಗದವರ ಮೇಲೆ ತಮ್ಮ ದಬ್ಬಾಳಿಕೆಯನ್ನು ಸ್ಥಾಪಿಸಿ ಹೊರಬಿದ್ದ ಜನರು ಯಾವತ್ತೂ ಜಾತಿ ಪ್ರದೇಶ, ಲಿಂಗಸಂಬಂಧಗಳು ಭಿನ್ನ ಪಠ್ಯಗಳು ಅಥವಾ ಪ್ರಮಾಣೀಕರಣ ಎನ್ನುವುದೇ ತನ್ನ ಇರುವಕೆಯ ಅಗತ್ಯವನ್ನು ಒತ್ತಾಯಪೂರ್ವಕವಾಗಿ ಹೇರುವಂಥದ್ದು. ಇಂಥ ಏಕತೆಯ ಹಂಬಲಗಳು ಬಹುಮುಖತೆಯ ನಿರಾಕರಣೆಗಳು ಮನುಷ್ಯನ ಬಹುಮುಖಿ ಚಿಂತನೆಗೆ ವಿರೋಧವಾದಂತವು. ನಶ್ವರತೆಯನ್ನು ಸಾಮುದಾಯಿಕ ಗುಣವನ್ನು ಒಪ್ಪಿಕೊಳ್ಳದಂತಹ ಅಹಂಕಾರದಿಂದ ಹುಟ್ಟಿದಂಥವು. ಇವು ಸಾಹಿತ್ಯ ಮತ್ತು ಸಂಸ್ಕೃತಿಯ ಹಿಂದಿನ ಲೋಕ ಗ್ರಹಿಕೆಯನ್ನು ನಿಯಂತ್ರಿಸುತ್ತ ಬಂದಿದೆ. ಎಲ್ಲವನ್ನು ಏಕಕಾಲಕ್ಕೆ ಎರಕಹೊಯ್ದು ಬ್ರಾಹ್ಮಣಕ್ಕೆ ಅರ್ಪಿಸುವ ವಿಕಲ್ಪದಿಂದ ಬಿಡುಗಡೆಗೊಳ್ಳಲು ಕನ್ನಡ ಪ್ರಜ್ಞೆ ಹವಣಿಸುತ್ತಲೇ ಬಂದಿದ್ದನ್ನು ಹಸ್ತಪ್ರತಿಗಳ ಅಧ್ಯಯನದಿಂದ ಅರಿಯಬಹುದಾಗಿದೆ. ಈ ಪ್ರತಿಕ್ರಿಯೆಯನ್ನು ನಾನು ಎರಡು ರೀತಿಯಲ್ಲಿ ಗುರುತಿಸಿ ಅಧ್ಯಯನ ಮಾಡಿದ್ದೇನೆ.

೪.೧. ಸಂಗ್ರಹರೂಪಿ ಅಧ್ಯಯನಗಳು

'ಹಸ್ತಪ್ರತಿ ಹಾಗೂ ಗ್ರಂಥ ಸಂಪಾದನ ಶಾಸ್ತ್ರದ ಪರಿಕಲ್ಪನೆಗಳು ಪಶ್ಚಿಮದ ಪ್ರಭಾವದಿಂದ ಕನ್ನಡಕ್ಕೆ ಬಂದಿದ್ದರೂ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆಯ ಕಾರ್ಯಗಳಿಗೆ ಶತಮಾನಗಳ ಇತಿಹಾಸವಿದೆ. ನಮ್ಮ ಪೂರ್ವಿಕರು ತಾವು ನಂಬಿದ್ದ ಧರ್ಮವನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ತಮ್ಮ ಧಾರ್ಮಿಕ ಗ್ರಂಥಗಳನ್ನು ಜತನದಿಂದ ಕಾಪಾಡುತ್ತಿದ್ದರು. ಪರಮತ ಸಹಿಷ್ಣುಗಳಲ್ಲದವರು ಅನ್ಯಧರ್ಮಿಯ ಗ್ರಂಥಗಳನ್ನು ನಾಶಪಡಿಸಿದ ಘಟನೆಗಳೂ ಇಲ್ಲದಿಲ್ಲ. ಹಸ್ತಪ್ರತಿಗಳ ನಾಶಕ್ಕೆ ಇನ್ನೂ ಕೆಲವು ಮನುಷ್ಯ ಕಾರಣಗಳಿವೆ. ಮಳೆ, ಪ್ರವಾಹ, ಭೂಕಂಪದಂತಹ ಪ್ರಾಕೃತಿಕ ವಿಕೋಪಗಳು, ಮನುಷ್ಯನಲ್ಲಿರುವ ದ್ವೇಷಾಸೂಯೆಗಳು, ಧಾರ್ಮಿಕ ಅಸಹನೆ ವಿದ್ವಾಂಸರು ಒಂದೆಡೆಯಿಂದ ಮತ್ತೊಂದೆಡೆಗೆ ವಲಸೆ ಹೋಗುವುದು ಮುಂತಾದ ಕಾರಣಗಳಿಂದ ಕೂಡ ಹಸ್ತಪ್ರತಿಗಳು ನಶಿಸಿ ಹೋಗುತ್ತವೆ. ಅಲಂಕಾರಶಾಸ್ತ್ರಜ್ಞ ರಾಜಶೇಖರ ಹೇಳುವಂತೆ ಒತ್ತೆ ಇಡುವುದು, ಮಾರಾಟ, ದಾನ, ದೇಶತ್ಯಾಗ, ಗೆದ್ದಲು,

ಬೆಂಕಿ, ನೀರು ಇವು ಈ ಕಾವ್ಯವವನ್ನು ಹಸ್ತಪ್ರತಿಗಳನ್ನು ಹಾಳು ಮಾಡುವ ನಿಮಿತ್ತಗಳು ಎಂದಿದ್ದಾನೆ'.[೬] ನಮ್ಮ ಪೂರ್ವಿಕರು ಹಸ್ತಪ್ರತಿ ಸಂರಕ್ಷಣೆ ಕುರಿತು ಚಿಂತಿಸಿದ್ದರೆಂಬುದಕ್ಕೆ ಇಂಥ ಉಲ್ಲೇಖಗಳು ನಿರ್ದಶನವಾಗಿವೆ.

ಹಸ್ತಪ್ರತಿ ಸಂಗ್ರಹಕ್ಕೆ ವಿರಾಮ ಎನ್ನುವುದಿಲ್ಲ ಆ ಪ್ರಕ್ರಿಯೆಗೆ ಅರ್ಧವಿರಾಮವೇ ಹೊರತು ಯಾವತ್ತು ಪೂರ್ಣ ವಿರಾಮ ಎನ್ನುವುದಿಲ್ಲ. ಇಂದಿನ ಜಾಗತೀಕರಣದ ಇಕ್ಕಟ್ಟಿನ ಸಂದರ್ಭದಲ್ಲಿ ನಮ್ಮ ಅನನ್ಯತೆಯ ಮರುಶೋಧನೆಗೆ ಈ ಹಸ್ತಪ್ರತಿಗಳಲ್ಲಿ ದೊರೆಯುವ ದೇಶಿ ಜ್ಞಾನ ಪರಂಪರೆಯ ನೆಲೆಗಳನ್ನು ಬಳಸಿಕೊಳ್ಳಬಹುದಾಗಿದೆ. ಅದು ಸಾಹಿತ್ಯಕೃತಿ ಇರಬಹುದು, ವ್ಯಾಕರಣ, ಛಂದಸ್ಸು, ವಿಸ್ಮೃತಿಯಿಂದ ಹೊರಬಂದು ನಮ್ಮತನವನ್ನು ಕಂಡುಕೊಳ್ಳಲು ನಮ್ಮ ದೇಸಿಯ ಜ್ಞಾನಪರಂಪರೆಯ ಶೋಧ ಅನಿವಾರ್ಯ. ಜಾಗತೀಕರಣ ನಮ್ಮ ಮನೆಯಂಗಳಕ್ಕೆ ಬಂದಿದೆ. ಅದು ನಮಗೆ ಆರ್ಥಿಕವಾಗಿ ಔದ್ಯೋಗಿಕವಾಗಿ ಅನೇಕ ಸವಲತ್ತುಗಳನ್ನು ತಂದಿರುವುದು ನಿಜ. ಆದರೆ ದೇಸಿಯ ಜ್ಞಾನ ಪರಂಪರೆಯನ್ನು ನಾಶ ಮಾಡುತ್ತಿದೆ ಅಥವಾ ನಮ್ಮ ಬಹುಮುಖತ್ವವನ್ನು ಉಜ್ವಲಗೊಳಿಸಿ ಎಲ್ಲವನ್ನೂ ಏಕಕಾಲಕ್ಕೆ ಒಗ್ಗಿಸುತ್ತಿದೆ. ನಮ್ಮ ಆಲೋಚನೆಯನ್ನು ತಿದ್ದಿ ಜ್ಞಾನ ಪರಂಪರೆಯಿಂದ ನಮ್ಮನ್ನು ವಿಮುಖಗೊಳಿಸುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ಬೌದ್ಧಿಕ ಆಲೋಚನಾ ಪರಂಪರೆಗೆ ಮುಸುಕು ಬಿದ್ದಿರುವ ಈ ವಿಚಿತ್ರ ಸನ್ನಿವೇಶದಲ್ಲಿ ನಮ್ಮ ಕನ್ನಡ ಸಂಸ್ಕೃತಿಯ ಜೀವದ್ರವ್ಯವನ್ನು ಮರು ಹೊಂದಾಣಿಕೆ ಮಾಡಿಕೊಳ್ಳಬೇಕಾಗಿದೆ. ನಮ್ಮ ಕನ್ನಡದ ಬಳಕೆಯ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ನಮ್ಮ ಹಸ್ತಪ್ರತಿಗಳ ಶೋಧ ಸಂಗ್ರಹ ಸಂಪಾದನ ಕಾರ್ಯಗಳನ್ನು ಎರಡು ನೆಲೆಯಲ್ಲಿ ಗುರುತಿಸಬಹುದು.

೧. ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ ಪುನಾರಚನೆ

೨. ದೇಸೀ ಜ್ಞಾನಪರಂಪರೆಯ ಮರುವ್ಯಾಖ್ಯಾನ

ನಮ್ಮ ಧಾರ್ಮಿಕ ಶ್ರದ್ಧೆಯಲ್ಲಾಗಿರುವ ಮಾರ್ಪಾಡು ಸಾಹಿತ್ಯಶಾಸ್ತ್ರ(ವ್ಯಾಕಾರಣ, ಛಂದಸ್ಸು, ಕಾವ್ಯಮೀಮಾಂಸೆ) ಹಾಗೂ ಸಾಹಿತ್ಯೇತರ(ವೈದ್ಯ, ಗಣಿತ, ಜ್ಯೋತಿಷ್ಯಗಳಲ್ಲಿ) ಹೊಸ ಹೊಸ ಶೋಧಗಳ ಸಂಗ್ರಹ ನಡೆದಿದೆ.

ಮುಖ್ಯವಾಗಿ ಕನ್ನಡ ಹಸ್ತಪ್ರತಿಗಳ ಸಂಗ್ರಹ ಮತ್ತು ಸಂಪಾದನಾ ಶಾಸ್ತ್ರಗಳ ರೂಢಿಯ ಹೊಂದಿರುವ ಸಾಂಸ್ಕೃತಿಕ ರಾಜಕಾರಣದ ಒತ್ತಡಗಳು ಈ ರೀತಿಯಾಗಿವೆ. ಒಂದು: ಕನ್ನಡ ಸಾಹಿತ್ಯದ ಆರಂಭದ ಕಾಲ ಮತ್ತು ಅದಕ್ಕೂ ಪೂರ್ವ ಹಾಗೂ ನಂತರವೂ ಉಳಿದುಬಂದ ಸಂಸ್ಕೃತದ ರಾಜಕೀಯ ಹಾಗೂ ಸಾಹಿತ್ಯಿಕ ನೆಲೆಗಳು ಕನ್ನಡ ಸಾಹಿತ್ಯದ ಪ್ರತಿಯೊಂದು

ಅಭಿವ್ಯಕ್ತಿ ಕ್ರಮಗಳನ್ನು ಪ್ರೇರೇಪಿಸಿದ ರೀತಿ, ಕನ್ನಡ ಇದರಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದ ದಾರಿಗಳ ಬಗೆಗಿನ ಚರ್ಚೆ. ಎರಡು: ಶಾಸ್ತ್ರಕ್ಕೆ ಸಂಬಂಧಿಸಿದ ಅಧ್ಯಯನದ ಮಾದರಿಗಳು ಹಾಗೂ ಸಾಹಿತ್ಯಿಕ ಚರ್ಚೆಗಳು ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ಎರಡು ಕೂಡ ಹಸ್ತಪ್ರತಿಗಳ ಗ್ರಂಥಸಂಪಾದನಾ ಶಾಸ್ತ್ರಗಳನ್ನು ಬಳಸಿದ ಹಾಗೂ ಬಳಸಿಕೊಂಡ ಉಪಕ್ರಮಗಳು. ಇವು ತನಗೊಲ್ಲದ ಸಾಹಿತ್ಯಿಕ ಲೋಕವನ್ನು ಬಗ್ಗುಬಡಿದ ಮತ್ತು ಅಧೀನವಾಗಿಸಿಕೊಂಡ ನೆಲೆಗಳನ್ನು ಗುರುತಿಸಿಕೊಳ್ಳುವುದು ಕೂಡ ಇಲ್ಲಿನ ಪ್ರಮೇಯವಾಗಿದೆ. ಅಕ್ಷರದ ಅಹಂಕಾರ ಅನಕ್ಷರಸ್ಥ ಜನಸಮುದಾಯಗಳನ್ನು ಘಾಸಿಗೊಳಿಸಿದ ರೀತಿಯನ್ನು ನಿರ್ದಿಷ್ಟ ಪಠ್ಯಗಳನ್ನು ಶ್ರೇಷ್ಠ ಕಾವ್ಯಗಳೆಂದು ಮತ್ತೆ ಮತ್ತೆ ಮಂಡಿಸಿದ ಸಂಗತಿಗಳ ಹಿಂದಿರುವ ಸಾಂಸ್ಕೃತಿಕ ರಾಜಕಾರಣದ ನೆಲೆಗಳನ್ನು ಗ್ರಹಿಸುವುದು. ಹಸ್ತಪ್ರತಿಗಳನ್ನು ಬರೀ ಶುದ್ಧ ಸಾಹಿತ್ಯಿಕ ಎಂದು ಗ್ರಹಿಸುವ ವಿಧಾನಕ್ಕಿಂತ ಭಿನ್ನವಾಗಿ ಸಾಂಸ್ಕೃತಿಕ ಅಧ್ಯಯನದ ನೆಲೆಯಿಂದ ಪರಿಭಾವಿಸುವುದೂ ನನ್ನ ಅಧ್ಯಯನದ ಮುಖ್ಯ ಕಾಳಜಿಯಾಗಿದೆ.

'ಈ ಶಾಖೆಗಳು ಹಸ್ತಪ್ರತಿ ಅಧ್ಯಯನವನ್ನು ರಾಜಕೇಂದ್ರಿತ(ಪ್ರತಿಷ್ಠಿತ)ನೆಲೆಗಳಿಂದ ಸಮುದಾಯ ಕೇಂದ್ರಿತ ನೆಲೆಗಳೆಡೆಗೆ ಸಾಗುವಂತೆ ಮಾಡುವುದು. ಮನುಷ್ಯನ ಭೌತಿಕ ಜೀವನ ವಿಧಾನಗಳಿಗೂ ಸಂಸ್ಕೃತಿಗೂ ಇರುವ ಅವಲಂಬಿತವೂ ನಿಕಟವೂ ಆದ ಸಂಬಂಧಗಳನ್ನು ಗ್ರಹಿಸದೇ ಮನುಷ್ಯಾತೀತ ನೆಲೆಗಳಲ್ಲಿ ವ್ಯಾಖ್ಯಾನಿಸುವ ಹುಸಿ ಮಾದರಿಗಳನ್ನು ಕೈಬಿಡುವುದು. ಕಾರಣ ಹೊಸ ಸನ್ನಿವೇಶದಲ್ಲಿ ಎದುರಾಗುವ ಇಂಥ ಹಲವು ಸಮಸ್ಯೆಗಳಿಗೆ ಹೊಸ ನಿರ್ವಚನೆಯ ವಿಧಾನಗಳನ್ನು ಅಧ್ಯಯನದ ದಾರಿಗಳನ್ನು ರೂಢಿಸಿಕೊಳ್ಳಬೇಕಾದ ಅಗತ್ಯವಿದೆ'.[೮]

ಈ ರೀತಿಯ ಬಹುಮುಖಿ ನೆಲೆಯ ಸಂಸ್ಕೃತಿ ಅಧ್ಯಯನವು ಹಸ್ತಪ್ರತಿಗಳಂಥ ಸಾಹಿತ್ಯಿಕ ಆಕೃತಿಗಳನ್ನು ಗ್ರಹಿಸುವ ಬಗೆಯೂ ಭಿನ್ನವಾದದು. ಎಚ್.ಎಸ್. ರಾಘವೇಂದ್ರರಾವ್ ಅವರ ಹೇಳಿಕೆ ಇಲ್ಲಿ ಮುಖ್ಯವೆನಿಸುತ್ತದೆ. ಇದು ಸಂಸ್ಕೃತಿ ಅಧ್ಯಯನ ಕುರಿತು ವ್ಯಾಖ್ಯಾನ ವಾಗಿದ್ದರೂ ಹಸ್ತಪ್ರತಿಗಳ ಕುರಿತು ನಾನು ನಡೆಸಬೇಕೆಂದಿರುವ ಸಂಸ್ಕೃತಿಮುಖಿ ಅಧ್ಯಯನಕ್ಕೆ ಪೂರಕವಾಗಿದೆ ಎನ್ನುವುದು ವಿಶೇಷ. 'ಸಾಂಸ್ಕೃತಿಕ ಅಧ್ಯಯನವು ಸಾಹಿತ್ಯಿಕ ಆಕೃತಿಗಳನ್ನು ಗ್ರಹಿಸುವ ಬಗೆಯು ಭಿನ್ನವಾದದು. ಭಾಷೆಯಲ್ಲಿರುವ ಎಲ್ಲ ಕಥನಗಳಿಗೂ ಅದರದೇ ಆದ(ಬಹುಪಠ್ಯ) ಆಕೃತಿಯಿದ್ದು, ಅವು ಕೂಡ ಅನೇಕ ಬಗೆಯ ಸಾಹಿತ್ಯಿಕ ತಂತ್ರಗಳನ್ನು ಬಳಸಿಕೊಳ್ಳುವುದರಿಂದ ಸಾಂಸ್ಕೃತಿಕ ಅಧ್ಯಯನವು ಸಾಹಿತ್ಯಿಕ ಆಕೃತಿಗಳನ್ನು ಅನನ್ಯತೆಯನ್ನು ಅಲ್ಲಗಳೆಯುತ್ತದೆ. ಅಂತಿಮವಾಗಿ ಆ ಕ್ಷಣದಲ್ಲಿ ನಿರ್ಮಾಣವಾಗುವ ಪಠ್ಯವು ಓದುಗನು ಕಟ್ಟಿಕೊಳ್ಳುವ ರಚನೆ ಆಗಿರುವುದರಿಂದ ಅದು ವಿಶಿಷ್ಟಕಲೆ ಎಂದು ಹೇಳುವ ಅಗತ್ಯವಿಲ್ಲ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ನಿರಾಕರಿತವಾಗುತ್ತಿರುವುದು ಆಕೃತಿಯಲ್ಲ, ಅದಕ್ಕೆ ಕೊಡಲಾಗುವ ಅತಿಮಾನುಷ

ಸ್ಥಾನಮಾನ. ಏಕೆಂದರೆ ಆಕೃತಿಯಲ್ಲಿ ಆಗುವ ಪರಿವರ್ತನೆಗಳು ಸಂಸ್ಕೃತಿ ವಿಶ್ಲೇಷಣೆಯ ವ್ಯಾಪ್ತಿಯಲ್ಲೆ ಬರುತ್ತವೆ ಎನ್ನುವುದು ಇವರಿಗೆ ಗೊತ್ತು. ಅವೆರಡನ್ನು ಏಕಕಾಲದಲ್ಲಿಯೇ ಪರಿಶೀಲಿಸುವುದರಿಂದ ಸಂಸ್ಕೃತಿಯ ಅಧ್ಯಯನವನ್ನು ಅದರ ಸಾಮಾಜಿಕ ಕಾವ್ಯಮೀಮಾಂಸೆ ಸಂಗಡವೇ ನಡೆಸಲು ಸಾಧ್ಯವಾಗುತ್ತದೆ. ಒಂದು ಪಠ್ಯಕ್ಕೆ ಅದು ರಚಿತವಾದ ಕಾಲದಲ್ಲಿ ಒದಗಿಬಂದ ಆಕೃತಿಯ ಹಿಂದೆ ಶಕ್ತಿ ರಾಜಕೀಯದ ಮೀಮಾಂಸೆಯಿರುತ್ತದೆ. ಅಷ್ಟೇ ಅಲ್ಲ ಅಂತಹ ಕೃತಿಯ ಯಾವ ಆಶಯಗಳು ನಮ್ಮ ಕಾಲದವರೆಗೆ ಹರಿದುಬಂದಿವೆ ಎನ್ನುವ ವಿಶ್ಲೇಷಣೆ ಕೂಡ ರಾಜಕೀಯ ಚಲನಶೀಲತೆಗೆ ಹಿಡಿದ ಕನ್ನಡಿಯೇ ಆಗುತ್ತದೆ. ಅಂತಿಮವಾಗಿ ಯಾವುದೇ ಸಾಂಸ್ಕೃತಿಕ ಪಠ್ಯದ ವಿಶ್ಲೇಷಣೆ ನಮ್ಮ ಕಾಲದ ಅಗತ್ಯಗಳಿಂದಲೇ ರೂಡಿಯಾಗಿರುತ್ತದೆ. ಕೃತಿಯ ಅರ್ಥ, ಭಾಷೆ, ಸಾಂಕೇತಿಕ, ಡಿಸ್‌ಕೋರ್ಸ್ ಮುಂತಾದ ಹಲವು ನೆಲೆಗಳಲ್ಲಿ ನೋಡುವ ಪ್ರಯತ್ನ ಖಂಡಿತವಾಗಿಯೂ ಸಾಂಸ್ಕೃತಿಕ ಒಳನೋಟ ನೀಡುತ್ತದೆ'.[೯]

ಕನ್ನಡ ಹಸ್ತಪ್ರತಿ ಮತ್ತು ಗ್ರಂಥಸಂಪಾದನಾ ಶಾಸ್ತ್ರಕ್ಕೆ ನಾವು ಅಳವಡಿಸಿರುವ ಸಾಂಸ್ಕೃತಿಕ ವಿನ್ಯಾಸಗಳು ಒಂದು ಭಾಷೆ ಅಥವಾ ಬಳಕೆಯ ಶಾಸ್ತ್ರಬದ್ಧವಾದ ಶಿಸ್ತುಬದ್ಧ ಹಳೆಯ ಅಧ್ಯಯನಗಳ ಒಡಲಲ್ಲಿ ಮಾರ್ಪಾಡುಗಳನ್ನು ತರಬಯಸುತ್ತವೆ. ಹೊಸ ದಾರಿಗಳ ಬೆಳಕಿನಲ್ಲಿ ಹಿಂದಿನ ಅಧ್ಯಯನ ಕ್ರಮಗಳನ್ನು ಮರು ಪರಿಶೀಲಿಸಬಯಸುತ್ತವೆ. ಸಮಕಾಲೀನ ಅಗತ್ಯಗಳ ಹಿನ್ನೆಲೆಯಲ್ಲಿ ಅವುಗಳನ್ನು ಮರು ಬಳಕೆಗೆ ಸಿದ್ದಗೊಳಿಸುತ್ತವೆ. ಈ ಪ್ರಕ್ರಿಯೆಯಲ್ಲಿ ಹಳೆಯದರ ಕುರಿತು ಪೂರ್ವಗ್ರಹವಾಗಲೀ ಅದು ಅಧ್ಯಯನವೇ ಅಲ್ಲ ಎನ್ನುವ ತಾತ್ಸಾರ ಭಾವಗಳಾಗಲಿ ಇರಬಾರದು. ಯಾವುದೇ ಒಂದು ಸಾಹಿತ್ಯಿಕ ಅಥವಾ ಸಾಂಸ್ಕೃತಿಕ ಆಕೃತಿಗಳ ವೈಶಿಷ್ಟಗಳು ಕೃತಿಕಾರ, ಓದುಗ ಮತ್ತು ವಿಮರ್ಶಕರ ಸಂಬಂಧದಿಂದ ನಿರ್ವಚನಗೊಳ್ಳುತ್ತಿರುತ್ತವೆ. ಬದಲಾದ ಕಾಲದ ಹರಿವಿನಲ್ಲಿ ಹಳೆಯ ಮನೋಧರ್ಮಗಳು ಮುರಿದು ಕಟ್ಟಲ್ಪಡುತ್ತವೆ. ಹೊಸ ವಸ್ತುವಿನ ಅವಶ್ಯಕತೆಯು ಹಳೆಯದರ ಗೈರು ಹಾಜರಿಯಲ್ಲಿ ಬಳಕೆಗೆ ಬರುತ್ತದೆ.

ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆಯಲ್ಲಿ ಮೂಲಪಠ್ಯ ಶುದ್ಧಪಾಠ ಎನ್ನುವ ಪರಿಕಲ್ಪನೆಗಳು ತುಂಬ ಗಂಭೀರವಾದಂಥವು. ಆದರೆ ಭಾಷಿಕ ಆಕೃತಿಗಳನ್ನು ಲಿಖಿತ ಅಥವಾ ಮೌಖಿಕ ಚಲನಶೀಲ ಸಂಸ್ಕೃತಿಯೊಂದು ತನ್ನ ಕಾಲದ ಅಗತ್ಯಗಳಿಗೆ ತಕ್ಕಂತೆ ಮುರಿದು ಕಟ್ಟುತ್ತ ಬಂದಿರುವ ಹಾಗೂ ನಡೆಸಿರುವ ವಾಗ್ವಾದ ಅನುಸಂಧಾನಗಳು ನಾವು ಮುಖ್ಯವೆಂದು ಪರಿಗಣಿಸಿದಾಗ ಮೇಲಿನ ಪರಿಕಲ್ಪನೆಗಳು ಹುಸಿಯಾಗಿ ಕಾಣುತ್ತವೆ. ಕನ್ನಡ ಸಾಹಿತ್ಯದುದ್ದಕ್ಕೂ ರಚನೆಯೊಂದು ಒಡೆದು ಕಟ್ಟುವ ಹಲವು ಮಾದರಿಗಳು ನಮಗೆ ಕಾಣುತ್ತವೆ.

'ನಮ್ಮ ಅಧ್ಯಯನದ ಪ್ರೇರಣೆಗಳು ಆಲೋಚನೆಗಳು ಇಂದಿಗೂ ವೈದಿಕಶಾಹಿ ಮತ್ತು ವಸಾಹತುಶಾಹಿ ಗುಂಗಿನಿಂದ ಹೊರ ಬಂದೇಯಿಲ್ಲ ಎನ್ನುವುದಕ್ಕೆ ಕೃತಿಯ ಕೇಂದ್ರ ಅಥವಾ

ಮೂಲದ ಬಗೆಗೆ ತಮಗಿರುವ ಹಠಗಳೇ ಸಾಕ್ಷಿ. ಸಾಹಿತ್ಯ ಪರಂಪರೆಯ ಸೃಜನಶೀಲ ನೆಲಗಳನ್ನು ನಿರ್ದಿಷ್ಟೀಕರಿಸುವುದು ತರವಲ್ಲ. ಏಕೆಂದರೆ ಯಾವುದೇ ಒಂದು ಸಂಗತಿಯಲ್ಲಿಯೂ ಕೇಂದ್ರವೆಂಬುದು ಸಾಪೇಕ್ಷ ಮತ್ತು ಅಸ್ಥಿರ. ಹಾಗೆ ಕೇಂದ್ರದಂತ ಚಿಂತನೆಯನ್ನಾಧರಿಸಿದ ಶ್ರೇಣೀಕರಣ ದ್ವಂದ್ವಗಳು ಕೃತಕ ಮತ್ತು ಅಸ್ಥಿರ ಕೃತಿಯ ಹುಟ್ಟಿನ ಮೂಲಕ್ಕಿಂತ ಅದು ನಿರ್ಮಿಸಿದ ಹಲವು ರೀತಿಯ ಸಂಕಥನಗಳು ಉಪಯುಕ್ತ ದಾರಿಗಳ ಚರ್ಚೆ ಮುಖ್ಯವಾದುದು. ಆ ಮೂಲಕ ಕನ್ನಡ ಮನಸ್ಸುಗಳು ತನ್ನ ಕವಿ ವಿದ್ವಾಂಸ ಲಿಪಿಕಾರ ಕೇಳುಗರ ಮೂಲಕ ಸೃಜಿಸಿಕೊಂಡ ಸಾಹಿತ್ಯ ಸಂಸ್ಕೃತಿ ಕುರಿತು ಚಿಂತನೆ ಮಾಡುವುದು ಇಂದಿನ ಅಗತ್ಯವಾಗಿದೆ'.[೧೦]

ಹಿಂದಿನ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಅಧ್ಯಯನ ಮಾದರಿಗಳಲ್ಲಿ ಎರಡು ರೀತಿಯ ಮಾದರಿಗಳು ಕಂಡುಬರುತ್ತವೆ. ೧. ದಾಖಲೆ ಯನ್ನು ಉದ್ದೇಶವಾಗಿಟ್ಟುಕೊಂಡ ಮಾದರಿ, ೨. ವ್ಯಾಖ್ಯಾನಶೀಲ ಮಾದರಿ. ಈ ಎರಡೂ ಮಾದರಿಗಳು ಬಹುಮುಖ್ಯವಾಗಿ ಭಾಷೆಯನ್ನೇ ಅವಲಂಬಿಸಿರುವಂಥವು. ಈ ಆಯ್ಕೆಯ ಹಿಂದೆ ನಿರ್ದಿಷ್ಟ ಸಾಂಸ್ಕೃತಿಕ ಅಧಿಕಾರದ ಪ್ರಶ್ನೆಗಳು ಕೆಲಸ ಮಾಡಿವೆ ಎಂಬುದನ್ನು ನೆನಪಿಡಬೇಕು. ಕನ್ನಡ ಸಾಹಿತ್ಯ ಪರಂಪರೆ ಸಂಸ್ಕೃತದಿಂದ ಬಿಡಿಸಿಕೊಂಡು ಸ್ವತಂತ್ರವಾಗಲು ಹೋದರೆ ಅದರ ಸಂಪಾದನೆ, ವ್ಯಾಖ್ಯಾನ, ಅಧ್ಯಯನಗಳು ಸಂಸ್ಕೃತದ ಜಾಯಮಾನದಲ್ಲಿ ನಡೆದದ್ದು ವಿಚಿತ್ರವೆ ನಿಸಿದರೂ ಸತ್ಯಸಂಗತಿಯಾಗಿದೆ. ಇದಕ್ಕೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ನಿದರ್ಶನಗಳು ದೊರಕುತ್ತವೆ.

ಹತ್ತೊಂಬತ್ತನೆಯ ಶತಮಾನ ಮಧ್ಯಭಾಗದಲ್ಲಿ ಕರ್ನಾಟಕದಲ್ಲಿ ಉಂಟಾದ ರಾಜಕೀಯ ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಸಂಚಲನೆಗೆ ವಿಶೇಷ ಅರ್ಥಗಳಿವೆ. ಕನ್ನಡ ಸಾಹಿತ್ಯಕ್ಕೆ ಸಾವಿರ ವರ್ಷಗಳ ಇತಿಹಾಸವಿದ್ದರೂ ಆ ಕುರಿತು ನಡೆದ ಅಧ್ಯಯನಕ್ಕೆ ನೂರು ವರ್ಷಗಳಷ್ಟು ಇತಿಹಾಸವಿದೆ.

ಈ ಶತಮಾನದ ಮೊದಲ ದಶಕಗಳಲ್ಲಿ ಆರಂಭವಾದ ಗ್ರಂಥಸಂಪಾದನೆ ಮತ್ತು ಹಸ್ತಪ್ರತಿ ಅಧ್ಯಯನಗಳಲ್ಲಿ ಎರಡು ತುದಿಗಳಿರುವುದ ಗಮನಾರ್ಹ. ಒಂದು ಮದ್ರಾಸ್(ಇಂಗ್ಲಿಷ್ ಮೂಲದ)ಮೂಲದ 'ಚಾರಿತ್ರಿಕ ಅಧ್ಯಯನ ವಿಧಾನ', ಎರಡು ಮುಂಬೈ ಕರ್ನಾಟಕ ಮೂಲದ 'ಸಂಸ್ಕೃತಿ ಅಧ್ಯಯನ ವಿಧಾನ'. ಈ ವಿನ್ಯಾಸಗಳು ಇಂದಿಗೂ ಆಯಾ ಭಾಗದ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಅಂತರ್‌ನಿಹಿತವಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಈ ಎರಡು ವಿಧಾನಗಳು ವಸಾಹತುಶಾಹಿಗೆ ತೋರಿದ ಪ್ರತಿಕ್ರಿಯೆಗಳು. ರಾಷ್ಟ್ರೀಯವಾದ, ಕರ್ನಾಟಕದ ಏಕೀಕರಣ ಹೋರಾಟ ಮುಂತಾದವು ಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಕೆಲವು ಸಮಾನತೆಗಳಿವೆ. ವಿಭಿನ್ನ ಮನೋಧರ್ಮಗಳ ಚೌಕಟ್ಟಿನಲ್ಲಿ ರೂಪಿತವಾದ ಜೀವನಕ್ರಮಗಳ ಅಧ್ಯಯನವು ಇಂಥ ಸಾಮಾಜಿಕ ಸಂಗತಿಗಳ ಹುಡುಕಾಟಕ್ಕೆ ಸಹಜೀವನಕ್ಕೆ ಒತ್ತುಕೊಟ್ಟಂತೆ

ಅಸಹಿಷ್ಣುತೆಗೂ ಪ್ರಾದೇಶಿಕ ಅಸಮಾನತೆಗೂ ಒತ್ತಾಸೆಯಾದವು. ಇದು ಉತ್ತರ ದಕ್ಷಿಣ, ಶುದ್ಧ ಅಶುದ್ಧ, ಮೇಲು ಕೀಳು ಎನ್ನುವ ಅಸಮಾನ ನೆಲೆಗಳಿಗೂ ಅವಕಾಶ ಮಾಡಿಕೊಟ್ಟಿತು. ನಮ್ಮ ಸಮುದಾಯದ ಜೀವನ ಕ್ರಮ ಸಂಸ್ಕೃತಿಯ ಅಸ್ತಿತ್ವದ ಸ್ವರೂಪ ಹೇಗೆ ಇರಲಿ ಅವುಗಳನ್ನು ಅಧ್ಯಯನ ಮಾಡುವ ನೆಲೆಗಳಂತೂ ಪಾಶ್ಚಾತ್ಯ ಮಾದರಿಗಳನ್ನು ಅನುಸರಿಸುತ್ತಲೇ ಬಂದಿವೆ.

ಹೀಗೆ ಒಟ್ಟು ಬರಹ ಮತ್ತು ಸಂಕಲನ ವ್ಯವಸ್ಥೆಯೇ ಒಂದು ಉದ್ದೇಶಿತ ಪರಿಧಿಗೆ ತನ್ನನ್ನು ಹೊಂದಿಕೊಂಡ ಸ್ಥಗಿತರೂಪವಾಗಿ ಕಾಣುತ್ತಿದೆ. ಕಳೆದು ಹೋಗುತ್ತಿದ್ದ ಹಲವು ಅಮೂಲ್ಯ ಕೃತಿಗಳನ್ನು ಉಳಿಸಿದ ಕೀರ್ತಿ ಸಂಕಲನಕಾರರಿಗೆ ಸಲ್ಲಿದರೂ ಅದರ ಮಿತಿಯನ್ನು ಮರೆಯಲಾಗದು. ಕೃತಿಯೊಂದನ್ನು ಒಂದು ವಿದ್ವತ್ಪೂರ್ಣ ಶುದ್ಧ ಸಾಹಿತ್ಯದ ಪಠ್ಯವಾಗಿ ನೋಡುವ ಬದಲು ಸಂಸ್ಕೃತಿಯು ಪಠ್ಯದೊಂದಿಗೆ ಪಠ್ಯವು ಸಂಸ್ಕೃತಿಯೊಂದಿಗೆ ನಡೆಸಿದ ಅನುಸಂಧಾನಗಳನ್ನು ಗ್ರಹಿಸಿದ್ದು ಮುಖ್ಯವಾಗಬೇಕಾಗಿದೆ. ಈ ಸಂಗತಿ ಹಸ್ತಪ್ರತಿ ಸಂಗ್ರಹ ಸಂಪಾದನಶಾಸ್ತ್ರದ ಬಹುಮಖ್ಯ ಕಾಳಜಿಯಾಗಬೇಕಿದೆ.

ಹಸ್ತಪ್ರತಿಗಳನ್ನು ಆಶ್ರಯಿಸಿ ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯದ ಗ್ರಂಥಗಳನ್ನು ಪರಿಷ್ಕರಿಸಿ ಪ್ರಕಟಿಸುವಾಗ ಸಹಾಯಕ್ಕೆ ಬರುವಶಾಸ್ತ್ರವೆಂದರೆ ಗ್ರಂಥಸಂಪಾದನಶಾಸ್ತ್ರ. ಈ ಶಾಸ್ತ್ರ ಕಳೆದ ಐದಾರು ದಶಕಗಳಿಂದ ಒಂದು ಪರಾಮರ್ಶನ ವಿಷಯವಾಗಿ ತಾತ್ವಿಕ ಸಂಗತಿಯಾಗಿ ಕನ್ನಡದಲ್ಲಿ ಪ್ರಾಶಸ್ತ್ಯ ಪಡೆದುಕೊಂಡಿದೆ(ಗ್ರಂಥಗಳನ್ನು). ಸಂಪಾದಿಸುವಾಗಲೂ ಸಂಪಾದಿತ ಗ್ರಂಥದ ಸಾಮಗ್ರಿಯನ್ನು ವಿವರಿಸುವಾಗಲೂ ಈ ಗ್ರಂಥ ಸಂಪಾದನಾಶಾಸ್ತ್ರದಲ್ಲಿ ಮುಖ್ಯವಾಗಿ ಮೂಲ ಮತ್ತು ಶುದ್ದ ಎನ್ನುವ ಆದರ್ಶೀಕೃತ ನೆಲೆಗಳೇ ಮುಖ್ಯಸ್ಥಾನ ಪಡೆದಿವೆ.

ಗ್ರಂಥ ಸಂಪಾದನೆಯಲ್ಲಿ ಮೂಲಪಠ್ಯ, ಶುದ್ಧಪಠ್ಯ, ಕವಿಪಾಠ ಎನ್ನುವ ಪರಿಕಲ್ಪನೆಗಳು ತುಂಬ ಗಂಭೀರವಾದಂಥವು. ಆದರೆ ಭಾಷಿಕ ಮತ್ತು ರಚನೆಗಳನ್ನು ಲಿಖಿತ ಮತ್ತು ಮೌಖಿಕ ಚಲನಶೀಲ ಸಂಸ್ಕೃತಿಯೊಂದು ತನ್ನ ಕಾಲದ ಅಗತ್ಯಗಳಿಗೆ ತಕ್ಕಂತೆ ಮುರಿದು ಕಟ್ಟುತ್ತ ನವೀಕರಣಗೊಳ್ಳುತ್ತ ಬಂದಿರುವ ಹಾಗೂ ಅವು ಬರಹ ಸಂಸ್ಕೃತಿಯಲ್ಲಿ ನಡೆಸಿರುವ ವಾಗ್ವಾದ ಅನುಸಂಧಾಗಳನ್ನು ನಾವು ಮುಖ್ಯವೆಂದು ಪರಿಗಣಿಸಿದಾಗ ಮೇಲಿನ ಪರಿಕಲ್ಪನೆಗಳು ಹುಸಿಯಾಗಿ ಕಾಣುತ್ತದೆ. ಕನ್ನಡ ಸಾಹಿತ್ಯದುದಕ್ಕೂ ರಚನೆಯೊಂದನ್ನು ಒಡೆದು ಕಟ್ಟುವ ಹಲವು ಮಾದರಿಗಳು ನಮಗೆ ಕಾಣಸಿಗುತ್ತವೆ.

ಕವಿಪಾಠದ ಪದಗಳನ್ನು ಪದಪುಂಜಗಳನ್ನು ಸಂಯೋಜಿಸುವ ಅಕ್ಷರಗಳಲ್ಲಿ ಸ್ಥಾನ ವ್ಯತ್ಯಾಸವಾಗಿ ಹೊಸಪದ ರಚನೆಯಾಗುವುದು ಒಂದು ಕಡೆಯಾದರೆ ಲಿಪಿಕಾರ ಸ್ಖಾಲಿತದಲ್ಲಿ ಒಂದು ಸಾರ್ಥಕವಾದ ಕವಿಪಾಠ ಅಥವಾ ಮೂಲಪಾಠದ ಶಬ್ದವೊಂದರಲ್ಲಿ ಒಂದು ಅಕ್ಷರ

ಆಕಸ್ಮಿಕವಾಗಿ ಬಿಟ್ಟು ಹೋಗಬಹುದು ಇಲ್ಲವೆ ಪಂಕ್ತಿಗಳ ನಡುವೆ ಆಗಲಿ ಮಗ್ಗಲಲ್ಲಾಗಲಿ ಪಠ್ಯದೊಂದಿಗೆ ಬರಹದ ವೇಳೆ ಹೆಚ್ಚಾಗಿ ಸೇರಿರಬಹುದು, ತಪ್ಪು ಬರವಣಿಗೆಯಿಂದಾಗಿ ಪಾಠ ಅಪಪಾಠವಾಗಿರಬಹುದು. ಹಾಗೇನೆ ಬರಹದಲ್ಲಿ ಕಣ್ಣು ಕಿವಿಗಳ ಸ್ಮರಣಶಕ್ತಿಯ ದೌರ್ಬಲ್ಯ ತಪ್ಪು ತೀರ್ಮಾನ ಇವುಗಳಿಂದ ತಿಳಿಯದೆ ಆಗುವ ವ್ಯತ್ಯಾಸಗಳನ್ನು ಮೂಲ ಮತ್ತು ಶುದ್ಧ ಪರಿಕಲ್ಪನೆ ಹಿನ್ನೆಲೆಯಲ್ಲಿ ಒರೆಗಚ್ಚಿ ನೋಡಲಿಕ್ಕೆ ಸಾಧ್ಯವಿದೆಯೇ ಅಥವಾ ಏಕೈಕ ಹಸ್ತಪ್ರತಿ ಸಿಕ್ಕು ಅದನ್ನು ಸಂಪಾದಿಸುವಾಗ ಮೂಲ ಮತ್ತು ಶುದ್ದದ ಆದರ್ಶೀಕೃತ ನೆಲೆಗಳನ್ನು ವಿವರಿಸಿಕೊಳ್ಳುವು ಹೇಗೆ ಎಂಬ ಪ್ರಶ್ನೆ ಏಳುತ್ತದೆ.

ಒಂದು ಪಠ್ಯವನ್ನು ಮೂಲ ಮತ್ತು ಶುದ್ದ ಎಂಬುವುಗಳನ್ನು ಮುಖ್ಯವಾಗಿರಿಸಿಕೊಂಡು ಸಂಪಾದಿಸ ಹೊರಟಾಗ ಪ್ರಾದೇಶಿಕ ಭಾಷೆಯ ರಚನೆಗಳಿಗೆ ಸ್ಥಾನ ಸಿಗುವುದಾದರೂ ಹೇಗೆ ರಾಜ್ಯಭಾಷೆಯ ರಚನೆಗಳಿಗೆ ಸ್ಥಾನ ಸಿಗುವುದಾದರೂ ಹೇಗೆ, ರಾಜ್ಯಭಾಷೆಯ ಪ್ರಧಾನವಾದ ಕಾಲಘಟ್ಟದಲ್ಲಿ ಸಂಪಾದನ ಕಾರ್ಯ ನಡೆದಿದ್ರೆ ಅದಕ್ಕೆ ಸರಿ ಎನ್ನಬಹುದಿತ್ತೇನೋ, ಆದರೆ ನಾವು ಇಂದು ಅತ್ಯಾಧುನಿಕವಾದ ತಂತ್ರಜ್ಞಾನದ ಯುಗದಲ್ಲಿದ್ದು ಎಲ್ಲರೂ ಸುಶಿಕ್ಷಿತರು ಓದುವವರು ಇರುವಾಗ ಇಂತಹ ಆದರ್ಶೀಕೃತ ನೆಲೆಗಳು ಅಡ್ಡಿಪಡಿಸುತ್ತವೆ ಎನ್ನುವುದು ಗ್ರಂಥ ಸಂಪಾದನೆಯಲ್ಲಿ ಒಂದು ಸಾಹಿತ್ಯ ಕೃತಿ ಮತ್ತು ಅದರ ಭಾಷೆಯ ವೈವಿಧ್ಯತೆಯನ್ನು ಉದ್ದೇಶಪೂರ್ವಕವಾಗಿ ನಿವಾರಿಸುವ ಮೂಲಕ ಅದನ್ನು ಬೇರುಗಳಿಲ್ಲದ ಒಂದು ಸಮಗ್ರ ಮತ್ತು ಸಮಷ್ಠಿ ಪ್ರಜ್ಞೆಯ ಭಾಗವಾಗಿ ನೋಡುತ್ತ ಬರಲಾಗಿದೆ. ಇದಕ್ಕೆ ಸಂಸ್ಕೃತದ ಮತ್ತು ವಸಾಹತುಶಾಹಿಯಿಂದ ನಿರ್ಮಿತಗೊಂಡ ಸಂಗ್ರಹ ಅಧ್ಯಯನ ಮತ್ತು ಸಂಪಾದನ ಮಾದರಿಗಳು ಕಾರಣವಾಗಿವೆ.

ನಮ್ಮ ಅಧ್ಯಯನದ ಪ್ರೇರಣೆಗಳು, ಧೋರಣೆಗಳು, ಆಲೋಚನೆಗಳು ಅವುಗಳಿಂದೊಡ ಮೂಡಿದ ರಚನೆಗಳು ಇಂದಿಗೂ ವೈದಿಕಶಾಹಿ ಮತ್ತು ವಸಾಹತುಶಾಹಿಯ ಏಕದೃಷ್ಟಿಯ ಗುಂಗಿನಿಂದ ಹೊರಬಂದಿಲ್ಲ ಎನ್ನುವುದಕ್ಕೆ ಕೃತಿಯ ಕೇಂದ್ರ ಅಥವಾ ಮೂಲದ ಬಗೆಗೆ ನಮಗಿರುವ ಹಠಗಳು ಸಾಕ್ಷಿ. ನಮ್ಮ ಸಾಹಿತ್ಯ ಪರಂಪರೆಯ ಸೃಜನಶೀಲ ನೆಲೆಗಳನ್ನು ಇಂತಹದ್ದೇ ಮೂಲಕ ಪ್ರತ್ಯುತ್ಪನ್ನಗಳೆಂದು ಪರಿಭಾವಿಸುವುದು ತರವಲ್ಲ. ಕೃತಿಯ ಹುಟ್ಟಿಗಿಂತ ಅದು ನಿರ್ಮಿಸಿದ ಹಲವು ರೀತಿಯ ಉಪಯುಕ್ತ ದಾರಿಗಳ ಚರ್ಚೆ ಮುಖ್ಯವಾದುದು.

ಕೃತಿಯೊಂದರ ಹುಟ್ಟು ಆಯಾಕಾಲದ ಅನೇಕ ಅನುಭವಗಳ ಲೋಕಗ್ರಹಿಕೆಗಳ ಪ್ರೇರಣೆ, ಧಾರ್ಮಿಕ ಮೌಲ್ಯ, ಸಾಮಾಜಿಕ, ಆರ್ಥಿಕತೆಗಳ ಸಮ್ಮಿಲನವಾಗಿರುತ್ತದೆ. ಆ ಸಂಗತಿಗಳು ಸಮಾಜದೊಳಗೆ ಹಲವು ಓದು ಅನುಸಂಧಾನ ಅಧ್ಯಯನ ಪ್ರೇರಣೆಗಳಿಗೆ ಕಾರಣವೂ ಆಗುತ್ತವೆ. ಇಂಥ ಸಂಗತಿಗಳು ಅನುಭವಗಳು ಅಗಾದ ಓದುಗ, ಕೇಳುಗರಲ್ಲಿ ಪುನರ್ ಸೃಷ್ಟಿಗೆ ಕಾರಣವಾಗುತ್ತವೆ.

ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯ ಬಗ್ಗೆ ಕೆಲಸ ಮಾಡಿದ ನಮ್ಮ ಹಿರಿಯ ವಿದ್ವಾಂಸರು ತಮ್ಮ ಅತಿಯಾದ ಧಾರ್ಮಿಕ ನೆಲೆ ಅವರು ಪಡೆದುಕೊಂಡ ವಿದೇಶಿ ಶಿಕ್ಷಣ ಅಥವಾ ಅಧ್ಯಯನದಿಂದ ಪಡೆದ ಪರಿಕಲ್ಪನೆಗಳಿನುಗುಣವಾಗಿ ಸಂಪಾದನೆಯ ದಾರಿಗಳನ್ನು ರೂಢಿಸಿಕೊಂಡರು. ನಮ್ಮ ಸಂದರ್ಭದ ದೊಡ್ಡ ಬೌದ್ಧಿಕ ದುರಂತವೆಂದರೆ ಶ್ರಮ ಮತ್ತು ಸಂಸ್ಕೃತಿಗಳನ್ನು ಪ್ರತ್ಯೇಕ ಗೊಳಿಸಿದ್ದು, ಇದರಿಂದ ಹುಸಿ ಸಂಸ್ಕೃತಿ ಡಾಳಾಗಿ ಜನ ಸಂಸ್ಕೃತಿಯ ದಾರಿಗಳು ಮೂಲೆ ಗುಂಪಾದವು. ಸಮಾಜದ ಸಹಜ ಬೆಳವಣಿಗೆಯೊಂದಿಗೆ ತಳಕು ಹಾಕಿಕೊಂಡ ಬರಹಗಾರ ಒಂದು ಸೃಜನಶೀಲ ದಾಖಲೆಯೊಂದನ್ನು ಒದಗಿಸುತ್ತಾನೆ. ಆದರೆ ಶುದ್ಧ ಮತ್ತು ಪಾವಿತ್ರ್ಯದ ಹೆಸರಿನಲ್ಲಿ ಸಾಮಾಜಿಕ ನಿಜ ಸಂಗತಿಗಳನ್ನು ಅದರ ವಿವಿಧತೆಗಳನ್ನು ಧಿಕ್ಕರಿಸಿ ಶಾಸ್ತ್ರೀಯ ಗೊಳಿಸುವ ಸಾರ್ವತ್ರಿಕ ಮತ್ತು ರಾಷ್ಟ್ರೀಯಗೊಳಿಸುವ ಸಂಗತಿಗಳು ಸ್ಥಳೀಯ ಬದುಕಿನ ಕ್ರಿಯಾತ್ಮಕ ನೆಲೆಗಳನ್ನು ಕಮರಿಸುತ್ತವೆ.

ನಮ್ಮಲ್ಲಿ ಸಿಗುವ ಹಲವು ಪಠ್ಯಗಳ ಆಯಾ ಕಾಲದ ವೈವಿದ್ಯಮಯ ಅಥವಾ ವೈರುಧ್ಯ ತುಂಬಿದ ಸಾಮಾಜಿಕ ರಚನೆಯ ಪ್ರತೀಕಗಳು. ಇವುಗಳ ಎಲ್ಲವೂ ಬದುಕಿನ ಭಿನ್ನ ದೃಷ್ಟಿಕೋನಗಳನ್ನು ಅರಳಿಸಿ ಚಿಗುರಿಸಿದಂಥವು. ಪಾಂಡಿತ್ಯಕ್ಕಾಗಿ, ಆಶ್ರಯದಾತನ ಋಣ ತೀರಿಸಲಿಕ್ಕಾಗಿ, ಪ್ರಯೋಗಕ್ಕಾಗಿ, ಜ್ಞಾನಕ್ಕಾಗಿ, ದಾನಕ್ಕಾಗಿ, ಓದಿಗಾಗಿ, ಕೂಲಿಗಾಗಿ, ಧಾರ್ಮಿಕ ಕಾರ್ಯಕ್ಕಾಗಿ, ರೋಗ ನಿವಾರಣೆಗಾಗಿ, ಮತಿಯ ಅಸ್ತಿತ್ವಕ್ಕಾಗಿ ರೂಪುಗೊಂಡ ಹಲವು ಕೃತಿ ಪ್ರತಿಗಳು ನಮಗೆ ಸಿಗುತ್ತವೆ. ಇಂಥ ಚಲನಶೀಲ, ಸೃಜನಶೀಲ ಚರಪಠ್ಯಗಳನ್ನು ಶುದ್ಧ ಮೂಲ ಎನ್ನುವ ಆದರ್ಶೀಕೃತ ನೆಲೆಯೊಳಗೆ ಕಟ್ಟಿ ಹಾಕುವುದು ಎಷ್ಟರಮಟ್ಟಿಗೆ ಸಾಧುವಾದಿತು. ವಿಭಿನ್ನ ದೃಷ್ಟಿ ಧೋರಣೆಗಳ ಕಡೆಗೆ ಇಂದು ನಮ್ಮ ಚಿಂತನೆಗಳು ಹರಡಿಕೊಳ್ಳುತ್ತಿವೆ. ಇಂಥ ಸಂದರ್ಭದಲ್ಲಿ ಮತ್ತು ನಾವು ಆದಿಮ ಕಾಲದ ಮೂಲ ಶುದ್ಧದ ಕುರಿತು ಇಂದು ಚರ್ಚಿಸುವುದು ಅನಗತ್ಯ.

ಗ್ರಂಥಸಂಪಾದನೆಯನ್ನು ತನ್ನಲ್ಲಿ ತಾನೇ ಸ್ವಯಂಪೂರ್ಣವಾಗಿರುವ ಜ್ಞಾನಶಿಸ್ತನ್ನಾಗಿ ಮತ್ತು ಅದನ್ನು ಏಕಮುಖಿ ಆಕೃತಿಗಳಲ್ಲಿ ಗ್ರಹಿಸಿದ ಸಂಗತಿಗಳೊಂದಿಗೆ ಮುಖಾಮುಖಿ ಮಾಡುವುದರಲ್ಲಿ ನಮ್ಮ ಬಹಳಷ್ಟು ಅಧ್ಯಯನ ನೆಲೆಗಳು ಪಶ್ಚಿಮದ ಜೊತೆಗಿನ ನಿಯಂತ್ರಿತ ಸಂಬಂಧವನ್ನು ಹೊಂದಿರುವುದು ಇದಕ್ಕೆ ಮುಖ್ಯ ಕಾರಣ. ಎರಡನೆಯ ಪ್ರಮೇಯವೆಂದರೆ ಚರಿತ್ರೆ ಮತ್ತು ಸಮಾಜ ವಿಜ್ಞಾನಗಳಲ್ಲಿ ಸಾಂಪ್ರದಾಯಿಕ ಅಧ್ಯಯನಗಳು ಭಾರತದ ಏಕಮುಖಿ ಕಲ್ಪನೆಯೊಂದನ್ನು ರೂಪಿಸಿರುವ ಸಂಗತಿಗಳ ಕುರಿತು ಇದು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಾಹಿತ್ಯ ವಿಮರ್ಶೆ ಮತ್ತು ಗ್ರಂಥಸಂಪಾದನ ಶಿಸ್ತುಗಳನ್ನು ಗಾಢವಾಗಿ ಪ್ರಭಾವಿಸಿದೆ. ಭಾರತದ ಭೂತಕಾಲದ ಬಗೆಗೆ ನಿರ್ಮಿತವಾಗಿರುವ ವಿಶಿಷ್ಟ ಪ್ರತಿಮೆಯೊಂದು ಭಾರತೀಯ ಸಮಾಜ

ಸಂಸ್ಕೃತಿಗಳ ಬಗೆಗೆ ಅನೇಕ ಪರಿಕಲ್ಪನೆಗಳನ್ನು ಊಹೆಗಳನ್ನು ರೂಢಿಸಿದೆ. ಹೀಗಾಗಿ ಸಾಂಸ್ಕೃತಿಕ ಅಧ್ಯಯನ ಸಾಹಿತ್ಯಿಕ ಅಧ್ಯಯನ ಇವೆರಡರ ನಡುವೆ ನಿರಂತರ ಕೊಡುಕೊಳ್ಳುವಿಕೆ ಇದ್ದೆ ಇರುತ್ತದೆ ಮತ್ತು ಈ ಕ್ರಿಯೆಯನ್ನು ಸಾಂಸ್ಕೃತಿಕ ಅಧ್ಯಯನವೇ ನಿರ್ದೇಶಿಸುತ್ತವೆ. ಇಲ್ಲೂ ಅಷ್ಟೆ ಭಾರತದ ಬಗೆಗಿನ ಅದರಲ್ಲೂ ಭೂತಕಾಲದ ಬಗೆಗಿನ ಪಶ್ಚಿಮದ ಬಲಿಷ್ಠ ನಿಲುವುಗಳನ್ನು ನಮ್ಮ ಸಮಾಜಶಾಸ್ತ್ರೀಯ ಮತ್ತು ಚಾರಿತ್ರಿಕ ಅಧ್ಯಯನಗಳನ್ನು ಪ್ರಭಾವಿಸಿವೆ. ಇವೆಲ್ಲವೂ ಸಂಸ್ಕೃತಿ ಎನ್ನುವ ಒಟ್ಟು ಪರಿಕಲ್ಪನೆಯಡಿಯಲ್ಲಿ ನಡೆಯುತ್ತಿದೆ. ಹೀಗಾಗಿ ಸಾಂಸ್ಕೃತಿಕ ಎನ್ನುವ ರೂಪ ರಚನೆಗಳಿಂದ ಪ್ರಭಾವಿತವಾಗಿರುವ ಸಾಹಿತ್ಯ ಅಧ್ಯಯನಗಳು ಯಾವಾಗಲೂ ತಮ್ಮನ್ನು ಓರಿಯಂಟಲ್ ಎಂದು ಕರೆಯಲಾಗುವ ಪರಂಪರಾಗತ ನಿಲುವುಗಳ ಜೊತೆಗೆ ಗುರುತಿಸಿ ಕೊಂಡಿವೆ. ಭಾರತೀಯ ಗ್ರಂಥಸಂಪಾದನೆಯು ಇದಕ್ಕೆ ಹೊರತಲ್ಲ. ಈ ಕಾರಣಕ್ಕಾಗಿ ನಾನು ಗ್ರಂಥಸಂಪಾದನೆಯನ್ನು ಸಾಹಿತ್ಯ ಅಧ್ಯಯನಕ್ಕಿಂತ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಧ್ಯಯನವನ್ನಾಗಿ ಪರಿಭಾವಿಸಿದ್ದೇನೆ.

'ಬಹಳ ಮುಖ್ಯವಾಗಿ ಮೂಲ ಶುದ್ಧ ಪ್ರಮಾಣೀಕೃತ ಹಾಗೂ ಆಧುನಿಕ ಎನ್ನುವ ಯಜಮಾನಿ ಧೋರಣೆಗಳನ್ನು ರೂಪಿಸಿದ್ದೆ ಓರಿಯಂಟಲ್ ಹಾಗೂ ಆಧುನಿಕ ತತ್ವಗಳು. ಭೂತಕಾಲದ ಭಾರತೀಯ ಪರಂಪರೆಯಲ್ಲಿ ಈ ಗುಣಗಳಿದ್ದರೂ ಅವುಗಳ ಮಧ್ಯ ಶಕ್ತಿಯುತವಾದ ವಿನಿಯಮ ಎಂಬುದಿತ್ತು. ಆದರೆ ಓರಿಯಂಟಲ್ ಮನಸ್ಸುಗಳು ಭಾರತದ ಭೂತಕಾಲದ ಹಾಗೂ ಪ್ರಾದೇಶಿಕ ಸಂವೇದನಗಳನ್ನು ಅಲೌಕಿಕ, ಆದಿಭೌತಿಕ, ಅನಾಗರಿಕ, ಅಶುದ್ಧ ಎಂಬಿತ್ಯಾದಿಯಾಗಿ ಹೀಗಳೆಯುತ್ತವೆ. ಈ ಧೋರಣೆಗಳು ಗ್ರಂಥಸಂಪಾದನೆಯಂತಹ ಶಾಸ್ತ್ರೀಯ ಕ್ಷೇತ್ರಗಳನ್ನು ಪ್ರಭಾವಿಸಿವೆ. ಕವಿಯನ್ನು ಮಹೋನ್ನತವಾಗಿಯೂ ಕೃತಿಯನ್ನು ಪ್ರಶ್ನಾತಿತವಾಗಿಯೂ ಸ್ವೀಕರಿಸುವ ಈ ನೆಲೆಗಳು ಲಿಪಿಕಾರ, ಪ್ರತಿಕೃತಿ ಮತ್ತು ಪ್ರತಿಯೊಳಗಿನ ಭಾಷೆ ಮತ್ತು ಸಂಸ್ಕೃತಿಗಳ ವೈವಿಧ್ಯತೆಯನ್ನು ನಿರಾಕರಿಸುತ್ತವೆ. ಅವನು ಅಸಾಹಿತ್ಯಿಕ ಮತ್ತು ಅಸಾಂಸ್ಕೃತಿಕವೆಂದು ಬಗೆಯುತ್ತವೆ. ತಾರ್ಕಿಕ ರಚನೆಗಳ ದಾರಿ ಹಿಡಿದು ಹೊರಟವರಿಗೆ ಇವುಗಳ ಅಂತರ್ಯ ಅರ್ಥವಾಗುವುದಿಲ್ಲ. ಸಾಮಾಜಿಕ ಅವಕಾಶದ ಕೊರತೆಯೇ ಈ ರೀತಿಯ ಪರ್ಯಾಯ ವಿಶ್ವದ ಹುಟ್ಟಿಗೆ ಹಾಗೂ ಬಹುಪ್ರತಿ ನೆಲೆಗಳಿಗೆ ಕಾರಣವಾಗುತ್ತವೆ'.[೧೧]

'ಹೀಗೆ ಬಹು ಸಾಂಸ್ಕೃತಿಕ ಆವರಣದಲ್ಲಿ ಬಹುಪ್ರಯೋಜನಾರ್ಥವಾಗಿ ಹುಟ್ಟಿಬಂದ ಹಸ್ತಪ್ರತಿಗಳಂತಹ ಭಾಷಿಕ ಆಕೃತಿಗಳು ಚಲನಶೀಲ ಸಂಸ್ಕೃತಿಯೊಂದು ತನ್ನ ಕಾಲದ ಅಗತ್ಯಗಳಿಗೆ ತಕ್ಕಂತೆ ಮುರಿದುಕಟ್ಟುತ್ತ ಬಂದಿರುವ ಹಾಗೂ ನಡೆಸಿರುವ ವಾಗ್ವಾದ ಹಾಗೂ ಅನುಸಂಧಾನದ ಫಲಗಳಾಗಿ ಅಧಿಕೃತ ಹಾಗೂ ಏಕಮೇವ ಪಠ್ಯ ಎನ್ನುವ ಪರಿಕಲ್ಪನೆಯೇ ಭಾರತೀಯ ಸಂಸ್ಕೃತಿಯ ಬಹುವಚನೀಯ ಪರಂಪರೆಗೆ ಅಸಂಗತವಾದ್ದು ಎಂದು ಎ.ಕೆ. ರಾಮಾನುಜನ್ ಅವರು ಹೇಳುತ್ತಾರೆ'.[೧೨]

ಭಾರತಿಯ ಸಾಹಿತ್ಯದುದ್ದಕ್ಕೂ ಹೀಗೆ ರಚನೆಯೊಂದನ್ನು ಒಡೆದು ಕಟ್ಟುವ ಹಲವು ಮಾದರಿಗಳು ನಮಗೆ ಸಿಗುತ್ತವೆ. ಭಾಷಿಕ ಸಂಕಥನಗಳನ್ನು ಅವು ಮೌಖಿಕ ಮಾದರಿಗಳ ನಮಗೆ ಸಿಗುತ್ತದೆ. ಭಾಷಿಕ ಸಂಕಥನಗಳು ಅವು ಮೌಖಿಕ ರೂಪದಲ್ಲಿರಲಿ ಅಥವಾ ಲಿಖಿತ ರೂಪದಲ್ಲಿರಲಿ ಮರು ರೂಪದಲ್ಲಿ ನಿರೂಪಿಸುವುದು ಸಂಸ್ಕೃತಿಯ ಒಂದು ಪ್ರವೃತ್ತಿಯಾಗಿದೆ. ಇಂಥ ಸಾಂಸ್ಕೃತಿಕ ಸಂದರ್ಭದಲ್ಲಿ ಭಾರತದಲ್ಲಿ ಚಾಲ್ತಿಯಲ್ಲಿರುವ ಗ್ರಂಥಸಂಪಾದನಾ ವಿಧಾನಗಳು ಶಾಸ್ತ್ರಿಯ ನೆಲೆಗಟ್ಟುಗಳ ಕರ್ತೃವಿನ ಮೂಲಪಾಠ ಹಾಗೂ ಮೂಲ ಅರ್ಥದ ಕಾಣ್ಕೆಗೆ ಒಲುಮೆ ತೋರುತ್ತವೆ. ಪಠ್ಯದೊಡನೆ ಸಂಸ್ಕೃತಿಯು ನಡೆಸಿದ ಅನುಸಂಧಾನಗಳನ್ನು ಇವು ಮುಖ್ಯವೆಂದು ಪರಿಗಣಿಸುವುದಿಲ್ಲ. ಪಠ್ಯವೊಂದರ ಜೀವಂತವಾಗಿರುವುದು ಅದರ ಪರಿಷ್ಕರಣ ರೂಪದಲ್ಲ. ಸಂವಹನ ರೂಪದಲ್ಲಿ ಹಾಗೂ ಮರು ರೂಪಾಧಾರಣ ಸಾಮರ್ಥ್ಯದಲ್ಲಿ ಎಂಬುದು ಗಮನಾರ್ಹ. ಹಾಗಾದರೆ ಭಾರತೀಯ ಸಂಸ್ಕೃತಿ ಗ್ರಹಿಸಿದ ಪಠ್ಯದ ಸ್ವರೂಪ ಯಾವುದು ಎಂಬುದನ್ನು ಚರ್ಚಿಸುವುದು ಕುತೂಹಲಕರವಾದದ್ದು.

ಭಾರತೀಯ ಸಂದರ್ಭದಲ್ಲಿ ಗ್ರಂಥ, ಲೇಖನ, ಹೊತ್ತಿಗೆ, ಕಟ್ಟು, ಕವಳಿಗೆ, ಪುಸ್ತಕ ಹಸ್ತಪ್ರತಿ ಎನ್ನುವ ಶಬ್ದಗಳು ಗ್ರಂಥ ಪಠ್ಯಕ್ಕೆ ಸಂದರ್ಭಾನುಸಾರ ಸಮರ್ಥವಾಗಿ ಅನ್ವಯವಾಗುತ್ತ ಬಂದ ಪದಗಳಾಗಿವೆ. ಬರವಣಿಗೆ ಪ್ರಧಾನವಾದ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಇವನ್ನು ಬಳಸಲಾಗಿದೆ. ಸಿಂಧೂ ಮೂಲದ ಹರಪ್ಪಾ ಮಹೆಜೋಂದಾರೋ ನಾಗರೀಕತೆಯ ನೂರಾರು ಮುದ್ರಿಕೆಗಳ ಮೇಲಿನ ಚಿತ್ರಲಿಪಿಗಳಿಂದ ಹಿಡಿದು ಕ್ರಿ.ಪೂ.೪೫೦ರಲ್ಲಿ ನೇಪಾಳ ಸರಹದ್ದಿನ ದಪ್ರಾವಾ ಪ್ರದೇಶದಲ್ಲಿ ದೊರೆತ ಬಳಪದ ಕಲ್ಲಿನ ಕಳಂಕ ಮುಚ್ಚಳದ ಸುತ್ತಲೂ ಬರೆದಿರುವ ಅತ್ಯಂತ ಪ್ರಾಚೀನ ಲಿಪಿ ಎಂದೆನಿಸಿದೆ. ಇಂಥ ಲೇಖನದಿಂದ ಹಿಡಿದು ಬ್ರಾಹ್ಮಿ, ಖರೋಷ್ಠಿ ದೇವನಾಗರಿ ಲಿಪಿಗಳ ವರೆಗೂ ಇರುವ ಬರೆಹವನ್ನು ಲೇಖನ ಗ್ರಂಥ ಪಠ್ಯ ಎಂದೇ ಪರಿಗಣಿಸುತ್ತ ಬರಲಾಗಿದೆ. ಈ ಹಿನ್ನೆಲೆಯಲ್ಲಿ ಕ್ರಿ.ಪೂ.೩೦೦ ರಿಂದ ಈಚಿನ ಕಾಲದಲ್ಲಿ ಗ್ರಂಥಗಳ ಬರವಣಿಗೆ ರೂಢಿಗೆ ಬಂದಿರಬೇಕು. ಬೌದ್ಧಗ್ರಂಥವಾದ ಧಮ್ಮಪದದ ಒಂದು ಹಸ್ತಪ್ರತಿಯ ಭೂರ್ಜಪತ್ರಗಳ ಮೇಲೆ ಖರೋಷ್ಠಿ ಲಿಪಿಯಲ್ಲಿ ಲಿಖಿತವಾದದ್ದು ದೊರೆತಿದೆ. ಅದು ಕುಶಾಣರ ಕಾಲಕ್ಕೆ ಕ್ರಿ.ಶ. ೨೨೦ಕ್ಕೆ ಸೇರಿದ್ದಾಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿದ್ದು ಚಿತ್ರ ಸಂಕೇತಗಳಂತಹ ಕೊರೆದ ಬಹರಗಳನ್ನೂ ಗ್ರಂಥ ಅಥವಾ ಲೇಖನ ಎನ್ನುವ ಭಾವನೆಯಲ್ಲಿ ಅದನ್ನೊಂದು ಪಠ್ಯವೆಂಬಂತೆ ಸ್ವೀಕರಿಸಿದ ನೆಲೆಗಳನ್ನು ಭಾರತೀಯ ಗ್ರಂಥಸಂಪಾದನೆಯ ಹರಿಕಾರರೆಂದೇ ಬಿಂಬಿತವಾಗಿರುವ ಶ್ರೀ ಎಸ್.ಎಂ.ಕತ್ರೆಯವರು ಭಾರತೀಯ ಗ್ರಂಥಸಂಪಾದನ ಪರಿಚಯದಲ್ಲಿ ಹೇಳಿದ ಮಾತ್ತೊಂದು ಇಲ್ಲಿ ಪ್ರಸ್ತುತವೆನಿಸುತ್ತದೆ.

'ಗ್ರಂಥಸಂಪಾದನೆಯ ಸ್ವಾಭಾವಿಕವಾಗಿಯೇ ಗ್ರಂಥಗಳಿಗೆ ಸಂಬಂಧಿಸಿದ್ದಾಗಿದೆ. ಪಾಠ ನಿರ್ಣಯ ವಿಷಯದಲ್ಲಿ ತೋರುವ ವ್ಯವಸ್ಥಿತವೂ ಕೌಶಲ್ಯಪೂರ್ಣವೂ ಆದ ವಿವೇಚನೆಯೆಂದು ಇದನ್ನು ಸೂತ್ರೀಕರಿಸಬಹುದು. ಸಂಶೋಧಕರು ಬಹುಮಟ್ಟಿಗೆ ಬಲ್ಲ ಭಾಷೆಯೊಂದರಲ್ಲಿ ತಿಳಿಯುವಂತ ಅಥವಾ ತಿಳಿಯಲು ಸಾಧ್ಯವಿರುವಂತೆ ಅರ್ಥವತ್ತಾಗಿ ರಚಿತವಾಗಿರುವ ಯಾವ ಲೇಖನವನ್ನಾದರೂ ಗ್ರಂಥವೆನ್ನಬಹುದು'.[೧೩] ಲ್ಯಾಟೀನ್ ಭಾಷೆಯನ್ನು ಮುಂದಿಟ್ಟುಕೊಂಡು 'ಪೋಸ್ಟ್‌ಗೇಟ್' ಹೇಳುವ ಈ ಮಾತನ್ನು ಭಾರತೀಯ ಭಾಷಿಕ ಸಂದರ್ಭಕ್ಕೆ ಕತ್ರೆಯವರು ಹೊಂದಿಸುತ್ತಾರೆ. ಕತ್ರೆಯವರು ಭಾರತೀಯ ಗ್ರಂಥಸಂಪಾದನ ಪರಿಚಯ ಪುಸ್ತಕದ ಆರಂಭವೇ ಪೋಸ್ಟಗೇಟ್‌ನ ಈ ಮಾತಿನಿಂದ ಆಗುತ್ತದೆ ಎಂಬುದು ಗಮನಾರ್ಹ.

ಪೋಸ್ಟ್‌ಗೇಟ್ ಪರಿಭಾವಿಸಿದ ಲೇಖನ ಅಥವಾ ಗ್ರಂಥದ ಪರಿಕಲ್ಪನೆ ಸುಸಜ್ಜಿತವಾಗಿ ಬೆಳೆದ ಭಾಷೆಯೊಂದರ ಸಂದರ್ಭದಿಂದ ಹುಟ್ಟಿ ಬಂದಿದೆ. 'ಅರ್ಥವತ್ತಾದ ಯಾವ ಲೇಖನವನ್ನಾದರೂ ಗ್ರಂಥವೆನ್ನಬಹುದು' ಎನ್ನುವ ಆತನ ಮಾತನ್ನು ಲೇಖನ ಎಂಬುದಕ್ಕೆ ಸಮಾನಾರ್ಥವಾಗಿ ಕತ್ರೆಯವರು ಬಳಸುತ್ತಾರೆ. ಗ್ರೀಕ್ ಮೂಲದಿಂದ ದೊರೆತ ಸಾಕ್ಷಿಗಳು ಐದನೆಯ ಶತಮಾನ ಕ್ಕಾಗಲೇ ಭಾರತದಲ್ಲಿ ಬರವಣಿಗೆ ಬಳಕೆಯಲ್ಲಿತ್ತೆಂಬುದನ್ನು ತೋರಿಸುತ್ತವೆ. ಸಿಂಧೂ ನಾಗರಿಕತೆಯ ನಂತರ ಭಾರತೀಯ ಸಾಹಿತ್ಯದಲ್ಲಿ ಬರವಣಿಗೆಯ ನಿರ್ದಿಷ್ಟ ರೂಪದ ಪ್ರಸ್ತಾಪವೇ ಇಲ್ಲದೆ ಹೋದದ್ದು ಹೇಗೆ ಎನ್ನುವುದು ಪ್ರಶ್ನೆ? ಭಾರತದಲ್ಲಿ ಮುದ್ರಣ ವ್ಯವಸ್ಥೆ ಪ್ರಾರಂಭವಾಗು ವವರೆಗೆ ಪರಂಪರಾಗತವಾಗಿ ಸಾಗಿ ಬಂದ ಜ್ಞಾನವಾಹಿನಿ ಕಾರ್ಯದ ಚರಿತ್ರೆ ತುಂಬ ಸಂಕೀರ್ಣ ವಾಗಿದೆ. ಮಾತು ಮತ್ತು ಬರೆಹ ಏಕಕಾಲಕ್ಕೆ ನೆಲೆಯೂರಿದರೂ ಮಾತು ಬರಹವಾಗಿ ಮಾರ್ಪಾಡಾದ ಸಂದರ್ಭದಲ್ಲಿ ಪಾಠಶುದ್ಧತೆ ಕಾರ್ಯ ಪಠಣಕಾರರ ಕೈಯಿಂದ ಜಾರಿ ಲಿಪಿಕಾರರ ಕೈಯಿಗೆ ಬಂದಿದ್ದನ್ನು ಕಾಣಬಹುದು.

ಮೇಲಿನ ಒಟ್ಟು ವಿವರಗಳನ್ನು ಪರಿಭಾವಿಸಿದಾಗ ಭಾರತೀಯ ಸಂದರ್ಭದಲ್ಲಿ ಪಠಣ ಕಲೆ ಮತ್ತು ಲೇಖನ ಕಲೆಯ ಆರಂಭವನ್ನೇ ಗ್ರಂಥಸಂಪಾದನೆಯ ಆರಂಭವಾಗಿ ಪರಿಗಣಿಸಿದ ಸ್ಪಷ್ಟ ಮಾಹಿತಿಗಳು ದೊರೆಯುತ್ತವೆ. ಮಾತಿನ ಆರಂಭವೇ ಗ್ರಂಥಸಂಪಾದನ ಚರಿತ್ರೆಯ ಆರಂಭವಾಗಿ ಕಾಣುತ್ತದೆ. ಆಧುನಿಕ ಪೂರ್ವದ ಈ ರೀತಿಯ ಪರಿಕಲ್ಪನೆಗಳನ್ನು ಎಲ್ಲ ಭಾರತೀಯ ಭಾಷೆಗಳಲ್ಲಿ ಧಾಳಾಗಿ ಕಾಣುತ್ತೇವೆ. ಮಾತು ಜ್ಯೋತಿರ್ಲಿಂಗವಾಗುವ ಮಾತು ಅನುಭವ ಹಾಗೂ ಅನುಭಾವವಾಗುವ ಪಥ್ಯವಾಗುವ ವಿಧಾನಗಳನ್ನು ಕನ್ನಡದ ವಚನಕಾರರು (೧೨ನೆಯ ಶತಮಾನ), ದಾಸರು (೧೫ನೆಯ ಶತಮಾನ), ತತ್ವಪದಕಾರರಲ್ಲಿ(೧೬ನೆಯ ಶತಮಾನ ಕಾಣಬಹುದು. ಮುದ್ರಣ ಚರಿತ್ರೆಗೂ ಮೊದಲಿನ ಮಾತಿನ ಚರಿತ್ರೆಯೇ ಭಾರತೀಯ ಗ್ರಂಥಸಂಪಾದನೆಯ ಮುಖ್ಯ ಸ್ಥಾಯಿಯೆಂಬುದು ಗಮನಾರ್ಹ ಸಂಗತಿ.

ಒಂಬತ್ತನೆಯ ಶತಮಾನದ ಹೊತ್ತಿಗೆ ಪ್ರಾದೇಶಿಕ ಭಾಷೆಯಲ್ಲಿ ಮೊಟ್ಟಮೊದಲಿಗೆ ಹುಟ್ಟಿದ ಕವಿರಾಜಮಾರ್ಗದಂತಹ ಕನ್ನಡ ಕೃತಿ ಇಂಥ ದೇಶಭಾಷೆ ಮೀಮಾಂಸೆಯೊಂದನ್ನು ಮಂಡಿಸುತ್ತದೆ. ಕುರಿತೋದಯಂ ಕಾವ್ಯ ಪ್ರಯೋಗ ಪರಿಣತಮತಿಗಳ್ ಎನ್ನುವ ಮೂಲಕ ಲಿಖಿತ ಪ್ರಧಾನವಾದ ಬರಹದ ಆವರಣಕ್ಕಿಂತ ಅನುಭವ ಪ್ರಧಾನವಾದ ಮೌಖಿಕ ಸ್ವರೂಪದ ಜ್ಞಾನ ಸಂರಚನೆಯನ್ನು ಎತ್ತಿ ತೋರಿಸುತ್ತದೆ. ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ(ಕ್ರಿ.ಶ.೯೦೨) ವ್ಯಾಸಮಹಾಭಾರತದಂತಹ ದೊಡ್ಡ ಕಥೆಯನ್ನು ಪ್ರಮಾಣಬದ್ಧ ಕಾವ್ಯ ಕೃತಿಯನ್ನಾಗಿ ಮಾರ್ಪಡಿಸಿದರೆ ಸಣ್ಣಕಥೆಯೊಂದನ್ನು ಹಿಗ್ಗಿಸಿ ಪ್ರಮಾಣ ಕೆಡದಂತೆ ಉತ್ಕೃಷ್ಟ ಕೃತಿಯನ್ನಾಗಿ ರಚಿಸಿದ ನಾಗಚಂದ್ರನ ಮಲ್ಲಿನಾಥ ಪುರಾಣ (ಕ್ರಿ.ಶ.ಸು.೧೧೦೦) ಮೂಲ ಪಠ್ಯದ ಪರಿವರ್ತ ಶೀಲ ಸ್ವಭಾವಕ್ಕೆ ಒಳ್ಳೆ ಉದಾಹರಣೆಗಳು.

ಮಧ್ಯಕಾಲೀನ ಭಾರತೀಯರಿಗೆ ಸಂಗ್ರಹ ಮತ್ತು ಸಂಪಾದನ ಚಟುವಟಿಕೆಗಳು ತಿಳಿದಿದ್ದವು. ಕವಿ, ಲಿಪಿಕಾರ, ವ್ಯಾಖ್ಯಾನಕಾರರ ಕಾರಣದಿಂದಾಗಿ ವ್ಯತ್ಯಾಸಗಳಾಗಿ ಪಾಠ ಕೆಟ್ಟು ಹೋಗುವುದೆಂಬ ವಿಷಯವನ್ನು ನಮ್ಮ ಪ್ರಾಚೀನರು ಬಲ್ಲವರಾಗಿದ್ದರು ಮತ್ತು ಅದನ್ನು ತಿದ್ದಿ ಸರಿಪಡಿಸಬೇಕಾದ ಅವಶ್ಯಕತೆಯನ್ನೂ ಅವರು ಮನಗಂಡಿದ್ದರು. ವಿಶೇಷವಾಗಿ ೧೨ನೆಯ ಶತಮಾನದಲ್ಲಿ ವಿಶ್ವಸಾಹಿತ್ಯದಲ್ಲಿ ಈ ಪಾಠಾಂತರದ ಹಾವಳಿ ಜಾಸ್ತಿಯಿದ್ದದ್ದು ಕಂಡುಬರುತ್ತದೆ. ಎರಡು ಹಸ್ತಪ್ರತಿಗಳ ತೌಲನಿಕತೆಯಿಂದ ಮಿಶ್ರಪಾಠ ಹಾಗೂ ಭಿನ್ನಪಾಠಗಳನ್ನು ಸುಧಾರಿಸಬಹುದು ಎನ್ನುವುದನ್ನು ದೇವಬೋಧ ಮತ್ತು ಅರ್ಜುನಮಿಶ್ರರಂತಹ ಮಹಾಭಾರತದ ವ್ಯಾಖ್ಯಾನಕಾರರು ಹೇಳುತ್ತಾರೆ. ಮಿಶ್ರ ಪೀಳಿಗೆಗಳಂತಹ ಸಂಗತಿಗಳನ್ನು ಗೋಡಬೋಲೆಯಂಥ ವಿದ್ವಾಂಸರು ೧೩ನೆಯ ಶತಮಾನದ ಸಂದರ್ಭದಲ್ಲಿಯೇ ಗುರುತಿಸುತ್ತಾರೆ. ಉದಾಹರಣೆಗೆ ಯಾಸ್ಕಾಚಾರ್ಯನ ನಿಂಘಟುವಿಗೆ ವ್ಯಾಖ್ಯಾನ ಬರೆದಿರುವ ದೇವರಾಜ (೧೩ನೆಯ ಶತಮಾನ) ಹಸ್ತಪ್ರತಿಗಳಲ್ಲಿನ ಪಾಠಾಂತರಗಳು ವ್ಯಾಖ್ಯಾನಗಳಿಂದ ಭಿನ್ನಪಾಠಗಳನ್ನು ತಿಳಿದವನಾಗಿದ್ದ. ಮಾಧವನಿಂದ ರಚಿತವಾದ ಭಾಷ್ಯ ಗ್ರಂಥವನ್ನು ಹಲವು ಹಸ್ತಪ್ರತಿಗಳ ಸಹಾಯದಿಂದ ಶುದ್ಧಪಾಠವನ್ನು ಕಟ್ಟಿಕೊಟ್ಟಿದ್ದಾನೆ.

ಶ್ರೀಮನ್ಮಧ್ವಾಚಾರ್ಯರು (ಕ್ರಿ.ಶ.೧೨೩೮-೧೩೧೭) ತಮ್ಮ ಮಹಾಭಾರತ ತಾತ್ಪರ್ಯ ನಿರ್ಣಯವೆಂಬ ಗ್ರಂಥದಲ್ಲಿ 'ಹಸ್ತಪ್ರತಿಯಲ್ಲಿ ಕಾಣುವ ಪ್ರಕ್ಷೇಪಗಳಿಗೆ ದುರ್ವಿದಗ್ಧರೂ ಕುತ್ಸಿತರೂ ಆದ ವಿದ್ವಾಂಸರು ಕಾರಣರು. ಹಾಗೆ ಕೆಲವು ಸಜ್ಜನರು ಕೂಡ ಅನವಧಾನದಿಂದಲೂ ಅಜ್ಞಾನದಿಂದಲೂ ಅನ್ಯಥಾ ಜ್ಞಾನದಿಂದಲೂ ಹೀಗೆ ಮಾಡುತ್ತಾರೆ. ಇವುಗಳನ್ನೆಲ್ಲ ಸರಿಪಡಿಸುವುದು 'ಹರಿಕಿಂಕರ ಶ್ರೇಷ್ಠರಾದ' ನಮ್ಮಂಥವರ ಪ್ರಯತ್ನ ಎಂದು ಹೇಳುತ್ತಾರೆ. ಲಿಪಿಕಾರರೇ ಪ್ರಕ್ಷೇಪಗಳಿಗೆ ಕಾರಣವೆಂದು ಹೇಳುವ ಪ್ರಪಂಚದಲ್ಲಿ ಕಪಿ ವಿದ್ವಾಂಸರು ಕಾರಣರೆಂದು

ಹೇಳುವ ಶ್ರೀಮನ್ಮಧ್ವಾಚಾರ್ಯರ ಮಾತು ಚರ್ಚೆಗೆ ಗ್ರಾಸವಾಗುತ್ತದೆ. ಆದರೆ ಇಂಥ ತಪ್ಪುಗಳನ್ನು ತಿದ್ದಲು ಹರಿಕಿಂಕರ ಶ್ರೇಷ್ಠರಾದ ತಮ್ಮಂಥವರೇ ಬೇಕು'[೧೪] ಎನ್ನುವ ಮಾತು ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಹಿಂದಿರುವ ಅಪೌರುಷೇಯವಾದ ಪಾರಂಪರಿಕ ಹಕ್ಕಿನ ಹಿತಾಸಕ್ತಿಗಳನ್ನು ಎತ್ತಿ ತೋರುತ್ತದೆ.

ದೇವಗಿರಿ ಯಾದವರಲ್ಲಿ ಮಂತ್ರಿಯಾಗಿದ್ದ ಹೇಮಾದ್ರಿ ಪಂಡಿತ(ಕ್ರಿ.ಶ.ಸು.೧೨೭೧–೧೩೦೯) ಎಂಬಾತನು 'ಅಷ್ಟಾಂಗ ರಸಾಯನ' ಎಂಬ ವ್ಯಾಖ್ಯಾನದಲ್ಲಿ ಎರಡು ಪಾಠಾಂತರ ಕುರಿತು ಚರ್ಚಿಸುತ್ತಾನೆ. ಹಾಗೆ ವಿಶ್ವವಿಖ್ಯಾತ ವ್ಯಾಖ್ಯಾನಕಾರನಾದ ಮಹಾಮಹೋಪಾಧ್ಯಾಯ ಮಲ್ಲಿನಾಥನು (ಕ್ರಿ.ಶ.ಸು.೧೪೦೦) ಮೇಘಧೂತ ಕಾವ್ಯದ ಪೂರ್ವ ಹಾಗೂ ಉತ್ತರ ಭಾಗದಲ್ಲಿ ಬರುವ ಪದ್ಯಗಳಲ್ಲಿ ಪ್ರಕ್ಷೇಪಗಳನ್ನು ಪಾಠಭೇದಗಳನ್ನು ಗುರುತಿಸುತ್ತಾನೆ. ಮಹಾಭಾರತಕ್ಕೆ ಭಾರತ ಭಾವದ್ವೀಪ ಎನ್ನುವ ಹೆಸರಿನ ವ್ಯಾಖ್ಯಾನ ಬರೆದಿರುವ ಮಹಾರಾಷ್ಟ್ರದ ನೀಲಕಂಠನು(೧೭ನೆಯ ಶತಮಾನ) ಭರತಖಂಡದ ಭಿನ್ನ ಪ್ರದೇಶದಲ್ಲಿ ದೊರೆತ ಮಹಾಭಾರತದ ಹಸ್ತಪ್ರತಿಗಳನ್ನು ಸಂಗ್ರಹಿಸಿ ಉತ್ತಮ ಪಾಠದ ನಿರ್ಣಯ ಮಾಡಿದ್ದಾನೆ. ಸುಮಾರು ೧೨೫ ಎಡೆಗಳಲ್ಲಿ ಭಿನ್ನಪಾಠಗಳನ್ನು ಹಾಗೂ ಪ್ರಕ್ಷೇಪ ಭಾಗಗಳನ್ನು ಗುರುತಿಸಿದ್ದಾನೆ. ಮುಂದುವರೆದು, ಪಾಠ ಸಂಪ್ರದಾಯದಲ್ಲಿ ದಾಕ್ಷಿಣಾತ್ಯ ಮತ್ತು ಗೌಡಿಯ ಭೇದಗಳನ್ನು ಈತ ಗುರುತಿಸುತ್ತಾನೆ. ಪಂಚತಂತ್ರವನ್ನು ಸಂಪಾದನೆ ಮಾಡಿದ ಎಡ್ಗರ್‌ಟನ್‌ನಂಥ ವಿದ್ವಾಂಸರಲ್ಲದೆ ಪೋಸ್ಟಗೇಟ್ ಅಂಥ ವಿದೇಶಿ ವಿದ್ವಾಂಸರು ಪಾಠಾಂತರಗಳ ಬಗ್ಗೆ ಗಂಭೀರವಾಗಿ ಚಿಂತಿಸಿದ್ದಾರೆ.

ಇನ್ನೊಂದು ವಿಶೇಷವೆಂದರೆ ರಾಮಕೃಷ್ಣ ಭಂಡಾರ್ಕರ್ ಅಂತಹ ವಿದ್ವಾಂಸರು ನಂಬಲರ್ಹವಲ್ಲದ ಹಸ್ತಪ್ರತಿಗಳಲ್ಲಿಯೂ ಯೋಗ್ಯಪಾಠಗಳು ದೊರೆಯುವುದುಂಟು ಎನ್ನುವ ಸತ್ಯವನ್ನು ಮಾಲತೀಮಾಧವ ಮುದ್ರಣಕ್ಕೆ ಬಳಸಿದ ಹಸ್ತಪ್ರತಿಗಳಿಂದ ಕಂಡುಕೊಳ್ಳುತ್ತಾರೆ. ಅಂದರೆ ಶ್ರೇಷ್ಠ ಹಾಗೂ ಮೂಲ ಎನ್ನುವ ಹಸ್ತಪ್ರತಿಗಳ ಹೊರತಾಗಿಯೂ ಮಿಶ್ರ ಹಾಗೂ ಕೂಟ ಹಸ್ತಪ್ರತಿಗಳು ಕೂಡ ನಂಬಿಕೆಗೆ ಅರ್ಹ ಎನ್ನುವ ಮಾತು ಗಂಭೀರ ಚಿಂತನೆಗೆ ಎಡೆಮಾಡಿ ಕೊಡುತ್ತದೆ. ಪಾಠ ವಿಮರ್ಶೆಯಲ್ಲಿ ಈ ರೀತಿ ಎರಡು ಪಂಥಗಳಿರುವುದನ್ನು ಕಾಣುತ್ತವೆ. ಸಂಪ್ರದಾಯವಾದಿಗಳು ಶಾಸ್ತ್ರೀಯ ವಿವರಣೆಗೆ ಸಲ್ಲದ ಪ್ರಾಮುಖ್ಯತೆ ಕೊಟ್ಟರೆ ಇನ್ನೊಂದು ಪಂಥದವರು ಊಹಾತ್ಮಕ ತಿದ್ದುಪಡಿಗೆ ಅಷ್ಟೆ ಪ್ರಾಮುಖ್ಯತೆ ನೀಡುತ್ತಾರೆ. ಲೇಖಕರು ಏನು ಬರೆದಿರುವರೋ ಅದಕ್ಕಿಂತ ಏನೋ ಬರೆದಿರಬಹುದೋ ಅದನ್ನು ಇಡುವುದು ಉತ್ತಮ ಎನ್ನುವ ವಾದಗಳು ಇವೆ.

ಮೇಲಿನ ಎಲ್ಲ ಉಲ್ಲೇಖಗಳು ಹಸ್ತಪ್ರತಿ ಸಂಗ್ರಹ, ಪಾಠಭೇದ, ಪ್ರಕ್ಷೇಪ, ಗ್ರಂಥಪಾಠ, ಪಾಠಾಂತರಗಳ ಸಹಾಯದಿಂದ ಪಾಠಶೋಧ ಮಾಡುವುದನ್ನು ಪ್ರಾಚೀನ ಭಾರತ

ವಿದ್ವಾಂಸರು ತಿಳಿದಿದ್ದ ರೆಂಬುದನ್ನು ಸೂಚಿಸುತ್ತವೆ. ಇದೂ ಅಲ್ಲದೇ ವ್ಯಾಖ್ಯಾನಕಾರರೇ ಸಂಪಾದಕರ ಕೆಲಸ ಮಾಡಿದ್ದು ಈ ಅವಧಿಯಲ್ಲಿ ಎದ್ದು ಕಾಣುವ ಸಂಗತಿಯಾಗಿದೆ. ಈ ಸಂಗತಿಯು ಗ್ರಂಥಸಂಪಾದನೆಯನ್ನು ಮತ್ತೊಂದು ನಿಟ್ಟಿನಲ್ಲಿ ಚರ್ಚಿಸಲು ಪ್ರೇರೇಪಿಸುತ್ತದೆ.

ಭಾರತೀಯ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಅಧ್ಯಯನ್ ಪ್ರೇರಣೆಗಳನ್ನು ನಮ್ಮ ವಿದ್ವಾಂಸರು ಪಾಶ್ಚಾತ್ಯರಿಂದ ಗುರುತಿಸುವ ಕಾರಣದಿಂದಾಗಿ ಈ ವಿಷಯವನ್ನು ಪ್ರಸ್ತಾಪಿಸಲಾಗುತ್ತಿದ್ದು ಮಧ್ಯಕಾಲೀನ ಮತ್ತು ಆಧುನಿಕ ಸಂದರ್ಭದ ನಮ್ಮ ಹೆಚ್ಚಿನ ಅಧ್ಯಯನದ ನೆಲೆಗಳ ಪಶ್ಚಿಮದಿಂದ ಪ್ರೇರಿತಗೊಂಡಿರುವ ಗ್ರೀಕ್ ರೋಮನ್ ಮತ್ತು ಹೀಬ್ರು ಅಥವಾ ಯಹೂದ್ಯ ಸಂಸ್ಕೃತಿಯಲ್ಲಿ ವಿಪುಲವಾದ ಸಾಹಿತ್ಯ ರಾಶಿಗಳಿವೆ. ಈ ಸಂಸ್ಕೃತಿಗೆ ಸೇರಿದ ಪ್ರಾಚೀನ ಗ್ರಂಥಗಳ ಹಸ್ತಪ್ರತಿ ಸಂಗ್ರಹ ಪರಿಷ್ಕರಣ ಮತ್ತು ಪ್ರಕಟಣ ಕೆಲಸ ಬಹು ಹಿಂದಿನಿಂದಲೂ ನಡೆದು ಬಂದಿದೆ. ಕ್ರಿ.ಪೂ. ೬೦೦-೩೦೦ರ ವರೆಗೆ ಅಥೆನ್ಸ್‌ಲ್ಲಿ ಕ್ರಿ.ಪೂ. ೩೦೦ ರಿಂದ ಕ್ರಿ.ಶ.೧ರ ವರೆಗೆ ಅಲೆಕ್ಸಾಂಡ್ರಿಯ ನಗರದಲ್ಲೂ ಗ್ರೀಕ್ ಭಾಷೆಯ ಗ್ರಂಥಗಳ ಹಸ್ತಪ್ರತಿಗಳ ಪರಿಷ್ಕರಣ ಕಾರ್ಯ ನಡೆದಿತ್ತು. ಕ್ರಿ.ಪೂ. ೧೬೮ರಿಂದ ಕ್ರಿ.ಶ. ೩೩೦ರ ವರೆಗೆ ರೋಮ್ ಚಕ್ರಾಧಿಪತ್ಯದ ಬಿಂಜಾಟಿಯ ಪ್ರದೇಶದಲ್ಲಿ ಗ್ರೀಕ್ ಲ್ಯಾಟೀನ್ ಭಾಷೆಗಳ ಹಸ್ತಪ್ರತಿಗಳ ಅಧ್ಯಯನ ನಡೆಯಿತು. ೧೩೫೦ರಿಂದ ೧೩೨೧ರ ವರೆಗೂ ಯುರೋಪಿನಲ್ಲಿ ವಿದ್ಯಾ ಪುನರುಜ್ಜೀವನ ಕಾಲವಾಗಿತ್ತು. ಇಟಲಿ ದೇಶದಿಂದ ಆರಂಭವಾಗಿ ನಂತರ ಯುರೋಪಿನ ಇತರ ದೇಶಗಳಿಗೆ ವ್ಯಾಪಿಸಿತು. ೧೫೨೧ರ ನಂತರ ಗ್ರಂಥಸಂಪಾದನೆಗೆ ಒಂದು ಶಾಸ್ತ್ರ ಮಾನ್ಯತೆ ಪ್ರಾಪ್ತವಾಯಿತು. ಆದರೆ ಈ ಎಲ್ಲ ಕೆಲಸಗಳಿಗೂ ಒತ್ತಾಸೆಯಾಗಿ ನಿಂತಿದ್ದು ಧರ್ಮ ಎನ್ನುವುದನ್ನು ಮರೆಯಲಾಗದು.

'ಹೋಮರನ ಓಡಿಸ್ಸಿ ಮತ್ತು ಇಲಿಯಡ್ ಕಾವ್ಯಗಳ ಸಂಪಾದನೆಯಿಂದ ಕ್ರಿ.ಶ. ೧ನೆಯ ಶತಮಾನದ ಬೈಬಲ್ಲಿನ ಭಾಷಾಂತರದ ವರೆಗಿನ ಗ್ರಂಥಸಂಪಾದನಾ ಚರಿತ್ರೆಯನ್ನು ಗಮನಿಸಿದಾಗ ಗ್ರೀಕ್ ಮತ್ತು ಲ್ಯಾಟೀನ್ ಭಾಷೆಗಳ ಗ್ರಂಥಸಂಪಾದನೆ ಸಮುದಾಯದ ದೃಷ್ಟಿಯಿಂದ ನಡೆದದ್ದು ಸ್ಪಷ್ಟವಾಗುತ್ತದೆ. ಮುಖ್ಯವಾಗಿ ಬೈಬಲಿನ ಭಾಷಾಂತರ ಮತ್ತು ಪರಿಷ್ಕರಣ ಗ್ರಂಥಸಂಪಾದನೆಗೆ ಪ್ರಮುಖ ದಾರಿಯಾಯಿತು. ೧೮-೧೯ನೆಯ ಶತಮಾನದಲ್ಲಿ ಗ್ರೀಕ್, ಲ್ಯಾಟೀನ್, ಜರ್ಮನ್ ಭಾಷೆಗಳಲ್ಲಿ ನಡೆದ ಗ್ರಂಥಸಂಪಾದನೆಯ ಚಟುವಟಿಕೆಗಳನ್ನು ಹೆಚ್ಚು ಶಾಸ್ತ್ರೀಯವೆಂದು ಪರಿಗಣಿಸಲಾಯಿತು. ಕಾರಣ ಅದುವರೆಗೂ ಕ್ರೈಸ್ತಮಠಗಳು, ಸನ್ಯಾಸಿಗಳು ಮಾಡುತ್ತಿದ್ದ ಕೆಲಸವನ್ನು ಮುಂದೆ ಯುರೋಪಿಯನ್ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ವಹಿಸಿಕೊಂಡರು. ಕಾರ್ಲ್‌ಲ್ಯಾಕ್‌ಮನ್ ಇಂಥವರಲ್ಲಿ ತುಂಬ ಪ್ರಸಿದ್ಧನಾಗಿದ್ದ. ಈತ ಹಸ್ತಪ್ರತಿಗಳ ಪರಸ್ಪರ ಸಾಹಚರ್ಯ ಸಂಬಂಧ ಮತ್ತು ಮಾತೃಕೆಗಳ ಸಾಮಾನ್ಯ ಪೀಳಿಗೆಯ ರಚನೆಯ ದಿಕ್ಕುಗಳನ್ನು ತೋರಿಸಿಕೊಟ್ಟ. ಇದಕ್ಕಿಂತಲೂ ಒಂದು ಹೆಜ್ಜೆ ಮುಂದೆ

ಹೋದ ಡೆನ್ಮಾರ್ಕಿನ ವಿಶ್ವವಿದ್ಯಾಲಯದಲ್ಲಿ ಲ್ಯಾಟಿನ್ ಭಾಷಾ ಸಾಹಿತ್ಯ ಪ್ರಾಧ್ಯಾಪಕನಾಗಿದ್ದ ಜಾನ್ ನಿಕೋಲಾ ಮಾಡ್ವಿಂಗ್(೧೮೬೬) ಕವಿಪಾಠವನ್ನು ಕಂಡು ಹಿಡಿಯುವುದೇ ಗ್ರಂಥಸಂಪಾದನೆಯ ಪರಮ ಉದ್ದೇಶವಲ್ಲ. ಗ್ರೀಸಿನ ಮತ್ತು ರೋಮಿನ ಸಾಹಿತ್ಯ ಮತ್ತು ಜನಜೀವನಗಳ ನಿಕಟ ಪರಿಚಯವನ್ನು ಮಾಡಿಕೊಳ್ಳುವುದಕ್ಕೆ ಅದೊಂದು ಸಾಧನ'[೧೫] ಎಂದು ಹೇಳುತ್ತಾನೆ. ಅಂದರೆ ಗ್ರಂಥಸಂಪಾದನೆಯನ್ನು ವಿದ್ವತ್ ಪಾಂಡಿತ್ಯಕ್ಕೆ ಮಾತ್ರ ಸೀಮಿತವಾಗಿಸದೆ ಅದನ್ನು ಸಾಮುದಾಯಿಕ ಹಾಗೂ ಸಾಂಸ್ಕೃತಿಕ ಅಧ್ಯಯನವನ್ನಾಗಿ ಮೊದಲ ಬಾರಿಗೆ ಆತ ತೋರಿಸಿ ಕೊಡುತ್ತಾನೆ. ಆದರೆ ಸಾಧನವೇ ಸತ್ಯವಾಗಿರುವ ಹಂತದಲ್ಲಿ ನಾವು ನಿಂತಿದ್ದೇವೆ. ಏನೇ ಇರಲಿ ಯುರೋಪಿನ ರಾಷ್ಟ್ರಗಳ ಸಾಹಿತ್ಯ ಪರಂಪರೆ ತುಂಬ ಸುರಕ್ಷಿತವಾದದ್ದು. ಇಂಥ ಸುರಕ್ಷಿತ ನೆಲೆಯ ಸಾಹಿತ್ಯ ಸಂಪಾದನ ವಿಧಾನಗಳನ್ನು ಅಸುರಕ್ಷಿತ ಮತ್ತು ಬಹುಕೇಂದ್ರಿತವಾದ ಭಾರತೀಯ ಭಾಷಾ ಸಾಹಿತ್ಯಗಳಿಗೆ ಅಳವಡಿಸುವುದು ಎಷ್ಟು ಸಮಂಜಸ ಎನ್ನುವದ ಪ್ರಶ್ನೆ ಹುಟ್ಟುತ್ತದೆ.

ಕರ್ನಾಟಕ ಸಂದರ್ಭದಲ್ಲಿ ಗ್ರಂಥಲೇಖನ, ಪಾಠರಕ್ಷಣೆ, ಪಾಠಸಂಗ್ರಹ ಮತ್ತು ಪಾಠ ನಿರ್ಣಯ, ಹಸ್ತಪ್ರತಿ ಸಂರಕ್ಷಣೆ ಬಗೆಗೆ ಕನ್ನಡಿಗರು ವಸಾಹತು ಪೂರ್ವ ಕಾಲದಿಂದ ತಿಳಿದವರಾಗಿದ್ದರು. ಗ್ರಂಥಲೇಖನ, ಗ್ರಂಥಸಂರಕ್ಷಣೆ, ಗ್ರಂಥವಾಚನ, ಚಟುವಟಿಕೆಗಳು ಒಂದು ರೀತಿ ದೈವಿ ಸ್ವರೂಪವನ್ನು ಪಡೆದಿದ್ದವು. ಹಸ್ತಪ್ರತಿಗಳು ಆಸ್ತಿ ಜೊತೆಗೆ ಅಣ್ಣ ತಮ್ಮಂದಿರಿಗೆ ಹಂಚಿಕೆಯಾಗಬಹುದಾದ ಸಂಪತ್ತಿನ ಮುಖ್ಯ ಭಾಗವಾಗಿಸಿದ್ದವು. ಹೀಗಾಗಿ ಗ್ರಂಥಗಳ ರಕ್ಷಣೆ ಬಗ್ಗೆ ಆಸ್ತೆವಹಿಸಿದ್ದರು.

'ಏಳು ಮತ್ತು ಒಂಬತ್ತನೆಯ ಶತಮಾನದಲ್ಲಿ ಕ್ರಮವಾಗಿ ವೈಭವದಿಂದ ಮೆರೆದ ಧನ್ಯಕಟಕ, ನಲಂದ, ವಿಕ್ರಮಶೀಲ ವಿಶ್ವವಿದ್ಯಾಲಯಗಳು ಸಮೃದ್ಧ ಗ್ರಂಥಭಂಡಾರಗಳನ್ನು ಹೊಂದಿದ್ದವು. ನಳಂದ ವಿದ್ಯಾಪೀಠದಲ್ಲಿ ರತ್ನಸಾಗರ ರತ್ನೋದದಿ ಮತ್ತು ರತ್ನರಂಜಿತ ಎಂಬ ಹೆಸರಿನ ಮೂರು ಗ್ರಂಥಾಲಯಗಳಿದ್ದವು. ಇವುಗಳಲ್ಲಿ ಒಂಬತ್ತು ಅಂತಸ್ತುಗಳ ರತ್ನೋದಧಿಯಲ್ಲಿ ತಾಂತ್ರಿಕ ವಾಙ್ಮಯದ ದೊಡ್ಡ ದಾನದತ್ತಿಗಳನ್ನು ನೀಡುತ್ತಿದ್ದರು. ಬ್ಯಾಲರ್ ಕ್ಯಾಂಬೆ ಎರಡು ಜೈನ ಪುಸ್ತಕ ಭಂಡಾರಗಳಲ್ಲಿ ೨೦೦೦೦ ಹಸ್ತಪ್ರತಿಗಳನ್ನು, ತಂಜಾವೂರಿನ ಅರಮನೆಯಲ್ಲಿ ೧೨೦೦೦ಕ್ಕಿಂತ ಹೆಚ್ಚು ಗ್ರಂಥಗಳನ್ನು ಕಂಡಿದ್ದನು'.[೧೬]

ಕರ್ನಾಟಕದಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಾಗಾವಿ ಘಟಿಕಾಸ್ಥಾನವಾಗಿತ್ತು (ಕ್ರಿ.ಶ.೧೦೫೮). ಇಲ್ಲಿನ ಶಾಸನವೊಂದರಲ್ಲಿ ಸರಸ್ವತಿ ಭಟ್ಟರಿಗೆ ದಾನಕೊಟ್ಟ ವಿವರವಿದೆ. ಕ್ರಿ.ಶ. ೧೪೦೬ರ ಪೆರ್ದೂರಿನ ಶಾಸನವೊಂದರಲ್ಲಿ ಶೃಂಗೇರಿಯಲ್ಲಿನ ಪುಸ್ತಕ ಭಂಡಾರದ ಸಂರಕ್ಷಣೆಗೆ ಬಳಂಜಿ ಗ್ರಾಮದ ಉತ್ಪನ್ನವನ್ನು ಅಲ್ಲಿನ ಗ್ರಂಥಾಲಯದ ಮುಖ್ಯಸ್ಥನಿಗೆ

ದತ್ತಿಯಾಗಿ ಕೊಟ್ಟ ಉಲ್ಲೇಖಗಳಿವೆ. ಗ್ರಂಥ ಸಂರಕ್ಷಣೆಗಾಗಿಯೇ ಮೂಡಬಿದರೆಯಲ್ಲಿ ಬಸದಿಯನ್ನು ಕಟ್ಟಲಾಗಿದೆ. ವಚನ ಭಂಡಾರದ ಕವಳಿಗೆ ತಂದು ನೋಡಿರೆ ಎನ್ನುವ ಉಲ್ಲೇಖಗಳು ಕರ್ನಾಟಕದಲ್ಲಿ ವೈದಿಕ, ಜೈನ, ವೀರಶೈವ ಗ್ರಂಥಭಂಡಾರಗಳ ಅಸ್ತಿತ್ವವನ್ನು ಸೂಚಿಸುತ್ತದೆ. ಇದು ಅಲ್ಲದೆ ಧ್ಯಾನ, ಅಧ್ಯಾಪನ, ಅಧ್ಯಯನ ಮುಂತಾದ ಪ್ರಯೋಜನಾರ್ಥವಾಗಿ ಪ್ರಾಚೀನ ಕರ್ನಾಟಕದಲ್ಲಿ ಗ್ರಂಥಗಳನ್ನು ಬರೆಸುವುದು, ಬರೆಯುವುದು, ಸಂಕ್ಷಿಸುವುದು, ಸಂಗ್ರಹಿಸುವುದು ಕೆಲಸಗಳು ನಿರಂತರವಾಗಿ ನಡೆದುಬಂದಿವೆ. ಇಲ್ಲೆಲ್ಲ ಸಂಗ್ರಹ ಮತ್ತು ಸಂರಕ್ಷಣೆಗೆ ಮೊದಲ ಆದ್ಯತೆಯಿತ್ತು.

ಸಂಕಲನಾನುಸಂಧಾನ

ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ ವ್ಯಾಸ ಮಹಾಭಾರತದಂತಹ ದೊಡ್ಡ ಕತೆಯನ್ನು ಪ್ರಮಾಣಬದ್ಧ ಕಾವ್ಯ ಕೃತಿಯನ್ನಾಗಿ ಮಾಡಿದ್ದರೇ, ನಾಗಚಂದ್ರ ಸಣ್ಣಕಥೆಯೊಂದನ್ನು ಹಿಗ್ಗಿಸಿ ಉತ್ಕೃಷ್ಟವಾದ ಮಲ್ಲಿನಾಥ ಪುರಾಣವನ್ನಾಗಿಸಿದ. ಪಠ್ಯವೊಂದನ್ನು ಹಿಗ್ಗಿಸುವ ಕುಗ್ಗಿಸುವ ಮತ್ತು ಹೊಸದಾಗಿ ರಚಿಸುವ ನೈಪುಣ್ಯತೆಯನ್ನು ಕನ್ನಡ ಕವಿಗಳು ಪಡೆದಿದ್ದರು. ನಂತರ ಕನ್ನಡ ಸಾಹಿತ್ಯದಲ್ಲಿ ಪಠ್ಯವೊಂದರ ಸಿಂಹಾವಲೋಕನ ಕ್ರಮದಿಂದ ನೋಡುವ ಸಂಗ್ರಹ ಸಂಕಲನ ಸಂಯೋಜನ ಕ್ರಮದ ಮೂಲಕ ವಿಸ್ತರಿಸುವ ದೊಡ್ಡ ಪರಂಪರೆಯೇ ಬೆಳೆಯಿತು. ಈ ಅರ್ಥದಲ್ಲಿ ಇವತ್ತಿಗೂ ಪಂಪ ಕನ್ನಡ ಗ್ರಂಥಸಂಪಾದನೆಯ ಆದ್ಯ ಪ್ರವರ್ತಕನಾಗಿ ಕಾಣುತ್ತಾನೆ. ಕನ್ನಡ ಸಾಹಿತ್ಯದಲ್ಲಿ ವಿಷಯಾನುಕ್ರಮದಲ್ಲಿ ಅಷ್ಟಾದಶ ವರ್ಣನೆಗಳನ್ನು ಅನುಸರಿಸಿದ್ದರೂ ಕೂಡ ಶೂನ್ಯ ಸಂಪಾದನಕಾರರು ಬರುವ ಮೊದಲು ಸಂಪಾದನೆಯ ಕೆಲಸವನ್ನು ಪ್ರಾರಂಭಿಸಿ ಕಾವ್ಯಗಳನ್ನು ಇಡಿಯಾಗಿ ಅಧ್ಯಯನ ಮಾಡುವ ಬದಲು ಅವು ಗಳಲ್ಲಿಯ ವಸ್ತುವಿಗನುಗುಣವಾಗಿ ಉತ್ತಮ ಎನ್ನಬಹುದಾದ ಪದ್ಯಗಳನ್ನು ಆಯ್ದು ಒಂದು ಕಡೆ ತಂದು ಕೊಡುವ ಪ್ರಯತ್ನವನ್ನು ಮೊದಲಬಾರಿಗೆ ಮಾಡಿದವನು ಮಲ್ಲಿಕಾರ್ಜುನ ಕವಿ(ಕ್ರಿ.ಶ.೧೨೪೬). ಇದು ಭಾವುಕರ ಕೈಪಿಡಿ ಎಂದು ಕರೆದು ಸಂಪಾದನೆಯ ಕೆಲಸಕ್ಕೆ ಮುನ್ನುಡಿ ಹಾಡಿದ್ದಾನೆ. ಅನಂತರ ಬಂದ ಕೇಶಿರಾಜ ಅನೇಕ ಕವಿಗಳ ಕೃತಿಗಳ ಪದ್ಯಗಳನ್ನು ಲಕ್ಷ ಪದ್ಯಗಳನ್ನಾಗಿ ನೀಡಿ ಶಬ್ದಮಣಿದರ್ಪಣವನ್ನು ರಚಿಸುತ್ತಾನೆ.

ಇದರ ನಂತರ ಕಾಣುವ ಸಂಗ್ರಹ, ಸಂಕಲನ ಮತ್ತು ಸಂಪಾದನ ಸಮಯಗಳು ಕನ್ನಡ ಗ್ರಂಥಸಂಪಾದನೆಯ ಬೆಳವಣಿಗೆಯ ದೃಷ್ಟಿಯಿಂದ ಮುಖ್ಯವಾದವು. ಇದು ವಚನಗಳ ಒಡಲಿನಿಂದ ಸಂಗ್ರಹ ಮತ್ತು ಸಂಪದನಾ ತತ್ವದಲ್ಲಿ ಅರಳಿದ ವಿಶಿಷ್ಟ ಸಾಹಿತ್ಯ ಸಿಂಗಿರಾಜ ಪುರಾಣದಲ್ಲಿಯ ಪ್ರಭುದೇವ, ಬಸವಣ್ಣನವರ ಸಂಪಾದನೆ, ಪ್ರಭುದೇವ ಸಿದ್ಧರಾಮಯ್ಯ ದೇವರ ಸಂಪಾದನೆ, ಪ್ರಭುದೇವ ಮಹಾದೇವಿಯಕ್ಕಳ ಸಂಪಾದನೆ, ಘಟಿವಾಳಯ್ಯ ಸಮಯ

ಸಂಪಾದನೆ, ನುಲಿಯ ಚಂದಯ್ಯ ಸಂಪಾದನೆ, ಆಯ್ದಕ್ಕಿ ಮಾರಯ್ಯ ಸಂಪಾದನೆ, ಕ್ರಿಯಾಸಂಪಾದನೆ, ಸರ್ವಪುರಾತನರ ವಚನಗಳ ಕಟ್ಟಿನಲ್ಲಿಯ ಪ್ರಭುದೇವ ಚನ್ನಬಸವಣ್ಣವರ ಸಂಪಾದನೆ ಮೋಳಿಗಯ್ಯಗಳ ಸಂಪಾದನೆಗಳಲ್ಲಿ ಸುಳಿಬಿಚ್ಚಿ ಪ್ರಸಾದಿ ಮಹಾದೇವಯ್ಯ ಕೆಂಚವೀರಣ್ಣೊಡೆಯ, ಗಮ್ಮಳಾಪುರದ ಸಿದ್ಧಲಿಂಗ, ಗೂಳೂರು ಸಿದ್ಧವೀರಣ್ಣರಲ್ಲಿ ಹುಲುಸಾಗಿ ಬೆಳೆದ ಶೂನ್ಯ ಸಂಪಾದನೆಗಳು ಲಿಂಗಲೀಲಾವಿಲಾಸ ಚಾರಿತ್ರ್ಯ, ವಿಶೇಷಾನುಭವ, ಷಟ್‌ಸ್ಥಲ, ಲಿಂಗಚಿದಾಮೃತ ಬೋಧ ಚಾರಿತ್ರ್ಯ, ಏಕೋತ್ತರ ಷಟ್‌ಸ್ಥಲ, ಗಣಭಾಷಿತ ರತ್ನಮಾಲೆ, ಪರಮ ಮೂಲಜ್ಞಾನ ಷಟ್‌ಸ್ಥಲ ಇತ್ಯಾದಿ ಕೃತಿಗಳು ಇನ್ನೊಂದು ರೀತಿ ಸಂಪಾದನೆ ಗ್ರಂಥಗಳಾಗಿವೆ. ಅದೇ ರೀತಿ ಬ್ರಹ್ಮದತ್ತ ಸಿದ್ಧಾಂತ, ಷಟ್‌ಸ್ಥಲ ಬ್ರಹ್ಮಾನಂದ ವೀರಕ್ತಚಾರಿತ್ರ್ಯ, ಸಂಪಾದನೆಯ ವಚನಗಳು, 'ವೀರಶೈವ ಸಾರೋದ್ಧರ ಸಂಪಾದನೆಯ ವಚನ, ಅನುಭವ ಜ್ಞಾನಸಾರಮೃತ ಸಂಪಾದನಾ ಸ್ತೋತ್ರದ ವಚನಗಳು, ಮುಕ್ತಿ ಕಂಟಾಭರಣ ಷಟ್‌ಸ್ಥಲ ಪ್ರಕಾರ ಸಂಗ್ರಹ, ಅದ್ವೈತಾನಂದರ ವಚನ, ಪ್ರಸಾದಿಸ್ಥಲದ ವಚನ, ಮಿಶ್ರ ಸ್ತೋತ್ರದ ವಚನ, ಶಿವಮಹಿಮಾಸೋತ್ರದ ವಚನ, ಅಷ್ಟಾವರಣ ಸ್ತೋತ್ರದ ವಚನ, ಆಚರಣೆ ಸಂಬಂಧದ ವಚನಗಳೆಂದ ಬೇರೊಂದು ರೀತಿಯ ಸಂಪಾದನೆಗಳು, ಸರ್ವಪುರಾತನರ ವಚನ, ಸರ್ವ ಪುರಾತನರ ಬೆಡಗಿನ ವಚನ, ಸರ್ವಪುರಾತನರ ಕಾಲಜ್ಞಾನ ವಚನ, ಸೃಷ್ಟಿಯ ವಚನ, ವಚನಸಾರಗಳೆಂಬ ವಚನ ಸಂಗ್ರಹಗಳು ಸಮೃದ್ಧವಾಗಿ ಬೆಳೆದವು.[೧೭]

ವಚನ ಸಾಹಿತ್ಯದ ನಂತರ ಅವುಗಳ ಸಂಗ್ರಹ ಸಂಗೋಪನ, ಸಂಪಾದನೆ, ಟೀಕು, ವ್ಯಾಖ್ಯಾನದ ಕೆಲಸಗಳು ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆದಿದ್ದವು. ಆಯ್ದುಕೊಂಡ ವಚನಗಳ ಪಾಠ ಶುದ್ಧಿಯನ್ನು ಪರೀಕ್ಷಿಸುವುದು ಅವುಗಳನ್ನು ಒಂದು ತಾತ್ವಿಕ ಸೂತ್ರಕ್ಕೆ ಅಳವಡಿಸುವ ಕೆಲಸಗಳು ನಿರಂತರವಾಗಿ ನಡೆದಿವೆ. ಶಿವಗಣಪ್ರಸಾದಿ ಮಹದೇವಯ್ಯನಿಂದ ಹಿಡಿದು ಚೆನ್ನಂಜೆದೇವ, ಸಂಪಾದನೆಯ ಪರ್ವತೇಶನವರೆಗೂ ವಂಶಪಾರಂಪರ್ಯವಾಗಿ ಸಂಪಾದನ ಸಮಯ ಬೆಳೆದು ಬಂದಿತು. ಶೂನ್ಯಸಂಪಾದನೆಯ ಮಠ ಎನ್ನುವ ಮಠಿಯ ವ್ಯವಸ್ಥೆ ಕೂಡ ತಲೆ ಎತ್ತಿತ್ತು. ಇಷ್ಟೊಂದು ವಿಸ್ತಾರವಾಗಿ ಸಾಮಗ್ರಿಯನ್ನು ಕ್ರೋಢಿಕರಿಸಿದ್ದರ ಹಿಂದೆ ಸಂಪಾದನಾಶಾಸ್ತ್ರಕ್ಕೆ ಬೇಕಾದ ವಿಧಾನಗಳು ಕನ್ನಡಿಗರಲ್ಲಿ ಇದ್ದಿರಲೇಬೇಕು.

ಮಧ್ಯಕಾಲಿನ ಕರ್ನಾಟಕದಲ್ಲಿ ಕಾಣುವ ಸಂಗ್ರಹ ಮತ್ತು ಸಂಪಾದನಾ ಅನುಸಂಧಾನಗಳು ಆಧುನಿಕ ಕಾಲದ ಮಿಶನರಿ ವಿದ್ವಾಂಸರ ಏಕಘನಾಕೃತಿ ಪಠ್ಯದ ಉತ್ಪಾದನ ವಿಧಾನಕ್ಕಿಂತ ಭಿನ್ನವಾಗಿ ಸಂವಾದದ ಶೈಲಿಯಲ್ಲಿ ರೂಪುಗೊಂಡಿರುವುದು ವಿಶೇಷ. ಸಕಲನ ಪುರಾತನರ ವಚನಗಳ ಸಂಗ್ರಹದಿಂದ ಪ್ರಾರಂಭವಾಗಿ ಏಕೋತ್ತರ ಷಟ್‌ಸ್ಥಲಗಳಂತಹ ಸಂಕಲನಗಳಲ್ಲಿ ವೈವಿಧ್ಯಪೂರ್ಣವಾಗಿ ಬೆಳೆದು ಶೂನ್ಯ ಸಂಪಾದನೆಗಳವರೆಗೂ ವಚನಗಳನ್ನು ವಿವಿಧ

ರೀತಿಯಲ್ಲಿ ಅನುಸಂಧಾನ ಮಾಡಿದ ಈ ಕ್ರಮ ಕೃತಿ ಮತ್ತು ಸಂಸ್ಕೃತಿ ನಡುವಿನ ಅರ್ಥಪೂರ್ಣ ಸಂಬಂಧಗಳ ಸರಣಿಯಾಗಿದೆ. ಹಿಂದಿನಿಂದ ಬಂದದ್ದನ್ನು ಬಾಯಿಪಾಠ ಮಾಡಿ ಒಪ್ಪಿಸುವುದು ಕವಿ ಲಿಪಿಕಾರ, ಗಮಕಿ, ವಾಗ್ಮಿಗಳ ಕೆಲಸವಲ್ಲ. ಕಾಲದಿಂದ ಕಲಿತ ಹೊಸ ಪಾಠಗಳನ್ನು ರೂಢಿಸುವುದು ಕವಿ ಮತ್ತು ಲಿಪಿಕಾರ ಗುಣ. ಇಲ್ಲದೇ ಹೋದರೆ ಅದು ಭೂತದ ಆರಾಧನೆಯಾಗುತ್ತದೆ.

ಹೀಗೆ ಜೀವಂತ ಕಥನಗಳಾಗಿ ವಿಸ್ತಾರಗೊಂಡ ಮಧ್ಯಕಾಲೀನ ಪಠ್ಯಗಳು ದೊಡ್ಡ ಮಟ್ಟದಲ್ಲಿ ಕ್ರೋಢೀಕರಣಗೊಂಡಿದ್ದರು ಸಂಪಾದನಾಶಾಸ್ತ್ರಕ್ಕೆ ಬೇಕಾದ ಕಾರ್ಯ ವಿಧಾನಗಳು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಬಹುಶಃ ದೊರೆತಿದ್ದರೆ ಪಾಶ್ಚಾತ್ಯ ವಿದ್ವಾಂಸರಿಗಿಂತ ಮೊದಲೇ ಭಾರತೀಯ ಗ್ರಂಥಸಂಪಾದನೆಯನ್ನು ರಚಿಸಿದ ಕೀರ್ತಿ ಕನ್ನಡಿಗರಿಗೆ ಸಲ್ಲುತ್ತಿತ್ತು. 'ವಚನ ಸಾಹಿತ್ಯಕ್ಕೆ ಸಂಬಂಧಪಟ್ಟತೆ ಸಂಪಾದನೆಯ ಆಶಯವು ವೀರಶೈವ ತತ್ವವೇ ಆಗಿದೆ. ಹೀಗಾಗಿ ಇಲ್ಲಿ ಸಂಪಾದನೆಯ ಅಂತಿಮ ವರೆಗಲ್ಲು ವೀರಶೈವ ಸಿದ್ಧಾಂತವೇ ಆಗಿದ್ದು, ಅದನ್ನು ತಿಳಿದವರು ಮಾತ್ರ ಈ ಕಾಯಕಕ್ಕೆ ಕೈ ಹಾಕಬೇಕು'[೧೮] ಎನ್ನುವ ಎಂ.ಎಂ. ಕಲಬುರ್ಗಿ ಅವರ ಮಾತುಗಳು ಕನ್ನಡದ ಪ್ರಯೋಗಶಿಲತೆಯನ್ನು ವ್ಯಕ್ತಿ ಹಾಗೂ ಮತಕೇಂದ್ರಿತ ಓರಿಯಂಟಲ್ ಮತ್ತು ಎಂಪಿರಕಲ್ ಅಧ್ಯಯನ ವಿಧಾನಗಳಲ್ಲಿಯೇ ಘನೀಕರಿಸುವುದು ವಿಚಿತ್ರವಾಗಿ ಕಾಣುತ್ತದೆ.

ಕವಿಪ್ರತಿ, ಲಿಪಿಕಾರಪ್ರತಿ, ನಕಲು, ಮರುನಕಲು, ಗಮಕ, ಪುರಾಣ, ವ್ಯಾಖ್ಯಾನ ಹೀಗೆ ವಿವಿಧ ರೂಪದಲ್ಲಿ ಬೆಳೆದು ಬಂದು ಕನ್ನಡದ ಕೃತಿಗಳು ಯಂತ್ರಪ್ರತಿಯ ಉತ್ಪಾದನಾ ಕಾರ್ಯದಿಂದಾಗಿ ಆವೃತ್ತಿ, ಮರು ಆವೃತ್ತಿ, ಬಿಡಿ ಆವೃತ್ತಿ ಎಂದು ಪ್ರಿಂಟ್‌ಕ್ಯಾಪಿಟಲಿಸಂನ ಭಾಗವಾಗಿ ಮುದ್ರಣಗೊಳ್ಳತೊಡಗಿದವು. ಕೈಬರವಣಿಗೆಯು ಮುದ್ರಣಯಂತ್ರಕ್ಕೆ ಪರಿವರ್ತನೆಯಾದದ್ದು ಪಠ್ಯಗಳ ಸಾರ್ವತ್ರಿಕ ಓದಿಗೆ ಬಹುದೊಡ್ಡ ಅವಕಾಶವನ್ನು ತೆರೆದಿಟ್ಟರೂ ಪಠ್ಯಗಳನ್ನು ಜಾತಿ, ಧರ್ಮ, ಶುದ್ಧ, ಅಶುದ್ಧ ಎನ್ನುವ ಪಾಂಡಿತ್ಯದ ಹಂಗಿನಲ್ಲಿ ಸಂಪಾದಿಸಿದ ಈ ಕ್ಲೋಸ್ ರೀಡಿಂಗ್ ವಿಧಾನವು ಹಲವು ಓದಿನ ದಾರಿಗಳನ್ನು ಕ್ಲೋಸ್ ಮಾಡಿತು.

ಕನ್ನಡದಲ್ಲಿ ಯಂತ್ರಪ್ರತಿ ಉತ್ಪಾದನೆಯ ಕೆಲಸವನ್ನು ಮೊದಲು ಮಾಡಿದವರು ಜರ್ಮನಿಯ ಮೂರು ಜನ ಮಿಷನರಿಗಳು. ಕ್ರಿ.ಶ. ೧೮೩೪ರಲ್ಲಿ ಮಂಗಳೂರಿನಲ್ಲಿ ಆರಂಭಿಸಿದ ಬಾಸೆಲ್ ಮಿಶನ್ ಸಂಸ್ಥೆಯ ಮುದ್ರಣಾಲಯದ ಮೂಲಕ ಹರ್ಮನ್ ಮೊಗ್ಲಿಂಗ್ ಅವರಿಂದ ಲಕ್ಷ್ಮೀಶನ ಜೈಮಿನಿ ಭಾರತ (೧೮೪೮), ಭೀಮ ಕವಿಯ ಬಸವಪುರಾಣ (೧೮೫೦), ದಶಪರ್ವ ಭಾರತ (೧೮೮೦), ವಿರೂಪಾಕ್ಷಪಂಡಿತನ ಚನ್ನಬಸವಪುರಾಣ (೧೮೫೧), ರಾಜೇಂದ್ರನಾಮೆ (೧೮೫೭), ಕನ್ನಡ ಗಾದೆಗಳು (೧೮೫೯), ದಾಸರ ಪದಗಳು (೧೯೯೬),

೧೦೧೦ ಕೀರ್ತನೆಗಳನ್ನೊಳಗೊಂಡ ಪುರಂದರದಾಸರ ಪದಗಳು(೧೮೬೮), ರಾವಣದಿಗ್ವಿಜಯ ಯಕ್ಷಗಾನ ಕೃತಿಗಳು ಪ್ರಕಟವಾಗುತ್ತವೆ. ಗಮಕ ಕೀರ್ತನ ಯಕ್ಷಗಾನ ರೂಪದ ಇವೆಲ್ಲವೂ ಲಿಖಿತ ಹಾಗೂ ಮೌಖಿಕ ರೂಪದಿಂದ ಯಂತ್ರಪ್ರತಿಗಳಾಗಿ ಪರಿವರ್ತನೆಯಾಗುತ್ತವೆ. ವೆಸ್ಲಿಯನ್ ಮಿಶನ್‌ಗೆ ಸೇರಿದ ಜಾನ್ ಗ್ಯಾರೆಟ್ ಅವರು ಮೈಸೂರು ಪ್ರಾಂತ್ಯದಲ್ಲಿದ್ದುಕೊಂಡು ಗ್ರಂಥ ಪ್ರಕಟಣಾಕಾರ್ಯ ಕೈಗೊಳ್ಳುತ್ತಾರೆ. ಎರಡು ಹಸ್ತಪ್ರತಿಗಳ ಸಹಾಯದಿಂದ ೧೮೬೮ರಲ್ಲಿ ಶಬ್ದಮಣಿದರ್ಪಣ ಕೃತಿಯನ್ನು ಪರಿಷ್ಕರಿಸಿ ಪ್ರಕಟಿಸುತ್ತಾರೆ. ಪ್ರತಿಸೂತ್ರಕ್ಕೂ ಇಂಗ್ಲಿಷ್‌ನಲ್ಲಿ ಸಾರಾಂಶ ನೀಡಿದ್ದಾರೆ. ಇದು ಕನ್ನಡ ಮೊದಲ ಸಂಪಾದಿತ ಕೃತಿಯೆಂದು ದಾಖಲಾಗಿದೆ. ಪ್ರಾಕಾವ್ಯಮಾಲಿಕೆ(೧೮೬೮) ಎನ್ನುವ ಕಾವ್ಯ ಸಂಗ್ರಹ ಕೃತಿಯನ್ನು ಬೆಂಗಳೂರಿನ ಸರಕಾರಿ ಮುದ್ರಣಾಲಯದಿಂದ ಗ್ಯಾರೆಟ್ ಪ್ರಕಟಿಸುತ್ತಾರೆ. ಜೈಮಿನಿ ಭಾರತ, ಕುಮಾರವ್ಯಾಸ ಭಾರತ, ಸರ್ವಜ್ಞನ ವಚನಗಳು ಧರ್ಮಪರೀಕ್ಷೆ, ಸೋಮೇಶ್ವರ ಶತಕಗಳಿಂದ ಆಯ್ದು ಪದ್ಯ ಹಾಗೂ ಕಥಾಭಾಗಗಳು ಕ್ರೈಸ್ತಧರ್ಮದಿಂದ ಆರಿಸಿದ ಕೆಲವು ಭಾಗಗಳು ಸೇರಿವೆ. ಇದರಲ್ಲಿರುವ ಮಹತ್ವದ ವಿಚಾರವೆಂದರೆ 'ಕರ್ನಾಟಕ ಗ್ರಂಥಸಂಪಾದನೆಯಲ್ಲಿ ಕೆಲವು ಬ್ರಾಹ್ಮಣ ಮತಕ್ಕೆ, ಕೆಲವು ಲಿಂಗಾಯತ ಮತಕ್ಕೆ, ಕೆಲವು ಜೈನಮತಕ್ಕೆ ಸಂಬಂಧವಾಗಿ ಮೂರು ಪ್ರಕಾರವಾಗಿದೆ' ಎಂದು ಗ್ಯಾರೆಟ್ ಹೇಳುವ ಮಾತು ಮತಧರ್ಮಗಳ ಹಿನ್ನೆಲೆಯಲ್ಲಿ ಹಸ್ತಪ್ರತಿ ಸಂಗ್ರಹ ಹಾಗೂ ಸಂಪಾದನೆ ಕೆಲಸ ನಡೆಯುತ್ತಿದ್ದುದನ್ನು ಸ್ಪಷ್ಟಪಡಿಸುತ್ತದೆ. ಈ ರೀತಿಯ ಎಂಪಿರಿಕಲ್ ಅಧ್ಯಯನವು ಕನ್ನಡದ ಕವಿಚರಿತೆ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಹಸ್ತಪ್ರತಿ ಹಾಗೂ ಗ್ರಂಥಸಂಪಾದನೆ ಚರಿತ್ರೆಗಳನ್ನು ಪ್ರಭಾವಿಸಿರುವುದು ಗಮನಾರ್ಹ.

ಕನ್ನಡ ಗ್ರಂಥಗಳ ಶಾಸ್ತ್ರೀಯ ಪರಿಷ್ಕರಣದ ಪ್ರಥಮವ್ಯಕ್ತಿ ಎಂದು ಕೀರ್ತಿಗೆ ಭಾಜನರಾದವರು ಜೆ.ಎಫ್. ಕಿಟಲ್, ಜಾನ್ ಗ್ಯಾರೆಟ್ ಅನಂತರ ಒಂಬತ್ತು ಹಸ್ತಪ್ರತಿಗಳ ಸಹಾಯದಿಂದ ಶಬ್ದಮಣಿದರ್ಪಣವನ್ನು (೧೮೭೨) ಪರಿಷ್ಕರಿಸಿ ಪ್ರಕಟಿಸುತ್ತಾರೆ. ಹನ್ನೊಂದು ಹಸ್ತಪ್ರತಿಗಳ ಸಹಾಯದಿಂದ ನಾಗವರ್ಮನ ಛಂದೋಂಬುಧಿಯನ್ನು ಕನ್ನಡ ಛಂದಸ್ಸು ಎಂಬ ಹೆಸರಿನಿಂದ ೧೮೭೫ರಲ್ಲಿ ಪ್ರಕಟಿಸುತ್ತಾರೆ. ಈ ಎರಡೂ ಕೃತಿಗಳು ಕಿಟಲ್ ಪಾಂಡಿತ್ಯದ ಅದ್ವಿತೀಯ ಕೃತಿಗಳೆಂದು ಕರೆಸಿಕೊಂಡಿವೆ. ಛಂದೋಂಬುದ್ಧಿಯ ಪ್ರಸ್ತಾವನೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ರೂಪುರೇಶೆಗಳ ಕುರಿತು ಮೊದಲ ಬಾರಿಗೆ ಕಿಟೆಲ್ ಚರ್ಚಿಸುತ್ತಾರೆ. ಮುಂದೆ ಬಿ.ಎಲ್. ರೈಸ್ ಮತ್ತು ಆರ್. ನರಸಿಂಹಾಚಾರ್ ಅವರಿಗೆ ಪೂರ್ಣಪ್ರಮಾಣದ ಕರ್ನಾಟಕ ಕವಿಚರಿತೆ ರಚಿಸಲು ಈ ಸಂಗತಿಗಳು ಪ್ರೇರಣೆ ಒದಗಿಸುತ್ತವೆ.

ಕಿಟಲ್ ವಿಶೇಷತೆ ಎಂದರೆ ದ್ರಾವಿಡ ಭಾಷೆಗಳ ಕುರಿತು ಚರ್ಚಿಸುತ್ತ ಸಂಸ್ಕೃತ ದ್ರಾವಿಡ ಭಾಷೆಗಳಿಂದ ಕನ್ನಡದಿಂದ ಎರವಲು ಪಡೆದ ರೀತಿಗಳನ್ನು ಲಕ್ಷ್ಯಕ್ಕೆ ತರುತ್ತಾರೆ. ಮೊದಲಬಾರಿಗೆ

ಕನ್ನಡ ಪ್ರಜ್ಞೆಯನ್ನು ದೇಸಿ ಹಾಗೂ ಅನ್ಯದೇಸಿ ಮಾದರಿಗಳನ್ನು ಜೊತೆಗಿಟ್ಟು ಚರ್ಚಿಸುತ್ತ ತೌಲನಿಕ ಅಧ್ಯಯನ ಮಾದರಿಗಳನ್ನು ಕನ್ನಡಕ್ಕೆ ಪರಿಚಯಿಸುತ್ತಾರೆ. ಕನ್ನಡ ಪಠ್ಯಗಳು ತನ್ನ ಪರಿಸರದ ಎಲ್ಲ ಸಾಧ್ಯತೆಗಳೊಂದಿಗೆ ಆಕಾರ ಪಡೆದಿದ್ದು, ಕನ್ನಡ ಪರಂಪರೆ ಮುಖ್ಯವಾಗಿದ್ದ ಮೌಖಿಕ ಗುಣವನ್ನು ಮರಳಿ ಕಟ್ಟಿಕೊಡುತ್ತಾರೆ. ಕನ್ನಡ ದೇಸಿ ಕಾವ್ಯಗಳನ್ನು ಅರ್ಥಮಾಡಿಕೊಳ್ಳುವ ಅತೀವ ಹಂಬಲ ಹೊಂದಿದ್ದು, ಅವರು ಈ ಬಡವನಿಗೆ ಒಂದು ಧ್ವನಿ ಹಬ್ಬವನ್ನು ದಯಪಾಲಿಸಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಾರೆ. ಏಸುವಿನ ಕಥೆಯನ್ನು ಗೇಯ ಪ್ರಧಾನ ಭಾಮಿನಿಯಲ್ಲಿ ಹೇಳಿದ್ದು, ಅವರ ಕನ್ನಡದ ಮೌಖಿಕ ಪ್ರಜ್ಞೆಯ ಕಾಳಜಿಗೆ ಸಾಕ್ಷಿಯಾಗಿದೆ.

ಬಿ.ಎಲ್. ರೈಸ್ ಅವರು ಪ್ರಾಚೀನ ಕನ್ನಡ ಕಾವ್ಯಗಳ ಶೋಧ ಮತ್ತು ಪ್ರಕಟಣೆಗೆ ಇಂಬು ಒದಗಿಸಿ ಕವಿರಾಜಮಾರ್ಗ ಮತ್ತು ಪಂಪರನ್ನು ಮೊದಲಬಾರಿಗೆ ತೆರೆದು ತೋರಿದರು. ತಮ್ಮ ಬಿಬ್ಲಿಯಾಥಿಕ್ ಕರ್ನಾಟಕ ಮಾಲೆಯ ಮೂಲಕ ಅಮರಕೋಶ(೧೮೮೪), ಭಟ್ಟಾಕಳಂಕನ ಶಬ್ದಾನುಶಾಸನ(೧೮೯೦), ಪಂಪನ ಪಂಪಭಾರತ(೧೮೯೮), ಮುಂತಾದ ಕನ್ನಡದ ಗ್ರಂಥಗಳನ್ನು ಪರಿಷ್ಕರಿಸಿ ಪ್ರಕಟಿಸಿದರು. ಇದೇ ಮಾಲೆಯಲ್ಲಿ ಶ್ರೀ ಪಾಠಕ ಅವರು ಕವಿರಾಜಮಾರ್ಗವನ್ನು ಸಂಪಾದಿಸಿದರು. ಎಪಿಗ್ರಫಿಯ ಕರ್ನಾಟಿಕಾ ಮಾಲೆಯಲ್ಲಿ ೧೨ ಸಂಪುಟಗಳಲ್ಲಿ ಒಂಬತ್ತು ಸಾವಿರ ಕನ್ನಡ ಶಾಸನಗಳನ್ನು ಪ್ರಕಟಿಸಿದ್ದು ರೈಸ್ ಅವರ ಮೇರು ಸದೃಶ ಕಾರ್ಯವಾಗಿದೆ. ರೈಸ್ ಅವರ ಗರಡಿಯಲ್ಲಿ ಪಳಗಿದ್ದ ಕನ್ನಡದ ವಿದ್ವಾಂಸರಾದ ಮಲೆನಾಡು ಸುಬ್ರಹ್ಮಣ್ಯಶಾಸ್ತ್ರಿ, ಸೋಸಲೆ ಅಯ್ಯಾಶಾಸ್ತ್ರಿ, ಎನ್.ಆರ್. ಕರಿಬಸವಶಾಸ್ತ್ರಿ, ಪಿ.ಆರ್. ಕರಿಬಸವಶಾಸ್ತ್ರ, ನರಸಿಂಹಯ್ಯ, ಹೊಳೆಕಲ್ಲಿ, ಕೆ.ವಿ. ಪಾಠಕ್, ಬಿ. ಮಲ್ಲಪ್ಪ ಅವರಲ್ಲದೆ ಆರ್ ನರಸಿಂಹಾಚಾರ್, ಬೆಳ್ಳಾವೆ ವೆಂಕಟನಾರಾಯಣಪ್ಪ ಅವರಿಂದಾಗಿ ಹಲವು ಪ್ರಾಚೀನ ಕಾವ್ಯಗಳು ಪ್ರಕಟಗೊಂಡವು.

ಕನ್ನಡ ಗ್ರಂಥ ಸಂಪಾದನೆಗೆ ಮತ್ತೊಂದು ತಿರುವು ನೀಡಿದವರು ಎಂ.ವಿ. ರಾಮಾನುಜ ಅಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ಯರು, ಕರ್ನಾಟಕ ಕಾವ್ಯಕಲಾನಿಧಿಯ ಮೂಲಕ ಹಲವು ಗ್ರಂಥಗಳನ್ನು ಪ್ರಕಟಿಸಿದರು. ೧. ಹರಿಹರನ ಪಂಪಾಶತಕ, ೨. ಗುಬ್ಬಿ ಮಲ್ಲಣಾರ್ಯನ ಭಾವಚಿಂತಾರತ್ನ, ೩. ವಚನ ಕಾದಂಬರಿ, ೪. ಶ್ರೀನಿವಾಸ ಕವಿಯ ಹರ್ಷವರ್ಧ ಶತಕಂ, ೫. ಅಗ್ಗಳನ ಚಂದ್ರಪ್ರಭ ಪುರಾಣ, ೬. ಮುದ್ದಣ್ಣ ರಾಮಾಶ್ವಮೇಧ, ೭. ಚಿಕ್ಕದೇವರಾಯವಂಶಾವಳಿ, ೮. ತಿರುಮಲಾರ್ಯನ ಚಿಕ್ಕದೇವರಾಜವಿಜಯ ಸೂರ್ಯಕವಿಗಳ ಕಪಿಕಂಠಹಾರ, ಚೌಂಡರಸನ ಅಭಿನವ ದಶಕುಮಾರ ಚರಿತೆ, ದುರ್ಗಸಿಂಹನ ಪಂಚತಂತ್ರ, ಪಂಪನ ಆದಿಪುರಾಣ ಮುಂತಾದ ಕೃತಿಗಳನ್ನು ದೊಡ್ಡ ಪ್ರಮಾಣದಲ್ಲಿ ಪರಿಷ್ಕರಿಸಿ ಪ್ರಕಟಿಸಿದರು. ಈ ಮೂಲಕ ೧೯ ಮತ್ತು ೨೦ನೆಯ ಶತಮಾನಗಳನ್ನು ಜೋಡಿಸಲು ಮುಖ್ಯ

ಕೊಂಡಿಯಾದರು. ಈ ಅವಧಿಯನ್ನು ಕನ್ನಡ ಗ್ರಂಥ ಸಂಪಾದನೆಯ ಎರಡನೆ ಘಟ್ಟ ಎಂದು ಗುರುತಿಸಲಾಗುತ್ತದೆ.

ಮೂರನೇ ಘಟ್ಟದಲ್ಲಿ ಹೊಸಗನ್ನಡದ ಅಶ್ವಿನಿ ದೇವತೆಗಳೆಂದು ಟಿ.ಎಸ್. ವೆಂಕಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ ಮತ್ತು ಎಸ್.ಎಸ್. ಬಸವನಾಳ ಅವರನ್ನು ಗುರುತಿಸಲಾಗುತ್ತದೆ. ಟಿ.ಎಸ್. ವೆಂಕಣ್ಣಯ್ಯನವರು ಬಸವರಾಜು ದೇವರ ರಗಳೆ(೧೯೩೦) ಮತ್ತು ಡಿ.ಎಲ್. ನರಸಿಂಹಾಚಾರ್ಯ ರೊಂದಿಗೆ ಸಿದ್ಧರಾಮ ಚಾರಿತ್ಯ, ಎ.ಆರ್. ಕೃಷ್ಣಶಾಸ್ತ್ರಿಗಳ ಕವಿಜಿಹ್ವಾಬಂಧನ (೧೯೩೨), ವೆಂಕಣ್ಣಯ್ಯ ಮತ್ತು ಕೃಷ್ಣಶಾಸ್ತ್ರಿಗಳು ಸೇರಿ ಹರಿಶ್ಚಂದ್ರ ಕಾವ್ಯವನ್ನು (೧೯೩೧) ಸಂಪಾದಿಸಿದರು. ತಿ.ನಂ.ಶ್ರೀ ಅವರ ನಂಬಿಯಣ್ಣ ರಗಳೆ (೧೯೪೧), ಗದಾಯುದ್ಧ ಸಂಗ್ರಹ (೧೯೪೬), ಡಿ.ಎಲ್. ನರಸಿಂಹಾಚಾರ್ ಸಿದ್ದರಾಮ ಚಾರಿತ್ರ ಸಂಗ್ರಹ(೧೯೩೧), ವಡ್ಡಾರಾಧನೆ (೧೯೪೯), ಪಂಪ ರಾಮಾಯಣ ಸಂಗ್ರಹ (೧೯೫೯), ಶಬ್ಧಮಣಿದರ್ಪಣ (೧೯೫೯) ಇವು ಕನ್ನಡ ಗ್ರಂಥಸಂಪಾದನೆ ಕ್ಷೇತ್ರದ ಮಾದರಿ ಕೃತಿಗಳಾಗಿವೆ. ಇವರಷ್ಟೇ ಅಲ್ಲದೆ, ಡಿ. ಚಂಪಾಬಾಯಿ ಆರ್. ಶ್ಯಾಮಾಶಾಸ್ತ್ರಿ, ಬಸವಲಿಂಗಯ್ಯ, ಬಿ. ಶಿವಮೂರ್ತಿಶಾಸ್ತ್ರಿ, ಎಂ. ದೇವಿರಪ್ಪ, ಎನ್. ಅನಂತರಂಗಾಚಾರ್ಯ, ಕೆ. ವೆಂಕಟರಾಮಪ್ಪ, ದೇಜಗೌ, ಎನ್.ಎಸ್. ಕೃಷ್ಣಜೋಯಿಸ್ ಇವರಲ್ಲದೇ ಹೊಸ ತಲೆಮಾರಿನ ಎಲ್. ಬಸವರಾಜ್, ಹಂಪಾ ನಾಗರಾಜಯ್ಯ, ಟಿ.ವಿ. ವೆಂಕಟಾಚಲಶಾಸ್ತ್ರಿ, ಎನ್. ಬಸವಾರಾಧ್ಯ, ಬಿ.ಎಸ್. ಸಣ್ಣಯ್ಯ, ವೈ.ಸಿ. ಭಾನುಮತಿ ಮುಂತಾದವರನ್ನು ಮೈಸೂರು ವಿಭಾಗದಲ್ಲಿ ಹೆಸರಿಸಬಹುದು. ಡಿ.ಎಲ್. ನರಸಿಂಹಾಚಾರ್ ಕನ್ನಡ ಗ್ರಂಥಸಂಪಾದನೆ ಎನ್ನುವ ಕೃತಿ ರಚಿಸುವ ಮೂಲಕ ಗ್ರಂಥ ಸಂಪಾದನೆಗೊಂದು ಶೈಕ್ಷಣಿಕ ಶಿಸ್ತನ್ನು ನೀಡಿದರು.

ವಿಶೇಷವಾಗಿ ಡಿ.ಎಲ್. ನರಸಿಂಹಾಚಾರ್ ಬಿ.ಎಸ್. ಸಣ್ಣಯ್ಯ, ಎಲ್. ಬಸವರಾಜ್, ವೈ.ಸಿ. ಭಾನುಮತಿಯಂತಹ ದೇಶಿ ವಿದ್ವಾಂಸರು ಪರಿಷ್ಕರಣೆಯಲ್ಲಿ ಪಠ್ಯದ ಆಂತರಿಕ ಸಾಕ್ಷಿಗಳಿರಬಹುದಾದ ಸಂಬಂಧದ ಮೂಲಕ ಪಾಠಾಂತರಗಳನ್ನು ಗುರುತಿಸುತ್ತಾರೆ. ಡಿ.ಎಲ್. ನರಸಿಂಹಾಚಾರ್ಯರಂಥವರು ಪಾಠಾಂತರಗಳನ್ನು ರಿಯಾಕ್ಷನ್ಸ್ ಎಂದು ಒಪ್ಪಿಕೊಳ್ಳುವಷ್ಟರ ಮಟ್ಟಿಗೆ ಪಾಠಗಳನ್ನು ದೋಷಗಳೆಂದು ಪರಿಗಣಿಸದೇ ಗುಣವಾಗಿ ಪರಿಗಣಿಸುತ್ತಾರೆ. ಅವರು ಕನ್ನಡ ಭಾಷೆ ಪರಿಸರ ಮತ್ತು ಅದರ ಸಹೋದರ ಭಾಷೆಗಳ ಮೂಲಕ ಪಾಠಾಂತರಗಳನ್ನು ಗುರುತಿಸಿಕೊಳ್ಳುವ ಮೂಲಕ ಸಾಂಸ್ಕೃತಿಕ ಸಂಪಾದನೆಗೆ ಒಲವು ತೋರುತ್ತಾರೆ.

ಹಸ್ತಪ್ರತಿ ಸಂಗ್ರಹ ಮತ್ತು ಸಂಪಾದನೆ ಕೆಲಸಕ್ಕೆ ಉತ್ತರ ಕರ್ನಾಟಕ ಭಾಗದಲ್ಲಿ ಕ್ರಿ.ಶ. ೧೮೪೯ರಷ್ಟು ಹಿಂದೆಯೇ ಶುರುವಾದರೂ ಮೈಸೂರು ಭಾಗದಷ್ಟು ಇಲ್ಲಿ ನಡೆಯಲಿಲ್ಲ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇಲ್ಲಿನ ವಿದ್ವಾಂಸರು ಆಸಕ್ತಿ ತೋರಿದಷ್ಟು ಗ್ರಂಥಸಂಪಾದನೆಗೆ

ತೋರಿಸಲಿಲ್ಲ ಎನಿಸುತ್ತದೆ. ಆದರೂ ಗಂಗಾಧರ ಮಡಿವಾಳೇಶ ತುರುಮುರಿಯವರು ಕೈವಲ್ಯ ಪದ್ಧತಿ ಟೀಕೆ, ರಾಜಶೇಖರ ವಿಳಾಸ(ಪ್ರಥಮಾಶ್ವಾಸದ ಟೀಕೆ) ರಾಜಶೇಖರ ವಿಳಾಸ(ಚತುರ್ ಆಶ್ವಾಸದ ಟೀಕೆ, ಶಬ್ದಮಂಜರಿ, ವೆಂಕಟರಂಗೋಕಟ್ಟಿ ಅವರ ಜೈಮಿನಿ ಭಾರತ (೧-೪, ಸಂಧಿ ಟೀಕೆ) ಸೋಮೇಶ್ವರ ಶತಕ (ಸಟೀಕು) ಶಾಂತವೀರ ಕಿತ್ತೂರ ಅವರ ರಾಜಶೇಖರ ವಿಳಾಸ(ಟೀಕೆ ೧೮೬೭)ಗಳನ್ನು ಹೆಸರಿಸಬಹುದು.

'ಫ.ಗು. ಹಳ್ಳಕಟ್ಟಿ ಅವರಿಂದ ೧೯೨೬ ಶ್ರೀ ಬಸವೇಶ್ವರರ ವಚನಗಳು ಎಂಬ ಕೃತಿಯ ಮೂಲಕ ಸಂಪಾದನಕಾರ್ಯ ಆರಂಭವಾಗುತ್ತದೆ. ಹಳಕಟ್ಟಿಯವರ ೨೦ಕ್ಕೂ ಹೆಚ್ಚು ವಚನ ಸಂಪುಟಗಳಲ್ಲದೆ ಏಕೋತ್ತರ ಷಟ್‌ಸ್ಥಲ, ಶೂನ್ಯ ಸಂಪಾದನೆಗಳಂತಹ ವಚನ ಸಂಕಲನ ಗ್ರಂಥಗಳನ್ನು, ಹರಿಹರನ ರಗಳೆಗಳ ಏಳು ಸಂಪುಟಗಳನಲ್ಲದೆ, ವೀರಶೈವ ರಗಳೆ. ತೋಂಟದಾರ್ಯ ರಗಳೆಯಂಥ ರಗಳೆ ಕೃತಿಗಳು,. ರಾಜೇಂದ್ರನಾಮೆ, ನಿರಂಜನ ವಂಶರತ್ನಾಕರ, ಕೆಳದಿ ಅರಸರ ವಂಶಾವಳಿಯಂತಹ ಚಾರಿತ್ರಿಕ ಕೃತಿಗಳನ್ನು, ಆದಿಶೆಟ್ಟಿ ಪುರಾಣ ಹರಳಯ್ಯನ ತ್ರಿಪದಿಗಳಂತಹ ಕಾವ್ಯಗಳು, ಮೈಲಾರ ಬಸಪ್ಪನವರ ಶಿವಾನುಭವ ದರ್ಪಣದಂತಹ ನೀತಿ ಸಂಪುಟಗಳನ್ನು ಸಂಪಾದಿಸಿ ಶಿವಾನುಭವ ಗ್ರಂಥಮಾಲೆ ಮೂಲಕ ಪ್ರಕಟಿಸುವ ದೊಡ್ಡ ಸಾಹಸ ಮಾಡುತ್ತಾರೆ.[೧೯]

"ಎಸ್.ಎಸ್. ಬಸವನಾಳರು ಲಿಂಗಾಯತ ಅಭಿವೃದ್ಧಿ ಸಂಸ್ಥೆಯ ಮೂಲಕ ಚೆನ್ನಬಸವಪುರಾಣ (೧೯೩೪), ಪ್ರಭುಲಿಂಗಲೀಲೆ (೧೯೩೮), ಶಬರಶಂಕರ ವಿಳಾಸ (೧೯೩೯), ಪಂಪಾಶತಕ ರಕ್ಷಾಶತಕ (೧೯೪೩), ಬಸವಣ್ಣನವರ ವಚನಗಳು, ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲಕ ಕಾವ್ಯಾವಲೋಕನಂ (೧೯೪೯), ಶಬ್ದಾನುಶಾಸನಂ (೧೯೪೧) ಕೃತಿಗಳನ್ನು ಸಂಪಾದಿಸಿದ್ದಾರೆ. ಬಸವನಾಳ ಗ್ರಂಥ ಸಂಪಾದನೆ ಉತ್ತ ಕರ್ನಾಟಕದಲ್ಲಿ ನಡೆದ ಶಾಸ್ತ್ರೀಯ ಸಂಪಾದನೆ ಎಂದು ಕೀರ್ತಿ ಪಡೆದಿದೆ."[೨೦]

ಗ್ರಂಥ ಸಂಪಾದನೆ ಮತ್ತು ಪ್ರಕಟಣೆಯಲ್ಲಿ ಧಾರವಾಡ ಮುರುಘಾಮಠದ ಬಾಲ ಲೀಲಾ ಮಹಾಂತ ಶಿವಯೋಗೇಶ್ವರ ಗ್ರಂಥಮಾಲೆ ಪ್ರಸಿದ್ಧವಾಗಿತ್ತು (೧೯೪೦). ಬಸವನಾಳ, ಎಸ್.ಎಸ್. ಭೂಸನೂರಮಠ, ಎಸ್.ಎಸ್. ಮಾಳವಾಡ, ಆರ್.ಸಿ. ಹಿರೇಮಠ, ಎಂ.ಎಸ್. ಸುಂಕಾಪುರ ಇವರ ಸಾರಥ್ಯದಲ್ಲಿ ಸುಬೋಧಸಾರ, ಮೈಲಾರ ಬಸವಲಿಂಗಶರಣ ಕೃತಿಗಳ ಶಿವಾನುಭವ ಸೂತ್ರ, ಕೈವಲ್ಯದರ್ಪಣ, ಆದಯ್ಯನ ವಚನ, ಅಖಂಡೇಶ್ವರ ವಚನ, ವಿಶೇಷಾರ್ಥಪ್ರಕಾಶಿಕೆ, ಗುರುರಾಜ ಚಾರಿತ್ರ್ಯ, ಷಟ್‌ಸ್ಥಲ ಜ್ಞಾನಸಾರಾಮೃತ, ಶತಕತ್ರಯ ಗುರುಬಸವನ ಸಪ್ತಕಾವ್ಯಗಳ ಗಣಭಾಷಿತ ರತ್ನಮಾಲೆ, ಪದ್ಮರಾಜಪುರಾಣ, ರಾಘವಾಂಕ ಚರಿತ್ರೆ, ಪ್ರೌಢರಾಯನ ಕಾವ್ಯ, ಅನುಭವ ಮುದ್ರೆ, ಬಸವಪುರಾಣ, ಚೋರಬಸವ ಚರಿತ್ರೆ

ಮೊದಲಾದ ಕೃತಿಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ. ನಂತರ ಕನ್ನಡ ಸಂಶೋಧನ ಸಂಸ್ಥೆ (೧೯೩೯) ಮೂಲಕ ಮದನತಿಲಕನ ಕವಿಜಿಹ್ವಾಬಂಧನ, ಸಮಯ ಪರೀಕ್ಷೆಯಂಥ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. 'ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಕನ್ನಡ ಅಧ್ಯಯನ ಪೀಠದ (೧೯೮೧) ಕನ್ನಡ ಕಾವ್ಯಮಾಲೆ ಯಲ್ಲಿ ರಾಜಶೇಖರ ವಿಳಾಸ ಸಂಗ್ರಹ, ಸೋಮನಾಥ ಚಾರಿತ್ರ್ಯ, ಪುರಾತನರ ಚಾರಿತ್ರ್ಯ ಬಸವರಾಜ ವಿಜಯಂ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ ೧-೨, ಪುರಾತನ ಆರು ರಗಳೆಗಳು ಪ್ರಕಟವಾದವು. ನಂತರ ೧೯೩೬ ರಿಂದ ಜೈನ ವೀರಶೈವ ೧೯೬೭ ರಿಂದ ಬ್ರಾಹ್ಮಣ ಸಾಹಿತ್ಯ ಶಾಖೆಗಳ ಸಂಪಾದನ ಕೆಲಸ ನಡೆಯಿತು. ೧೯೬೨ ರಿಂದ ವಚನವಾಙ್ಮಯ ಸಂಶೋಧನ, ಸಂಪಾದನ ಪ್ರಕಟನೆ ಯೋಜನೆಯ ಮೂಲಕ ಸಮಗ್ರ ವಚನ ಸಂಪುಟಗಳನ್ನು ಪರಿಷ್ಕರಿಸಿ ಪ್ರಕಟಿಸಲಾಯಿತು.[೨೧] ಆರ್.ಸಿ. ಹಿರೇಮಠ ಅವರು ಚೆನ್ನಬಸವಣ್ಣನವರ ವಚನ, ಬಸವಣ್ಣನವರ ವಚನಗಳ ಸಂಪಾದನೆಯಲ್ಲಿ ಅನುಸರಿಸಿದ ಹೊಸ ವಿಧಾನಗಳು ಎಲ್. ಬಸವರಾಜು ಅವರ ಶಿವದಾಸಗೀತಾಂಜಲಿ ಮಹಾದೇವಯ್ಯಗಳ ಶೂನ್ಯ ಸಂಪಾದನೆಯಲ್ಲಿ, ಪಂಪಭಾರತ ಮತ್ತು ಆದಿಪುರಾಣದ ಸರಳ ಗದ್ಯದ ಸಂಪಾದನೆಗೆ ಅನುಸರಿಸಿದ ಕ್ರಮಗಳು ವಿನೂತನ ಎನಿಸಿವೆ.

ಮುದ್ರಣ ತಂತ್ರಜ್ಞಾನ ಮಂಗಳೂರಿನಿಂದ ಆರಂಭವಾಗಿದ್ದರೂ ಗ್ರಂಥ ಸಂಪಾದನಾ ಶಾಸ್ತ್ರ ಈ ಭಾಗದ ದೇಸಿ ವಿದ್ವಾಂಸರಿಂದ ಆದಂತಹ ಮಹತ್ವದ ಕೊಡುಗೆ ಕಾಣದಿರುವುದು ಕುತೂಹಲದ ವಿಚಾರವಾಗಿದೆ. ಇದು ಶೋಧನೆಯ ವಿಷಯವೂ ಹೌದು. ಬೆರಳೆಣಿಕೆಯ ವಿದ್ವಾಂಸರು ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ತಾಳ್ತಜೆ ಕೇಶವಭಟ್ಟರು ಗೋವಿನ ಕಥೆ ಹಾಡು ಕೃತಿಯನ್ನು ಮೂರು ಪ್ರತಿಗಳ ಸಹಾಯದಿಂದ ೧೯೭೫ರಲ್ಲಿ ಸಂಪಾದಿಸುತ್ತಾರೆ. ೧೯೭೭ರಲ್ಲಿ ಇದು ಮರುಮುದ್ರಣಗೊಳ್ಳುತ್ತದೆ. ಜೊತೆಗೆ ದೇವಪ್ಪ ಕವಿ ವಿರಚಿತ ರಾಯ ವಿಜಯಕಾವ್ಯ (೧೯೬೯), ಹವ್ಯಕರ ಸೋಬಾನೆಗಳು (೧೯೮೬) ಕೃತಿಯನ್ನು ಸಂಪಾದಿಸಿ ಪ್ರಕಟಿಸುತ್ತಾರೆ. ಹಾಗೆ ಜೈನ ರಾಮಯಣ ಕಾವ್ಯ, ಭತ್ತಲೇಶ್ವರ ಕವಿಯ ಕೌಶಿಕ ರಾಮಾಯಣ, ಪಾವಂಜೆ ಗುರುರಾಯರಂಥವರು ಪುರಂದರದಾಸರ ಕೃತಿಗಳನ್ನು ಐದು ಭಾಗಗಳಲ್ಲಿ ಪ್ರಕಟಿಸುತ್ತಾರೆ. ನಂತರ ಹೊಸ ತಲೆಮಾರಿನ ಎಸ್.ಡಿ. ಶೆಟ್ಟಿ, ಎಸ್.ಆರ್. ವಿಘ್ನರಾಜು, ಸುರತ್ಕಲ್ ವೆಂಕಟಾಚಾರ್ಯ, ಹೆರಡಾಲ್ ಕೃಷ್ಣಯ್ಯ ಶಾಸ್ತ್ರಿ ಮುಂತಾದ ವಿದ್ವಾಂಸರು ಗ್ರಂಥ ಸಂಪಾದನೆಗೆ ಈ ಭಾಗದಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಕನ್ನಡ ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆ ಶಿಸ್ತಿಗೆ ಮದ್ರಾಸ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿ ಮತ್ತು ಮದ್ರಾಸ್ ವಿಶ್ವವಿದ್ಯಾಲಯ ಕನ್ನಡ ವಿಭಾಗವು ನೀಡಿದ ಕೊಡುಗೆ ಮಹತ್ವದ್ದು. ಮದ್ರಾಸಿನ ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯ ಕನ್ನಡ

ಹಸ್ತಪ್ರತಿಗಳ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸುತ್ತದೆ. ಮದ್ರಾಸ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯ ಮದ್ರಾಸ್ ಗೌರ್ನ್‌ಮೆಂಟ್ ಓರಿಯಂಟಲ್ ಸೀರಿಸ್ ಮೂಲಕ ಲೋಕೋಪಕಾರ (೧೯೫೦), ಮಂಗರಾಜ ನಿಘಂಟು(೧೯೫೧), ರಟ್ಟಮತ, ಅಶ್ವಶಾಸ್ತ್ರ, ಸಂಗೀತರತ್ನಾಕರ ಸೂಪಶಾಸ್ತ್ರ, ವೈದ್ಯಸಾರಸಂಗ್ರಹ ಭಾಗ ೧-೨, ಸದ್ಗುರುರಹಸ್ಯ ಬಿಜ್ಜಳರಾಯ ಚರಿತೆ, ಮನ್ಮಥ ವಿಜಯ(೧೯೫೪), ಜೀವಸಂಬೋಧನ (೧೯೫೫), ವೆಂಕಮಾತ್ಮನ ರಾಮಾಯಣಗಳು ಪರಿಷ್ಕರಣಗೊಂಡು ಪ್ರಕಟವಾದವು. ಎ. ವೆಂಕಟರಾವ್ ಎಂ. ಮರಿಯಪ್ಪ ಭಟ್ಟ, ಎಸ್. ಶೇಷಯಂಗಾರ್, ಎಂ. ಗೋವಿಂದರಾವ್, ಶ್ರೀನಿವಾಸ, ಪಿ. ಶ್ರೀನಿವಾಸರಾವ್ ಮೇಲಿನ ಕೃತಿಗಳು ಬೆಳಕು ಕಾಣುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಇದಕ್ಕೂ ಮೊದಲು ಪೀಪಲ್ಸ್ ಪ್ರಿಂಟಿಗ್ಸ್ ಹೌಸ್‌ನಿಂದ ಪೊನ್ನನ ಶಾಂತಿಪುರಾಣ (೧೯೩೦) ಪ್ರಕಟವಾಗಿತ್ತು.

ನಂತರ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ಗ್ರಂಥಮಾಲೆ ಮೂಲಕ ಕವಿರಾಜಮಾರ್ಗ (೧೯೩೦), ಶಬ್ದಮಣಿದರ್ಪಣ(೧೯೪೦), ಪುಷ್ಪದಂತ ಪುರಾಣ(೧೯೩೩), ಅಭಿದಾನ ರತ್ನಮಾಲಾ, ಖಗೇಂದ್ರಮಣಿ ದರ್ಪಣ, ಅಭಿನವಾಭಿದಾನ (೧೯೫೨), ಜಾತಕ ತಿಲಕಂ(೧೯೫೫), ಶ್ರೀ ವಿಷ್ಣುಪುರಾಣ(೧೯೫೭) ಮುಂತಾದ ಗ್ರಂಥಗಳು ಪ್ರಕಟಗೊಳ್ಳುತ್ತವೆ. ಎಂ. ಮರಿಯಪ್ಪ ಭಟ್ಟರು ಕನ್ನಡ ವಿಭಾಗದಲ್ಲಿದ್ದುಕೊಂಡು ತಾವು ಪ್ರಾಚೀನ ಕೃತಿಗಳನ್ನು ಪರಿಷ್ಕರಿಸುತ್ತಾ ಇತರರನ್ನು ತೊಡಗಿಸಿಕೊಂಡು ಈ ಕ್ಷೇತ್ರವನ್ನು ಬೆಳೆಸಿದರು. ಪ್ರಾಚೀನ ಗ್ರಂಥಗಳ ಪ್ರಕಟಣೆಯ ಜೊತೆಗೆ ಕಿಟ್ಟಲ್ ಕನ್ನಡ ಕೋಶವನ್ನು ಪರಿಷ್ಕರಿಸಿ ಪ್ರಕಟಿಸಿದ್ದು, ಎಂ. ಮರಿಯಪ್ಪ ಭಟ್ಟರ ಮತ್ತೊಂದು ಸಾಧನೆಯಾಗಿದೆ.

ಇತ್ತೀಚಿನ ದಿನಗಳಲ್ಲಿ ಕನ್ನಡ ಗ್ರಂಥಸಂಪಾದನೆಯಲ್ಲಿ ಕವಿ ಪಠ್ಯಕ್ಕಿಂತ ಲಿಪಿಕಾರನ ಪಠ್ಯಕ್ಕೆ ಹೆಚ್ಚು ಪ್ರತಿಗಳ ಸಂಗ್ರಹಕ್ಕಿಂತ ಒಂದು ಪೂರ್ಣಪ್ರತಿಯನ್ನು ಮುಖ್ಯವಾಗಿಟ್ಟುಕೊಂಡು ಪರಿಷ್ಕರಣ ಮಾಡುತ್ತಿರುವ ಪ್ರವೃತ್ತಿ ಬೆಳೆಯುತ್ತಿದೆ. ಗ್ರಂಥ ಸಂಪಾದನೆ ಒಂದು ಶೈಕ್ಷಣಿಕ ಶಿಸ್ತಾಗಿ ಪಾಂಡಿತ್ಯ ಮತ್ತು ಶಿಕ್ಷಣದ ಭಾಗವಾಗಿ ವಿಕಾಸವಾಗುತ್ತಿದೆ. ಡಿ.ಎಲ್. ನರಸಿಂಹಾಚಾರ್ಯರ ಮಾದರಿಯಿಂದ ಬಿಡಿಸಿಕೊಂಡು ಅಭಿಜಾತ ಮತ್ತು ಎಂಪೀರಿಕಲ್ ಮಾದರಿಗಳಿಗಿಂತ ಭಿನ್ನವಾಗುತ್ತಿದೆ. ಮಾರ್ಗ ಸಂಪಾದನೆ, ದೇಸಿ ಸಂಪಾದನೆ, ಜಾನಪದ ಎಂದು ಸೀಳಿಕೊಳ್ಳುವ ಮೂಲಕ ಮಾರ್ಗದ ಚಂಪು ಕೃತಿಗಳ ಸಂಪಾದನೆ ಮಾದರಿಗೂ ದೇಸಿಯ ಮಾದರಿಯ ಷಟ್ಪದಿ, ಸಾಂಗತ್ಯ, ವಚನ, ಕೀರ್ತನಗಳ ಸಂಪಾದನೆಗೂ ಬೇರೆ ಬೇರೆ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ. ಹೆಚ್ಚು ಪ್ರತಿಗಳನ್ನು ಬಳಸದೆ ಮೂಲವೂ ಶುದ್ಧವೂ ಪೂರ್ಣವೂ ಆದ ಒಂದು ಅಥವಾ ಕೆಲವು ಹಸ್ತಪ್ರತಿಗಳನ್ನಿಟ್ಟುಕೊಂಡು ಸಂಪಾದಿಸುವ ನೂತನ ವಿಧಾನ ಬಳಕೆಯಲ್ಲಿದೆ.

ಮಾರ್ಗಸಾಹಿತ್ಯ ಪಠ್ಯಗಳು ಸ್ಥಿರಪಠ್ಯಗಳು ದೇಸಿಸಾಹಿತ್ಯ ಪಠ್ಯಗಳು, ಚರಪಠ್ಯಗಳು, ವಚನ ಕೀರ್ತನ ತತ್ವಪದದಂತಹ ಪಠ್ಯಗಳನ್ನು ಪ್ರಯೋಗಶೀಲ ಪಠ್ಯಗಳೆಂದು ಗುರುತಿಸಲಾಗುತ್ತದೆ. ಆ ಮೂಲ ಪಠ್ಯಗಳನ್ನು ಗತದ ಪಳೆಯುಳಿಕೆಗಾಗಿ ಘನಾಕೃತಿಯಲ್ಲಿ ನೋಡದೆ ಪಠ್ಯ, ಅಂತರ್‌ಪಠ್ಯ, ಅಂತಸ್ತ ಪಠ್ಯ ಎಂದು ಬಹುಮುಖಿಯಾಗಿ ನೋಡಲಾಗುತ್ತಿದೆ. ರಸ, ಅಲಂಕಾರ, ಛಂದಸ್ಸು ಎಂದು ಕಾವ್ಯದ ಬಾಹ್ಯ ಶರೀರ ಮೂಲಕ ಗ್ರಹಿಸದೆ ಪಠ್ಯವೊಂದು ಧ್ವನಿಸುವ ಅಂತಃಸಂಭ್ಯಾವತೆಯ ಮೂಲಕ ಪಠ್ಯ ಪರಿಷ್ಕರಣೆ ಮಾಡಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ಜೈನ, ವೀರಶೈವ, ವೈದಿಕ ಎಂಬ ಜಾತಿ ಮತದ ಮೂಲಕ ಸಂಪಾದಿತಗೊಂಡ ನೆಲೆಗಳನ್ನು ಅದು ನಿರ್ಮಿಸಿದ ನಿರ್ದಿಷ್ಟ ಓದಿನ ವಿಧಾನಗಳನ್ನು ನಿರಚನಗೊಳಿಸಲಾಗುತ್ತಿದೆ. ಉರಿವ ಬೆಂಕಿಗೆ ಮೈಯೆಲ್ಲ ನಾಲಿಗೆ ಎನ್ನುವ ಅಲ್ಲಮನ ಮಾತಿನಂತೆ ಪಠ್ಯಗಳ ಬಹುಸಾಧ್ಯತೆಗಳನ್ನು ಅನುಸಂಧಾನ ಮಾಡುತ್ತಿರುವುದು ಕಾಣುತ್ತದೆ. ಶಾಸ್ತ್ರೀಯ ಸಂಪಾದನೆ ಕೇಂದ್ರದಿಂದ ದೂರ ಉಳಿದಿದ್ದ ಲಘು ಸಾಹಿತ್ಯ, ಲೌಖಿಕ, ಸಾಹಿತ್ಯ ಮಹಿಮೆಗಳು, ತತ್ವಪದಗಳು, ಕಾಲಜ್ಞಾನ ಮಹಾತ್ಮೆಗಳು ಹೀಗೆ ಉಪೇಕ್ಷೆಗೊಂಡಿದ್ದ ಸಾಹಿತ್ಯವನ್ನು ಪರಿಷ್ಕರಿಸಿ ಪ್ರಕಟಿಸುವ ಮೂಲಕ ಸ್ಥಳೀಯ ಚರಿತ್ರೆಯನ್ನು ಪುನಾರಚಿಸಿಕೊಳ್ಳಲಾಗುತ್ತಿದೆ. ಆಕರ ಸಾಮಾಗ್ರಿಗಿಂತ ಭಿನ್ನವಾಗಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ ನೋಡುವ ಪ್ರವೃತ್ತಿ ಬೆಳೆಯುತ್ತಿದೆ. ಈ ವಿಧಾನವನ್ನು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ ಸಮರ್ಥವಾಗಿ ಮಾಡಿ ತೋರಿಸುತ್ತಿದೆ.

ಸಾಂಪ್ರದಾಯಿಕ ಜ್ಞಾನ ವಿಜ್ಞಾನಗಳ ಪ್ರಕಟಣೆ ಯೋಜನೆ ಇತ್ತೀಚಿನ ಬಹುಮುಖ್ಯ ಪ್ರವೃತ್ತಿಯಾಗಿದೆ. ಇದು ಭಾರತದಾದ್ಯಂತ ಯೋಜಿತ ರೂಪದಲ್ಲಿ ನಡೆಯುತ್ತಿದೆ. ಇದರ ಫಲವಾಗಿ ಆಯುರ್ವೇದ, ಜ್ಯೋತಿಷ್ಯ, ಗಣಿತ, ವಾಸ್ತುಶಿಲ್ಪ, ರಸಸಿದ್ಧಾಂತಗಳಂತಹ ಕೃತಿಗಳ ಸಂಗ್ರಹ ಮತ್ತು ಪರಿಷ್ಕರಣ ಕೆಲಸ ಅರಂಭವಾಗಿದೆ. ನವರತ್ನ ಮಹಾತ್ಮೆ, ತಂತ್ರಸಾರ ಸಂಗ್ರಹ, ವೈದ್ಯಶಾಸ್ತ್ರ ದೀಪಿಕೆ, ಪರ್ಯಾಯ ಪದಮಂಜರಿಯಂತ ಕೃತಿಗಳು ಮೈಸೂರಿನ ಓ.ಆರ್.ಐನಿಂದ ಪ್ರಕಟವಾಗಿದೆ.

ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ವಿಶ್ವಕೋಶ ಮಾದರಿಯ ದೊಡ್ಡ ಯೋಜನೆ ರೂಪಿತವಾಗಿದ್ದು, ವೇದಗಳಿಂದ ಕಾವ್ಯಗಳ ವರೆಗೆ ಸಂಸ್ಕೃತ ವಾಙ್ಮಯದಲ್ಲಿ ದಾಖಲಾಗಿರುವ ಐತಿಹಾಸಿಕ ಮಾಹಿತಿಗಳನ್ನು ಸಂಗ್ರಹಿಸಿ ಪರಿಷ್ಕರಿಸಿ ಜನಸಾಮಾನ್ಯರಿಗೆ ತಿಳಿಸುವ ಕೆಲಸ ನಡೆಯುತ್ತಿದೆ. ಆ ಮೂಲಕ ಸಂಸ್ಕೃತ ಮತ್ತು ಪ್ರಾಕೃತ ಲಿಪಿ ರಕ್ಷಿಸುವ ಪ್ರಾಚೀನ ಗ್ರಂಥಗಳ ಜ್ಞಾನವನ್ನು ಆಧುನೀಕರಿಸಿ ಪರಿಚಯಿಸುವ ಪ್ರವೃತ್ತಿ ಕುಡಿಯೊಡೆಯುತ್ತಿದೆ. ಜೈನ, ಬೌದ್ಧ, ಮುಸ್ಲಿಂ(ಉರ್ದು) ಪಠ್ಯಗಳನ್ನು ಹಿಂದಿ, ಇಂಗ್ಲಿಷ್ ಭಾಷೆಗೆ ಭಾಷಾಂತರಿಸುವ ಹಾಗೂ

ಸಂಪಾದಿಸಿ ಪ್ರಕಟಿಸುವ ಕ್ರಿಯೆ ನಡೆಯುತ್ತಿದೆ. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ ಮತ್ತು ದೆಹಲಿಯ ರಾಷ್ಟ್ರೀಯ ಹಸ್ತಪ್ರತಿಮಿಷನ್, ನ್ಯಾಷನಲ್ ಮಿಷನ್ ಫಾರ್ ಮ್ಯಾನುಸ್ಕ್ರಿಪ್ಟ್ ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆಯಲ್ಲಿ ಹೊಸ ಸಾಧ್ಯತೆಗಳನ್ನು ಹುಟ್ಟು ಹಾಕಿದ್ದು ಮಹತ್ವದ ವಿಚಾರವಾಗಿದೆ.

೯-೧೦ನೆಯ ಶತಮಾನದಲ್ಲಿ ಸಾಮ್ರಾಜ್ಯಶಾಹಿ ನೈತಿಕ ಪ್ರಜ್ಞೆಗಳಾಗಿ ಪಾಂಡಿತ್ಯ, ಪ್ರತಿಷ್ಠೆ, ಕೀರ್ತಿ, ಗೌರವ ಹಾಗೂ ಸನಾತನ ಧರ್ಮದ ಪ್ರತಿನಿಧಿಯಾಗಿ ಸಂಸ್ಕೃತ, ಸಾಹಿತ್ಯ ಮತ್ತು ಸಂಸ್ಕೃತಿಗಳು ಬೆಳೆದು ನಿಂತಿದ್ದವು. ವ್ಯಕ್ತಿ ಹಾಗೂ ರಾಜ ನಿರೂಪದ ಅಳತೆಗೋಲಾಗಿ ಸಂಸ್ಕೃತ ಬೆಳೆದು ನಿಂತಿತ್ತು. ಈ ಬಿಗಿ ಬಂಧ ವಿಶಾಲ ರಾಜಕೀಯ ನೈತಿಕ ಸಾಮಾಜಿಕ ವ್ಯವಸ್ಥೆಗಳ ಪ್ರತಿರೂಪವಾಗಿ ಕೆಲಸ ಮಾಡಿತು. ಸಂಸ್ಕೃತದ ಶುದ್ಧತೆಯು ನಿರ್ಮಿಸಿದ ಏಕ ಘನಾಕೃತ ಸ್ಥಿತಿಯು ಜ್ಞಾನದ ಉತ್ಪಾದನಾ ಶಕ್ತಿಯಾಗಿ ಕೆಲಸ ಮಾಡಿತು. ಇದೇ ನಂತರದ ಎಲ್ಲ ಬೌದ್ಧಿಕ ವೈರುಧ್ಯಗಳಿಗೆ ದಾರಿಯಾಯಿತು. ವಸಾಹತುಪೂರ್ವ ಹಾಗೂ ವಸಾಹತು ನಂತರದ ಎಲ್ಲಾ ಬೌದ್ಧಿಕ ವೈರುಧ್ಯಗಳಿಗೂ ದಾರಿಯಾಯಿತು. ವಸಾಹತುಪೂರ್ವ ಹಾಗೂ ವಸಾಹತು ನಂತರದ ಏಕೀಕೃತ ಮಾದರಿಯೆಂಬ ಸೆಕ್ಯೂಲರ್ ನಿರೂಪಣೆಯಲ್ಲಿನ ಲಿಂಗರಾಜಕಾರಣ ಧರ್ಮ ಶ್ರೇಣಿಕೃತ ಸಮಾಜದ ತಾತ್ವಿಕತೆಯನ್ನು ನಿರಾಕರಿಸುವುದು ಅಷ್ಟು ಸುಲಭವಾಗಿರಲಿಲ್ಲ.

ಆಧುನಿಕಪೂರ್ವ ಚರಿತ್ರೆಯೊಡನೆ ಒಂದು ಭಾವನಾತ್ಮಕ ಸಂಬಂಧ ಬೆಸೆಯುವ ಕಾರಣವಾಗಿ ಪಠ್ಯಗಳು ಮರು ಉತ್ಪಾದಿಸಲಾಯಿತು. ಹೀಗೆ ಉತ್ಪಾದಿತವಾದ ಪಠ್ಯಗಳಿಂದ ಭಾರತೀಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ಹುಡುಕಿಕೊಳ್ಳಲಾಯಿತು. ಭಾರತೀಯ ಗ್ರಂಥ ಸಂಪಾದನೆ ಹಾಗೂ ಅದರ ವ್ಯಾಖ್ಯಾನಗಳಲ್ಲಿ ಕಾಣುವ ಬಹುಮುಖ್ಯ ಪ್ರಮೇಯಗಳೆಂದರೆ, ಭೂತದ ಕೀರ್ತನೆ, ಭೂತದ ಕಣ್ಮರೆ ಕುರಿತು ವಿಷಾದ ಹಾಗೂ ಆಭೂತವನ್ನು ಪುರನ್ ಸೃಷ್ಟಿಸುವ ಹಂಬಲಗಳು. ಅಂದರೆ ಪಠ್ಯ ಅಥವಾ ವಸ್ತುವೊಂದು ಹಳೆಯದು. ಹಳೆಯದಾದಷ್ಟು ಶುದ್ಧವಾಗಿರುತ್ತದೆ ಮತ್ತು ನಂಬಿಕೆಗೆ ಅರ್ಹವಾಗಿರುತ್ತದೆ ಎನ್ನುವ ನಂಬಿಕೆಯನ್ನು ಬರಹದ ಜಗತ್ತಿನ ಮೂಲಕ ಉತ್ಪಾದಿಸಲಾಯಿತು.

"ಶುದ್ಧತೆ ಹಾಗೂ ಆಧುನಿಕತೆ(ಮಾರ್ಡನ್) ಎಂಬ ಪರಿಕಲ್ಪನೆಗಳೇ ಬಹುದೊಡ್ಡ ಆಳುವ ಸಂಕಥನಗಳಾಗಿ ಬೆಳೆದು ಬಂದವು ಶುದ್ಧ-ಅಶುದ್ಧ ಹೊಸತು-ಹಳತು ಎನ್ನುವ ಈ ಬಗೆಗಳು ಸಂಸ್ಕೃತಿಯನ್ನು ನಿರ್ದೇಶಿಸುವ ಹಾಗೂ ನಿಯಂತ್ರಿಸುವ ಸಾಧನಗಳಾದವು. ಮಾನವ ಪ್ರಜ್ಞೆಯನ್ನು ನಿರ್ಣಾಯಕವಾಗಿ ಬದಲಿಸುವ ಮಾರ್ಗಗಳಾಗಿ ಬೆಳೆದು ನಿಂತವು. ಒಂದು ಮೂಲಪಠ್ಯವನ್ನು ಹುಡುಕುವುದು, ಹುಡುಕಿ ತೆಗೆದ ಪಠ್ಯವನ್ನು ಮೌಲೀಕರಿಸುವುದು ಹಾಗೂ ಪ್ರಕಟಿಸುವುದು ಆ ಮೂಲಕ ಅದನ್ನು ಅಧಿಕೃತವೆಂದು ಸಾರುವ ಸಂಗತಿಗಳು

ಇಲ್ಲಿ ಮುಖ್ಯವಾಗಿದ್ದವು. ಪಠ್ಯಗಳ ಬಗೆಗಿನ ಇಂಥ ನಿರೂಪಣೆಗಳು ದೇಶಿ ಜ್ಞಾನ, ಪರಂಪರೆಯ ವಿರುದ್ಧ ಅಕ್ಷರ ಸಂಸ್ಕೃತಿ ಸ್ಥಾಪಿಸಿದ ಹುನ್ನಾರವೇ ಆಗಿದೆ. ಸಾಮಂತಶಾಹಿ ಹಾಗೂ ವಸಾಹತುಶಾಹಿ ಬೌದ್ಧಿಕತೆ ಸೃಷ್ಟಿಸಿಕೊಟ್ಟ ಆಕ್ಷರಿಕ ದಾಖಲೆಗಳು ಚರಿತ್ರೆಯನ್ನು ನಿರೂಪಿಸುವ ಹಾಗೂ ಸಂಸ್ಕೃತಿಯನ್ನು ಪ್ರಮಾಣೀಕರಿಸುವ ಸತ್ಯದ ಗಣಿಗಳಾಗಿ ಮಾರ್ಪಾಡಾದವು. ಪ್ರಶ್ನಾತೀತ ಪಠ್ಯದ ಬಹುಸಾಂಸ್ಕೃತಿಕ ಸತ್ಯಕ್ಕಿಂತ ಪಠ್ಯದ ಅಕ್ಷರಿಕ ಹಾಗೂ ಏಕೀಕೃತ ಸತ್ಯಕ್ಕೆ ಹೆಚ್ಚು ಪ್ರಧಾನ್ಯತೆ ದೊರೆಯಿತು. ೧೮ನೆಯ ಶತಮಾನಕ್ಕಿಂತ ಮುಂಚೆ ಗ್ರಂಥ ಸಂಪಾದನೆಗೆ ಒಂದು ಪಾಂಡಿತ್ಯದ ಆವರಣವಿದ್ದರೆ, ೧೮-೧೯ನೆಯ ಶತಮಾನದ ಹೊತ್ತಿಗೆ ಅದು ಪ್ರಿಂಟ್ ಕ್ಯಾಪಿಟಲ್‌ಲಿಸಂನ ಭಾಗವಾಗಿ ಹೋಯಿತು. ಈ ಹೊತ್ತಿಗೆ ಸಂಪಾದನೆ ಎನ್ನುವುದನ್ನು ಮುದ್ರಣ ಸಂಸ್ಕೃತಿಯಲ್ಲಿರದ ತಾಳೆಗರಿ ಶಾಸನ ಕಾಗದಗಳಲ್ಲಿ ಹಾಗೂ ಕೈ ಬರಹಗಳಲ್ಲಿರುವ ಪಠ್ಯಗಳು, ಮುದ್ರಣ ರೂಪಕ್ಕೆ ಬದಲಿಸುವುದು ಒಂದು ಅರ್ಥೈಸುವ ನೆಲೆಗೆ ಮುಟ್ಟಿತು. ಇದು ಅಲ್ಲದೆ ಉತ್ಪಾದನೆ ಹಾಗೂ ಉತ್ಪಾದಕ ವಸ್ತುವಿನ ಮೇಲೆ ಉತ್ಪಾದಕ ಹಕ್ಕು ಚಲಾಯಿಸುವ ಕಾಪಿರೈಟ್ ಸ್ವಲಾಭದ ಉದ್ಯೋಗವಾಗಿ ಮೈಪಡೆಯಿತು.

ಬಹುಮುಖ್ಯವಾಗಿ ಪೌರಾತ್ಯ ಮತ್ತು ಪಾಶ್ಚಾತ್ಯ ಗ್ರಂಥ ಸಂಪಾದನ ವಿದ್ವಾಂಸರಲ್ಲಿ ಕಂಡುಬರುವ ಸಾಮಾನ್ಯ ಗುಣಲಕ್ಷಣವೆಂದರೆ ಧರ್ಮಾಧಾರಿತವಾದ ಹಿಂದೂ, ಕ್ರೈಸ್ತ, ಸಂಪಾದನ ವಿಧಾನಗಳು ಸೃಷ್ಟಿಸಿದ್ದು ಮತ್ತು ಬೆಳೆಸಿದ್ದು, ಬರವಣಿಗೆ ಪ್ರಧಾನವೂ ಆದ ಭಾರತೀಯ ಸಾಹಿತ್ಯಕ್ಕೆ ಅಳವಡಿಸಲಾಯಿತು. ಹಿಂದುಗಳ ಧಾರ್ಮಿಕ ಸಾಹಿತ್ಯ ತನ್ನ ಪಠಣ ಗುಣದಿಂದಾಗಿಯೇ ಲೌಕಿಕ ಸಾಹಿತ್ಯಕ್ಕಿಂತ ಹೆಚ್ಚು ಪರಿಶುದ್ಧ ಮಟ್ಟದಲ್ಲಿ ಉಳಿದು ಬಂದಿತು. ನಾವು ಮುದ್ರಿತ ಪ್ರತಿಗಳಲ್ಲಿ ಓದುವ ಋಗ್ವೇದವನ್ನು ಕಳೆದ ಮೂರು ಸಾವಿರ ವರ್ಷಗಳ ಉದ್ದಕ್ಕೂ ಅದೇ ಪದ ಉಚ್ಚಾರಣೆ ಹಾಗೂ ಸ್ವರದ ಒತ್ತುಗಳೊಡನೆ ಬಹುಮಟ್ಟಿಗೆ ಯಾವ ವ್ಯತ್ಯಾಸವಾಗದೆ ಇದ್ದಂತೆಯೇ ಉಳಿದು ಬಂದಿದ್ದವು. ಅಂದರೆ ಲೌಕಿಕ ಮತ್ತು ಜನಪ್ರಿಯ ಸಾಹಿತ್ಯಗಳ ವಿಷಯವೇ ಬೇರೆಯಾಯಿತು. ಇವು ಹೆಚ್ಚು ಬಳಕೆಗೆ ಯೋಗ್ಯವಾದ ಕಾರಣ ಮರು ರೂಪ ಧಾರಣೆ ತೆಗೆದುಕೊಂಡವು.

ಆಧುನಿಕ ಪೂರ್ವಕಾದಲ್ಲಿ ಭಾರತದಾದ್ಯಂತ ನಡೆದ ಗ್ರಂಥಸಂಪಾದನ ಚಟುವಟಿಕೆಗಳು ಒಂದು ಕಡೆ ಆದರೆ ಶಾಸ್ತ್ರೀಯ ಎನಿಸುವ ಮಟ್ಟದಲ್ಲಿಯೂ ಇನ್ನೊಂದೆಡೆ ಸಮುದಾಯ ಹಾಗೂ ಸಂಸ್ಕೃತಿಗಳನ್ನು ಅರ್ಥಮಾಡಿಕೊಳ್ಳುವ ನೆಲೆಗಳಲ್ಲಿಯೂ ಕ್ರಿಯಾಶೀಲವಾಗಿರುವುದು ಕಂಡುಬರುತ್ತದೆ. ಅಂದರೆ ಮಾತಿನ ಆರಂಭವೇ ಭಾರತೀಯ ಗ್ರಂಥ ಸಂಪಾದನೆಯಾಗಿದೆ. ಬರಹದ ಚರಿತ್ರೆ ಮತ್ತು ಮುದ್ರಣದ ಚರಿತ್ರೆಯನ್ನು ಭಾರತೀಯ ಶಾಸ್ತ್ರಶುದ್ಧ ಗ್ರಂಥ ಸಂಪಾದನೆ ಎಂದು ಇದುವರೆಗೂ ನಂಬಲಾಗಿದೆ.

೪.೧.೧. ಹಸ್ತಪ್ರತಿ ಭಂಡಾರಗಳು ಮತ್ತು ಸೂಚಿ ರಚನೆ

ಪ್ರಾಚೀನ ಕರ್ನಾಟಕದಲ್ಲಿ ಹಸ್ತಪ್ರತಿ ಭಂಡಾರಗಳಿಗೆ ಪರ್ಯಾಯವಾಗಿ ಓಲೆ ಭಂಡಾರ, ಸರಸ್ವತಿ ಭಂಡಾರ, ಶ್ರುತ ಭಂಡಾರ, ಪುಸ್ತಕ ಭಂಡಾರ, ವಚನ ಭಂಡಾರ, ಶಾರದಾ ಭಂಡಾರ ಇತ್ಯಾದಿ ಹೆಸರುಗಳಿಂದ ಕರೆಯುತ್ತಿದ್ದರು. ಅಂದು ಅಧ್ಯಯನದ ಅನುಕೂಲಕ್ಕಾಗಿ ಧಾರ್ಮಿಕ ಮನೋಭಾವಕ್ಕಾಗಿ ಹಸ್ತಪ್ರತಿಗಳ ಸಂಗ್ರಹವಾಗುತ್ತ ಭಂಡಾರದ ಸ್ವರೂಪವನ್ನು ಪಡೆದುಕೊಂಡವು. ಆಧುನಿಕ ಪದ್ಧತಿಯಿಂದಾಗಿ ಹಸ್ತಪ್ರತಿಗಳನ್ನು ಗಂಭೀರವಾಗಿ ಓದುವ, ಅಧ್ಯಯನ ಮಾಡುವ ಉಪಕ್ರಮ ಬೆಳೆದು ಬಂದಿವೆ. ಈ ಕಾರಣವಾಗಿ ಹಸ್ತಪ್ರತಿಗಳ ಸರ್ವೇಕ್ಷಣೆ, ಸಂಗ್ರಹ ಕಾರ್ಯಕ್ಕೆ ಶ್ರೀಕಾರ ಹಾಕಿದವರು ವಿದೇಶಿ ವಿದ್ವಾಂಸರು. ವಿಶೇಷವಾಗಿ ಮಿಶನರಿ ಪಾದ್ರಿಗಳು, ಕರ್ನಲ್ ಮೆಕೆಂಜಿ ಆದಿಯಾಗಿ ಜನ ವಿದೇಶಿ–ದೇಶಿ ಪಂಡಿತರು ಹಸ್ತಪ್ರತಿಗಳ ಬಗೆಗೆ ಜನರಲ್ಲಿ ತಿಳುವಳಿಕೆಯನ್ನು ಮೂಡಿಸುವ ಪ್ರಯತ್ನದಲ್ಲಿ ತೊಡಗಿದರು. ಹೀಗೆಂದಾಕ್ಷಣ ಹಸ್ತಪ್ರತಿ ಭಂಡಾರಗಳ ಅಸ್ತಿತ್ವಕ್ಕೆ ಇವರೇ ಆದ್ಯ ಪ್ರವರ್ತಕರೆಂದಲ್ಲ ಈ ಪೂರ್ವದಲ್ಲಿ ಅರಮನೆ, ಗುರುಮನೆ ಮತ್ತು ವ್ಯಕ್ತಿ ಒಡೆತನದಲ್ಲಿ ನಕಲು ಪ್ರತಿಗಳಾಗಿ ಹಸ್ತಪ್ರತಿಗಳ ಪರಿಚಲನ ಕಾರ್ಯ ನಿರಂತರವಾಗಿ ನಡೆಯುತ್ತಿತ್ತು. ಅದೇನೇ ಇದ್ದರೂ ಇತ್ತೀಚಿನ ಆಧುನಿಕ ಮುದ್ರಿತ ಗ್ರಂಥಾಲಯಗಳಂತೆ ಹಸ್ತಪ್ರತಿ ಭಂಡಾರಗಳು ಇರುವುದನ್ನು ಗಮನಿಸಬಹುದು.

ಸುಮಾರು ಒಂದುವರೆ ಸಾವಿರ ವರ್ಷಗಳ ಹಿಂದಿನಿಂದಲೂ ಭರತಖಂಡದ ಧಾರ್ಮಿಕ, ಸಾಂಸ್ಕೃತಿಕ ಕೇಂದ್ರಗಳಲ್ಲಿಯೂ ಅರಮನೆಗಳಲ್ಲಿಯೂ ವಿದ್ವಾಂಸರ ಮತ್ತು ವಿದ್ಯಾಭಿಮಾನಗಳ ಮನೆಯಲ್ಲಿಯೂ ಹಸ್ತಪ್ರತಿ ಭಂಡಾರಗಳು ಇದ್ದವು. ಅವುಗಳ ಪ್ರಯೋಜನ ಬಯಸಿದವರೆಲ್ಲರೂ ಪಡೆಯಬಹುದಾಗಿತ್ತು. ಆದರೆ ಇಂದಿನ ಅರ್ಥದಲ್ಲಿ ಅವು ಸಾರ್ವಜನಿಕ ಗ್ರಂಥ ಭಂಡಾರ ಗಳಲ್ಲ. ಅಂತಹ ಒಂದು ಆಧುನಿಕ ಕನ್ನಡ ಹಸ್ತಪ್ರತಿ ಭಂಡಾರವು ಅದು ಇತರ ಭಾಷೆಗಳ ಪ್ರತಿಗಳೊಂದಿಗೆ ಮದರಾಸಿನಲ್ಲಿ ಪ್ರಾರಂಭವಾಯಿತು. ಅದರ ತಾಯಿ ಬೇರು ಹಿಂದೆ ಹೇಳಿದಂತೆ ಕರ್ನಲ್ ಮೆಕೆಂಜಿಯ ಸಂಗ್ರಹ. ಅದರಲ್ಲಿದ್ದ ಸ್ಥಳಪುರಾಣ ಸ್ಥಳೀಯ ವೃತ್ತಾಂತಗಳನ್ನು ಬಿಟ್ಟರೆ ಕನ್ನಡ ಹಸ್ತಪ್ರತಿಗಳ ಸಂಖ್ಯೆ ಸುಮಾರು ೧೫೦. ಸಿ.ಪಿ. ಬ್ರೌನ್ ಮೊದಲಾದವರಿಂದ ಈ ಸಂಖ್ಯೆ ೧೫೪೦ಕ್ಕೆ ಏರಿತು. ಸಂಸ್ಥೆಯ ಆರಂಭವಾದಂದಿನಿಂದ ಸುಮಾರು ೭೦ ವರ್ಷಗಳ ಕಾಲ ಕೈಬರಹಗಳನ್ನು ಸಂಗ್ರಹಿಸುವ ಮತ್ತು ಸಂರಕ್ಷಿಸುವ ಕಾರ್ಯ ತೃಪ್ತಿಕರವಾಗಿ ನಡೆದಿರ ಬಹುದೆಂದು ಅಧ್ಯಯನದಿಂದ ತಿಳಿದುಬಂದಿದೆ.

ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಯಾವ ಕಾರಣಕ್ಕಾಗಿ ದೇಶಿಯ ವಿದ್ವಾಂಸರಿಗಿಂತ ಮುಂಚಿತವಾಗಿ ಬ್ರಿಟಿಷ್ ಅಧಿಕಾರಿಗಳು ಹಸ್ತಪ್ರತಿಗಳ ಸಂಗ್ರಹಕ್ಕೆ ಆಸಕ್ತಿ ವಹಿಸಿದರು ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದರೆ ದೊರೆಯುವ ಸ್ಪಷ್ಟ ಮಾಹಿತಿ.

ಅದರಲ್ಲಿ ಅಡಗಿರುವ ಜ್ಞಾನ ಸಂಸ್ಕೃತಿಯನ್ನು ಸೂಕ್ಷ್ಮವಾಗಿ ಗುರುತಿಸಿದ ಅಂದಿನ ಬ್ರಿಟಿಷ್ ಅಧಿಕಾರಿಗಳನ್ನು ತಮ್ಮ ಆಡಳಿತಕ್ಕೆ ಅನುಕೂಲದ ದೃಷ್ಟಿಯಿಂದ ಹಲವು ವಿದ್ಯಾಸಂಸ್ಥೆಗಳನ್ನು ಹಾಗೂ ಬಾಂಬೆ, ಕಲ್ಕತ್ತಾ ಮತ್ತು ಮದರಾಸುಗಳಲ್ಲಿ ವಿಶ್ವವಿದ್ಯಾಲಯಗಳನ್ನು ತೆರೆದರು. ಜೊತೆಯಲ್ಲಿ ಹಲವು ಗ್ರಂಥಾಲಯಗಳನ್ನು ಸ್ಥಾಪಿಸಿದರು. ಬ್ರಿಟೀಷ್ ಅಧಿಕಾರಿಗಳು ಮತ್ತು ಅವರ ಜನರ ಅನುಕೂಲಕ್ಕಾಗಿ ಅಲ್ಲಲ್ಲಿ ಗ್ರಂಥಾಲಯಗಳು ಪ್ರಾರಂಭಗೊಂಡವು. ಈ ಗ್ರಂಥಾಲಯಗಳು ಬ್ರಿಟೀಷರ ಆರ್ಥಿಕ ಸಹಾಯದಿಂದ ಮತ್ತು ಬ್ರಿಟಿಷರು ಹೆಚ್ಚಾಗಿ ವಾಸಿಸುವ ಸ್ಥಳಗಳಲ್ಲಿ ಸ್ಥಾಪಿಸಲಾಗಿತ್ತು.

ಕನ್ನಡ ಹಸ್ತಪ್ರತಿಗಳ ಸಂಗ್ರಹ ಕಾರ್ಯಕ್ಕೆ ಶ್ರೀಕಾರ ಹಾಕಿದ ಪ್ರಥಮ ವ್ಯಕ್ತಿ ಕರ್ನಲ್ ಮೆಕೆಂಜಿ. ಈತ ಬ್ರಿಟಿಷ್ ಸರಕಾರದ ಅಧಿಕಾರಿಯಾಗಿ ಬಂದರೂ ಇಲ್ಲಿಯ ಸಾಹಿತ್ಯ ಸಂಸ್ಕೃತಿಯ ಬಗೆಗಿನ ಆಕರ ಸಾಮಗ್ರಿಗಳನ್ನು ನೋಡಿ ಉತ್ಸಾಹಿತನಾದನು. ನಾಡಿನ ಜನತೆಗೆ ಹಸ್ತಪ್ರತಿಗಳನ್ನು ಪರಿಚಯಿಸಬೇಕೆಂಬ ಹಂಬಲದಿಂದ ಇವುಗಳ ಸಂಗ್ರಹ ಸಂರಕ್ಷಣೆ ಹಾಗೂ ಅಧ್ಯಯನದ ಕಡೆಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದನು. ಜೊತೆಗೆ ದೇಸಿಯ ವಿದ್ವಾಂಸರನ್ನು ತಮ್ಮ ಸಹಾಯಕ್ಕೆ ನೇಮಿಸಿಕೊಂಡು ಹೆಚ್ಚಿನ ಆಸಕ್ತಿ, ಕುತೂಹಲದಿಂದ ನಾಣ್ಯ, ಕೈಫಿಯತ್, ವಿಗ್ರಹ, ಶಾಸನ, ಭೂಪಟ, ಹಸ್ತಪ್ರತಿಗಳನ್ನು ರಾಶಿರಾಶಿಯಾಗಿ ಸಂಗ್ರಹಿಸಿದನು. ಈ ಒಂದು ಚಟುವಟಿಕೆಗೆ ಕರ್ನಲ್ ಮೆಕೆಂಜಿ ಅಲ್ಲದೆ ಬಿ.ಎಲ್. ರೈಸ್, ಫ್ಲೀಟ್, ಸಿ.ಪಿ. ಬ್ರೌನ್, ಲಿಡನ್, ಆರ್. ನರಸಿಂಹಾಚಾರ್, ರೆ. ಉತ್ತಂಗಿ ಚನ್ನಪ್ಪ, ಫರ್ಡಿನಾಂಡ್, ಕಿಟಲ್, ಎಂ.ಎ. ರಾಮನುಜಯ್ಯಂಗಾರ್, ಎಂ. ಮರಿಯಪ್ಪಭಟ್ಟ ಇತ್ಯಾದಿ ಹಲವರು ಸಾಹಿತ್ಯದ ಕೃಷಿಯಲ್ಲಿ ಹೆಚ್ಚಿನ ಶ್ರಮವಹಿಸಿದ್ದಾರೆಂದು ತಿಳಿದುಬರುತ್ತದೆ.

ಹಸ್ತಪ್ರತಿಗಳನ್ನು ಶಾಸನಗಳನ್ನು, ನಕಲುಗಳನ್ನು ಇತರೆ ಪ್ರಾಚ್ಯ ವಸ್ತುಗಳನ್ನು ಸಂಗ್ರಹಿಸಿದವರಲ್ಲಿ. 'ಕರ್ನಲ್ ಮೆಕೆಂಜಿಯೇ ಮೊದಲಿಗನು. ೧೮೫೮ರಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾದ ಸರ್ಕಾರಿ ಹಸ್ತಪ್ರತಿ ಭಂಡಾರಕ್ಕೆ ಸೇರ್ಪಡೆಯಾದ ಮೆಕೆಂಜಿಯ ಸಂಗ್ರಹವೇ ಪ್ರಥಮ ಕನ್ನಡ ಹಸ್ತಪ್ರತಿ ಭಂಡಾರ ಎಂದು ಎಚ್. ದೇವಿರಪ್ಪನವರು ತಿಳಿಸಿರುತ್ತಾರೆ.[೨೨] ನಂತರ ಮೈಸೂರಿನಲ್ಲಿ ೧೮೯೧ರಲ್ಲಿ ಸ್ಥಾಪಿತವಾದ ಗೌರ್ನಮೆಂಟ್ ಓರಿಯಟಲ್ ಲೈಬ್ರರಿ ಮೈಸೂರು ಕರ್ನಾಟಕದಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸುವ ಸರಕಾರದ ಮೊದಲ ಸಂಸ್ಥೆಯಾಯಿತು. ಇದನ್ನು ಬಿಟ್ಟರೆ ಹಸ್ತಪ್ರತಿಗಳನ್ನು ಸಂಗ್ರಹಿಸುವ ಮತ್ತೊಂದು ಸಂಸ್ಥೆಯೆಂದರೆ ೧೯೩೯ರಲ್ಲಿ ಸ್ಥಾಪಿತರಾದ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಆರ್.ಎಸ್. ಪಂಚಮುಖಿಯವರು ಪ್ರಥಮ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡು ಅಂದಿನಿಂದಲೇ ಹಸ್ತಪ್ರತಿಗಳನ್ನು ಸಂಗ್ರಹಿಸುವ. ಅನ್ಯ ಭಂಡಾರಗಳಲ್ಲಿರುವ ಪ್ರಸಿದ್ಧ ಹಸ್ತಪ್ರತಿಗಳನ್ನು ನಕಲು ಮಾಡಿಸಿ ಸಂರಕ್ಷಿಸಿ ಸೂಚಿ ಮಾಡುವ ಕಾರ್ಯ ಆರಂಭಿಸಿದರು.

ನಂತರ ಹಸ್ತಪ್ರತಿ ಭಂಡಾರಗಳ ಸ್ಥಾಪನೆ ಆಗುವುದರ ಮೂಲಕ ಹಸ್ತಪ್ರತಿ ಅಧ್ಯಯನ ಪರಂಪರೆ ಕರ್ನಾಟಕದಲ್ಲಿ ಆರಂಭವಾಯಿತು. ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯವನ್ನು ೧೯೪೩ರಲ್ಲಿ ಸ್ಥಾಪಿಸಲಾಯಿತು. ಕನ್ನಡ ಅಧ್ಯಯನ ಸಂಸ್ಥೆ ಅರಮನೆಗೆ ಸೇರಿದ ಸರಸ್ವತಿ ಭಂಡಾರ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ಧಾರವಾಡದ ಕನ್ನಡ ಅಧ್ಯಯನ ಪೀಠ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ, ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನೆ ಪ್ರತಿಷ್ಠಾನ, ೧೯೮೮ರಲ್ಲಿ ಜನ್ಮ ಪಡೆಯಿತು. ಇದರ ಜೊತೆಯಲ್ಲಿ ಕೆಳದಿ ವಸ್ತು ಸಂಗ್ರಹಾಲಯವು ೧೯೬೦ರಲ್ಲಿ ಕೆಳದಿ ಗುಂಡಾಜೋಯಿಸ್‌ರಿಂದ ಅಸ್ತಿತ್ವಕ್ಕೆ ಬಂದಿತು. ಹಾಗೆಯೇ ೧೯೦೮ರಲ್ಲಿ ಹಾನಗಲ್ ಕುಮಾರ ಸ್ವಾಮಿಗಳಿಂದ ಶಿವಯೋಗ ಮಂದಿರ ಸಂಸ್ಥೆ ಸ್ಥಾಪಿಸಿದರು. ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಪಾಠಶಾಲೆ ಸಿದ್ಧಗಂಗಾಮಠ ೧೯೭೭ರಲ್ಲಿ ಅಕಾಡೆಮಿ ಆಫ್ ಸಂಸ್ಕೃತ ರಿಸರ್ಚ್ ಮೇಲುಕೋಟೆ ಪ್ರಾರಂಭಿಸಲಾಯಿತು. ಮೂರು ಸಾವಿರ ಮಠದ ಹಸ್ತಪ್ರತಿ ಭಂಡಾರ 'ಹುಬ್ಬಳ್ಳಿ' ಲಿಂಗಾಯಿತ ಸಂಶೋಧನ ಕೇಂದ್ರ ಗ್ರಂಥಾಲಯ, ಬೆಳಗಾವಿ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ, ಅಲ್ಲದೆ ಮಂಡಳಿ ಮೂಡಬಿದರೆ ವೀರವಾಣಿ ಸಿದ್ಧಾಂತ ಭವನ ಶೃಂಗೇರಿ ಉಡುಪಿ, ಮೇಲುಕೋಟೆ, ಸಿರಿಗೇರೆ, ಚಿತ್ರದುರ್ಗ, ಬಳ್ಳಾರಿ, ಹೊಸಪೇಟೆ, ಶ್ರೀ ಕೊಟ್ಟರುಸ್ವಾಮಿ ಮಠ ಹಾಗೂ ಇತ್ಯಾದಿ ನಾಡಿನ ಹಲವು ಕಡೆಗಳಲ್ಲಿ ಹಸ್ತಪ್ರತಿ ಭಂಡಾರಗಳಲ್ಲಿ ಹಸ್ತಪ್ರತಿ ಸಂಗ್ರಹ ಸಂರಕ್ಷಣೆ ಮಾಡಿ ಸೂಚೀಕರಣ ಮಾಡುವ ಮೂಲಕ ಹಸ್ತಪ್ರತಿ ಅಧ್ಯಯನ ಕೈಗೊಂಡವರಿಗೆ ಮಾರ್ಗದರ್ಶಿಯಾಗಿದೆ.

ಪ್ರಸ್ತುತ ಸಂದರ್ಭ ಹಸ್ತಪ್ರತಿಗಳ ಸಂಗ್ರಹಣೆ, ಸಂರಕ್ಷಣೆಗಾಗಿ ಕನ್ನಡ ವಿಶ್ವವಿದ್ಯಾಯವು ಕರ್ನಾಟಕದಲ್ಲಿಯೇ ಹಸ್ತಪ್ರತಿಗಾಗಿ ಪ್ರತ್ಯೇಕ ವಿಭಾಗ ಸ್ಥಾಪನೆಯಾಗಿರುವುದು ಶ್ಲಾಘನೀಯ. ಇದರ ಕಾರ್ಯ ಚಟುವಟಿಕೆಯು ತುಂಬಾ ಪ್ರಮುಖವಾಗಿದೆ. ಹಸ್ತಪ್ರತಿ ವಿಭಾಗದಲ್ಲಿ ಹಸ್ತಪ್ರತಿ ಭಂಡಾರ ಸ್ಥಾಪಿಸಿ ನಾಡಿನಾದ್ಯಂತ ಕ್ಷೇತ್ರಕಾರ್ಯ ಕೈಗೊಂಡು ಸಂಗ್ರಹಿಸಲಾಗಿದೆ. ಇಂತಹ ಪ್ರಾಚೀನ ಕೈಬರಹಗಳನ್ನು ಸಂಗ್ರಹಿಸುವ ಹಾಗೂ ಸೂಚೀಕರಿಸುವ ಪ್ರಕಟಿಸುವ, ಸಂರಕ್ಷಿಸುವ ಇತ್ಯಾದಿ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರಾದ ವೀರೇಶ ಬಡಿಗೇರ, ಎಫ್.ಟಿ. ಹಳ್ಳಿಕೇರಿ, ಕೆ. ರವೀಂದ್ರನಾಥ, ಎಸ್.ಆರ್. ಚನ್ನವೀರಪ್ಪ, ಎಸ್.ಎಸ್. ಅಂಗಡಿ ಹಾಗೂ ವಿವಿಧ ಸಂಶೋಧಕರು ವಿಭಾಗದ ಕಾರ್ಯಚಟುವಟಿಕೆಗಳನ್ನು ಯಶಸ್ವಿಯಾಗಿ ಪೂರೈಸಿ ಅನೇಕ ಸಂಶೋಧಕರಿಗೆ ಮಾರ್ಗದರ್ಶಕರಾಗಿದದಾರೆ. ಅಲ್ಲದೆ ನಾಡಿಗೆ ಕೀರ್ತಿ ಒದಗಿಸಿ ದ್ದಾರೆಂದರೆ ತಪ್ಪಾಗುವುದಿಲ್ಲ. ವಿಭಾಗವು ಹಸ್ತಪ್ರತಿಗಳನ್ನು

ಸಂಗ್ರಹಿಸುವ ೪೦೦ ಕಟ್ಟುಗಳಂತೆ ೫ ಹಸ್ತಪ್ರತಿ ಸೂಚಿ ಸಂಪುಟಗಳನ್ನು ಪ್ರಕಟಿಸಿದೆ. ಹಸ್ತಪ್ರತಿ ಭಂಡಾರದಲ್ಲಿ ಕನ್ನಡದ ಜೊತೆಗೆ ತೆಲುಗು, ತಮಿಳು, ಸಂಸ್ಕೃತ, ಮರಾಠಿ, ಮಲೆಯಾಳಂ ಹಸ್ತಪ್ರತಿಗಳಿರುವುದನ್ನು ಕಾಣಬಹುದು.

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಹಸ್ತಪ್ರತಿಗಳ ಸಂರಕ್ಷಣೆಯ ಜೊತೆಗೆ ವಿಭಾಗದ ಅಧ್ಯಾಪಕರುಗಳಿಂದ ವೈಯಕ್ತಿಕ ಹಾಗೂ ಸಾಂಸ್ಥಿಕ ಯೋಜನೆಯನ್ನು ಕೈಗೊಂಡಿದ್ದು, ಆ ಮೂಲಕ ಜಿಲ್ಲಾವಾರು ಹಸ್ತಪ್ರತಿಗಳ ಸರ್ವೇಕ್ಷಣೆ, ಸಂಗ್ರಹ ಮತ್ತು ಸೂಚಿ ರಚನೆಯು ವಿಭಾಗದ ಸಾಂಸ್ಥಿಕ ಹಾಗೂ ವೈಯಕ್ತಿಕವಾದ ೫೦ಕ್ಕೂ ಹೆಚ್ಚು ಯೋಜನೆಗಳನ್ನು ಪೂರ್ಣ ಗೊಳಿಸಲಾಗಿದೆ.

ವಿಭಾಗವು ಶೈಕ್ಷಣಿಕ ಯೋಜನೆಗಳ ಜೊತೆಗೆ ಹಸ್ತಪ್ರತಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ಸಾರ್ವಜನಿಕರಿಗೆ ಅಭಿರುಚಿ ಮೂಡಿಸಲು ಹಸ್ತಪ್ರತಿ ತರಬೇತಿ ಹಾಗೂ ಜಾಗೃತಿ ಶಿಬಿರ, ಹಾಗೇಯೇ ವಿಶೇಷವಾಗಿ ಹಳಗನ್ನಡ ಸಾಹಿತ್ಯ ಅಧ್ಯಯನ ಆಸಕ್ತಿಗಾಗಿ ಕನ್ನಡ ಅಧ್ಯಾಪಕರಿಗಾಗಿ ಹಳಗನ್ನಡ ಬೋಧನ ತರಬೇತಿ ಶಿಬಿರ ಆಯೋಜಿಸುವುದರ ಮೂಲಕ ಈ ಕ್ಷೇತ್ರದ ಪರಂಪರೆ ಇಂದಿಗೂ ಪುನರ್ ಜನ್ಮ ಪಡೆದು, ಮುಂದಿನ ಪೀಳಿಗಾಗಿ ನಾಡಿನ ಪ್ರಾಚೀನ ಸಂಸ್ಕೃತಿಗೆ ವಿಶಿಷ್ಟ ಕೊಡುಗೆಯನ್ನು ನೀಡುವ ಮೂಲಕ ಈ ಕ್ಷೇತ್ರ ಪ್ರಸ್ತುತ ಸಂದರ್ಭದಲ್ಲಿ ಕೂಡ ಜೀವಂತವಾಗಿದೆ ಎಂಬುದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಹಸ್ತಪ್ರತಿಶಾಸ್ತ್ರ ವಿಭಾಗವು ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ವಿದ್ವಾಂಸರನ್ನು ಹಾಗೂ ವಿಷಯ ವೈವಿಧ್ಯತೆಯನ್ನು ಪರಿಚಯಿಸುವ ಸಲುವಾಗಿ ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನವನ್ನು ಆಯೋಜಿಸಿಕೊಂಡು ಬರುತ್ತಿದೆ. ಈಗಾಗಲೇ ಹದಿನಾರು ಹಸ್ತಪ್ರತಿ ಸಮ್ಮೇಳನಗಳನ್ನು ನಾಡಿನ ವಿವಿಧ ಊರುಗಳಲ್ಲಿ ಆಯೋಜಿಸಲಾಗಿದೆ. ಹಾಗೆಯೇ ವಿವಿಧ ಗಣ್ಯರು, ವಿದ್ವಾಂಸರು ಹಾಗೂ ಆಸಕ್ತರು ಅಧ್ಯಯನಕಾರರ ಸಮಕ್ಷಮದಲ್ಲಿ ಯಶಸ್ವಿಯಾಗಿ ಸಮ್ಮೇಳನಗಳನ್ನು ನಡೆಸಿಕೊಂಡುಬಂದಿದೆ. ಹಸ್ತಪ್ರತಿ ಅಧ್ಯಯನ ಎಂಬ ಹೆಸರಿನಲ್ಲಿ ನಿಯತಕಾಲಿಕೆಗಳನ್ನು ವಿಭಾಗವು ಹೊರತಂದಿದೆ. ಹಸ್ತಪ್ರತಿಗಳಂಥ ಐತಿಹಾಸಿಕ ರಾಷ್ಟ್ರೀಯ, ಸಂಪತ್ತುಗಳ ಸಂರಕ್ಷಣೆಗಾಗಿ ಪ್ರತಿವರ್ಷ ಐತಿಹಾಸಿಕ ಪರಂಪರೆ ಉಳಿಸಿ ಎಂಬ ಸಪ್ತಾಹವನ್ನು ಆಚರಿಸುವ ಮೂಲಕ ಕರ್ನಾಟಕ ಹಸ್ತಪ್ರತಿಗಳ ಪರಂಪರೆ ಪುನರ್ ಸೃಷ್ಟಿಸಿದ ಕೀರ್ತಿ ತನ್ನದಾಗಿಸಿಕೊಂಡಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಿದಾಗ ಹಸ್ತಪ್ರತಿ ಭಂಡಾರಗಳ ಅಧ್ಯಯನಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಮೈಗೂಡಿಸಿಕೊಂಡು ಹಸ್ತಪ್ರತಿ ಆಧುನಿಕ

ತಂತ್ರಜ್ಞಾನದೊಂದಿಗೆ ನಾಡಿನ ಪ್ರಾಚೀನ ಪರಂಪರೆಯನ್ನು ಮರುಶೋಧಿಸಿ ಕಾಣಿಕೆಯಾಗಿ ನೀಡುವ ಪ್ರಯತ್ನದಲ್ಲಿದೆ. ಆಂಗ್ಲ ಅಧಿಕಾರಿಗಳಾದ ಮೆಕೆಂಜೆ, ಫ್ಲೀಟ್, ಬಿ.ಎಲ್. ರೈಸ್ ಹಾಗೂ ದೇಶಿ ವಿದ್ವಾಂಸರು ಅಪಾರ ಶ್ರಮದಿಂದ ಜ್ಞಾನ ಪರಂಪರೆಯ ಕೃಷಿಯನ್ನು ಕೈಗೊಂಡು ಉತ್ತಮ ಫಸಲನ್ನು ನಾಡಿಗೆ ಅರ್ಪಿಸಿರುವುದನ್ನು ಗಮನಿಸಬಹುದಾಗಿದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನ ಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಒಟ್ಟಾರೆ ಕನ್ನಡ ಸಾಹಿತ್ಯವು ಹಸ್ತಪ್ರತಿಗಳನ್ನು ಪ್ರಮುಖ ಆಕರವಾಗಿ ಇಟ್ಟುಕೊಂಡು ಪುನರ್ ಕಟ್ಟುವ ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸ ಬೇಕಾಗಿದೆ. ಆದ ಕಾರಣ ಮೊದಲು ನಾಡಿನಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಹಸ್ತಪ್ರತಿ ಭಂಡಾರಗಳಿಗೆ ಕಾಯಕಲ್ಪ ನೀಡುವ ಅವಶ್ಯಕತೆ ಇರುವುದು ಅವುಗಳನ್ನು ಗುರುತಿಸುವ ಮತ್ತು ಹಸ್ತಪ್ರತಿ ಮುಖೇನ ಹೊಸ ಅಧ್ಯಯನಗಳ ಕಡೆ ಮುಖಮಾಡಬೇಕಾಗಿದೆ.

ಕನ್ನಡ ಸಾಹಿತ್ಯವು ಸುಮಾರು ಒಂದೂವರೆ ಸಾವಿರ ವರ್ಷಗಳ ಹಿಂದೆಯೇ ಹುಟ್ಟಿ ಬೆಳೆದು ಶಾಖೋಪಶಾಖೆಗಳಾಗಿ ಹರಡಿಕೊಂಡಿತೆಂದು ಹಲವು ಇತಿಹಾಸಕಾರರ ಅಭಿಪ್ರಾಯವಾಗಿದೆ. ೧೮೯೯ ರಿಂದ ಹಿಂದೆ ಕನ್ನಡ ಪುಸ್ತಕಗಳು ಎಲ್ಲಿದ್ದವು, ಹೇಗಿದ್ದವು. ಅವುಗಳನ್ನು ಯಾರು ಹೇಗೆ ತಯಾರು ಮಾಡುತ್ತಿದ್ದರು. ಯಾವ ರಿತಿ ಸಂಗ್ರಹಿಸುತ್ತಿದ್ದರು. ಹೀಗೆ ಸಂರಕ್ಷಿಸುತ್ತಿದ್ದರೂ ಇಂತಹ ಕಾರ್ಯ ಚಟವಟಿಕೆಗಳಲ್ಲಿ ಹಸ್ತಪ್ರತಿ ಭಂಡಾರ ಮುಖೇನ ಹಸ್ತಪ್ರತಿ ಅಧ್ಯಯನ ಕ್ಷೇತ್ರದಲ್ಲಿ ಹೊಸ ಅಧ್ಯಯನಗಳಾದವು ಎಂಬುದನ್ನು ಗಮನಿಸಬಹುದು.

ಹಸ್ತಪ್ರತಿಗಳ ಸಂಗ್ರಹ ಆಯಾ ವಿದ್ವಾಂಸರ ಅನುಕೂಲಕ್ಕೆ ತಕ್ಕಂತೆ ತಮ್ಮ ತಮ್ಮ ಮನೆಗಳಲ್ಲಿಯೇ ವ್ಯವಸ್ಥೆ ಕಲ್ಪಿಸಲಾಗುತ್ತಿತ್ತು. ಆದರೆ ಇಂತಹ ಹಸ್ತಪ್ರತಿಗಳು ಕ್ರಮೇಣ ಆಸಕ್ತರ ಅಭಿರುಚಿ ಅಧ್ಯಯನ ಆಸಕ್ತಿ ಓದುವ ಹವ್ಯಾಸಕ್ಕೆ ತಕ್ಕಂತೆ ಸಂಗ್ರಹವಾಗುತ್ತಿದ್ದವು. ಅವುಗಳನ್ನು ನೋಡುವವರಿರಲಿ ಇಲ್ಲದಿರಲಿ ಒಳಗಿನ ವಿಷಯ ತಿಳಿಯಲಿ ತಿಳಿಯದಿರಲಿ ಒಟ್ಟಿನಲ್ಲಿ ಸಂಗ್ರಹ ಮಾಡುವುದು ಕೆಲವರಲ್ಲಿ ಒಂದು ಹವ್ಯಾಸವಾಗಿ ಇತ್ತು. ಅದರಂತೆ ಕೆಲವು ಮಹನೀಯರು ಉದಾರವಾಗಿ ದೊರೆತ ಕಡೆ ಉಚಿತವಾಗಿ ಪಡೆದು ದೊರೆಯದೆಡೆಗಳಲ್ಲಿ ಹಣವನ್ನು ಕೊಟ್ಟು ಪಡೆದಿರುವುದುಂಟು. ಒಂದು ವೇಳೆ ಅವರು ಹಾಗೆ ಮಾಡದಿದ್ದಲ್ಲಿ ಈಗ ದೊರೆಯುತ್ತಿರುವ ಹಸ್ತಪ್ರತಿಗಳಲ್ಲಿಯೂ ಹಲವು ಪ್ರಮುಖ ಗ್ರಂಥಗಳು ಹೇಳ ಹೆಸರಿಲ್ಲದೆ ಮರೆಯಾಗುತ್ತಿದ್ದವು. ಇಂತಹ ಕಾರ್ಯದಿಂದಲೇ ಕನ್ನಡ ಹಸ್ತಪ್ರತಿಗಳು ಭಾರತ ಹಾಗೂ ಇತರೆ ಹಲವು ದೇಶಗಳಲ್ಲಿ ಹೋಗಿ ತಂದಿರುವುದು ಗಮನಿಸಬಹುದು. ಈ ಹಸ್ತಪ್ರತಿಗಳ ಸಂಗ್ರಹ ಇಂತಹ ಭಾಷೆಗೆಂದು

ಮಿಗಿಲಾಗಿರಲಿಲ್ಲ ಅವುಗಳಲ್ಲಿ ಆಯಾ ಪ್ರಾಂತೀಯ ಭಾಷೆಯ ಹೆಚ್ಚಾಗಿದ್ದು ಇತರೆ ಪ್ರತಿಗಳು ಕಡಿಮೆಯಿರಬಹುದು. ಅಷ್ಟೇ ಹಸ್ತಪ್ರತಿಗಳ ಸಂಗ್ರಹ ಮಾಡುವಾಗ ಇಂತಹ ಭಾಷೆಗೆ ಹೆಚ್ಚು ಗಮನ ಕೊಡಬೇಕೆಂಬುದು ಪ್ರಸ್ತುತದ ರೂಢಿ ಆಗಿರುವುದನ್ನು ಕಾಣಬಹುದು. ಆಯಾ ಭಾಷೆಗಳಲ್ಲಿ ಪ್ರತ್ಯೇಕವಾದ ಸಂಶೋಧನೆ, ಸಂಪಾದನೆ ಪ್ರಕಟಣೆಗಳು ಪ್ರಾರಂಭವಾದ ಮೇಲೆ ತಮಗೆ ಬೇಕಾದುದನ್ನೆ ಸಂಗ್ರಹಿಸಿ ಸಂರಕ್ಷಿಸುವ ಹೊಣೆಯನ್ನು ಸಂಬಂಧಿಸಿದ ಸಂಸ್ಥೆಗಳು ಸಂಘಗಳು ಹೊತ್ತಿರುವುದು ತೀರಾ ಇತ್ತೀಚಿನ ಸಂಗತಿಯಾಗಿದೆ. ಈ ರೀತಿಯಾಗಿ ಆಸಕ್ತರು ಅಧ್ಯಯನಕಾರರು ಸಂಗ್ರಹಕಾರರು ಕಾಲದಿಂದ ಕಾಲಕ್ಕೆ ಅಭಿರುಚಿ ಆಸಕ್ತಿ ಬದಲಾಗುವುದರ ಜೊತೆಗೆ ಅಧ್ಯಯನದ ಆಸಕ್ತಿ ವೃದ್ಧಿಸುತ್ತಾ ಹೀಗೆ ಪ್ರಾಚೀನ ಕೃತಿಗಳನ್ನು ಹೊಂದಿರುವ ಹಸ್ತಪ್ರತಿ ಸಂಗ್ರಹವನ್ನು ಮಾಡತೊಡಗಿರುವುದು ಕಂಡುಬರುತ್ತದೆ. ಇದರಿಂದ ಕಾಲ ಸರಿದಂತೆ ಇವೆ ಮುಂದೆ ಈ ಗ್ರಂಥಾಲಯಗಳಾಗಿ ಮಾರ್ಪಟ್ಟಿರುವುದು ಕಾಣಬಹುದು. ಹೀಗೆ ಹಸ್ತಪ್ರತಿ ಗ್ರಂಥಾಲಯಗಳು ನಮ್ಮ ಪ್ರಾಚೀನ ಪರಂಪರೆ ಹಾಗೂ ಇತಿಹಾಸಕ್ಕೆ ಪ್ರಮುಖ ಸಾಕ್ಷಿಗಳನ್ನು ಒದಗಿಸುತ್ತವೆ. ಇಂತಹ ಹಸ್ತಪ್ರತಿ ಗ್ರಂಥಾಲಯಗಳು ಪ್ರಸ್ತುತ ಸಂದರ್ಭದಲ್ಲಿ ತುಂಬ ನಿರ್ಲಕ್ಷಕ್ಕೆ ಒಳಪಟ್ಟಿರುವುದು ಕಂಡು ಬರುತ್ತಿದೆ. ಇವುಗಳಿಗೆ ಕಾಯಕಲ್ಪ ನೀಡಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ನಮ್ಮ ಪ್ರಾಚೀನ ಗ್ರಂಥಗಳ ಮೇಲೆ ಬೆಳಕು ಚೆಲುವ ಕಾರ್ಯ ನಡೆಯಬೇಕಿದೆ. ಇದಕ್ಕೆ ನಾಡಿನ ಹಿರಿಯರ ವಿದ್ವಾಂಸರು ಹಾಗೂ ಸಂಶೋಧಕರು ಅಧ್ಯಯನಕಾರರು ಕ್ಷೇತ್ರ ಗಣ್ಯರ ಸಹಾಯ ಸಹಕಾರ ಅಗತ್ಯವಾಗಬೇಕಿದೆ.

ಇದುವರೆಗೂ ದೊರೆತ ಹಸ್ತಪ್ರತಿಗಳು ವಿವಿಧೆಡೆಗಳಲ್ಲಿ ಸಂಗ್ರಹವಾಗಿ ಕೆಲವು ಉಪಯೋಗ ವಾದರೆ ಮತ್ತೆ ಕೆಲವು ಮೂಲೆ ಗುಂಪಾಗಿ ಹಾಳಾಗಿ ಹೋಗಿಗುರುವುದುಂಟು. ಈಗ ಸದ್ಯ ದೊರೆಯುವಷ್ಟನಾದ್ರೂ ಸಂಗ್ರಹಿಸಿ ಸಂರಕ್ಷಿಸಬೇಕೆಂಬ ಬಯಕೆಯಿಂದ ಹಲವು ಸಂಘ ಸಂಸ್ಥೆಗಳು, ಮಠಗಳು ಆಸಕ್ತಿಯಿಂದ ಕೆಲಸ ಮಾಡುತ್ತಿವೆ. ಇವು ಈ ಕೆಲಸವನ್ನು ಹೆಚ್ಚು ಕಡಿಮೆ ಒಂದು ಶತಮಾನದಿಂದ ಮಾಡಿದರೂ ಎಲ್ಲ ಹಸ್ತಪ್ರತಿಗಳ ಸಂಗ್ರಹ ಬಯಸುವವರೆಲ್ಲರ ಕೈಗೆ ದೊರಕುವಂತೆ ಮಾಡುವುದು ಸಾಧ್ಯವಾಗಿಲ್ಲದಿರುವುದು ತುಂಬ ವಿಷಾದನೀಯ. ಈ ಕಾರಣದಿಂದ ಹಸ್ತಪ್ರತಿ ಗ್ರಂಥಾಲಯಗಳಿಗೆ ಕಾಯಕಲ್ಪ ನೀಡುವ ಕೆಲಸ ಆಗಬೇಕಿದೆ.

ಹಸ್ತಪ್ರತಿಗಳನ್ನು ಸಂಗ್ರಹ ಮಾಡುವಾಗ ಭಾಷೆ, ಧರ್ಮ, ಆರ್ಥಿಕ, ಸಾಮಾಜಿಕ ಯಾವ ತಾರತಮ್ಯವೂ ಇಲ್ಲದೆ ಒಟ್ಟಿನಲ್ಲಿ ಸಂಗ್ರಹವಾಗಿರುವುದು ಕಂಡುಬರುತ್ತದೆ. ಕೆಲವೆಡೆ ಕನ್ನಡ ಹಸ್ತಪ್ರತಿಗಳನ್ನು ವರ್ಷಾನುಗಟ್ಟಲೇ ತೆರೆದು ನೋಡುವವರೂ ಇಲ್ಲದೆ ಹಾಗೆ ಉಳಿದಿರುವು ದುಂಟು. ಸಂಗ್ರಹವಾದಾಗ ಇದ್ದವರ ಆಸ್ಥೆ ಆಸಕ್ತಿಗಳು ಕ್ರಮೇಣ ಬಂದವರಲ್ಲಿ ಇಲ್ಲದೆ ಅವು ಸಂಗ್ರಹಿಸಿದಲ್ಲಿಯೇ ನಶಿಸಿ ಹೋಗಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ

ಗಮನಿಸಲಾಗಿದೆ. ಇಂತಹ ಎಲ್ಲ ಹಸ್ತಪ್ರತಿಗಳನ್ನು ಉಳಿಸಿ ಅಧ್ಯಯನಕ್ಕೆ ಒಳಪಡುವಂತೆ ಮಾಡುವ ಕಾರ್ಯವನ್ನು ಕೈಗೊಳ್ಳಬೇಕಿದೆ. ಈಗ ದೊರೆಯುವ ಹಸ್ತಪ್ರತಿಗಳನ್ನು ಒಂದೆಡೆ ಸೇರಿಸಿ ಹಸ್ತಪ್ರತಿ ಗ್ರಂಥಾಲಯಗಳನ್ನು ಸ್ಥಾಪಿಸುವುದು ತೀರ ಅಗತ್ಯವೂ ಯೋಗ್ಯವೂ ಆಗಿದೆ. ಈ ಹಸ್ತಪ್ರತಿ ಭಂಡಾರದಲ್ಲಿ ಕೈಪಿಯತ್ತುಗಳು, ಬಖೈರುಗಳು, ಶಾಸನಗಳು, ಹಸ್ತಪ್ರತಿಗಳು ಮೊದಲಾದವು ಸೇರಿವೆ. ಒಟ್ಟಾರೆ ಎಲ್ಲಾ ರೀತಿಯ ಹಸ್ತಪ್ರತಿಗಳ ಸಂಗ್ರಹ ಆಗಬೇಕಾಗಿರುವುದು ಕನ್ನಡ ಮನಸ್ಸುಗಳ ಕಾಳಜಿಯಾಗಿದೆ.

ನಾಡಿನಲ್ಲಿರುವ ಹಸ್ತಪ್ರತಿ ಗ್ರಂಥಾಲಯಗಳಿಗೆ ಸರಕಾರ ಆರ್ಥಿಕ ಸಹಕಾರ ಕಲ್ಪಿಸಿದರೆ ಸಂಗ್ರಹವಾಗಿ ಹಾಳಾಗುತ್ತಿರುವ ಹಸ್ತಪ್ರತಿಗಳ ರಕ್ಷಣೆಗೆ ಜೀವ ತುಂಬಿದಂತಾಗುತ್ತವೆ. ಯಾವುದೇ ಹಸ್ತಪ್ರತಿಯನ್ನು ಯಾವುದೇ ವ್ಯಕ್ತಿ ಬಯಸಿದರೆ ನೇರವಾಗಿ ಬಂದು ಅದರ ಸಹಾಯ ಪಡೆಯಬಹುದು. ಇಲ್ಲವೇ ಮೈಕ್ರೋಫಿಲಂ ಅಥವಾ ಫೋಟೋಗ್ರಾಫಿ ಸ್ಟಾಟ್ ರೂಪದಲ್ಲಿ ಪಡೆದುಕೊಳ್ಳಬಹುದು. ನಾಡಿನಲ್ಲಿರುವ ಹಸ್ತಪ್ರತಿ ಗ್ರಂಥಾಲಯಗಳಿಗೆ ಸಹಾಯ ಸಹಕಾರ ನೀಡಿದರೆ ನಿಜಕ್ಕೂ ಕನ್ನಡಿಗರ ಹೆಮ್ಮೆಯ ಕಾರ್ಯ ನೇರವೇರಿದಂತಾಗುತ್ತದೆ. ಅನೇಕ ವಿದ್ವಾಂಸರ ಕಣ್ಣಾಗಿಯಾಗಿ ಮೆರೆಯುವುದರಲ್ಲಿ ಸಂಶಯವಿಲ್ಲ. ಹೀಗೆ ಹಸ್ತಪ್ರತಿ ಗ್ರಂಥಾಲಯಗಳ ಮಹತ್ವ ತಿಳಿಯಬಹುದಾಗಿದೆ.

ಹಸ್ತಪ್ರತಿ ಸೂಚಿ ರಚನೆ

'ಆಧುನಿಕ ಕಾಲದಲ್ಲಿ ಹಸ್ತಪ್ರತಿಗಳ ಸಂಗ್ರಹ ಆರಂಭವಾಗಿ ಸರಕಾರಿ ಹಾಗೂ ಭಂಡಾರ ಗಳು ಸ್ಥಾಪಿತವಾದ ಮೇಲೆ ಗ್ರಂಥ ಭಂಡಾರಶಾಸ್ತ್ರ ಒಂದು ಶಿಕ್ಷಣವಾಗಿ ಪ್ರಾರಂಭವಾಯಿತು. ಅದರಂಗವಾಗಿ ಸೂಚಿಶಾಸ್ತ್ರ ರೂಪುಗೊಂಡಿತು. ಹೀಗೆ ರೂಪುಗೊಂಡ ಸೂಚಿ ಪದ್ಧತಿಯಂತೆ ಹಸ್ತಪ್ರತಿ ಭಂಡಾರಗಳಲ್ಲಿ ಸೂಚಿಗಳು, ವರ್ಣನಾತ್ಮಕ ಸೂಚಿಗಳು, ಸಮಗ್ರ ಸೂಚಿಗಳು ಸಿದ್ಧವಾದವು. ಈ ಸೂಚಿಗಳ ಕುರಿತು ಎಂ.ಎಂ. ಕಲಬುರ್ಗಿಯವರು ಈ ರೀತಿ ವಿವರಿಸಿದ್ದಾರೆ. ಕೆಲವು ವಿವರಗಳನ್ನು ಕೊಡುವುದು ಸೂಚಿ ಎಲ್ಲ ವಿವರಗಳನ್ನು ತೋರಿಸಿಕೊಡುವುದು ವಿವರಣಾತ್ಮಕ ಸೂಚಿ. ಒಂದು ಕೃತಿಯ ಪ್ರತಿಗಳು ಯಾವ ಸ್ಥಳದಲ್ಲಿವೆಯೆಂಬುದನ್ನು ವಿಶಿಷ್ಟ ವಿವರಗಳೊಂದಿಗೆ ತೋರಿಸಿಕೊಡುವುದು ಸಮಗ್ರ ಸೂಚಿ. ಈ ಮೂರರಲ್ಲಿ ಸೂಚಿ ಎನ್ನುವುದು ಹಸ್ತಪ್ರತಿಯ ನಂಬರು, ಕೃತಿಯ ಶೀರ್ಷಿಕೆ, ಕವಿನಾಮ, ಪ್ರಕಾರ ಇಷ್ಟು ವಿವರಗಳನ್ನು ಹೊಂದಿಸಲಾಗುತ್ತದೆ. ಇದನ್ನು ಶೀರ್ಷಿಕೆ ಸೂಚಿ ಎಂದು ಕರೆಯಬಹುದು. ಕವಿನಾಮದ ಕೆಳಗೆ ಹೋಲಿಸಿದಾಗ ಕವಿನಾಮ ಸೂಚಿ, ವಿಷಯಾನುಸಾರ ಅಕಾರಾದಿಯಾಗಿ ಜೋಡಿಸಿದಾಗ ವಿಷಯ ಸೂಚಿ ಎನ್ನುತ್ತಾರೆ. ಸಾಮಾನ್ಯವಾಗಿ ಅಚ್ಚಿನ ಪುಸ್ತಕ ಭಂಡಾರಗಳಲ್ಲಿ ಇವುಗಳನ್ನು

ಕಾಣುತ್ತೇವೆ. ಇನ್ನು ವಿವರಣಾತ್ಮಕ ಸೂಚಿ ಎನ್ನುವುದು ಕಾರ್ಡಿನಲ್ಲಿ ಇಲ್ಲವೇ ಗ್ರಂಥದಲ್ಲಿ ಪ್ರಕಟವಾಗಿರುತ್ತದೆ. ಇದನ್ನು ಪತ್ರಿಕ ಸೂಚಿ, ಪುಸ್ತಕ ಸೂಚಿ ಎಂದು ಕರೆದಿದ್ದಾರೆ'.[೨೩]

'ಹಸ್ತಪ್ರತಿಗಳ ಸಂಗ್ರಹ ಭಂಡಾರಗಳೆಲ್ಲ ವಿವರಣಾತ್ಮಕ ಸೂಚಿಗಳು ಸಿದ್ಧಪಡಿಸಿ ಪ್ರಕಟಿಸುತ್ತಿವೆ. ಕನ್ನಡ ಹಸ್ತಪ್ರತಿಗಳ ಸೂಚಿಗಳು ಪ್ರಕಟಿಸುವ ಮದರಾಸು ಪ್ರಾಚ್ಯ ಹಸ್ತಪ್ರತಿ ಭಂಡಾರ, ಮೈಸೂರು ವಿಶ್ವವಿದ್ಯಾನಿಲಯ, ಧಾರವಾಡ ವಿಶ್ವವಿದ್ಯಾಲಯ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ಹಾಗೇ ಅನೇಕ ಮಠಮಾನ್ಯಗಳು, ಸಂಘ-ಸಂಸ್ಥೆಗಳು ಹಸ್ತಪ್ರತಿಗಳ ವಿವರಣಾತ್ಮಕ ಸೂಚಿಗಳನ್ನು ಪ್ರಕಟಿಸಿವೆ. ಈ ಪ್ರಕಟಣೆಯನ್ನು ಎಂ.ಎಂ. ಕಲಬುರ್ಗಿಯವರು ಹೇಳಿದಂತೆ ಇಂದು ವ್ಯವಸ್ಥಿತ ರೀತಿಯಿಂದಾಗಿ ವಿವರಣಾತ್ಮಕ ಸೂಚಿ ಸಾಹಿತ್ಯಕ್ಕೆ ವಿಜ್ಞಾನದಿಂದ ಮಾರ್ಯದೆ ಪ್ರಾಪ್ತವಾಗಿದೆ'.[೨೪]

'ಹಸ್ತಪ್ರತಿಗಳ ಸೂಚೀಕರಣ ಬಹುಹಿಂದಿನಿಂದಲೂ ನಡೆದುಬಂದಿದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಬಾಡ್ಲೆಯನ್ ಗ್ರಂಥಾಲಯದಲ್ಲಿದ್ದ ಭಾರತೀಯ ಹಸ್ತಪ್ರತಿಗಳ ಸೂಚಿ ಯೊಂದನ್ನು ಥಿಯೋಡೂರ್ ಜಾಫ್ರೆಟ್ ಎಂಬ ಪಾಶ್ಚಾತ್ಯ ವಿದ್ವಾಂಸನು ಸಂಕಲಿಸಿ ೧೮೪೯ರಲ್ಲಿಯೇ ಪ್ರಕಟಿಸಿದ. ತದನಂತರ ಪ್ರಾಯ್ಡ್ ಕೀಲ್‌ಹಾರ್ನ್, ಜಾರ್ಜ್ ಬುಹ್ಲರ್, ಎ.ಸಿ.ಬರ್ನೆಲ್ ಮುಂತಾದವರು ಈ ಕೆಲಸ ಮುಂದೆ ಸಾಗಿಸಿಕೊಂಡು ಬಂದು ಭಾರತದಲ್ಲಿನ ಕೆಲವೊಂದು ಗ್ರಂಥಾಲಯಗಳಲ್ಲಿನ ಹಸ್ತಪ್ರತಿಗಳ ಸೂಚಿಗಳನ್ನು ಸಂಕಲಿಸಿ ಈ ಮಹಾಕಾರ್ಯಕ್ಕೆ ನಾಂದಿ ಹಾಡಿದರು. ಕೀಲ್‌ಹಾರ್ನ್ ಆಗಿನ ಮುಂಬೈ ಪ್ರಾಂತ್ಯದ ದಕ್ಷಿಣ ಹಾಗೂ ಮಧ್ಯಪ್ರಾಂತ್ಯದಲ್ಲಿನ ವಿಭಾಗದಲ್ಲಿದ್ದ ಖಾಸಗಿ ಹಸ್ತಪ್ರತಿಗಳ ಗ್ರಂಥಾಲಯಗಳ ಸೂಚಿಗಳನ್ನು ತಯಾರಿಸಿದರೆ ಬುಗ್ಗಿರ್ ಅವರು ಗುಜರಾತ್ ಸಿಂಧ ರಾಜಪುತ ಮುಂತಾವುಗಳಲ್ಲಿ ಸಂಗ್ರಹಿಸಿದ ಹಸ್ತಪ್ರತಿಗಳ ಸೂಚಿಗಳನ್ನು ಹಾಗೂ ಬರ್ನೆಲ್ ಅವರು ತಂಜಾವೂರು ಅರಮನೆಯಲ್ಲಿದ್ದ ಹಸ್ತಪ್ರತಿಗಳ ಸೂಚಿಗಳನ್ನು ತಯಾರಿಸಿದರು. ಈ ದಿಸೆಯಲ್ಲಿ ಕೃಷಿ ಮಾಡಿದ ಪ್ರಪ್ರಥಮ ಭಾರತೀಯರೆಂದರೆ ರಾಮಕೃಷ್ಣ ಗೋಪಾಳ ಭಂಡಾರಕರ ಶಾಂಪ್ರಸಾದ್‌ಶಾಸ್ತ್ರಿ, ನ್ಯಾಯಬೂಪ ಕುಂಜಟಿಹಾರಿ ಮುಂತಾದವರು ಎಂದು ಕೆ.ಎಸ್. ದೇಶಪಾಂಡೆ ಅವರು ಹೇಳಿದ್ದಾರೆ'.[೨೫]

'ಕನ್ನಡ ಹಸ್ತಪ್ರತಿಗಳ ಸೂಚಿಪಟ್ಟಿಕೆಗಳು ಸೇರಿರುವ ಮೊಟ್ಟ ಮೊದಲ ವರ್ಣಾನಾತ್ಮಕ ಹಸ್ತಪ್ರತಿ ಸೂಚಿಯೆಂದರೆ ಎಚ್.ಎಲ್. ವಿಲ್ಸನ್ ಅವರು ೧೮೨೮ರಲ್ಲಿ ಸಂಪಾದಿಸಿರುವ A Descriptive Catalogue of the Orental Manuscripts Vol.I, ಎಂಬುದಾಗಿದೆ. ಇದರಲ್ಲಿ ೧೮೨ ಕನ್ನಡ, ೧೫೨ ಕನ್ನಡ ಕೃತಿಗಳ ವಿವರವಿದೆಯೆಂದು ಎಚ್.ದೇವಿರಪ್ಪನವರು ತಿಳಿಸಿರು ವುದನ್ನು ಎಸ್. ಶಿವಣ್ಣನವರು ಉಲ್ಲೇಖಿಸಿದ್ದಾರೆ.[೨೬] ಇದು ಮೆಕೆಂಜಿ ಅವರು

ಸಂಗ್ರಹಿಸಿದ ಹಸ್ತಪ್ರತಿಗಳ ಸೂಚಿಯಾಗಿದೆ. ಹೀಗೆ ಕನ್ನಡ ಹಸ್ತಪ್ರತಿಗಳ ಸೂಚಿಪಟ್ಟಿಕೆಗಳನ್ನು ಒಳಗೊಂಡ ಮತ್ತು ಕೆಲವು ಸೂಚಿಗಳು ಪ್ರಕಟವಾದರೂ ಕನ್ನಡಕ್ಕೆ ಮೀಸಲಾಗಿ ಪ್ರಕಟಗೊಂಡ ವರ್ಣಾನಾತ್ಮಕ ಸೂಚಿಗಳೆಂದರೆ ಮದರಾಸು ಸರ್ಕಾರಿ ಪ್ರಾಚ್ಯಕೋಶಾಗಾರದಿಂದ ಸಿದ್ಧವಾಗಿದೆ. ಈ ಸಂಸ್ಥೆಯು ೧೯೩೪ರಷ್ಟು ಹಿಂದೆಯೇ ಪ್ರಕಟಿಸಿ ಉಳಿದ ವಿಶ್ವವಿದ್ಯಾಲಯಗಳಿಗೆ ಸಂಸ್ಥೆಗಳಿಗೆ ಮಾದರಿಯಾಯಿತು. ಈ ಸೂಚಿಗಳಲ್ಲಿ ಕ್ರಮಾಂಕ, ಶಿರೋನಾಮೆ, ವಸ್ತು, ಆಕಾರ, ಪತ್ರಸಂಖ್ಯೆ, ಸಾಲುಗಳು, ಲಿಪಿ ಸ್ಥಿತಿ ಬದಲಾವಣೆ, ಪೂರ್ಣ ವಿವರಣೆ, ಪ್ರಾರಂಭ, ಕೊನೆ, ಸಮಾಪ್ತಿ, ವಚನ ಮೊದಲಾದ ಮಾಹಿತಿಯನ್ನು ನೀಡಲಾಗಿದೆ. ಅನೇಕ ವಿಶ್ವವಿದ್ಯಾಲಯಗಳು ಸೂಚಿ ರಚನೆಯ ಕಾರ್ಯದಲ್ಲಿ ಮುಂದಾಗಿರುವುದನ್ನು ನೋಡಬಹುದಾಗಿದೆ.

'ವಿಶ್ವವಿದ್ಯಾಲಯಗಳು ಪ್ರಕಟಿಸಿರುವ ಸೂಚಿಗಳು. ಉದಾಹರಣೆಗೆ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಕಟಿಸಿರುವ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿಗಳು, ಸರಕಾರಿ ಸಂಸ್ಥೆಗಳು ಪ್ರಕಟಿಸಿರುವ ಸೂಚಿಗಳು ಇವೆ. ಉದಾಹರಣೆಗೆ ಮ್ಯಾನ್ಸ್‌ಸ್ಕ್ರಿಪ್ಟ್ ಇನ್ ದಿ ಗರ್ವನ್‌ಮೆಂಟ್ ಓರಿಯಂಟೆಲ್ ಮ್ಯಾನ್ಸ್‌ಸ್ಕ್ರಿಪ್ಟ್ ಲೈಬ್ರರಿ, ಮದ್ರಾಸ್ ಸಂಪುಟಗಳನ್ನು ಕಾಣಬಹುದು. ಹೀಗೆ ವ್ಯಕ್ತಿ ಖಾಸಗಿ ಸರಕಾರಿ ವಿಶ್ವವಿದ್ಯಾಲಯಗಳ ಸೂಚಿಗಳು ೪ ಬಗೆಯಾಗಿವೆ ಎಂಬ ಸಂಗತಿಯನ್ನು ಗಮನಿಸುವುದು ಮುಖ್ಯ. ಏಕೆಂದರೆ ನಮ್ಮಲ್ಲಿ ಸೂಚಿ ಇತಿಹಾಸವನ್ನು ರಚಿಸುವಲ್ಲಿ ಈ ಎಲ್ಲ ಬಗೆಯವರೂ ಮುಖ್ಯ ಪಾತ್ರವಹಿಸಿದ್ದಾರೆ ಮತ್ತು ಸೂಚೀಕರಣ ಪದ್ಧತಿಯನ್ನು ಇವರು ತಮ್ಮ ತಮ್ಮದೇ ಆದ ಕ್ರಮವನ್ನು ಅನುಸರಿಸಿದ್ದಾರೆ. ಹಸ್ತಪ್ರತಿಗಳ ಸೂಚಿ ಸಿದ್ಧತೆ ಎರಡು ಬಗೆಯಲ್ಲಿ ನಡೆಯುತ್ತದೆ. ಒಂದು ಹಸ್ತಪ್ರತಿಗಳನ್ನು ಸಂಗ್ರಹಿಸಿ ತಂದು ಒಂದೆಡೆ ಭಂಡಾರದ ಸ್ಥಾಪನೆ ಮಾಡಿದ ಕಡೆ ನಡೆಯುತ್ತದೆ. ಇನ್ನೊಂದು ಹಸ್ತಪ್ರತಿಗಳು ಖಾಸಗಿಯಲ್ಲಿ ಇದ್ದಕಡೆ ಕೆಲವೊಮ್ಮೆ ಸಂಗ್ರಹಕಾರರು ತಾವೇ ಸೂಚಿ ಮಾಡಿಕೊಳ್ಳುವುದು ಉಂಟು. ಮತ್ತೆ ಕೆಲವೆಡೆ ಮಾಡಲು ಪ್ರತ್ಯೇಕವಾದ ಸೂಚೀಕಾರರ ಇರುತ್ತಾರೆ. ಲಿಪಿಕಾರರು ಇದ್ದಂತೆ ವ್ಯವಸ್ಥಿತ ಪುಸ್ತಕ ಭಂಡಾರಗಳಲ್ಲಿ ಪ್ರತ್ಯೇಕವಾಗಿ ಸೂಚಿಕಾರರು ಇರುತ್ತಾರೆ. ಲಿಪಿಕಾರರು ಇದ್ದಂತೆ ವ್ಯವಸ್ಥಿತ ಪುಸ್ತಕ ಭಂಡಾರಗಳಲ್ಲಿ ಸೂಚಿಕರಣಕ್ಕೆ ಪ್ರತ್ಯೇಕ ಸಿಬ್ಬಂದಿಯೇ ಇರುತ್ತಾರೆ. ಆಧುನಿಕ ಸೂಚಿ ಪದ್ಧತಿ ಸಂಕೀರ್ಣವಾಗಿದ್ದು ಅದಕ್ಕೆ ತರಬೇತಿ ಬೇಕಾಗುತ್ತದೆ. ಒಂದು ಪುಸ್ತಕ ಯಾವ ವರ್ಗಕ್ಕೆ ಸೇರುತ್ತದೆ ಎಂಬುದನ್ನು ನಿರ್ಧರಿಸುವುದು ಸುಲಭವಲ್ಲ. ಅಚ್ಚಿನ ಪುಸ್ತಕಗಳ ಸೂಚಿ ತಯಾರಿಕೆಯಗೂ ಹಸ್ತಪ್ರತಿ ಸೂಚಿ ತಯಾರಿಕೆಗೂ ಬಹಳ ವ್ಯತ್ಯಾಸಗಳಿವೆ. ಈಚಿನ ಅಚ್ಚಿನ ಗ್ರಂಥಗಳ ಸೂಚಿ ತಯಾರಿಸಲು ಭಾಷೆ ಬರಬೇಕಿಲ್ಲ. ಆಧುನಿಕ ವ್ಯವಸ್ಥೆಯಲ್ಲಿ ಪ್ರತಿ ಪುಸ್ತಕದ ವಿವರಗಳನ್ನು ಆಯಾ ಭಾಷೆಗಳಲ್ಲಿ ಇರುವುದರ ಜೊತೆಗೆ ಇಂಗ್ಲಿಷ್‌ನಲ್ಲಿ ಇರುತ್ತದೆ. ಹೀಗಿದ್ದಾಗ ಭಾಷೆ ಕಷ್ಟವಿಲ್ಲ. ಮತ್ತೆ ಕೃತಿಸೂಚಿ ಲೇಖಕರಸೂಚಿ

ವಿಷಯಸೂಚಿ ಎಂದು ಅಚ್ಚಿನ ಗ್ರಂಥಗಳ ಸೂಚಿಗಳನ್ನು ಸಿದ್ಧಪಡಿಸುತ್ತಾರೆ. ಆದರೆ ಹಸ್ತಪ್ರತಿ ಸೂಚಿಗಳು ಬಹುತೇಕ ಅನೇಕ ಸೂಚಿಗಳಲ್ಲಿ ಅಕಾರಾದಿಯಾಗಿ ಅಥವಾ ವಿಷಯನುಸಾರ ಹಸ್ತಪ್ರತಿಸೂಚಿ ಇರುತ್ತದೆ. ಲೇಖಕಸೂಚಿ, ಕೃತಿಸೂಚಿಗಳು ಅಕಾರಾದಿ ಇರುವುದಿಲ್ಲ. ಉದಾಹರಣೆ ಕನ್ನಡ ಹಸ್ತಪ್ರತಿಗಳ ವರ್ಣಾನಾತ್ಮಕ ಸೂಚಿ ಸಂಪುಟ[೨೭] ಅಕಾರಾದಿ ಕ್ರಮದಲ್ಲಿ ಹಸ್ತಪ್ರತಿಗಳ ವಿವರಗಳು ಮಾತ್ರ ಇದೆ. ಆದರೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿಯಲ್ಲಿ ಗ್ರಂಥಗಳ ವಿವರಣಾತ್ಮಕ ಸೂಚಿಯನ್ನು ಅಕಾರಾದಿಯಾಗಿ ಕೊಟ್ಟ ಮೇಲೆ ಅನುಬಂಧವಾಗಿ ಕವಿಸೂಚಿ, ಹಸ್ತಪ್ರತಿ ಲಿಪಿಕಾರರ ಸೂಚಿ, ಲಿಪಿಕಾರರ ಸ್ಥಳನಾಮ ಸೂಚಿ, ಹಸ್ತಪ್ರತಿ ದಾನಿಗಳ ಸೂಚಿ ಕೊಡಲಾಗಿದೆ. ಇವುಗಳ ಜೊತೆಗೆ ವಿಷಯದ ಕೃತಿಸೂಚಿಯ ಪಟ್ಟಿಯನ್ನು ಅನುಕ್ತ ಕವಿಚರಿತೆ ಗ್ರಂಥಗಳ ಸೂಚಿ ಇತ್ಯಾದಿ ಕೊಟ್ಟಿದ್ದರೆ ಉಪಯುಕ್ತ ವೆನಿಸುತ್ತಿತ್ತು. ಕನ್ನಡ ಸಂಶೋಧನ ಸಂಸ್ಥೆಯ ಹಸ್ತಪ್ರತಿಗಳಲ್ಲಿ ಲೇಖಕರ ಸೂಚಿ ಮತ್ತು ವಿಷಯವಾರು ಗ್ರಂಥ ಸೂಚಿ ಕೊಟ್ಟಿರುವುದು ಉಪಯುಕ್ತವಾಗಿದೆ. ಕನ್ನಡ ಅಧ್ಯಯನ ಪೀಠದ ಸೂಚಿಗಳಲ್ಲಿ ಇವಾವುವು ಇಲ್ಲ. ಕೇವಲ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯಷ್ಟೆ ಇದೆ. ಇವುಗಳನ್ನು ಕಂಡಾಗ ಆಧುನಿಕ ಹಸ್ತಪ್ರತಿ ಭಂಡಾರಗಳು ಸೂಚಿ ರಚನೆಯನ್ನು ಒಂದು ಶಿಸ್ತಾಗಿ ರೂಢಿಸಿವೆಯಾದರೂ ಈ ಸೂಚಿ ತಯಾರಿಕೆಯಲ್ಲಿ ಒಂದೊಂದು ಸಂಸ್ಥೆ ಒಂದೊಂದು ರೀತಿಯ ಕ್ರಮವನ್ನು ಅನುಸರಿಸಿದೆ ಎಂಬ ಮಾತು ನಿಜ.

ಪ್ರಸ್ತುತ ಹಸ್ತಪ್ರತಿ ಸೂಚಿಗಳು ವಿಷಯ ಮುಖ್ಯವಾಗಿರುವುದರಿಂದ ಅಚ್ಚಿನ ಪುಸ್ತಕಗಳ ಸೂಚಿ ಬಗ್ಗೆ ಇಲ್ಲಿ ಹೆಚ್ಚಾಗಿ ಪ್ರಸ್ತಾಪ ಮಾಡುವಂತಿಲ್ಲ. ಅಚ್ಚಿನ ಪುಸ್ತಕಗಳ ಸಂಗ್ರಹದ ರೀತಿ ಬೇರೆ ಹಸ್ತಪ್ರತಿ ಸಂಗ್ರಹದ ರೀತಿ ಬೇರೆ ಬೇರೆ ಅಚ್ಚಿನ ಪ್ರತಿಗಳು ದೊರೆಯುವ ಬಗ್ಗೆ ಸಾಕಷ್ಟು ಮಾಹಿತಿ ಪತ್ರಿಕೆಗಳಲ್ಲಿ ಪ್ರಚಾರ, ಪ್ರಕಟಣೆಗಳಲ್ಲಿ ಮಾರಾಟ ಅಂಗಡಿಗಳಲ್ಲಿ ಪುಸ್ತಕಗಳಿಗಾಗಿ ಇರುವ ನಿಯತಕಾಲಿಕೆಗಳಲ್ಲಿ ಸಿಗುತ್ತವೆ. ಆದರೆ ಹಸ್ತಪ್ರತಿ ವಿಚಾರ ಆಗಲ್ಲ. ಸೂಚಿ ತಯಾರಿಕೆಗೆ ಹಸ್ತಪ್ರತಿ ಸಂಗ್ರಹಿಸಿದ ಭಂಡಾರಗಳ ನೆರವು ಬೇಕು. ಇಲ್ಲವೇ ಖಾಸಗಿ ವ್ಯಕ್ತಿಗಳ ಸಂಗ್ರಹಣದ ನೆರವು ಬೇಕು. ವ್ಯಕ್ತಿ ಮಠಗಳಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಇರುವ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ ವ್ಯವಸ್ಥಿತವಾಗಿ ಜೋಡಣೆ ಹಸ್ತಪ್ರತಿ ಸೂಚಿ ತಯಾರಿಕೆಗೆ ಆಧಾರಪ್ರಾಯವಾದ ಆಕರಗಳು ಬೇಕು. ಸಂಗ್ರಹ ಅತಿ ಮುಖ್ಯವಾದುದು. ಕ್ಷೇತ್ರಕಾರ್ಯಕ್ಕೂ ಸೂಚೀಕರಣಕ್ಕೂ ಸಂಬಂಧಿವಿದೆ. ಎಷ್ಟೋ ವೇಳೆ ಖಾಸಗಿ ವ್ಯಕ್ತಿಗಳು ಹಸ್ತಪ್ರತಿಗಳನ್ನು ಕೊಡುವುದಿಲ್ಲ. ಅಲ್ಲಿಯೇ ಸೂಚಿಕರಣ ನಡೆಸಬೇಕಾಗುತ್ತದೆ. ಕ್ಷೇತ್ರಕಾರ್ಯದ ಬಗ್ಗೆ ಕ್ಷೇತ್ರಕಾರ್ಯಕರ್ತ ಹಸ್ತಪ್ರತಿ ಮತ್ತು ಹಸ್ತಪ್ರತಿ ಒಡೆಯ ಎಂಬ ೩ ಘಟಕಗಳ ಬಗ್ಗೆ ಎಂ.ಎಂ. ಕಲಬುರ್ಗಿ ಅವರು ಕನ್ನಡ ಹಸ್ತಪ್ರತಿಶಾಸ್ತ್ರ ಗ್ರಂಥಗಳಲ್ಲಿ ವಿಸ್ತರವಾಗಿ ವಿವರಿಸಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಹಸ್ತಪ್ರತಿಗಳ ಸೂಚಿಕರಣಕ್ಕೆ ಮುಖ್ಯ ಆಧಾರ.

ಈ ಗ್ರಂಥಗಳಲ್ಲಿ ಸಾಂದರ್ಭಿಕವಾಗಿ ಸೂಚಿ ವಿಚಾರಗಳ ಪ್ರಾಸ್ತಾಪಿತವಾಯಿತು. ಅನಂತರ ಗ್ರಂಥಸಂಪಾದನೆಯ ಕ್ರಮವಾಗಿ ಹಾಗೂ ಸ್ವತಂತ್ರವಾಗಿ ಹಸ್ತಪ್ರತಿಶಾಸ್ತ್ರವೆಂಬ ಪ್ರತ್ಯೇಕಶಾಸ್ತ್ರ ರೂಪುಗೊಳ್ಳತೊಡಗಿತ್ತು. ಈ ಕ್ಷೇತ್ರದ ಬಿ.ಎಂ.ಶ್ರೀ.ಸ್ಮಾರಕ ಸಂಶೋಧನ ಸಂಸ್ಥೆ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗ ವಿಚಾರ ಗೋಷ್ಠಿ, ಗ್ರಂಥ ಪ್ರಕಟಣೆಗಳ ಮೂಲಕ ಒಂದು ನೆಲಗಟ್ಟನ್ನು ರೂಢಿಸುವುದು ಇದರ ಜತೆಗೆ ಹಸ್ತಪ್ರತಿಶಾಸ್ತ್ರದ ಗ್ರಂಥವನ್ನು ಎಂ.ಎಂ. ಕಲಬುರ್ಗಿ ಅವರು ಎಚ್.ದೇವಿರಪ್ಪ ಕನ್ನಡ ಹಸ್ತಪ್ರತಿಗಳ ಇತಿಹಾಸ, ಬಿ.ಎಸ್. ಸಣ್ಣಯ್ಯ ಅವರು ಹಸ್ತಪ್ರತಿಶಾಸ್ತ್ರದ ಪರಿಚಯವನ್ನು ಎಚ್.ಎಲ್.ಎನ್. ಭಾರತಿ ಅಂಗೈ ಗಾತ್ರದ ಪುಟ್ಟ ಗ್ರಂಥ ಪ್ರಾಚೀನ ಹಸ್ತಪ್ರತಿಗಳು, ಹಸ್ತಪ್ರತಿಶಾಸ್ತ್ರ ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರುಗಳು ಬಹುಶಿಸ್ತೀಯ ಆಯಾಮಗಳ ಅಧ್ಯಯನ ನಡೆಸಿ ಹಸ್ತಪ್ರತಿ ಅಧ್ಯಯನಕ್ಕೆ ಹೊಸ ಆಯಾಮ ತಂದುಕೊಟ್ಟರು. ಬಿ.ಎಂ.ಶ್ರೀ. ಸ್ಮಾರಕ ಸಂಸ್ಥೆ ಪ್ರಕಟಿಸಿದ ಪ್ರಕಟಣೆಗಳು ನಾ.ಗೀತಾಚಾರ್ಯ ಹಸ್ತಪ್ರತಿ ವಿವೇಚನೆ, ಹಂಪಿ ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ವ್ಯಾಸಂಗ ಗ್ರಂಥಮಾಲಿಕೆಗಳು, ಕನ್ನಡ ವಿಶ್ವವಿದ್ಯಾಲಯ ಪ್ರಾಧ್ಯಾಪಕರು ಪ್ರಕಟಣೆಗಳು ಹಸ್ತಪ್ರತಿಶಾಸ್ತ್ರದ ಪ್ರತ್ಯೇಕವಾದ ಭದ್ರವಾದ ಅಡಿಪಾಯ ಹಾಕುವಲ್ಲಿ ಮಹತ್ತರ ಪಾತ್ರವಹಿಸಿದ್ದನ್ನು ಗಮನಿಸಬಹುದಾಗಿದೆ.

ಹಸ್ತಪ್ರತಿ ಭಂಡಾರಗಳ ಅಧ್ಯಯನ ಮಾಡುತ್ತ ಗಮನಿಸಿದಾಗ ಹೀಗೆ ಸಿದ್ಧವಾದ ಸೂಚಿಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿದಾಗ ಹಸ್ತಪ್ರತಿ ಸೂಚಿಗಳ ರಚನೆಯಲ್ಲಿ ಸಾಕಷ್ಟು ಸುಧಾರಣೆಗಳಾಗಬೇಕು ಎಂಬ ಅಂಶ ಕಂಡುಬರುತ್ತದೆ. ಮೊದಲನೆಯದಾಗಿ ಎಲ್ಲಾ ಗ್ರಂಥ ಭಂಡಾರಗಳ ಸೂಚಿಗಳ ಪೂರ್ಣವಾಗಿ ಪ್ರಕಟವಾಗಬೇಕು. ಆಯಾ ಭಂಡಾರಗಳಲ್ಲಿರುವ ಎಲ್ಲ ಹಸ್ತಪ್ರತಿಗಳ ವಿವರಗಳು ದಾಖಲಾಗಿ ಅಚ್ಚಾಗಬೇಕು. ಕಾಲಕಾಲಕ್ಕೆ ಹಸ್ತಪ್ರತಿ ಭಂಡಾರಗಳಿಗೆ ಸೇರುವ ತಾಳೆಗರಿ ಕಾಗದ ಪ್ರತಿಗಳಿಗೆ ದಾಖಲೆಯೂ ಅಚ್ಚಾಗಿ ಓದುಗರ ಕೈಗೆ ಸೇರಬೇಕು. ಈಗ ಪೂರ್ಣವಾಗಿ ಹಸ್ತಪ್ರತಿ ಭಂಡಾರದಲ್ಲಿ ಇರುವ ವರ್ಣಾನಾತ್ಮಕ ಸೂಚಿಯಲ್ಲಿ ಸೂಚಿತ ವಾಗಿಲ್ಲ ಎನ್ನಬಹುದು. ಏಕೆಂದರೆ ಅನೇಕ ಕಡೆ ಸೂಚಿ ತಯಾರಿಕೆ ಪ್ರಕಟಣೆಗೆ ವಿಶೇಷ ಪ್ರಾಶಸ್ತ್ಯ ನೀಡಲ್ಲ. ಇದಕ್ಕಾಗಿ ಪ್ರತ್ಯೇಕ ಸಿಬ್ಬಂದಿ ನಿಯೋಜನೆ ಇಲ್ಲ. ಇಂತಹ ಒಂದು ಕಾರ್ಯ ಜರೂರು. ಆದರೆ ನಮ್ಮ ಸಂಸ್ಕೃತಿಯ ಅಧ್ಯಯನಕ್ಕೆ ಹೊಸ ಆಯಾಮ ದೊರಕುತ್ತದೆ.

ಇನ್ನು ಪಿವಿಧ ಹಸ್ತಪ್ರತಿ ಭಂಡಾರಗಳು ಸಿದ್ಧಪಡಿಸಿರುವ ಸೂಚಿಗಳ ತೌಲನಿಕ ಅಧ್ಯಯನ ನಡೆದಿಲ್ಲ. ಅದೂ ದೃಷ್ಟಿಯಿಂದ ಗಮನಿಸುವಂತಹ ಸಂಗತಿಯಾಗಿದೆ. ಕರ್ನಟಕದಲ್ಲಿ ಹಸ್ತಪ್ರತಿ ಸೂಚಿಗಳನ್ನು ಸಮಗ್ರ ಸೂಚಿ ಸಂಪುಟಗಳನ್ನು ಮಾಡುವ ಅಗತ್ಯವಿದೆ ಎಂಬುದನ್ನು ಈ ಅಧ್ಯಯನ ಚರ್ಚೆಯ ಮೂಲಕ ತಿಳಿದುಕೊಳ್ಳಲಾಗಿದೆ.

೪.೨ ಸಂಪಾದನರೂಪಿ ಅಧ್ಯಯನ

ಪ್ರತಿಯೊಂದು ಸಾಹಿತ್ಯ ಹಾಗೂ ಸಂಸ್ಕೃತಿಗೂ ಅದರದೇ ಆದ ಓದು ಮತ್ತು ಬದುಕಿನ ದಾರಿಗಳಿರುತ್ತವೆ, ಅರಿವಿನ ನೆಲೆಗಳಿರುತ್ತದೆ. ಈ ಕ್ರಿಯೆಯು ಆಯಾ ಸಮಾಜದ ಒಳಗೆ ಆಗುತ್ತಿರುವ ಹಲವು ಸ್ಥಿತ್ಯಂತರಗಳಿಗೆ ಹಿಡಿದ ಕನ್ನಡಿಯಾಗುತ್ತದೆ. ಅದು ಅಲ್ಲದೆ ಒಂದೇ ಕಾಲದ ಹಲವು ಅಭಿರುಚಿಯ ಓದುಗರು ಇರುವುದರಿಂದ ಏಕಕಾಲಕ್ಕೆ ಅನೇಕ ಓದು ವಾಗ್ವಾದ ಅನುಸಂಧಾನಕ್ಕೆ ಆ ಆಕೃತಿ ತೆರೆದುಕೊಳ್ಳುತ್ತದೆ. ಈ ಪಠ್ಯವನ್ನು ಓದುವವರಿಗೂ ಕೇಳಿದವರಿಗೂ ಕೇಳಿಸಿದವರಿಗೂ ಸನ್ಮಂಗಲವಾಗಲಿ ಎನ್ನುವ ಹಸ್ತಪ್ರತಿಯೊಂದರ ಉಲ್ಲೇಖದಂತೆ ಕನ್ನಡ ಪಠ್ಯಗಳು ಹೀಗೆ ಹಲವು ಅನುಸಂಧಾನಗಳಿಂದ ಜೀವಂತವಾಗಿ ಉಳಿದುಬಂದಿವೆ. ಹೀಗೆ ತೋಂಡಿ ರೂಪದಲ್ಲಿರುವ ಕನ್ನಡ ಕಾವ್ಯವನ್ನು ಲಿಪಿ ಸಂಸ್ಕೃತಿ ಆಧಾರಿತ ಸಂಸ್ಕೃತ ಮತ್ತು ಲ್ಯಾಟಿನ್ ಭಾಷೆಯ ನಿಯಮಗಳೊಳಗೆ ವಿಧಿಬದ್ಧಗೊಳಿಸುವುದು ಎಷ್ಟು ಸರಿ? ಕನ್ನಡ ಗ್ರಂಥಸಂಪಾದನೆಯು ರೂಢಿಸಿಕೊಂಡ ಇಂಥ ಎಂಪಿರಿಕಲ್ ಮಾದರಿಗಳು ಜಾತಿ ಅಥವಾ ಮತದ ಹಂಗಿನಲ್ಲಿ ಪ್ರಾಚೀನ ಪಠ್ಯಗಳನ್ನು ಶೋಧಿಸಿ ಸಂಗ್ರಹಿಸಿ ಪ್ರಕಟಿಸುವ ಕೆಲಸವನ್ನು ವರ್ತಮಾನದ ಸ್ಥಿತಿಗತಿಗಳನ್ನರಿಯಲು ಅನಿವಾರ್ಯವೆಂಬಂತೆ ಚಿತ್ರಿಸಲಾಯಿತು.

ಕನ್ನಡ ಗ್ರಂಥಸಂಪಾದನೆಯ ವಿಧಾನದಲ್ಲಿರುವ ಬಹುದೊಡ್ಡ ಕೊರತೆ ಎಂದರೆ ಗದ್ಯಾತ್ಮಕ ಅಥವಾ ಅದಕ್ಕೂ ಭಿನ್ನವಾದ ಅಭಿವ್ಯಕ್ತಿ ವಿಧಾನವನ್ನು ಅನುಸಂಧಾನ ಮಾಡುವ ಶಾಸ್ತ್ರ ತಿಳುವಳಿಕೆಗಳ ಸಮಸ್ಯೆ. ವಿಚಿತ್ರವೆಂದರೆ ಇದುವರೆಗೂ ನಡೆದ ಅಧ್ಯಯನಗಳ ರಚನೆಯೊಂದರ ಚೌಕಟ್ಟನ್ನು ಹಾಗೂ ಶೈಲಿಯನ್ನು ರೂಪಿಸಬಹುದಾದ ಒತ್ತಾಸೆಗಳನ್ನು ಬದಿಗೊತ್ತಿ ಆ ಕಾವ್ಯ ಅಥವಾ ಕವಿಯ ಸಂದೇಶವೇನು ಎನ್ನುವ ಚರ್ಚೆಗಳನ್ನು ಹೆಚ್ಚು ಬಳಸಿವೆ. ಇದರಿಂದ ದೇಸಿ ಮಟ್ಟುಗಳು ಎಂದು ಕರೆಸಿಕೊಳ್ಳುವ ಷಟ್ಪದಿ, ವಚನ, ರಗಳೆ, ಕೀರ್ತನೆ, ತ್ರಿಪದಿ ಹಾಗೂ ಸಾಂಗತ್ಯಗಳನ್ನು ಅನುಸಂಧಾನ ಮಾಡುವ ದಾರಿಯಿಂದ ವಂಚಿತವಾಗಿ ಏಕರೂಪಾತ್ಮಕವೂ ಅನ್ಯವೂ ಆದ ಸಂಪಾದನೆ ಮತ್ತು ವಿಶ್ಲೇಷಣೆ ಮಾದರಿಗಳನ್ನೇ ನೆಚ್ಚಿಕೊಂಡು ಬರಲಾಗಿದೆ. ಅಭಿವ್ಯಕ್ತಿ ವಿಧಾನಕ್ಕೆ ಸಂಬಂಧಿಸಿದ ನಮ್ಮ ಧೋರಣೆಗಳು ಅಷ್ಟರಮಟ್ಟಿಗೆ ಅಸಹಜವಾಗಿದೆ. ಅವು ಕೃತಿಕಾರ ಅವನ ಅಭಿವ್ಯಕ್ತಿ ಸ್ವರೂಪಗಳಲ್ಲಿನ ತಾರತಮ್ಯಗಳ ಶ್ರೇಣೀಕರಣಗಳ ಬಗ್ಗೆ ಚರ್ಚಿಸುತ್ತವೆ. ಕೃತಿಯ ತಿರುಳಿನಿಂದ ಹುಟ್ಟಿಬರುವ ಅನುಸಂಧಾನದ ಮಾರ್ಗಗಳು ಮಾತ್ರ ಇಂಥ ಅಸಹಜತೆಯ ಅಪಾಯದಿಂದ ನಮ್ಮನ್ನು ಪರಿಗಣಿಸಬಲ್ಲವು. ಉದಾಹರಣೆಯಾಗಿ ನೋಡಿದಾಗ ಸರ್ವಜ್ಞನ ವಚನಗಳ ಸಂಪಾದನೆ ಹಾಗೂ ಪರಿಷ್ಕರಣೆ, ರಾಮಚಂದ್ರ ಚರಿತೆ ಪುರಾಣ, ಸಂಪಾದನೆ, ಕೇಶಿರಾಜನ ಶಬ್ದಮಣಿದರ್ಪಣ ಸಂಪಾದನೆ, ಪರಿಷ್ಕರಣೆ, ಪ್ರಸ್ತಾವನೆ, ಗಮನಿಸಿದಾಗ ನಮಗೆ ಅನೇಕ ಮಾಹಿತಿಗಳು ದೊರಕುತ್ತವೆ. ಸಂಪಾದಕರು ಕೇವಲ ಕವಿ

ಕೇಂದ್ರಿತ ಮತಕೇಂದ್ರಿತವಾದ ಸಂಪಾದನೆಯ ನಿಟ್ಟಿನಲ್ಲಿ ಸಂಪಾದಿಸಿ ಕೃತಿಯ ಸಂಪಾದನೆಯ ಸಂದರ್ಭದಲ್ಲಿ ಕೃತಿಯ ಆಯಾಮಗಳನ್ನು ಗೌಣಮಾಡಿ ತಮಗೆ ಬೇಕಾದ ಬಗೆಯಲ್ಲಿ ಸಂಪಾದನೆ ಮಾಡಿರುವುದನ್ನು ನಾವು ಆ ಕೃತಿಗಳ ಪ್ರಸ್ತಾವನೆ, ಉನ್ನತ ವಿಮರ್ಶೆಯ ಬರಹಗಳಲ್ಲಿ ನೋಡಬಹುದು. ಉದಾಹರಣೆಯಾಗಿ ಗದಾಯುದ್ಧ ಕುರಿತು ಈವರೆಗೂ ಬಂದ ಸಂಕಲನಗಳ ಮತ್ತು ವ್ಯಾಖ್ಯಾನಗಳು ಇವನ್ನು ವೀರಯುಗದ ವೀರಮೌಲ್ಯ ಕೃತಿಯಾಗಿ ಅವು ಅನುಮೋದಿಸುತ್ತವೆ. ಆದರೆ ಗದಾಯುದ್ಧ ಪಠ್ಯ, ಪಠ್ಯದೊಳಗೆ ಇರುವ ಮತ್ತೊಂದು ಪಠ್ಯವನ್ನು ಇವು ನೋಡುವುದೇ ಇಲ್ಲ. ದುರ್ಯೋಧನನ ಮಾನವ ಸಹಜ ಅಂತಃಕರಣ, ಹತಾಶೆ, ಪ್ರೀತಿ, ವಿಶ್ವಾಸ, ದುಃಖಗಳನ್ನು ಗಾಂಧಾರಿಯ ಯುದ್ಧವಿರೋಧಿ ಶಾಂತಿ ಪ್ರಕ್ರಿಯ ನೆಲೆಗಳನ್ನು ಮರೆಮಾಚಿ ದುರ್ಯೋಧನನ ಯುದ್ದಕೋರ ಮತ್ತು ಕ್ಷೀಣಗೊಂಡ ಸಾರ್ವಭೌಮತ್ವದ ಸ್ವಭಾವವನ್ನಷ್ಟೇ ಬೆಳೆಸುತ್ತೇವೆ. ಕೃತಿಯೊಳಗಿನ ಬಹುವಿಧ ಸಾಧ್ಯತೆಗಳನ್ನು ನಿರಾಕರಿಸಿ ತನಗೆ ಬೇಕಾದ ಯಾವುದೇ ಒಂದು ಬಗೆಯ ಸಾಧ್ಯತೆಯನ್ನು ನಮ್ಮ ಸಂಕಲನಕಾರರು ಸಂಪಾದನಾಕಾರರು ಕಾಣಿಸುತ್ತಾ ಬಂದಿ ದ್ದಾರೆ. ಹೀಗೆ ಕೃತಿಯೊಂದರ ಪ್ರಕಟಣೆ ಪರಿಷ್ಕರಣೆಯ ಹಿಂದೆ ಸಂಶೋಧನೆಗಿಂತ ಸಂಪಾದಕರ ಹಿರಿಮೆಯನ್ನೇ ಮೆರೆದದ್ದು ಕಂಡುಬರುತ್ತದೆ.

ಕಬ್ಬಿಗರಕಾವ್ಯ ಕೃತಿಯನ್ನು ಇಲ್ಲಿ ನೆನೆಯಬಹುದು. ಒಂದು ದೇಶಭಾಷಾ ನಿರ್ಮಾಣದ ಕೃತಿಗಳನ್ನು ಅಂತಹ ಮುಂಚೂಣಿಯ ಚರ್ಚೆಗೆ ಬರದೆ ನಿರ್ದಿಷ್ಟ ಮತಧರ್ಮ ಉದ್ದೇಶ ಅಥವಾ ಮನೋಧರ್ಮವನ್ನು ಹೊಂದಿದ ಕೃತಿಗಳು ಹೆಚ್ಚು ಚರ್ಚಿತವಾಗಿವೆ. ಇದಕ್ಕೆ ಕೃತಿಗಿಂತ ಸಂಕಲನಕಾರರ ವ್ಯಾಖ್ಯಾನಕಾರರ ಮನೋಧರ್ಮಗಳ ಬಹುಮುಖ್ಯ ಕಾರಣಗಳಾಗಿವೆ ಎಂಬುದನ್ನು ಗಮನಿಸಬಹುದು.

ಉದಾಹರಣೆಯಾಗಿ 'ಸರ್ವಜ್ಞನ ವಚನಗಳ ಸಂಪಾದನೆ ಪರಿಷ್ಕರಣೆಯನ್ನು ನೋಡಿದಾಗ ಸರ್ವಜ್ಞನ ಪದಗಳನ್ನು ವಚನ ತ್ರಿಪದಿ ಪದ್ಯ ಎಂದು ಕರೆಯುವುದರಲ್ಲಿಯೇ ಒಂದು ನಿರ್ದಿಷ್ಟ ಶೈಕ್ಷಣಿಕ ಹಾಗೂ ಮತೀಯ ಉದ್ದೇಶಗಳಿರುವುದು ಸ್ಪಷ್ಟ. ಅವುಗಳನ್ನು ಸಂಗ್ರಹ ಸಂಪಾದನೆ, ವ್ಯಾಖ್ಯಾನ ಮಾಡಿದ ರೀತಿಯಲ್ಲಿ ಈ ನಿರ್ದಿಷ್ಟತೆಯನ್ನು ಕಾಣಬಹುದು. ಸರ್ವಜ್ಞನ ತ್ರಿಪದಿಗಳನ್ನು ಬರೆದುಳಿಸುವುದಕ್ಕೆ ಪ್ರಯತ್ನಪಟ್ಟವರಲ್ಲಿ ಹೆಚ್ಚಿನವರು ಜೈನರು, ಲಿಂಗಾಯಿತರು. ಜೈನರು ಬರೆದ ಹಸ್ತಪ್ರತಿಗಳಲ್ಲಿ ನೈತಿಕ ಪದ್ಯಗಳ ಕಡೆಗೂ, ಲಿಂಗಾಯಿತರು ಬರೆದ ಪ್ರತಿಗಳಲ್ಲಿ ಷಟ್ಸ್ಥಲಗಳ ಕಡೆಗೂ ವಿಶೇಷ ಒಲವಿದ್ದಂತೆ ತೋರುತ್ತದೆ'.[೨೮] 'ಸರ್ವಜ್ಞನ ವಚನಗಳನ್ನು ೩೩ ಪದ್ಧತಿಗಳಲ್ಲಿ ಗುಣವರ್ಗವೆಂಬ ವಿಭಾಗ ಕ್ರಮದಲ್ಲಿ ಸಂಪಾದಿಸಿದ ರೀತಿಯೊಳಗಡೆಯೇ ಚಾರಿತ್ರಿಕ ದೃಷ್ಟಿಕೋನವು ಅಡಕವಾಗಿದೆ. ಬಸವಣ್ಣ ಮೊದಲಾದ ಪ್ರಮುಖರ ಪ್ರಭಾವ

ಸರ್ವಜ್ಞನ ಮೇಲೆ ಬೀರಿದೆ ಎಂಬುದನ್ನು ಅವನ ಅನೇಕ ತ್ರಿಪದಿಗಳಲ್ಲಿ ತೋರಿಸಿಕೊಡುತ್ತದೆ'.[೫] ಎನ್ನುವಲ್ಲಿ ಸರ್ವಜ್ಞನನ್ನು ಸಾಂಸ್ಥೀಕರಿಸುವ ಗುಣಗಳನ್ನು ದಟ್ಟವಾಗಿ ಕಾಣಬಹುದು. "ಎಸ್.ಜಿ. ಸಿದ್ಧರಾಮಯ್ಯನವರು ಹೀಗೆ ನಿಯಮಗಳ ಬಂಧನಕ್ಕೊಳಗಾಗದ ಹಾಗೂ ಒಳಗಾದ ಸರ್ವಜ್ಞನನ್ನು ಎರಡು ಪರಿಭಾಷೆಗಳಲ್ಲಿ ಗುರುತಿಸುತ್ತಾರೆ. ಒಬ್ಬ ಜನರ ಬಾಯಲ್ಲಿ ಅನಾವರಣಗೊಂಡ ಸರ್ವಜ್ಞ, ಮತ್ತೊಬ್ಬ ವಿದ್ವಾಂಸರ ಸಂಪಾದಿತ ಕೃತಿಗಳಲ್ಲಿ ಆವರಣಗೊಂಡ ಸರ್ವಜ್ಞ, ಪರಂಪರೆಯ ಜೀವಧ್ವನಿಯಾಗಿ ಬಾಳಿದ ಸರ್ವಜ್ಞ ಅನಾವರಣಗೊಂಡ ಸರ್ವಜ್ಞನಾಗಿದ್ದಾನೆ. ನೆಲದ ಬದುಕಿನ ಸಂಕಟಗಳಿಗೆ ಧ್ವನಿಯಾಗಿ ಮಾನವೀಯ ಮೌಲ್ಯಗಳನ್ನು ಸಾರಿದವನು. ಮನುಷ್ಯ ಬದುಕನ್ನು ಏಕಮುಖವಾದ ಜಡ ಪರಿಕಲ್ಪನೆಯನ್ನಾಗಿ ನೋಡದೆ ಬದುಕಿನ ಎಲ್ಲ ವೈರುಧ್ಯಗಳನ್ನು ಮನುಷ್ಯನ ಓರೆಕೋರೆಗಳನ್ನು ಸಹಜವೆಂದು ಸ್ವೀಕರಿಸಿ ನಡೆದವನು. ಅದಕ್ಕಾಗಿ ಆಡು ನುಡಿಯನ್ನೇ ತ್ರಿಪದಿಗಳ ಭಾಷೆಯಾಗಿ ಪರಿವರ್ತಿಸಿದ ಹಾಗಾಗಿ ಅವನ ಪ್ರತಿ ರಚನೆಗಳ ಅನಾಮಿಕ ರಚನೆಗಳು ಅಥವಾ ಪ್ರಕ್ಷೇಪಗಳಾಗಿ ಕಾಣದೆ ಬದುಕಿನ ಮುಖ್ಯಧಾರೆಯಲ್ಲಿ ಕರಗಿ ಹೋದವು.

ಆವರಣಗೊಂಡ ಸರ್ವಜ್ಞ ಎಂದರೆ 'ನಿಯಮಬದ್ಧವಾದ ಪಾಂಡಿತ್ಯ ಪೂರ್ಣವೆನಿಸುವ ಶಾಸ್ತ್ರೀಯ ಸಂಗ್ರಹ ಮತ್ತು ಸಂಪಾದನೆಗಳಲ್ಲಿ ಹಾಗೂ ಸಂಪಾದಕರ ಪಾಂಥಿಕ ಆಶಯಗಳಲ್ಲಿ ಹುಗಿದು ಹೋದಂಥವು. ಈಗಾಗಲೇ ಚರ್ಚಿಸಿದಂತೆ ೧೮೬೬ ರಿಂದ ೨೦೧೩ರ ವರೆಗೆ ವಿವಿಧ ನೆಲೆಯಲ್ಲಿ ಸಂಗ್ರಹಗೊಂಡ ಸರ್ವಜ್ಞನ ಬದುಕು, ಬರಹ, ವಚನಗಳ ಸಂಖ್ಯೆ, ಅವುಗಳ ಬಹುಕರ್ತೃತ್ವವಾದ ಪ್ರಶ್ನೆಗಳನ್ನು ನೋಡಿದಾಗ ಸರ್ವಜ್ಞನ ವಚನಗಳ ಸಂಗ್ರಹ ಮತ್ತು ಸಂಪಾದನೆಯ ವಿಷಯದಲ್ಲಿ ವಿದ್ವಾಂಸರು ಗಾತ್ರ ಮತ್ತು ಸಂಖ್ಯಾ ಪಕ್ಷಪಾತಿಗಳಾಗಿದ್ದು ಕಾಣುತ್ತದೆ ಹೊರತು ಗುಣಪಕ್ಷಪಾತತನ ಕಾಣುವುದಿಲ್ಲ. ಅಂದರೆ ಕನ್ನಡದ ದೇಸಿ ತಿಳಿವನ್ನು ಸಂಸ್ಕೃತದ ತಿಳಿವಿಗೆ ಒತ್ತೆಯಿಟ್ಟು ಅದನ್ನು ಪಾಶ್ಚಾತ್ಯ ಮಿಷನರಿಗಳ ಮತ್ತು ವಿದ್ವಾಂಸರ ಕೆಲಸಗಳ ಮೂಲಕ ಮತ್ತು ಕಟ್ಟಿಕೊಳ್ಳುವ ಬಗೆ ಇಂಥವಲ್ಲಿ ಕಾಣುತ್ತದೆ. ಅಂದರೆ ಸಂಸ್ಕೃತ ಮತ್ತು ಲ್ಯಾಟೀನ್ ಚೌಕಟ್ಟುಗಳನ್ನೇ ಕನ್ನಡದ ಅಧ್ಯಯನ ವಿಧಾನಗಳನ್ನಾಗಿ ಬಳಸಲಾಯಿತು. ಇದು ಕಾವ್ಯವನ್ನು ಸಮುದಾಯದ ಭಾಗವೆಂದು ಒಪ್ಪದೇ ಅದನ್ನು 'ಸಾಹಿತ್ಯಸತ್ಯದ' ಉತ್ಪಾದನೆಯೆಂದು ಕಂಡವು. ಈ ವಿಧಾನವು ಕವಿಯನ್ನು ಜಾತಿ, ಕುಲ, ಸ್ಥಳ, ಕಾಲ ಮುಂತಾದ ವರ್ಣವ್ಯವಸ್ಥೆಯ ಮಾದರಿಯಲ್ಲಿ ಓಂಜುತ್ತವೆ. ಆರ್. ನರಸಿಂಹಾಚಾರ್ಯರ ಕರ್ನಾಟಕ ಕವಿಚರಿತೆ ಸಂಪುಟಗಳು ಇದನ್ನು ಆಧರಿಸಿ ಮುಂದೆ ನಡೆದ ಕನ್ನಡ ಕವಿ, ಕಾಲ ಕುರಿತ ಅಧ್ಯಯನಗಳಲ್ಲಿ ಮಾರ್ಗ ವ್ಯವಸ್ಥೆಯ ಛಾಪನ್ನು ದಟ್ಟವಾಗಿ ಕಾಣಬಹುದು. ಸಾಂಸ್ಥಿಕ ರೂಪಿಯಾದ ಜ್ಞಾನ ಮೀಮಾಂಸಾ ನೆಲೆಗಳಲ್ಲಿ ಸರ್ವಜ್ಞನಂತಹ ಸಾಂಸ್ಕೃತಿಕ ಬಾಹುಳ್ಯದ ಜನಪದ ಜೀವದ್ರವ್ಯವನ್ನು ಹುದುಗಿಸಿಡಲಾಗಿದೆ.

ಸರ್ವಜ್ಞನ ಹುಟ್ಟಿನ ಕುರಿತು ಇರುವ ಮೂರು ಬಗೆಯ ಪಾಂಥಿಕ ಮಾದರಿಗಳನ್ನು ಉತ್ತಂಗಿಯವರಿಂದ (೧೯೨೩) ಎಲ್. ಬಸವರಾಜು (೧೯೮೦) ಹಾಗೂ ರಾಗೌ (೨೦೧೩) ವರೆಗಿನ ಸಂಪಾದಿತ ಕೃತಿಗಳಲ್ಲಿ ಸ್ಪಷ್ಟವಾಗಿ ನೋಡಬಹುದು. ಇವರ ವಚನಗಳ ಪ್ರಕಾರ ಸರ್ವಜ್ಞನೊಬ್ಬ ಆರಾಧ್ಯ ಬ್ರಾಹ್ಮಣನಾದ ಬಸವರಸ ಮತ್ತು ಕುಂಬಾರ ಮಾಳಿಯ ಪ್ರಣಯದ ಫಲಿತವಾಗಿ ಹುಟ್ಟಿದವ.

'ಗಡಿಗೆ ಮಡಿಕೆಯ ಕಂಡಡುವರಾವುಗೆಯಲ್ಲ
ಬಿಡದೆ ಮಳೆಮೋಡ ಹಿಡಿಯಲವರಿಬ್ಬರಿಗೆ
ತಡೆಬಿಟ್ಟಂತಾಯ್ತು ಸರ್ವಜ್ಞ'[೩೦]

'ಗಡಿಗೆ ಮಡಿಕೆಯ ಕೊಂಡು। ಅಡಿಗೆಯ ಬೇಳೆಯೊಳು
ಬಿಡದೆ ಮಳೆಮೋಡ ಪೊಡೆಯಲ್ಕೆ ಈರ್ವರಿಗೇ
ತಡಬಡಲಾಯ್ತ ಸರ್ವಜ್ಞ।'[೩೧]

'ಗಡಿಗೆ ಮಡಿಕೆಯ ಕೊಂಡು(ಆಡುವಡಾವಿಗೆಯೊಳಗೆ)
ಬಿಡದೆ ಮಳೆಮೋಡ ಹಿಡಿಯಲವರಿಬ್ಬರಿಗೂ
ತಡೆ ಬಿಡಲಾಯ್ತು ಸರ್ವಜ್ಞ'[೩೨]

ಮೇಲ್ಕಾಣಿಸಿದ ಮೂರು ವಚನಗಳಲ್ಲಿ ಪಾಠಾಂತರಗಳ ಜೊತೆಗೆ ಸರ್ವಜ್ಞನ ಹುಟ್ಟನ್ನು ಅಸಹಜವಾಗಿ ಮತ್ತು ಅಕ್ರಮವಾಗಿ ಗುರುತಿಸಲಾಗಿದೆ. 'ಕೆಳಜಾತಿಯ ಹೆಣ್ಣು ಮೇಲ್ಜಾತಿ ಪುರುಷ ಸಂಬಂಧವನ್ನು ಶಾಸ್ತ್ರ ಸಮ್ಮತವಾಗಿ ಒಪ್ಪಿಕೊಂಡ ವರ್ಣವ್ಯವಸ್ಥೆ ಬೀಜ ಪ್ರಧಾನತೆಯಲ್ಲಿ ಅಂಥ ಜನ್ಮಜಾತರನ್ನು ಅಂಗೀಕರಿಸಿದೆ. ಅದರಲ್ಲೂ ಪುರುಷ ಬ್ರಾಹ್ಮಣನಾಗಿದ್ದಾಗಿ ಆ ಸಂಕರ ಶಿಶುವನ್ನು ಪ್ರಶ್ನೆ ಇಲ್ಲದೆ ಸ್ವೀಕರಿಸುವುದು ಕ್ಷತ್ರೀಯ ಬ್ರಾಹ್ಮಣ ಸಂದರ್ಭದಲ್ಲಿ ಆಗಿರುವ ಚಾರಿತ್ರಿಕ ಸತ್ಯವನ್ನೇ'[೩೩] ನಾವು ಸರ್ವಜ್ಞ ವಿಚಾರದಲ್ಲಿ ಹರಿಬಿಟ್ಟಿರುವುದನ್ನು ಕಾಣುತ್ತೇವೆ. ಕುಲ ಮತ್ತು ಜನನ ಮೂಲದ ಶ್ರೇಷ್ಠತೆ ಅಥವಾ ಕನಿಷ್ಠತೆಯಲ್ಲಿ ಕವಿ ಕಾವ್ಯವನ್ನು ಹುದುಗಿಸಿಡುವ ಓರಿಯಂಟಲ್ ಮಾದರಿಯನ್ನು ಕಾಣುತ್ತೇವೆ. ಇದು ವೈದಿಕ ಪಾಂಥಿಕ ನೆಲೆಯಾಯಿತು.

ಶೈವ ಪಾಂಥಿಕ ಪಂಪರೆಯ ಮತ್ತೊಂದು ಆಯಾಮದಲ್ಲಿ ಸರ್ವಜ್ಞನ ಹುಟ್ಟಿನ ಕಥನವನ್ನು ವಿವರಿಸುತ್ತದೆ.

'ತಂದೆ ಹಾರುವನಲ್ಲ ತಾಯಿ ಮಾಳಿಯೂ ಅಲ್ಲ
ಚಂದ್ರಶೇಖರನ ವರಪುತ್ರ ನಾ ನಿಮ್ಮ
ಕಂದನಲ್ಲೆಂಬೆ ಸರ್ವಜ್ಞ'[೩೪]

'ತಂದೆ ಹಾರುವನಲ್ಲ ತಾಯಿ ಮಾಳಿಯೂ ಅಲ್ಲ
ಚಂದ್ರಶೇಖರನ ವರಪುತ್ರ ನಾ ನಿಮ್ಮ
ಕಂದನಲ್ಲೆಂಬೆ ಸರ್ವಜ್ಞ॥'[೩೫]

ಎಂಪೀರಿಕಲ್(ಮಿಶನರಿಗಳು ಮತ್ತು ಬ್ರಿಟೀಷ್ ಆಡಳಿತಗಾರರು) ಮತ್ತೆ ರೋಮ್ಯಾಂಡಿಕ್ ಆದರ್ಶವಾದಿಗಳ(ಓರಿಯಂಟಲಿಸ್ಟರು) ಕಣ್ಣಿಗೆ ಸರ್ವಜ್ಞನಂತಹ ದೇಸಿ ಕವಿ ಆಧುನಿಕ ಪೂರ್ವದ ಅನಾಗರಿಕನಾಗಿ ಕಾಣುತ್ತಾನೆ. ಜಾತಿಯನ್ನು ಜ್ಞಾನದ ಗುರುತನ್ನಾಗಿ ಪರಿವರ್ತಿಸುವ ಮೂಲಕ ಅವನ್ನು ಬದಲಾವಣೆಯಿಲ್ಲದ ಸಾವಯವ ಸ್ಥಿತಿ ಎನ್ನುವಂತೆ ಪ್ರತಿಪಾದಿಸಲಾಯಿತು. ಜೊತೆಗೆ ವರ್ತಮಾನವನ್ನು ಈ ಚಿಂತನೆಗಳು ಪಾಠಾಂತರ, ಮೂಲಪ್ರತಿ ಎಂದು ಭೂತ ಕಾಲದಲ್ಲಿಟ್ಟು ನಿರ್ವಚಿಸಿಕೊಳ್ಳುತ್ತವೆ.

'ಎಲುವಿನ ಕಾಯಕ್ಕೆ ಸತಿ ಧರ್ಮವನು ಹೊದಿಸಿ
ಮಲಮೂತ್ರ ಕ್ರಿಮಿಯ ಒದಗಿದ ದೇಹಕ್ಕೆ
ಕುಲವಾವುದಯ್ಯ ಸರ್ವಜ್ಞ'[೩೬]

'ಎಲುವಿನ ಕಾಯಕ್ಕೆ ಸತಿ ಚರ್ಮವನು ಹೊದಿಸಿ
ಮಲಮೂತ್ರ ಕ್ರಿಮಿಗಳೊಗಿದ ದೇಹಕ್ಕೆ
ಕುಲವಾವುದಯ್ಯ ಸರ್ವಜ್ಞ'[೩೭]

ಸರ್ವಜ್ಞನ ಹುಟ್ಟಿನ ಮೂಲದ ಬಗ್ಗೆ ಹೀಗೆ ಮೂರು ರೀತಿಯ ತದ್ವಿರುದ್ಧ ಅಭಿಪ್ರಾಯಗಳನ್ನು ಹೇಳುವುದು ಸಾಧ್ಯವಿಲ್ಲ. ಸರ್ವಜ್ಞನ ವಾರಸುದಾರಿಕೆಗಾಗಿ ನಡೆದ ಜಾತಿ ಆಧಾರಿತ ಸಂಪಾದನ ಕ್ರಮಗಳನ್ನು ಇಂದು ಎಚ್ಚರದಿಂದ ಪರಿಶೀಲಿಸಬೇಕಾಗಿದೆ.

ಇಂಥ ಶುಷ್ಕತೆ ಹಾಗೂ ಪಾಂಥಿಕ ವಾದಗಳಿಗೆ ಬಹುಮುಖ್ಯ ಕಾರಣ ಸರ್ವಜ್ಞನ ವಚನಗಳನ್ನು ಏಕವ್ಯಕ್ತಿ ಹಾಗೂ ಏಕ ಮೂಲದ ಶುದ್ಧ ಚಾರಿತ್ರ್ಯದಲ್ಲಿ ಕಟ್ಟಿಕೊಳ್ಳುವ ಎಂಪಿರಿಕಲ್ ಮತ್ತು ಓರಿಯಂಟಲ್ ಮನೋಧೋರಣೆಗಳು. ಇವು ವಿಷಯಾಧಾರಿತ ಪದ್ಧತಿಗಳಲ್ಲಿ ಸರ್ವಜ್ಞನ ವಚನಗಳನ್ನು ಈ ಧೋರಣೆಯಲ್ಲಿಯೇ ಹಿಡಿದಿಟ್ಟಿವೆ. ಲಿಂಗಪದ್ಧತಿ,

ಷಟಸ್ಥಲಪದ್ಧತಿ, ಲಿಂಗವಿದೂರ ನಿರಸನ ಪದ್ಧತಿ, ಜಾತಿಸ್ಮರಣ ಪದ್ಧತಿ, ಗುರುಕರಣ ಪದ್ಧತಿಗಳಲ್ಲಿ ಸಂಪಾದಿಸಿ ಪ್ರಕಟಿಸಲಾಗಿದೆ. ಹಿಂದಿನವರಿಗಿಂತ ಭಿನ್ನವಾಗಿ ಸಂಪಾದಿಸುತ್ತೇನೆಂದು ಹೇಳಿಕೊಳ್ಳುವ ಎಲ್. ಬಸವರಾಜು ಅವರಂತಹ ವಿಭಿನ್ನ ಧೋರಣೆಯ ವಿದ್ವಾಂಸರಿಗೂ ಇಂಥ ಪಾಂಥಿಕ ವಿಂಗಡಣೆಗಳ ಹಿಂದಿರುವ ಆಶಯಗಳನ್ನು ನಿರಾಕರಿಸಲು ಸಾಧ್ಯವಾಗಲಿಲ್ಲ. ಕಾರಣ ಕನ್ನಡ ದೇಸಿ ಕಾವ್ಯಗಳನ್ನು ಸಂಪಾದಿಸಲು ಹಿಂದಿನ ವಿದ್ವಾಂಸರೆಲ್ಲರೂ ಬಳಸಿಕೊಂಡ ನಮ್ಮದಲ್ಲದ ಅಧ್ಯಯನ ಮಾದರಿಗಳು.

ಹೀಗೆ ಕೃತಿಯೊಂದರ ನಿರಂತರ ಬಳಕೆಯನ್ನೇ ಅಪೇಕ್ಷಿಸುವ ಕನ್ನಡ ಸಂಸ್ಕೃತಿಗೂ ಬಳಕೆಯನ್ನು ನಿರಾಕರಿಸಿ ಸ್ಥಿರ ಮತ್ತು ಶುದ್ಧ ಪಠ್ಯವೆಂದು, ಶುದ್ಧ ಧಾರ್ಮಿಕ ಮತ್ತು ಪಾಂಡಿತ್ಯಾವರಣದಲ್ಲಿ ಜಡಗೊಳಿಸುವ ಸಂಸ್ಕೃತಿಗೂ ಇರುವ ಗುಣಾತ್ಮಕ ವ್ಯತ್ಯಾಶಗಳನ್ನು ಇಲ್ಲಿ ಗಮನಿಸಬಹುದು. ಸರ್ವಜ್ಞನಂತಹ ಬಂಧನ ರಹಿತ ಹಾಗೂ ಚಲನಶೀಲ ಪ್ರತಿಭೆಯನ್ನು ಪಾಂಡಿತ್ಯಾವರಣದ ಚರ್ಚೆಗಳು ಶ್ರೇಷ್ಠ-ಕನಿಷ್ಠ, ಶುದ್ಧ-ಅಶುದ್ಧ ಎನ್ನುವ ಪ್ರಧಾನ ಅಧೀನ ನೆಲೆಯಲ್ಲಿ ಚರ್ಚಿಸಿದ್ದು ಕಾಣುತ್ತದೆ.

ಸರ್ವಜ್ಞನ ಕುರಿತು ಬಂದಿರುವ ನೂರಾರು ಬರಹಗಳು ಸರ್ವಜ್ಞನ ಪ್ರತಿಭೆಗಿಂತ ಆತನ ಕಾಲ, ಜಾತಿ, ಹುಟ್ಟು, ತ್ರಿಪದಿಗಳ ಸಂಖ್ಯೆ ಅವುಗಳ ಶುದ್ಧತೆ ಇತ್ಯಾದಿಗಳ ಕುರಿತು ಓರಿಯಂಟಲಿಸ್ಟ್ ನೆಲೆಯಲ್ಲಿ ಚರ್ಚಿಸಿದ್ದು ಕಾಣುತ್ತದೆ. ಅಂದರೆ ಶುದ್ಧತೆ ಹಾಗೂ ಪ್ರಮಾಣೀಕರಣ ನೆಲೆಗಳ ಸರ್ವಜ್ಞನ ಸಾಹಿತ್ಯವನ್ನು ಶುದ್ಧ ಮೂಲಗಳಂಥ ಕಲ್ಪನೆಗಳಿಂದ ಪರಿಭಾವಿಸುವ ಮೂಲಕ ಅದರ ಮೌಲ್ಯವನ್ನು ನಿರ್ಧರಿಸುತ್ತವೆ. ಸರ್ವಜ್ಞನ ಚಾರಿತ್ರಿಕತೆ ಮೂಲ ಅದರ ಮೌಲ್ಯವನ್ನು ನಿರ್ಧರಿಸಲು ಹೊರಡುತ್ತವೆ. ಸರ್ವಜ್ಞನ ಚಾರಿತ್ರಿಕ ಮೂಲಕ್ಕೆ ಕೈ ಹಾಕುವ ಮೂಲಕ ಗುಪ್ತವಾಗಿ ಹಾಗೂ ಪರಿಣಾಮಕಾರಿಯಾಗಿ ಸರ್ವಜ್ಞ ಪ್ರತಿಭೆಯನ್ನು ಉಪೇಕ್ಷಿಸುವ ನೆಲೆಗಳನ್ನು ಸ್ಪಷ್ಟವಾಗಿ ಕಾಣುತ್ತೇವೆ.

ಓರಿಯಂಟಲಿಸ್ಟರ್ ದೃಷ್ಟಿಕೋನಕ್ಕೆ ಅನುಗುಣವಾಗಿ ೨೦ನೆಯ ಶತಮಾನದಲ್ಲಿ ಹಳೆಯ ಕನ್ನಡ ಗ್ರಂಥಗಳು ಸಂಪಾದನೆಯಾಗಿ ಪ್ರಕಟವಾದವು. ಭಾರತೀಯರಿಗೆ ಚರಿತ್ರೆಯ ಪ್ರಜ್ಞೆ ಇಲ್ಲ ಎಂಬ ಪಾಶ್ಚಿಮಾತ್ಯರ ಹೇಳಿಕೆಗೆ ಎಚ್ಚೆತ್ತು ನಮ್ಮ ವಿದ್ವಾಂಸರು ಪ್ರಾಚೀನ ಮಧ್ಯಕಾಲೀನ ಕನ್ನಡ ಗ್ರಂಥಗಳ ಸಂಪಾದನೆ ಮಾಡುವಾಗ ಕವಿ, ಕವಿಯ ಕಾಲ, ಸ್ಥಳ, ಧರ್ಮ, ಜಾತಿ, ಪೂರ್ವಜರು ಮುಂತಾದ ಸಂಗತಿಗಳನ್ನು ಕಷ್ಟಪಟ್ಟು ಖಚಿತವಾಗಿದೆ ಎಂಬಂತೆ ಶೋಧಿಸಿದರು, ಪ್ರಕಟಿಸಿದರು. ಹೀಗೆ ಕನ್ನಡ ಗ್ರಂಥಗಳ ಸಂಪಾದನೆಯ ಹಿಂದೆ ಸಂಪಾದಕರ ವಿದ್ವಾಂಸರ ವೈಯಕ್ತಿಕ ಧೋರಣೆಯೂ ಕಾಣುತ್ತದೆ.

ಜೈನ ಗ್ರಂಥಗಳನ್ನು ಹೊರತುಪಡಿಸದರೆ ವೀರಶೈವ, ಬ್ರಾಹ್ಮಣ ಕವಿಗಳ ಗ್ರಂಥಗಳನ್ನು ಆಯಾ ಜಾತಿಗೆ ಸೇರಿದವರೇ ಸಂಪಾದಿಸಿರುವುದನ್ನು ಕಾಣಬಹುದು. ಇದು ಅನಿವಾರ್ಯ ಅನ್ನುವುದಕ್ಕಿಂತ ಇದು ಸಹಜ ಎಂಬಂತೆ ನಡೆದಿದೆ. ಈ ಸಂಪಾದನೆಗಳ ಪರಿಷ್ಕರಣೆಯ ಹಿಂದಿನ ತಾತ್ವಿಕ ಏನೆಂಬುದು ಇದರಿಂದ ಗೊತ್ತಾಗುತ್ತದೆ. ಆಯಾ ಜಾತಿ ಧರ್ಮದವರು ಆಯಾ ಜಾತಿ ಧರ್ಮದವರ ಗ್ರಂಥಗಳನ್ನು ಸಂಗ್ರಹಿಸಿದ್ದಾರೆ. ಇದಕ್ಕೆ ಅಪವಾದಗಳು ಇದ್ದರೂ ಅವು ಕಡಿಮೆ. ತಮ್ಮ ಧರ್ಮದ ಅನನ್ಯತೆಯನ್ನು ಬಲಪಡಿಸುವುದೇ ಇಲ್ಲಿ ಮುಖ್ಯವಾಗಿ ಕಾಣುತ್ತದೆ.

ಹಸ್ತಪ್ರತಿಗಳ ಸಂಪಾದನೆಯಲ್ಲಿ ವಿದ್ವಾಂಸರ ಮನೋಧರ್ಮದ ನೆಲೆಯಲ್ಲಿ ಪ್ರಾಚೀನ ಪಠ್ಯಗಳು ನಿರ್ದಿಷ್ಟ ಮಾದರಿಯ ವ್ಯಕ್ತಿ ಮತ್ತು ಮತ ಕೇಂದ್ರಿತ ಸ್ಥಗಿತರೂಢಿ ಸಂಪಾದನೆಗೆ ಮತ್ತು ಓದಿಗೆ ಒಳಗು ಮಾಡಿರುವ ಕಾರಣ ಅವುಗಳು ನಮ್ಮ ಅರಿವಿನ ಭಾಗವಾಗುವುದರಲ್ಲಿ ಹಿನ್ನಡೆಯಾಗಿದೆ. ಈ ಧೋರಣೆ ಜ್ಞಾನದ ಬಹುರೂಪಗಳನ್ನು ನಿರಾಕರಿಸುತ್ತದೆ. ಆದ್ದರಿಂದ ಸಂಪಾದನೆಯ ಪ್ರಸ್ತಾವನೆ, ಉತ್ತಮ ವಿಮರ್ಶೆಗಳು ಅಧ್ಯಯನಗಳು ನಮ್ಮ ಅರಿವಿನ ಭಾಗವಾದ ಅಧ್ಯಯನಗಳಾಗಬೇಕು ಎಂಬುದು ಗಮನಾರ್ಹ ಸಂಗತಿ.

ಸಂಪಾದಕರು ಬರೆದ ಮುನ್ನುಡಿ ಉಪೋದ್ಘಾತಗಳಲ್ಲಿ ಅವರ ಮನೋಧರ್ಮಗಳನ್ನು ಗುರುತಿಸಬಹುದು. ಉದಾಹರಣೆಗೆ ಜೆ.ಗ್ಯಾರೆಟ್‌ರವರು ಸಂಪಾದನೆಯ ಮಾಡಿದ ಶಬ್ದಮಣಿದರ್ಪಣ ಕುರಿತು ಹೇಳುವುದಾದರೆ, 'ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ವಹಿಸಿದ ಕಾರಣ ಅವರಿಗೆ ಮಕ್ಕಳಿಗೆ ಕಲಿಸುವ ಮೂಲಶಾಸ್ತ್ರವಾದ ವ್ಯಾಕರಣ ಕಡೆ ಗಮನ ಹೋಯಿತು. ಕನ್ನಡ ಕಲಿಯುವವರಿಗೆ ಕನ್ನಡ ಕಾವ್ಯಗಳನ್ನು ಅಧ್ಯಯನ ಮಾಡುವವರಿಗೆ ಶಬ್ದಮಣಿದರ್ಪಣ ಅಂದು ಅವಶ್ಯಕವಾದ ಆಕರ ಗ್ರಂಥವಾಗಿತ್ತು. ಮಿಶನರಿಗಳು ಮತ್ತು ಸರಕಾರಿ ಅಧಿಕಾರಿಗಳು ಇದನ್ನು ಪ್ರತಿಮಾಡಿಸಿಕೊಂಡು ಇಟ್ಟುಕೊಳ್ಳುತ್ತಿದ್ದರು. ಹೀಗಾಗಿ ಇದರ ಮಹತ್ವ ಅರಿತ ಗ್ಯಾರೆಟ್ ಇದನ್ನು ೧೯೬೮ರಲ್ಲಿ ಪ್ರಕಟಿಸಿದನು. ಶಬ್ದಮಣಿದರ್ಪಣವನ್ನು ಪ್ರಥಮವಾಗಿ ಪ್ರಕಟಿಸಿದ ಕೀರ್ತಿ ಗ್ಯಾರೆಟ್ ಅವರಿಗೆ ಸಲ್ಲುತ್ತದೆ'.[೩೮] ಶೈಕ್ಷಣಿಕ ಅಗತ್ಯವಾಗಿ ಈ ಕೃತಿ ಪ್ರಕಟಿಸಿದ್ದು ಗಮನಾರ್ಹ.

ಸಂಪಾದನಕಾರರು ಸಂಪಾದನೆಯ ಮುನ್ನುಡಿಯನ್ನು ಗಮನಿಸಿದಾಗ ಸಂಕಲನ ವ್ಯವಸ್ಥೆಯೇ ಉದ್ದೇಶಿತ ಪರಿಧಿಗೆ ತನ್ನನ್ನು ಹೊಂದಿಸಿಕೊಂಡ ಸ್ಥಗಿತರೂಪವಾಗಿ ಕಾಣುತ್ತದೆ ಮತ್ತು ಕವಿಯ, ಸಂಪಾದಕರ ಹಿರಿಮೆಯನ್ನು ಮುನ್ನೆಲೆಗೆ ತಂದು ವರ್ಣಿಸಿರುವುದನ್ನು ಕಾಣುತ್ತೇವೆ. ಕಳೆದು ಹೋಗುತ್ತಿದ್ದ ಹಲವು ಅಮೂಲ್ಯ ಕೃತಿಗಳನ್ನು ಉಳಿಸಿದ ಕೀರ್ತಿ ಸಂಕಲನ ಕಾರರಿಗೆ ಸಲ್ಲಿದರೂ ಅದರ ಮಿತಿಯನ್ನು ಮರೆಯಬಾರದು. ಕೃತಿ ಒಂದು ವಿದ್ವತ್‌ಪೂರ್ಣ ಶುಷ್ಕ ಸಾಹಿತ್ಯದ ಪಠ್ಯವಾಗಿ ನೋಡುವ ಬದಲು ಸಂಸ್ಕೃತಿಯು ಪಠ್ಯದೊಂದಿಗೆ ಪಠ್ಯವು

ಸಂಸ್ಕೃತಿಯೊಂದಿಗೆ ನಡೆಸಿದ ಅನುಸಂಧಾನಗಳನ್ನು ಗ್ರಹಿಸುವುದು ಮುಖ್ಯವಾಗಬೇಕಾಗಿದೆ. ಈ ಸಂಗತಿ ಗ್ರಂಥಸಂಪಾದನಾ ಶಾಸ್ತ್ರದ ಬಹುಮುಖ್ಯ ಕಾಳಜಿಯಾಗಬೇಕಿದೆ.

'ಬಹಳ ಮುಖ್ಯವಾಗಿ ೧೯ನೆಯ ಶತಮಾನದಲ್ಲಿ ವಸಾಹತು ಆಡಳಿತದ ಸಂದರ್ಭದಲ್ಲಿ ಕನ್ನಡ ಸಂಸ್ಕೃತಿಯ ಅರಿತುಕೊಳ್ಳುವುದಕ್ಕಾಗಿ ಮಿಷನರಿಗಳು ಮತ್ತು ಆ ಕಾಲದ ಕನ್ನಡ ವಿದ್ವಾಂಸರು ದಾಖಲೆಗಳನ್ನು ಸಂಗ್ರಹಿಸುವ ಪ್ರಯತ್ನ ಮಾಡಿದರು. ಆ ದಾಖಲೆಗಳ ಶಾಬ್ದಿಕವಾಗಿರಬಹುದು ಅಶಾಬ್ದಿಕವಾಗಿರಬಹುದು. ದಾಖಲೆ ಎಂದರೆ ಹಸ್ತಪ್ರತಿ ರೂಪದಲ್ಲಿ ಸಾಹಿತ್ಯವನ್ನು ಸಂಗ್ರಹಿಸಿ ಸಂಪಾದಿಸುವ ನಿಟ್ಟಿನಲ್ಲಿ ಬರೆದ ಉಪೋದ್ಘಾತಗಳಲ್ಲಿ ಗ್ರಂಥಸಂಪಾದಕರು ಕೃತಿ, ಕೃತಿಕಾರ ವಿವರವನ್ನು ಎಷ್ಟು ಪ್ರತಿಗಳನ್ನು ಬಳಸಿಕೊಂಡು ಪರಿಷ್ಕರಣೆ ಮಾಡಿದೆ ಎಂಬುವ ಸ್ವವಿವರವಾದ ಮಾಹಿತಿಯನ್ನು ಕಡೆಗೆ ಒತ್ತು ಕೊಟ್ಟು ಕೃತಿಯ ಸಾರಾಂಶ ಮತ್ತು ಕವಿಯ ಅಥವಾ ಸಂಪಾದಕರ ಹಿರಿಮೆಯನ್ನು ಹೆಚ್ಚಾಗಿ ಹೇಳಿದ್ದಾರೆ ಎಂಬುದು ಉಪೋದ್ಘಾತದಲ್ಲಿ ಕಾಣಬಹುದು. ಉದಾಹರಣೆಗೆ ಕಲಮಾರವ್ಯಾಸ ಭಾರತಸಂಗ್ರಹ ವಿವರಣೆ ನೊಡಬಹುದು'[೯]

ಕಿಟಲ್ ಕೃತಿ, ಕವಿ, ಜಾತಿ ಕೇಂದ್ರಿತ ಅಧ್ಯಯನಗಳಿಗೆ ಹೆಚ್ಚು ಒಲವು ನೀಡಿರುವುದನ್ನು ಕಾಣಬಹುದು. ವಸಾಹತು ಪ್ರಜ್ಞೆಯಿಂದ ಆರಂಭವಾದ ನಮ್ಮ ಅಭ್ಯುದಯದ ನೆಲೆಗಳು ಪಶ್ಚಿಮದ ಅಧ್ಯಯನ ಮಾದರಿಗಳನ್ನೆ ಅನುಸರಿಸಿಕೊಂಡು ಬೆಳೆಯುತ್ತಿವೆ. ಈ ಅಕ್ಷರ ಹಾಗೂ ವ್ಯಕ್ತಿ ಕೇಂದ್ರಿತ ಧರ್ಮ, ಜಾತಿ, ಪ್ರಭುತ್ವಕೇಂದ್ರಿತ ಯಜಮಾನ ನೆಲೆಯ ಹಿತಾಸಕ್ತಿಗಳು ನಮ್ಮ ಸಂಪಾದನೆಯಲ್ಲಿ ಕಾಣಬಹುದು. ಇದರಿಂದ ಜಾತಿ, ಕೃತಿ ಕೇಂದ್ರಿತ ಅಧ್ಯಯನಕ್ಕೆ ಹೆಚ್ಚು ಒಲವು ತೋರಿದ್ದರೂ ಎಂಬ ಅನುಮಾನಗಳು ನಮಗೆ ಈ ಉಪೋದ್ಘಾತದಲ್ಲಿ ಕಂಡುಬರುತ್ತದೆ. ಇಂತಹ ಸಂಪಾದನೆಯಿಂದ ವಿದ್ವಾಂಸರು ಹೊರಬಂದು ಹಸ್ತಪ್ರತಿ ಒಡಲೊಳಗೆ ಅಡಗಿರುವ ಎಷ್ಟೋ ಸ್ಥಳೀಯ ಜ್ಞಾನವನ್ನು ಸಂಪಾದನೆ ಮಾಡಿ ನಮ್ಮ ಅರಿವಿನ ಭಾಗವಾಗಿ ಮಾಡಬೇಕಾಗಿರುವುದು ಗಮನಾರ್ಹ ಸಂಗತಿ.

ಭಾರತದಂತಹ ಪೂರ್ವ ದೇಶಗಳನ್ನು ಅಧ್ಯಯನ ಮಾಡಿದ ಪಾಶ್ಚಿಮದ ವಿದ್ವಾಂಸರು ಅಂದರೆ ಓರಿಯಂಟಲಿಸ್ಟರು ಹಿಡಿದ ದಾರಿಯನ್ನೆ ತಮ್ಮ ವಿದ್ವಾಂಸರು ಹಿಡಿದು ಅನುಸರಿಸಿದರು. ಶಾಸನಗಳ ಸಂಗ್ರಹ ಗ್ರಂಥಗಳ ಸಂಪಾದನೆ ಮುಂತಾದ ಶೋಧಗಳ ಹಿಂದೆ ಬ್ರಿಟೀಷರಿಗೆ ಒಂದೇ ಉದ್ದೇಶವಿತ್ತು. ಅದು ಅವರ ಹಿತಕ್ಕೆ ಅನುಗುಣವಾಗಿತ್ತು. ಭಾರತೀಯರಿಗೆ ವರ್ತಮಾನದಲ್ಲಿ ಬದುಕಲು ಏನು ಇಲ್ಲ. ವರ್ತಮಾನ ಎಂಬುದು ಖಾಲಿಯಿದೆ. ಭಾರತೀಯರ ಬೀಜಕ್ರಮ ಏನಾದರೂ ಇದ್ದರೆ ಅದು ಭೂತದಲ್ಲಿದೆ. ಆದಕ್ಕಾಗಿ ಭಾರತದ ಶೋಧ ಅಗತ್ಯ ಎಂದು ಹೇಳುವಾಗ ಈ ದೃಷ್ಟಿಕೋನ ಬ್ರಿಟಿಷರಿಗೆ ಭಾರತವನ್ನು ಆಳುವುದಕ್ಕೆ

ನೆಲೆಯೂರಿ ನಿಲ್ಲುವುದಕ್ಕೆ ಬೇಕಾಗಿತ್ತು. ಈ ಓರಿಯಂಟಲಿಸ್ಟರ್ ದೃಷ್ಟಿಕೋನವನ್ನು ಉತ್ಸಾಹದಿಂದ ನಮ್ಮ ವಿದ್ವಾಂಸರು ತಮ್ಮದಾಗಿಸಿಕೊಂಡು ಅಧ್ಯಯನವನ್ನು ಮುಂದುವರಿಸಿದರು. ಭಾರತೀಯರ ಮೌಲ್ಯಗಳೇನಾದರೂ ಇದ್ದರೆ ಅವು ಚರಿತ್ರೆಯಲ್ಲಿ ಅವುಗಳ ನೆರಳಿನಲ್ಲಿ ಬದುಕುತ್ತಿದ್ದಾರೆ. ಅದಕ್ಕಾಗಿ ಚರಿತ್ರೆಯಲ್ಲಿ ಕಣ್ಮರೆಯಾಗಿರುವ ಸಂಸ್ಕೃತಿಯನ್ನು ಶೋಧಿಸಬೇಕೆಂಬ ಧೋರಣೆ ಕನ್ನಡ ಅಧ್ಯಯನಗಳಲ್ಲಿ ಇಂದಿಗೂ ಪ್ರಧಾನವಾಗಿ ಮುಂದುವರಿದಿದೆ. ಈ ಮಾದರಿಗಳಾದ ಯಜಮಾನಿಕೆಯಿದೆ, ಸತ್ಯಶೋಧನೆ ಪ್ರಾಮಾಣಿಕತೆ ವಸ್ತುನಿಷ್ಠತೆ ಖಚಿತತೆ ಮುಂತಾದ ಮಾತುಗಳು ಅಧ್ಯಯನಗಳಲ್ಲಿ ಕಾಣಿಸಿಕೊಂಡು ಇವು ಅಂತಿಮ ಎಂಬಂತೆ ಮುಂದುವರಿದಿದೆ. ಇವುಗಳನ್ನು ಪರಿಕಲ್ಪನೆಗಳೆಂದು ಅರ್ಥೈಸಿದೆ. ಸಮಸ್ಯೀಕರಣಗೊಳಿಸದೆ ಹಿರಿಯ ವಿದ್ವಾಂಸರು ತಮ್ಮ ಸಂಶೋಧನ ಕಾರ್ಯ ಮಾಡುತ್ತ ಬಂದಿದ್ದಾರೆ. ಆಕರ ನಿರ್ಮಾಣ ಆಕರಶೋಧ ಎಂಬ ಹೆಸರಿನಲ್ಲಿ ಓರಿಯಂಟಲಿಸ್ಟರ ದೃಷ್ಟಿಕೋನವನ್ನು ಬಲಗೊಳಿಸಿದ್ದಾರೆ.

ಈ ವಿವರಣೆ ಏಕೆಂದರೆ ಗ್ರಂಥಸಂಪಾದನೆಯ ಕಾರ್ಯವು ಕನ್ನಡದಲ್ಲಿ ಇದಕ್ಕಿಂತ ಭಿನ್ನವಾಗಿ ಬೆಳೆದಿಲ್ಲ. ಇಪ್ಪತ್ತನೆಯ ಶತಮಾನದ ಆದಿಭಾಗದಿಂದ ಆಕರ ನಿರ್ಮಾಣದ ಅಂಗವಾಗಿ ಇಪ್ಪತ್ತನೇ ಶತಮಾನದ ಪೂರ್ವಕಾಲದಲ್ಲಿ ರಚನೆಯಾದ ಬರಹಗಳನ್ನು ಸಂಗ್ರಹಿಸಿ ಪ್ರಕಟಿಸಲಾಗುತ್ತಿದೆ. ಹಾಗೆ ನೋಡಿದರೆ ಗ್ರಂಥ ಸಂಪಾದನೆ ಕಾರ್ಯವು ಮೊದಲಿನಿಂದಲೂ ಇದೆ. ಪ್ರತಿ ಮಾಡಿಡುವುದು ಅವುಗಳನ್ನು ಸೀಮಿತವಾಗಿ ಬಳಸುವುದು ಪ್ರಸಾರ ಮಾಡುವುದು ನಡೆಯುತ್ತಿತು. ೧೫ನೆಯ ಶತಮಾನದಲ್ಲಿ ವಿಜಯನಗರ ಅರಸರಲ್ಲಿ ಒಬ್ಬನಾದ ಪ್ರೌಢದೇವ ರಾಯನ ಕಾಲದಲ್ಲಿ ನೂರೊಂದು ವಿರಕ್ತರು ವಚನಗಳನ್ನು ಸಂಪಾದಿಸಿರುವುದನ್ನು ಕಾಣುತ್ತೇವೆ. ಸಂಕಲನಗೊಂಡ ಸಂಗ್ರಹಕ್ಕೆ ಸಂಪಾದಕರೂ ಇದ್ದಾರೆ. ಸಂಕಲನಕ್ಕೆ ಹೆಸರುಗಳು ಇವೆ. ನಾಲ್ಕು ಶೂನ್ಯ ಸಂಪಾದನೆಗಳು ಲಿಂಗಲೀಲಾ ವಿಲಾಸ ಚಾರಿತ್ರ್ಯ, ಏಕೋತ್ತರ ಸ್ಥಲಗಳ ಗಣಭಾಷಿತ ರತ್ನಮಾಲೆ ಇಂತಹ ಹತ್ತಾರು ಸಂಪಾದನೆಗಳು ಇವೆ. ವಚನಕಾರರ ನಂತರ ಈ ಸಂಪಾದನೆ ಕಾರ್ಯ ನಡೆಯಿತು. ವಚನಗಳ ದರ್ಶನವನ್ನು ವೀರಶೈವೀಕರಣಗೊಳಿಸುವ ಸಂದರ್ಭದಲ್ಲಿ ಈ ಸಂಪಾದನೆಗಳು ಹುಟ್ಟಿಕೊಂಡವು. ಸ್ಥಲಕಟ್ಟುಗಳಲ್ಲಿ ವಚನಗಳನ್ನು ಸೇರಿಸಲಾಯಿತು. ಸ್ಥಲಗಳ ನೆಲೆಯಲ್ಲಿ ವಚನಗಳನ್ನು ವಿವರಿಸುವ ಪ್ರಯತ್ನವನ್ನು ಸಾಂಕೇತಿಕವಾಗಿ ಮಾಡಲಾಯಿತು. ವಚನಗಳನ್ನು ತತ್ವ ದರ್ಶನ ಧರ್ಮದ ವಿನ್ಯಾಸದಲ್ಲಿ ರೂಪಿಸಲಾಯಿತು. ೧೨ನೆಯ ಶತಮಾನದಲ್ಲಿ ಶರಣರ ಚಳುವಳಿಯನ್ನು ಬೆಂಬಲಿಸಿದವರೆಂದು ಹೇಳಿಕೊಳ್ಳುವ ಸಮುದಾಯಗಳು ೧೫ನೆಯ ಶತಮಾನದ ಈ ಸಂದರ್ಭದಲ್ಲಿ ವೀರಶೈವರಾಗಿ ಲಿಂಗಾಯತರಾಗಿ ಸಾಂಸ್ಥಿಕರಣಗೊಂಡು ಜಾತಿ ಸಮುದಾಯವಾಗಿ ರೂಪುಗೊಂಡಿದ್ದರ ಹಿಂದೆ ಈ ಸಂಪಾದನೆಗಳೂ ಕಾರಣವಾಗಿವೆ. ಈ ಸಂಕಲನಗಳು ಪುನಃ ಬ್ರಿಟಿಷ್ ಆಡಳಿತ ಕಾಲದಲ್ಲಿ ಆಧುನಿಕವಾಗಿ ಪುಸ್ತಕ ರೂಪದಲ್ಲಿ ಪ್ರಕಟವಾದವು. ಕನ್ನಡ ವಿದ್ವಾಂಸರು ಈ ಕೆಲಸ ಮಾಡಿದರು.

ಓರಿಯಂಟಲಿಸ್ಟ್‌ರ ದೃಷ್ಟಿಕೋನಕ್ಕೆ ಅನುಗುಣವಾಗಿ ೨೦ನೆಯ ಶತಮಾನದಲ್ಲಿ ಹಳೆಯ ಕನ್ನಡ ಗ್ರಂಥಗಳು ಸಂಪಾದನೆಯಾಗಿ ಪ್ರಕಟವಾದವು. ಭಾರತೀಯರಿಗೆ ಚರಿತ್ರೆಯ ಪ್ರಜ್ಞೆ ಇಲ್ಲ ಎಂಬ ಪಶ್ಚಿಮದವರ ಹೇಳಿಕೆಗೆ ಎಚ್ಚತ್ತು ನಮ್ಮ ವಿದ್ವಾಂಸರು ಪ್ರಾಚೀನ ಮಧ್ಯಕಾಲೀನ ಕನ್ನಡ ಗ್ರಂಥಗಳ ಸಂಪಾದನೆ ಮಾಡುವಾಗ ಕವಿ, ಕವಿಯ ಕಾಲ, ಸ್ಥಳ, ಧರ್ಮ, ಜಾತಿ, ಪೂರ್ವಜರು ಮುಂತಾದ ಸಂಗತಿಗಳನ್ನು ಕಷ್ಟಪಟ್ಟು ಖಚಿತವಾಗಿ ಎಂಬಂತೆ ಶೋಧಿಸಿ ಪ್ರಕಟಿಸಿ ದರು. ಹೀಗೆ ಕನ್ನಡ ಗ್ರಂಥಗಳ ಸಂಪಾದನೆಯ ಹಿಂದೆ ಸಂಪಾದಕ ವಿದ್ವಾಂಸರ ಧೋರಣೆಯು ಕಾಣುತ್ತದೆ. ಜೈನ ಗ್ರಂಥಗಳನ್ನು ಹೊರತುಪಡಿಸಿದರೆ ವೀರಶೈವ ಬ್ರಾಹ್ಮಣ ಕವಿಗಳ ಗ್ರಂಥಗಳನ್ನು ಆಯಾ ಜಾತಿಗೆ ಸೇರಿದವರೇ ಸಂಪಾದಿಸಿರುವುದನ್ನು ಕಾಣಬಹುದು. ಇದು ಅನಿವಾರ್ಯ ಅನ್ನುವುದಕ್ಕಿಂತ ಇದು ಸಹಜ ಎಂಬಂತೆ ನಡೆದಿದೆ. ಈ ಸಂಪಾದನೆಗಳ ಹಿಂದಿನ ತಾತ್ವಿಕ ಏನೆಂಬುದು ಇದರಿಂದ ಗೊತ್ತಾಗುತ್ತದೆ. ಆಯಾ ಜಾತಿಧರ್ಮದವರು ಆಯಾ ಜಾತಿ ಧರ್ಮದವರ ಗ್ರಂಥಗಳನ್ನು ಸಂಗ್ರಹಿಸಿದ್ದರು. ಇದಕ್ಕೆ ಅಪವಾದಗಳು ಇದ್ದರು ಅವು ಕಡಿಮೆ ತಮ್ಮ ಧರ್ಮದ ಅನನ್ಯತೆಯನ್ನು ಬಲಪಡಿಸುವುದೇ ಇಲ್ಲಿ ಮುಖ್ಯವಾಗಿ ಕಾಣುತ್ತದೆ. ಆದರೂ ಸಂದರ್ಭ ನಿಷ್ಠ ಸಂಪಾದನೆಗಳಿಗೆ ಒಂದು ತಾತ್ವಿಕತೆ ಇದ್ದರೂ ಅದು ಕಾಲಾಂತರದಲ್ಲಿ ಬೇರೆ ಸ್ವರೂಪ ಪಡೆದಿರುವ ಸಾಧ್ಯತೆಗಳು ಹೆಚ್ಚಾಗಿವೆ. ಕನ್ನಡ ಪಠ್ಯಗಳು ಸಂದರ್ಭನಿಷ್ಠೆ ಸಂಪಾದನೆ ಪ್ರಕಟಣೆಗಳ ತಾತ್ವಿಕ ಸ್ವರೂಪ ನೆಲೆಗಳು ಭಿನ್ನವಾಗಿರುತ್ತವೆ. ಅವುಗಳನ್ನು ಕನ್ನಡ ಸಾಹಿತ್ಯ ಅಧ್ಯಯನ ಚರಿತ್ರೆ ಹಾಗೂ ಕನ್ನಡ ಗ್ರಂಥಸಂಪಾದನೆಯಲ್ಲಿ ಕಾಣಬಹುದು. ಇದನ್ನು ಸ್ಥೂಲವಾಗಿ ವಿವರಿಸಲು ಪ್ರಯತ್ನಿಸಲಾಗಿದೆ.

ಒಟ್ಟು ಗ್ರಂಥಸಂಪಾದನಾ ಪ್ರಕ್ರಿಯೆಯು ಆಯಾ ಕಾಲದ ಪ್ರಮುಖ ಮತ್ತು ತಾತ್ವಿಕ ನಿಲುವುಗಳನ್ನು ಏಕಕೇಂದ್ರಿತ ನೆಲೆಯಲ್ಲಿ ಸಮರಸಗೊಳಿಸಲು ನಡೆಸಿದ ಪ್ರಯತ್ನವಾಗಿ ನನಗೆ ಕಾಣುತ್ತದೆ. ಸಂಘರ್ಷಕ್ಕೆ ಕಾರಣವಾಗಬಹುದಾದ ನಿಲುವುಗಳನ್ನು ಸಾಮರಸ್ಯಕ್ಕೆ ತರುವುದು ನಮ್ಮಲ್ಲಿ ಸಿಗುವ ಹಲವು ಪಠ್ಯಗಳು ಆಯಾ ಕಾಲದ ವೈವಿಧ್ಯಮಯ ಅಥವಾ ವೈರುದ್ಧ ತುಂಬಿದ ಸಾಮಾಜಿಕ ರಚನೆಯ ಪ್ರತೀಕಗಳು ಇವು ಎಲ್ಲವೂ ಬದುಕಿನ ಭಿನ್ನ ದೃಷ್ಟಿಕೋನ ಗಳಲ್ಲಿ ಅರಳಿದಂಥವು ಪಾಂಡಿತ್ಯಕ್ಕಾಗಿ ಆಶ್ರಯದಾತನ ಋಣ ತೀರಿಸಲಿಕ್ಕಾಗಿ ಪ್ರಯೋಗಕ್ಕಾಗಿ ಜ್ಞಾನಕ್ಕಾಗಿ ಧಾನಕ್ಕಾಗಿ ಓದಿಗಾಗಿ ಕೂಲಿಗಾಗಿ ರೋಗಪರಿಹಾರರ್ಥವಾಗಿ ಹವ್ಯಾಸವಾಗಿ ಮತೀಯ ಅಸ್ತಿತ್ವಕ್ಕಾಗಿ ರೂಪಗೊಂಡ ಹಲವು ಕೃತಿ ಪ್ರತಿಗಳು ನಮಗೆ ದೊರಕುತ್ತವೆ. ಇಂಥ ವಿಶಿಷ್ಟ ಪಠ್ಯಗಳನ್ನು ಶುದ್ಧತೆ ಮೂಲದ ಹೆಸರಿನಲ್ಲಿ ಶಿಷ್ಟೀಕರಣ ಗೊಳಿಸುವುದು ಎಷ್ಟು ಸಾಧು.

ಓ.ಎಲ್. ನಾಗಭೂಷಣಸ್ವಾಮಿ ಅವರು ಶೂನ್ಯ ಸಂಪಾದನೆ ಬಗ್ಗೆ ಬರೆದ ಒಂದು ಮಾತು ಇಲ್ಲಿ ಬಹುಮುಖ್ಯವೆನಿಸುತ್ತದೆ. 'ಅನುಭಾವದ ದಾರಿ ಭಕ್ತಿಯ ದಾರಿ ವ್ರತನೇಮಗಳ

ದಾರಿ ಹಿಡಿದವರೆಲ್ಲ ಇದ್ದರು. ಮಠ, ಗುರು ಬೇಕು ಅನ್ನುವವರಿದ್ದರು, ಬೇಡ ಅನ್ನುವವರಿದ್ದರು. ಅದೊಂದು ದೊಡ್ಡ ಸಂತೆ. ಹುಲುಗೂರು ಸಂತೆ ಇವತ್ತಿನ ಲೋಕದ ಎಲ್ಲ ವೈರುಧ್ಯಗಳು ಇದ್ದವು. ಆದರೆ ಶೂನ್ಯ ಸಂಪಾದನೆ ಅಂಥ ವೈರುಧ್ಯಗಳನ್ನು ನಿರಾಕರಿಸಿ ಒಂದು ನ್ಯಾಷನಲ್ ಹೈವೆ ಧರ್ಮದ ರಾಜಮಾರ್ಗವನ್ನು ನಿರ್ಮಿಸಲು ಯತ್ನಿಸುತ್ತದೆ'.[೪೦]

ಸಂಪಾದನಾ ಯುಗದ ಬಹುಮುಖ್ಯ ಪಠ್ಯಗಳಾದ ಈ ಶೂನ್ಯಸಂಪಾದನೆಗಳು ಒಂದು ಧಾರ್ಮಿಕ ಅನುಭವದಲ್ಲಿ ಹುಟ್ಟಿ ಬಂದವು. ಇಡೀ ಶೂನ್ಯ ಸಂಪಾದನೆ ಒಂದು ಶಾಸ್ತ್ರವಾಗಿ ಅಲ್ಲಿರುವ ಅಲ್ಲಮ ಒಬ್ಬ ನಾಯಕನಾಗಿ ವೀರಶೈವ ಪ್ರತಿಷ್ಠಾಪನಾಚಾರ್ಯನಾಗಿ ಷಟ್‌ಸ್ಥಲಗಳಿಗೆ ದಾರಿ ಹಾಕಿಕೊಟ್ಟ ವ್ಯಕ್ತಿಯಾಗಿ ಕಾಣಿಸುತ್ತಾನೆ. ವೀರಶೈವ ಧರ್ಮ ಸಾಂಸ್ಥಿಕ ರೂಪ ಪಡೆದುಕೊಳ್ಳುವಂಥ ಸಂದರ್ಭದಲ್ಲಿ ರೂಪಗೊಂಡ ಇಂಥ ಕೃತಿಗಳು ನಾಯಕನೊಬ್ಬನ ಅನಿವಾರ್ಯತೆಯನ್ನೂ ಸ್ಥಗಿತಗೊಂಡ ವ್ಯವಸ್ಥೆಯ ಕೇಂದ್ರೀಕೃತ ಪ್ರವೃತ್ತಿಗಳನ್ನು ಕಟ್ಟಿ ಕೊಡುತ್ತವೆ. ಹೀಗೆ ಪಠ್ಯವೊಂದನ್ನು ನಿರ್ದಿಷ್ಟ ದೃಷ್ಟಿಗೆ ಅನುಗುಣವಾಗಿ ಜೋಡಿಸಿಕೊಳ್ಳುವ ಮೂಲಕ ತಮ್ಮ ಸಂದರ್ಭದ ಒತ್ತಾಸೆಗಳಿಗೆ ಉತ್ತರ ಹುಡುಕುವ ಮತ್ತು ಮಾರ್ಗಗಳನ್ನು ರೂಪಿಸುವ ಮೂಲಕ ಅದನ್ನು ಪವಿತ್ರೀಕರಿಸ ಲಾಗಿದೆ. ಅದರ ಹಲವು ನಾಲಿಗೆಗಳನ್ನು ಕತ್ತರಿಸಿ ಮೂಕನಾಗಿಸಲಾಗಿದೆ ಎಂದೆನಿಸುತ್ತದೆ.

ಧಾರ್ಮಿಕ ಎನ್ನುವ ಮತ್ತು ವೈದಿಕ ಪ್ರಣೀತ ರಚನೆಗಳನ್ನು ನಿರ್ದಿಷ್ಟ ಆಕಾರಗಳಲ್ಲಿ ಮುಕ್ಕಾಗದಂತೆ ಇಂದಿಗೂ ಪೋಷಿಸಿಕೊಂಡು ಬರಲಾಗುತ್ತದೆ. ಹಲವು ಕಾಲಘಟ್ಟಗಳಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯ ತನ್ನನ್ನು ತಾನು ಪುನಾರಚಿಸಿಕೊಳ್ಳುತ್ತಾ ಬಂದಿದ್ದರೂ ಕನ್ನಡದ ಜಾಯಮಾನಕ್ಕೆ ಹೊರತಾದ ಗ್ರಂಥಸಂಪಾದನಾ ವಿಧಾನಗಳು ಅದರಲ್ಲಿನ ಪ್ರತಿಭಟನಾ ಮತ್ತು ಪ್ರತ್ಯೇಕತೆಯ ಧ್ವನಿಗಳನ್ನು ಅಡಗಿಸುತ್ತಾ ಬಂದಿವೆ. ಹಲವು ಕನ್ನಡಂಗಳ್ ಎನ್ನುವ ಮಾತು ಹಿಂದೆ ಸರಿದು ಶುದ್ಧ ಮತ್ತು ಪಾವಿತ್ರ್ಯ ಎನಿಸುವ ಕೇಂದ್ರೀಕೃತ ಪ್ರವೃತ್ತಿಗಳ ಶುಷ್ಕ ಸಾಹಿತ್ಯ ಸಂಸ್ಕೃತಿಯೊಂದನ್ನು ಹುಟ್ಟು ಹಾಕಿದವು. ಪ್ರತಿಯೊಂದು ರಚನೆಯಲ್ಲೂ ಒಂದು ಮನಸ್ಸಿಗೆ ಒಂದು ಭಿನ್ನ ತುಡಿತವಿದೆ. ಎನ್ನುವ ಸಂವೇದನಶೀಲ ಗುಣವನ್ನೇ ಇಂಥ ಸಂಪಾದನಾ ಮಾದರಿಗಳು ಅಲ್ಲಗಳೆಯುತ್ತವೆ.

ಹೀಗೆ ಒಟ್ಟು ಬರಹ ಮತ್ತು ಸಂಕಲನ ವ್ಯವಸ್ಥೆಯೇ ಒಂದು ಉದ್ದೇಶಿತ ಪರಿಧಿಗೆ ತನ್ನನ್ನು ಹೊಂದಿಸಿಕೊಂಡ ಬಗೆ ಸತ್ಯವಾದುದು ಕಳೆದು ಹೋಗುತ್ತಿದ್ದ ಹಲವು ಅಮೂಲ್ಯ ಕೃತಿಗಳನ್ನು ಉಳಿಸಿದ ಕೀರ್ತಿ ಸಂಕಲನಕಾರರಿಗೆ ಸಲ್ಲಿದರೂ ಅದರ ಮಿತಿಯನ್ನು ಮರೆಯಲಾಗದು. ಕೃತಿಯೊಂದನ್ನು ವಿದ್ಯುತ್ಪೂರ್ಣ ಶುಷ್ಕ ಸಾಹಿತ್ಯದ ಪಠ್ಯವಾಗಿ ನೋಡುವ ಬದಲು. ಸಂಸ್ಕೃತಿಯು ಪಠ್ಯದೊಂದಿಗೆ. ಪಠ್ಯವು ಸಂಸ್ಕೃತಿಯೊಂದಿಗೆ ನಡೆಸಿದ ಅನುಸಂಧಾನಗಳನ್ನು

ಗ್ರಹಿಸುವುದು ಮುಖ್ಯವಾಗಬೇಕಾಗಿದೆ. ಈ ಸಂಗತಿ ಗ್ರಂಥ ಸಂಪಾದನಾ ಶಾಸ್ತ್ರದ ಬಹುಮುಖ್ಯ ಕಾಳಜಿಯಾಗಿದೆ.

ಅಡಿಟಿಪ್ಪಣಿಗಳು

೧. ವೀರೇಶ ಬಡಿಗೇರ, ಹಸ್ತಪ್ರತಿ ವ್ಯಾಸಂಗ, ಪು.೪೭; ೨೦೧೮

೨. ವೀರೇಶ ಬಡಿಗೇರ, ಹಸ್ತಪ್ರತಿ ವ್ಯಾಸಂಗ–೧೫, ಉಧೃತ ಶಿವಗಣ ಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆ, ಪು.೪೮

೩. ಅದೇ, ಪು.೪೮

೪. ಅದೇ, ಪು.೪೮

೫. ಹರಿಶ್ಚಂದ್ರಕಾವ್ಯ, ಪು.೪೯; ಉಧೃತ, ವೀರೇಶ ಬಡಿಗೇರ, ಹಸ್ತಪ್ರತಿ ವ್ಯಾಸಂಗ–೧೫, ೨೦೧೮

೬. ಜೈಮಿನ ಭಾರತ ಪು.೪೯; ಉಧೃತ, ವೀರೇಶ ಬಡಿಗೇರ, ಹಸ್ತಪ್ರತಿ ವ್ಯಾಸಂಗ–೧೫, ೨೦೧೮

೭. ವೀರೇಶ ಬಡಿಗೇರ, ಹಸ್ತಪ್ರತಿ ವ್ಯಾಸಂಗ–೪, ಕನ್ನಡ ಹಸ್ತಪ್ರತಿ ಅಧ್ಯಯನದ ಹೊಸಸಾಧ್ಯತೆಗಳು, ಪು.೫೯; ೨೦೦೩

೮. ವೀರೇಶ ಬಡಿಗೇರ, ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು, ಪು.೧–೨; ೨೦೦೬

೯. ಅದೇ, ಪು.೨; ೨೦೦೬

೧೦. ಅದೇ, ಪು.೪; ೨೦೦೬

೧೧. ವೀರೇಶ ಬಡಿಗೇರ, ಹಸ್ತಪ್ರತಿ ಸಂಕಥನ, ಪು.೧೨೨; ೨೦೧೪

೧೨. ಅದೇ, ಪು.೧೨೨; ೨೦೧೪

೧೩. ಅದೇ ಪು.೧೨೩; ೨೦೧೪

೧೪. ಅದೇ, ಪು.೧೨೭; ೨೦೧೪

೧೫. ಅದೇ, ಪು.೧೨೯; ೨೦೧೪

೧೬. ಕಲಬುರ್ಗಿ ಎಂ.ಎಂ., ಕನ್ನಡ ಗ್ರಂಥ ಸಂಪಾದನಶಾಸ್ತ್ರ, ಪು.೬; ೨೦೧೫

೧೭. ಅದೇ, ಪು.೧೮–೧೯; ೨೦೧೫

೧೮. ಕಲಬುರ್ಗಿ ಎಂ.ಎಂ., ಮಾರ್ಗ–೧, ಪು.೪೦೪

೧೯. ಕಲಬುರ್ಗಿ ಎಂ.ಎಂ., ಕನ್ನಡ ಗ್ರಂಥಸಂಪಾದನಶಾಸ್ತ್ರ, ಪು.೩೦–೩೧; ೨೦೧೫

೨೦. ಅದೇ, ಪು.೩೧; ೨೦೧೫

೨೧. ಅದೇ, ಪು೩೨; ೨೦೧೫

೨೨. ದೇವಿರಪ್ಪ ಎಚ್., ಕನ್ನಡ ಹಸ್ತಪ್ರತಿಗಳ ಇತಿಹಾಸ, ಪು.೧೦೧; ೧೯೭೭

೨೩. ರವೀಂದ್ರನಾಗತಪ್ಪ ಜೋಳಗಾವ, ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಹಸ್ತಪ್ರತಿ ಸೂಚಿಗಳು: ಒಂದು ಅಧ್ಯಯನ, ಪು.೧–೨; ೨೦೦೭

೨೪. ಅದೇ, ಪು.೨; ೨೦೦೭

೨೫. ಸಣ್ಣಯ್ಯ ಬಿ.ಎಸ್., ಹಸ್ತಪ್ರತಿಶಾಸ್ತ್ರ ಪು.೪೫–೪೬; ೧೯೯೧

೨೬. ಅದೇ, ಪು.೪೬; ೧೯೯೧

೨೭. ದೇವಿರಪ್ಪ ಎಚ್.(ಸಂ), ಪ್ರಾಚ್ಯ ಸಂಶೋಧನಾಲಯ, ಪು. ; ೧೯೮೩

೨೮. ಉತ್ತಂಗಿ ಚನ್ನಪ್ಪ(ಸಂ), ಸರ್ವಜ್ಞನ ವಚನಗಳ ಸಾಹಿತ್ಯ, ಪು.೧೬೬–೧೬೭; ಉದ್ಧೃತ, ರವೀಂದ್ರನಾಥ ಕೆ., ಹಸ್ತಪ್ರತಿವ್ಯಾಸಂಗ–೧೮, ೨೦೧೧

೨೯. ತಿಪ್ಪೇರುದ್ರಸ್ವಾಮಿ ಎಚ್., ಪು.೧೬೭, ಉಧೃತ ವೀರೇಶ ಬಡಿಗೇರ, ಸರ್ವಜ್ಞನ ವಚನಗಳ ಪರಿಷ್ಕರಣೆ ಅಧ್ಯಯನ, ೨೦೧೮

೩೦. ರಾ.ಗೌ., ಸ.ಸ.ತ್ರಿ.ವ–೬, ಪು.೩೭; ೨೦೧೩, ಉಧೃತ ರವೀಂದ್ರನಾಥ ಕೆ.(ಸಂ), ಹಸ್ತಪ್ರತಿ ವ್ಯಾಸಂಗ–೧೮, ಪು.೧೬೮; ೨೦೧೮

೩೧. ಉತ್ತಂಗಿ ಚೆನ್ನಪ್ಪ(ಸಂ), ವ.ವ–೮, ಪು.೨; ೨೦೧೪, ಉಧೃತ ರವೀಂದ್ರನಾಥ ಕೆ.(ಸಂ), ಹಸ್ತಪ್ರತಿ ವ್ಯಾಸಂಗ–೧೮, ಪು.೧೬೮; ೨೦೧೮

೩೨. ಬಸವರಾಜು ಎಲ್., ಸ.ವ.ವ–೬, ಪು.೨೩, ೨೦೧೭, ಉಧೃತ ರವೀಂದ್ರನಾಥ ಕೆ.(ಸಂ), ಹಸ್ತಪ್ರತಿ ವ್ಯಾಸಂಗ–೧೮, ಪು.೧೬೮; ೨೦೧೮

೩೩. ಸಿದ್ದರಾಮಯ್ಯ ಎಸ್.ಜಿ., ಕಾಲುದಾರಿಯ ಸಂತ, ಪು.೧೨೭, ೨೦೧೩, ಉಧೃತ ರವೀಂದ್ರನಾಥ ಕೆ.(ಸಂ), ಹಸ್ತಪ್ರತಿ ವ್ಯಾಸಂಗ–೧೮, ಪು.೧೬೮; ೨೦೧೮

೩೪. ರಾ.ಗೌ., ವ–೧೩, ಪು.೩೮, ೨೦೧೩, ಉಧೃತ ರವೀಂದ್ರನಾಥ ಕೆ.(ಸಂ), ಹಸ್ತಪ್ರತಿ ವ್ಯಾಸಂಗ–೧೮, ಪು.೧೬೮; ೨೦೧೮

೩೫. ಬಸವರಾಜು ಎಲ್., ವ–೧೩, ಉಧೃತ ರವೀಂದ್ರನಾಥ ಕೆ.(ಸಂ), ಹಸ್ತಪ್ರತಿ ವ್ಯಾಸಂಗ–೧೮, ಪು.೧೬೮; ೨೦೧೮

೩೬. ರಾ.ಗೌ., ಸ.ಸ.ತ್ರಿ.ವ–೬, ಪು.೩೭; ೨೦೧೩, ಉಧೃತ ರವೀಂದ್ರನಾಥ ಕೆ.(ಸಂ), ಹಸ್ತಪ್ರತಿ ವ್ಯಾಸಂಗ–೧೮, ಪು.೧೬೮; ೨೦೧೮

೩೭. ಉತ್ತಂಗಿ ಚೆನ್ನಪ್ಪ(ಸಂ), ವ.ವ–೮, ಪು.೨; ೨೦೧೪, ಉಧೃತ ರವೀಂದ್ರನಾಥ ಕೆ.(ಸಂ), ಹಸ್ತಪ್ರತಿ ವ್ಯಾಸಂಗ–೧೮, ಪು.೧೬೮; ೨೦೧೮

೩೮. ಹಳ್ಳಿಕೇರಿ ಎಫ್.ಟಿ., ಸಿರಿಸಂಪದ, ಪು.೮; ೨೦೦೨

೩೯. ಸೀತಾರಾಮಯ್ಯ ಎಂ.ವಿ., ಸಮಗ್ರ ಸಾಹಿತ್ಯ(ಗ್ರಂಥಸಂಪಾದನೆ ಹಸ್ತಪ್ರತಿಶಾಸ್ತ್ರ ಮತ್ತು ಶಾಸ್ತ್ರ ಸಾಹಿತ್ಯ ಸಂಪುಟ–೬, ಪು.೧೨೬–೪೩; ೨೦೧೩

೪೦. ಅಮರೇಶ ನುಗಡೋಣಿ(ಸಂ), ಶೂನ್ಯಸಂಪಾದನೆಗಳ ಸಾಂಸ್ಕೃತಿಕ ಮುಖಾಮುಖಿ, ಪು.೭೮; ೨೦೦೨

ಅಧ್ಯಾಯ: ಐದು

ಮತಧರ್ಮಾಧಾರಿತ ಅಧ್ಯಯನದ ಮಾದರಿಗಳು

೫.೧ ಜೈನ ಮತಾಧಾರಿತ ಅಧ್ಯಯನಗಳು

೫.೨ ಶೈವ/ವೀರಶೈವ ಮತಾಧಾರಿತ ಅಧ್ಯಯನಗಳು

೫.೩ ವೈದಿಕ ಮತಾಧಾರಿತ ಅಧ್ಯಯನಗಳು

೫.೪. ಮತಾತೀತ ಅಧ್ಯಯನಗಳು

ಅಧ್ಯಾಯ : ಐದು

ಮತಧರ್ಮಾಧಾರಿತ ಅಧ್ಯಯನದ ಮಾದರಿಗಳು

ಹಸ್ತಪ್ರತಿಗಳನ್ನು ಗತವೆಂದು ಬರೀ ನಿರ್ಭಾವುಕ ಆಕರಗಳೆಂದು ಪರಿಭಾವಿಸುತ್ತ ವೈಭವೀಕರಿಸುತ್ತ ಬರುವ ಅದನ್ನೊಂದು ಪಾಂಡಿತ್ಯ ಸಂಚಯದ ಉದ್ಯೋಗವನ್ನಾಗಿಸಲಾಗಿದೆ. ಇಂಥ ಗತದ ರಚನೆಗಳು ನಮ್ಮ ವರ್ತಮಾನದ ಮೇಲೆ ನಡೆಸುವ ಪರಿಣಾಮಗಳ ಅಭ್ಯಾಸ ನಡೆಸದೆ, 'ಸಾಂಸ್ಕೃತಿಕ ಸಂಪತ್ತಿನ ಖನಿ' ಎಂದು ಹೇಳಿ ಕೈ ಬಿಡಲಾಯಿತು. 'ಹಸ್ತಪ್ರತಿಗಳೆಂದರೆ ಅವು ಕ್ರಿಯಾಸಕ್ತ (ಆ್ಯಕ್ಷನೆಬಲ್) ಸಾಂಸ್ಕೃತಿಕ ಇತಿಹಾಸವೊಂದರ ಪುನರ್ ನಿರ್ಮಾತೃಗಳು'[೧] ಎಂಬುದನ್ನು ಮರೆಯಬಾರದು. ಯಾಕೆಂದರೆ ಕನ್ನಡದಲ್ಲಿ ಲಭ್ಯವಿದ್ದ ಎಲ್ಲಾ ಬಗೆಯ ಹಸ್ತಪ್ರತಿಗಳ ಆತ್ಯಂತಿಕ ಆಶಯ, ಅರಿವಿನ ವಿಸ್ತಾರ. ಮಾನವ ಜಾಗೃತಿ. ಹೇಳುವ, ಕೇಳುವ, ಓದುವ ಎಂದು ಪದೇ ಪದೇ ಕಾಣುವ ಈ ಪದ ಪುಂಜಗಳು ಮನುಷ್ಯನ ಮೂರ್ತ ಬದುಕಿನ ಉನ್ನತಿಗಾಗಿಯೇ ಹಂಬಲಿಸಿದಂತವು. ತನ್ನ ದೇಶದ ವ್ಯಾಪ್ತಿಯನ್ನು ಮೀರಿ, ಕವಿ-ಪ್ರತಿಕಾರರು ಎನ್ನುವ ಜೀವ ಕೇಂದ್ರಿತ ಪ್ರಶ್ನೆ ಮತ್ತು ಅಪೇಕ್ಷೆಗಳನ್ನು ಗುಣಾತ್ಮಕ ಸಂವಾದವನ್ನು ಹುಟ್ಟು ಹಾಕುತ್ತವೆ.

ಹಸ್ತಪ್ರತಿಗಳಲ್ಲಿ ಕಾಣುವ ಇಂಥ ಡಯಲೆಕ್ಟಿಕ್ ಬಹುರೂಪಿಯಾದದ್ದು. ಇದನ್ನು ಇಡೀ ಭಾರತೀಯ ಸಾಹಿತ್ಯದಲ್ಲಿ ಕಾಣಬಹುದು. ಹಸ್ತಪ್ರತಿಗಳಲ್ಲಿ ಬಹುಮುಖ್ಯವಾಗಿ ಕಾಣುವ ಕೃತಿ ಪ್ರತಿ, ಇಹ, ಪರ, ಸ್ವರ್ಗ, ನರಕ, ಪಾಪ, ಪುಣ್ಯ, ಧರ್ಮ, ಕರ್ಮ, ಆಯುರಾರೋಗ್ಯ, ಅನಿಷ್ಟ ಪದ್ಧತಿ, ನಿವೃತ್ತಿ, ದೇಹ, ಆತ್ಮ, ಲೌಕಿಕ, ಅಲೌಕಿಕ, ವ್ಯಕ್ತಿ, ಸಮಾಜ, ಗಂಡು, ಹೆಣ್ಣು, ಹಿಂಸೆ, ಅಹಿಂಸೆ, ಇಂದ್ರಿಯಾನುಭವ ಜಿತೇಂದ್ರಿಯತ್ವ, ಜ್ಞಾನ, ಅಜ್ಞಾನ, ಕ್ರಿಯ, ಜಡ, ಪ್ರಭು, ಪ್ರಜೆ, ಶ್ರೇಷ್ಠ, ಕನಿಷ್ಠ, ಸತ್ಪಾತ್ರ, ಅಪಾತ್ರ, ಶುದ್ಧ, ಅಶುದ್ಧ, ದೇಶಿ, ಮಾರ್ಗ ಇತ್ಯಾದಿ ದ್ವಂದ್ವಗಳು ಹಸ್ತಪ್ರತಿಗಳ ಬಹುರೂಪಿ ಪರಿಚಲನ ಮಾದರಿಗಳನ್ನು ಕಟ್ಟಿಕೊಡುತ್ತವೆ.

ಈ ದ್ವಂದ್ವ ಮಾದರಿಗಳು ಇಹದ ಬದುಕು ಯಾತನೆಗೆ ಮಾತ್ರ ಕಾರಣವೆಂದು ಸಾವು ಇದಕ್ಕೆ ಮುಕ್ತಿಯೆಂದು ಹೇಳುತ್ತವೆ. ಈ ದೇಹ ನಶ್ವರ, ಕ್ಷುಲ್ಲಕವಾದ ದೇಹ ಕಾರಣಕ್ಕಾಗಿ ಹಲವು ಕೋಶಗಳು ಬರುತ್ತವೆ. ಅದಕ್ಕಾಗಿ ಕನಿಷ್ಠವಾದ ಈ ದೇಹ ಮತ್ತು ಅದರ ಕ್ಷಣ ಭಂಗುರತೆಯನ್ನು ಮೀರಿ ಅವಿನಾಶಿಯಾದ ಶಾಶ್ವತವಾದ ಸುಖವನ್ನು(ಸ್ವರ್ಗ) ಪಡೆಯಬೇಕೆಂದು ಹೇಳುತ್ತವೆ.

ಧಾರ್ಮಿಕ ಎನ್ನುವ ಹಸ್ತಪ್ರತಿಗಳ ಕೇಂದ್ರವೇ ಧರ್ಮ ನಿರಪೇಕ್ಷೆಯಾಗಿದೆ. ಹಸ್ತಪ್ರತಿಗಳ ಒಡಲಾಳದ ಉದ್ದೇಶ ಧರ್ಮ ಪ್ರತಿಪಾದನೆಯಾಗಿದ್ದರೂ, ಅದರಲ್ಲಿನ ಕಾವ್ಯಾನುಭವ ಜಡ ಧರ್ಮವನ್ನು ಧಿಕ್ಕರಿಸಿ ನಡೆಯುವುದಾಗಿದೆ. ಮತ್ತು ಸಂಸ್ಕೃತಿಯ ಒಳಸೂಕ್ಷ್ಮಗಳನ್ನು ವಿಸ್ತರಿಸು ವುದಾಗಿದೆ. ಹಸ್ತಪ್ರತಿಗಳು ಇಂಥ ಸಂಗತಿಗಳ ಪ್ರತಿಪಾದನೆಗಾಗಿ ಆಯ್ದುಕೊಂಡ ವಿಷಯ ಮತ್ತು ವಸ್ತುಗಳು ಸೀಮಿತ ಮನಸ್ಸಿನ ನಮ್ಮ ಕಣ್ಣುಗಳನ್ನು ತೆರಸುತ್ತವೆ. ಚಂಪೂ, ರಗಳೆ, ವಚನ, ಕೀರ್ತನೆ, ಷಟ್ಪದಿ, ಸಾಂಗತ್ಯ, ತ್ರಿಪದಿ, ಪುರಾಣ, ಚರಿತ್ರೆ, ಸ್ತೋತ್ರ, ದಂಡಕ, ತಾರಾವಳಿ, ಬಯಲಾಟ, ಕಾವ್ಯ, ಕಥೆ ಮುಂತಾದ ವಿಭಿನ್ನ ಪ್ರಕಾರದ ಸಾಹಿತ್ಯಕ ಸಂಪತ್ತು ಕನ್ನಡದಲ್ಲಿ ಕಾಣುತ್ತದೆ. ಇದಲ್ಲದೆ ಅಲಂಕಾರ, ಛಂದಸ್ಸು, ವ್ಯಾಕರಣ, ನಿಘಂಟುಗಳಂಥ ಲಾಕ್ಷಣಿಕ ಗ್ರಂಥಗಳು, ರಟ್ಟಮತಶಾಸ್ತ್ರ, ಕಾಮಶಾಸ್ತ್ರ, ಪಾಕಶಾಸ್ತ್ರ, ಖಡ್ಗಶಾಸ್ತ್ರ, ಕೃಷಿಶಾಸ್ತ್ರ, ಶಿಲ್ಪಶಾಸ್ತ್ರ, ಗಣಿತಶಾಸ್ತ್ರ, ಮುಲ್ಲಾಶಾಸ್ತ್ರ, ವೈದ್ಯಶಾಸ್ತ್ರ, ಮಾಟ-ಮಂತ, ರಸವಿಜ್ಞಾನದಂತ ಹಲವು ಸಾಮಾಜಿಕ ಅವಶ್ಯಕತೆಯುಳ್ಳ ಕೃತಿಗಳು ಸಿಗುತ್ತವೆ. ಇದಲ್ಲದೆ ಉದ್ಧರಣೆ ಪಟಲಗಳಂಥ ಸಚಿತ್ರ ಹಸ್ತಪ್ರತಿಗಳು ಕಾಣಸಿಗುತ್ತವೆ.

ಈ ಎಲ್ಲ ರೀತಿಯ ಹಸ್ತಪ್ರತಿಗಳ ರೂಪುಗೊಳ್ಳುವಿಕೆಯ ಹಿಂದೆ ಪ್ರಧಾನವಾಗಿ ಆಯುರಾರೋಗ್ಯ ಭಾಗ್ಯ, ಪುತ್ರಸಂತಾನ, ಸಂತಾನಪ್ರಾಪ್ತಿ, ಸಕಲೈಶ್ವರ್ಯ, ಜೀವನ ಸುಖ, ಮನೋಭಿಷ್ಟ, ಕಾರ್ಯಸಿದ್ಧಿ, ಸ್ವಸುಖ ಪರಸುಖದ ಹಾರೈಕೆ, ಸಂಪ್ರೀತಿ, ಸಮಯನಿಷ್ಠೆ, ಮೋಕ್ಷ ಸಂಪಾದನೆ, ರೋಗರುಜಿನ ನಿವಾರಣೆ, ಮಳೆಗಾಗಿ ಹೀಗೆ ಹತ್ತು ಹಲವು ರೀತಿಯ ಪ್ರಯೋಜನಕ್ಕಾಗಿ ಕನ್ನಡ ಹಸ್ತಪ್ರತಿಗಳು ಮೈಯೊಡ್ಡಿವೆ. ಲಿಪಿ ಲಿಪಿವಿನ್ಯಾಸ ಕರ್ತೃ, ಪ್ರತಿಕಾರ ಜೊತೆಗೆ ಕನ್ನಡಿಗರ ಸೃಜನಾತ್ಮಕ ಪ್ರವೃತ್ತಿಯನ್ನು ಸಾಂಸ್ಕೃತಿಕ ವೈಶಿಷ್ಟವನ್ನು ಇವುಗಳಿಂದ ಬಹುಮುಖಿ ಸಂವೇದನೆಗಳ ಅರ್ಥಪೂರ್ಣ ಒಡಲು.

ಸಾಮಾಜಿಕ, ರಾಜಕೀಯ, ವೈಯಕ್ತಿಕ, ಆರ್ಥಿಕ, ಧಾರ್ಮಿಕ ಮತ್ತು ತಾತ್ವಿಕ ಸಂಬಂಧ ಗಳ ಅಂತರ್‌ಕ್ರಿಯೆಗಳ ಭಾಗವಾಗಿ ಈ ಹಸ್ತಪ್ರತಿಗಳನ್ನು ಅಭ್ಯಸಿಸಬೇಕಾಗಿದೆ. ಹಸ್ತಪ್ರತಿ ಬರವಣಿಗೆ ಕ್ರಿಯೆ ಎನ್ನುವುದು ಅದು ಒಳಗಿನಿಂದಲೇ ಹಲವು ಅಂತಃಸಂಬಂಧಗಳೊಂದಿಗೆ ಸಂಕೀರ್ಣತೆಗಳೊಂದಿಗೆ ಸಂರಚನೆಗೊಂಡಿರುವಂಥದ್ದು. ಬಹುಸಂಖ್ಯಾತ ಅನಕ್ಷರಸ್ಥ ಅಂದರೆ

ಅರಿವಿನ ಆಸಕ್ತಿ ಹೊಂದಿದ ಜನಮಾನಸವನ್ನು ತಲುಪಲು ಹಾತೊರೆದ ಸಂವಹನಶೀಲ ಗುಣವುಳ್ಳಂಥವು. ಇವುಗಳ ಇಷ್ಟೊಂದು ಪ್ರಸರಣಕ್ಕೆ ಬಹುಮುಖ್ಯ ಕಾರಣರಾದವರು ಲಿಪಿಕಾರರು ಎಂಬುದು ತಿಳಿದ ವಿಚಾರ. ಇಂಥ ಸಂಸ್ಕೃತಿಮುಖಿಯಾದ ಸೃಜನಶೀಲ ನೆಲೆಗಳ ಅರ್ಥಪೂರ್ಣ ಅಧ್ಯಯನ ಇನ್ನು ಗಂಭೀರವಾಗಿ ಮತ್ತು ವ್ಯಾಪಕವಾಗಿ ನಡೆಯುವ ಅವಶ್ಯಕತೆಯಿದೆ.

ಪ್ರಾಚೀನ ಹಾಗೂ ಮಧ್ಯಕಾಲೀನ ಸಂದರ್ಭಗಳಲ್ಲಿ ಗ್ರಂಥ ರಚನೆ, ಸಂರಕ್ಷಣೆ ಹಾಗೂ ಪ್ರಸಾರ ಕಾರ್ಯವು ಹೆಚ್ಚು ಧಾರ್ಮಿಕವಾಗಿತ್ತು ಎಂದು ಬಿಂಬಿಸಲಾಗಿದೆ. ಈ ಪರಂಪರೆ ಆಧುನಿಕ ಸಂದರ್ಭದಲ್ಲಿ ಮುಂದುವರಿಯಿತು. ಪ್ರತಿ ಧರ್ಮ ಹಾಗೂ ಪಂಥಗಳು ತನ್ನ ಧರ್ಮದ ತತ್ವ, ಸಿದ್ಧಾಂತಗಳನ್ನು ಆಚರಣೆಯ ವಿಚಾರಧಾರೆಗಳನ್ನು ತಮ್ಮ ಕೃತಿಯಲ್ಲಿ ಅಳವಡಿಸಿಕೊಂಡು ಸಂಗ್ರಹಿಸುವ, ಸಂರಚಿಸುವ ಕೆಲಸ ಮಾಡುತ್ತ ಬಂದಿವೆ. ಆ ಮೂಲಕ ಸ್ವಧರ್ಮದ ತತ್ವ ಸಿದ್ಧಾಂತಗಳನ್ನು ಸಮರ್ಥಿಸುವುದು ಮತ್ತು ಅನ್ಯ ಧರ್ಮದ ಜೊತೆಗೆ ಸಂಘರ್ಷಗೊಳಿಸುವ ಅನ್ಯಧರ್ಮದ ವಿಡಂಬಣೆ ಮಾಡುವುದು ಪ್ರಮುಖವಾಗಿ ಕಂಡುಬರುತ್ತದೆ.

ಧರ್ಮವು ಪ್ರಾಚೀನ ಗ್ರಂಥಗಳ ಸಂಗ್ರಹ ಸಂರಕ್ಷಣೆ, ಸಂವರ್ಧನೆ ಜೊತೆಗೆ ಕನ್ನಡ ಸಂಸ್ಕೃತಿಯ ಜ್ಞಾನ, ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಉದಾ: ಮಠಮಾನ್ಯಗಳು, ಜೈನಬಸದಿಗಳು, ಚೈತ್ಯಾಲಯಗಳು, ಅಗ್ರಹಾರಗಳು, ಚರ್ಚ್, ಮಸೀದಿ ಹಾಗೂ ಗುರುದ್ವಾರಗಳು ಗ್ರಂಥಗಳನ್ನು ಬರೆಸಿ, ಸಂರಕ್ಷಿಸಿ, ಸಂಪಾದಿಸಿ, ಅಧ್ಯಯನಿಸಿ ಧರ್ಮದ ತತ್ವ ಸಿದ್ಧಾಂತಗಳು ಉಳಿಸುವಲ್ಲಿ, ಬೆಳೆಸುವಲ್ಲಿ ಪ್ರಧಾನ ಪಾತ್ರವಹಿಸಿದ್ದು ಕಂಡುಬರುತ್ತದೆ. ಧರ್ಮವನ್ನು ಕಾಪಾಡುವುದು ಇಂಥ ಧಾರ್ಮಿಕ ವ್ಯಕ್ತಿ ಹಾಗೂ ಸಂಸ್ಥೆಗಳು ಗುರಿಯಾದಂತೆ ಧಾರ್ಮಿಕ ಗ್ರಂಥಗಳ ಸಂಗ್ರಹ, ಸಂರಕ್ಷಣೆ, ಸಂವರ್ಧನೆ, ಪುನರುತ್ಪಾದನೆ ಹಾಗೂ ಪ್ರಸಾರ ಕಾರ್ಯವನ್ನು ನಿಷ್ಠೆಯಿಂದ ಮಾಡುತ್ತ ಬಂದಿವೆ.

ಧರ್ಮ ಧರ್ಮಗಳ ನಡುವಿನ ಸಂಘರ್ಷದ ಜೊತೆಗೆ ತನ್ನ ಧರ್ಮದ ಅಸ್ತಿತ್ವವನ್ನು ಅನನ್ಯತೆಯನ್ನು ಕಾಪಾಡಿಕೊಳ್ಳುವ ತನ್ನದೇ ಆದ ಆಚಾರ ವಿಚಾರ, ಚಿಂತನ ಮಂಥನಗಳ ನಡುವೆ ಇನ್ನೊಂದು ಧರ್ಮದ ದಮನಕಾರಿ ನೀತಿಯಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವ ಪ್ರಕ್ರಿಯೆ ಕಾಲದಿಂದ ಕಾಲಕ್ಕೆ ಸಾಗುತ್ತಾ ಬಂದಿದೆ. ಪ್ರಕೃತಿಯಲ್ಲಿ ಪ್ರತಿಯೊಂದು ಜೀವಿಗಳು ತನ್ನನ್ನು ತಾನು ರಕ್ಷಿಸಿಕೊಳ್ಳುವ ಮನೋಧರ್ಮವನ್ನು ಹೊಂದುವುದರ ಜೊತೆಗೆ ವಿಕಾಸವಾದದ ತತ್ವ ಸಿದ್ಧಾಂತವನ್ನು ತನ್ನೊಳಗೆ ರೂಪಿಸಿಕೊಂಡಿವೆ. ನನ್ನ ಧರ್ಮ ಹಿರಿದು ಎನ್ನುವವರು ತಮ್ಮ ಧರ್ಮದ ಉತ್ತಮ ಭಾಗವನ್ನು ಇತರ ಧರ್ಮದ ನಿಕೃಷ್ಟ ಭಾಗಗಳನ್ನು ತೆಗೆದು ಕೊಳ್ಳುತ್ತಾರೆ. ಧರ್ಮವೆಂಬ ಹೆಸರು ಒಪ್ಪುವ ಎಲ್ಲ ಮತಧರ್ಮದಲ್ಲಿಯೂ ಉತ್ತಮವಾದ

ನೀತಿಬೋಧೆ ಮತ್ತು ತತ್ವ ಸಿದ್ಧಾಂತಗಳಿವೆ. ಅದನ್ನು ಅನುಸರಿಸುವ ಜನರಲ್ಲಿ ಉತ್ತಮ ಜೀವನವೂ ಇದೆ. ನಿಕೃಷ್ಟ ಆಚಾರವೂ ಇದೆ. ಸಕಾರಾತ್ಮಕ ದೃಷ್ಟಿಯಿಂದ ನೋಡುವವನಿಗೆ ಆಯಾ ಮತಧರ್ಮದ ಉನ್ನತ ಭಾಗವೇ ಮುಖ್ಯವೆಂದು ಕಾಣಬಹುದು.

ಧರ್ಮವೆಂಬುದು ಪ್ರಶ್ನಾತೀತವಾದ ಪವಿತ್ರಲೋಕ ಎಂಬುದರ ಜೊತೆಗೆ ಅದೊಂದು ಅಫೀಮು. ಅದನ್ನೊಂದು ತಟಸ್ಥ ಗ್ರಹಿಕೆಯನ್ನಾಗಿ ನೋಡುವ ಸಂದರ್ಭಗಳು ಚಾಲ್ತಿಯಲ್ಲಿವೆ. ಧರ್ಮಬೀರು ಗ್ರಹಿಕೆ ಮನುಷ್ಯನಲ್ಲಿ ಸೃಜನಾತ್ಮಕ ಮತ್ತು ಪ್ರತಿರೋಧದ ಶಕ್ತಿಯನ್ನು ಬೆಳೆಸುತ್ತದೆ. ಚರಿತ್ರೆಯಲ್ಲಿ ನಡೆದಿರುವ ಯುದ್ಧ ರಕ್ತಪಾತಗಳಂತಹ ಘಟನೆಗಳಿಗೆ ಈ ಮತಧರ್ಮಗಳೇ ಕಾರಣವಾಗಿದ್ದು ಸುಳ್ಳಲ್ಲ.

'ದ್ರಾವಿಡ ಭಾಷೆಯಿಂದ ಬೇರ್ಪಟ್ಟ ಕನ್ನಡ ಸುಮಾರು ಕ್ರಿ.ಶ. ೨-೩ನೆಯ ಶತಮಾನದ ಹೊತ್ತಿಗೆ ಕನ್ನಡ ಸಾಹಿತ್ಯವು ಜೈನ, ಬೌದ್ಧ ಧರ್ಮಗಳು ಕನ್ನಡದಲ್ಲಿ ಧಾರ್ಮಿಕ ಸಾಹಿತ್ಯದ ಸೃಷ್ಟಿಗೈಯುವ ತನ್ನ ಧರ್ಮ ತತ್ವಸಿದ್ಧಾಂತಗಳನ್ನು ಕೃತಿಗಳಲ್ಲಿ ಚಿತ್ರಿಸಿದ್ದಾರೆ. ನಂತರದ ಕಾಲದಲ್ಲಿ ಶೈವ, ವೈದಿಕ ಧರ್ಮಗಳು ತಮ್ಮ ಕೃತಿಗಳಲ್ಲಿ ತಮ್ಮ ಧರ್ಮ ಸಿದ್ಧಾಂತಗಳನ್ನು ಬಿಂಬಿಸುವ ಅಂಶಗಳೂ ಒಳಗೊಂಡಿವೆ. ಲೌಕಿಕ ಸಾಹಿತ್ಯ ಶಿಕ್ಷಣ ಪ್ರಸಾರಕ್ಕಾಗಿ ಹಸ್ತಪ್ರತಿಗಳ ಅಗತ್ಯವನ್ನು ಆಗಲೇ ಕಂಡುಕೊಂಡಿದ್ದ ಕನ್ನಡಿಗರಿಗೆ ಜೈನ-ಬೌದ್ಧ ಧರ್ಮಗಳು ಹಸ್ತಪ್ರತಿಗಳ ಧಾರ್ಮಿಕ ಮಹತ್ವವನ್ನು ಮನವರಿಕೆ ಮಾಡಿಕೊಟ್ಟಂತಿವೆ'.[೨]

ಅಗ್ರಹಾರಗಳು ಮಠ-ಮಾನ್ಯಗಳು, ಜಿನಾಲಯದಲ್ಲಿ ಮುನಿಗಳು. ಸ್ವಾಮಿಗಳು ಅಧಿಕಾರ ವಹಿಸಿಕೊಳ್ಳುವಾಗ ಜ್ಞಾನದ ಸಂರಕ್ಷಣೆಯ ಹೊಣೆಯನ್ನು ಅವರಿಗೆ ವಹಿಸಲಾಗುತ್ತಿತ್ತು. ಪಟ್ಟಾಧಿಕಾರದ ಸಂದರ್ಭದಲ್ಲಿ ಆ ಧರ್ಮದ ಕೃತಿಗಳನ್ನು ಅವರ ಕೈಯಲ್ಲಿ ಕೊಡುವ ಮೂಲಕ ಅವರಿಗೆ ಜ್ಞಾನದ ಸಂಗ್ರಹ ಸಂರಕ್ಷಣೆ, ಸಂವರ್ಧನೆ ಹಾಗೂ ಪ್ರಸಾರದ ಹೊಣೆಯನ್ನು ಹೊರಿಸಲಾಗುತ್ತಿತ್ತು. ವೀರಶೈವ ಧರ್ಮದಲ್ಲಿ ಸ್ವಾಮಿಗಳು ಅಧಿಕಾರವಹಿಸಿಕೊಳ್ಳುವಾಗ ಅವರ ಕೈಯಲ್ಲಿ ವೀರಶೈವ ತತ್ವ ಸಿದ್ಧಾಂತಗಳಾದ ಪಂಚಾಚಾರ, ಷಟ್ಸ್ಥಲ ವಿಚಾರಗಳನ್ನು ಒಳಗೊಂಡ ಹಸ್ತಪ್ರತಿಗಳ ಕಟ್ಟನ್ನು ನೀಡಲಾಗುತ್ತಿತ್ತು. ಸಾಮಾಜಿಕ ಹಾಗೂ ಸಾಹಿತ್ಯಿಕ ಕಳಕಳಿಯ ಮೂಲಕ ಆ ಕೃತಿಗಳನ್ನು ಪೋಷಿಸುವುದು ಅವರ ಕರ್ತವ್ಯವಾಗಿತ್ತು. ಸಾಮಾಜಿಕ, ಧಾರ್ಮಿಕ ಭದ್ರತೆಯ ಹೊಣೆಯನ್ನು ತನ್ನ ಅಧಿಕಾರ ಸ್ವೀಕರಣ ಸಮಯದಲ್ಲಿ ವಹಿಸಿಕೊಂಡು ತನ್ನ ಧರ್ಮದ ಕೃತಿಗಳ ಪಾಲನೆ-ಪೋಷಣೆ, ಸಂರಕ್ಷಣೆ, ಸಂವರ್ಧನೆ, ಸಂಗೋಪನೆಯನ್ನು ಮಾಡುವುದು ಮಠಾಧೀಶರ ಮುಖ್ಯ ಕರ್ತವ್ಯವಾಗಿತ್ತು. ಸ್ವಧರ್ಮ ಸಾಹಿತ್ಯ ಕುರಿತ ಅತಿಯಾದ ಭಾವನೆ ಒಮ್ಮೊಮ್ಮೆ ಅನ್ಯ ಧರ್ಮದ ಕೃತಿಗಳ ವಿನಾಶಕ್ಕೂ ಕಾರಣವಾದದ್ದಿದೆ.

ಮಠಾಧೀಶರಿಗೆ ಹಸ್ತಪ್ರತಿಯ ಕಟ್ಟುಗಳನ್ನು ನೀಡುವುದರ ಹಿಂದೆ ಆ ಧರ್ಮದ ತತ್ವ ಸಿದ್ಧಾಂತಗಳನ್ನು ಒಳಗೊಂಡ ಗ್ರಂಥಗಳ ಸಂರಕ್ಷಣೆ ಹೊಣೆ ಮಾತ್ರವಲ್ಲದೆ. ಆಯಾ ಧಾರ್ಮಿಕ

ಹಾಗೂ ಸಾಮಾಜಿಕ ಸಂಗತಿಗಳನ್ನು ಸಂರಕ್ಷಿಸುವ ಜವಾಬ್ದಾರಿ ವಹಿಸುವುದನ್ನು ಇಲ್ಲಿ ಕಾಣಬಹುದಾಗಿದೆ. ಇತರೆ ಧರ್ಮದ ಪ್ರಭಾವ ಅಥವಾ ಅತಿ ಬಳಕೆಯಿಂದ ವಿನಾಶದ ಅಂಚಿನಲ್ಲಿರುವ ಗ್ರಂಥಗಳನ್ನು ಇಂಥ ನೆಲೆಯಲ್ಲಿ ಸಂರಕ್ಷಿಸುತ್ತಾ ಬರಲಾಗಿದೆ.

ಧರ್ಮ ಮತ್ತು ಕಾವ್ಯ ಧರ್ಮಗಳು ಒಡನೊಡನೆ ಬೆರೆತು ಹರಿದಿರುವುದು ನಮ್ಮ ಸಾಹಿತ್ಯದ ವೈಶಿಷ್ಟ್ಯ. ಪಂಪಕವಿ "ಬೆಳಗುವೆನಿಲ್ಲಿ ಲೌಕಿಕಂ ಅಲ್ಲಿ ಜಿನಾಗಮಮಂ" ಎಂದು ಹೇಳಿದ ಮಾತನ್ನು ಮುಂದೆ ಬಂದ ರನ್ನ, ಪೊನ್ನ, ಜನ್ನರಂತವರು ಪಾಲಿಸಿಕೊಂಡು ಬಂದರು. ಕೆಲವು ಮತದವರು ತಮ್ಮ ಧರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ಸಲುವಾಗಿ ಬೇರೆ ಬೇರೆ ಪುರಾಣಗಳಿಂದ ಸಂಬಂಧಪಟ್ಟ ಭಾಗಗಳನ್ನು ಆರಿಸಿಕೊಂಡು ಗ್ರಂಥ ರಚನೆ ಮಾಡಿರುವುದನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗುರುತಿಸಬಹುದು. ಅವು ಧಾರ್ಮಿಕ ಗ್ರಂಥಗಳಲ್ಲಿ ಕಾವ್ಯಾಂಶವೂ, ಕಾವ್ಯಗಳಲ್ಲಿ ಧಾರ್ಮಿಕಾಂಶವೂ ಬೆರೆತು ಕನ್ನಡ ಕಾವ್ಯ ಕೃಷಿ ಸಾಗಿದ ಬಗ್ಗೆ ಚರಿತ್ರೆಕಾರರು ಹೇಳುತ್ತಾರೆ.

೫.೧. ಜೈನ ಮತಾಧಾರಿತ ಅಧ್ಯಯನಗಳು

'ಶ್ರವಣದ ಮೂಲಕ ನಡೆಯುತ್ತಿದ್ದ ತತ್ತ್ವಜಿಜ್ಞಾಸೆ, ಕಾವ್ಯದ ಓದು, ಹಾಡುವ ಕ್ರಿಯೆಗಳು ನಂತರ ಲಿಖಿತ ರೂಪಕ್ಕೆ ಇಳಿದವು. ಜೈನಧರ್ಮದಲ್ಲಿಯೂ ಕೂಡ ಧರ್ಮತತ್ತ್ವಬೋಧೆ ಶ್ರವಣ ಪಾತಳಿಯಲ್ಲಿಯೇ ನಡೆಯುತ್ತಿತ್ತು. ತೀರ್ಥಂಕರ ಬೇಗ ಬೋಧೆಯನ್ನು ಬರೆದಿಡುತ್ತಿರಲಿಲ್ಲ. ಅದು ಅವನ ಮನಸ್ಸಿನಲ್ಲಿ ಇರುತ್ತಿತ್ತು. ಕೊನೆಯ ೨೪ನೇ ತೀರ್ಥಂಕರ ಮಹಾವೀರನ ನಂತರ ತೀರ್ಥಂಕರ ಪ್ರಣೀತ ಷಟ್‌ಶಾಸ್ತ್ರ ಪುರಣಾದಿಗಳು, ಅಂದರೆ ಹನ್ನೆರಡು ಅಂಗ, ಹದಿನಾಲ್ಕು ಪರ್ವಗಳು ಮಹಾವೀರ ಆದ ಮೇಲೆ ೬೨ ವರ್ಷದ ತನಕ ಮೂರು ಕೇವಲಿಗಳು ನೆನಪಿಟ್ಟುಕೊಂಡಿರುತ್ತಾರೆ. ಅನಂತರ ೧೦೦ ವರ್ಷಗಳಾದ ಮೇಲೆ ಅದರಲ್ಲಿ ಐದು ಜನರು ನೆನಪಿಟ್ಟುಕೊಂಡಿದ್ದರು. ಇದಾದ ೧೮೩ ವರ್ಷಗಳ ನಂತರ ನೆನಪಿನ ಶಕ್ತಿ ನಾಶವಾಯಿತು. ಉಳಿಗಾಲವಿಲ್ಲವೆಂದು ೪೫೪ರ ಸುಮಾರಿಗೆ ಜೈನತತ್ತ್ವ ಮತ್ತು ಲಿಪಿ ಬಲ್ಲವರಿಂದ ಬರೆಸಿಡ ಲಾಯಿತು. ಅಲ್ಲಿಂದ ಜೈನದಲ್ಲಿ ಬರವಣಿಗೆ ಬಂತು'.[೩] ಬರವಣಿಗೆ ಮತ್ತು ಅಧ್ಯಯನಗಳು ಧರ್ಮಾಧಾರಿತ ನೆಲೆಯಲ್ಲಿ ಹುಟ್ಟಿಬಂದಿರುವುದಕ್ಕೆ ಇದು ಉತ್ತಮ ಉದಾಹರಣೆ ಯಾಗಿದೆ. ಹಸ್ತಪ್ರತಿಗಳ ರಚನೆ ಪೋಷಣೆ ಪಠಣ ಹಾಗೂ ಪ್ರಸರಣಗಳನ್ನು ಜೈನರು ಗಂಭೀರ ಧಾರ್ಮಿಕ ಕಾರ್ಯವಾಗಿ ಮಾಡಿಕೊಂಡಿದ್ದರು. ಚತುರ್ವಿಧ ದಾನಗಳಲ್ಲಿ ಶಾಸ್ತ್ರದಾನವು ಅವರ ಉಜ್ವಲ ಪರಂಪರೆಯ ಪ್ರತೀಕವಾಗಿದೆ. ಶಾಸ್ತ್ರದಾನ ಚಟುವಟಿಕೆ ಕವಿಗಳ ಪ್ರತಿಭೆಗೆ ಶಾಸ್ತ್ರಕಾರರ ವಿದ್ವತ್ತಿಗೆ ದೊರೆ ಧರ್ಮದರ್ಶಿ ಶ್ರಾವಕಾದಿಗಳ ಶ್ರದ್ಧೆಗೆ ಎಲ್ಲಕ್ಕೂ ಮಿಗಿಲಾದ ಅವಕಾಶಗಳನ್ನಿಯುತ್ತ ಬಂದಿದೆ.

‘ಪರಮಾಗಮದಿಂದಲ್ಲದೆ
ಪರತ್ರೆಯಂ ಪಡೆವುಪಾಯಮಿಲ್ಲದಜೆಂದು
ವರಶಾಸ್ತ್ರ ಮಿಗಿಲೆಂದಾ
ದರದಿಂ ಮಾಡುವುದು ಶಾಸ್ತ್ರದಾನಮನಳಿಪಿ
ಶ್ರುತವನಿತೆಯ ಮುಕ್ತಿ ಶ್ರೀ
ಸತಿಯಲ್ಲಿಗೆ ಬೇಗಮಯ್ವುದೂದವಿಯೆಂಬೀ
ಮತಮನಜಿದೋತು ಮಾಡುವುದು
ದತಿಶಯದಿಂ ಶಾಸ್ತ್ರದಾನಮಂ ಪದಪಿಂದಂ’[೪]

ಇನ್ನೂ ಮುಂದುವರೆದು ಕ್ಷತ್ರಿಯ ಕೈವಲ್ಯಶ್ರೀ ಸಲೆ ಸಾಗುಟಾರ್ದುಂ ಶಾಸ್ತ್ರದಾನಮುನ್ನತಿ ರೆಂದೇ ಎಂದು ಶಾಸ್ತ್ರದಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಹಲವಾರು ಹಸ್ತಪ್ರತಿ ಗಳಲ್ಲಿ ಕಾಣಬಹುದು.

ದಾನ, ಧರ್ಮ, ಉಡುಗೊರೆ ಇವುಗಳ ಹೆಚ್ಚು ಉಲ್ಲೇಖ ಕಂಡುಬರುವುದು ಮಧ್ಯಕಾಲೀನ ಭಾರತ ಚರಿತ್ರೆಯಲ್ಲಿ. ಮಧ್ಯಯುಗೀನ ಕರ್ನಾಟಕದಲ್ಲಿ ಯಾವುದೇ ರೀತಿಯ ಲೌಕಿಕಾಧಿಕಾರದ ವರ್ಚಸ್ಸು ದಾನದತ್ತಿಗಳ ಆಧಾರದ ಮೇಲೆ ನಿಂತಿದ್ದು ಚರಿತ್ರೆಯಿಂದ ತಿಳಿದುಬರುತ್ತದೆ. ಧಾರ್ಮಿಕ ದಾನದತ್ತಿ ಉಂಬಳಿ ಇದಕ್ಕೆ ಈ ಕಾಲದ ಹಲವಾರು ಕೃತಿಗಳು ಮತ್ತು ಶಾಸನಗಳು ಪುಷ್ಠಿ ನೀಡುತ್ತವೆ. ದಾನದತ್ತಿ ಎಂಬೆರಡು ಸಂಗತಿಗಳು ಅಧಿಕಾರದ ವರ್ಚಸ್ಸಿಗೆ ಸಾಮಾಜಿಕ ಕಳಂಕದ ಶುದ್ಧಿಗೆ ಆಧ್ಯಾತ್ಮಿಕವಾಗಿ ತ್ಯಾಗ ಮಾರ್ಗದ ಧಾರ್ಮಿಕ ನೆಲೆಯಿಂದ ಹಸ್ತಪ್ರತಿ ಗ್ರಂಥಗಳು ಸಂರಕ್ಷಣೆಗೊಂಡು ಹಿರಿಯರ ಮರಣಾನಂತರದಲ್ಲಿ ಅವರ ನೆನಪಿನಲ್ಲಿ ಧಾರ್ಮಿಕ ಕಾರ್ಯಗಳ ರಚನೆ ಪ್ರೇರಕವಾಗುವುದು ಪುಣ್ಯಕಾರ್ಯವೆಂದು ಜೈನರು ಭಾವಿಸಿದ್ದರು.

‘ಗುರು ಜಿನಚಂದ್ರ ಮುನೀಂದ್ರರ
ಪರೋಕ್ಷದೊಳ್ ತಂಮುತಿರ್ವರುಂ ಪೊನ್ನಿಗನಿಂ
ಬರೆಯಿಸಿದರ್ ಸಕಳೋರ್ವಿಗೆ
ಪರೆಯಿಸಿದರ್ ಸಲೆ ಪುರಾಣ ಚೂಡಾಮಣಿಯಂ’[೫]

ಎಂದು ಹೇಳುವ ರನ್ನನು ಅತ್ತಿಮಬ್ಬೆಯೂ ಕೂಡ ತನ್ನಿಂದ ಅಜಿತಪುರಾಣವನ್ನು ಬರೆಯಿಸಿದಳು ಎನ್ನುತ್ತಾನೆ.

‘ಏಸೆಯುದೆ ಪೊಟ್ಟಿಟ್ಟುಪುದು ಶಾಂತಿ ಪುರಾಣಮದಂ ನೆಗಟ್ಟಿಂ।
ವಸುಧೆಯೊಳನ್ನ ತಂದೆಯ ಪರೋಕ್ಷದೊಳೆಂದು ಸಹಸ್ರ ಪುಸ್ತಕ

ಪ್ರಸರಮನತ್ತಿಮಬ್ಬೆ ಪರಮಾದರದಿಂ ಬರೆಯಲ್ಕೆವೇಟ್ಟಿ ಪೆಂ

ಪಸದಳಾಮದ್ವಿತೀಯಮಸಮಂ ಸತಿ ಭಾವಿಸಲೆಯ್ದೆ ಬಣ್ಣಿಸಲ್

ಈ ಪದ್ಯದಲ್ಲಿ ತಂದೆಯ ಪರೋಕ್ಷ(ಮರಣಾನಂತರ)ದಲ್ಲಿ ಶಾಂತಿ ಪುರಾಣದ ಒಂದು ಸಾವಿರ ಪ್ರತಿಗಳನ್ನು ಅತ್ತಿಮಬ್ಬೆ ಬರೆಯಿಸಿದಳೆಂದು ತಿಳಿದುಬರುತ್ತದೆ. ಓದಲು ಶಾಸ್ತ್ರಮನೀನ ಪಂಪನು ಒಳಗೊಂಡ ಚತುರ್ವಿದ ದಾನಶಕ್ತಿಯನ್ನು ಹರಿಯವ್ವೆ ಮೆರೆದಳೆಂದು ಮೂಡಿಗೆರೆಯ ಶಾಸನ ವರ್ಣಿಸಿದೆ. ಹೊಯ್ಸಳ ವಿಷ್ಣುವರ್ಧನನ ಹಿರಿಯ ಸೇನಾಪತಿಯಾಗಿದ್ದ ಗಂಗರಾಜನನ್ನು ಶ್ರೀ ಜೈನಧರ್ಮಾಮೃತಾಂಬುಂಧಿ ಪ್ರವರ್ದಮಾನ ಸುಧಾಕರ ಸಮ್ಯ ರತ್ನಾಕರ ಆಹಾರ ಆಭಯ ಭೈಷಜ್ಯ ಶಾಸ್ತ್ರದಾನ ವಿನೋದಿ ಎಂದು ಬಣ್ಣಿಸಲಾಗಿದೆ.

ಜೈನ, ಶೈವ, ವೀರಶೈ, ವೈಷ್ಣವ ಮುಂತಾದ ಪ್ರಮುಖ ಧರ್ಮಗಳು ಕರ್ನಾಟಕದಲ್ಲಿ ವ್ಯಾಪಕವಾಗಿ ಪಸರಿಸಿ ಸಾಂಸ್ಕೃತಿಕವಾದ ಪರಂಪರೆ ಜೀವ ನೀಡಿವೆ. ಅಲ್ಲದೇ ಕನ್ನಡ ಸಾಹಿತ್ಯ-ಕನ್ನಡ ಹಸ್ತಪ್ರತಿಗಳ ಹುಲುಸಿಗೂ ಕಾರಣವಾಗಿವೆ. ಈ ಧರ್ಮಗಳು ತತ್ವ ಪ್ರಚಾರ ಸ್ವಧರ್ಮನಿಷ್ಠೆ ಮತ್ತು ಅದರ ಸಮರ್ಥನೆ, ಶಿಕ್ಷಣ ಪ್ರಸಾರ ಹಾಗೂ ಸಾಹಿತ್ಯ ಪ್ರಸಾರಾದಿ ಕಾರ್ಯಗಳಿಗೆ ಹಸ್ತಪ್ರತಿಗಳ ಅಗತ್ಯವನ್ನು ಕಾಲಾಂತರದಲ್ಲಿ ಕಂಡುಕೊಂಡಿರಬಹುದು. ಲೌಕಿಕ ಸಾಹಿತ್ಯ ಶಿಕ್ಷಣ ಪ್ರಸಾರಕ್ಕಾಗಿ ಹಸ್ತಪ್ರತಿಗಳ ಅಗತ್ಯವನ್ನು ಅಗಲೇ ಕಂಡುಕೊಂಡಿದ್ದ ಕನ್ನಡಿಗರಿಗೆ ಜೈನ, ಬೌದ್ಧ ಧರ್ಮಗಳು ಹಸ್ತಪ್ರತಿಗಳ ಧಾರ್ಮಿಕ ಮಹತ್ವವನ್ನು ಮನವರಿಕೆ ಮಾಡಿಕೊಟ್ಟಂತಿದೆ. ಹೀಗಾಗಿ ಹಸ್ತಪ್ರತಿಗಳನ್ನು ದೈವಿಕತೆಯ ನೆಲೆಯಲ್ಲಿ ದೈವಿ ಸ್ವರೂಪದಲ್ಲಿ ಸರಸ್ವತಿಯ ಪ್ರತಿರೂಪವಾಗಿ ಸಂರಕ್ಷಿಸಲಾಗುತ್ತಿತ್ತು.

ಜೈನ ಬಸದಿಗಳು ಕೇವಲ ಪೂಜಾ ವಿಧಾನಕ್ಕೆ ಮಾತ್ರ ಸೀಮಿತವಾಗಿರದೇ, ಅವು ಹಸ್ತಪ್ರತಿಗಳ ರಚನೆ ಮತ್ತು ಹಸ್ತಪ್ರತಿಗಳ ಸಂರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿದ್ದವು. "ಮೂಲತಃ ಜೈನ ಮುನಿಗಳಿಗೆ ಆಶ್ರಯಗಳಾಗಿ ಚಾತುರ್ಮಾಸಗಳ ವಸತಿಗಾಗಿ ನಿರ್ಮಿತವಾದ ಈ ಬಸದಿಗಳು ಮುಂದೆ ಧರ್ಮೀಯರ ಅಧ್ಯಯನ, ಅಧ್ಯಾಪನ, ವಾಚನ, ಲೇಖನ ಮತ್ತು ಧರ್ಮ ಶ್ರವಣಾದಿಗಳ ನೆಲೆಯಾಗಿ ರೂಪುಗೊಂಡು ಜೈನಧರ್ಮವನ್ನು ಸಂರಕ್ಷಿಸಿದ್ದವು.

ಜೈನಧರ್ಮವು ತನ್ನ ಧಾರ್ಮಿಕ ತತ್ವಸಿದ್ಧಾಂತಗಳೊಂದಿಗೆ ಹಸ್ತಪ್ರತಿಗಳ ಸಂರಕ್ಷಣೆ, ಸಂವರ್ಧನೆ ಅಧ್ಯಯನ ಹಾಗೂ ಪ್ರಸರಣೆಗೆ ತನ್ನದೇ ಆದ ಕೊಡುಗೆ ನೀಡಿದ್ದು ಗಮನಾರ್ಹ. ವಿಶೇಷವಾಗಿ ಜೈನ ಸನ್ಯಾಸಿಗಳು ಕಂತಿಯರು, ಇಂಥ ಲಿಪೀಕರಣ ಕೆಲಸದಲ್ಲಿ ತನ್ಮಯರಾಗಿರುತ್ತಿದ್ದರು. ಶಾಸ್ತ್ರದಾನ ಎನ್ನುವ ವಿನೂತನ ಪರಿಕಲ್ಪನೆಯನ್ನು ಕನ್ನಡಕ್ಕೆ ನೀಡಿ ಹಸ್ತಪ್ರತಿ ಲಿಪೀಕರಣ ಸಂಗ್ರಹ ಸಂರಕ್ಷಣೆ ಪ್ರಸಾರಕ್ಕೆ ವಿಶಿಷ್ಟ ಸೇವೆಗೈದು ಕನ್ನಡ ಭಾಷಾ ಮತ್ತು ಸಾಹಿತ್ಯದ ವಿಸ್ತರಣೆಗೆ ಕಾರಣರಾಗಿದ್ದಾರೆ.

ಜೈನ ಪರಂಪರೆಯನ್ನು ಕುರಿತು ವಿವೇಚಿಸುವುದಾದರೆ ರತ್ನತ್ರಯರೆನಿಸಿದ ಪಂಪ, ಪೊನ್ನ, ರನ್ನ ಮೂವರು ಒಂದು ಲೌಕಿಕ ಮತ್ತೊಂದು ಆಗಮಿಕ ಕಾವ್ಯ ರಚಿಸುವುದರ ಮೂಲಕ ಪಂಪನ ಮಾರ್ಗವನ್ನು ಅನುಸರಿಸಿ, ಧೋರಣೆಯ ವಿಷಯದಲ್ಲಿ ಏಕಸೂತ್ರತೆಯನ್ನು ಪ್ರಕಟಿಸಿದರು. ಕಾವ್ಯವಸ್ತುವನ್ನು ರಾಜನಿಗೆ ತಗುಳಿ ಹೇಳುವ ಸಂದರ್ಭದಲ್ಲಿ ಪ್ರಭುನಿಷ್ಠೆ ನಿಲುವನನು ಸ್ವಧರ್ಮವನ್ನು ಪ್ರಚಾರಗೊಳಿಸುವಾಗ ಧರ್ಮನಿಷ್ಠೆ ನಿಲುವನ್ನು ಮೆರೆದರು.

ಕ್ರಿ.ಶ. ೧೦-೧೨ನೆಯ ಶತಮಾನದ ವರೆಗೂ ಧರ್ಮ ಮತ್ತು ಪ್ರಭುನಿಷ್ಠೆ ನಿಲುವುಗಳು ಜೈನ ಹಸ್ತಪ್ರತಿಗಳ ನಿರ್ಮಾಣಕ್ಕೆ ಅಗತ್ಯ ಮತ್ತು ಅನಿವಾರ್ಯ ಕಾರಣವಾಗಿದ್ದವು. ಈ ಎರಡು ನಿಲುವುಗಳು ಶ್ರೀಸಾಮಾನ್ಯನ ಬದುಕಿನ ಕಡೆಗೆ ವಿಶೇಷ ಗಮನ ಕೊಡಲಿಲ್ಲ. ಪ್ರಭುನಿಷ್ಠೆ, ಪರಂಪರೆ, ರಾಜ ಮಹಾರಾಜರ ವಿಲಾಸ, ವೈಭವಗಳ ಕಡೆಗೆ ತನ್ನ ಗಮನ ಕೇಂದ್ರೀಕರಿಸಿದ್ದಾರೆ. ಇದರ ಜೊತೆಗೆ ಧರ್ಮನಿಷ್ಠೆ, ಪರಂಪರೆಯೂ ಸೇರಿ ಸಮಾಜದ ಮೇಲಿನ ವರ್ಗದ ವಿಲಾಸ ವೈಭವಗಳನ್ನೇ ಅತ್ಯಂತ ಪ್ರಬಲವಾಗಿಸುತ್ತ ಹೋಯಿತು. ತಪಸ್ಸು ಮತ್ತು ಪರಮ ವೈರಾಗ್ಯದ ಹಂತದಲ್ಲಿ ಸ್ಫೋಟಗೊಳ್ಳುವ ಬದುಕಿನ ಸುಖ ಸಂತೋಷಗಳಾಗಲಿ, ರೂಪ, ಧನ, ವೈಭೋಗಗಳಾಗಲಿ ನಶ್ವರವಾದ ಕಾರಣ ತಪಸ್ಸು ಉಪವಾಸಗಳಿಂದ ಮೋಕ್ಷ ಅಥವಾ ತೀರ್ಥಂಕರತ್ವವೊಂದೇ ಪರಮಸತ್ಯವೆಂದು ಉದ್ಘೋಷಿಸಲಾಯಿತು. ಇದು ಜೀವನವನ್ನು ಬಹುಮಟ್ಟಿಗೆ ನಿರಾಕರಿಸುವ ಒಂದು ಪ್ರಧಾನ ನಿಲುವಾಯಿತು. ಈ ಸಂದರ್ಭದಲ್ಲಿ ವ್ಯಕ್ತಿ ಪಾಪ ಕರ್ಮಾದಿಗಳಿಂದ ಭವಾವಳಿಗಳನ್ನು ದಾಟಿ ಪಂಚಕಲ್ಯಾಣಗಳನ್ನು ಅನುಭವಿಸಿ ನಿರ್ವಾಣ ಹೊಂದುವ ಪರಿಕಲ್ಪನೆಯಿಂದ ಜೈನರು ತಮ್ಮ ಹಸ್ತಪ್ರತಿಗಳಿಗೆ ಅಹಿಂಸೆ, ಕಠಿಣ ತಪಸ್ಸು, ಭವಾವಳಿ ತೀರ್ಥಂಕರ ಚರಿತ್ರೆಗಳಂತಹ ಪರಿಕರಗಳನ್ನು ವಿಷಯವನ್ನಾಗಿ ಸ್ವೀಕರಿಸಿ ಕೊಂಡರು. ಜೈನ ತತ್ವವನ್ನು ವಿವರಿಸುವ ನಂದಿಮುನಿಯ 'ಉದ್ಯೋಗಸಾರ' ಮತ್ತು ಮಂಗರಸನ ನೇಮಿಜಿನೇಶ ಸಂಗತಿಯಂತ ಹಸ್ತಪ್ರತಿಗಳು ಮೇಲಿನ ದೃಷ್ಟಿಯಿಂದ ಗಮನಾರ್ಹ ವಾಗಿವೆ. ಈ ಹಸ್ತಪ್ರತಿಗಳಲ್ಲಿ ಬರುವ ಸಮಸ್ತ ಸುಖ, ಸಂತೋಷ, ಭೋಗ-ಭಾಗ್ಯಗಳನುಭವಿಸಿ ಇರುವಷ್ಟು ಕಾಲ ಹಾಯಾಗಿದ್ದು, ಕೊನೆಗೆ ಜೀವನದ ನಶ್ವರತೆಯಿಂದ ಮೋಕ್ಷಕ್ಕೆ ಹೋಗುವುದೇ ಪರಮ ಮೌಲ್ಯವೆಂಬುದು ಎಷ್ಟು ಪ್ರಸ್ತುತ? ಜೀವನದ ಎಲ್ಲ ಸುಖ ಸೌಭಾಗ್ಯಗಳನ್ನು ಅನುಭವಿಸಿ ಆಯುಷ್ಯ ತೀರಿದ ಬಳಿಕ ಎಲ್ಲ ನಶ್ವರವೆಂಬ ಹೇಳಿಕೆಗಳು ಎಷ್ಟು ಸರಿ? 'ಪ್ರಾಚೀನ ಕನ್ನಡ ಸಾಹಿತ್ಯದಲ್ಲಂತೂ ಈ ತರಹದ ಒಂದೆರಡು ಮೇಲ್ವರ್ಗಗಳನ್ನು ಹೊರತುಪಡಿಸಿದರೆ, ಕೆಳವರ್ಗದ ಬದುಕಿನ ಆಸೆ, ಆಕಾಂಕ್ಷೆ, ನೋವು, ನಲಿವುಗಳತ್ತ ಅಷ್ಟಾಗಿ ಗಮನವಿದ್ದಂತೆ ಕಾಣುವುದಿಲ್ಲ'.[೩] ಪ್ರಾಚೀನ ಸಾಹಿತ್ಯದಲ್ಲಿ ಮಾತ್ರವಲ್ಲ ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಈ ಬಗೆಯ ವಾಗ್ವಾದಗಳು ಪ್ರಕಟವಾಗಿವೆ.

ಕನ್ನಡ ಜೈನ ಹಸ್ತಪ್ರತಿಗಳಿಗೆ ವಿಷಯ ಸ್ವರೂಪ ಸ್ವತಂತ್ರವಾಗಿ ಸಿಕ್ಕಿದ್ದಲ್ಲ. ಅದು ಅನ್ಯಭಾಷೆಯಾದ್ದರಿಂದ ಎರವಲು ಪಡೆಯಿತು. ಸಂಸ್ಕೃತದಲ್ಲಿ ಜಿನಸೇನಾಚಾರ್ಯರ ಪೂರ್ವ ಪುರಾಣದಂತಹ ಸಿದ್ಧ ಮಾದರಿಗಳು ಕನ್ನಡದ ಜೈನರಿಗೆ ಅನುಸರಣೀಯವಾದವು. ಆದರೆ ಪಂಪ, ಪೊನ್ನ, ರನ್ನ ಮುಂತಾದ ಜೈನ ಕವಿಗಳು ಸಂಸ್ಕೃತದಲ್ಲಿರುವುದನ್ನೆಲ್ಲ ನೇರವಾಗಿ ತರದೇ ಕನ್ನಡ ಪ್ರಾದೇಶಿಕ ಸಂಸ್ಕೃತಿ ಹಾಗೂ ಉಪರಾಷ್ಟ್ರೀಯ ಕಲ್ಪನೆಯೊಂದಿಗೆ ಕಾವ್ಯ ನಿರ್ಮಿಸಿದರು.

ತೀರ್ಥಂಕರ ಮತ್ತು ಚಕ್ರವರ್ತಿಗಳ ಜೊತೆಗೆ ಮಹಾಪುರುಷ ಚರಿತೆಗಳನ್ನು ಸೇರಿಸಿ ಹೇಳುವ ಕಾವ್ಯವಸ್ತುಗಳು ಆಗಮಿಕ ಅಥವಾ ಧಾರ್ಮಿಕ ಕಾವ್ಯ ಪರಂಪರೆಯನ್ನು ಹೆಚ್ಚಿಸಿದವು. ಈ ಕಾರಣದಿಂದ ಜೈನ ಸಾಹಿತ್ಯ ಸಂಪ್ರದಾಯ ಮತೀಯ ಪ್ರಾಬಲ್ಯದಿಂದಲೇ ಪ್ರಧಾನವಾಗಿ ರೂಪುಗೊಂಡಿತು. ಜೈನಧರ್ಮದ ಆಚಾರ ಸೂತ್ರಗಳಾದ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಮೊದಲಾದ ವ್ರತ ನಿಯಮ ನೀತಿಗಳನ್ನು ವಿಚಾರ ಸೂತ್ರಗಳಿಂದ ಕರ್ಮ ಸಿದ್ಧಾಂತಗಳನ್ನು ಲೋಕಪ್ರಿಯ ಕಥೆಗಳ ಮೂಲಕ ಹೇಳುತ್ತಾ ಜನಸಮೂಹದಲ್ಲಿ ಧಾರ್ಮಿಕ ಭಾವನೆಗಳನ್ನು ಜಾಗೃತಗೊಳಿಸಿದರು. ನಾಗಚಂದ್ರನ ಜಿನಮುನಿತನಶತಕ, ದೊಡ್ಡಯ್ಯ ಕವಿಯ ಚಂದ್ರನಾಥ ಚರಿತೆಯಂತ ಹಸ್ತಪ್ರತಿಗಳು ಇಂಥ ಜಾಗೃತಿಯನ್ನುಂಟು ಮಾಡಿ ದವು. ತೀರ್ಥಂಕರರ ಅನೇಕ ಬಗೆಯ ಜೀವನ ಘಟನೆಗಳನ್ನು ಆಧರಿಸಿದ ಉಪಕಥೆಗಳನ್ನು ಪುರಾಣ, ಪ್ರೇಮಕಥೆ, ಚೋರರ ಕಥೆ, ಸ್ತ್ರೀಕಥೆ, ದಂತಕಥೆ ಮೊದಲಾದ ಎಲ್ಲಾ ರೀತಿಯ ಕಥೆಗಳನ್ನು ತಮ್ಮ ಧಾರ್ಮಿಕ ಉದ್ದೇಶಕ್ಕಾಗಿ ಬಳಸಿಕೊಂಡರು. ಪಾಪ–ಪುಣ್ಯಗಳ ಕಲ್ಪನೆಯಲ್ಲಿ ನರಕದ ಭಯ, ಸ್ವರ್ಗದ ಅಭಯ, ಅಹಿಂಸೆಯ ಕರಾಳ ಚಿತ್ರಣ, ಉಪವಾಸದ ಹಿಂಸೆಯನ್ನು ತಿಳಿಸುವ ಭವಾವಳಿಗಳು ಜೈನ ಕಾವ್ಯಗಳಲ್ಲಿ ಒಂದು ವಿಶಿಷ್ಟ ತಂತ್ರವೇ ಆಗಿ ಪರಿಣಮಿಸಿದವು.

'ಪಂಪನ ಆದಿಪುರಾಣದಿಂದ ಮೊದಲ್ಗೊಂಡು ಮುಂದೆ ಬಂದ ಆಗಮಿಕ ಕಾವ್ಯಗಳು ಒಂದಿಲ್ಲೊಂದು ದೃಷ್ಟಿಯಿಂದ ಜಿನಾಗಮದ ಉತ್ಕರ್ಷವನ್ನು ಕುರಿತು ಹೇಳುವ ಕಾವ್ಯಗಳಾಗಿವೆ. ಪೊನ್ನನ ಶಾಂತಿಪುರಾಣ ೧೬ನೆಯ ತೀರ್ಥಂಕರನಾದ ಶಾಂತಿನಾಥನ ಜೀವನದ ವಿಕಾಸ ಕ್ರಮವನ್ನು ಹೇಳುತ್ತದೆ. ಈ ಕಥೆ ಜನ್ಮಾಂತರಗಳಲ್ಲಿ ಸಾಗುವಂಥದ್ದು, ಕಥೆಯ ಪ್ರಾರಂಭ ಅಪರಾಜಿತ ಮತ್ತು ಅನಂತವೀರ್ಯರ ಜನ್ಮದಿಂದ ಅದು ಹಿಂದಕ್ಕೂ ಮುಂದಕ್ಕೂ ಹೋಗಿ ಭವಾವಳಿಯ ಪ್ರಭಾವಲಯವನ್ನು ಶಾಂತಿನಾಥನ ವ್ಯಕ್ತಿತ್ವ ನಿರ್ಮಿಸುತ್ತದೆ'.[೮]

ರನ್ನನ ಧರ್ಮಶ್ರದ್ಧೆ ಪಂಪನಿಗಿಂತ ಕಡಿಮೆಯೇನಲ್ಲ. ಇದರ ಪ್ರಭಾವದಿಂದಲೇ ರನ್ನನ ಪಾತ್ರಗಳು ಪಂಪನ ಕಾವ್ಯಗಳಿಂದ ಮರುಹುಟ್ಟನ್ನು ಪಡೆದುಕೊಂಡು ಒಂದು ಕಲಾತ್ಮಕ

ಭವಾವಳಿಯನ್ನು ನಿರ್ಮಿಸುತ್ತದೆ. ಜನ್ನನ ಎರಡೂ ಕಾವ್ಯಗಳೂ ಜೈನಧರ್ಮದ ಆಚರಣೆಯನ್ನು ತಿಳಿಸುವ ಕೃತಿಗಳು. ಆತನ ಅನಂತನಾಥ ಪುರಾಣಕ್ಕಿಂತ ಯಶೋಧರ ಚರಿತೆ ಹೆಚ್ಚು ಜನಪ್ರಿಯವೂ, ಆಕರ್ಷಕವೂ ಆಗಿದೆ. ಯಶೋಧರ ಚರಿತೆಯ ಕಥೆ ಕೊನೆಯಿಂದ ಆರಂಭ ವಾಗುತ್ತದೆ. ಅಭಯಮತಿ ಮತ್ತು ಅಭಯರುಚಿ ಕುಮಾರ ಮೋಹನಕಾರರಿಂದಲೇ ಜನ್ನ ತನ್ನ ಕಥೆಯನ್ನು ರಚಿಸುತ್ತಾ ಇದರಿಂದಾಗಿಯೇ ಅವರಿಗೆ ಒಳಗಿನ ವ್ಯಕ್ತಿಗತ ವಿಕಾರಗಳನ್ನು ಪ್ರತಿಭಟಿಸಿ ಆತ್ಮಕಲ್ಯಾಣ ಮಾಡಿಕೊಳ್ಳುವುದು ಮುಖ್ಯವಾಯಿತೇ ವಿನಃ ಹೊರಗಿನ ಸಾಮಾಜಿಕ ಅನ್ಯಾಯಗಳನ್ನು ಪ್ರತಿಭಟಿಸಿ ಸಮಾಜ ಕಲ್ಯಾಣವನ್ನು ಸಾಧಿಸುವುದು ಮುಖ್ಯವೆನಿಸಲಿಲ್ಲ. ಇದೇ ಬಗೆಯ ವಸ್ತು ವಿನ್ಯಾಸದಲ್ಲಿ ಮುಂದೆ ಚಂದ್ರಸಾಗರವರ್ಣಿಯಿಂದ ಯಶೋಧರ ಷಟ್ಪದಿಯ ಆರು ಹಸ್ತಪ್ರತಿಗಳು ರೂಪುಗೊಂಡವು.

'ಇಷ್ಟಾಗಿಯೂ ನಮ್ಮ ಸಾಹಿತ್ಯಾಧ್ಯಯನ ಆರ್.ನರಸಿಂಹಾಚಾರ್ ಕಾಲದ್ದಾಗಿರುವುದರಿಂದ ಜೈನ ಕವಿ ಎಂದರೆ ಭವಾವಳಿ ತೀರ್ಥಂಕರ ಚರಿತ್ರೆಯನ್ನು ಸಿದ್ದಪಡಿಸಿಕೊಂಡಿದ್ದರಿಂದ ಸೃಜನಶೀಲ ಮನಸ್ಸಿನ ಹಿನ್ನೆಲೆಗಳನ್ನು ನಾವು ಮರೆತುಬಿಟ್ಟದ್ದೇವೆ'.[6] ಇನ್ನಾದರೂ ಈ ಬಗೆಯ ಸಿದ್ಧ ನೆಲೆಯಿಂದ ಹೊರಬಂದು ಹೊಸ ದೃಷ್ಟಿಕೋನದಿಂದ ಅಧ್ಯಯನ ಮಾಡಬೇಕಾಗಿದೆ.

ತನಗೆ ಆಶ್ರಯ ನೀಡಿದ ಪ್ರಭುಗಳನ್ನು ವೈದಿಕ ಸಂಪ್ರದಾಯದ ಪುರೋಹಿತ ಶಾಹಿಗಳಿಗೆ ಹೋಲಿಸುವುದರ ಮೂಲಕ ಮತ್ತೆ ರಾಜ್ಯಶಾಹಿ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಪರಂಪರೆ ಜೈನರಿಂದಲೇ ಪ್ರಾರಂಭವಾಯಿತು. ಜೈನರ ಲೌಕಿಕ ವಿಷಯದಲ್ಲಿ ಈ ಪರಂಪರೆ ಸ್ಪಷ್ಟವಾಗಿ ನೆಲೆಗೊಂಡಿದೆ. ಧರ್ಮನಿಷ್ಠ ಪರಿಸರದಲ್ಲಿ ಸ್ವತಂತ್ರ ಪ್ರತಿಭಾಶಕ್ತಿ ಹಾಗೂ ಬದುಕಿನ ಮೌಲ್ಯಗಳ ಪಕ್ಷಪಾತವನ್ನು ಧಾರ್ಮಿಕ ಕೃತಿಗಳಲ್ಲಿ ಅಭಿವ್ಯಕ್ತಿಸಲು ಸದಾವಕಾಶಗಳಿದ್ದ ಕಾರಣವಾಗಿ ಲೌಕಿಕ ಕೃತಿಗಳನ್ನು ರಚಿಸುವ ಸಾಧ್ಯತೆಗಳಿವೆ. ಈ ಹಿನ್ನೆಲೆ ಯಲ್ಲಿ ಪಂಪ, ರನ್ನ ಮುಂತಾದವರು ತಮ್ಮ ಲೌಕಿಕ ಕೃತಿಗಳ ಮೂಲಕ ಎತ್ತುವ ಪ್ರಶ್ನೆಗಳು ಕಟ್ಟಿಕೊಡುವ ಮೌಲ್ಯಗಳು ಯಾವುದೇ ಸಾಹಿತ್ಯ ಸಂದರ್ಭಕ್ಕೂ ಅಮೂಲ್ಯವಾದವುಗಳೇ.

ಜೈನ ಲೌಕಿಕ ಕಾವ್ಯ ಪರಂಪರೆ ಧರ್ಮನಿಷ್ಠೆ ನಿಲುವಿಗಿಂತ ಭಿನ್ನವಾದದ್ದು. ಧಾರ್ಮಿಕ ಕಾಲ್ಪನಿಕ ಲೋಕಗಳಿಂದ ದೂರವಾದವು. ಏಕಕಾಲಕ್ಕೆ ಒಬ್ಬ ರಾಜನ ಇತಿಹಾಸವೂ ಕವಿಯ ಇತಿಹಾಸವೂ ನಿಜವಾಗಿ ತಿಳಿಯುವುದರಿಂದ ಆ ಕಾಲ ದೃಷ್ಟಿಯಿಂದಲೂ ಹೆಚ್ಚು ಹತ್ತಿರವಾದದ್ದು. ಆದರೆ ಈ ಬಗೆಯ ಲೌಕಿಕ ಕೃತಿಗಳ ಮಿತಿಯೆಂದರೆ ತಮ್ಮ ಸುತ್ತ ಪರಿಮಿತ ಓದುಗ ವರ್ಗವೊಂದನ್ನು ನಿರ್ಮಿಸಿಕೊಂಡು ಸಾಮಾಜಿಕ ಹಾಗೂ ಜನಪರ ನಿಲುವನ್ನು ಸ್ಥಾವರ ನೆಲೆಯಲ್ಲಿ ಗ್ರಹಿಸಿದ್ದು ಭುವನೈಕ ರಾಮಾಭ್ಯುದಯ, ವಿಕ್ರಮಾರ್ಜುನ ವಿಜಯ, ಸಾಹಸಭೀಮ ವಿಜಯಗಳು ಈ ಬಗೆಯ ಪ್ರತಿಕೂಲ ಇಕ್ಕಟ್ಟಿನಲ್ಲಿ ನಿಂತು ಬರೆದ ಕೃತಿಗಳು.

'ಈ ಕಾಲದ ಕವಿಗಳು ವ್ಯವಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡರು. ಇಂಥವರು Defencive ವ್ಯಕ್ತಿತ್ವ ಇವರ ಗುರಿ. ತಮ್ಮ ಸ್ಥಾನಮಾನ ರಕ್ಷಣೆಯ ಹೊರತು ಸಾಮಾಜಿಕ ಅನಿಷ್ಠಗಳ ನಿವಾರಣೆಗೆ ಕೈ ಹಾಕಿ ಸಮಸ್ಯೆಗಳನ್ನು ಎದುರಿಸುವುದಾಗಿರಲಿಲ್ಲ'.[೧೦] ಆದರೆ ಇಂಥ ಸಮಸ್ಯೆಗೆ ಕೈ ಹಾಕಿ ಬರೆದ ಕವಿಗಳ ಹಸ್ತಪ್ರತಿಗಳು ಲಭ್ಯವಾಗದೇ ಇನ್ನೂ ಚರಿತ್ರೆಯ ಒಳಗಡೆ ಉಳಿದಿವೆ.

ಲೌಕಿಕ ಹಸ್ತಪ್ರತಿಗಳನ್ನು ಗಮನಿಸಿದಾಗ ದೊಡ್ಡ ರಾಜರ ಹೋರಾಟ ಧರ್ಮಗಳ ವಾದ ಪ್ರತಿವಾದಗಳು ತಮ್ಮ ತಮ್ಮ ಪ್ರಭುತ್ವಕ್ಕಾಗಿ ಪ್ರತಿಗಾಮಿ ಶಕ್ತಿಗಳು ನಡೆಸಿದ ಹೋರಾಟಗಳೇ ಇವೆ. ಹೊರತು ಎಲ್ಲಿಯೂ ಸಾಮಾಜಿಕ ಅನ್ಯಾಯಕ್ಕೆ ಪ್ರತಿಕ್ರಿಯಿಸಿದ ಒಂದೇ ಒಂದು ಸಂಗತಿಯೂ ಇಲ್ಲ ಪ್ರಭುತ್ವ ಪರವಾದ ಸಂಗತಿಗಳನ ಇಂಥ ಅನಿಷ್ಠಗಳನ್ನು ಮತ್ತೆ ಮತ್ತೆ ಸಾಮಾಜಿಕ ಪರಿಸರದಲ್ಲಿ ಗಟ್ಟಿಗೊಳಿಸುವುದರ ಮೂಲಕ ರಾಜಶಕ್ತಿಗಳು ತಮ್ಮ ತಮ್ಮ ರಾಜಕೀಯ ಪ್ರಭುತ್ವವನ್ನು ಪುರೋಹಿತ ಶಾಹಿಗಳು ತಮ್ಮ ಧಾರ್ಮಿಕ ಪ್ರಭುತ್ವವನ್ನು ಸ್ಥಾಪಿಸುವ ಕಾರ್ಯ ಮಾಡುತ್ತಲೇ ಬಂದವು. ಇದರಿಂದ ಒಬ್ಬರಿಗಾಗುತ್ತಿರುವ ಅನ್ಯಾಯವನ್ನು ತಡೆಯಲು ಇನ್ನೊಬ್ಬರು ಯಾವತ್ತು ಮುಂದೆ ಬರಲಿಲ್ಲ. ಭಾರತೀಯ ಬದುಕಿನಲ್ಲಿ ಕೈಯಾಡಿಸುತ್ತ ತನ್ನ ಪ್ರಭುತ್ವಕ್ಕಾಗಿ ಇಡೀ ಸಾಮಾಜಿಕ ಬದುಕನ್ನು ಕೆಟ್ಟ ವ್ಯವಸ್ಥೆಯಲ್ಲಿ ನಿಯಂತ್ರಿಸುತ್ತ ಬಂದಿರುವ ಮಹಾಭಾರತ ಇಂಥ ಲೌಕಿಕ ಕೃತಿಗಳಲ್ಲಿ ಹೊರನೋಟಕ್ಕೆ ರಾರಾಜಿಸುತ್ತಿದ್ದರೂ ತನ್ನಂತರ್ಯದೊಳಗೆ ಅನೇಕ ವೈರುಧ್ಯಗಳನ್ನು ತುಂಬಿಕೊಂಡು ಎಲ್ಲೋ ಒಂದು ಕಡೆ ವರ್ಣಭೇದದ ಚೌಕಟ್ಟನ್ನು ಒಡೆಯದೇ ಬಲಗೊಳಿಸುತ್ತ ಬಂದಿದೆ. 'ಇದರಿಂದ ಜನರ ಹೋರಾಟ ನಿರಂತರವಾಗಿ ನಡೆಯುತ್ತಿದ್ದರೂ ಅದಕ್ಕೆ ಯಾವ ರೀತಿಯ ಗಮನವನ್ನು ರಾಜ ಹಾಗೂ ಧರ್ಮಪೀಠಗಳು ಕೊಡುತ್ತಿರಲಿಲ್ಲ'.[೧೧] ಕನ್ನಡದ ಸಂದರ್ಭದಲ್ಲಿ ಪ್ರಭುನಿಷ್ಠೆ ಮತ್ತು ಧರ್ಮನಿಷ್ಠೆಗಳೆರಡನ್ನೂ ನಿರಾಕರಿಸಿ ಹುಟ್ಟಿಕೊಂಡ ಹಸ್ತಪ್ರತಿಗಳಲ್ಲಿ ಹೀಗೆ ಪ್ರತಿಭಟನೆಯ ನೆಲೆಯಲ್ಲಿ ಹಸ್ತಪ್ರತಿಗಳೇನಾದರೂ ಹುಟ್ಟಿಕೊಂಡಿದ್ದರೆ ಅದು ಒಂದು ಮಹತ್ವದ ಚಾರಿತ್ರಿಕ ಘಟನೆಯೇ ಆಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ.

ಜೈನ ಮತ್ತು ಒಟ್ಟಾರೆ ಕನ್ನಡ ಕವಿಗಳ ಕಾವ್ಯ ವಸ್ತುವಾಗುವುದರಲ್ಲಿ ರಾಮಾಯಣಕ್ಕಿಂತ ಮಿಗಿಲಾದ್ದು ಮಹಾಭಾರತದಷ್ಟು ಹಿಂಸೆ, ಕ್ರೂರ ಯುದ್ಧ, ದಾಯದಿ ಕಲಹಗಳಲ್ಲದೆ, ನೂರಾರು ಪಾತ್ರಗಳ ವಿಭಿನ್ನ ಮನೋಧರ್ಮ, ರಾಮಾಯಣದಲ್ಲಿಲ್ಲವೆಂಬುದೇ ಮುಖ್ಯ ಕಾರಣವಾಗಿರಬಹುದು. ಏಕೆಂದರೆ ಇಲ್ಲಿ ನಡೆದಿದ್ದು ಸೀಮೆಗಳ ವಿಸ್ತರಣೆಗಾಗಿ, ರಾಜ್ಯ ಮತ್ತು ಅರಮನೆಗಳ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ನೆಲೆಯಲ್ಲಿ ನಡೆದ ಯುದ್ಧಗಳು, ತೋರಿರುವ ಸಾಹಸ, ಶೌರ್ಯಗಳನ್ನು ಕವಿ ಕಣ್ಣಾರೆ ಕಂಡು ವರ್ಣಿಸಬೇಕೆಂಬ ನೀತಿ ಆ ಹೊತ್ತಿಗೆ ಬಲವಾಗಿತ್ತು. ಆಶ್ರಯದಾತ

ದೊರೆ ಸೋತಾಗಲೂ ಕವಿ ಆತನ ದಿಗ್ವಿಜಯಗಳನ್ನು ವರ್ಣಿಸುವಂತ ಅನೇಕ ಕೃತಿಗಳನ್ನು ಪುನರ್‌ಶೋಧಿಸಬೇಕಿದೆ. ಪಂಪ ರನ್ನರು ಜೈನ ಕವಿಗಳಾಗಿ ಮಹಾಭಾರತವನ್ನು ವಸ್ತುವನ್ನಾಗಿರಿಸಿಕೊಂಡು ಬರೆದರೂ ಅವುಗಳನ್ನು ಜಿನಭಾರತಗಳೆಂದು ಕರೆಯಲಾಗುವುದಿಲ್ಲ. ಯಾಕೆಂದರೆ ಅವೆರಡೂ ವ್ಯಾಸ ಭಾರತವನ್ನು ಕಣ್ಮುಂದೆ ಇರಿಸಿಕೊಂಡು ತಮ್ಮದೇ ಆದ ಬದಲಾವಣೆಗಳನ್ನು ಕಥೆಯಲ್ಲಿ ಮಾಡಿಕೊಂಡರೂ ಕಥೆಯ ಮೈಯನ್ನು ಕೆಡಿಸದೆ, ವ್ಯಾಸರಿಗೆ ಗೌರವ ನೀಡುವ ರೀತಿಯಲ್ಲಿ ನಿರೂಪಿತವಾದವು.

ಕಥಾ ಪರಂಪರೆಯನ್ನು ಸೃಜನಶೀಲವಾಗಿ ಮುನ್ನಡೆಸಲು ಪ್ರವಾಹವಾಗಿಯೂ ಆಳುವ ದೊರೆಯನ್ನು ಭಾರತದ ನಾಯಕರೊಂದಿಗೆ ಹೋಲಿಸಿ ಹೇಳುವುದಕ್ಕೆ ಮಾಧ್ಯಮವಾಗಿಯೂ ಮಹಾಭಾರತ ವಿಶಿಷ್ಟ ಮಾದರಿಯ ವಸ್ತುವಾಗಿ ಬಳಕೆಯಾಯಿತು. ಜೈನ ಕವಿಗಳು ತಮ್ಮ ರಾಜರ ಋಣವನ್ನು ತೀರಿಸುವುದಕ್ಕಾಗಿ "ನನ್ನ ದೊರೆಯನ್ನು ಯಾರೊಂದಿಗೆ ಹೋಲಿಸಿದರೆ, ಸಾಮರ್ಥವಾದೀತೆಂಬ" ಎಣಿಕೆಯಲ್ಲಿರುವಾಗಲೇ ವ್ಯಾಸಭಾರತ ತೀರ ಆಕಸ್ಮಿಕವಾಗಿ ಸಿಕ್ಕ ಖನಿಜ ಸಂಪತ್ತಾಯಿತು. ಮುಂದೆ ಇದೇ ಹೊತ್ತಿಗೆ ಜೈನ ಸಂಪ್ರದಾಯದ ರಾಮಾಯಣ ಕಥಾ ಮಾದರಿ ಬೆಳೆಯಿತು. ನಾಗಚಂದ್ರನ 'ರಾಮಚಂದ್ರ ಚರಿತೆ ಪುರಾಣ', ಕುಮುದೇಂದುವಿನ ಕುಮದೆಂದುರಾಮಾಯಣಗಳು, ಬೆಳೆದು ಬಂದವು. ಮುಂದಿನ ಕವಿಗಳು ಇದೇ ಪರಂಪರೆಯಲ್ಲಿ ಹಸ್ತಪ್ರತಿ ರಚನೆ ಮಾಡಿದರು. ಕ್ರಿ.ಶ.೧೩ನೆಯ ಶತಮಾನದ ಮಿತ್ರದೇವಪ್ಪ ರಾಮನ ವಿಜಯ ಕಾವ್ಯದಂತ ಹಸ್ತಪ್ರತಿಗಳು ಜೈನ ರಾಮಾಯಣ ಪರಂಪರೆಯಲ್ಲಿ ರೂಪುಗೊಂಡವು. ಈ ಬಗೆಯ ಕವಲುಗಳು ಈ ಪರಂಪರೆಯ ನಂತರ ಮುಂದಿನ ವೀರಶೈವ ಯುಗದಲ್ಲಿ ಯಾಕೆ ನಿರ್ಮಾಣವಾಗಲಿಲ್ಲವೆಂಬುದು ಕುತೂಹಲದ ಪ್ರಶ್ನೆ.

ಈ ಮೇಲ್ಕಂಡಂತೆ ರೂಪ, ವಸ್ತು ಹಾಗೂ ವಿಷಯ ಸ್ವರೂಪವನ್ನು ಹಸ್ತಪ್ರತಿಗಳ ಹಿನ್ನೆಲೆಯಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ. ಇವೆರಡಕ್ಕೂ ಸಾಮ್ಯ ವೈವಿಧ್ಯತೆಯನ್ನು ಗುರುತಿಸಲಾಗಿದೆ. ಅಂದರೆ ಯಾವ ರೂಪದಲ್ಲಿ ಯಾವ ವಿಷಯ ಒಳಗೊಂಡಿತ್ತು ಮತ್ತು ಯಾವ ವಿಷಯದ ಅಭಿವ್ಯಕ್ತಿಗೆ ಎಂಥ ರೂಪ ಜಾರಿಗೆ ಬಂತು ಎಂಬುದನ್ನು ವಿವರಿಸಲಾಗಿದೆ. ಆದರೆ ಇಲ್ಲಿ ಯಾವುದು ಮೊದಲು ಮತ್ತು ನಂತರ ಎಂಬ ಅಂತಿಮ ಗ್ರಹಿಕೆ ತಿಳಿಯದೆ 'ಬೀಜವೃಕ್ಷ ನ್ಯಾಯದಂತೆ ಸಂದೇಹ ನಿಗೂಢವಾಗಿಯೇ ಉಳಿದುಬಿಡುತ್ತದೆ. ವೀರಣ್ಣ ರಾಜೂರು ಅಭಿಪ್ರಾಯದಂತೆ 'ಕನ್ನಡ ಹಸ್ತಪ್ರತಿಗಳ ರೂಪ ಹಾಗೂ ವಿಷಯ ವೈವಿಧ್ಯ ಧರ್ಮತತ್ವ ಸಾಹಿತ್ಯರೂಪ ಛಂದೋರೂಪ ಮತ್ತು ವಿವಿಧ ವಸ್ತುಗಳ ಸಮನ್ವಯವನ್ನು ಸಾಧಿಸಿಕೊಂಡು ವೈವಿಧ್ಯಮಯವಾಗಿ ಬೆಳೆದು ಬಂದಿದೆ. ಕಾಲಕಾಲಕ್ಕೆ ಛಂದೋರೂಪಕ್ಕೆ ತಕ್ಕ ವಸ್ತು ವಸ್ತುವಿಗೂ ಛಂದೋರೂಪ ಹೊಂದಿಕೊಳ್ಳುತ್ತ ಬಂದು ಈ ರೂಪಕ್ಕೆ ಈ ವಸ್ತುವೇ ಸರಿ ಎನ್ನುವಷ್ಟರ ಮಟ್ಟಿಗೆ ತಾದಾತ್ಮವನ್ನು ಸಾಧಿಸಿದುದು ಕಂಡುಬರುತ್ತದೆ'.[೧೨]

ವೈ.ಸಿ. ಭಾನುಮತಿ ಅವರು ಹೇಳುವಂತೆ 'ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಧಾರ್ಮಿಕವಾದುದು ಧರ್ಮ ಮತ್ತು ಸಾಹಿತ್ಯಕ್ಕೆ ಗಾಢವಾದ ಸಂಬಂಧವಿದ್ದಂತ ಕಾಲದಲ್ಲಿ ಹಸ್ತಪ್ರತಿಕಾರರು ತಾವು ನಂಬಿದ ನೆಚ್ಚಿನ ಅನುಸರಿಸಿದ ಧರ್ಮಕ್ಕೆ ಸಂಬಂಧಿಸಿದ ಕೃತಿಗಳು ಮಾತ್ರ ಪ್ರತಿನಿಧಿಸುತ್ತಿದ್ದ ಸಂಗತಿ ಸಾಮಾನ್ಯವಾಗಿತ್ತು'[೧೩] ಈ ಮಾತಿನಂತೆ ವೀರಶೈವ ಹಸ್ತಪ್ರತಿಕಾರರು ವೀರಶೈವ ಕೃತಿಗಳನ್ನು ವೈದಿಕ ಹಸ್ತಪ್ರತಿಕಾರರು ವೈದಿಕ ಕೃತಿಗಳನ್ನು ರಚಿಸಿದಂತೆ ಜೈನರು ಜೈನಧರ್ಮದ ಕೃತಿಗಳನ್ನು ರಚಿಸಿದ್ದು ಸ್ಪಷ್ಟವಾಗುತ್ತದೆ.

ಕನ್ನಡ ಹಸ್ತಪ್ರತಿಗಳು ದ್ರಾವಿಡ ಪರಿಸರದಲ್ಲಿ ರೂಪಗೊಂಡರೂ ವೈದಿಕ ಪರಂಪರೆಯ ಆರ್ಯ ಸಂಸ್ಕೃತಿಯನ್ನು ಹೊಂದಿದಂತವು. ಕನ್ನಡದ ಮೊದಲ ಹಸ್ತಪ್ರತಿಗಳು ಆರ್ಯ ಪ್ರಭಾವದ ಜೈನರಿಂದಲೇ ನಿರ್ಮಾಣವಾದವು. ಇದಕ್ಕೆ ಕರ್ನಾಟಕದಲ್ಲಿ ದೊರಕಿರುವ ಪ್ರಾಚೀನ ಶಾಸನಗಳ ಆಧಾರದಿಂದ ಹೇಳುವುದಾದರೆ ಪ್ರಾಚೀನ ಕರ್ನಾಟಕದಲ್ಲಿ ವೈದಿಕ ಮತ್ತು ಜೈನಧರ್ಮಗಳ ಪ್ರಸಾರ ಮಾತ್ರ ಹೆಚ್ಚು ಪ್ರಚಾರವಾಗಿದೆ. 'ನೃಪತುಂಗನ ಕಾಲದಲ್ಲಿ ಶೈವ, ವೈಷ್ಣವ ಧರ್ಮಗಳೆರಡೂ ಪ್ರಚಾರವಾಗಿದ್ದರೂ ಆದಿಕೃತಿಯಾದ ಕವಿರಾಜಮಾರ್ಗದ ಮೇಲೆ ಪ್ರಭಾವ ಬೀರಿದ್ದು, ಆರ್ಯ ಸಂಸ್ಕೃತಿ. ಹೀಗಾಗಿ ಕಾವ್ಯ ಕಾವ್ಯಶಾಸ್ತ್ರ, ಮತಧರ್ಮಶಾಸ್ತ್ರ, ಲೌಕಿಕಶಾಸ್ತ್ರ ಈ ಎಲ್ಲ ಬಗೆಯ ಕೃತಿ ರಚನೆ ಜೈನರೇ ಶ್ರೀಕಾರ ಹಾಕಿದ್ದು. ಆರ್ಯ ಬಗೆಯ ಧೋರಣೆಯು ಇದಕ್ಕೆ ಮೊದಲು ಕನ್ನಡ ಜೈನ ಧಾರ್ಮಿಕ ಸಾಹಿತ್ಯದ ಮೇಲೆ ಪ್ರಭಾವ ಬೀರಿದ ಮೂವರು ಮಹತ್ವದ ಕವಿಗಳೆಂದರೆ ಸುಮಂತ ಭದ್ರ (ಕ್ರಿ.ಶ.೪೦೦), ಕವಿ ಪರಮೇಶಿ (ಕ್ರಿ.ಶ.೫೫೦) ಮತ್ತು ಪೂಜ್ಯಪಾದ (ಕ್ರಿ.ಶ.೬೦೦). ಕರ್ನಾಟಕದ ಮುಂದಿನ ಕವಿಗಳೆಲ್ಲ ಇವರನ್ನು ಆರಾಧನ ದೃಷ್ಟಿಯಿಂದ ನೆನೆಯುತ್ತಾರೆ. ಸಮತಭದ್ರನ ಸಂಸ್ಕೃತ ಪ್ರಾಕೃತ ಕೃತಿಗಳಿಗೆ ಹಳಗನ್ನಡ ವ್ಯಾಖ್ಯಾನಗಳು ರಚಿತವಾಗಿವೆ. ಆದರೆ ಈ ಕನ್ನಡದಲ್ಲಿ ಕೃತಿ ರಚನೆ ಮಾಡಿರುವವರ ಬಗ್ಗೆ ರಚಿತವಾದ ದಾಖಲೆಗಳಲ್ಲಿ ಕವಿ ಪರಮೇಷ್ಠಿ ತ್ರಿಷಕ ಶುಕ ಪುರುಷರ ಪುರಾಣವನ್ನು ಮತ್ತು ಕಲ್ಯಾಣಕಾರರು ಎಂಬ ವೈದ್ಯ ಕೃತಿಯನ್ನು ಪೂಜ್ಯ ಪಾದವನ್ನು ಜೈನೇಂದ್ರ ವ್ಯಾಕರಣವನ್ನು ರಚಿಸಿದ್ದಾರೆ. ಆದರೆ ಇವರಾರೂ ಕೂಡಾ ಕನ್ನಡದಲ್ಲಿ ಕೃತಿ ರಚನೆ ಮಾಡಿದ ಬಗ್ಗೆ ದಾಖಲೆಗಳಿಲ್ಲ ಮತ್ತು ಈವರೆಗೂ ಇವರ ಯಾವ ಹಸ್ತಪ್ರತಿಗಳು ದೊರೆತಿಲ್ಲ.

ಈಗ ಲಭ್ಯವಾಗಿರುವ ದಾಖಲೆಗಳಿಂದ ಕವಿರಾಜಮಾರ್ಗದಂತಹ ಲಕ್ಷಣ ಗ್ರಂಥಬಿಟ್ಟರೆ ಧಾರ್ಮಿಕ ಹಸ್ತಪ್ರತಿಗಳು ಗಮನ ಸೆಳೆಯುತ್ತವೆ. ಜೈನಧರ್ಮವನ್ನು ಪ್ರಚಾರಗೊಳಿಸುವ ಅಗತ್ಯಕ್ಕಾಗಿಯೇ ಹುಟ್ಟಿಕೊಂಡ ಜೈನ ಧಾರ್ಮಿಕ ವಿಷಯವುಳ್ಳ ಹಸ್ತಪ್ರತಿಗಳು ಚಂಪೂ ಸಾಂಗತ್ಯ ಕಂದ, ಗದ್ಯ ಮುಂತಾದ ರೂಪಗಳಲ್ಲಿ ತಮ್ಮ ವಿಷಯ ವೈವಿಧ್ಯವನ್ನು ಒಡಿದಿಟ್ಟುಕೊಂಡಿವೆ. ಪಂಪರ, ರನ್ನ, ಪೊನ್ನ, ಜನ್ನರ ದಾರಿಯಲ್ಲಿ ಅನೇಕ ಹಸ್ತಪ್ರತಿಗಳು

ರೂಪಗೊಂಡವು. ನೀತಿ ವೈರಾಗ್ಯ ಅಹಿಂಸೆ ಇತ್ಯಾದಿ ಜೈನತತ್ವಗಳನ್ನು ವರ್ಣಿಸುವ ಚಂಪು ರೂಪದ ಬಂಧುವರ್ಮನ ಜೀವ ಸಂಖ್ಯಾ ಬೋಧನೆ ಹಸ್ತಪ್ರತಿಯು (ಕ್ರಿ.ಶ.೧೨೦೦) ಬಹುಮುಖ್ಯವಾದದು.

ಜೈನವರ್ಮ ತತ್ವವನ್ನು ವರ್ಣಿಸುವ ಹಸ್ತಪ್ರತಿಗಳು ಭವಾವಳಿ ತೀರ್ಥಂಕರ ಚರಿತ್ರೆ, ತ್ರಿಷಷ್ಟಿ ಶಲಾಕ ಪುರುಷರ ಚರಿತ್ರೆ, ಪಂಚಕಲ್ಯಾಣ ಮುಂತಾದ ವಿಷಯ ವೈವಿಧ್ಯ ಮತ್ತು ರೂಪ ವೈವಿಧ್ಯ ಹಿನ್ನೆಲೆಯಲ್ಲಿ ಅಭಿವ್ಯಕ್ತಿಗೊಂಡಿವೆ. ಒಂದು ಧಾರ್ಮಿಕ ವಸ್ತು ಕೇಂದ್ರವಾಗಿ ಅದರ ಸುತ್ತಲೂ ಅನೇಕ ಬಗೆಯ ವಿಷಯ ನಿರೂಪಣೆಗಳು ಪ್ರಯೋಗವಾಗಿದ್ದು ಬಹುಶಃ ಜೈನ ಧಾರ್ಮಿಕ ಹಸ್ತಪ್ರತಿಗಳಲ್ಲಿಯೇ ಈ ಬಗೆಯ ವಸ್ತು ವಿನ್ಯಾಸ ಮುಂದಿನ ವೀರಶೈವ ಮತ್ತು ವೈದಿಕ ಸಂದರ್ಭದಲ್ಲಿ ಪ್ರಯೋಗವಾಗದಿರುವುದಕ್ಕೆ ಮತ ಧಾರ್ಮಿಕ ಪ್ರತಿಷ್ಠೆಗಳು ಕಾರಣವಾಗಿವೆ. ಧರ್ಮ ಪ್ರಸಾರಕ್ಕೆ ಏನೆಲ್ಲ ಪರಿಹಾರಗಳು ಬೇಕೋ ಆ ಎಲ್ಲಾ ಸಾಧ್ಯತೆಗಳನ್ನು ಜೈನ ಹಸ್ತಪ್ರತಿಗಳು ಬಳಸಿಕೊಂಡವು. ಪಂಪ ವಸ್ತು ವೈವಿಧ್ಯತೆಗಿಂತ ವಿಷಯ ವೈವಿಧ್ಯಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡಿದ್ದು ಕಂಡುಬರುತ್ತದೆ. ಈ ಮಾತನ್ನು ಬೇರೆ ಬೇರೆ ವಿಷಯ ಸ್ವರೂಪಗಳನ್ನು ವಿಶ್ಲೇಷಿಸುವುದರ ಮೂಲಕ ಸಮರ್ಥಿಸಿಕೊಳ್ಳಬಹುದು.

ರಾಮಾಯಣ, ಮಹಾಭಾರತ ಅಥವಾ ಪರಂಪರೆಯಿಂದ ಜನರಲ್ಲಿ ನಡೆದು ಬಂದ ದಂತಕಥೆಗಳನ್ನು ಆಧರಿಸಿ ಜೈನರು ಹಸ್ತಪ್ರತಿಗಳನ್ನು ಬರೆದರು. ಧಾರ್ಮಿಕ ವಿಷಯದಲ್ಲಿ ಕಲ್ಪನೆಯನ್ನು ಆಧರಿಸಿಯೇ ಹಸ್ತಪ್ರತಿಗಳು ಹುಟ್ಟಿದ್ದರೆ ಲೌಕಿಕದಲ್ಲಿ ವಾಸ್ತವ ಬದುಕಿನ ಚಿತ್ರಣವೇ ಹಸ್ತಪ್ರತಿಗಳ ವಿಷಯವಾಯಿತು. ಅವರಿಗೆ ಧಾರ್ಮಿಕ ದೃಷ್ಟಿಗಿಂತ ಲೌಕಿಕ ದೃಷ್ಟಿಯಿಂದಲೇ ಸೃಜನಶೀಲತೆಯನ್ನು ಕಂಡುಕೊಳ್ಳುವ ಹಂಬಲ ಉಂಟಾಗಿದ್ದರ ಹಿನ್ನೆಲೆಯಲ್ಲಿ ಧಾರ್ಮಿಕ ಕೃತಿಗಿಂತ ಲೌಕಿಕ ಕೃತಿಗಳೇ ಹೆಚ್ಚು ಆಕರ್ಷಕ ಮತ್ತು ಜನಪ್ರಿಯತೆ ಹೊಂದಿವೆ. 'ಧರ್ಮ ಕಾವ್ಯ ಧರ್ಮ' ಎಂಬ ಪರಿಭಾಷೆಗಳು ಕೂಡಾ ಧಾರ್ಮಿಕಕ್ಕಿಂತ ಲೌಖಿಕ ಸ್ವರೂಪದ ಕಾವ್ಯಾಶಕ್ತಿ ಪ್ರಯೋಗವನ್ನು ಸಮರ್ಥಿಸುತ್ತವೆ.

ಹೀಗೆ ಜೈನ ಹಸ್ತಪ್ರತಿಗಳ ರಚನೆಯ ಹಿಂದಿರುವ ತಾತ್ವಿಕ ಕಾರಣವೆಂದರೆ ಧರ್ಮತತ್ವ ಪ್ರಸಾರವಾಗಿತ್ತು. ಹಸ್ತಪ್ರತಿ ರಚನೆ ಮತ್ತು ಪೋಷಣೆ, ಸಂಗ್ರಹ, ಸಂರಕ್ಷಣೆ, ಸಂಪಾದನೆಗಳು ಸಾರ್ವತ್ರಿಕತೆಯನ್ನು ತಂದುಕೊಟ್ಟರೂ ನಂತರದಲ್ಲಿ ಅವು ಮತ್ತೇ ಧಾರ್ಮಿಕ ಆವರಣದಲ್ಲಿಯೇ ಗಿರಕಿ ಹೊಡೆಯುವಂತಾಯಿತು. ಅಂತೆಯೇ ಇಂದಿನ ಆಧುನಿಕ ಯುಗದಲ್ಲಿ ಶ್ರವಣಬೆಳಗೊಳದ ಶ್ರೀ ಚಾರುಕೀರ್ತಿಭಟ್ಟಾರಕ ಜೈನಮಠ, ಮೂಡಬಿದಿರೆಯ ಜೈನಮಠ ಹೊಂಬುಜ, ಕಾರ್ಕಳ, ಸಾಧ್ವಿ, ನರಸಿಂಹರಾಜಪುರಗಳಲ್ಲಿರುವ ಜೈನ ಮಠಗಳು ಬೆಳಗಾವಿಯ ನಾಗನೂರು ರುದ್ರಾಕ್ಷಿಮಠಗಳು, ಕರ್ನಾಟಕದಲ್ಲಿ ಹಸ್ತಪ್ರತಿ ಸಂರಕ್ಷಣಾ ಪರಂಪರೆಯನ್ನುಳಿಸಿಕೊಂಡು ಅವುಗಳ ಅಧ್ಯಯನ ಮಾಡುತ್ತ ಬಂದಿವೆ.

೫.೨. ಶೈವ/ವೀರಶೈವ ಮತಾಧಾರಿತ ಅಧ್ಯಯನಗಳು

ಕನ್ನಡ ಸಾಹಿತ್ಯ ಪರಂಪರೆಗೆ ವೀರಶೈವ ಹಸ್ತಪ್ರತಿಗಳ ಕೊಡುಗೆ ಅಪಾರವೆನ್ನುವು ದಕ್ಕಿಂತ ಅವು ನಿರ್ಮಾಣ ಮಾಡಿದ ಘಟ್ಟ ಚಾರಿತ್ರಿಕ ದೃಷ್ಟಿಯಿಂದ ಮಹತ್ವವಾದುದು. ಏಕೆಂದರೆ ಈಗಾಗಲೇ ಜೈನರು ಬಳಸಿಕೊಂಡ ವಸ್ತುವಿಗೂ ಮುಂದೆ ವೀರಶೈವರು ಬಳಸಿ ಕೊಂಡ ವಸ್ತುವಿಗೂ ತಾತ್ವಿಕ ಭಿನ್ನತೆಯಿದೆ. ಜೈನತ್ವ ಅಥವಾ ತನ್ನ ಹಿಂದಿನ ಒಟ್ಟು ಪರಂಪರೆಯನ್ನು ಧಿಕ್ಕರಿಸಿ ಹೆದ್ದಾರಿಯಲ್ಲಿ ಮುನ್ನುಗಿದ್ದ ವೀರಶೈವ ಹಸ್ತಪ್ರತಿಗಳು ವಸ್ತು ಹಾಗೂ ಅಭಿವ್ಯಕ್ತಿಯ ಧೋರಣೆಯಲ್ಲಿ ರಾಜಮಾರ್ಗವನ್ನು ನಿರ್ಮಾಣ ಮಾಡಿದವು.

ಜೈನ ಮತ್ತು ವೀರಶೈವ ಸಾಹಿತ್ಯದ ನಡುವಿನ ಭೇದವನ್ನು ರಾಜಸತ್ತೆ ಮತ್ತು ಧರ್ಮಸತ್ತೆಯ ನೆಲೆಯಲ್ಲಿ ಕಂಡುಕೊಳ್ಳಬೇಕಾಗಿದೆ. ಜೈನ ಸಾಹಿತ್ಯ ರಾಜರನ್ನು ಆಶ್ರಯಿಸಿ ಬೆಳೆದರೆ ವೀರಶೈವ ಸಾಹಿತ್ಯ ರಾಜಸತ್ತೆಯನ್ನು ವಿರೋಧಿಸಿ ಬೆಳೆಯಿತು. ರಾಜಾಶ್ರಯವನ್ನು ತೊರೆದು ಕವಿ ರಾಘವಾಂಕನು ಹೇಳುವಂತೆ "ಜನ ಬದುಕಬೇಕು" ಎಂಬ ಉದ್ದೇಶದತ್ತ ಹೊರಳಿತು. ಆದರೆ ಕಾಲಕ್ರಮದಲ್ಲಿ ವೀರಶೈವ ಸಾಹಿತ್ಯ ಜನರ ಹತ್ತಿರ ಹೋಗದೆ ಅದು ಧರ್ಮಸತ್ತೆ, ಧರ್ಮಾಧಿಕಾರಿಗಳ ಆಶ್ರಯಕ್ಕೆ ಹೊರಳಿದ್ದು ಇತಿಹಾಸ. ಈ ಪರಂಪರೆಯಲ್ಲಿ ಪ್ರಭುತ್ವನಿಷ್ಠೆ ಬಗ್ಗೆ ಹುಟ್ಟಿ ಕೊಂಡಷ್ಟು ಪ್ರತಿಭಟನೆ ಧರ್ಮನಿಷ್ಠೆಯ ಬಗೆಗೆ ಹುಟ್ಟಿಕೊಳ್ಳಲಿಲ್ಲ. ಆದ್ದರಿಂದಲೇ ಶಿವಶರಣರು ಹಾಗೂ ಅನಂತರದ ದೇಸಿ ಕವಿಗಳು ಪ್ರಭುತ್ವನಿಷ್ಠೆಯನ್ನು ನಿರಾಕರಿಸಿದರೂ ಅವು ಧರ್ಮ ನಿಷ್ಠೆಯನ್ನು ನಿರಾಕರಿಸಲು ಸಾಧ್ಯವಾಗಲೇ ಇಲ್ಲ. ಇಷ್ಟದಾರೂ ವಚನ ಸಾಹಿತ್ಯ ನೇರವಾಗಿ ಧಾರ್ಮಿಕ ನೆಲೆಯ ದೃಷ್ಟಿಯಂತೆ ಕಂಡರೂ ಕೂಡಾ ಸೂಕ್ಷ್ಮವಾಗಿ ಅದರ ಆಂತರ್ಯದಲ್ಲಿ ಆರ್ಥಿಕ ಮೂಲ ಸಾಮಾಜಿಕ ರಾಜಕೀಯ ಸಂಗತಿಗಳ ಬಿಚ್ಚಿಕೊಳ್ಳುತ್ತ ಹೋಗುತ್ತದೆ.

ವೀರಶೈವ ಪರಂಪರೆಯ ಕೃತಿಗಳನ್ನು ಜೈನಪರಂಪರೆಯಂತೆ ನಿರ್ದಿಷ್ಟ ಲಕ್ಷಣಗಳಿಂದ ಗುರುತಿಸುವುದು ಕಷ್ಟಸಾಧ್ಯ. ಜೈನರಿಗೆ ಮಾದರಿಯಾಗಿದ್ದ ಲೌಕಿಕ ಮತ್ತು ಆಗಮಿಕ ಹೆಚ್ಚೆಂದರೆ ಪುರಾಣ ಇತ್ಯಾದಿ. ಆದರೆ ವೀರಶೈವರಿಗೆ ನೂರಾರು ಬಗೆಯ ಸಂಗತಿಗಳು ಕಾವ್ಯದ ವಸ್ತುವಾದವು. ಶಿವ ಪುರಾಣದಲ್ಲಿನ ಶಿವನ ಲೀಲೆಗಳೂ, ಶಿವಭಕ್ತರ ಕಥೆಗಳು, ತಮಿಳುನಾಡಿನ ೬೩ ಪುರಾತನರ ಚರಿತೆಗಳು ಮತ್ತು ಬಸವಾದಿ ಪ್ರಮಥರ ಜೀವನಗಳು, ವೀರಶೈವ ಧಾರ್ಮಿಕ ಸಾಹಿತ್ಯದ ವಸ್ತುಗಳಾಗಿವೆ. ಹೀಗಾಗಿ ಲೌಕಿಕ ಎನ್ನಬಹುದಾದ ಪ್ರತ್ಯೇಕ ಕಾವ್ಯರೂಪವನ್ನು ಜಾರಿಗೊಳಿಸುವುದು ವೀರಶೈವ ಧೋರಣೆಯಾಗಿರಲಿಲ್ಲ. ಆದರೆ ಒಬ್ಬ ರಾಜನ ನಿಷ್ಠೆ ಸತ್ಯವನ್ನು ಕುರಿತು 'ಹರಿಶ್ಚಂದ್ರ ಕಾವ್ಯದಂತಹ ಲೌಕಿಕ ವಿಷಯ ಕೃತಿಗಳು ಧಾರ್ಮಿಕ ಪಟ್ಟಿಯಲ್ಲಿ ಸೇರಿ ಕೊಳ್ಳುತ್ತವೆ. ಹೀಗೆ ವೀರಶೈವ ಕೃತಿಗಳಲ್ಲಿ ಏಕಕಾಲಕ್ಕೆ ಧಾರ್ಮಿಕವೆನ್ನಬಹುದಾದ ಅಭಿವ್ಯಕ್ತಿಗಳು

ಆರ್ಥಿಕ, ಸಾಮಾಜಿಕ, ರಾಜಕೀಯ ಎನ್ನಬಹುದಾದ ಲೌಖಿಕ ಅರ್ಥಗಳು ಅನಾವರಣಗೊಳ್ಳುತ್ತ ಹೋಗುತ್ತವೆ.

ಚರಿತ್ರೆಯ ಹಂತದಲ್ಲಿ ವೀರಶೈವರಿಗೆ ಮುಖ್ಯವಾದದ್ದು ನೀತಿ, ಧರ್ಮ, ಆಧ್ಯಾತ್ಮ, ಲಿಂಗ, ಜಂಗಮ ಮತೀಯ ನಿಷ್ಠೆಗಳು ಹೊರತು ನಿಜವಾದ ಅರ್ಥದ ಸಾಮಾಜಿಕ ಮನುಷ್ಯ ಅಲ್ಲ. ಬಹುಮುಖ್ಯವಾಗಿ ವೀರಶೈವರಿಗೆ ತಮ್ಮ ಸಾಮಾಜಿಕ ಪರಂಪರೆಯನ್ನು ಗಟ್ಟಿಗೊಳಿಸುವುದಾಗಿತ್ತೇ ಹೊರತು ಸಮಾಜವಾದಿ ಸಿದ್ಧಾಂತವನ್ನು ನಿರ್ಮಿಸುವುದಾಗಿರಲಿಲ್ಲ. ಹರಿಹರನಂತೆ ಭಕ್ತ ಕವಿಗಳು ಪ್ರಭುನಿಷ್ಠೆಯನ್ನು ಹಾಗೂ ಆ ನಿಲುವನ್ನು ಕಾವ್ಯವಸ್ತುಗಳನ್ನು ನಿರಾಕರಿಸಿ ಸಮಾಜದ ಅದರಲ್ಲೂ ಕೆಳವರ್ಗದ ಸಾಮಾಜಿಕ ಹಂತಗಳಿಗೆ ಸೇರಿದ ಸಾಮಾನ್ಯ ಮನುಷ್ಯರನ್ನು ತನ್ನ ಕಾವ್ಯಗಳ ಕಥಾನಾಯಕರನ್ನಾಗಿ ಮಾಡಿಕೊಂಡರು. 'ಹರಿಹರನದು ಸಮಾಜವಾದಿ ನಿಲುವಿಗಿಂತ ಬೇರೆಯಾದ ಧಾರ್ಮಿಕ ನಿಲುವು ಆಗಿತ್ತು. ಸಾಮಾಜಿಕ ಶ್ರೇಣಿಯ ಕೆಳಗಿನ ಹಂತದ ಒಬ್ಬ ಅಗಸ, ಕುಂಬಾರ, ಬೆಸ್ತ, ಒಕ್ಕಲಿಗ, ಕೂಲಿಯ ಸಾಮಾನ್ಯರು ಜನಪ್ರತಿನಿಧಿಗಳಾಗಿ ಚಿತ್ರಣ ಗೊಂಡರೆಂದು ಹೆಮ್ಮೆಪಟ್ಟರೂ ಸೂಕ್ಷ್ಮದಲ್ಲಿ ಅವರೆಲ್ಲರೂ ಶಿವಭಕ್ತರಾಗಿ ಚಿತ್ರಿತಗೊಂಡರು. ವಚನ ಚಳುವಳಿಯ ನಂತರ ಶರಣ ಸಿದ್ಧಾಂತಕ್ಕೆ ಬದ್ಧವಾಗಿ ಬರೆದವರು ಹರಿಹರ ಮತ್ತು ರಾಘವಾಂಕರು. ಇವರಿಬ್ಬರ ಕೃತಿಗಳಲ್ಲಿ ಶಿವ ಅತ್ಯಂತ ಕೆಳಜಾತಿಗಳ ವೇಷಧರಿಸಿ ಭಕ್ತಿಯ ಪರೀಕ್ಷೆಗೆ ಬರುತ್ತಾನೆ ಹೊರತು ನಿಜವಾಗಿ ಆಯಾ ಜಾತಿಯವನಾಗಿ ಹುಟ್ಟಿ ಬರುವುದಿಲ್ಲ. ಹರಿಹರ ಮತ್ತು ರಾಘವಾಂಕರಲ್ಲಿ ನಡೆಯಿತೆನ್ನಲಾದ ವಾಗ್ವಾದ ವಚನ ಚಳುವಳಿಯೊಳಗೆ ಮರದೊಳಗಿದ್ದ ಬೆಂಕಿಯಂತೆ ಸುಪ್ತವಾದ ಮತೀಯ ಅಂಧ ಶ್ರದ್ಧೆಯನ್ನು ಪ್ರಕಟಿಸುತ್ತದೆ'.[೧೪] ಇದರಿಂದ ಹರಿಹರ ರಾಘವಾಂಕರು ಎಷ್ಟು ಮನುಷ್ಯರ ಪರವಾಗಿ ಬರೆದರೂ ಅದು ಧಾರ್ಮಿಕವಾಗಿರುತ್ತದೆ. ಮನುಷ್ಯರ ಚರಿತ್ರೆ ಬರೆದಿದ್ದಕ್ಕಾಗಿ ಹರಹರ, ರಾಘವಾಂಕನಿಗೆ ಹೊಡೆದಿದ್ದು ಆತನ ಸಾಮಾನ್ಯ ಬದುಕಿನ ಪ್ರತಿಗಾಮಿ ಧೋರಣೆಗಳನ್ನು ಪ್ರಕಟಿಸುತ್ತದೆ.

ಇಡೀ ವೀರಶೈವ ಪರಂಪರೆ ಲಿಂಗದೀಕ್ಷೆಯ ಆಧಾರದ ಮೇಲೆ ನಿಂತಿದೆ. ಲಿಂಗದೀಕ್ಷೆ ಯಾದವರು ಮಾತ್ರವೇ ಭಕ್ತರು ಅಜಾತರು, ಲಿಂಗದೀಕ್ಷೆಯಾಗದವರು ದೇವರಾಗಲಿ, ಬ್ರಾಹ್ಮಣರಾಗಲಿ, ಶೂದ್ರರಾಗಲಿ ಅವರು ನರಕಿಗಳು, ಭವಿಗಳು. ಇಲ್ಲಿ ಮಾನವ ದೇವನಾಗುವುದು ಧಾರ್ಮಿಕವಾದರೆ ದೇವ ಮಾನವನಾಗಿ ಅವತರಿಸುವುದು ಲೌಕಿಕ. ಈ ಬಗೆಯ ವರ್ಗೀಕರಣ ಒಟ್ಟು ಮಾನವ ಬದುಕನ್ನೇ ನಿಸ್ತೇಜಗೊಳಿಸುವ ತಂತ್ರವಾಗುತ್ತದೆ. ಆದರೆ ಇದೇ ಸಮುದಾಯ ದಲ್ಲಿ ಬಾಲಲೀಲಾ ಮಹಾಂತನಂತವರು ಲಿಂಗದೀಕ್ಷೆಯನ್ನು ವಿರೋಧಿಸಿ ರಚಿಸಿದ ವಚನಗಳು. ಇವೆ.

'ಮಧ್ಯಕಾಲೀನ ಕನ್ನಡ ಹಸ್ತಪ್ರತಿಗಳ ಚರಿತ್ರೆ ಎಂದರೆ ವೀರಶೈವ ಹಸ್ತಪ್ರತಿ ಪರಂಪರೆಯ ಅಧ್ಯಯನವೇ ಆಗಿದೆ. ಕನ್ನಡದ ಬೇರೆ ಬೇರೆ ಹಸ್ತಪ್ರತಿಗಳ ಬರಹ ಹಾಗೂ ವಿಷಯದ ಮೂಲಕವಾಗಿ ಗಮನ ಸೆಳೆದರೆ, ವೀರಶೈವ ಹಸ್ತಪ್ರತಿಗಳು ವಿಷಯದ ವೈವಿಧ್ಯತೆ ಹಿನ್ನೆಲೆಯಲ್ಲಿ ವಿಶೇಷ ಗಮನ ಸೆಳೆಯುತ್ತದೆ. "ಶ್ರೀ ಗುರು ಬಸವಲಿಂಗಾಯನಮಃ, ಶ್ರೀ ಶಂಭುಲಿಂಗವೇನಮಃ" ಎಂದು ಆರಂಭವಾಗುವ ವೀರಶೈವ ಧಾರ್ಮಿಕ ಹಸ್ತಪ್ರತಿಗಳು ಸ್ಪಷ್ಟವಾಗಿ ದ್ರಾವಿಡ ನೆಲದಲ್ಲಿ ರೂಪುಗೊಂಡವು. ರಾಚನಿಕ ವಿನ್ಯಾಸ ಹಾಗೂ ಕಲಾತ್ಮಕತೆಯ ದೃಷ್ಟಿಯಿಂದ ವೀರಶೈವ ಹಸ್ತಪ್ರತಿಗಳ ಮಹತ್ವವನ್ನು ಕಂಡುಕೊಳ್ಳುವುದಾದರೆ ಭೀಮಕವಿ ಬಸವಪುರಾಣದ ಹಸ್ತಪ್ರತಿಯೊಂದರಲ್ಲಿ ಪ್ರತಿ ಪುಟವನ್ನು ವಿವಿಧ ವಿನ್ಯಾಶದ ಬಣ್ಣದ ಚೌಕಟ್ಟುಗಳಿಂದ ಅಲಂಕರಿಸುವುದು ಶ್ಲಾಘನೀಯವಾಗಿದೆ. ಇದರ ಹೊರ ರಕ್ಷಣಾ ಹಲಗೆಗಳ ಮೇಲಿರುವ ವರ್ಣರಂಜಿತ ಚಿತ್ರಗಳು ಸುಂದರವಾಗಿದೆ. ರಾಘವಾಂಕ ಚರಿತೆಯ ಒಂದು ಕಾಗದ ಪ್ರತಿಯಲ್ಲಿ ಪ್ರಭುದೇವ, ಸಿದ್ಧರಾಮ, ರಾಘವಾಂಕ, ಹರಿಹರ, ಚಿಕ್ಕನಂಜಾರ್ಯ, ಮಹಾದೇವ-ರುದ್ರಾಣಿ ಮೂರುಮಂದಿ (ಏಕ ತ್ರಿದಂಡಿ) ಕವಿಗಳು ಪ್ರತಾಪರುದ್ರ, ವಿರೂಪಾಕ್ಷಪಂಡಿತ ಕೆರೆಯ ಪದ್ಮರಸ ಚಿತ್ರಗಳಿವೆ'.[೧೫] ಇಂಥ ಅನೇಕ ಸುಂದರ ವಿನ್ಯಾಸದ ಹಸ್ತಪ್ರತಿಗಳು ವೀರಶೈವ ಧರ್ಮದಲ್ಲಿ ಲಭ್ಯವಾಗುತ್ತಿದೆಯಲ್ಲದೆ, ಅವುಗಳ ಮೇಲೆ ನಂದಿ ಶಿವಲಿಂಗ ಶಿವ ಪಾರ್ವತಿ ಇತ್ಯಾದಿ ಚಿತ್ರಗಳನ್ನು ಬಿಡಿಸಿರುವುದನ್ನು ಕಂಡುಬರುತ್ತದೆ.

ಹಸ್ತಪ್ರತಿಗಳ ಆಂತರಿಕ ಸ್ವರೂಪದಿಂದ ಅವುಗಳನ್ನು ಗಮನಿಸುವುದಾದರೆ ಜೈನ ಹಸ್ತಪ್ರತಿಗಳಿಗಿಂತ ವೀರಶೈವ ಹಸ್ತಪ್ರತಿಗಳಲ್ಲಿ ಸ್ಖಾಲಿತ್ಯದ ಪ್ರಮಾಣ ಹೆಚ್ಚು. ಏಕೆಂದರೆ ವೀರಶೈವ ಧರ್ಮದಲ್ಲಿ ಗುರುಪರಂಪರೆ ಹೆಚ್ಚು ಮಹತ್ವಕೊಟ್ಟಿದ್ದರಿಂದ ಇಲ್ಲಿಯ ಒಂದು ಮೂಲ ಹಸ್ತಪ್ರತಿಗೆ ಅನೇಕ ಶಿಷ್ಯಂದಿರು ಪ್ರತಿ ಅಥವಾ ನಕಲು ಮಾಡುವುದರ ಮೂಲಕ ತಮ್ಮ ನಿಷ್ಠೆಯನ್ನು ತೋರುತ್ತಿದ್ದರು. ಹೀಗಾಗಿ ಇಲ್ಲಿ ಕವಿಯ ಏಕೈಕ ಹಸ್ತಪ್ರತಿಗಿಂತ ಅದರ ವಂಶಸ್ಥಪ್ರತಿಗಳೇ ಬಹು ಪ್ರಮಾಣದಲ್ಲಿ ದೊರೆಯುತ್ತವೆ. ಆದರೆ ಈ ಬಗೆಯ ಸ್ಖಾಲಿತ್ಯದ ತಾಂತ್ರಿಕ ಸ್ವರೂಪ ಜೈನ ಮತ್ತು ವೈದಿಕ ಪರಂಪರೆಯ ಹಸ್ತಪ್ರತಿಗಳಲ್ಲಿ ಜೈನರಿಗೂ ಕೂಡಾ ಶಿಷ್ಯ ಬಳಗವಿದ್ದರೂ ಅವರು ನಂಬಿದ್ದು ಜಿನನನ್ನು ಮಾತ್ರ. ಆದರೆ ಅತಿಮಬ್ಬೆ, ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳಲ್ಲಿ ಬರೆಸಿ ಹಂಚಿದಾಗ ಎಷ್ಟು ಜನ ಪ್ರತಿಕಾರರು ಯಾವ ಮನೋಧರ್ಮ ದಿಂದ ಪ್ರತಿ ಮಾಡಿದರೆಂಬುದು ಚರ್ಚಾಸ್ಪದ ಸಂಗತಿ. ಜಿನನ ನಂಬಿಕೆಯೇ ಕಾರಣವಾಗಿ ಜೈನರ ಹಸ್ತಪ್ರತಿಗಳಲ್ಲಿ ವಂಶಸ್ಥ ಪ್ರತಿಗಳಿಲ್ಲದೆ ಬಹುತೇಕ ಮೂಲ ಅಥವಾ ಏಕೈಕ ಹಸ್ತಪ್ರತಿಗಳೇ ಇರುವುದರಿಂದ ಅಲ್ಲಿ ಸ್ಖಾಲಿತ್ಯದ ಪ್ರಮಾಣ ಇಲ್ಲವೆನ್ನುವಷ್ಟು ಕಡಿಮೆ. ಈ ದೃಷ್ಟಿಯಿಂದ ಮೂಡಬಿದ್ರೆಯ ಜೈನ ಹಸ್ತಪ್ರತಿ ಭಂಡಾರದಲ್ಲಿ ರಕ್ಷಿತವಾಗಿರುವ ಧವಳ ಜಯಧವಳ, ಮಹಾಧವಳ ಹಸ್ತಪ್ರತಿಗಳು ಏಕೈಕ ಹಸ್ತಪ್ರತಿಗಳಾಗಿ ಗಮನ ಸೆಳೆಯುತ್ತವೆ.

ವೀರಶೈವ ಹಸ್ತಪ್ರತಿಗಳಿಗೆ ವಚನ ಕ್ರಾಂತಿಯ ಈ ನೆಲವೇ ಭೂಮಿಕೆಯಾಗಿದ್ದು ಮತ್ತು ದಕ್ಷಿಣ ಭಾರತದ ೬೩ ಶೈವ ಪುರಾತನರನ್ನು ಕುರಿತು ಹೇಳುವ ಸಂದರ್ಭದಲ್ಲಿ ಅವುಗಳಿಗೆ ಹಿಂದೆ ಹೇಳಿದಂತೆ ದ್ರಾವಿಡ ಸಂಸ್ಕೃತಿಯೇ ಆಕರವಾಗಿದ್ದಿರುವುದು ಮುಖ್ಯ ಸಂಗತಿ. ಹೆಸರಿಲ್ಲದ ಕವಿಯೊಬ್ಬನ ಗದ್ಯ ರೂಪದ ಅರವತ್ತುಮೂರು ಪುರಾತನರ ಕುರಿತು ಹಸ್ತಪ್ರತಿಗಳ ಅವರ ಬಗ್ಗೆ ವಿವರಿಸುತ್ತವೆ.

ವೀರಶೈವ ಹಸ್ತಪ್ರತಿಗಳು ಸಾಮಾನ್ಯವಾಗಿ ಎಲ್ಲ ಬಗೆಯ ಹಸ್ತಪ್ರತಿಗಳಂತೆ ಆದಿ ಅಂತ್ಯವೆಂಬ ವಿನ್ಯಾಸದಲ್ಲಿ ರಚಿತಗೊಂಡಿವೆ. ಆದಿ ಭಾಗದಲ್ಲಿ 'ಶ್ರೀ ಗುರುಬಸವಲಿಂಗಾಯನಮಃ' ಎನ್ನುವ ಸ್ತೋತ್ರದೊಂದಿಗೆ ಆರಂಭವಾಗಿ ತಮಗಿಷ್ಟವಾದ ದೇವರ ನಾಮಾವಳಿ ಕವಿ ವಂಶವನ್ನು ನೆನೆಯುತ್ತಾರೆ. ಮಧ್ಯದಲ್ಲಿ ವಿಷಯ ಸ್ವರೂಪ ನಿರೂಪಿತವಾಗಿರುತ್ತದೆ. ಅಂತ್ಯ ಭಾಗದಲ್ಲಿ ಹಸ್ತಪ್ರತಿ ಪ್ರತಿ ಮಾಡಿದ ಕಾಲ ಮುಕ್ತಾಯ ಇತ್ಯಾದಿಗಳ ವಿವರವಿರುತ್ತದೆ. ಮೂಲ ಹಸ್ತಪ್ರತಿಯೊಂದನ್ನು ಅನೇಕ ಪ್ರತಿಕಾರರು ನಕಲು ಮಾಡುವುದರಿಂದ ಸ್ಖಾಲಿತ್ಯದ ಪ್ರಮಾಣ ಅಧಿಕವಾಗಿದೆ. ಆಯಾ ಪ್ರತಿಕಾರರು ತಾವು ನಂಬಿದ ನೆಚ್ಚಿದ ದಾನಧರ್ಮಗಳನ್ನು ಕೂಡಾ ನೆನೆಯುತ್ತಾರೆ. ಇದು ವೀರಶೈವ ಹಸ್ತಪ್ರತಿಗಳ ಒಟ್ಟು ಸ್ವರೂಪ.

ವೀರಶೈವ ಧರ್ಮದ ಒಟ್ಟು ಸಂಸ್ಕೃತಿಯನ್ನು ನಿರೂಪಿಸುವ ಹಸ್ತಪ್ರತಿಗಳು ಧರ್ಮ ತತ್ವ ನೀತಿ ಪಂಚಾಚಾರ, ಶಿವಲೀಲೆ, ಶಿವಭಕ್ತರ, ಶಿವಶರಣ ಚರಿತೆ, ಷಟಸ್ಥಲ, ಅಷ್ಟಾವರಣ ೬೩ ಪುರಾತನರ ಚರಿತೆ ಮುಂತಾದ ವಿಷಯ ಸಾಮಗ್ರಿ ಮತ್ತು ರೂಪ ವೈವಿಧ್ಯ ಹಿನ್ನೆಲೆಯಲ್ಲಿ ರೂಪಿತಗೊಂಡಿದೆ. ನಿರೂಪಣೆಯ ಕ್ರಮ ವಿಭಿನ್ನ ಹಾಗೂ ವೈವಿಧ್ಯವಾದರೂ ಅವು ತಲುಪುವ ಕೊನೆಯ ಹಂತ ಶೂನ್ಯ ಅಥವಾ ಬಯಲಿನತ್ತ. ಜೈನರಲ್ಲಿ ಕೇವಲ ಜ್ಞಾನದಂತೆ ವೀರಶೈವರಲ್ಲಿ ಬಯಲು ಪರಿಭಾಷೆ ಬಳಕೆಯಲ್ಲಿದೆ. ಈ ಕಾರಣದಿಂದ ವೀರಶೈವ ಧಾರ್ಮಿಕ ಹಸ್ತಪ್ರತಿಗಳ ಜೈನ ಪರಂಪರೆಗಿಂತ ಬೇರೆಯಾದ ಧಾರ್ಮಿಕ ಮೌಲ್ಯದತ್ತ ಸಾಗುತ್ತವೆ. ಇಲ್ಲಿ ಜೈನರಂತೆ ಕಠಿಣ ಆಚರಣೆಗಳಿಲ್ಲ. ಪಾಪಕರ್ಮಗಳ ಕರ್ಮಾಚರಣೆಯಲ್ಲಿ ಉಪವಾಸಾದಿ ಅಹಿಂಸೆ ಭವಾವಳಿಗಳ ಬಗ್ಗೆ ಬಂಧನವಿಲ್ಲ. ಸಾಮಾನ್ಯವಾಗಿರುವ ಸಾಮಾಜಿಕ ಬದುಕಿನ ಕ್ರಮದಿಂದಾಗಿ ಮೋಕ್ಷ ಪಡೆಯುವ ಹಂಬಲವನ್ನು ವೀರಶೈವ ಹಸ್ತಪ್ರತಿಗಳು ಪ್ರಕಟಪಡಿಸುತ್ತವೆ.

ಮೇಲಿನ ವಿಷಯ ವೈವಿಧ್ಯಕ್ಕೆ ವೀರಶೈವ ಹಸ್ತಪ್ರತಿಗಳು ಜೈನರ ಮಾರ್ಗ ಪದ್ಧತಿಗಿಂತ ಭಿನವಾದ ದೇಸಿ ಮಾದರಿಗಳನ್ನು ಬಳಸಿಕೊಂಡವು. ಬಹುಶಃ ಅತ್ಯಂತ ಸರಳವಾದ ನೀತಿ ಬೋಧೆ ಮತ್ತು ಜೀವನಾಚರಣೆ ತತ್ವವನ್ನು ತಿಳಿಸಲು ತೀರಾ ಸರಳವಾದ ರೂಪಗಳನ್ನೆ ಬಳಸಿಕೊಂಡು ಹಸ್ತಪ್ರತಿ ನಿರ್ಮಾಣವಾಗಿವೆ. ಆಡುಭಾಷೆಯ ವಚನ, ಲಲಿತವಾಗಿ ಸಾಗುವ ರಗಳೆ, ರಾಗಬದ್ಧವಾದ ಸಾಂಗತ್ಯದಂತಹ ಹಾಡುಗಬ್ಬ, ಷಟ್ಪದಿ, ಶತಕ ಮುಂತಾದ ದೇಸಿ

ಛಂದೋರೂಪಗಳು ವಿಷಯ ಸಂಪತ್ತನ್ನು ನಿರೂಪಿಸುವ ಭಾಷಾ ಮಾಧ್ಯಮಗಳಾದವು. ದೇಸಿ ಬದುಕಿನ ಅರ್ಥ ಮೌಲ್ಯವನ್ನು ಒಂದು ಸಮುದಾಯ ಹಾಗೂ ಜನಾಂಗದ ಕಾಳಜಿಯನ್ನು ಓದುಗ ವರ್ಗಕ್ಕೆ ತಲುಪಿಸುವ ಕಾರ್ಯದಲ್ಲಿ ಈ ರೂಪಗಳು ಕಿಂಕರತ್ವದ ಸಾರಥ್ಯವನ್ನು ವಹಿಸಿದವು.

ಧರ್ಮಾತೀತ ಮತ್ತು ಸಮುದಾಯನಿಷ್ಠವಾಗಿ ಹುಟ್ಟಿದಂಥ ಆಕೃತಿಗಳನ್ನು ಸಂಗ್ರಹ ಅಥವಾ ಸಂಪಾದನೆಗೆ ಒಳಪಡಿಸುವಾಗ ಅವನ್ನು ಯಾವುದಾದರೊಂದು ಧರ್ಮದ ಅಥವಾ ವೈಯಕ್ತಿ ತಾತ್ವಿಕ ಎನ್ನಬಹುದಾದ ಚೌಕಟ್ಟಿನೊಳಗೆ ಇಟ್ಟು ಬಳಸಿಕೊಳ್ಳುವ ಕ್ರಮವಿದು. ಇದಕ್ಕೆ ಬಹುಮುಖ್ಯ ಕಾರಣ ಶ್ರೇಷ್ಠತೆಯ ವ್ಯಸನ ಮತ್ತು ಕೇಂದ್ರಿಕೃತ ಪ್ರವೃತ್ತಿ. ಒಂದು ಅಚ್ಚಾದ ಪಠ್ಯವನ್ನೇ ಮುಂದಿಟ್ಟುಕೊಂಡು ಅದರೊಂದಿಗೆ ಸಂವಾದ ಬೆಳೆಸುವ ಬಹುಮುಖ್ಯ ಕ್ರಮ ಆರವತ್ತರ ದಶಕದಲ್ಲಿ ಚಾಲ್ತಿಯಿತ್ತು. ಇದನ್ನು ಬೇಕಾದರೆ ಕೃತಿನಿಷ್ಠ ಓದಿನ ಅಥವಾ ಅದರ ಒಂದು ಭಾಗವನ್ನು ಕೇವಲ ಸಾಹಿತ್ಯಿಕ ರಚನೆಯೆಂದು ಪರಿಭಾವಿಸಿ ಅವನ್ನು ಶ್ರದ್ದೆಯಿಂದ ಓದಲು ಪ್ರೇರೇಪಿಸುವುದು. ಕೃತಿ ಕೃತಿಕಾರನ ಸ್ವತ್ತು ಎಂಬ ನಂಬುಗೆ ಬ್ರಿಟಿಷರೊಡನೆ ನಮ್ಮನ್ನು ಆಳತೊಡಗಿತು. ಸಂವಹನ ಪ್ರಜ್ಞೆಯಿಂದ ಸಡಿಲಿಸಿ ಅಹಂ ಪ್ರಜ್ಞೆಗೆ ಸಾಹಿತ್ಯ ಬಂಧಿಯಾದ ಕ್ಷಣವಿದು. ಯಾರೋ ಬರೆದ ಸಾಹಿತ್ಯವನ್ನು ಸಂಪಾದಿಸಿ ಅವುಗಳ ಮೇಲೆ ತಮ್ಮ ಹಕ್ಕಿನ ಕಾಪಿರೈಟ್ ಮುದ್ರಿಸಿ ಕೃತಿಯ ಹಕ್ಕನ್ನು ತಾವು ಉಳಿಸಿಕೊಂಡರು. ಆ ಮೂಲಕ ತಾವು ಸಂಪಾದಿಸಿದ ಪ್ರಾಚೀನರ ಕೃತಿ ಹಾಗೂ ತಾವು ರಚಿಸಿದ ಕೃತಿಗಳ ಮೇಲೆ ತಮ್ಮ ಹಕ್ಕನ್ನು ಉಳಿಸಿಕೊಂಡರು. ಈ ಘಟ ಮೂಲಪಾಠ ಕವಿಪಾಠ, ಪಾಠಶುದ್ಧತೆಯ ಕಡೆಗೆ ಹೆಚ್ಚಿನ ಒಲವು ಹರಿಸಿತು. ಈ ಪರಿಕಲ್ಪನೆಗಳು ಹಸ್ತಪ್ರತಿಗಳಲ್ಲಿ ಒಳ್ಳೆಯ ಕೆಟ್ಟ ಎನ್ನುವ ಅಸಮಾನತೆಗಳನ್ನು ಹುಟ್ಟು ಹಾಕಿದವು.

೧೮-೧೯ನೆಯ ಶತಮಾನಗಳಲ್ಲಿ ಚಲಾವಣೆಗೆ ಬಂದ ಸಾರ್ವತ್ರಿಕ ಜ್ಞಾನ ಮೀಮಾಂಸೆ ರೂಪಿಸಿದ ಏಕೀಕೃತ ಸ್ಥಿತಿ ಇದು ನಿರ್ದಿಷ್ಟ ನಿಶ್ಚಿತ ಸಾಂಸ್ಥಿಕ ನೆಲೆಯನ್ನು ಹೊಂದಿದೆ. ಇದೇ ನಂತರದ ಎಲ್ಲಾ ಬೌದ್ಧಿಕ ಕಸರತ್ತಿಗೆ ದಾರಿ ಮಾಡಿಕೊಟ್ಟಿದ್ದು. ಹೀಗಾಗಿ ಆಧುನಿಕ ಪೂರ್ವ ಎನ್ನುವುದು ಸಮಾಜ ಸಂಸ್ಕೃತಿಯ ಪರಂಪರೆ ಎಲ್ಲವು ಪುರಾತನವಾಗಿ ಅನಾಗರಿಕವಾಗಿ ಅಥವಾ ಸಮೃದ್ಧ ಸುವರ್ಣಯುಗವಾಗಿ ಆಧುನಿಕತೆಗೆ ವಿರುದ್ಧವಾಗಿ ನಿಲ್ಲುತ್ತದೆ. ಇದರ ರಾಜಕಾರಣವು ಗ್ರಹಿಸಬೇಕಾದರೆ ಈ ಬಗೆಯ ಸರಳೀಕೃತ ಏಕರೂಪವನ್ನು ಒಡೆಯಬೇಕಾಗುತ್ತದೆ.

'ಸಂಪಾದನೆ' ಎನ್ನುವುದನ್ನು ಮುದ್ರಣ ಸಂಸ್ಕೃತಿಯಲ್ಲಿರದ ತಾಳೆಗರಿ ಓಲೆಗರಿಗಳಲ್ಲಿ ಕೈಬರಹದಲ್ಲಿರುವ ಪಠ್ಯವನ್ನು ಮುದ್ರಣ ರೂಪಕ್ಕೆ ಬದಲಿಸುವುದು ಎಂದು ಸರಳವಾಗಿ

ನಿರ್ಧರಿಸಲಾಗುವುದಿಲ್ಲ. ಈ ಪಠ್ಯಗಳ ಪ್ರಿಂಟ್ ಕ್ಯಾಪಿಟಲಿಸಂನ ಭಾಗವಾಗುವುದು. ಹೀಗಾಗುವಾಗ ಪಠ್ಯದ ಸ್ವರೂಪದಲ್ಲಾಗುವ ಮಾರ್ಪಾಡುಗಳ ಮೂಲ ಪಠ್ಯದ ನಿರ್ಧಾರ ಈ ಎಲ್ಲ ಪ್ರಕ್ರಿಯೆಯ ರಾಜಕಾರಣವನ್ನು ಸಂಪಾದನೆ ಎನ್ನಬೇಕಾಗುತ್ತದೆ.

ಸಂಪಾದನೆ ಪರಿಭಾಷೆಯ ದುಡಿಮೆ ಉತ್ಪಾದನೆ, ಉತ್ಪಾದಕ ಪ್ರವೃತ್ತಿಯಿಂದ ರೂಢವಾದದ್ದು. ಅಂದರೆ ಸಂಪಾದನೆ ಎನ್ನುವುದು ಸಹ ಇಲ್ಲಿ ಸಮಸ್ಯೆಯಾಗಿರುತ್ತದೆ. ಸ್ವತ್ತು(Copy Right) ಆಗಿ ಪರಿವರ್ತಿಸಲ್ಪಟ್ಟ ಯೋಜನಾಬದ್ಧ ಉಪಾಯವಾಗಿ ಕಾಣಿಸುತ್ತದೆ. ಅಲ್ಲದೆ ಈ ಸ್ವತ್ತು ಹೀಗೆಯೇ ನೋಡಬೇಕು, ಗ್ರಹಿಸಬೇಕೆಂಬ ಒತ್ತಡವನ್ನು ಹೇರುತ್ತದೆ. ಇದನ್ನು ಗ್ರಹಿಸಲು ಕನ್ನಡ ಸಾಹಿತ್ಯದ ಅಭ್ಯಾಸವನ್ನು ಆಧುನಿಕದಲ್ಲಿಟ್ಟುಕೊಳ್ಳತೊಡಗಿದ ಬಗೆಯನ್ನು ವಿಶ್ಲೇಷಣೆಗೆ ಒಡ್ಡಬೇಕಾಗುತ್ತದೆ. ಕನ್ನಡ ಪೂರ್ಣರೂಪದ ಮುದ್ರಿತ ಪಠ್ಯಗಳು ಕಾಣಿಸಿಕೊಳ್ಳುವುದು ಶತಮಾನದ ಉತ್ತರಾರ್ಧದಲ್ಲಿ. ಅದಕ್ಕೂ ಮೊದಲು ಇಂಗ್ಲೀಷ್ ಇರುವ ಕನ್ನಡ ಪುಸ್ತಕಗಳು.

'ಶಬ್ದಕೋಶಗಳು ಶಬ್ದಮಣಿದರ್ಪಣವನ್ನು ಆಧರಿಸಿದ Karnataka Gramar ಕಾಣಿಸಿಕೊಂಡವು. ೧೮೫೦ರ ಹೊತ್ತಿಗೆ ಬಾಸೆಲ್ ಮಿಷನ್ Bibliotheca Karnataka ಗ್ರಂಥಮಾಲೆಯನ್ನು ಆರಂಭಿಸಿತು. ೧೮೬೮ರಲ್ಲಿ ಆಧುನಿಕ ಪೂರ್ವ ಪಠ್ಯಗಳ ಆಯ್ದ ಭಾಗಗಳ ಪರಕ್ಕುವ್ಯ ಮಾಲಿಕೆ ಪ್ರಕಟವಾಗಿತ್ತು'.[೧೬] '೧೮೭೪ರಲ್ಲಿ ಕಿಟೆಲ್ ಛಂದೋಬುಧಿಯ ಪೀಠಿಕೆಯಲ್ಲಿ An Alphabetical dest of early authors, some Shiva Pendits ಪಟ್ಟಿಗಳನ್ನು ಕಟ್ಟಿದ'[೧೭]

ಮೌಖಿಕ ಪರಂಪರೆ ಸಹಜವಾಗಿ ತಿರಸ್ಕಾರಕ್ಕೆ ಒಳಗಾಗಿರುವುದನ್ನು ಗ್ರಹಿಸಬೇಕಾಗುತ್ತದೆ. ಅಲ್ಲದೆ ಇದೇ ಸಂದರ್ಭದಲ್ಲಿ ಮುದ್ರಣಗೊಂಡ ಪಠ್ಯಗಳಿಗೆ ತ್ರೀವ್ರವಾದ ಬೇಡಿಕೆ ಶಿಕ್ಷಣ ಸಂಸ್ಥೆಗಳ ಮೂಲಕ ಸೃಷ್ಟಿಯಾಗುತ್ತದೆ. ಇದರಿಂದಾಗಿ ಈ ಪಠ್ಯಗಳ ವಿಶ್ಲೇಷಣಾತ್ಮಕ ಪೀಠಿಕೆ ಪ್ರಸ್ತಾವನೆಗಳು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಈ ಕಾರಣವಾಗಿ ಬಹುರೂಪಿ ಬಹುಸಂಖ್ಯಾ ಜೀವಂತ ಪರಂಪರೆಗಳನ್ನು ಏಕೀಕೃತಗೊಳಿಸಿ ಪ್ರಮಾಣೀಕರಿಸಿ ಅಧಿಕೃತ ಪಠ್ಯಗಳನ್ನಾಗಿ ಪ್ರಕಟಿಸುವ ಕೆಲಸ ಮತ್ತಷ್ಟು ವೃದ್ಧಿಸುತ್ತ ಬಂದಿತು. ಇದನ್ನು ಬೆನೆಡಿಕ್ಟ್ ಅಂಡರ್ಸನ್ ಪ್ರಿಂಟ್ ಕ್ಯಾಪಿಟಲಿಸಂ ಮತ್ತು ರಾಷ್ಟ್ರೀಯತೆಗಳ ನಡುವಿನ ಸಂಬಂಧ ಎಂದು ಕರೆಯುತ್ತಾರೆ. ಅಂದರೆ ಮುದ್ರಣಗೊಂಡ ಪಠ್ಯಗಳನ್ನು ಭಾಸನೀಯವಾಗಿ ಓದುವುದು ಮತ್ತು ಓದಿದ್ದನ್ನು ಸಾರ್ವಜನಿಕವಾಗಿ ಆಚರಣೆಗೆ ತರುವುದು ಈ ಪ್ರಿಂಟ್ ಕ್ಯಾಪಿಟಲಿಸಂನ ಯೋಜನೆಯೇ ಆಗಿದೆ. ಈ ಪ್ರಕ್ರಿಯೆಗೆ ಪೂರಕವಾಗಿಯೇ ಪರಂಪರೆಯನ್ನು ನಿರ್ಮಿಸಿದ್ದು. ಇದನ್ನು ಅಂಕಿ-ಅಂಶಗಳ ಮೂಲಕ ಗುರುತಿಸಿವುದಾದರೆ ೧೮೫೦ರಿಂದ ೧೯೨೦ ಹೊತ್ತಿಗೆ ಕನ್ನಡ ಸಾಂಸ್ಕೃತಿಕ ಪರಂಫರೆಯಲ್ಲಿ ಗುರುತಿಸಿದ ಬರಹಗಾರರ ಸಂಖ್ಯೆ ೩೪೯. ಇದರ

ಸ್ವತ್ತು ಆಗಿ ಮುದ್ರಣಗೊಂಡ ಪದ್ಯಗಳ ಸಂಖ್ಯೆ ೨೩೭೭. ಇದನ್ನು ಸಾವಿರ ಪ್ರರಗಳಂತೆ ಗುಣಿಸಿದಾಗ ೨೩೭೭೦೦೦ ಆಗುತ್ತದೆ. ಇದು ಕೇವಲ ೭೦ ವರ್ಷಗಳ ಅವಧಿಯ ಉತ್ಪಾದನೆ. ಇದರ ವಿತರಣಾ ಮಾರುಕಟ್ಟೆಯನ್ನು ಗ್ರಹಿಸಿದರೆ ಪ್ರಿಂಟ್ ಕ್ಯಾಪಿಟಲಿಸಂನ ಸ್ವರೂಪ ಅರಿವಿಗೆ ಬರುತ್ತದೆ. ಹೀಗೆ ಜ್ಞಾನ ಮೀಮಾಂಸೆಯ ನೆಲೆ ಆಧುನಿಕ ಸಾಂಸ್ಥಿಕ ಸ್ವರೂಪವನ್ನು ಪಡೆದು ಕೊಳ್ಳುತ್ತದೆ. ಆ ಮೂಲಕ ಕನ್ನಡ ಐಡೆಂಟಿಟಿ ಎನ್ನುವುದು ಪರಿಕಲ್ಪಿತವಾಗುತ್ತಾ ಹೋಗುತ್ತದೆ. ಇಲ್ಲಿ ಕನ್ನಡತನ ಎನ್ನುವುದು ಬಹುಮುಖಿ ಅಸ್ತಿತ್ವಗಳು ಪಚನಗೊಂಡ ಏಕೀಕೃತ ರೂಪವಾಗಿ ಚಾಲನೆಗೆ ಬರುತ್ತದೆ.

'ಕೆ.ವಿ. ನಾರಾಯಣ ಒಂದು ಮಾತಿನಿಂದ ಅಧ್ಯಯನಬಾಹೀರ ಎನಿಸುವ ಮತ್ತು ಅಧ್ಯಯನಶೀಲವೆನಿಸುವ ತರ್ಕಗಳ ನೆಲೆಗಳನ್ನು ಗಮನಿಸಬಹದೆನಿಸುತ್ತದೆ. ಓಲೆ ಕಾಗದದಿಂದ ಮುದ್ರಣಗೊಂಡ ಮೊದಲ ಹಂತದವರೆಗೂ ವಚನಗಳನ್ನು ವಿದ್ವಾಂಸರು ಬೆಳಕಿಗೆ ತರುತ್ತಲೇ ಇದ್ದಾರೆ. ಅಷ್ಟಿಷ್ಟು ವಚನಗಳು ಸಂಶೋಧನ ಪತ್ರಿಕೆಗಳು ಕಿರುಪುಟಗಳಲ್ಲಿ ಪ್ರಕಟವಾಗುತ್ತಲೇ ಇವೆ. ಪ್ರಕಟಿತ ವಚನಗಳ ಕರ್ತೃತ್ವ ಪಾಠ ಸಾಧುತ್ವಗಳ ಬಗ್ಗೆ ಚರ್ಚೆ ನಡೆದಿದೆ. ಕೆಲವು ವಚನ ಸಂಕಲನಗಳನ್ನು ಕೂಟರಚನೆಗಳೆಂದು ವಾದಿಸಿ ಅವುಗಳನ್ನು ಮತ್ತೆ ಕತ್ತಲಿಗೆ ತಳ್ಳಲಾಗುತ್ತದೆ'.[೧೮] ನಿಜ ವಚನಗಳು ನಿಜ ವಚನಕಾರರನ್ನು ನಿರ್ಧರಿಸಲು ಸಂಪಾದಕರು ಕೆಲವು ಮಾನದಂಡಗಳು ಹೊಂದಿದ್ದಾರೆ. ಇವು ಪಾರಂಪರಿಕ ವಚನ ಸಂಕಲನಗಳಿಂದ ರೂಢಿಸಿಗೊಂಡು ಅಂತಹ ವಚನಾಧ್ಯಯನಕಾರರಿಂದ ನೆಲೆಗೊಂಡ ಮಾನದಂಡಗಳು ಇವೆಲ್ಲವೂ ವಾದಾತೀತವಲ್ಲ. ಅಲ್ಲದೆ ಈ ಸಂಗ್ರಹಗಳಾಗಿಯೇ ಹೊಸ ಚಿಂತನೆಗಳಿಂದ ರೂಪಗೊಂಡಂಥವಲ್ಲ. ನಿರ್ಧಾರದ ಹಿಂದಿನ ಶರತ್ತುಗಳು ಕನಿಷ್ಠ ಹಾಗೂ ಗರಿಷ್ಟ ಮಿತಿಗಳೆರಡನ್ನು ಒಳಗೊಳ್ಳಬೇಕಷ್ಟೆ. ಹಾಗೆ ಇವು ವಚನಗಳೆಂದು ಹೇಳಲು ಇಷ್ಟಾದರೂ ಲಕ್ಷಣಗಳಿರಬೇಕು ಹಾಗೂ ಇವೆಲ್ಲ ಲಕ್ಷಣಗಳಿರಬೇಕೆಂದು ನಿರ್ದಿಷ್ಟವಾಗಿ ರೂಪಿಸಲಾಗಿದೆಂದು ಎಂದರೆ ಇಲ್ಲವೆಂದು ಹೇಳಬೇಕು. ಬೇಕಾದ ವಚನಗಳು ಬಳಸಿರುವಾಗ ಗರಿಷ್ಠ ಲಕ್ಷಣಗಳ ವ್ಯಾಪ್ತಿಯನ್ನು ಕುಗ್ಗಿಸುತ್ತ ಬೇಡವಾದ ವಚನಗಳು ಹೊರಗಿಡುವಾಗ ಗರಿಷ್ಠ ಲಕ್ಷಣಗಳ ವ್ಯಾಪ್ತಿಯನ್ನು ಹಿಗ್ಗಿಸುತ್ತ ಹೋಗುವ ಹಿಂದಿನ ವಿಧಾನವೇ ಮುಂದುವರಿದೆ.

'ನಿಜ ಕರ್ತೃ, ನಿಜ ಕೃತಿ ಎಂಬ ಸಮೀಕರಣವೇ ನಮ್ಮ ಸಂಸ್ಕೃತಿಯ ಸ್ವರೂಪವನ್ನು ಅರಿಯುವಲ್ಲಿ ಹಾದಿಮುಳ್ಳಾಗಿದೆ. ಭಾಷಿಕ ಸಂಕಥನಗಳು ಸಂಸ್ಕೃತಿಯಲ್ಲಿ ಹೇಗೆ ಮತ್ತು ಏಕೆ ರೂಪಗೊಳ್ಳುತ್ತವೆಂಬ ಪ್ರಶ್ನೆಯನ್ನು ನಾವು ಎದುರಿಸಲು ಸಿದ್ಧರಿಲ್ಲ. ಬದಲಾಗಿ ಸಂಕಥನಗಳನ್ನು ಅಧಿಕೃತಗೊಳಿಸುವ ವಿಧಾನಗಳನ್ನು ಹುಡುಕುತ್ತಿದ್ದೇವೆ. ಇದು ಅಧಿಕೃತ, ಇದು ಅನಧಿಕೃತ ಎನ್ನುವ ಕೆಲಸದಲ್ಲಿಯೇ ಮಗ್ನರಾಗಿ ನಮ್ಮನ್ನು ತಳ್ಳಿರುವ ಚರಿತ್ರೆಯ ಕುಹಕವನ್ನು ಅರಿಯದೇ

ಹೋಗುತ್ತಿದ್ದೇವೆ'[17] ಎನ್ನುವ ಮಾತುಗಳು ಸಾಂಸ್ಕೃತಿಕ ಸಂಕಥನಗಳಾದ ಹಸ್ತಪ್ರತಿಗಳನ್ನು ನಿರ್ದಿಷ್ಟ ಧಾರ್ಮಿಕ ಅಥವಾ ತಾತ್ವಿಕಾವರಣಗಳಲ್ಲಿ ಕಾಲ ದೇಶಗಳಿಗೆ ಬದ್ಧಗೊಳಿಸುವ ಏಕೀಕೃತ ಮಾದರಿಗಳನ್ನಾಗಿ ಪರಿವರ್ತಿಸುವ ಅನುಚಿತತೆಗಳನ್ನು ಕುರಿತು ಸೂಕ್ಷ್ಮವಾಗಿ ಪ್ರತಿಕ್ರಿಯಿಸುತ್ತಾರೆ.

ಪ್ರಾಚೀನ ಕೃತಿಗಳ ಅತ್ಯುತ್ತಮ ಭಾಗಗಳನ್ನೋ ಧಾರ್ಮಿಕ ನಿರಪೇಕ್ಷೆಯೆನಿಸುವ ಕೆಲವು ಸಾಲುಗಳನ್ನೋ ಆಯ್ದುಕೊಂಡು ಆ ಮೂಲಕ ಶ್ರೇಷ್ಠವೆಂದು ತೀರ್ಮಾನಿಸುವ ಪರಂಪರೆಯಿದು. ಪ್ರಾಚೀನ ಕೃತಿಗಳನ್ನು ಆಧುನಿಕ ಕಾಲದಲ್ಲಿ ಓದುವ ಹವ್ಯಾಸವು ವ್ಯಾಪಕವಾಗಿ ಬೆಳೆದ್ದು ಬ್ರಿಟಿಷರ ಸಂದರ್ಭದಲ್ಲಿ. ಮುದ್ರಣಗೊಂಡು ಪಠ್ಯಗಳಿಂದ ತರಗತಿ ಬೋಧನೆಗಾಗಿ ರೂಪಗೊಂಡ ಇಂಥ ಪಠ್ಯಗಳ ವಿಶ್ಲೇಷಣೆ ಮಾದರಿಗಳ ಹಿಂದೆ ಭಾರತೀಯ ಗತವೈಭವದ ರಾಷ್ಟ್ರೀಯ ಪ್ರಜ್ಞೆ ಬಹುಮುಖ್ಯವಾಗಿತ್ತು. ಇಂಥ ಪಠ್ಯಗಳ ವಿಶ್ಲೇಷಣಾತ್ಮಕ ಪೀಠಿಕೆ, ಪ್ರಸ್ತಾವನೆ ಮತ್ತು ಮುನ್ನುಡಿಗಳಲ್ಲಿ ಇದಕ್ಕೆ ಸ್ಪಷ್ಟ ಉತ್ತರ ಸಿಗುತ್ತದೆ. ನಮ್ಮಲ್ಲಿಯೂ ಅಮೂಲ್ಯ ಸಾಹಿತ್ಯವಿದೆ ಎಂದು ಪರರಿಗೆ ಎತ್ತಿ ತೋರಿಸುವ ಜರೂರು ಇಂಥ ಸಂಕಲಿತ ಪಠ್ಯಗಳು ಹಿಂದೆ ಕಾಣುತ್ತದೆ. ಇಂಥ ಸಂಗ್ರಹಗಳ ಕೇವಲ ರಸಭರಿತವಾದ ಭಾಗಗಳನ್ನು ಮಾತ್ರ ಆಯ್ದು ತೀವ್ರ ಸಾಮಾಜಿಕ ತುರ್ತುಗಳಿರುವ ಭಾಗಗಳನ್ನು ಕೈಬಿಡುತ್ತಿದ್ದವು. ನವೋದಯ ಲೇಖಕರು ಪ್ರಾಚೀನ ಕೃತಿಗಳನ್ನು ಕುರಿತು ಬರೆದ ವಿಮರ್ಶಾ ಲೇಖನಗಳೂ ಇದೆ ಮನೋಧರ್ಮದವು. ಇವು ತನಗೆ ತನ್ನ ಆಕಾಂಕ್ಷೆಗೆ ಪೂರಕವಾಗುವ ಭಾಗಗಳನ್ನು ಆಯ್ದುಕೊಂಡು ಉಳಿದದ್ದನ್ನು ಕೈಬಿಡುತ್ತಿದ್ದವು. ಉದಾಹರಣೆಗೆ ರಾಘವಾಂಕನ ಹರಿಶ್ಚಂದ್ರಕಾವ್ಯದ ಮುಂದೆ ಸಿದ್ಧರಾಮ ಚಾರಿತ್ರ್ಯ ಅಸಾಹಿತ್ಯಕ ಪಠ್ಯವೆನಿಸುತ್ತದೆ. ಬಸವಣ್ಣನ ವಚನದ ಮುಂದೆ ಬಾಚಿಕಾಯದ ಬಸವಯ್ಯ ವಚನಗಳು ಅಸಾಹಿತ್ಯಿಕ ಅನಿಸುತ್ತವೆ.

ಶ್ರೇಷ್ಠ ಧಾರ್ಮಿಕ ಕಾವ್ಯ, ರಸಾತ್ಮಕಕಾವ್ಯ ಉತ್ತಮ ಕಾವ್ಯ ಎನ್ನುವ ಮಾನದಂಡಗಳ ಕಾವ್ಯದ ನಿರ್ದಿಷ್ಟಗುಣವೊಂದರ ಪ್ರತಿಪಾದನೆ ಮಾಡುತ್ತವೆ. ಇಂಥ ಕಾವ್ಯಗಳನ್ನು ಧಾನ ಧರ್ಮ ಮತ್ತು ಪ್ರಸಾರಕ್ಕಾಗಿ ಆಯ್ದುಕೊಳ್ಳುವಾಗ ಈ ಆಯ್ಕೆಯ ಹಿಂದೆ ನಿರ್ದಿಷ್ಟ ಧೋರಣೆಗಳು ಸಾಂಸ್ಕೃತಿಕ ರಾಜಕಾರಣದ ಪ್ರೇರಣೆಗಳಿರುತ್ತವೆಂಬುದು ಸ್ಪಷ್ಟ.

'ಜಾತ್ಯಾತೀತ ಮತ್ತು ಧರ್ಮಾತೀತ ನೇಲೆಯಲ್ಲಿ ಹುಟ್ಟಿಕೊಂಡ ವಚನಗಳನ್ನು ಸಂಗೋಪನ ಕಾಲದಲ್ಲಿ ಬರೆಯುವ ಸಂಕಲಿಸುವ ಕೆಲಸ ದೊಡ್ಡ ಪ್ರಮಾಣದಲ್ಲಿ ನಡೆಯಿತು. ಓೕಗೆ ಸಂಕಲಿಸುವಾಗ ವಚನಕಾರರನ್ನು ಆಧರಿಸಿ, ಷಟಸ್ಥಲಗಳನ್ನು ಪೀರಶೈವ ಧಾರ್ಮಿಕ ಚೌಕಟ್ಟಿನಲ್ಲಿ ಏರಕ ಹೊಯ್ಯಲಾಗಿದೆ ಮತ್ತು ಅವುಗಳನ್ನು ಕೀರ್ತನೆಗಳ ಮಾದರಿಗೆ ಪರಿವರ್ತಿಸಿ ಬರೆಯಲಾಗಿದೆ. ಹಿರಿಯರ ವಚನಗಳನ್ನು ಅನುಕರಿಸಿ ರೂಪಾಂತರಿಸಲಾಗಿದೆ. ಇವೆಲ್ಲಕ್ಕೂ

ಮಿಗಿಲಾಗಿ ಶೂನ್ಯ ಸಂಪಾದನೆಗಳ ಮಾದರಿಯನ್ನು ನೋಡುತ್ತೇವೆ ಎನ್ನುವ ಕೆ.ವಿ. ನಾರಾಯಣರವರ ಅಭಿಪ್ರಾಯ ಮುಖ್ಯ'.[೨೦] ಹೀಗೆ ಬಿಡಿಯಾಗಿದ್ದ ವಚನಗಳಿಗೆ ಆಯಾ ವಚನಕಾರರ ಜೀವನ ಸಂದರ್ಭದ ಒಂದು ತಾತ್ವಿಕ ನೆಲೆಯನ್ನು ಶೂನ್ಯ ಸಂಪಾದನಕಾರರು ರೂಪಿಸಿಕೊಡುತ್ತಾರೆ. ಇದು ಹರಿಹರ ಚಾಮರಸರಲ್ಲಿ ಕಾಣುತ್ತದೆ. ಇವೆಲ್ಲ ವಚನಗಳ ಬಿಡಿ ಬಿಡಿ ರೂಪಗಳೆಂದು ನೋಡದೆ ವುಗಳನ್ನು ಸಂದರ್ಭನಿಷ್ಠಗೊಳಿಸಿ ಸಂಯೋಜಿಸುವ ಪ್ರವೃತ್ತಿ ಎದ್ದು ಕಾಣುತ್ತದೆ.

ಹೀಗೆ ವಚನಗಳನ್ನು ಸಂದರ್ಭನಿಷ್ಠಗೊಳಿಸಿದ ಕ್ರಮಕ್ಕೆ ಒಂದು ಚಾರಿತ್ರಿಕ ಒತ್ತಾಸೆ ಕಾರಣವಾಗಿತ್ತು. ಸಂಪಾದನಾಕಾರರು ಟೀಕಾಕಾರರು ಇವರೆಲ್ಲ ವೀರಶೈವರ ಸಾಂಸ್ಥಿಕ ತಳಹದಿಯ ಮೇಲೆ ವಚನಗಳನ್ನು ವಿವರಿಸಿದರು. ಇದರ ಹಿಂದೆ ಧಾರ್ಮಿಕ ವಿಸ್ತಾರ ಒಂದು ರೀತಿಯದಿದ್ದರೆ ಧರ್ಮದ ಸಂವಿಧಾನಗಳಾದ ವಚನಗಳನ್ನು ತಲೆಮಾರಿಗೆ ಸಾಗಿಸುವ ಪ್ರಯೋಜಕ ತಂತ್ರಕೂಡ ಇದರಲ್ಲಿ ಅಡಗಿದೆ. ವಚನಗಳನ್ನು ಶೂನ್ಯ ಸಂಪಾದನೆಗಳಲ್ಲಿ ಜೋಡಿಸಿರುವ ಕ್ರಮವು ಅದನ್ನು ಮತೀಯವಾದ ನೆಲೆಗಳಿಗೆ ಒಯ್ಯುವ ಉದ್ದೇಶವನ್ನು ಹೊಂದಿದೆ. ಹೀಗೆ ಒಂದು ಬದ್ಧವ್ಯವಸ್ಥೆಯೊಳಗೆ ವ್ಯವಸ್ಥಿತ ರಚನೆಗಳನ್ನು ಹಿಡಿದಿಟ್ಟಾಗ ಅದಕ್ಕಿರುವ ವ್ಯಾಪಕಾರ್ಥ ಬಿದ್ದು ಹೋಗುತ್ತದೆ.

ಗ್ರಂಥಸಂಪಾದನೆಯ ಕಾರ್ಯವು ಕನ್ನಡದಲ್ಲಿ ಇದಕ್ಕಿಂತ ಭಿನ್ನವಾಗಿ ಬೆಳೆದಿಲ್ಲ. ಇಪ್ಪತ್ತನೆಯ ಶತಮಾನ ಆದಿಭಾಗದಿಂದ ಆಕರ ನಿರ್ಮಾಣದ ಅಂಗವಾಗಿ ಇಪ್ಪತ್ತನೆಯ ಶತಮಾನದ ಪೂರ್ವಕಾಲದಲ್ಲಿ ರಚನೆಯಾದ ಬರಹಗಳನ್ನು ಸಂಗ್ರಹಿಸಿ ಪ್ರಕಟಿಸಲಾಗುತ್ತದೆ. ಹಾಗೆ ನೋಡಿದರೆ ಗ್ರಂಥಸಂಪಾದನೆ ಕಾರ್ಯವು ಮೊದಲಿನಿಂದಲೂ ಇದೆ. ಪ್ರತಿ ಮಾಡಿಡುವುದು ಅವುಗಳನ್ನು ಸೀಮಿತವಾಗಿ ಬಳಸುವುದು, ಪ್ರಸಾರ ಮಾಡುವುದು ನಡೆಯುತ್ತಿತ್ತು. ೧೫ನೆಯ ಶತಮಾನದಲ್ಲಿ ವಿಜಯನಗರದ ಅರಸರಲ್ಲಿ ಒಬ್ಬನಾದ ಪ್ರೌಢ ದೇವರಾಯನ ಕಾಲದಲ್ಲಿ ನೂರೊಂದು ವಿರಕ್ತರು ವಚನಗಳನ್ನು ಸಂಪಾದಿಸಿದ್ದನ್ನು ಕಾಣುತ್ತೇವೆ. ಸಂಕಲನಗೊಂಡ ಸಂಗ್ರಹಕ್ಕೆ ಸಂಪಾದಕರು ಇದ್ದಾರೆ, ಸಂಕಲನಕ್ಕೆ ಹೆಸರುಗಳೂ ಇವೆ. ನಾಲ್ಕು ಶೂನ್ಯ ಸಂಪಾದನೆಗಳು ಲಿಂಗಲೀಲಾ ವಿಲಾಸ ಚಾರಿತ್ರ್ಯ, ಏಕೋತ್ತರ ಸ್ಥಲಗಳು, ಗಣಭಾಷಿತ ರತ್ನಮಾಲೆ ಇಂತಹ ಹತ್ತಾರು ಸಂಪಾದನೆಗಳು ಇವೆ. ವಚನಕಾರರ ನಂತರ ಈ ಸಂಪಾದನೆ ಕಾರ್ಯ ನಡೆಯಿತು. ವಚನಗಳ ದರ್ಶನವನ್ನು ವೀರಶೈವೀಕರಣಗೊಳಿಸುವ ಸಂದರ್ಭದಲ್ಲಿ ಈ ಸಂಪಾದನೆಗಳು ಹುಟ್ಟಿಕೊಂಡವು. ಸ್ಥಲಕಟ್ಟುಗಳಲ್ಲಿ ವಚನಗಳನ್ನು ಸೇರಿಸಲಾಯಿತು. ಸ್ಥಳಗಳ ನೆಲೆಯಲ್ಲಿ ವಚನಗಳನ್ನು ಸೇರಿಸಲಾಯಿತು. ಸ್ಥಲಗಳ ನೆಲೆಯಲ್ಲಿ ವಚನಗಳನ್ನು ವಿವರಿಸುವ ಪ್ರಯತ್ನವನ್ನು ಸಾಂಘಿಕವಾಗಿ ಮಾಡಲಾಯಿತು. ವಚನಗಳ ತತ್ವವು

ದರ್ಶನವು ಧರ್ಮದ ವಿನ್ಯಾಸದಲ್ಲಿ ರೂಪಿಸಲಾಯಿತು. ೧೨ನೆಯ ಶತಮಾನದಲ್ಲಿ ಶರಣರ ಚಳುವಳಿಯನ್ನು ಬೆಂಬಲಿಸಿದವರೆಂದು ಹೇಳಿಕೊಳ್ಳುವ ಸಮುದಾಯಗಳು ೧೫ನೆಯ ಶತಮಾನದ ಈ ಸಂದರ್ಭದಲ್ಲಿ ವೀರಶೈವರಾಗಿ, ಲಿಂಗಾಯತರಾಗಿ ಸಾಂಸ್ಥಿಕರಣಗೊಂಡು ಜಾತಿ ಸಮುದಾಯವಾಗಿ ರೂಪುಗೊಂಡಿದ್ದರ ಹಿಂದೆ ಈ ಸಂಪಾದನೆಗಳೂ ಕಾರಣವಾಗಿವೆ. ಈ ಸಂಕಲನಗಳ ಪುನಃ ಬ್ರಿಟಿಷ್ ಆಡಳಿತ ಕಾಲದಲ್ಲಿ ಆಧುನಿಕವಾಗಿ ಪುಸ್ತಕ ರೂಪದಲ್ಲಿಯೂ ಪ್ರಕಟವಾದವು. ಕನ್ನಡ ವಿದ್ವಾಂಸರು ಈ ಕೆಲಸ ಮಾಡಿದರು.

ಓರಿಯಂಟಲಿಸ್ಟರ್ ದೃಷ್ಟಿಕೋನಕ್ಕೆ ಅನುಗುಣವಾಗಿ ೨೦ನೆಯ ಶತಮಾನದಲ್ಲಿ ಹಳೆಯ ಕನ್ನಡ ಗ್ರಂಥಗಳ ಸಂಪಾದನೆಯಾಗಿ ಪ್ರಕಟವಾದವು. ಭಾರತೀಯರಿಗೆ ಚರಿತ್ರೆಯ ಪ್ರಜ್ಞೆ ಇಲ್ಲ ಎಂಬ ಪಶ್ಚಿಮದವರ ಹೇಳಿಕೆಗೆ ಎಚ್ಚತ್ತು ನಮ್ಮ ವಿದ್ವಾಂಸರು ಪ್ರಾಚೀನ ಮಧ್ಯಕಾಲೀನ ಕನ್ನಡ ಗ್ರಂಥಗಳ ಸಂಪಾದನೆ ಮಾಡುವಾಗ ಕವಿ, ಕವಿಯಕಾಲ, ಸ್ಥಳ, ಧರ್ಮ, ಜಾತಿ, ಪೂರ್ವಜರು ಮುಂತಾದ ಸಂಗತಿಗಳನ್ನು ಕಷ್ಟಪಟ್ಟು ಖಚಿತವಾಗಿ ಎಂಬಂತೆ ಶೋಧಿಸಿ ಪ್ರಕಟಿಸಿದರು. ಹೀಗೆ ಕನ್ನಡ ಗ್ರಂಥಗಳ ಸಂಪಾದನೆಯ ಹಿಂದೆ ಸಂಪಾದಕರು ವಿದ್ವಾಂಸರ ಧೋರಣೆಯೂ ಕಾಣುತ್ತದೆ. ಜೈನ ಗ್ರಂಥಗಳನ್ನು ಹೊರತುಪಡಿಸಿದರೆ ವೀರಶೈವ ಬ್ರಾಹ್ಮಣ ಕವಿಗಳ ಗ್ರಂಥಗಳನ್ನು ಆಯಾ ಜಾತಿಗೆ ಸೇರಿದವರೇ ಸಂಪಾದಿಸಿರುವುದನ್ನು ಕಾಣಬಹುದು. ಹಾಗೆಯೇ ವೀರಶೈವ ಹಸ್ತಪ್ರತಿಗಳ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿರುವುದನ್ನು ಕಾಣುತ್ತೇವೆ. ಇದು ಅನಿವಾರ್ಯ ಅನ್ನುವುದಕ್ಕಿಂತ ಇದು ಸಹಜ ಎಂಬಂತೆ ನಡೆದಿದೆ. ಈ ಸಂಪಾದನೆಗಳ ಹಿಂದಿನ ತಾತ್ವಿಕತೆ ಏನೆಂಬುದು ಇದರಿಂದ ಗೊತ್ತಾಗುತ್ತಿದೆ. ಆಯಾ ಜಾತಿಧರ್ಮದವರು ಆಯಾ ಜಾತಿ ಧರ್ಮದವರ ಗ್ರಂಥಗಳನ್ನು ಸಂಗ್ರಹಿಸಿದ್ದಾರೆ. ಇದಕ್ಕೆ ಅಪವಾದಗಳು ಇದ್ದರೂ ಅವು ಕಡಿಮೆ ತಮ್ಮ ಧರ್ಮದ ಅನನ್ಯತೆಯನ್ನು ಬಲಪಡಿಸುವುದೇ ಇಲ್ಲಿ ಮುಖ್ಯವಾಗಿ ಕಾಣುತ್ತದೆ. ಇದಕ್ಕೆ ವೀರಶೈವ ಹಸ್ತಪ್ರತಿಗಳು ಕೂಡ ಹೊರತಾಗಿಲ್ಲ.

೫.೩. ವೈದಿಕ ಮತಾಧಾರಿತ ಅಧ್ಯಯನಗಳು

ನಿಮ್ಮ ಜಾತಿ ನಿಮಗಿರಲಿ ನಿಮ್ಮ ಸಿರಿತನ ಬಡತನ ನಿಮದಾಗಿರಲಿ, ಹರಿಭಯ ಆಧಾರದ ಮೇಲೆ ನಾವೆಲ್ಲ ಒಂದಾಗೋಣ ಎನ್ನುವ ನೆಲೆಯಲ್ಲಿ ಹುಟ್ಟಿಕೊಂಡಿದ್ದು ವೈದಿಕ ಪರಂಪರೆ. ವೈದಿಕ ಪರಂಪರೆಯ ಅಧ್ಯಯನವೆಂದರೆ ಅದು ಮಧ್ಯಕಾಲೀನ ಕರ್ನಾಟಕದ ಪುರೋಹಿತ ವರ್ಗದ ಅಧ್ಯಯನವು ಹೌದು. ಜೈನಧರ್ಮ ತೀರ್ಥಂಕರ ಶಿವಶರಣರನ್ನು ದಾಟಿ ಬಂದ ಕನ್ನಡ ಹಸ್ತಪ್ರತಿ ಪರಂಪರೆ ಮಧ್ಯಕಾಲೀನದ ಹೊತ್ತಿಗೆ ಫ್ಯೂಡಲ್‌ನಿಂದ ಪುರೋಹಿತಶಾಹಿಯ ಕೈಗೆ ಸಿಕ್ಕಿತು. ಮಧ್ಯಕಾಲೀನ ಪೂರ್ವದ ಕರ್ನಾಟಕದಲ್ಲಿ ಫ್ಯೂಡಲ್ ವ್ಯವಸ್ಥೆ ಪ್ರಭಲವಾಗಿದ್ದರೆ ಅನಂತರ ವೈದಿಕ ಪರಂಪರೆಯ ಹೊತ್ತಿಗೆ ಪುರೋಹಿತಶಾಹಿ ಗಟ್ಟಿಗೊಳ್ಳುತ್ತಾ ಹೋಯಿತು.

ಮುಂದೆ ವೈದಿಕ ಪರಂಪರೆ ಪುರೋಹಿತ ವರ್ಗವನ್ನು ಅತ್ಯಂತ ಬಲಿಷ್ಠವಾಗಿ ಪೋಷಿಸುತ್ತ ತನ್ನೊಂದಿಗೆ ಕೈಹಿಡಿದುಕೊಂಡೆ ಬಂತು.

ಬಹುಶಃ ವಿಜಯನಗರದಂತ ಒಂದು ಬೃಹತ್ ರಾಜಕೀಯ ಒತ್ತಡವಿರದಿದ್ದರೆ ಹರಿದಾಸ ಪರಂಪರೆ ಕರ್ನಾಟಕದಲ್ಲಿಯಂತೂ ಸಾಧ್ಯವಿರಲಿಲ್ಲ. ಹೆಚ್ಚೆಂದರೆ ಯಾವುದೋ ಮಂದಿರದೊಳಗೆ ಹರಿಯನ್ನು ಕೊಂಡಾಡುವ ಭಜನಾ ಮಂಡಳಿಯಾಗಿರುತ್ತಿತ್ತು. ಧರ್ಮ ಎಷ್ಟು ರಾಜತ್ವವನ್ನು ದೂರೀಕರಿಸುತ್ತಿತ್ತೋ ಅಷ್ಟು ಹತ್ತಿರವಾಗುತ್ತಿತ್ತು. ಹರಿದಾಸರು ಮುಖ್ಯವಾಗಿ ವಿಷ್ಣು ಭಕ್ತರು ತಮ್ಮ ಕೀರ್ತನೆಗಳ ತುಂಬೆಲ್ಲಾ ವಿಷ್ಣು ಪಾರಮ್ಯವನ್ನು ಕೊಂಡಾಡಿದರು. ಕರ್ನಾಟಕದಲ್ಲಿ ಅವತರಿಸಿ ದ್ವೈತಮತ ಪ್ರತಿಪಾದನೆ ಮತ್ತು ಅವು ನಂಬಿದ ಧಾರ್ಮಿಕ ಪ್ರಸಾರಕ್ಕಾಗಿಯೇ ಭಾಷೆಯನ್ನು ಬಳಸಿಕೊಂಡವರು. ಹೀಗಾಗಿ ಇವರ ಕೃತಿಗಳಲ್ಲಿ ಧಾರ್ಮಿಕ ಮತ್ತು ಸ್ವಂತ ಸಮಾಜ ನಿಲವುಗಳನ್ನು ಒಟ್ಟಾರೆ ಮಾನವ ಸಮುದಾಯದ ನೆಲೆಗಳನ್ನು ಕಿಂಚಿತ್ತೂ ಇಲ್ಲ. ಮಾನವ ಸಂಬಂಧಗಳನ್ನು ಒಡೆದು ಮಾನವೀಯತೆಗೆ ಗೋರಿ ಕಟ್ಟಿದಂತೆ ಜಾತಿ ಗೋಡೆಗಳನ್ನು ಹುಟ್ಟುಹಾಕಿ ಅಸಮಾನತೆಯನ್ನು ಬೆಳೆಸಿತು. ಪ್ರಕಲ್ಪ ಪಾಂಡಿತ್ಯ ವಿಶ್ವದ ಪರಿಕಲ್ಪನೆಯ ಲೋಕನಾಶಗಳ ಮಟ್ಟಕ್ಕೆ ಮನುಷ್ಯರು ಬರಬೇಕೆ ಹೊರತು ಮನುಷ್ಯನ ಮಟ್ಟಕ್ಕೆ ನಾವಿಳಿಯುವುದಿಲ್ಲವೆಂದು ಬದ್ದ ನಿಲುವು ಹರಿದಾಸರದಾಗಿತ್ತು. ಆದ್ದರಿಂದಲೆ 'ಮಾನವ ಜನ್ಮದೊಡದ್ದು ಇದು ಹಾನಿ ಮಾಡಲು ಬೆಡಿ ಹುಚ್ಚಪ್ಪಗಳಿರಾ' ಎಂದು ಹರಿದಾಸ ಕೀರ್ತನೆಗಳ ಮೂಲಕ ಮನುಷ್ಯ ಜನ್ಮದ ಹೊರಗಿನ ಪೊದರನ್ನು ಸುರಿಸುವ ಪ್ರಯತ್ನ ಮಾಡಿದರೆ ಹೊರತು ಒಳಗಿನ ರಕ್ತ ಮಾಂಸಗಳಿಗಾದ ಅನ್ಯಾಯ ಶೋಷಣೆ, ಜಾತಿ ಭ್ರಷ್ಟತೆಯನ್ನು ನಿವಾರಿಸುವಾಗ ಗೋಜಿಗೆ ಹೋಗಲಿಲ್ಲ. ತಾವು ತಮ್ಮ ಮತ ಪಂಥಗಳ ಜಾತಿ ಧರ್ಮಗಳ ವಿನ್ಯಾಸದೊಳಗಿದ್ದುಕೊಂಡೆ ಕುಲಕುಲವೆಂದು ಕಚ್ಚಾಡದಿರಿ ಎನ್ನುವ ತೀರಾ ವಿರೋಧಾಭಾಸದ ಬದುಕನ್ನು ಬಾಳಿದರು. ನಾವು ಮಾತ್ರ ನಮ್ಮ ವೈದಿಕತನವನ್ನು ಕಟ್ಟಿಕೊಂಡೆ ಸಾಯುತ್ತೇವೆ ವಿನಃ ಜಾತಿ ಧರ್ಮಗಳ ಅಸಮಾನತೆಯನ್ನು ನಿರಾಕರಿಸುವುದಿಲ್ಲ ಎನ್ನುತ್ತ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯನ್ನು ಅದರ ಮೂಲ ಸ್ವರೂಪದಲ್ಲೆ ರಕ್ಷಿಸುತ್ತ ಬಂದರು.

ಹರಿದಾಸರು ಪ್ರಾಚೀನ ಭಾಗವತ ಪರಂಪರೆಯೊಂದಿಗೆ ತಮ್ಮ ಮಧ್ವಮತ ತತ್ವಗಳನ್ನು ಭದ್ರವಾದ ತಳಹದಿಯಲ್ಲಿ ನೆಲಗೊಳಿಸಿದರು. ಅವರ ಕೀರ್ತನೆಗಳಲ್ಲಿ ಭಗವಂತನ ನಾನಾ ರೂಪಗಳ ವರ್ಣನೆ ಭಕ್ತನ ಅಂತರಂಗ ಶೋಧನೆ ಕಳವಳ ಸರ್ವಾರ್ಪಣ ಭಾವಗಳ ಜೊತೆಗೆ ಮಧ್ವತತ್ವವೂ ನಿರೂಪಣೆಗೊಂಡಿದೆ. ನರಹರಿತೀರ್ಥ, ಶ್ರಿಪಾದರಾಯರು, ವ್ಯಾಸರಾಯ, ವಾದಿರಾಜ, ಪುರಂದರದಾಸ, ಕನಕದಾಸ, ಮಹಿಪತಿದಾಸ, ವಿಜಯದಾಸ, ಮೋಹನದಾಸ, ಹೆಳವನಕಟ್ಟೆ ಗಿರಿಯಮ್ಮ, ಹರಪ್ಪನಹಳ್ಳಿ ಭೀಮವ್ವ ಮುಂತಾದವರು ಕೀರ್ತನ ಪರಂಪರೆಗೆ

ಚಾಲಕರಾದರು. ೧೫ನೆಯ ಶತಮಾನದಲ್ಲಿ ಕೀರ್ತನ ಸಾಹಿತ್ಯ ಅಷ್ಟೊಂದು ಜನಪ್ರಿಯವಾಗ ಬೇಕಾದರೆ ಇವರೆಲ್ಲ ಆ ಹೊತ್ತಿಗೆ ಒಂದು ಪರಂಪರೆಯನ್ನು ನಿರ್ಮಿಸಿರಬೇಕು. ವೈದಿಕ ಸಂಪ್ರದಾಯಕದ ವರ್ಣವ್ಯವಸ್ಥೆಯ ಪುನರ್ ಪ್ರತಿಷ್ಠಾಪನೆ ಮತ್ತು ಮಧ್ವತತ್ವಗಳನ್ನು ಜನ ಸಾಮಾನ್ಯರಿಗೆ ಪರಿಚಯಿಸುವುದೇ ಕೀರ್ತನೆಗಳ ಗುರಿಯಾಯಿತು.

'ಸಂಸ್ಕೃತವನ್ನು ವ್ಯವಸ್ಥೆಯ ರಕ್ಷಣೆಯ ಸಾಧನವನ್ನಾಗಿಯೂ ಪಾಂಡಿತ್ಯದ ಭದ್ರ ಕೋಟೆಯನ್ನಾಗಿ ಮಾಡಿಕೊಂಡಿದ್ದ ಕರ್ನಾಟಕದ ವೈದಿಕರು ಬದಲಾದ ಸಾಮಾಜಿಕ ಮತ್ತು ಧಾರ್ಮಿಕ ಪರಿಸರದಲ್ಲಿ ಕನ್ನಡದಲ್ಲಿ ಬರೆಯುವುದು ಅನಿವಾರ್ಯವಾಯಿತು. ವರ್ಣವ್ಯವಸ್ಥೆಯನ್ನು ಬಿಗಿಗೊಳಿಸಿ ಜನಸಾಮಾನ್ಯರಲ್ಲಿ ಆ ಬಗ್ಗೆ ನಿಷ್ಠೆಯನ್ನುಂಟು ಮಾಡಲು ಅವರಿಗೆ ಅರ್ಥವಾಗುವ ಭಾಷೆಯ ಸಾಹಿತ್ಯ ಸೃಷ್ಟಿಸುವ ಅಗತ್ಯವನ್ನು ಎಂದಿಗಿಂತ ಅಧಿಕವಾಗಿ ವೈದಿಕರು ಮನಗಂಡಿದ್ದರು. ವರ್ಣವ್ಯವಸ್ಥೆಯಲ್ಲಿ ಮತ್ತು ಶೂದ್ರರಲ್ಲಿ ವಿಶ್ವಾಸ ಮೂಡಿಸಲು ಬಳಸಿದ ಕನ್ನಡವೇ ವೈದಿಕ'.[೨೧] ಅವರ ರಾಮಧ್ಯಾನ ಚರಿತ್ರೆಯಲ್ಲಿ ವರ್ಗ ಪ್ರಜ್ಞೆಯ ಸುಳಿವಿದೆ.

'ಹರಿದಾಸ ಸಾಹಿತ್ಯ ಹಿಂದೂ ಸಂಸ್ಕೃತಿಯನ್ನು ರಕ್ಷಿಸುವ ಉದ್ದೇಶಕ್ಕಾಗಿಯೇ ಹುಟ್ಟಿಕೊಂಡಿದ್ದೆಂದು ಹೇಳುತ್ತಲೇ ಮತ್ತೆ ತನ್ನ ಅಭಿವ್ಯಕ್ತಿಗೆ ವಚನ ಮಾದರಿಯನ್ನು ಅನುಸರಿಸಿದ ಸಂದರ್ಭವನ್ನು ಅನಿವಾರ್ಯವಾಗಿ ಪ್ರಶ್ನಿಸಬೇಕಾಗುತ್ತದೆ. ತನ್ನ ಮೇಲಾಗುತ್ತಿರುವ ಇಸ್ಲಾಂನಂತಹ ಅನ್ಯ ಆಕ್ರಮಣಗಳನ್ನು ಪ್ರತಿಭಟಿಸುವ ಉದ್ದೇಶದಿಂದ ಹುಟ್ಟಿಕೊಂಡ ಹರಿದಾಸ ಅಂದೋಲನ ಯಾವ ಮೂಲೋದ್ದೇಶಕ್ಕಾಗಿ ಹುಟ್ಟಿಕೊಂಡಿತೋ ಅದನ್ನು ಪೂರೈಸಲಾಗದೆ ವೈದಿಕತನಕ್ಕೆ ಕಟ್ಟುಬಿದ್ದಿ ದ್ದರಿಂದ ಹರಿದಾಸ ಸ್ವರೂಪ ವಿಫಲವಾಯಿತು. ರಾಮಾಯಣ ಮಹಾಭಾರತ ಭಾಗವತಗಳು ವಿಫುಲ ಸಾಮಗ್ರಿಯನ್ನೊದಗಿಸಿದರೂ ಸೃಜನಶೀಲವಾಗಬಲ್ಲ ಸಾಹಿತ್ಯ ನಿರ್ಮಿಸಲು ಅವರಿಂದ ಸಾಧ್ಯವಾಗಲೇ ಇಲ್ಲ. ಭಗವಂತನೂ ಸಾಕ್ಷತ್ ಶ್ರೀ ಹರಿಯ ಲೀಲಾ ಕಥನವೇ ಆಗಿ ಭಾಗವತ ಹಸ್ತಪ್ರತಿಗಳ ತುಂಬ ಇದೆ ವಿಷಯ ನಿರೂಪಣೆಯಾಯಿತು. ನಾಗರಸನ ಭಗವದ್ಗೀತೆ',[೨೨] ನಿರಕ್ಷರಕುಕ್ಷಿಯ ಭಗವದ್ಗೀತೆ',[೨೩] ಚಿಕ್ಕದೇವರಾಜನ ಭಾಗವತ ಟೀಕೆ, ಚಿಕ್ಕುಪಾಧ್ಯಾಯನ ಭಗವದ್ಗೀತಾ ಟೀಕು ಮುಂತಾದ ಹಸ್ತಪ್ರತಿಗಳು ಭಾಗವತ ಕಥೆಯನ್ನು ನಿರೂಪಿಸುವಲ್ಲಿ ಯಶಸ್ವಿಯಾದವು.

ಹೀಗೆ ಧರ್ಮ ತತ್ವ ನೀತಿಯಂತಹ ಪ್ರಧಾನವಾದ ದೃಷ್ಟಿಗಳು ರಾಜಾಸ್ಥಾನಗಳು ಪಂಡಿತ ಮಂಡಲಿಗಳು ಮತ್ತು ಕೇವಲ ಧಾರ್ಮಿಕ ಶ್ರದ್ಧೆಯ ಸಹೃದಯ ಹೀಗೆ ಸಾಹಿತ್ಯ ಪರಂಪರೆಗೆ ಕಾರಣವಾಗುತ್ತಾರೆಂಬುದನ್ನು ಸ್ಥೂಲವಾದ ಈ ಚರ್ಚೆಯಿಂದ ಮನಗಾಣಬಹುದು.

ವೈದಿಕ ಹಸ್ತಪ್ರತಿಗಳಾದ ರಾಮಾಯಣ, ಮಹಾಭಾರತ, ಭಾಗವತ, ವಿಷ್ಣುಪುರಾಣ ನೀತಿಬೋಧಕ, ಕೀರ್ತನೆಗಳ ಹಸ್ತಪ್ರತಿಗಳು ಹೆಚ್ಚಾಗಿ ಕಂಡುಬರುತ್ತವೆ. ವೀರನಾರಾಯಣನೆ

ಕವಿ ಎಂದು ಆರಂಭಿಸುವ ಕುಮಾರವ್ಯಾಸನಿಗೆ ಮಹಾಭಾರತ ವ್ಯಾಸ ಮುನಿಯಂತೆ ವೈದಿಕ ದೃಷ್ಟಿಕೋನದಿಂದಲೆ ಗೋಚರಿಸಿದೆ. ಜೈನರ ಕಾಲದಲ್ಲಿ ವೈದಿಕ ವಿರೋಧಿ ಚಟುವಟಿಕೆಯೊಂದು ಮೂರ್ತಗೊಳ್ಳದಿದ್ದರೆ ಬಹುಶಃ ಪಂಪನಿಗೂ ಇದೂ ವೈದಿಕ ಧೋರಣೆಯಲ್ಲೆ ಕಾಣುವ ಸಂಶಯವಿತ್ತು. ಆದರೂ ಕೂಡ ಪಂಪ ಮೂಲ ಜೈನನಲ್ಲ ಎಂಬ ಕಾರಣಕ್ಕಾಗಿ ಪಂಪನಲ್ಲಿ ವೈದಿಕತನ ಸುಪ್ತವಾಗಿ ಕೆಲಸ ಮಾಡಿದೆಯೆಂದು ವಿದ್ವಾಂಸರ ಅಭಿಪ್ರಾಯಪಡುತ್ತಾರೆ. ಪಂಪ ಭಾರತದಲ್ಲಿ ಅಗಾಗ ತಲೆಯೆತ್ತುವ ವೈದಿಕ ಪರ ಸಂದರ್ಭಗಳು ಕಾಣುತ್ತೇವೆ.

ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯಪಡುವಂತೆ 'ಕನ್ನಡ ಸಾಹಿತ್ಯದ ಪ್ರಾರಂಭವೇ ವೈದಿಕ ವಿರೋಧಿ ಧೋರಣೆಯಿಂದ ಹುಟ್ಟಿಕೊಂಡ ಜೈನಧರ್ಮದ ಕವಿಗಳಿಂದ ಮತ್ತು ಅದು ಮುಂದುವರಿದ್ದು ಅದೇ ಧೋರಣೆಯ ವೀರಶೈವಗಳಿಂದ'.[೨೪] ಇದರಿಂದ ಜೈನ ಮತ್ತು ವೀರಶೈವರ ಸಾಹಿತ್ಯ ರಚನೆ ವೈದಿಕರಿಗಿಂತ ಏಕೆ ಭಿನ್ನವಾಯಿತೆಂದು ಊಹಿಸುವುದು ಕಷ್ಟವೇನಲ್ಲ. ಬಹುಶಃ ಈ ಎರಡರ ವೈದಿಕ ಪ್ರತಿಭಟನೆಯ ಧೋರಣೆಯು ಮುಂದೊಂದು ಕಾಲದಲ್ಲಿ ವೈದಿಕ ಪರಂಪರೆ ಸಾಹಿತ್ಯ ಘಟವನ್ನು ಸ್ಥಾಪಿಸುವ ಆಕಾಂಕ್ಷೆಗೆ ಕಾರಣವಾಗಿರಬೇಕು. ಇದರಿಂದ ವೈದಿಕ ಪರಂಪರೆಯ ವಿಷಯ ವೈವಿಧ್ಯ ಹಿಂದಿನ ಪರಂಪರೆಗಿಂತ ಯಾಕೆ ಭಿನ್ನವಾಯಿತೆಂದು ಗ್ರಹಿಸಲು ಕಷ್ಟಪಡಬೇಕಾಗಿಲ್ಲ. ಇದರಿಂದ ಸೊರಗುತ್ತಿದ್ದ ವೈದಿಕ ಧರ್ಮ ವೀರಶೈವರ ಅಂದೋಲನದಿಂದ ಮತ್ತೆ ತನ್ನ ಅಂತಃಶಕ್ತಿಯನ್ನು ಪಡೆದುಕೊಂಡಿತು.

ವೈದಿಕ ಹಸ್ತಪ್ರತಿ ನಿರ್ಮಾಣದ ಜೊತೆಗೆ ಒಂದು ಮಹಾಸಾಮ್ರಾಜ್ಯದ ನಿರ್ಮಾಣವು ಜೊತೆಗೂಡಿ ಮಧ್ಯಕಾಲೀನ ಕರ್ನಾಟಕದ ಸಂಸ್ಕೃತಿಯ ಸ್ವರೂಪವನ್ನು ವೈದಿಕ ಪಂಥವೇ ನಿರ್ಧರಿಸುವಂತಾಯಿತು. ಹರಿದಾಸ ಸಾಹಿತ್ಯದ ಉರ್ಜಿತವೂ ವಿಜಯನಗರದ ಅರಸೊತ್ತಿಗೆಯೂ ಏಕಕಾಲಕ್ಕೆ ಸಂಭವಿಸಿದ್ದು ಗಮನಾರ್ಹ ಸಂಗತಿ. ಕ್ರಿ.ಶ.೧೫–೧೬ನೆಯ ಶತಮಾನಗಳ ಹೊತ್ತಿಗೆ ಇಡೀ ಭಾರತ ಒಕ್ಕೂಟದಲ್ಲಿ ನಡೆದ ಶಕ್ತಿಪಂಥದ ಆಂದೋಲನಗಳು ಕನ್ನಡ ವೈದಿಕ ಪರಂಪರೆಯ ಮೇಲೆ ಅಪಾರವಾದ ಪ್ರಭಾವವನ್ನು ಬೀರಿದವು. ಮಹಾರಾಷ್ಟ್ರದಲ್ಲಿ ನಾಮದೇವ ಮತ್ತು ಏಕನಾಥ, ಗುಜರಾತಿನಲ್ಲಿ ಬಹಳ ಪ್ರಭಾವ ಬೀರಿದ ಆಂಧ್ರಪ್ರದೇಶದ ವಲ್ಲಭಚಾರ್ಯರೂ ಅವರ ಮಗ ವಿಠಲನಾಥನೂ, ಪಂಜಾಬಿನಲ್ಲಿ ಸೀಖ್ ಮತದ ಪ್ರವರ್ತಕರಾದ ನಾನಕ, ಉತ್ತರ ಪ್ರದೇಶದಲ್ಲಿ ಬೀರ್ ಮತ್ತು ತುಲಸೀದಾಸ್, ಬಂಗಾಲದಲ್ಲಿ ಶ್ರೀಕೃಷ್ಣ, ಚೈತನ್ಯ ಇವರೆಲ್ಲರೂ ಈ ಕಾಲದಲ್ಲಿ ಜನ್ಮ ತಾಳಿ ದೇಶ ಭಾಷೆಗಳಲ್ಲಿ ಹಾಡುಗಳನ್ನು ರಚಿಸಿ ಭಜನೆ ಕೀರ್ತನೆಗಳ ಮೂಲಕ ಭಗವದ್ಗೀತೆಯ ಪರಿಣಾಮಕಾರಿಯಾಗಿ ಪ್ರಸಾರ ಮಾಡಿದರು. ಬಹುಶಃ ಭಕ್ತಿ ಪಂಥದ ಹೋರಾಟಕ್ಕೆ ಮಧ್ಯಕಾಲೀನ ಕರ್ನಾಟಕದಲ್ಲಿ ನಡೆದ ಹರಿದಾಸ ಆಂದೋಲನವೂ ಸೇರಿಕೊಳ್ಳುತ್ತದೆ. ಇಡೀ ದೇಶಾದ್ಯಂತ ನಡೆದ ಈ ಧರ್ಮಜಾಗೃತಿ ಕರ್ನಾಟಕ ಸಸ್ತಪ್ರತಿ ಪರಂಪರೆಯ ಮೇಲೆ ಬಹಳಷ್ಟು ಪ್ರಭಾವ ಬೀರಿತು.

ಅದರ ಮಾರ್ಗದಲ್ಲಿ ಕನ್ನಡ ಹರಿದಾಸರು ವೈದಿಕ ಪರಿಭಾಷೆಯಲ್ಲಿ ಸಾಹಿತ್ಯ ನಿರ್ಮಾಣಕ್ಕೆ ತೊಡಗಿದರು. ಈ ಸಂದರ್ಭದಲ್ಲಿ ಅವರು ಮುಖ್ಯವಾಗಿ ಕೈಗೊಂಡ ಕಾರ್ಯವೆಂದರೆ ಭಗವದ್ಭಕ್ತಿಯ ಪ್ರಸಾರ. ಹಿಂದಿನ ಎರಡೂ ಪರಂಪೆಗಳಿಂದ ಬೇಸತ್ತಿದ್ದ ಇವರು ತುರ್ತಾಗಿ ಈ ಬಗೆಯ ಪ್ರಚಾರಕ್ಕಿಳಿಯಬೇಕಾಯಿತು. ಆದ್ದರಿಂದಲೇ ವೈದಿಕರು ತಮ್ಮ ಹಸ್ತಪ್ರತಿಗಳಲ್ಲಿ ಹಿಂದಿನ ಎರಡೂ ಪರಂಪರೆಗಳಿಗಿಂತ ಭಿನ್ನವಾದ ವಿಷಯ ಹಾಗೂ ರೂಪಗಳನ್ನು ಜಾರಿಗೆ ತಂದರು. ಹೀಗೆ ವಿಷಯ ಮತ್ತು ರೂಪಗಳೆರಡರಲ್ಲೂ ಕ್ರಾಂತಿಕಾರಕ ಬದಲಾವಣೆ ಮಾಡಿದ ಇವರ ಹಸ್ತಪ್ರತಿಗಳಿಗೆ ಒಂದು ಐತಿಹಾಸಿಕವಾದ ಮಹತ್ವವಿದೆ. ಇವರ ಹಸ್ತಪ್ರತಿಗಳಿಗೆ ಮಹಾಭಾರತ, ರಾಮಾಯಣ, ಭಾಗವತದ ವಿಷಯಗಳು ಮುಖ್ಯ ದ್ರವ್ಯವಾಗಿವೆ. ರುದ್ರಭಟ್ಟನ ಜಗನ್ನಾಥ ವಿಜಯ, ಕುಮಾರ ವಾಲ್ಮೀಕಿಯ ತೊರವೆ ರಾಮಾಯಣ, ತಿಮ್ಮಣ್ಣ ಕವಿಯ ಭಾರತ, ಚಾಟುವಿಟಲನಾಥನ ಭಾಗವತ, ಶ್ರೀಶೈಲಾರ್ಯನ ಕೃಷ್ಣಚಾರಿತ್ರ್ಯ ತಿಮ್ಮ ಕವಿಯ ಹರಿವಿಲಾಸ ಚಿಕ್ಕಪಾದ್ಯಯನ ವಿಷ್ಣುಪುರಾಣಗಳು ವೈದಿಕ ಸಾಹಿತ್ಯ ಸಂದರ್ಭದಲ್ಲಿ ಗಮನಿಸುವ ಕೃತಿಗಳು.

ವೀರಶೈವ ಕವಿಗಳಿಂದ ಜನಪ್ರಿಯಗೊಂಡ ಷಟ್ಪದಿ ರೂಪ ಮುಂದೆ ಬ್ರಾಹ್ಮಣ ಕವಿಗಳಲ್ಲಿ ತನ್ನ ಸಾರ್ಥಕತೆಯನ್ನು ಸಾಧಿಸಿತು. ಅವರು ರಾಮಾಯಣ, ಮಹಾಭಾರತ, ಭಾಗವತದಂತ ವಸ್ತುಗಳನ್ನು ಸರಿಯಾಗಿ ಹರಿಬಿಟ್ಟರಲ್ಲದೆ, ವೇದಾಂತ ಸಿದ್ಧಾಂತ, ವೈದಿಕ ಮತ ತತ್ವಗಳನ್ನು ಚಿತ್ತರಿಸಿದರು. ಹೀಗೆ ವೈದಿಕರಲ್ಲಿ ಷಟ್ಪದಿ ರೂಪ ಬಳಕೆಗೊಳ್ಳುತ್ತದೆ. ಸಾಂಗತ್ಯ ರೂಪ ಕುಡ ಹಸ್ತಪ್ರತಿ ಮಾಧ್ಯಮವಾಯಿತು.

ಷಟ್ಪದಿ ಮತ್ತು ಸಾಂಗತ್ಯ ರೂಪಗಳು ಹೀಗೆ ಪೈಪೋಟಿ ನಡೆಸುತ್ತಿರುವಾಗಲೇ ವೈದಿಕರಲ್ಲಿ ಕೀರ್ತನೆಯೆಂಬ ವಿಶಿಷ್ಟ ರೂಪ ಕೂಡಾ ಜಾರಿಗೆ ಬಂತು. ಬಹುಶಃ ತಮ್ಮ ನೀತಿ-ಬೋಧನೆಗಳನ್ನು ಜನಸಾಮಾನ್ಯರಿಗೆ ತಿಳಿಸುವ ಉದ್ದೇಶದಿಂದ ಸರಳ ಅಭಿವ್ಯಕ್ತಿ ರೂಪವಾದ ಕೀರ್ತನೆ ಕನಕ, ಪುರಂದರ ಮುಂತಾದವರ ಅಭಿವೃತ್ತಿಯ ವಾಹಕವಾಯಿತು.

ವೈದಿಕ ಹಸ್ತಪ್ರತಿಗಳು ಮೊದಲು ರೂಪುಗೊಂಡಿದ್ದು ಉತ್ತರ ಕನಾಟಕದಲ್ಲಿಯ ಹಿಂದೂ ಸಂಸ್ಕೃತಿಯ ಪ್ರತೀಕವೆಂದು ಹೇಳುವ ವಿಜಯನಗರ ಮಹಾ ಸಾಮ್ರಾಜ್ಯ ಕೂಡಾ ತಲೆಯೆತ್ತಿದ್ದು ಉತ್ತರ ಕರ್ನಾಟಕದಲ್ಲಿಯೇ. ಹೀಗಾಗಿ ಈ ಪರಂಪರೆ ಹಂಪೆಯ ಸುತ್ತಮುತ್ತ ಹುಟ್ಟಿದ ಕಾರಣ ಈ ಪರಂಪರೆಯ ಹಸ್ತಪ್ರತಿಗಳು ಇಲ್ಲಿಯೇ ವಿಶೇಷವಾಗಿ ದೊರೆಯುತ್ತವೆ. ಮುಂದೆ ಹರಿದಾಸ ಆಂದೋಲನ ಹಂಪೆಯ ರಾಜ ಪ್ರಭುತ್ವದಿಂದ ರಾಯಚೂರಿನ ಪಾಳೆಗಾರಿ ಆಶ್ರಯಕ್ಕೆ ವರ್ಗವಾಯಿತು. ಆದ್ದರಿಂದ ಕೀರ್ತನ ರೂಪದ ಹಸ್ತಪ್ರತಿಗಳು ರಾಯಚೂರಿನ ಪರಿಸರದ ಸುತ್ತಮುತ್ತ ಮತ್ತು ವಿಪುಲ ಪ್ರಮಾಣದಲ್ಲಿ ದೊರೆಯುತ್ತವೆ. ಒಟ್ಟು ವೈದಿಕ

ಹಸ್ತಪ್ರತಿಗಳು ಉತ್ತರ ಕರ್ನಾಟಕದ ಪ್ರಮುಖ ಭಾಗಗಳಾದ ಹಂಪಿ, ಬಳ್ಳಾರಿ, ರಾಯಚೂರು, ತೆಕ್ಕಲಕೋಟೆ ಇತ್ಯಾದಿ ಪ್ರದೇಶಗಳಲ್ಲಿ ಈಗಲೂ ಲಭ್ಯವಾಗುವ ಸಾಧ್ಯತೆಗಳಿವೆ.

ಆಧುನಿಕ ಸಂದರ್ಭದಲ್ಲಿ ವಿದೇಶಿ ವಿದ್ವಾಂಸರಾದ ಸರ್ ವಿಲಿಯಂ ಜೋನ್ಸ್, ಮಾಕ್ಸ್‌ಮುಲ್ಲರ್ ಕಾಲೆಬ್ರಾಕಿ ನಿರ್ವಹಿಸಿದ ಕಾರ್ಯ ಭಾರತೀಯ ಶಾಸ್ತ್ರ ಸಾಹಿತ್ಯ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ಸಂಸ್ಕೃತ ವಿದ್ವತಿನ ಕ್ಷೇತ್ರದಲ್ಲಿ ವಿಮರ್ಶಾತ್ಮಕ ವಿದ್ವತ್ತಿನ ಅಡಿಪಾಯ ಹಾಕಿತು. ೧೮೭೭ರಲ್ಲಿ ವಸೆಲ್ ಸಂಪಾದನೆಯ ಕಾಳಿದಾಸ ಶಕುಂತಲ ಹಾಗೂ ೧೯೩೬ ಆಯಟ್‌ವಿಗ್ ಅಲ್ಸಡಾರ್ಫ್ ಪುಷ್ಪದಂತಹ ಹರಿವಂಶ ಪುರಾಣವನ್ನು ಮೂರು ಹಸ್ತಪ್ರತಿಗಳ ಆಧಾರದಿಂದ ವಿಮರ್ಶಾತ್ಮಕ ಸಂಸ್ಕರಣಕ್ಕೆ ಅಳವಡಿಸಿದನು. ೧೯೦೧ರಲ್ಲಿ ಸ್ಟೇನೆಕೊಗೆ ಸಂಪಾದಿಸಿ ರಾಜಶೇಖರನ ಕರ್ಪೂರದ ಮಂಜರಿ ಈ ನಿಟ್ಟಿನಲ್ಲಿ ಹೆಸರಿಸುವಂಥವು. ಮಹಾಭಾರತದ ಸಂಪಾದನೆಗೆ ದೊಡ್ಡ ಯೋಜನೆ ರೂಪಿಸಿದ ವಿ.ಎಸ್. ಸುಕ್ತಂಕರ ಅವರು ಆಪರ್ವದ ಮೊದಲೆರಡು ಅಧ್ಯಾಯಗಳನ್ನು ಅರವತ್ತು ಹಸ್ತಪ್ರತಿಗಳ ಆಧಾರದ ಮೇಲೆ ಸಂಸ್ಕರಿಸಿದರು. ಆ ಮೂಲಕ ಆರಂಭವಾದ ಭಾರತೀಯ ಗ್ರಂಥಸಂಪಾದನೆ ವೈದಿಕ ಮೂಲದಿಂದ ಪ್ರಾರಭವಾದದನ್ನು ಇಲ್ಲಿ ಗಮನಿಸಬಹುದು.

ಕನ್ನಡದ ಸಂದರ್ಭಕ್ಕೆ ಬಂದರೆ ಮೊಂಗ್ಲಿಂನ್ ಅವರಿಂದ ಸಂಪಾದಿತವಾದ ಬಿಬ್ಲಿಯೋಥಿಕಾ ಕರ್ನಾಟಕ ಮಾಲೆಯಲ್ಲಿ ಮೊದಲ ಬಾರಿಗೆ ಪ್ರಕಟವಾದ ಕೃತಿಗಳು ಗಮನಾರ್ಹವಾದವು. ಕುಮಾರವ್ಯಾಸ ಭಾರತದ ವಿವಿಧ ಪರ್ವಗಳು, ದಾಸರ ಪದಗಳು ಇವೆಲ್ಲ ಸಮುದಾಯದೊಳಗೆ ಗಮಕದ, ಪ್ರವಚನ, ಪುರಾಣ, ಕೀರ್ತನೆ ಹಾಗೂ ಭಜನೆಗಳ ರೂಪದಲ್ಲಿ ಆಚರಣೆಯಲ್ಲಿದ್ದವು. ಅಂದರೆ ಲಿಖಿತ ಕಾವ್ಯಗಳು ಸ್ಥಿರ ಪಠ್ಯಗಳಾಗಿ ಪ್ರಚಲಿತವಾಗಿರದೇ ಚರಪಠ್ಯಗಳಾಗಿ ಬಳಕೆಯಲ್ಲಿದ್ದವು. ಆನಂತರ ಇವನ್ನು ಶುದ್ಧ ಶಾಸ್ತ್ರೀಯ ಎನ್ನುವ ಪರಿಕಲ್ಪನೆಯಲ್ಲಿ ಪರಿಷ್ಕರಿಸಲಾಯಿತು. ಬಹುಮುಖ್ಯವಗಿ ಪೌರಾತ್ಯ ಮತ್ತು ಪಾಶ್ಚಾತ್ಯ ಗ್ರಂಥ ಸಂಪಾದನೆ ವಿದ್ವಾಂಸರಲ್ಲಿ ಕಂಡುಬರುವ ಸಾಮಾನ್ಯ ಗುಣಲಕ್ಷಣವೆಂದರೆ ಧರ್ಮಾಧಾರಿತವಾದ ಹಿಂದೂ, ಕ್ರೈಸ್ತ ಸಾಹಿತ್ಯದ ಸಂಪಾದನ ವಿಧಾನಗಳನ್ನು ಸೃಷ್ಟಿಸಿದ್ದು ಮತ್ತು ಬೆಳೆಸಿದುದನ್ನು ಕಾಣಬಹುದು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಘದಿಂದ ಪ್ರಕಟವಾದ ದಾಸಸಾಹಿತ್ಯ ಸಂಪುಟಗಳನ್ನ ಗಮನಿಸಿ ಹೇಳುವುದಾದರೆ ಕಿರ್ತನೆ, ಸುಳಾದಿ, ಉಗಾಭೋಗಗಳನ್ನು ಮಧ್ವಮತ ತತ್ವಗಳ ಹಿನ್ನೆಲೆಯಲ್ಲಿ ವಿಭಾಗಿಕರಿಸಿ ಸಂಪಾದಿಸಲಾಗಿದೆ. ಮದ್ವಮತ ತತ್ವಗಳನ್ನು ಭೋದಿಸುವ ಹಾಗೂ ಅನ್ಯಮತ ತತ್ವಗಳನ್ನು ಖಂಡನೆ ಮಾಡಿದ ಕಿರ್ತನೆಗಳು ಗೋಪಾಲದಾಸರಂತಹ ಹಲವು ಮಂದಿ ದಾಸರಲ್ಲಿ ರಚನೆಯಾಗಿರುವುದನ್ನ ದಾಸ ಸಾಹಿತ್ಯದ ವಿದ್ವಾಂಸರಾದ ಟಿ.ಎನ್. ನಾಗರತ್ನ ಅವರೇ ಗುರುತಿಸುತ್ತಾರೆ.

ದಾಸಸಾಹಿತ್ಯ ಮಾಲೆಯ ಮೊದಲ ಪ್ರಕಟಣೆಯಾದ ಜಿ. ವರದರಾಜರಾವ್ ಅವರ ಶ್ರೀಪಾದರಾಜರ ಕೃತಿಯಲ್ಲಿ ಆತ್ಮಶೋಧ, ಭಗವಂತನ ಆರಾಧನೆ, ದ್ವೈತಮತ ತತ್ವ ಪ್ರತಿಪಾದನೆ ಹಾಗೂ ಉಪದೇಶವಾಣಿ ಎನ್ನುವ ಉಪಶೀರ್ಷಿಕೆಗಳಲ್ಲಿ ಕೀರ್ತನ, ಸುಳಾದಿ, ಉಗಾಭೋಗಗಳನ್ನ ಸಂಪಾದಿಸಿ ಕೊಡಲಾಗಿದೆ. ಇದೇ ಮಾದರಿಯನ್ನು ಮುಂದಿನ ಎಲ್ಲ ಸಂಪಾದನೆಗಳಿಗೂ ಅನ್ವಯಿಸಲಾಗಿದೆ.

ಹರಪನಹಳ್ಳಿ ಭಿಮವ್ವನ ರಚನೆಗಳನ್ನು ಟಿ.ಎನ್. ನಾಗರತ್ನ ಅವರು ಕಥಾವಸ್ತು, ವರ್ಣನಾಕುಶಲತೆ, ಸಂಭಾಷಣ ಚತುರತೆ, ತತ್ವ ನಿರೂಪಣೆ, ಭಕ್ತಿಪ್ರತಿಪಾದನೆ, ಸಂಪ್ರದಾಯ ಪ್ರಿಯತೆ, ದಶಾವತಾರ ವರ್ಣನೆ, ತಿರ್ಥಕ್ಷೇತ್ರಗಳು, ವಿಶಿಷ್ಟಹಾಡುಗಳು ಎಂದು ವಿಂಗಡಿಸಿರುವಲ್ಲಿ ವೈದಿಕ ಅದರಲ್ಲಿಯ ಮಧ್ವಸಿದ್ಧಾಂತಗಳನ್ನು ಪುನರುಜ್ಜಿವನಗೊಳಿಸುವ ಆಲೋಚನೆಯನ್ನು ಕಾಣುತ್ತೇವೆ. ಪ್ರತಿ ಹಾಡು ಅದರಲ್ಲಿನ ಸಂಗತಿಗಳಿಗೆ ಅವರು ಕೊಡುವ ಕಥಾಕೋಶದಲ್ಲಿ ಈ ಧೋರಣೆಯನ್ನು ನಿಚ್ಚಳವಾಗಿ ಕಾಣಬಹುದು. ಇಂತಹ ಹಲವು ಸಂಗ್ರಹ ಸಂಪಾದನೆಗಳನ್ನು ಗಮನಿಸಿದಾಗ ದಾಸಸಾಹಿತ್ಯ ಧರ್ಮಸಾಹಿತ್ಯವಾಗುವ ಕಡೆ ವಾಲಿದ ಸಂಗತಿಗಳು ಗೋಚರವಾಗುತ್ತವೆ. ಆಧುನಿಕ ಕಾಲದಲ್ಲಿಯೂ ಕುಮಾರವ್ಯಾಸ ಲಕ್ಷ್ಮೀಶ, ಕುಮಾರ ವಾಲ್ಮಿಕಿ, ಹರಿದಾಸರು ಇವರರನ್ನು ವೈದಿಕ ಧೋರಣೆಯಲ್ಲಿಯೇ ಓದುವುದು ಕಾಣುತ್ತದೆ. 'ಹರಿದಾಸ ಸಾಹಿತ್ಯ' ಎನ್ನುವಲ್ಲಿಯೇ ದಾಸಸಾಹಿತ್ಯವನ್ನು ಧರ್ಮನಿಷ್ಠಗೊಳಿಸುವ ಉದ್ದೇಶ ಸ್ಪಷ್ಟವಾಗಿದೆ.

೫.೪. ಮತಾತೀತ ಅಧ್ಯಯನಗಳು

ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಈ ಎರಡು ಕ್ಷೇತ್ರಗಳಲ್ಲಿ ನಡೆಸಿದ ಹಿರಿಯರ ಅಧ್ಯಯನವನ್ನು ಗಮನಿಸುವಾಗ ಕಾಣುವ ಸಾಮಾನ್ಯ ಸಂಗತಿಗಳೆಂದರೆ ಗ್ರಂಥಸಂಪಾದನ ವಿಧಿ ವಿಧಾನ ಮತ್ತು ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಮತ್ತು ಸೂಚಿಕರಣ ಬಗೆಗೆ ನಡೆದಂತಹ ಕೆಲವು ಚರ್ಚೆಗಳು, ಈಗಾಗಲೇ ಸಾಹಿತ್ಯ ಮತ್ತು ಸಂಪಾದಿತ ಕೃತಿಗಳಲ್ಲಿ ಬಂದ ವಿಚಾರಗಳನ್ನೆ ಮತ್ತೆ ಆಶ್ರಯಸಿದ್ದು ಕಂಡುಬರುತ್ತವೆ. ಅಲ್ಲದೆ ಶುದ್ಧಪಾಠ, ಪ್ರಮಾಣೀಕೃತ ಪಠ್ಯ, ಉನ್ನತ ವಿಮರ್ಶೆ ಹಾಗೂ ಎನ್ನುವ ಪರಿಕಲ್ಪನೆಗಳ ಮಟ್ಟಕ್ಕೆ ಈ ರೀತಿಯ ಚರ್ಚೆಗಳು ಸೋತು ನಿಂತಿದ್ದು ಎದ್ದು ಕಾಣುತ್ತದೆ.

ಕನಡ ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆಗೆ ಹೊಸ ಹಾಗೂ ಮತಾತೀತ ಆಯಾಮ ನೀಡಿದವರಲ್ಲಿ ಎಲ್. ಬಸವರಾಜು, ಜಿ.ಕೆ. ಹಿರೇಮಠ ವೈ.ಸಿ. ಭಾನುಮತಿ, ವೀರೇಶ ಬಡಿಗೇರ, ಪ್ರಮುಖರು. ಅಲ್ಲಮನ ವಚನ ಚಂದ್ರಿಕೆ, ಶಿವದಾಸ ಗೀತಾಂಜಲಿ ಸರಳ ಗದ್ಯಾನುವಾದಗಳು ಎಲ್. ಬಸವರಾಜು ಅವರು ಸಂಪಾದನೆಯ ವಿಭಿನ್ನ ಕೃತಿಗಳು. ಆ ಪಠ್ಯದ ಪರಂಪರೆಯನ್ನು ಚಾರಿತ್ರಿಕ ಸಂದರ್ಭವನ್ನು ಸಾಂಸ್ಕೃತಿಕ ಮಹತ್ವವನ್ನು ಹೇಳುವುದು

ಒಂದಾದರೆ ತಾಂತ್ರಿಕವಾಗಿ ಪಾಠಗಳನ್ನು ನೀಡುವುದು, ಆಕಾರಾದಿ ಮಾಡುವುದು, ನುಡಿಗಟ್ಟುಗಳಿಗೆ ಅರ್ಥ ನೀಡುವುದು, ಶಬ್ದಕೋಶ ಮತ್ತು ಕೆಲವೆಡೆ ಪಠ್ಯವನ್ನು ವಿವರಿಸುವುದು ಮುಂತಾದ ಕಡೆ ಅವರ ವಿದ್ವತ್ ಒಡೆದು ಕಾಣುತ್ತದೆ.

ಹಸ್ತಪ್ರತಿಗಳ ಅಧ್ಯಯನ, ಸಂಗ್ರಹ, ಹಾಗೂ ಸಂಪಾದನೆಯನ್ನು ಅನೇಕ ವಿದ್ವಾಂಸರೂ ಧಾರ್ಮಿಕ ನೆಲೆಯಲ್ಲಿ ಅಧ್ಯಯನಿಸುತ್ತ ಬಂದಿದ್ದರೂ ಅಲ್ಲಲ್ಲಿ ಕೆಲವು ವಿದ್ವಾಂಸರು ಮತಾತೀತ ನೆಲೆಯಲ್ಲಿ ಹಸ್ತಪ್ರತಿ ಸಂರಕ್ಷಣೆ ಅಧ್ಯಯನ ಸಂಪಾದನೆ, ಮಾಡಿದ್ದನ್ನು ನೋಡಬಹುದು ಬಿ.ಕೆ. ಹಿರೇಮಠ ಅವರ 'ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ ಕೃತಿಯು ಹಸ್ತಪ್ರತಿಗಳನ್ನು ಮೊದಲಬಾರಿಗೆ ಮತಾತೀತವಾಗಿ ಅಧ್ಯಯನಿಸಿದ ಪುಸ್ತಕವಾಗಿದೆ. ಹಸ್ತಪ್ರತಿಗಳ ಕಲಾ ವಿನ್ಯಾಸ, ಕುಶಲಕರ್ಮಿಗಳ ಸಂಸ್ಕೃತಿ, ಹಸ್ತಪ್ರತಿಗಳ ಪಾಲನೆ, ಪೋಷಣೆ ದೃಷ್ಟಿಗಳನ್ನು ಜಾತ್ಯತೀತ ಹಸ್ತಪ್ರತಿಗಳ ಕಲಾ ವಿನ್ಯಾಸ, ಹಸ್ತಪ್ರತಿಗಳ ಬರಹ ವಿನ್ಯಾಸ, ಚಿತ್ರಕಲಾ ವಿನ್ಯಾಸ ಎಂದು ವರ್ಗೀಕರಿಸಿ ಹಸ್ತಪ್ರತಿಗಳು ಮತಾತೀತವಾಗಿ ಬೆಳೆದು ಬಂದ ರೀತಿಯನ್ನು ವಿವರಿಸಲಾಗಿದೆ.

ವೀರೇಶ ಬಡಿಗೇರ ಅವರ 'ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು', 'ಹಲಗೆ ಬಳಪ', 'ಹಸ್ತಪ್ರತಿ ಸಂಕಥನ', 'ಕೃತಿ ಪ್ರತಿ ಸಂಸ್ಕೃತಿ', 'ಕನ್ನಡ ಹಸ್ತಪ್ರತಿಗಳ ಮೌಖಿಕ ಸಂಕಥನ', 'ಜಲಶಾಸ್ತ್ರದ ಹಸ್ತಪ್ರತಿಗಳು ದೇಸಿ ವಿವೇಕ' ಎಂಬ ಅಧ್ಯಯನ ಕೃತಿಗಳು 'ಕನ್ನಡ ಹಸ್ತಪ್ರತಿಗಳೆಂದರೆ ಅವು ಸಮಾಜದ ಸೃಷ್ಟಿಶೀಲ ಉತ್ಪನ್ನಗಳ ಸೃಜನಶೀಲ ವಿಸ್ತರಣೆಗಳಾಗಿವೆ. ಕನ್ನಡ ಸಮಾಜವು ತನ್ನ ಕವಿ, ಲಿಪಿಕಾರ, ಓದುಗ, ಪೋಷಕ ಹಾಗೂ ಕಲಾವಿದರಿಂದ ಆಯಾ ಸಾಂಸ್ಕೃತಿಕ ಸಂದರ್ಭದ ಅಗತ್ಯಕ್ಕಾಗಿ ಹುಟ್ಟಿಕೊಂಡವು. ಧರ್ಮ, ಮತ, ಜಾತಿ, ಲಿಂಗ, ಎನ್ನುವ ಮನುಷ್ಯ ನಿರ್ಮಿತ ಮಿತಿಗಳನ್ನು ಮೀರಿ ಬೆಳೆದಿರುವ ಅವುಗಳ ಜನಪ್ರಿಯತೆ ಮತ್ತು ಜನಾದರಣೀಯ ಸತ್ಯವಾಗಿದೆ. ದೊರಕುವ ಕನ್ನಡ ಹಸ್ತಪ್ರತಿಗಳೆಲ್ಲವೂ ವೈವಿಧ್ಯ ಅಥವಾ ವೈರುಧ್ಯ ತುಂಬಿದ ಸಾಮಾಜಿಕ ರಚನೆಯ ಪ್ರತಿಕವಾಗಿದೆ. ಎಂಬುದು ವೀರೇಶ ಬಡಿಗೇರ ಅವರು ಸ್ಪಷ್ಟ ನಿಲುವು. ಕೆ. ರವೀಂದ್ರನಾಥ ಅವರ 'ಹಸ್ತಪ್ರತಿಗಳಲ್ಲಿ ಕನ್ನಡಿಗರ ಬದುಕು' ಕೃತಿಯಲ್ಲಿ ಹಸ್ತಪ್ರತಿಯ ಸಿದ್ಧತೆಯಲ್ಲಿ ಒಂದು ಜನಸಮುದಾಯದ ಕಲಾಬದುಕು ಅದರಲ್ಲಿಯ ಜ್ಞಾನವನ್ನು ಪ್ರಸರಿಸುವ ಲಿಪಿಕಾರರ ವೃತ್ತಿ ಬದುಕು, ಪೋಷಕರ ಸಂರಕ್ಷಣಾ ಬದುಕಿನ ವಿವಿಧ ಮುಖಗಳನ್ನು ಕುರಿತು ಮತಾತೀತವಾಗಿ ಅಧ್ಯಯನ ಮಾಡಿದ್ದಾರೆ. ಹಾಗೂ ಎಫ್.ಟಿ. ಹಳ್ಳಿಕೇರಿ ಅವರ ಕಂಠಪತ್ರದಂತ ಅಧ್ಯಯನಗಳು ಕೂಡ ಸಮಾಜ ಜನಬದುಕು ಮತ್ತು ಸ್ಥಳೀಯ ಜ್ಞಾನದ ಮಹತ್ವದ ಕಡೆ ನಮ್ಮ ಗಮನ ಸೆಳೆಯುತ್ತವೆ.

ಈ ಹಿಂದೆ ನಡೆದ ಅಧ್ಯಯನಗಳ ಸಕಾರಾತ್ಮಕ ನೆಲೆಗಳನ್ನು ಗ್ರಹಿಸುವ ಮತ್ತು ಇರುವ ಕೊರತೆಗಳನ್ನು ತುಂಬಿಕೊಳ್ಳುವುದಕ್ಕಾಗಿ ಹಸ್ತಪ್ರತಿಶಾಸ್ತ್ರವನ್ನು ಮರು ವಿವೇಚನೆಗೊಳಪಡಿಸುವ

ಅಗತ್ಯತೆಯಿದೆ. ನಮ್ಮ ಕಾಲದ ಶೈಕ್ಷಣಿಕ ಹಾಗೂ ಸಾಮಾಜಿಕ ಆತಂಕ ಮತ್ತು ಅವಶ್ಯಕತೆಗಳನ್ನು ನಿವಾರಿಸಿಕೊಳ್ಳಲು ಹೊಸ ತಾತ್ವಿಕ ಸಿದ್ಧತೆ ಮಾಡಿಕೊಳ್ಳುವ ತುರ್ತು ಎದುರಾಗಿದೆ. ಕನ್ನಡ ಹಸ್ತಪ್ರತಿಗಳೆಂದರೆ ಒಟ್ಟು ಕನ್ನಡದ ಜನ ಬದುಕಿನ ಪ್ರತೀಕಗಳು. ಇವುಗಳ ಅಧ್ಯಯನವೆಂದರೆ ಕನ್ನಡ ಪರಂಪರೆ, ಕನ್ನಡ ಮನಸ್ಸುಗಳ ಹಾಗೂ ಕನ್ನಡ ಸಮಾಜವೊಂದರ ಅಧ್ಯಯನವೇ ಆಗಿದೆ. ಈ ಅಧ್ಯಯನಗಳು ಪ್ರಭುತ್ವ, ಮತೀಯ ನೆಲೆಗಳನ್ನು ಮೀರಿ ನಡೆದಂತಹ ಅಧ್ಯಯನಗಳಾಗಿದ್ದು, ಹೊಸಕಾಲದ ಕನ್ನಡ ತಿಳುವಳಿಕೆಗೆ ಹೊಸ ಪರಿಪ್ರೇಕ್ಷ್ಯೆಯೊಂದನ್ನು ಕಟ್ಟಿಕೊಳ್ಳುವ ಪ್ರಯತ್ನಗಳಾಗಿವೆ.

'ಒಟ್ಟಾರೆಯಾಗಿ 'ಕನ್ನಡ ಹಸ್ತಪ್ರತಿಗಳು ವಿರೇಶ ಬಡಿಗೇರರ ಮಾತಿನಂತೆ ಸಂಯೋಜಿತ ಜ್ಞಾನ ಪರಂಪರೆಯ ಮಾದರಿಗಳು'[೨೫] ಇದರೊಳಗಿನ ತಿಳಿವಳಿಕೆ ಬಹುಕೇಂದ್ರಿತವಾದದ್ದು. ಈ ಜ್ಞಾನ ಪರಂಪರೆಯ ಬಹುಮುಖ್ಯ ಗುಣವೆಂದರೆ ಜ್ಞಾನದ ಸೃಷ್ಟಿ ಮತ್ತು ಕಟ್ಟುವಿಕೆ ಸಂಯೋಜಿತ ಸ್ವಭಾವದ ಈ ಗುಣ ಒಂದು ಅಖಂಡ ಚರಿತ್ರೆಯ ಶೋಧವಾಗಿದೆ. ಹಾಗೆ ಇದಕ್ಕೆ ಸಾಮುದಾಯಕ ಜವಾಬ್ದಾರಿಯೂ ಇರುತ್ತದೆ ಎನ್ನುವುದು ಬಹುಮುಖ್ಯ ವಿಚಾರ.

ಇಂಥ ಸಾಮುದಾಯಿಕ ಪ್ರಜ್ಞೆಯ ತಿಳುವಳಿಕೆಯನ್ನು ವ್ಯಕ್ತಿ, ಪ್ರಜ್ಞೆಯ ಖಾಸಗೀತನಗಳು ಹಾಗೂ ಸಾಂಸ್ಥಿಕ ಪ್ರಜ್ಞೆಯ ಮತಧರ್ಮಗಳು ಆಳುತ್ತ ಬಂದವು. ಕನ್ನಡ ಸಾಹಿತ್ಯ ಚರಿತ್ರೆ ಇದಕ್ಕೆ ಜ್ವಲಂತ ನಿದರ್ಶನ. ಇದರಿಂದಾಗಿ ಸಾರ್ವತ್ರಿಕ ಮತ್ತು ಸಾಂಸ್ಕೃತಿಕ ಚಹರೆಯನ್ನುಳ್ಳ ಸಾಹಿತ್ಯ ಪರಂಪರೆ ನಿರ್ದಿಷ್ಟ ಮತಧರ್ಮ ಮನೋಧರ್ಮದ ನೆಲೆಯಲ್ಲಿ ಓದಲ್ಪಟ್ಟಿತು. ಪವಿತ್ರ ಮತ್ತು ಶ್ರೇಷ್ಠತೆಯ ಸೋಂಕು ತಗುಲಿತು. ಸಾಹಿತ್ಯ ಮತ್ತು ಅಸಾಹಿತ್ಯ ಪಂಡಿತ ಮತ್ತು ಪಾಮರ ಎನ್ನುವ ಶ್ರೇಣೀಕರಣಗಳು ರೂಪುಗೊಂಡವು. ಇಂದಿನ ಪ್ರಕಟಿತ ಕನ್ನಡ ಸಾಹಿತ್ಯದ ಸ್ವರೂಪದಲ್ಲಿಯೂ ಈ ಸಂಗತಿಗಳನ್ನು ಢಾಳಾಗಿ ಕಾಣಬಹುದು.

ಮತ ಮತ್ತು ಧಾರ್ಮಿಕ ಎನ್ನುವ ನಿರ್ದಿಷ್ಟ ಮನೋಧರ್ಮಗಳು ನಿರ್ದಿಷ್ಟ ಹಸ್ತಪ್ರತಿಯೊಂದನ್ನು ಬಹುಪಠ್ಯಗಳಿಗೆ ಕಾರಣವಾಗಿಸಿದರೆ ತನ್ನದಲ್ಲದ ಪಠ್ಯವನ್ನು ಅಷ್ಟೇ ಪ್ರಮಾಣದಲ್ಲಿ ಮತ್ತೊಂದು ಬಗೆಯ ಉಪೇಕ್ಷೆಗೂ ಕಾರಣವಾಗುತ್ತದೆ. ಇಡೀ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಚರಿತ್ರೆಯ ಪ್ರಕ್ರಿಯೆಗಳು ಹೆಚ್ಚಾಗಿ ವೈದಿಕ ರೂಪದ ಶಾಸ್ತ್ರೀಯ ಹಿಂದೂವಾದದ ಒಳಗೇ ನಡೆದ ಸೈದ್ಧಾಂತಿಕ ಚರ್ಚೆಗಳಾಗಿ ಕಾಣುತ್ತವೆ. ಧರ್ಮ ಮತ್ತು ಸಾಹಿತ್ಯದ ಸಂದರ್ಭ ಕೆಲಸಲ ಅಂತಿಮವಾಗಿರದಿದ್ದರೂ, ಅದೇ ಅಂತಿಮ ಎನ್ನುವಂತೆ ಉತ್ಪ್ರೇಕ್ಷೆಗೊಳಿಸಲಾಗಿದೆ. ಆಧುನಿಕ ಪೂರ್ವ ಸಾಹಿತ್ಯದ ಅಧ್ಯಯನ ಸಂಸ್ಕೃತದ ಹಂಗಿನಲ್ಲಿ ನಡೆದರೆ, ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ಅದು ಐರೋಪ್ಯ ಮಾದರಿಯಲ್ಲಿ ನಡೆಯಿತು. ಹೀಗೆ ಕನ್ನಡ ಭಾಷೆ ಮತ್ತು ಸಮಾಜ ಮೊದಲಿನಿಂದಲೂ ರಾಜಪ್ರಭುತ್ವ, ಪಾಳೆಗಾರಿಕೆ,

ಪುರೋಹಿತಶಾಹಿ, ವಸಾಹತುಶಾಹಿ ಪ್ರಭಾವಗಳಿಗೆ ಒಳಗಾಗುತ್ತ, ವಿರೋಧಿಸುತ್ತ ಬೆಳೆಯುತ್ತ ಬಂದಿವೆಯಾದರೂ ನಮ್ಮದಲ್ಲದ ಭಾಷೆ, ಸಂಸ್ಕೃತಿ, ಓದು, ಬರಹ ಅಧ್ಯಯನದ ವ್ಯಾಮೋಹದಿಂದ ನಾವು ಮುಕ್ತರಾಗಿಲ್ಲ. ಸಾಮಾನ್ಯವಾಗಿ ಭಾಷೆಯ ಆಯ್ಕೆ ಮತ್ತು ಬರವಣಿಗೆ ಎಂದರೆ ಪ್ರಾಕೃತಿಕ ಮತ್ತು ಸಾಮಾಜಿಕ ಪರಿಸರಗಳ ಜೊತೆ ತಮ್ಮ ಸಂಬಂಧವನ್ನು ಜನ ತಾವೇ ವ್ಯಾಖ್ಯಾನಿಸಿಕೊಳ್ಳುವುದೇ ಆಗಿರುತ್ತದೆ. ಹೀಗೆ ಬರವಣಿಗೆಯ ಸಂಸ್ಕೃತಿಯ ರೂಪಧಾರಣೆಯಾಗಿರುತ್ತದೆ. ಯಾಕೆಂದರೆ ಬರವಣಿಗೆ ಲಿಪೀಕರಣ ಎನ್ನುವುದು ಶ್ರಮ ಪ್ರಧಾನವಾದ ಕ್ರಿಯೆ. ಭಾರತೀಯ ಸಂಸ್ಕೃತಿಯಲ್ಲಿ ಮಾತು ಮತ್ತು ಮೌನ ಹಾಗೂ ಬುದ್ಧಿಗೆ ಇದ್ದ ಪಾವಿತ್ರ್ಯವನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಇಂದಿನ ಬಹುಮುಖಿ ಅಧ್ಯಯನದ ಪ್ರೇರಣೆಗಳು ಹಾಗೂ ಮಾದರಿಗಳು ಹಸ್ತಪ್ರತಿಗಳೊಳಗೆ ಅಡಗಿದ ಕನ್ನಡ ಸಾಹಿತ್ಯ ಸಂಸ್ಕೃತಿಗಳನ್ನು ಆ ಮೂಲಕ ಪ್ರಕಟಗೊಂಡ ಸಂಪಾದನಾ ವಿಧಾನಗಳನ್ನು ಹೊಸದಾಗಿ ನಿರ್ವಹಿಸಲು ಒತ್ತಾಯಿಸುತ್ತವೆ.

ಜೈನರು ಶೈವ ಪುರಾಣ ಮತ್ತು ಶೈವ ಕಾವ್ಯವನ್ನು ಅಪ್ಪಿತಪ್ಪಿಯೂ ಜೈನಧರ್ಮ ಪ್ರಸಾರಕ್ಕೆ ಬಳಸಿಕೊಂಡಿಲ್ಲವೆನ್ನುವುದನ್ನು ಗಮನಿಸದಿರಲು ಸಾಧ್ಯವಿಲ್ಲ. ಜೈನರಿಗೆ ಧರ್ಮ ಮತ್ತು ಕಾವ್ಯಧರ್ಮದ ಸಾಮರಸ್ಯ ಸಾಧನೆ ಅನಿವಾರ್ಯವಾಗಿತ್ತು. ಸ್ಥಳೀಯ ಧರ್ಮ ಮತ್ತು ಸ್ಥಳೀಯ ಕಾವ್ಯಗಳೆರಡರಿದ್ದಲೂ ಸ್ಥಳೀಕರನ್ನೂ ದೂರವಾಗಿಸಬೇಕಾಗಿತ್ತು. ಸ್ಥಳೀಯ ಸಿದ್ಧ ಕಾಪಾಲಿಕ ಬೌದ್ಧ, ಅವೇದಿಕ ನಾಥ ಪಂಥಗಳು ಮತ್ತು ಅವುಗಳ ಅಭಿವ್ಯಕ್ತಿಗಳಿಂದ ಸಮೂಹವನ್ನು ದೂರವಾಗಿಸಬೇಕಾಗಿತ್ತು. ಹಾಗಾಗಿ ಧರ್ಮ ಮತ್ತು ಕಾವ್ಯಧರ್ಮವನ್ನು ಸಮರಸಗೊಳಿಸುವ ಸಂಪ್ರದಾಯದ ಮೊದಲಿಗರು ಜೈನರು. ಮುಂದೆ ಬಂದ ವೀರಶೈವರಿಗೂ ಇದೇ ಮಾದರಿ ಒದಗಿ ಬಂತು. ಈ ಎರಡೂ ಪಂಥೀಯರು ಕಾವ್ಯನಿಷ್ಠೆಗಿಂತ ಮತ ನಿಷ್ಠರಾಗಿ ಕಾವ್ಯ ರಚಿಸಿರುವುದೇ ಹೆಚ್ಚು. ವೈದಿಕರಿಗಂತೂ ಇದು ಎಲ್ಲ ರೀತಿಗಳಲ್ಲಿಯೂ ಒದಗಿಬಂತು. ಕಾವ್ಯವೆನ್ನುವುದು ಧಾರ್ಮಿಕ ಫಲಪ್ರಾಪ್ತಿಯ ಮುಕ್ತಿಗೆ ಸಾಧನವಾಗಿ ಸಂಸ್ಕೃತಿ ಕಾವ್ಯ ಮೀಮಾಂಸೆಯ ರಸ ಧ್ವನಿ, ಅಲಂಕಾರ, ಆನಂದಗಳ ಶಸ್ತ್ರಪಡೆಯೊಂದಿಗೆ ಪರಮಾತ್ಮಗೆ ಪರಬ್ರಹ್ಮಕ್ಕೆ ತಲುಪಿಸುವ ರಾಜಮಾರ್ಗವಾಯಿತು. ಜೈನರಲ್ಲಿ ನೇಮಿನಾಥ, ಶರಣರಲ್ಲಿ ಬಸವಣ್ಣ, ವೈದಿಕರಲ್ಲಿ ಕೃಷ್ಣ ಇವರ ಹೊರತಾದ ಕನ್ನಡ ಸಾಹಿತ್ಯದ ಪಠ್ಯೀಕರಣ ಪ್ರಕ್ರಿಯೆ ಹೊಸ ಹೊಳಹುಗಳನ್ನು ನೀಡಬಲ್ಲದು.

ಕನ್ನಡ ಹಸ್ತಪ್ರತಿಗಳು ನೈಪುಣ್ಯತೆ ಹಾಗೂ ಜ್ಞಾನದ ಸಂಘಟಿತ ರೂಪಗಳು. ಅಕ್ಷರ ಪ್ರಧಾನ ಶೈಕ್ಷಣಿಕ ಚಿಂತನೆ ಹಾಗೂ ಅದರ ಘಟಕಗಳು ಇಂಥ ಬಹುಜ್ಞಾನ, ಶಿಸ್ತುಗಳು ಭೌತಿಕ ಹಾಗೂ ಭಾಷಿಕ ರೂಪಗಳ ಕುರಿತು ತಳೆದ ನಿಲುವುಗಳೇ ಮಾಡಿದ ವಿಶ್ಲೇಷಣೆಗಳ

ಏಕಪಕ್ಷೀಯವಾದಂಥವು. ಹಸ್ತಪ್ರತಿಗಳ ಮತ್ತು ಅದರ ಬಹುಮುಖಿ ಪಠ್ಯಗಳ ಕುರಿತು ಗ್ರಂಥ ಸಂಪಾದನ ಶಾಸ್ತ್ರವು ತಳೆದ ನಿಲುವು ಬಹುಮುಖಿ ಜ್ಞಾನದ ಕಲ್ಪನೆಯನ್ನೇ ನಿರಾಕರಿಸಿತು.

'ಅಬ್ಸಲ್ಯೂಟ್' ಆದದ್ದು ವ್ಯಕ್ತವಾಗುವುದು ಏಕವನ್ನು ಮೀರಿದ ಶೂನ್ಯಸ್ಥಿತಿಯಲ್ಲಿ. ಶೂನ್ಯ ಅಥವಾ ನಿರ್ಮಾಣ ಸ್ಥಿತಿಯಲ್ಲಿ ಅನೇಕ ಭಾವಸ್ಥಿತಿಗಳು ಹುಟ್ಟುತ್ತವೆ. ರಚನೆ ಎನ್ನುವುದೇ ಒಂದು ಸ್ವಾಯತ್ತ ಆಕೃತಿ ಅಲ್ಲ. ಹಲವು ಭಿನ್ನ ಭಾವ ಸ್ಥಿತಿಗಳ, ಭಿನ್ನ ಪಠ್ಯಗಳ ನಡುವಿನ ಸಂಬಂಧದ ಜಾಲದಲ್ಲಿಯೇ ಅದರ ಅರ್ಥನಿರ್ಮಿತಿ ಸಂಭವಿಸುತ್ತದೆನ್ನುವುದು ರಾಚನಿಕೋತ್ತರವಾದಿಗಳ ವಾದ. ಇಂಥ ಸೃಜನಶೀಲ ಹುಟ್ಟುವಿಕೆ ಶಾಶ್ವತ ಅಧಿಕೃತ ಹಾಗೂ ಅಪುರುಷೇಯ ಎನ್ನುವ ಮಿಥ್ಯಾ ರಚನೆಗಳನ್ನು ನಿರಾಕರಿಸಿ ರಚನೆಯನ್ನು ಸಾಮುದಾಯಿಕ ಹಾಗೂ ಚಲನಶೀಲ ಪ್ರಕ್ರಿಯೆಯನ್ನಾಗಿ ವಿವರಿಸುತ್ತದೆ. ಕಾರಣ ಕನ್ನಡದಲ್ಲಿ ಪಠ್ಯಗಳಿಲ್ಲ. ಪಠ್ಯದ ಪರಂಪರೆಗಳಿರುವುದು ಗಮನಾರ್ಹ. ಅದು ಬರೀ ಅಕ್ಷರೀಕೃತವಲ್ಲ, ಕಾವ್ಯ, ಚಿತ್ರ, ಶಿಲ್ಪ, ರಂಗಭೂಮಿ, ಚಲನಚಿತ್ರ, ಸಂಗೀತ ಹೀಗೆ ಬಹು ಆಕಾರವುಳ್ಳದ್ದು, ಇದು ಪಠ್ಯದ ಪಾರಂಪರಿಕ ಕಲ್ಪನೆಗಳನ್ನು ಪರಂಪರೆಯ ಬಲದಿಂದ ಯಜಮನಿಕೆ ಮಾಡುವ ಬೌದ್ಧಿಕ ಕೇಂದ್ರಗಳನ್ನು ನಿರಾಕರಿಸಿತು. ಮುಖ್ಯ ಕೇಂದ್ರದಿಂದ ನಿರಾಕರಣಗೊಂಡ ಇಂಥ ಎಷ್ಟೋ ಮೌಖಿಕ ಹಾಗೂ ಲಿಖಿತ ಅಭಿವ್ಯಕ್ತಿಗಳ ಹಿಂದೆ ಲೋಕವನ್ನು ಗ್ರಹಿಸುವ ಹಾಗೂ ಲೋಕ ಸಂವಾದಿಯಾಗುವ ಗುಣವಿದೆ. ಮಾತ್ರವಲ್ಲ, ತಮ್ಮನ್ನು ತಾವು ನೋಡಿಕೊಳ್ಳುವ ಗುಣವೂ ಇದೆ. ಹೀಗೆ ತನ್ನನ್ನು ತಾನು ನೋಡಿಕೊಳ್ಳುವ ಮತ್ತು ಅಂತಹ ತಿಳುವಳಿಕೆಯಿಂದ ಹುಟ್ಟುವ ತಿಳಿವನ್ನು ಬಳಸಿ ತನ್ನನ್ನು ತಾನು ಮಾರ್ಪಡಿಸಿಕೊಳ್ಳುವ ಪ್ರಜ್ಞೆ ಇದೆ. ಲಿಪಿಕಾರಿಕೆ ಪ್ರತೀಕರಣ, ಓದುವಿಕೆ, ಕೇಳುವಿಕೆ ಇವು ಕೇಲವ ಕಲಿಕಾ ಕ್ರಮಗಳನ್ನಾಗಿ ಬರದೆ ಒಂದು ಸಾಂಸ್ಕೃತಿಕ ನೆನಪಿನ ಭಾಗವಾಗಿ ಸ್ವ ಅರಿವಿನ ಕ್ರಿಯೆಗಳಾಗಿ ಬಂದವು ಎಂದು ಗ್ರಹಿಸುವ ಕ್ರಮದಲ್ಲಿಯೇ ಅಗಾಧ ಪಲ್ಲಟ ಸಾಧ್ಯವಾಗುತ್ತದೆ. ಆದರೆ ಸಾಮಂತಶಾಹಿ ಹಾಗೂ ವಸಾಹತುಶಾಹಿಯ ತಿಳುವಳಿಕೆಗಳು ತನ್ನ ಅಭಿವ್ಯಕ್ತಿಯ ಸ್ವರೂಪಕ್ಕಿಂತ ಭಿನ್ನವಾಗಿರುವ ಇಂತ ಸಾವಯವ ಅಭಿವ್ಯಕ್ತಿಯ ರೂಪಗಳನ್ನು ಶುದ್ಧ, ಅಶುದ್ಧ, ಶಿಷ್ಟ-ಪರಿಶಿಷ್ಟ ಪ್ರಮಾಣೀಕೃತ-ಅಧಿಕೃತ ಲಿಖಿತ-ಮೌಖಿಕ, ಕೃತಿ-ಪ್ರತಿ, ಕವಿ-ಲಿಪಿಕಾರ ಎನ್ನುವ ಕೃತಕ ವಿಂಗಡಣೆಯ ಮೂಲಕ ನಿರ್ದಯವಾಗಿ ಅದುಮಿಟ್ಟವು. ಸಂಪಾದನೆಯ ಹೆಸರಿನಲ್ಲಿ ಹೊಸದನ್ನು ಸೃಷ್ಟಿಸದೆ ಇರುವುದನ್ನೇ ಏಕರೂಪ ಸಿದ್ಧಾಂತದ ಮೇಲೆ ಕಟ್ಟಿನಿಲ್ಲಿಸಿದವು. ಆ ಮೂಲಕ ವಿವಿಧ ಮುಕ್ತರೂಪಗಳಲ್ಲಿ ತನ್ನ ಅಗತ್ಯಗಳನ್ನು ಮತ್ತು ಹಕ್ಕೊತ್ತಾಗಳನ್ನು ಮೂಡಿಸುತ್ತಿದ್ದ ವ್ಯಕ್ತಿ ಮತ್ತು ಸಮುದಾಯಗಳ ಅಭಿವ್ಯಕ್ತಿಯ ಕ್ರಮಗಳನ್ನು ಅಂಚಿಗೆ ತಳ್ಳಿ ಅನುತ್ಪಾದಕ ಹಾಗೂ ಅಪ್ರಯೋಜಕವನ್ನಾಗಿಸಿದವು. ಎಲ್ಲವನ್ನು ಏಕದಲ್ಲಿ ಎರಕಹೊಯ್ದು ಪವಿತ್ರೀಕರಿಸುವ ಇಂಥ ವಿಕಲ್ಪದಿಂದ ಬಿಡುಗಡೆಯಾಗುವ

ಮಾರ್ಗಗಳನ್ನು ಇಂದು ದಟ್ಟವಾಗಿ ಹುಡುಕಬೇಕಾಗಿದೆ. ಆ ಮೂಲಕ ಸಂಪಾದನೆ ಮತ್ತು ಸಂಗ್ರಹದ ಹೆಸರಿನಲ್ಲಿ ನಿರಾಕರಿಸಲ್ಪಟ್ಟ ಪ್ರಕ್ಷೇಪಗಳೆನಿಸಿದ ಸಂಗತಿಗಳಿಂದ ಒಂದು ಹೊಸ ಸಾಂಸ್ಕೃತಿಕ ವಾಗ್ವಾದವನ್ನು ಸಾಧ್ಯವಾಗಿಸಿಕೊಳ್ಳಬೇಕಾಗಿದೆ. ಈ ಮೇಲೆ ಚರ್ಚಿಸಿದಂತೆ ಹಸ್ತಪ್ರತಿಗಳ ಅಧ್ಯಯನ ಸಂಗ್ರಹ ಸಂಪಾದನೆಯ ಹೆಸರಿನಲ್ಲಿ ಅನೇಕ ವಿದ್ವಾಂಸರೂ ಕೂಡ ಧಾರ್ಮಿಕ ನೆಲೆಯಲ್ಲಿ ಅಧ್ಯಯನಿಸುತ್ತ ಬಂದಿದ್ದರೂ ಕೂಡ ಧಾರ್ಮಿಕವಾಗಿ ಅಲ್ಲದೆ ನಂಬಿಕೆ ಪ್ರಧಾನವಾಗಿ ಸಾಂಸ್ಕೃತಿಕ ಆಶಯಗಳನ್ನು ಹಸ್ತಪ್ರತಿ ಸಂರಕ್ಷಣೆ ಸಂಪಾದನೆ ಬಹುಮುಖ್ಯ ನೆಲೆಯನ್ನು ಪಡೆದಿವೆ. ಬಿ.ಕೆ. ಹಿರೇಮಠ ಅವರ ಕನ್ನಡ ಹಸ್ತಪ್ರತಿಗಳ ಒಂದು ಅಧ್ಯಯನ, ವೀರೇಶ ಬಡಿಗೇರ ಅವರ ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು, ಹಲಗೆ ಬಳಪ, ಹಸ್ತಪ್ರತಿ ಸಂಕಥನ, ಕೆ. ರವೀಂದ್ರನಾಥ ಅವರ ಹಸ್ತಪ್ರತಿಗಳು ಕನ್ನಡಿಗರ ಬದುಕು, ಎಫ್.ಟಿ. ಹಳ್ಳಿಕೇರಿಯವರ ಕಂಠಪತ್ರ ಹಾಗೂ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವ್ಯಾಸಂಗ ಮತ್ತು ಹಸ್ತಪ್ರತಿ ಅಧ್ಯಯನ ಕೃತಿಗಳು, ಸಾಂಸ್ಕೃತಿಕ ನೆಲೆಯಲ್ಲಿ ಹಸ್ತಪ್ರತಿಗಳಂತಹ ಪ್ರಾಚೀನ ಬರವಣಿಗೆಗೆ ಸಾಧನೆಗಳನ್ನು ಹೊಸ ರೀತಿಯಿಂದ ಬಹುಮುಖಿ ನೆಲೆಯಲ್ಲಿ ವಿಶ್ಲೇಷಿಸಿರುವ ಅಧ್ಯಯನ ಕೃತಿಗಳಾಗಿವೆ.

ಅಡಿಟಿಪ್ಪಣಿಗಳು

೧. ವೀರೇಶ ಬಡಿಗೇರ, ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು, ಪು.೨೬;೨೦೦೬

೨. ಹೀರೇಮಠ ಬಿ.ಕೆ., ಕನ್ನಡ ಹಸ್ತಪ್ರತಿಗಳ ಒಂದು ಅಧ್ಯಯನ, ಪು.೧೧೪;೧೯೯೨

೩. ವೀರೇಶ ಬಡಿಗೇರ, ಹಸ್ತಪ್ರತಿ ವ್ಯಾಸಂಗ–೧೪, ಪು.೭೨;೨೦೧೫

೪. ಅದೇ, ಪು.೧೧೪;೨೦೧

೫. ಅದೇ, ಪು.೧೧೫;೨೦೧

೬. ಅದೇ, ಪು.೧೧೫;೨೦೧

೭. ಉಧೃತ, ಮ್ಯಾಗೇರಿ ಐ.ಜೆ., ಕನ್ನಡ ಹಸ್ತಪ್ರತಿಗಳ ವಿಷಯ ಸಂಪತ್ತು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೨೧.

೮. ಅದೇ, ಪು.೨೨.

೯. ಅದೇ, ಪು.೨೨.

೧೦. ಕಲಬುರ್ಗಿ ಎಂ.ಎಂ., ಉಧೃತ, ಮ್ಯಾಗೇರಿ ಐ.ಜೆ., ಅದೇ, ಪು.೨೩:

೧೧. ನಾಗರಾಜ ಕಿರಂ, ಉಧೃತ, ಮ್ಯಾಗೇರಿ ಐ.ಜೆ., ಅದೇ, ಪು.೨೩;

೧೨. ವೀರಣ ರಾಜೂರ, ಉಧೃತ, ಮ್ಯಾಗೇರಿ ಐ.ಜೆ., ಅದೇ, ಪು.೩೩;

೧೩. ವೈ.ಸಿ.ಭಾನುಮತಿ, ಉಧೃತ ಮ್ಯಾಗೇರಿ ಐ.ಜೆ., ಅದೇ

೧೪. ಉಧೃತ ಮ್ಯಾಗೇರಿ ಐ.ಜೆ., ಅದೇ, ಪು.೨೬.

೧೫. ಕಲಬುರ್ಗಿ ಎಂ.ಎಂ. ಉಧೃತ ಮ್ಯಾಗೇರಿ ಐ.ಜೆ., ಅದೇ, ಪು.೪೧; ೧೯೯೩

೧೬. ವೀರೇಶ ಬಡಿಗೇರ, ಹಸ್ತಪ್ರತಿ ಅಧ್ಯಯನ, ಸಂಚಿಕೆ ೧, ಪು.೮೩; ೨೦೦೩

೧೭. ಅದೇ, ಪು.೮೩

೧೮. ಉಧೃತ, ವೀರೇಶ ಬಡಿಗೇರ ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು, ಪು.೬೮; ೨೦೦೬.

೧೯. ಅಮರೇಶ ನುಗುಡೋಣಿ, ಶ್ಯೂನಸಂಪಾದನೆಗಳು, ಸಾಂಸ್ಕೃತಿಕ ಮುಖಾಮುಖಿ, ಉಧೃತ, ವೀರೇಶ ಬಡಿಗೇರ, ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು, ಪು.೬೯; ೨೦೦೬

೨೦. ಉಧೃತ, ವೀರೇಶ ಬಡಿಗೇರ, ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು, ಪು.೭೨; ೨೦೦೬

೨೧. ನಾಗರಾಜಪ್ಪ ಕೆ.ಜಿ., ಉಧೃತ, ಮ್ಯಾಗೇರಿ ಐ.ಜೆ., ಅದೇ, ಪು.೩೦-೩೧;

೨೨. ಅದೇ, ಪು.೩೦-೩೧;

೨೩. ಅದೇ, ಪು.೩೦-೩೧;

೨೪. ಅದೇ, ಪು.೫೪;

೨೫. ವೀರೇಶ ಬಡಿಗೇರ, ಕನ್ನಡ ಹಸ್ತಪ್ರತಿ ಅಧ್ಯಯನ, ಸಂಪುಟ ೧, ಸಂಚಿಕೆ ೧, ಪೀಠಿಕೆ ಭಾಗ; ೨೦೦೩

ಅಧ್ಯಾಯ: ಆರು

ಶೈಕ್ಷಣಿಕ ಅಧ್ಯಯನಗಳ ತಾತ್ವಿಕತೆ

ಅಧ್ಯಾಯ : ಆರು

ಶೈಕ್ಷಣಿಕ ಅಧ್ಯಯನಗಳ ತಾತ್ವಿಕತೆ

'ಒಂದು ಕೃತಿಯ ಸೃಷ್ಟಿಯೆನ್ನುವುದು ಲೋಕಾನುಭವದ ಕ್ರಿಯೆಯಾಗಿರುತ್ತದೆ. ಅದನ್ನು ಕವಿ ಕೇಂದ್ರಿತ, ಕೃತಿಕೇಂದ್ರಿತ, ಪಠ್ಯಕೇಂದ್ರಿತ, ಜಾತಿ ಕೇಂದ್ರಿತವೆಂದು ನಿರ್ದಿಷ್ಟಗೊಳಿಸಿ, ಜ್ಞಾನ ಹಾಗೂ ಅವರ ಪ್ರತಿನಿಧೀಕರಣಗಳ ಮೇಲೆ ಶೈಕ್ಷಣಿಕ ಚಿಂತನೆಗಳು ಸಾಧಿಸಿರುವ ಪ್ರಾಬಲ್ಯವನ್ನು ಪ್ರಶ್ನೆ ಮಾಡುವುದು ನಮ್ಮ ಇಂದಿನ ಅಧ್ಯಯನಗಳ ಮುಖ್ಯ ಉದ್ದೇಶಗಳಲ್ಲಿ ಒಂದು'.[೧] ಹಸ್ತಪ್ರತಿ ಅಧ್ಯಯನ ಪ್ರಕ್ರಿಯೆಯು ಯಾವುದು ಜ್ಞಾನ, ಯಾವುದು ಜ್ಞಾನವಲ್ಲವೆಂಬ ವಿಂಗಡಣೆಯ ಮತ್ತು ಪ್ರತಿನಿಧೀಕರಣದ ಉದ್ದೇಶದೊಡನೆ ನಡೆದು ಬಂದಿವೆ.

ಮೊದಲನೆಯದಾಗಿ ಈ ಸುದೀರ್ಘ ಕಾಲಮಾನವು ಸಾಹಿತ್ಯ ಕೃತಿಗಳ ಅಧ್ಯಯನಕ್ಕೆ ಬಳಸಿದ್ದು ಉತ್ತರದ ಕಾವ್ಯ ಮಾರ್ಗ, ಉತ್ತರದ ಧರ್ಮ, ಭಾರತೀಯ ಕಾವ್ಯಮೀಮಾಂಸೆಯೆಂಬ ಉತ್ತರದ ಸಂಸ್ಕೃತ ಕಾವ್ಯ ಮೀಮಾಂಸೆ ಮಾದರಿಗಳು. ಇದರಿಂದಾಗಿ ಸ್ಥಳೀಯ ಜೀವನಕ್ರಮ ಮತ್ತು ಮೀಮಾಂಸೆಗಳ ನಿರಾಕರಣೆಗೆ ಸುಲಭದ ದಾರಿಯೊಂದು ಸೃಷ್ಟಿಯಾಯಿತು. ಈ ಉತ್ತರದ ಯಾಜಮಾನ್ಯ ಇಂದಿಗೂ ನಿರಂತರವಾಗಿ ಮುಂದುವರಿದೇ ಇದೆ. ಕನ್ನಡದ ನಿಜ ಚಹರೆಗಳನ್ನು ಕಾಣಲು ಇವುಗಳನ್ನು ದಾಟಲೇಬೇಕಾದ ಅನಿವಾರ್ಯ ಇವತ್ತಿಗೂ ಇದೆ.

ಎರಡನೆಯದಾಗಿ ಪಠ್ಯವೆನ್ನುವುದಕ್ಕೆ ಮೂಲವೊಂದಿದೆಯೆನ್ನುವ ಮೀಮಾಂಸಾ ಪರಿಕಲ್ಪನೆ. ಕನ್ನಡದಲ್ಲಿ ಪಠ್ಯವೆನ್ನುವುದೊಂದು ಪ್ರಕ್ರಿಯೆ. ಅದು ಕವಿಯ ಸಾಪೇಕ್ಷ ಪಠ್ಯ. ಅದು ಮಂಡಿತವಾಗುತ್ತಿರುವ ಆವರಣ ಮತ್ತು ಕೇಳುಗ ಇವರ ಸಂಯೋಜನೆಯಲ್ಲಿ ಉಂಟಾಗುವ ಪರಿಣಾಮ. ಇದಿಷ್ಟೂ ಸೇರಿದ್ದು ಪಠ್ಯ. ಹಾಗಾಗಿ ಸ್ಥಿರ ಪಠ್ಯವೆನ್ನುವುದು ಅಸಂಭವ ಎಲ್ಲವೂ ಹೊಸದಾಗಿ ವಿರಚನೆಯಾಗುತ್ತಲೇ ಇರುತ್ತವೆ. ಈ ಪ್ರವಾಹರೂಪೀ ಪಠ್ಯದ ಸಂವಹನದ ಅನೇಕ ಮಾದರಿಗಳು ಕನ್ನಡದಲ್ಲಿ ಸಿಗುತ್ತವೆ.

'ನಿಜವಾಗಿ ಪಠ್ಯವೆನ್ನುವುದು ಕೇಳುಗನ ತುದಿಯಲ್ಲಿ ಜನ್ಮತಾಳುತ್ತದೆ. ಹಾಗಾದರೆ ವಾಕ್ ಪರಂಪರೆಯಲ್ಲಿ ಇದನ್ನು ಹೇಗೆ ನಿರ್ವಹಿಸಲಾಗಿದೆ ಎನ್ನುವುದು ಕುತೂಹಲದ ಸಂಗತಿ. ಮೌಖಿಕ ಸಂಕಥನದ ಅನೇಕ ಮಾದರಿಗಳಿವೆ "ಪದವಿಟ್ಟಳುಪದೊಂದಗ್ಗಳಿಕೆ' ಇಂದು ಮಾದರಿಯಾದರೆ, 'ಕರ್ಣರಸಾಯನಮಲ್ತೆ ಭಾರತಂ'[೨] (ಕೇಳುಗನ ಕಿವಿ ಸಂಸ್ಕಾರಕ್ಕನುಗುಣವಾಗಿ) ಎನ್ನುವುದು ಇನ್ನೊಂದು. 'ಹೇಳತೇನ ಕೇಳ' ಎನ್ನುವುದು ಮತ್ತೊಂದಾದರೆ ಪದವನರ್ಪಿಸಬಹುದಲ್ಲದೆ ಪದಾರ್ಥವನರ್ಪಿಸಲಾಗದು ಎನ್ನುವುದು ಅದಕ್ಕಿಂತ ಉನ್ನತವಾದುದು. ಪಠ್ಯವೊಂದರ ಸಂವಹನ ನಿರ್ದಿಷ್ಟತೆಯ ಕಡೆಯಿಂದ ಹೀಗೆ ಹರಿವ ನದಿಗೆ ಮೈಯೆಲ್ಲಾ ಕಾಲು ಎನ್ನುವಂತೆ ಬಹುತ್ವದ ಕಡೆಗೆ ಹರಿದಿದೆ'.[೩]

ಈ ಲೋಕದಲ್ಲಿಯ ಯಾವುದಕ್ಕೂ ಮೂಲವೆನ್ನುವುದು ಇರಲು ಸಾಧ್ಯವಿಲ್ಲವೆಂಬ ನಿಲುವು ನಮ್ಮ ಲೋಕಾನುಸಂಧಾನದ ಕ್ರಮವನ್ನು ಬದಲಿಸುವುದರ ಜೊತೆಗೆ ಪ್ರಪಂಚದ ಎಲ್ಲವೂ ಸದಾ ಆಗುತ್ತಲೇ ಇರುತ್ತದೆಯೇ ಹೊರತು ಆಗಿ ಇರುವುದಿಲ್ಲ ಎಂಬ ವಿವರಣೆಯನ್ನು ಮುಂದಿಡುತ್ತದೆ. ಲೋಕಸತ್ತೆಯನ್ನು ವಿವರಿಸುವ ಎರಡು ಮಾದರಿಗಳಿವೆ. ಒಂದು ಈ ಲೋಕಸಮಸ್ತವು ಈಗಾಗಲೇ ಆಗಿ ಇದೆ ಎಂದು ವಿವರಿಸುವುದು; ಲೋಕದ ಮೂಲ ಬೇರೆಯೇ ಇದೆ. ನಮ್ಮೆದುರಿಗೆ ಇರುವುದೇನಿದ್ದರೂ ಅದರ ಪ್ರತಿಕೃತಿ ಹಾಗಾಗಿ ಇದು ಮೂಲದ ಶಂಖನಾದಕ್ಕಿಂತ ಕಿಂಚಿದೂನ ಎನ್ನುವ ನಿಲುವು ರಾಜಪ್ರಭುತ್ವಕ್ಕೆ ಹೇಳಿ ಮಾಡಿಸಿದ ನಿಲುವು. ರಾಜಾ ಪ್ರತ್ಯಕ್ಷ ದೇವತಾ ಎಂದು ದೇವರಿಗೆ ಸಮೀಕರಿಸಿಕೊಂಡರೆ ಸಮೂಹದ ನಿರ್ವಹಣೆ ಸುಲಭ. ಆದರೆ ಲೋಕ ವಿವರಣೆಯ ಅನೇಕಾಂತವಾದಿ ದೃಷ್ಟಿಕೋನವು ಪ್ರಜಾಪ್ರಭುತ್ವದ ಪೋಷಕ ಸತ್ವಗಳಲ್ಲಿ ಒಂದು. ಇದಕ್ಕೆ ಪಂಪನ ಎರಡು ಪದ್ಯಗಳನ್ನು ಉದಾಹರಿಸಬಹುದೆನ್ನಿಸುತ್ತದೆ.

'ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ।
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇರು ಕ॥
ರ್ಣನ ಕಡು ನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ।
ರ್ಣನ ಪಡೆ ಮಾತಿನೊಳ್ ಪುದಿದು ಕರ್ಣ ರಸಾಯನಮಲ್ತೆ ಭಾರತಂ'॥[೪]

'ಚಲದೊಳ್ ದುರ್ಯೋಧನಂ ನನ್ನಿಯೊಳಿನಿತನಯಂ ಗಂಡಿನೊಳ್ ಭೀಮಸೇನಂ।
ಬಲದೊಳ್ ಮದ್ರೇಶನತ್ಯುನ್ನತಿಯೊಳಮರ ಸಿಂಧೂದ್ಭವಂ ಚಾಪ ವಿದ್ಯಾ॥
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ
ರ್ಮಲ ಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತ ಲೋಕಪೂಜಂ'[೫]

'ಎರಡೂ ಪದ್ಯಗಳು ಕೇಳುಗರಿಗೆ ನೇರವಾಗಿ ಪಂಪನೆ ಹೇಳುತ್ತಿರುವ ಮಾತುಗಳು. ಈ ಪದ್ಯಗಳಲ್ಲಿ ಮೊದಲನೆಯದು ಪಂಪ ಕರ್ಣಭಾರತ ಮುಗಿದ ಮೇಲೆ ಹೇಳಿದರೆ, ಇನ್ನೊಂದನ್ನು

ಮಹಾಭಾರತ ಮುಗಿದ ಮೇಲೆ ಹೇಳುತ್ತಾನೆ. ಹೌದು ನಿಶ್ಚಿತವಾಗಿ ಇಲ್ಲಿ ಅನೇಕ ಭಾರತಗಳಿವೆ. ಈ ಅನೇಕಗಳು ಅನೇಕಗಳಾಗುತ್ತಲೇ ಹೋಗುವ ಈ ಅನೇಕಾಂತವಾದಿ ದೃಷ್ಟಿಕೋನ ಕನ್ನಡ ಕಾವ್ಯಮೀಮಾಂಸೆಯ ಒಂದು ಪ್ರಮುಖ ದೃಷ್ಟಿಕೋನವೆಂದೇ ನಟರಾಜ್ ಬೂದಾಳು ಅವರು ಹೇಳಿದ್ದಾರೆ[೬] "ಯಾರೂ ಅಮುಖ್ಯರಲ್ಲ" ಎನ್ನುವ ನಿಲುವು ಕನ್ನಡ ಕಾವ್ಯ ಮೀಮಾಂಸೆಯನ್ನು ಕಂಡುಕೊಳ್ಳುವ ಯಾನಕ್ಕೆ ಮೊದಲ ಹೆಜ್ಜೆಯಂತೆ ತೋರುತ್ತದೆ. ಮೀಮಾಂಸೆಯ ನಿಲುವಿನಿಂದಾಗಿ ಹೀಗೆ ಕನ್ನಡಕ್ಕೆ ಹತ್ತಿರವಾದ ಜೈನರು ಕಾವ್ಯ ವಸ್ತುವಿನ ದೃಷ್ಟಿಯಿಂದ ಮತ್ತೊಂದು ತುದಿಗೆ ಸರಿದವರು. ಹಾಗಾಗಿ ಜೈನ ಆವರಣದ ಪಠ್ಯ ರಾಜಕಾರಣ ಅನೇಕ ಪ್ರಶ್ನೆಗಳನ್ನು ಮುಂದು ಮಾಡುತ್ತದೆ.

'ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ವಸ್ತುಕ ಮತ್ತು ವರ್ಣಕದ ನಿರ್ವಹಣೆ ಅತ್ಯಂತ ಮಹತ್ವದ್ದು ಎಂದು "ಎಸ್.ನಟರಾಜ ಬೂದಾಳು ಅಭಿಪ್ರಾಯಿಸಿದ್ದಾರೆ'.[೭] ಈ ಪರಿಕಲ್ಪನೆಗಳಿಗೆ ವಿವಿಧ ಅರ್ಥಗಳನ್ನು ಕಲ್ಪಿಸಿದ್ದಾರೆ. ಆದರೆ ಅವು ನಿರ್ವಹಿಸಲ್ಪಟ್ಟಿರುವ ರೀತಿಯನ್ನು ಗಮನಿಸಿದರೆ ಕಾವ್ಯದ ಪ್ರಧಾನ ಪ್ರತ್ಯಯ ಅಥವಾ ಮೂಲ ಪ್ರತ್ಯಯವನ್ನು ವಸ್ತುಕವೆಂದು ಅದನ್ನು ನಿರ್ವಹಿಸಲು ಬಳಸಿದ ಆವರಣ ಪ್ರತ್ಯಯ ಅಥವಾ ಕಂಡಿಷನ್ ವರ್ಣಕವೆಂದೂ ಗುರುತಿಸಿಕೊಳ್ಳಬಹುದು. ಕಾವ್ಯದ ವಸ್ತು ಮತ್ತು ಆತ್ಯಂತಿಕ ಉದ್ದೇಶ ವಸ್ತುಕವಾದರೆ, ಅದನ್ನು ನಿರ್ವಹಿಸಲು ಬಳಸಿದ ಛಂದಸ್ಸು ಮಟ್ಟು ಭಕ್ತಿ ಸಮಯಾಚರಣೆ ಕುರುಹುಗಳು. ಅವುಗಳ ನಿರ್ವಹಣೆ ಇತ್ಯಾದಿಗಳು ವರ್ಣಕಗಳು ಉಂಟಾಗುವ ಪರಿಣಾಮ ಪಠ್ಯದ ಮೇಲೆಯೇ ಎಲ್ಲರ ಕಣ್ಣು. ಜೈನರ ಅನೇಕಾಂತ ನಿಲುವು ಇಂತಹ ವಿಂಗಡಣೆಗೊಂಡ ಕ್ರಮವನ್ನು ನಿರ್ವಹಿಸಲು ಹೇಳಿ ಮಾಡಿಸಿದ ತಾತ್ವಿಕತೆ ಅವರಿಗೆ ಕಾವ್ಯವೆನ್ನುವುದು ನಿಸ್ಸಂಶಯವಾಗಿ ಒಂದು ಪ್ರಕ್ರಿಯೆ. ಹಾಗಾಗಿ ಪ್ರಕ್ರಿಯ ಮೀಮಾಂಸೆಯ ಕಾರಣ ಪರಿಸ್ಥಿತಿ ಮತ್ತು ಪರಿಣಾಮ ಪ್ರಕ್ರಿಯೆಯನ್ನು ಅವರು ಲೀಲಾಜಾಲವಾಗಿ ನಿರ್ವಹಿಸಬಲ್ಲರು. ಅವರಿಗೆ ಪರಿಣಾಮ ಪಠ್ಯ ಅಥವಾ ಕಾವ್ಯ ಪ್ರಯೋಜನ ಮಾತ್ರ ಅದರೂ ಬಯಸಿದಂತೆ ಸ್ಥಿತವಾದುದು ಅದೇ ಮಾದರಿಯನ್ನು ಅನಿವಾರ್ಯವಾಗಿ ನಂತರದ ಕವಿಗಳು ಬಳಸಿ ಯಶಸ್ಸನ್ನು ಕಂಡರು. ಆದರೆ ಸಹಜಯಾನಿಗಳಾದ ಸ್ಥಳೀಯ ಸಿದ್ಧ ಪರಂಪರೆಗಳಿಗೆ ಸ್ತಿತ ಪರಿಣಾಮವು ಇಲ್ಲಿ ನಿಶ್ಚಿತ ಪ್ರತ್ಯಯವೂ(ವರ್ಣಕವೂ) ಇಲ್ಲಿ ಅಲ್ಲಮನಂತಹವರಿಗೆ ಸಮಯಾಚಾರಗಳಾಗಲೀ ಕುರುಹುಗಳಾಗಲೀ, ಗುರುಲಿಂಗ ಜಂಗಮ ಪರಿಕಲ್ಪನೆಗಳಾಗಲೀ ಯಾವುದೂ ಸ್ಥಿತವಲ್ಲ. ಎಲ್ಲವನ್ನೂ ದಾಟಿದ ನಿರಂತರತೆ ಮಾತ್ರ ಅವರಿಗೆ ಮುಖ್ಯ. ಹಾಗಾಗಿ ಅವರಿಗೆ ಎಲ್ಲವೂ ಅಲ್ಲವೇ ಹಾಗಾಗಿ ಅಷ್ಟಾದಶ ವರ್ಣನೆಗಳು ಈ ನೆಲದ ಅಸಲಿ ಕವಿಗಳಿಗೆ ಸಾಧ್ಯವಿಲ್ಲ.

ಆಧುನಿಕ ಸಂದರ್ಭದ ಲಿಖಿತ ಸಂಸ್ಕೃತಿಯ ನಿರ್ದಿಷ್ಟ ಓದು ಹಾಗೂ ಸಂವಹನ ವಿಧಾನಗಳು ಕನ್ನಡ ಸಾಹಿತ್ಯ ಸಂಸ್ಕೃತಿಯ ವ್ಯಾಖ್ಯಾನವನ್ನು ಕುಗ್ಗಿಸಿದವು ಎನ್ನುವುದು ಇನ್ನೊಂದು

ಪ್ರಮೇಯ. ನಿರ್ದಿಷ್ಟ ಓದು ಪಠ್ಯದ ಬಹುಸ್ತರೀಯತೆಯನ್ನು ನಾಶ ಮಾಡಿದ್ದು ನಿಜ. ಪಂಪನನ್ನು ಈ ನೂರಾ ಹದಿನಾರು ವರ್ಷಗಳ ಓದಿನಲ್ಲಿ ಭಾರತೀಯ ಕಾವ್ಯ ಮೀಮಾಂಸೆಯ ರಸ, ಧ್ವನಿ, ಆನಂದಗಳ ಓದಿಗೆ ಬಗ್ಗಿಸುವ ಬಗ್ಗದೆ ಇದ್ದ ಕಡೆ ಅದನ್ನು ಮುರಿದು ತರಿದು ಬಗ್ಗಿಸುವ ಓದುಗಳು ದೊಡ್ಡ ಪ್ರಮಾಣದಲ್ಲಿ ನಡೆದವು. ಅದಕ್ಕೂ ಬಗ್ಗದೆ ಹೋದಾಗ ಅವನ ಅಜ್ಜನಜ್ಜನ ಕಡೆಯವರು ಬ್ರಾಹ್ಮಣರಾಗಿದ್ದರಿಂದ ವೈದಿಕ ಮೀಮಾಂಸೆಯನ್ನು ಅವನು ತಿರಸ್ಕರಿಸಲು ಸಾಧ್ಯವಿರಲಿಕ್ಕಿಲ್ಲವೆಂಬ ದೂರಾನ್ವಯಗಳೂ ನುಸುಳಿ ಬಂದಿವೆ. ಆದರೆ ಜೈನ ಕವಿಗಳ ಕಾವ್ಯ ಮೀಮಾಂಸೆಯ ನಿಲುವುಗಳಾದ ಅನೇಕಾಂತವಾದ ರೂಪ ನಿರಾಕರಣೆ ದೈವ ನಿರಾಕರಣೆಗಳ ಮೂಲಕ ನಡೆಸಿದ ಓದುಗಳು ತೀರಾ ಕಡಿಮೆ ಅಥವಾ ಇಲ್ಲವೆಂದೇ ಹೇಳಬೇಕು.

ವಚನ ಸಂಗ್ರಹ ಪರಂಪರೆಯ ಹಿಂದೆ ವೀರಶೈವ ದೀಕ್ಷೆಯ ಬಗೆಗಿನ ನಿಲುವು ನಿರ್ಣಾಯಕವಾದದ್ದು. ಆದರೆ ವಚನಗಳ ಈ ಸಾಂಸ್ಥಿಕ ರೂಪವನ್ನು ನಿರಸನಗೊಳಿಸಿದ ಪರಂಪರೆಗಳಾದ ಕೊಡೇಕಲ್ ಬಸವಣ್ಣನ ಪರಂಪರೆ, ಶಿರಹಟ್ಟಿ ಫಕೀರೇಶನ ಪರಂಪರೆ, ಸಾವಳಗಿ ಶಿವಯೋಗಿ ಪರಂಪರೆ, ತಿಂತಿಣಿ ಮಾನಪಯ್ಯನ ಪರಂಪರೆ, ಮಳೆಯ ಮಲ್ಲೇಶನ ಪರಂಪರೆ ಮತ್ತು ಮಂಟೇದಯ್ಯನ ಪರಂಪರೆಗಳಿಗೆ ಇಂತಹ ಬಂಧನಗಳಿಂದ ಹೊರಬರುವುದೇ ಮುಖ್ಯ. ವೀರಶೈವ ದೀಕ್ಷೆಯ ಲಿಂಗವನ್ನು ಹಾಕುವುದರ ಮೂಲಕ ನಡೆದರೆ, ಈ ಪರಂಪರೆಗಳಲ್ಲಿ ಲಿಂಗ ತ್ಯಾಗದ ಮೂಲಕ(ಲಿಂಗವನ್ನು ಕಿತ್ತು ಹಾಕುವ ಮೂಲಕ) ನಡೆಯುತ್ತದೆ. ಮಂಟೇಸ್ವಾಮಿ ಕಲ್ಯಾಣಕ್ಕೆ ಬಂದು ಮಾಡಿದ್ದು ಈ ಲಿಂಗ ವಿಸರ್ಜನೆಯನ್ನೇ, ಕೊಡೆಕಲ್ ಪರಂಪರೆಯವರು ಕೂಡ ಲಿಂಗವಿಲ್ಲದ ಭೋಳ ಜಂಗಮರೇ ಆಗಿದ್ದಾರೆ. ಕೌತಾಳನ ಖಾದರಲಿಂಗನು ಕಾಲಿಗೆ ಲಿಂಗವನ್ನು ಕಟ್ಟಿಕೊಂಡು ಅಲೆದಾಡಿಕೊಂಡು ಹೋಗುತ್ತಾನೆ.

ಇನ್ನು ಹೆಣ್ಣಿನ ಚಿತ್ರಣದ ಕತೆಯೂ ಇದಕ್ಕಿಂತ ಭಿನ್ನವೇನಲ್ಲ. ಹೆಣ್ಣನ್ನಂತೂ ನಿರಾಕೃತ ವಿನ್ಯಾಸಗಳಲ್ಲಿಯೇ ಕಳಿಸಲಾಗಿದೆ. ವಂಚನೆ, ಚಂಚಲತೆ, ಮೋಸಗಳ ಮೂರ್ತ ಆವೃತ್ತಿಯಂತೆಯೇ ಚಿತ್ರಿತವಾಗಿರುವ ಹೆಣ್ಣಿನ ಒಡನಾಟವೆಂದರೆ ಅದು ಅಪಾಯದ ಹೊರತು ಮತ್ತೇನು ಅಲ್ಲ ಎಂದೇ ಬಿಂಬಿಸಲಾಗಿದೆ. ಇಂದುಮುಖಿಯರ ಗುಣವ ತಿಳಿಯಲಸಾಧ್ಯ ನಿತ್ಯದಿ ಹುಸಿಯನಾಡುವರು. ಮನವ ವಂಚಿಸಿ ಮಾತನಾಡುವರು ಇತ್ಯಾದಿಗಳಲ್ಲಿ ಕಟ್ಟಲಾಗಿರುವ ಹೆಣ್ತನದಲ್ಲಿ ಮಾಯೆ ವಂಚಕಿಯೆಂಬ ಅಪಪವಿತ್ರೀಕರಣಗೊಂಡ ಮಹಿಳಾ ಚರಿತ್ರೆಯನ್ನು ಕಾಣಬಹುದು.

ಶೈಕ್ಷಣಿಕ ವಲಯದ ಈ ಸಾಂಸ್ಕೃತಿಕ ರಾಜಕಾರಣವನ್ನು ಸಮೂಹ ಇಡಿಯಾಗಿ ಒಪ್ಪಿ ಬಿಡುತ್ತದೆ ಎಂದೇನಿಲ್ಲ ಸಮೂಹದೊಳಗಿನ ಪಠ್ಯಗಳಿಗೆ ಇನ್ನೊಂದು ಮುಖವಿದೆ. ಕನ್ನಡದಲ್ಲಿ ಅತ್ಯಂತ ಹೆಚ್ಚು ಹಸ್ತಪ್ರತಿಗಳಿರುವುದಾದರೆ ಅವು ಚಿದಾನಂದಾವಧೂತನ ಶ್ರೀದೇವಿ ಮಹಾತ್ಮೆ ಮತ್ತು ಅಜ್ಞಾತ ಕವಿಯ ಶನಿಮಹಾತ್ಮೆ ಇವೆರಡೂ ಶೈಕ್ಷಣಿಕ ವಲಯದಾಚೆಗೆ ಇವೆ. ಹೀಗೆ

ಆಚೆಗೆ ಇರುವ ಸಂಖ್ಯೆ ದೊಡ್ಡದೇ ಇರಬಹುದು. ಆದರೆ ಇವು ಸಮೂಹದೊಳಗೆ ಸದಾ ಜೀವಂತವಾಗಿ ಇಂದಿಗೂ ಕ್ರೀಯಾಶೀಲವಾಗಿರುವ ಪಠ್ಯಗಳು ಇವು ದ್ವೈತಾದ್ವೈತಕ್ಕೆ ಸೇರಿದವು ಅಲ್ಲ. ಅಲ್ಲಿ ಶೈವ ವೈಷ್ಣವ ಪಂಥಗಳವೂ ಇಲ್ಲ.

ಹಳಗನ್ನಡ ಓದುಬಲ್ಲವರು ಮತ್ತು ಪದ ಪದಾರ್ಥವನ್ನು ಹೇಳಬಲ್ಲವರು ಪ್ರಾಜ್ಞರೆಂಬ ನಂಬಿಕೆಯೊಂದು ನಮ್ಮ ಅಕೆಡಿಮಿಕ್ ವಲಯದಲ್ಲಿದೆ. ಹಾಗೆಯೇ ನಡೆಗನ್ನಡ ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡಿ ವ್ಯಾಖ್ಯಾನ ಮಾಡಬಲ್ಲವರು ನಿಜವಾದ ಕನ್ನಡ ಸಾಹಿತ್ಯದ ಪರಿಚಾರಕರೆಂಬಂತೆ ಸಾರಿಕೊಂಡು ಬರಲಾಗಿದೆ. ಮಧ್ಯಕಾಲೀನ ಕನ್ನಡ ಕವಿಗಳಾದ ಲಕ್ಷ್ಮೀಶ ಕುಮಾರವ್ಯಾಸರು ಇದೇ ಕಾರಣಕ್ಕೆ ಎತ್ತರದ ಪೀಠದಲ್ಲಿ ನೆಲೆಗೊಂಡಿದ್ದಾರೆ. ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು. ಭಾರತ ಕಣ್ಣಲಿ ಕುಣಿಯುವುದು, ಹಾಡಿದನು ಗಮಕಿ ನಾಡು ನಲಿದುದು ರಸದ ಕಡಲಿನಲ್ಲಿ ಧುಮುಕಿ ಎಂದು ಗಮಕ ಕಲೆಯ ಬಗೆಗೆ ಮೆಚ್ಚುಗೆಯ ಮಾತುಗಳಿವೆ. ಗಮಕ ಮತ್ತದರ ವ್ಯಾಖ್ಯಾನ ಬಳಕೆಯಾದುದು ಪ್ರಧಾನವಾಗಿ ವೈಷ್ಣವ ಪರಂಪರೆಯ ಪ್ರಚಾರಕ್ಕೆ ಮತ್ತು ವರ್ಣವ್ಯವಸ್ಥೆಯ ಸ್ವೀರೀಕರಣಕ್ಕೆ ಎಂಬುದು ಮೇಲ್ನೋಟಕ್ಕೆ ಗೋಚರ ವಾಗುವಂಥದ್ದು. ಯಾವ ಗಮಕೀಯೂ (ಜೋಳದ ರಾಶಿಯವರನ್ನು ಹೊರತುಪಡಿಸಿದರೆ) ತಪ್ಪಿಯೂ ಪ್ರಭುಲಿಂಗಲೀಲೆಯನ್ನಾಗಲಿ, ನಳಚರಿತ್ರೆಯನ್ನಾಗಲೀ ವಾಚಿಸುವುದಿಲ್ಲ ಎನ್ನುವುದು ಕ್ವಚಿತ್ತಾಗಿ ಸಂಭವಿಸುವ ಸಂಗತಿಯಲ್ಲ. ಇನ್ನೂ ಕರ್ನಾಟಕ ಸಂಗೀತದ ಸ್ಥಿತಿಯೂ ಬೇರೆಯಲ್ಲ. ಪಠ್ಯವೊಂದು ತಾನು ಪ್ರತಿಬಾರಿ ಪಠ್ಯವಾಗುವ ಸಂದರ್ಭವನ್ನು ಕಾಯ್ದುಕೊಂಡಿರುತ್ತದೆ. ಹೀಗೆ ಕಾಯ್ದುಕೊಂಡಿರುವುದರಲ್ಲಿಯೇ ಒಟ್ಟು ವಿದ್ಯಮಾನದ ವಿರೋಧಾಭಾಸಗಳೆಲ್ಲವೂ ಅಕಡವಾಗಿರುತ್ತವೆ. ಒಮ್ಮೆ ಮುಖ್ಯವೆಂದು ಅನಿಸಿದ್ದು ಇನ್ನೊಂದು ಕಾಲದಲ್ಲಿ ಅಮುಖ್ಯವಾಗಬಹುದು. ಸಾಮಾನ್ಯವೆಂದೆನಿಸಿದ್ದು, ಆಮೇಲೆ ಅಸಾಮಾನ್ಯವೆಂದೆನಿಸಬಹುದು. ಸಾಮಾಜಿಕ ಮೌಲ್ಯಗಳು ಬದಲಾದಂತೆ ಶಬ್ದಗಳ ಉಪಯೋಗವೂ ಬದಲಾಗುವುದು ಸಹಜ. ಹೀಗಾಗಿ ಒಂದು ಪಠ್ಯಕ್ಕೆ ಚೌಕಟ್ಟು ಹಾಕಿ ಅದು ಇಂತದ್ದೇ ಎಂದು ಹೇಳುವುದು ವಿಹಿತವಲ್ಲ. ಪಠ್ಯ ಎನ್ನುವುದು ನಿರ್ಮಾಣದ ಪ್ರಕ್ರಿಯೆಯ ಹೊರತು ಸಿದ್ಧವಸ್ತುವಲ್ಲ ಪಠ್ಯಗುಣ ಯಾವಾಗಲೂ ಮಿಗುವ ಗುಣವನ್ನು ಹೊಂದಿರುತ್ತದೆ. ಮಿಗುವುದು ಎಂದರೆ ನಮಗೆ ದಕ್ಕಿಯೂ ಇನ್ನು ಇದೆಯೆಂಬ ಭಾವನೆಯನ್ನು ಉಳ್ಳದ್ದು. ಒಂದು ನಿದರ್ಶನ ಕೊಡುವುದಾದರೆ ಬಾಯಾರಿಕೆ ಎಂದು ಇಡೀ ಕೆರೆಗೆ ಕೈ ಹಾಕಿ ಬೋಗಸೆಯಲ್ಲಿ ನೀರು ತೆಗೆದುಕೊಂಡು ಬಾಯಿಗೆ ಒಯ್ಯುವಷ್ಟರಲ್ಲಿ ಅದು ನಮಗೆ ಎಷ್ಟು ದಕ್ಕುತ್ತದೋ ಅದೇ ರೀತಿ ಇನ್ನೊಬ್ಬರ ದಾಹ ತೀರಿಕೆಗೂ ಅದು ಅಗತ್ಯವಾಗುತ್ತದೆ. ಹೀಗೆ ಮೀಗುವುದರ ಮೂಲಕವೇ ಬರವಣಿಗೆ ಎನ್ನುವುದು ಯುಗಗಳನ್ನು ಹಿಂದಕ್ಕೆ ಹಾಕುತ್ತ ಹಿಂದಕ್ಕೆ ಹಾಕಿದ ಯುಗಗಳ ಗುರುತುಗಳನ್ನು ತನ್ನ ಮೈಯಲ್ಲಿ ಉಳಿಸಿಕೊಳ್ಳುತ್ತ ಬೆಳೆಯುತ್ತದೆ. ಇದು ಪಠ್ಯ ಅಥವಾ ಬರವಣಿಗೆಯೊಂದು ಇತಿಹಾಸದೊಂದಿಗೆ ನಡೆಸುವ ಕಾಲಾತೀತ ಅನುಸಂಧಾನ ವಾಗಿದೆ.

೬.೧. ಎಂ.ಫಿಲ್ ಅಧ್ಯಯನಗಳು

ಕನ್ನಡ ಸಾಹಿತ್ಯ ಸಂಸ್ಕೃತಿ ಅಧ್ಯಯನದ ಆಕರಗಳಲ್ಲಿ ಹಸ್ತಪ್ರತಿಯು ಒಂದಾಗಿದ್ದು, ಹಸ್ತಪ್ರತಿಯನ್ನು ಕುರಿತು ಆಧುನಿಕ ಸಂದರ್ಭದಲ್ಲಿ ಇದು ಶಾಸ್ತ್ರ ಮರ್ಯಾದೆಯನ್ನು ಪಡೆದುಕೊಂಡ ಸರ್ವೇಕ್ಷಣೆ, ಸಂಗ್ರಹ, ಸಂರಕ್ಷಣೆ, ಸೂಚಿರಚನೆ, ಪರಿಷ್ಕರಣೆ, ಪ್ರಕಟಣೆ, ಅಧ್ಯಯನ, ಅಧ್ಯಾಪನ ಹೀಗೆ ವಿವಿಧ ಮಾರ್ಗಗಳಲ್ಲಿ ಮುನ್ನಡೆಯುತ್ತದೆ. ಈ ನಾಡಿನ ವಿಶ್ವವಿದ್ಯಾಲಯಗಳ ಸಂಘಸಂಸ್ಥೆಗಳು ಸಂಶೋಧನ ಮಾದರಿಯ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಟ್ಟದ್ದು ಗಮನಾರ್ಹ ಸಂಗತಿಯಾಗಿದೆ.

ಹಸ್ತಪ್ರತಿಗಳ ಅಧ್ಯಯನ ಸಂಗ್ರಹ ಸಂಪಾದನೆ ಹೆಸರಿನಲ್ಲಿ ಅನೇಕ ವಿದ್ವಾಂಸರುಗಳು ಮತೀಯ ನೆಲೆಯಲ್ಲಿ ಅಧ್ಯಯನಿಸುತ್ತ ಬಂದಿದ್ದು, ಬಿ.ಎಂ.ಶ್ರೀ ಪ್ರತಿಷ್ಠಾನ, ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಿಂದ ನಡೆದಂತಹ ಎಂ.ಫಿಲ್ ಅಧ್ಯಯನಗಳು ಮತಾತೀತವಾಗಿ ಹಾಗೂ ಸಮುದಾಯಿಕ ಬದುಕಿನ ನೆಲೆಗಳನ್ನು ಕುರಿತ ಅಧ್ಯಯನಗಳಾಗಿವೆ.

ಹಸ್ತಪ್ರತಿ ಅಧ್ಯಯನವನ್ನು ಒಂದೇ ನಿರ್ದಿಷ್ಟಕ್ಕೆ ಕಟ್ಟಿ ಹಾಕದೆ, ಹಸ್ತಪ್ರತಿ, ಪ್ರಶಸ್ತಿ, ಲಿಪಿಕಾರ, ಚಿತ್ರಕಲೆ, ಸಂರಕ್ಷಣೆ, ಹಸ್ತಪ್ರತಿ ವಿಷಯ ಸಂಪತ್ತು ಎಂಬ ಬಹುಪಠ್ಯೀಯ ನೆಲೆಯಲ್ಲಿ ಚರ್ಚಿಸಿದ್ದು, ಹಸ್ತಪ್ರತಿಗಳ ತಯಾರಿಕೆ ಹಿಂದಿರುವ ಜನ ಸಮುದಾಯ, ಅವರ ಶ್ರಮ ಸಂಸ್ಕೃತಿಯನ್ನು ವಿಶೇಷವಾಗಿ ಇಂಥ ಅಧ್ಯಯನಗಳಿಂದ ನೋಡಬಹುದು.

ಹಸ್ತಪ್ರತಿ ಕುರಿತು ಅಧ್ಯಯನ ನಡೆಸಿದ ಸಂಘಸಂಸ್ಥೆಗಳ ಕೊಡುಗೆ, ಅವರ ವೈಧಾನಿಕತೆ ಮತ್ತು ಹಸ್ತಪ್ರತಿ ಗ್ರಂಥ ಸಂಪಾದನೆ, ವಿದ್ವಾಂಸರ ಕೊಡುಗೆ ಮತ್ತು ವೈಧಾನಿಕತೆಯ ಚರ್ಚೆಗಳಿಂದ ಬೇರೆ ಬೇರೆ ರೂಪಗಳನ್ನು ಪಡೆದುಕೊಂಡಿದ್ದು, ಕೇವಲ ಸಂಗ್ರಹ, ಸಂಪಾದನೆ, ಸೂಚಿರಚನೆ ಎಂಬ ಅಂಶಗಳನ್ನು ಕೇಂದ್ರೀಕರಿಸಿದೆ. ಹಸ್ತಪ್ರತಿಗಳಲ್ಲಿ ಅಡಗಿರುವ ಸಂಸ್ಕೃತಿ ಸಂಗತಿಗಳ ಪುನರ್‌ವ್ಯಾಖ್ಯಾನ ಮಾಡುವ ನಿಟ್ಟಿನಲ್ಲಿ ನಡೆದ ಅಧ್ಯಯನಗಳಾಗಿವೆ. ಈ ಅಧ್ಯಯನಗಳು ಕೇವಲ ಶುದ್ಧ ಅಶುದ್ಧ ಎನ್ನುವ ಜಾತಿ ಮತ ಕೇಂದ್ರಿತ ಎನ್ನುವ ಮನೋಧೋರಣೆಯನ್ನು ಮೀರಿ ಜನ ಬದುಕಿನ ಹಲವು ಆಯಾಮಗಳನ್ನು ಗುರುತಿಸುವ ಪ್ರಯತ್ನಗಳನ್ನು ಮಾಡಿದೆ.

ಕೆಲವು ಉದಾಹರಣೆಗಳನ್ನು ನೀಡುವುದಾದರೆ ವೀರೇಶ ಬಡಿಗೇರ ಅವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಅಧ್ಯಯನ ಪೂರೈಸಿದ ರೇಜಾ ಜೆ. ಅವರ 'ಮಹಿಳಾ ಬರೆಪಕಾರ್ತಿಯರು', ಐ.ಜೆ. ಮ್ಯಾಗೇರಿ ಅವರ 'ಕನ್ನಡ ಹಸ್ತಪ್ರತಿಗಳ ವಸ್ತು ಮತ್ತು ವಿಷಯ ಸಂಪತ್ತು', ಕಿಷ್ಟಪ್ಪ ಅವರ 'ಹಸ್ತಪ್ರತಿಗಳ ದೈವಿನೆಲೆಗಳು' ಹಸ್ತಪ್ರತಿಗಳನ್ನ ರೂಢಿಗತ ಅಧ್ಯಯನಕಿಂತ ಭಿನ್ನವಾಗಿ ಗ್ರಹಿಸಿದ್ದಾರೆ. ರೇಜಾ ಜೆ. ಅವರು ಎತ್ತುವ ಬರಹಗಳಲ್ಲಿ ಯಾಕೆ? ಮಹಿಳಾ ಪ್ರಾತಿನಿಧ್ಯ ಹೆಚ್ಚಾಗಿ ಕಾಣುವುದಿಲ್ಲ ಎನ್ನುವ ಪ್ರಶ್ನೆಯೇ ಹಸ್ತಪ್ರತಿಗಳ ಒಟ್ಟು ಗ್ರಹಿಕೆಯೇ

ಭಿನ್ನವಾಗಿ ಅನುಭವಕ್ಕೆ ತರುತ್ತದೆ. ಮುಖ್ಯವಾಗಿ ಬರಹ ಮತ್ತು ಮಹಿಳಾ ಗೈರುಹಾಜರಿಯನ್ನು ಕೇಂದ್ರವಾಗಿಟ್ಟುಕೊಂಡು ಲಿಂಗ ಮತ್ತು ಸಾಮಾಜಿಕ ಅಸಮಾನತೆಗಳು ಹಸ್ತಪ್ರತಿ ಕ್ಷೇತ್ರವನ್ನು ಕಾಡದೆ ಬಿಟ್ಟಿಲ್ಲ ಎನ್ನುವ ಚರ್ಚೆ ಮಾಡುತ್ತಾರೆ. ಐ.ಜೆ. ಮ್ಯಾಗೇರಿಯವರು ಹಸ್ತಪ್ರತಿ ವಸ್ತು ಮತ್ತು ವಿಷಯವನ್ನೆ ಪ್ರಧಾನವಾಗಿಸಿಕೊಂಡು ಅಧ್ಯಯನ ಮಾಡಿದ್ದಾರೆ. ವಸ್ತು ಮತ್ತು ವಿಷಯದ ಆಯ್ಕೆ ಹಿಂದಿರುವ ಬೌದ್ಧಿಕ, ಧಾರ್ಮಿಕ ಹಾಗೂ ಸಾಮಾಜಿಕ ಸನ್ನಿವೇಷಗಳನ್ನು ಮುಖ್ಯವಾಗಿ ಅನಾವರಣ ಮಾಡುತ್ತಾರೆ. ವಿಷಯದ ಆಯ್ಕೆ ಮತ್ತು ಬರಹದ ಸಾಧನವನ್ನೆ ಧಾರ್ಮಿಕ ಮನೋಭಾವದಿಂದ ಆರಿಸಿಕೊಂಡಾಗ ಪಠ್ಯಕ್ಕಿರುವ ಸಂವಹನಶೀಲತೆ ಮತ್ತು ಸಾರ್ವತ್ರಿಕಗುಣ ಕಳೆದು ಹೋಗುವ ವಿಚಾರಗಳ ಕುರಿತು ಸಾಧ್ಯಂತವಾಗಿ ಚರ್ಚಿಸುತ್ತಾರೆ. ಆ ಮೂಲಕ ಹಸ್ತಪ್ರತಿಗಳ 'ಕ್ಲೋಸ್ ರೀಡಿಂಗ್' ಕ್ರಮವನ್ನು ಪ್ರಶ್ನಿಸುತ್ತಾರೆ. ಕಿಷ್ಣಪ್ಪ ಅವರ ಅಧ್ಯಯನ ಹಸ್ತಪ್ರತಿಗಳ ದೈವೀನೆಲೆಯಾಗಿದ್ದರೂ ಆ ಪ್ರಜ್ಞೆಯ ಆಚೆಯೂ ಹಸ್ತಪ್ರತಿಗಳು ನಿರ್ವಹಣೆಗೊಂಡ ಬಗೆಗಳನ್ನು ಚರ್ಚಿಸಿದ್ದಾರೆ. ಅಸಾಹಿತ್ಯಿಕ, 'ದೈವಿಕ' ಎನ್ನುವ ಉಪೇಕ್ಷೆಗೊಂಡ ಕೃತಿಗಳ ಮೂಲಕವೇ ಮತಾತೀತ ಲೌಕಿಕ ದೈವಜ್ಞ ಕಲ್ಪನೆಯನ್ನು ಕಟ್ಟಿಕೊಡುತ್ತಾರೆ. ಅಂದರೆ ಹೊಸ ಕಾಲದ ಹೊಸ ಮನಸುಗಳು ಹಸ್ತಪ್ರತಿಗಳನ್ನು ಸಾಂಪ್ರದಾಯಿಕ ಅಧ್ಯಯನ ಮಾದರಿಗಳಿಂದ ಹೊರಬಂದು ಹೊಸರೀತಿಯ ಓದು ಮತ್ತು ಅನುಸಂದಾನಕ್ಕೆ ಹಂಬಲಿಸಿದ ರೀತಿಗಳನ್ನು ಗುರುತಿಸಲು ಪ್ರಯತ್ನಿಸಿದ್ದು ಧನಾತ್ಮಕ ಸಂಗತಿಯಾಗಿದೆ.

೬.೨. ಪಿಎಚ್.ಡಿ ಅಧ್ಯಯನಗಳು

ಹಸ್ತಪ್ರತಿಗಳ ಅಧ್ಯಯನ ಸಂಗ್ರಹ ಸಂಪಾದನೆಯ ಹೆಸರಿನಲ್ಲಿ ಅನೇಕ ವಿದ್ವಾಂಸರು ಧಾರ್ಮಿಕವಾಗಿ ಅಲ್ಲದೆ, ಮತಾತೀತ ನೆಲೆಯಲ್ಲಿ ಪಿಎಚ್.ಡಿ ಸಂಶೋಧನ ಅಧ್ಯಯನಗಳನ್ನು ಮಾಡಿದ್ದರೆ. ಬಿ.ಕೆ. ಹಿರೇಮಠ ಅವರ 'ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ'ದಲ್ಲಿ ಹಸ್ತಪ್ರತಿಗಳ ಕಲಾ ವಿನ್ಯಾಸ, ಕುಶಲಕರ್ಮಿಗಳ ಸಂಸ್ಕೃತಿ ಕುರಿತು ಚರ್ಚಿಸಿರುವುದು ವಿಶೇಷವಾಗಿದೆ.

ಎಸ್.ಎನ್. ಚಿತ್ರಗಾರ ಅವರ 'ಕರ್ನಾಟಕ ಹಸ್ತಪ್ರತಿ ಚಿತ್ರಕಲೆ ಒಂದು ಅಧ್ಯಯನ' ಎಂಬ ಮಹಾಪ್ರಬಂಧದಲ್ಲಿ ಕನ್ನಡ ಹಸ್ತಪ್ರತಿಗಳಲ್ಲಿರುವ ಚಿತ್ರಕಲೆಯನ್ನು ವ್ಯವಸ್ಥಿತ ಅಧ್ಯಯನಕ್ಕೊಳಪಡಿಸಿದ್ದಾರೆ. ಇದು ಹಸ್ತಪ್ರತಿಗಳಲ್ಲಿ ಅಡಗಿರುವ ಚಿತ್ರಕಲೆ ಹಾಗೂ ಚಿತ್ರಕಲೆ ಹಿಂದಿರುವ ಜನ ಸಮುದಾಯದ ಸಂಸ್ಕೃತಿಯನ್ನು ತಿಳಿಸುವಂತಹ ಅಧ್ಯಯನವಾಗಿದೆ. ಹಸ್ತಪ್ರತಿಗಳ ನಿರ್ಮಾತೃಗಳ ಇತಿಹಾಸ, ಪೋಷಕರ ಉದ್ದೇಶ ತಿಳಿಸಿರುವುದರ ಜೊತೆಗೆ ಹಸ್ತಪ್ರತಿಯಲ್ಲಿರುವ ಚಿತ್ರಕಲೆಯು ರಚನೆಗೊಂಡ ರೀತಿ, ಪತ್ರದ ಸಿದ್ಧತಾ ವಿಧಾನ, ಚಿತ್ರರಚನೆ, ವರ್ಣಗಳ ತಯಾರಿಕೆ, ಚಿತ್ರರಚನಾ ಪರಿಕರಗಳು ಮತ್ತು ಚಿತ್ರ ಸಾಹಿತ್ಯ ಕ್ಷೇತ್ರದ ಹಲವಾರು ತಾಂತ್ರಿಕ ಅಂಶಗಳನ್ನು ಚರ್ಚಿಸಿದ್ದಾರೆ. ಚಿತ್ರಕಲೆಯ ಮುಖಾಂತರ ಮಾನವ ತನ್ನ

ಸಂಸ್ಕೃತಿಯನ್ನು ಹೇಗೆ ಅಭಿವ್ಯಕ್ತಗೊಳಿಸಿದ್ದಾರೆ ಎಂಬುದನ್ನು ಹಿನ್ನೆಲೆಯಾಗಿಸಿಕೊಂಡು ಸಂಸ್ಕೃತಿಯನ್ನು ಅರಿಯಲು ಪ್ರಯತ್ನಿಸಿದಾರೆ. ಸಂಸ್ಕೃತಿಯ ಒಂದು ಭಾಗವಾದ ಚಿತ್ರಕಲೆ ಇತರ ಆಕರಗಳಿಗಿಂತ ಬೇರೆಯಾಗಿ ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ಪುನರ್ ರಚಿಸಲು ಹೀಗೆ ಸಹಾಯ ಮಾಡುತ್ತದೆ ಎಂಬುದನ್ನು ಚರ್ಚಿಸಿದ್ದಾರೆ. ನಮ್ಮ ಪೂರ್ವಜರು ಧರ್ಮ ಪ್ರಚಾರಕ್ಕಾಗಿ ಮತ್ತು ರಾಜಕೀಯ ಉದ್ದೇಶಗಳಿಗಾಗಿ ಹಸ್ತಪ್ರತಿಗಳಲ್ಲಿ ಚಿತ್ರಕಲೆಯನ್ನು ಹೇಗೆ ಬಳಸಿಕೊಂಡರು ಎಂಬುದನ್ನು ಅಧ್ಯಯನಕ್ಕೆ ಒಳಪಡಸಿದ್ದು ಮುಖ್ಯವೆನಿಸುತ್ತದೆ. ಈ ಮೂಲಕ ಪಾರಂಪರಿಕ ಮಾದರಿಯ ಅಧ್ಯಯನಗಳನ್ನು ಮೀರುವ ಪ್ರಯತ್ನಮಾಡಿದ್ದಾರೆ.

ಹಸ್ತಪ್ರತಿಗಳು ಭೌಗೋಳಿಕ ದೃಷ್ಟಿಯಿಂದ ಬೇರ ಬೇರೆಯಾಗಿದ್ದು, ಅವುಗಳ ಸಾಂಸ್ಕೃತಿಕ ಅನನ್ಯತೆ ಮತ್ತು ಉಪೇಕ್ಷೆಗೆ ಒಳಗಾಗಿರುವ ಹಸ್ತಪ್ರತಿಗಳ ಅಧ್ಯಯನಕ್ಕೆ ಪ್ರೇರಣೆ ನೀಡುವಂತಹ ಅಧ್ಯಯನಗಳಾಗಿವೆ. ಬೋರೇಶಿ ಈ. ಅವರ 'ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಸಾಂಸ್ಕೃತಿಕ ಅನನ್ಯತೆ' ಎಂಬ ಅಧ್ಯಯನದಲ್ಲಿ ಚಿತ್ರದುರ್ಗ ಪರಿಸರದಲ್ಲಿ ಇರುವ ಹಲವು ಬಗೆಯ ಹಸ್ತಪ್ರತಿಗಳು ಜನ ಬದುಕಿನ ಪ್ರಗತಿಯ ಚಲನೆಯನ್ನು ಸೂಚಿಸುವಂಥವು. ಇಂತಹ ವೈವಿಧ್ಯಮಯ ಸಾಂಸ್ಕೃತಿಕ ಸಂಪತ್ತನ್ನು ತನ್ನ ಗರ್ಭದಲ್ಲಿ ಹುದುಗಿಸಿಕೊಂಡಿರುವ ಈ ಪರಿಸರದ ಹಸ್ತಪ್ರತಿಗಳ ವಿವಿಧ ಆಯಾಮಗಳನ್ನು ಗುರುತಿಸಲಾಗಿದೆ. ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳಲ್ಲಿರುವ ಸಾಂಸ್ಕೃತಿಕ ಅನನ್ಯತೆ, ಸಮಾಜಿಕತೆ, ಸಾಹಿತ್ಯಿಕತೆ, ಧಾರ್ಮಿಕತೆ ಮತ್ತು ಹಸ್ತಪ್ರತಿಗಳ ಪರಿಚಲನೆಯ ಅಂಶಗಳ ಮೂಲಕ ಸಾಂಸ್ಕೃತಿಕ ಸಂಗತಿಗಳನ್ನು ಹೊರತೆಗೆದು ಚರ್ಚಿಸುವ ಪ್ರಯತ್ನ ಮಾಡಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಕಾಣಸಿಗುವ ಲೌಕಿಕ ಮತ್ತು ಅಲೌಕಿಕ ಶಾಸ್ತ್ರ ಗ್ರಂಥಗಳ ಪ್ರಮಾಣ ಮತ್ತು ಪ್ರಯೋಜನ ದೃಷ್ಟಿಯಿಂದ ಪ್ರಮುಖವಾಗಿದೆ. ಲೌಕಿಕ ಬದುಕಿಗೆ ಆಸರೆಯಗಿ ಪ್ರಾಚೀನ ಕಾಲದ ರಚನೆಯಾದ ಶಾಸ್ತ್ರಗ್ರಂಥಗಳನ್ನು ಭಿನ್ನನೆಲೆಯಲ್ಲಿ ನೋಡುವ ಅಧ್ಯಯನಗಳು ನಡೆದಿರುವುದು ಹಸ್ತಪ್ರತಿ ಅಧ್ಯಯನಕ್ಕೆ ಹೊಸ ಸಧ್ಯತೆಗಳನ್ನು ರೂಪಿಸಿವೆ. ಈ ಮಾದರಿಯಲ್ಲಿ ಅಧ್ಯಯನ ಕೈಗೊಂಡಿರುವ ಪರ್ಸುನಾಯ್ಕ ಎಲ್.ಎಸ್. ಅವರ 'ಕನ್ನಡದಲ್ಲಿ ಗಜಶಾಸ್ತ್ರ ಸಾಹಿತ್ಯ', ಮಂಜುಳಾ ಬಿ. ಅವರ ಸೂಪಶಾಸ್ತ್ರ: ಒಂದು ಅಧ್ಯಯನ, ಹುರಳಿ ಆಯ್.ಎನ್. ಅವರ 'ಕನ್ನಡದಲ್ಲಿ ವೈದ್ಯಶಾಸ್ತ್ರದ ಹಸ್ತಪ್ರತಿಗಳು ಸಾಂಸ್ಕೃತಿಕ ನಿರ್ವಚನ', ವಿರುಪಾಕ್ಷಿ ಅವರ 'ಕನ್ನಡದಲ್ಲಿ ಕೃಷಿಶಾಸ್ತ್ರ ಸಾಹಿತ್ಯ' ಕಲ್ಲಯ್ಯ ಎಸ್. ಹಿರೇಮಠ ಅವರ ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ' ಮುಂತಾದ ಶಾಸ್ತ್ರ ಕೃತಿಗಳು ಜನಮುಖಿ ಅಧ್ಯಯನವಾಗಿವೆ.

ಆಯ್.ಎನ್. ಹುರುಳಿ ಅವರು ಭಾರತೀಯ ಆಯುರ್ವೇದ ಶಾಸ್ತ್ರದ ಮೂಲಸಿದ್ಧಾಂತ, ದ್ರವ್ಯಗಳ ರಸ, ವೀರ್ಯ, ಉಪಾಕ ಉಪಯುಕ್ತ ಮನೆಮದ್ದುಗಳ ದ್ರವ್ಯಗುಣ, ಔಷಧ ತಯಾರಿಕೆ ಹಾಗೂ ರೋಗ ಕಾರಣಗಳು, ರೋಗಲಕ್ಷಣ, ರೋಗಪರೀಕ್ಷೆ, ಔಷದೋಪಚಾರ ಮುಂತಾದ

ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ವೈದ್ಯಶಾಸ್ತ್ರದ ಹಸ್ತಪ್ರತಿಗಳು ಒಳಗೊಂಡಿರುವ ಮಾನವ ಸ್ವಾಸ್ಥ್ಯ ಸಂರಕ್ಷಣೆಯ ಜೊತೆಗೆ ಆಧ್ಯಾತ್ಮಿಕ ಮಾನಸಿಕ, ಶಾರೀರಿಕ ಹಾಗೂ ಸಾಮಾಜಿಕ ಅಂಶಗಳನ್ನು ಗುರುತಿಸಿದ್ದಾರೆ. ಸಂಸ್ಕೃತಿಮುಖಿ, ಜನಮುಖಿ, ಸಮಾಜಮುಖಿ ಆಯಾಮ ಪಡೆದಿರುವ ಕನ್ನಡ ವೈದ್ಯಶಾಸ್ತ್ರ ಹಸ್ತಪ್ರತಿಗಳಲ್ಲಿರುವ ಸಸ್ಯ, ಔಷಧದ ಅರಿವು ಹೊಸ ವೈದ್ಯಲೋಕಕ್ಕೆ ಚಲನಶಕ್ತಿಯಾಗಬೇಕೆನ್ನುವುದು ಮತ್ತು ಪ್ರಾಚೀನ ಕಾಲದ ವೈದ್ಯಕೀಯ ಪದ್ಧತಿ ಹೇಗಿತ್ತು ಎಂದು ಪರಿಚಯಿಸಿ ಅದನ್ನೇ ಹೊಸ ವೈದ್ಯಕೀಯ ಪದ್ಧತಿಯಲ್ಲಿ ಯಾವ ರೀತಿ ಅಭಿವೃದ್ಧಿ ಪಡಿಸಲಾಗಿದೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಮಂಜುಳಾ ಬಿ. ಅವರ 'ಸೂಪಶಾಸ್ತ್ರ ಒಂದು ಅಧ್ಯಯನ'ದಲ್ಲಿ ಕನ್ನಡದಲ್ಲಿ ಪ್ರಸ್ತಾಪಗೊಂಡಿರುವ ಸೂಪದ ವಿಚಾರಗಳನ್ನೆಲ್ಲ ಒಂದೆಡೆ ಕಲೆ ಹಾಕಿ ವಿಶ್ಲೇಷಣೆಗೆ ಒಳಪಡಿಸಿರುವುದು ಈ ಪ್ರಬಂಧದ ವಿಶಿಷ್ಟತೆಯಾಗಿದೆ. ವಿರೂಪಾಕ್ಷಿ ಅವರ ಕನ್ನಡ ಕೃಷಿಶಾಸ್ತ್ರ ಸಾಹಿತ್ಯ ಎಂಬ ಪ್ರಬಂಧದಲ್ಲಿ ನಮ್ಮ ದೇಶಿಜ್ಞಾನ, ಕೃಷಿಸಂಸ್ಕೃತಿ ಕುರಿತ ಚರ್ಚಿಸಿದ್ದಾರೆ.

ಈ ಮೇಲೆ ಚರ್ಚಿಸಿದ ಅಧ್ಯನಗಳ ಪ್ರಯೋಗ ಮತ್ತು ಜನಮುಖಿ ಕೃತಿಗಳಾದ ಗಜಶಾಸ್ತ್ರ, ಸೂಪಶಾಸ್ತ್ರ, ವೈದ್ಯಶಾಸ್ತ್ರ ಕೃತಿಗಳ ಕುರಿತ ಸಂಶೋಧನ ಮಾದರಿ ಅಧ್ಯಯನಗಳು ನಡೆದಿದ್ದು ಈ ಅಧ್ಯಯನಗಳು ಕೂಡ ಸಂಸ್ಕೃತಿಮುಖಿ ಅಧ್ಯಯನ ಉದ್ದೇಶದಿಂದ ಚರ್ಚಿತವಾಗಿವೆ ಎಂಬುದು ಮುಖ್ಯವಾದ ಸಂಗತಿ. ಈ ಅಧ್ಯಯನಗಳನ್ನು ವೈದಿಕವಾಗಿ ಬ್ರಿಟಿಷ್ ಪ್ರಣಿತ ಮಾದರಿಯ ಧೋರಣೆಯಿಂದ ಹೊರಬಂದು ಮತಾತೀತ ಸಾಂಸ್ಕೃತಿಕಮುಖಿ ಆಯಾಮಗಳಲ್ಲಿ ಚರ್ಚಿತವಾದ ಅಧ್ಯಯನಗಳಾಗಿವೆ.

ಹಸ್ತಪ್ರತಿ ಬರವಣಿಗೆ ಅಥವಾ ಇತರೇ ಸಾಹಿತ್ಯಿಕ ಬರವಣಿಗೆಯಲ್ಲಿ ಮಹಿಳೆಯರ ಪ್ರತಿನಿಧಿಕರಣ ಕೊರತೆಯಿದೆ ಎನ್ನುವ ಪ್ರಶ್ನೆಯನ್ನು ಎತ್ತಿಕೊಂಡು ಅಧ್ಯಯನ ಕೈಗೊಂಡ ಗೀತಾ ಸಿ. ಅವರು 'ಕನ್ನಡ ಗ್ರಂಥ ಸಂಪಾದನೆಯಲ್ಲಿ ಮಹಿಳಾ ಪ್ರತಿನಿಧೀಕರಣ' ಎಂಬ ಶಿರ್ಷಿಕೆಯ ಅಡಿಯಲ್ಲಿ ಕನ್ನಡ ಗ್ರಂಥಸಂಪಾದನೆ ಕ್ಷೇತ್ರದಲ್ಲಿ ಮಹಿಳಾ ಪ್ರತೀನಿಧಿಕರಣ ಮತ್ತು ಮಹಿಳಾ ಜ್ಞಾನದ ಸ್ವರೂಪದ ಕುರಿತು ಚರ್ಚಿಸುತ್ತಾರೆ. ಆಧುನಿಕ ಪೂರ್ವದಲ್ಲಿ ಹಸ್ತಪ್ರತಿ, ಲಿಪಿಕರಣ, ಪ್ರತಿಕರಣ, ಪ್ರಸರಣ ಕ್ರಿಯೆಯಲ್ಲಿ ಪ್ರತ್ಯಕ್ಷವಾಗಿ ಹಾಗು ಪರೋಕ್ಷವಾಗಿ ತೊಡಗಿಕೊಂಡ ಮಹಿಳೆಯರ ಮೂಲಕ ಕನ್ನಡ ಗ್ರಂಥಸಂಪಾನೆಯನ್ನು ಅರಳಿರುವುದನ್ನು ಚರ್ಚಿಸಿದ್ದಾರೆ. ಪ್ರಾಚೀನ ಹಾಗೂ ಆಧುನಿಕ ಕನ್ನಡ ಗ್ರಂಥಸಂಪಾದನೆಯ ಪರಿಷ್ಕರಣ ಕಾರ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ಮತ್ತು ಅಂಶಿಕವಾಗಿ ತೊಡಗಿಸಿಕೊಂಡ ಮಹಿಳೆಯರು ಸಂಪಾದಿಸಿರುವ ಕನ್ನಡ ಕೃತಿಗಳ ವೈಧಾನಿಕತೆಯನ್ನು ಗುರುತಿಸುವುದು. ಹಾಗೆಯೇ ಸಮಕಾಲೀನ ಸಂದರ್ಭದಲ್ಲಿ ವಿವಿಧ ಜ್ಞಾನಶಾಖೆಗಳಲ್ಲಿ ಸಂಪಾದನಕಾರ್ತಿಯರಾಗಿ ತೊಡಗಿದ ಮಹಿಳೆಯರ ಜ್ಞಾನದ ನೆಲೆಗಳನ್ನು ಚರ್ಚಿಸಿದ್ದು, ಹಸ್ತಪ್ರತಿ

ಅಧ್ಯಯನಕ್ಕೆ ಹೊಸ ಹೊಳಹನ್ನು ನೀಡಿದಂತಾಗಿದೆ. ಈ ಮೂಲಕ ಹೊಸ ಕಾಲಘಟ್ಟದ ಅಧ್ಯಯನಗಳು ಹಿರಿ ತಲೆಮಾರಿನ ಅಧ್ಯಯನಗಳ ಕೊರತೆಗಳನ್ನು ಮೀರುವ ಪ್ರಯತ್ನ ಮಾಡುತ್ತಿರುವುದಕ್ಕೆ ಉದಾಹರಣೆಯಾಗಿವೆ. ಶೈಕ್ಷಣಿಕ ಅಗತ್ಯತೆಗಾಗಿ ರೂಪುಗೊಂಡ ಅಧ್ಯಯನಗಳಲ್ಲಿ ಭಿನ್ನಮಾದರಿಗಳನ್ನು ಅನುಸರಿಸಿದ ಹೆಚ್ಚು ಅಧ್ಯಯನಗಳು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಿಂದ ಬಂದವುಗಳೇ ಆಗಿವೆ.

೬.೩. ಇತರ ಶೈಕ್ಷಣಿಕ ಲೇಖನಗಳು

ಹಸ್ತಪ್ರತಿ ಅಧ್ಯಯನ ಎಂಬುದು ಹಸ್ತಪ್ರತಿಶಾಸ್ತ್ರದ ಮುಂದುವರೆದ ಭಾಗ. ಹಸ್ತಪ್ರತಿ ಶಾಸ್ತ್ರದಲ್ಲಿ ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ, ಸಂಪ್ರತಿ ಮತ್ತು ದಾಖಲೀಕರಣ ಹಾಗೂ ಹಸ್ತಪ್ರತಿಗಳ ಮಹತ್ವಗಳು ಮಾತ್ರ ಮನವರಿಕೆಯಾಗಲಿದ್ದು, ಹಸ್ತಪ್ರತಿ ಅಧ್ಯಯನವು ಇದರ ತಿಳುವಳಿಕೆಯ ಆಧಾರದ ಮೇಲೆ ನಡೆಯುವ ಹಸ್ತಪ್ರತಿಗಳ ವಿವಿಧ ದೃಷ್ಟಿಕೋನಗಳ ಅಧ್ಯಯನ ವಸ್ತುವನ್ನು ಒಳಗೊಂಡಿರುತ್ತದೆ. ೮೦ ದಶಕದಿಂದ ಹಸ್ತಪ್ರತಿ ಶಾಸ್ತ್ರದಲ್ಲಿ ಪರಿಣಿತರಾಗಿರುವ ಯುವ ವಿದ್ವಾಂಸರ ಪಡೆಯೊಂದು ಈ ಕ್ಷೇತ್ರದಲ್ಲಿ ತಯಾರಾಗಿದ್ದು, ಅವರೆಲ್ಲರ ದೃಷ್ಟಿ ಹಾಗೂ ಹಸ್ತಪ್ರತಿಗಳ ಅಧ್ಯಯನದತ್ತ ಮುಖ ಮಾಡಿದೆ. ಅವರುಗಳು ಪ್ರಕಟಿಸುತ್ತಿರುವ ಲೇಖನಗಳು ಹಸ್ತಪ್ರತಿಗಳ ಅಧ್ಯಯನ ವಸ್ತುವನ್ನೇ ಒಳಗೊಂಡಿದಲ್ಲದೆ ನೇರವಾಗಿ ಹಸ್ತಪ್ರತಿಗಳನ್ನೇ ಅಧ್ಯಯನ ವಸ್ತುಗಳನ್ನಾಗಿ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಮಾಜ, ಕಲೆ, ಇತಿಹಾಸ, ಧರ್ಮಶಾಸ್ತ್ರ, ವೈದ್ಯ, ವಿಜ್ಞಾನ, ತಂತ್ರಜ್ಞಾನ ಹೀಗ ಹಲವು ದೃಷ್ಟಿಕೋನಗಳಿಂದ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನಗಳು ನಡೆಯುತ್ತಿವೆ. ಇವುಗಳ ಅಧ್ಯಯನವನ್ನು ಹಸ್ತಪ್ರತಿಗಳ ಮೂಲಕವೇ ನಡೆದಿರುವ ಬಹುಶಿಸ್ತೀಯ ಅಧ್ಯಯನ ಇದಾಗಿದೆ

ಇದೇ ರೀತಿ ಹಸ್ತಪ್ರತಿಗಳ ಸೂಚಿಗಳನ್ನು ಕುರಿತಂತೆ ಹಸ್ತಪ್ರತಿ ಭಂಡಾರಗಳ ಬಗ್ಗೆ ಹಸ್ತಪ್ರತಿ ಅಧ್ಯಯನ ಸಂಸ್ಥೆಗಳ ಬಗ್ಗೆ ವಿದ್ವಾಂಶರ ಬಗ್ಗೆ ಮಾಹಿತಿ ಒದಗಿಸುವ ಅನೇಕ ಲೇಖನಗಳಿವೆ. ಹಸ್ತಪ್ರತಿಗಳನ್ನು ವೈವಿಧ್ಯಮವಾಗಿ ವಿಶ್ಲೇಷಿಸುವ ಲೇಖನಗಳು ಉಂಟು. ಈ ನಿಟ್ಟಿನಲ್ಲಿ ಹಸ್ತಪ್ರತಿಗಳೇ ಮುಖ್ಯ ಆಕರಗಳಾಗಿದ್ದು, ಹಸ್ತಪ್ರತಿ ಕುರಿತು ರಚಿತವಗಿರುವ ಲೇಖನಗಳು ನೇರವಾಗಿ ಹಸ್ತಪ್ರತಿಗಳನ್ನೇ ಅಧ್ಯಯನಕ್ಕೆ ಒಳಪಡಿಸುವ ಮೂಲಕ ಅವುಗಳಲ್ಲಿರುವ ವಿಷಯ ವೈವಿಧ್ಯವನ್ನು, ಲಿಪಿ ವೈವಿಧ್ಯತೆಯನ್ನು ಕಲಾ ವೈವಿಧ್ಯತೆಯನ್ನು ಹೊರತೆಗೆತಬಗೆಯಬಹುದಾಗಿದೆ. ಉದಾ: ಎಸ್.ಸಿ.ಪಾಟೀಲ್ ಅವರ ಹಸ್ತಪ್ರತಿ ಚಿತ್ರಕಲೆ ಲೇಖನವು ಹಸ್ತಪ್ರತಿಗಳಲ್ಲಿ ಅಡಗಿರುವ ಚಿತ್ರಕಲೆಯ ಕುರಿತು ಚಿತ್ರಕಲೆಯ ಹಿಂದೆ ಕೆಲಸ ಮಾಡಿದ ಸಮುದಾಯಗಳ ಕುರಿತು ಅಧ್ಯಯನಿಸಲು ಹಾಗೂ ಧರ್ಮಕ್ಕೆ ಸಂಬಂಧಿಸಿದ ಚಿತ್ರಕಲೆ ಕುರಿತು ಹೊಸ ಸಾಧ್ಯತೆಗಳನ್ನು ತಿಳಿಸುತ್ತವೆ. ಲೇಖನಗಳು ಪ್ರಾರಂಬದಲ್ಲಿ ಹಸ್ತಪ್ರತಿ ಸಂಪಾದನೆ ಕುರಿತು ಭಂಡಾರ ಲಿಪಿಕಾರ ಕುರಿತು

ಲೇಖನಗಳು ರಚನೆಯಾಗಿದ್ದು, ನಂತರ ಹಸ್ತಪ್ರತಿಗಳ ವಿಷಯ ಸಂಪತ್ತು, ಭಾಷೆ, ಕಲೆ ಮುಂತಾದ ಸಂಗತಿಗಳನ್ನು ಕುರಿತು ಲೇಖನಗಳು ರಚನೆಯಾದವು. ಈ ಲೇಖನಗಳಿಂದಾಗಿ ಹಸ್ತಪ್ರತಿಗಳನ್ನು ಸಾಂಸ್ಕೃತಿಕವಾಗಿ ಮಾಡಲು ವಿಪುಲ ಅವಕಾಶಗಳಿವೆ. ಇತಿಹಾಸ, ಭಾಷೆ, ಸಾಹಿತ್ಯ, ಜನಪದ, ಸಂಗೀತ, ಚಿತ್ರಕಲೆ, ಶಿಕ್ಷಣ, ರಾಜಕೀಯ ದೃಷ್ಟಿಕೋನಗಳಿಂದ ಅಧ್ಯಯನ ನಡೆದಿದ್ದು, ಈ ಒಂದೊಂದು ಲೇಖನಗಳು ಹಸ್ತಪ್ರತಿ ಅಧ್ಯಯನಕ್ಕೆ ಹೊಸರೂಪ ನೀಡುತ್ತವೆ. ಇವುಗಳ ಅಧ್ಯಯನ ಅಗತ್ಯವಿದ್ದು, ಬಹುಪಠ್ಯೀಯ ನೆಲೆಯ ಅಧ್ಯಯನ ಮಾಡುವ ಜರೂರು ಇದೆ. ಈ ಮೂಲಕ ನಿಜವಾದ ಜ್ಞಾನನಿಧಿಯನ್ನು ಸಂಚಯಿಸಲು ಈ ಹಸ್ತಪ್ರತಿ ಅಧ್ಯಯನ ಕುರಿತ ಲೇಖನಗಳು ಸೂಕ್ತ ವೇದಿಕೆಯಾಗಲಿವೆ.

೬.೪. ವಿಚಾರ ಸಂಕಿರಣ, ಸಮ್ಮೇಳನ, ಸಂವಾದ, ಸಂದರ್ಶನ ರೂಪಿ ಅಧ್ಯಯನಗಳು

ವಿಚಾರ ಸಂಕಿರಣ

"ಕನ್ನಡ ಸಾಹಿತ್ಯದಲ್ಲಿ ಪ್ರಚಲಿತವಿರುವ ಮಾರ್ಗ ಮತ್ತು ದೇಶಿ ಸಾಹಿತ್ಯ ಪರಿಕಲ್ಪನೆಗಳ ಪರಸ್ಪರ ಭಿನ್ನ ಸಂವೇದನೆಯನ್ನು ಹೊಂದಿದಂಥವು. ಎರಡು ರೀತಿಯ ಸಾಹಿತ್ಯ ಪ್ರಭೇದಕ್ಕೆ ನಾವು ಬಳಸುವ ಸಂಪಾದನೆಯ ಮಾನದಂಡಗಳು ಒಂದೇ ರೀತಿಯವು. ಗೇಯ ಪ್ರಧಾನ ವಾದ ದೇಶಿ ಕಾವ್ಯಸಾಹಿತ್ಯವು ತುಂಬಾ ಚಲನಶೀಲವಾದ ದೇಹಾಕೃತಿಯನ್ನು ಹೊಂದಿರುತ್ತವೆ. ಅದರ ಬಹುಮುಖತೆಯನ್ನೂ ಶಾಸ್ತ್ರ ಶುದ್ಧವಾದ ಸಂಪಾದನೆಯ ಹೆಸರಿನಲ್ಲಿ ಏಕಮುಖಗೊಳಿಸುತ್ತಾ ಬರಲಾಗಿದೆ. ಇಂಥ ಸಂಗತಿಗಳು ನಮ್ಮ ಅಧ್ಯಯನ ಮತ್ತು ಚಿಂತನೆಗಳು ವೈದಿಕ ಮತ್ತು ವಸಾಹತುಶಾಹಿ ಪ್ರಣೀತ ಚಿಂತನಾ ಕ್ರಮಗಳಿಂದ ಹೊರಬಂದಿಲ್ಲ ಎನ್ನುವುದೇ ಸೂಚಿಸುತ್ತದೆ. ಹೀಗಾಗಿ ನಮ್ಮ ಪ್ರಾಚೀನ ಸಾಂಸ್ಕೃತಿಕ ಸಂವೇದನೆಗಳೊಂದಿಗೆ ಸಮಕಾಲೀನ ಸಂವಾದ ಸಾಧ್ಯವಾಗುತ್ತಿಲ್ಲ ಎಂದೆನಿಸುತ್ತದೆ'.[೯] ಈ ಹಿನ್ನೆಲೆಯಲ್ಲಿ ನಡೆದ ವಿಚಾರ ಸಂಕಿರಣ ಕುರಿತಾಗಿ ಪ್ರಮುಖವಾಗಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಈ ಹಿಂದೆ ನಡೆದ ಅಧ್ಯಯನಗಳ ಮುಂದುವರಿಕೆಯಾಗಿ ಅದರಲ್ಲಿರುವ ಕೊರತೆಗಳನ್ನು ತುಂಬಿಕೊಳ್ಳುವು ದಕ್ಕಾಗಿ ಹಸ್ತಪ್ರತಿಶಾಸ್ತ್ರವನ್ನು ಮರುವಿವೇಚನೆಗೊಳಪಡಿಸುವ ಮಹತ್ವಾಕಾಂಕ್ಷೆಯನ್ನು ಹೊತ್ತು ನಿಂತಿದೆ. ನಮ್ಮ ಕಾಲದ ಆಂತಕ ಮತ್ತು ಅವಶ್ಯಕತೆಗಳನ್ನು ನಿವಾರಿಸಿಕೊಳ್ಳುವ ಹೊಸ ಕಾಲದ ಎದುರಿಸು ವಿಕೆ ತಾತ್ವಿಕ ಸಿದ್ಧತೆ ಮಾಡಿಕೊಳ್ಳುವ ಕನಸು ವಿಭಾಗದಾಗಿದೆ. ಕನ್ನಡ ಹಸ್ತಪ್ರತಿಗಳೆಂದರೆ ಒಟ್ಟು ಕನ್ನಡ ಜನ ಬದುಕಿನ ಪ್ರತೀಕಗಳಾಗಿವೆ. ಅವುಗಳ ಅಧ್ಯಯನವೆಂದರೆ ಕನ್ನಡ ಪರಂಪರೆ ಕನ್ನಡ ಮನಸ್ಸುಗಳ ಹಾಗೂ ಕನ್ನಡ ಸಮಾಜವೊಂದರ ಅಧ್ಯಯನವಾಗಿವೆ. ಜಾಗತೀಕ ಸ್ವರೂಪದ ವಿದ್ಯಮಾನಗಳು ಇಂಥ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳಿಗೆ ಇದು ಅಸ್ತಿತ್ವದ ಪ್ರಶ್ನೆಯನ್ನು ಮುಂದಿಟ್ಟಿದೆ. ಜಾಗತೀಕ ಸ್ವರೂಪದ ಇಂತಹ ತಲ್ಲಣಗಳನ್ನು ಎದುರಿಸಬೇಕಾದರೆ

ಕನ್ನಡವನ್ನು ಅದರ ಅಂತಃಶಕ್ತಿಗೊಳಿದಂಗೆ ಸಶಕ್ತೀಕರಣಗೊಳಿಸುವ ಜರೂರು ಇದೆ. ಕನ್ನಡ ವಿಶ್ವವಿದ್ಯಾಲಯ ಮತ್ತು ಬಿ.ಎಂ.ಶ್ರೀ ಪ್ರತಿಷ್ಠಾನಗಳು ವ್ಯಾಸಂಗ ಮತ್ತು ಸಿರಿಕಂಟದಂತಹ ಕೃತಿಗಳ ಮೂಲಕ ಇಂಥ ಸಶಕ್ತೀಕರಣ ಕಾರ್ಯಕ್ಕೆ ಕೈ ಹಾಕಿವೆ. ಹೊರಗಿನ ವಿದ್ಯಾಮಾನಗಳಿಗೆ ನಮ್ಮೊಳಗಿನಿಂದಲೇ ಉತ್ತರ ಹುಡುಕುವ ಮತ್ತು ಉತ್ತರ ಕೊಡುವುದರ ಮೂಲಕ ಕನ್ನಡ ತಿಳುವಳಿಕೆಗೆ ಹೊಸ ಪರೀಕ್ಷೆಯೊಂದನ್ನು ಕಟ್ಟಿಕೊಳ್ಳುವ ಪ್ರಯತ್ನ ಇದಾಗಿದೆ.

ಇಂಥ ಹಲವಾರು ಆಕಾಂಕ್ಷಿಗಳನ್ನು ಮನಸ್ಸಿಟ್ಟುಕೊಂಡು ಆರಂಭವಾದ ಹಸ್ತಪ್ರತಿ ವಿಭಾಗದ ವಿಚಾರ ಸಂಕಿರಣದಂತಹ ಅಭಿಯಾನ ಪ್ರತಿವರ್ಷಗಳಲ್ಲಿ ನಾಡಿನ ಸಂವೇದನಶೀಲರೊಂದಿಗೆ ಮತ್ತು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಅಧ್ಯಾಪಕರು ಕೂಡಿಕೊಂಡು ಗಂಭೀರ ಚಿಂತನೆ, ಸಂವಾದದೊಂದಿಗೆ ಸಕಾರಾತ್ಮವಾಗಿ ಕೆಲಸ ಮಾಡುತ್ತ ಬಂದಿದೆ. ಮಾಮೂಲಿ ವಿಚಾರ ಸಂಕಿರಣಗಳಗಿಂತ ಭಿನ್ನವಾಗಿ ಮತ್ತು ವಿಶ್ವವಿದ್ಯಾಲಯದ ಅಕಾಡೆಮಿ ವಾತಾವರಣದಿಂದ ಹೊರಬಂದು ಜನಮುಖಿಯಾಗಿ ಒಂದು ಸಾಂಸ್ಕೃತಿಕ ಜವಾಬ್ದಾರಿಯನ್ನು ಹೊತ್ತು ಸಾಗುತ್ತಿರುವುದೇ ಈ ವಿಚಾರಸಂಕಿರಣ ಕಾರ್ಯಕ್ರಮಗಳ ವಿಶೇಷದೆ. ಇಂತಹ ವಿಚಾರ ಸಂಕಿರಣದಲ್ಲಿ ಮಂಡನೆಯಾದ ವಿಚಾರಗಳನ್ನು ಕುರಿತು ಅದರಲ್ಲೂ ವಿಶೇಷವಾಗಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಹಸ್ತಪ್ರತಿ ಅಧ್ಯಯನದಂತಹ ನಿಯತಕಾಲಿಕೆಗಳ ಮೂಲಕ ವಿಚಾರಗಳನ್ನು ಪ್ರಕಟಿಸುವಂತಹ ಕಾರ್ಯಮಾಡಿದೆ. ಹಸ್ತಪ್ರತಿ ಭಂಡಾರಗಳ ಕುರಿತು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ನಡೆಸಿದ ವಿಚಾರ ಸಂಕಿರಣವಾಗಲಿ, ಬಿ.ಎಂ.ಶ್ರೀ. ಪ್ರತಿಷ್ಠಾನ ಮಾಡಿರುವ ಕೆಲಸವಾಗಲೀ ಇತ್ತೀಚಿಗೆ ಜಾನಪದ ವಿಶ್ವವಿದ್ಯಾಲಯವು ಸಮೂಹ ಸಂಸ್ಕೃತಿ ಕೇಂದ್ರವಾಗಿ ಹಸ್ತಪ್ರತಿಗಳ ಕುರಿತು ಆಯೋಜಿಸಿದ್ದ ರಾಷ್ಟ್ರೀಯ ವಿಚಾರಸಂಕಿರಣವಾಗಲಿ ಹಸ್ತಪ್ರತಿ ಅಧ್ಯಯನವನ್ನು ಸಾಂಪ್ರದಾಯಿಕ ಅಧ್ಯಯನಗಳಿಗಿಂತ ಭಿನ್ನವಾಗಿ ಅನುಸಂಧಾನ ಮಾಡಿದ್ದು ಗಮನಿಸುವಂಥದ್ದು. ಒಟ್ಟಾರೆಯಾಗಿ ಹಸ್ತಪ್ರತಿ ಮತ್ತು ಗ್ರಂಥಸಂಪಾದನಾ ಶಿಸ್ತುಗಳನ್ನು ಹೊಸ ರೀತಿಯ ಆಲೋಚನಾ ಕ್ರಮಗಳನ್ನು ಚಿಂತನೆಗೊಳಪಡಿಸುವ ಮತ್ತು ಅದರ ವ್ಯಾಪ್ತಿಯನ್ನು ವಿಸ್ತರಿಸುವ ಪ್ರಯತ್ನ ಇದಾಗಿದೆ ಎಂದು ಹೇಳಬಹುದು.

ಸಮ್ಮೇಳನ

ಹಸ್ತಪ್ರತಿಶಾಸ್ತ್ರ ಮತ್ತು ಅಧ್ಯಯನಕ್ಕೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ ಮುಖ್ಯವಾಗಿದ್ದು, ಹಸ್ತಪ್ರತಿ ಸಮ್ಮೇಳನದಂತಹ ಯೋಜನೆಯನ್ನು ರೂಪಿಸಿರುವ ಮಹತ್ಕಾರ್ಯ ವಿಭಾಗದಾಗಿದೆ. ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಪರಿಷ್ಕರಣೆ, ಸೂಚೀಕರಣ ಹಾಗೂ ಅಧ್ಯಯನದ ಜೊತೆಗೆ ಹಸ್ತಪ್ರತಿ ಸಮ್ಮೇಳನಗಳನ್ನು ಆಯೋಜಿಸಿತ್ತಾ ಬಂದಿದೆ.

ಹಸ್ತಪ್ರತಿಗಳಿಗಿಂತ ಸಾಂಪ್ರದಾಯಿಕ ಜ್ಞಾನ ಸಾಮಗ್ರಿಗಳನ್ನು ಕೇವಲ ಸಂಗ್ರಹ ಸಂಪಾದನೆಗಳಂತಹ ಸಾಂಪ್ರದಾಯಿಕ ಶಾಸ್ತ್ರೀಯ ಅಧ್ಯಯನಕ್ಕೆ ಮಾತ್ರ ಮೀಸಲಾಗಿರಿಸದೆ ಹೊಸ ಕಾಲದ ಹೊಸ ಜ್ಞಾನ ಶಿಸ್ತುಗಳೊಂದಿಗೆ ಅಭ್ಯಸಿಸುವುದು ಹಾಗೂ ಅವುಗಳ ಮೇಲೆ ಹಾಗೂ ಶಕ್ತಿ ಕುರಿತು ಅರಿಯುವುದು ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಮುಖ ಕಾಳಜಿಯಾಗಿದೆ. ಸಮಾಜಶಾಸ್ತ್ರ ಸಮುದಾಯ ಅಧ್ಯಯನ ಮನಶ್ಶಾಸ್ತ್ರ, ತಂತ್ರಜ್ಞಾನ ಸಾಹಿತ್ಯ, ಮೌಖಿಕ ಸಂಪ್ರದಾಯ, ಗಮಕಿ, ಕೀರ್ತನೆ, ಚಿತ್ರ, ಶಿಲ್ಪ, ಸಂಗೀತ, ಲಿಪಿಶಾಸ್ತ್ರ, ಭಾಷಾಶಾಸ್ತ್ರ ಹೀಗೆ ಹಲವು ಮಜಲುಗಳನ್ನು ಒಳಗೊಳ್ಳುವಲ್ಲಿ ೧೯೯೬ರಿಂದಲೂ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ದಿಟ್ಟ ಹೆಜ್ಜೆಯನಿಡುತ್ತ ಸಮ್ಮೇಳನಗಳನ್ನು ಆಯೋಜಿಸಿಕೊಂಡು ಬರುತ್ತಿದೆ.

'ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನ'ವನ್ನು ಮಂಗಳೂರಿನ ಥಿಯಾಲಾಜಿಕಲ್ ಸೊಸೈಟಿಯವರ ಸಹಯೋಗದಲ್ಲಿ ೧೪, ೧೫ ನವೆಂಬರ್ ೨೦೦೬ರಂದು ಎರಡು ದಿನಗಳ ಕಾಲ ನಡೆಸಲಾಯಿತು. ಈ ಮೊಟ್ಟ ಮೊದಲ ಸಮ್ಮೇಳನವನ್ನು ಗ್ರಂಥ ಸಂಪಾದನೆಯ ಮೊಟ್ಟಮೊದಲ ಹರಿಕಾರನಾದ ಹರ್ಮನ್ ಮೊಗ್ಲಿಂಗ್ ಅವರ ಸಂಸ್ಮರಣೆಯನ್ನು ಪ್ರಧಾನವಾಗಿರಿಸಿಕೊಂಡು ಮಾಡಲಾಯಿತು. ಹರ್ಮನ್ ಮೊಂಗ್ಲಿಂಗ್ ಅವರ ಕನ್ನಡ ಗ್ರಂಥ ಸಂಪಾದನೆ ಮತ್ತು ಕರ್ನಾಟಕ ಸಂಸ್ಕೃತಿಗೆ ನೀಡಿದ ಕೊಡುಗೆಗಳ ಕುರಿತ ಮೊದಲ ಪ್ರಧಾನಗೋಷ್ಠಿಯಲ್ಲಿ ಚರ್ಚಿಸಲಾಯಿತು. ಎರಡನೆಯ ದಿನ ಗ್ರಂಥಸಂಪಾದನೆ ಅನುಮಾನಗಳು ಮತ್ತು ಅನುಸಂಧಾನದ ಭಿನ್ನದಾರಿಗಳು ಎನ್ನುವ ಸಂವಾದಗೋಷ್ಠಿಯನ್ನು ಮಾಡಲಾಗಿತ್ತು. ಗ್ರಂಥಸಂಪಾದನೆಯ ತೀರ ಹೊಸ ಸಾಧ್ಯತೆಗಳ ಕುರಿತು ಸುಮಾರು ಹತ್ತಕ್ಕೂ ಹೆಚ್ಚು ವಿದ್ವಾಂಸರು ಮೌಲಿಕ ಚರ್ಚೆ ಮಾಡಿದರು. ಸಮ್ಮೇಳನಾಧ್ಯಕ್ಷರ ಸಾಹಿತ್ಯ ಸೇವೆ ಕುರಿತು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಅದರಂಗವಾಗಿ ಎಸ್.ಎಸ್. ಅಂಗಡಿ ವಿಶೇಷ ಉಪನ್ಯಾಸ ನೀಡಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ಹಿರಿಯ ವಿದ್ವಾಂಸರಾದ ಟಿ.ವಿ. ವೆಂಕಟಾಚಲ ಶಾಸ್ತ್ರಿಯವರು ವಹಿಸಿದ್ದರು. ಕನ್ನಡ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ದೃಷ್ಟಿಯಿಂದ ಆರಂಭದ ಪ್ರವರ್ತಕರಲ್ಲಿ ಮುಖ್ಯರಾದ ಹರ್ಮನ್ ಮೋಗ್ಲಿಂಗ್ ಬಗ್ಗೆ ವಿಶೇಷವಾದ ಮತ್ತು ಅಧ್ಯಯನಶೀಲವಾದ ಪ್ರಬಂಧಗಳು ಇಲ್ಲಿ ಮಂಡಿತವಾಗಿವೆ. ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ಒಂದು ಮುಖ್ಯಕೇಂದ್ರವಾದ ಮಂಗಳೂರಿನಲ್ಲಿ ಮೋಗ್ಲಿಂಗ್ ಮತ್ತು ಕಿಟ್ಟೆಲ್ ಅವರಿಂದ ಕನ್ನಡದ ಪ್ರಾಚೀನ ಕೃತಿಗಳ ಶಾಸ್ತ್ರೀಯ ಸಂಪಾದನೆ ಆರಂಭವಾಯಿತು. ಹೀಗಾಗಿ ಈ ಸಮ್ಮೇಳನ ಮೋಗ್ಲಿಂಗ್ ಅವರ ಸಂಪಾದನೆಯ ಸ್ವರೂಪ ಮತ್ತು ಮಾದರಿಗಳನ್ನು ವಿಶೇಷವಾಗಿ ಚರ್ಚಿಸಿದ್ದು ಔಚಿತ್ಯಪೂರ್ಣವಾಗಿದೆ.

ಇದರೊಂದಿಗೆ ಗ್ರಂಥಸಂಪಾದನೆಯ ಹಿಂದಿನ ಮನೋಧರ್ಮ ಕುರಿತ ವಿಶಿಷ್ಟ ಸಂವಾದ ಕೂಡ ಇಲ್ಲಿ ನಡೆದಿರುವುದು ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆಧುನಿಕ ಚಿಂತನೆಗಳ ದೃಷ್ಟಿಯಿಂದ ಮುಖ್ಯವಾದದ್ದು. 'ಗ್ರಂಥಸಂಪಾದನೆ' ಎನ್ನುವ ಶಿಸ್ತನ್ನು ಮುರಿದು ಕಟ್ಟುವ ದೃಷ್ಟಿಯಿಂದ ಹೊಸ ಚಿಂತನೆಯ ಅನೇಕ ಚಿಂತಕರು ಇಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಹೀಗಾಗಿ ಒಂದೆಡೆ ಹಸ್ತಪ್ರತಿ ಪರಂಪರೆ ಮತ್ತು ಮೋಗ್ಲಿಂಗ್ ಕುರಿತ ಚರ್ಚೆ, ಮತ್ತೊಂದೆಡೆ ಗ್ರಂಥಸಂಪಾದನೆಯನ್ನು ಹೊಸದಾಗಿ ಪುನರ್‌ನಿರ್ಮಿಸುವ ಆಧುನಿಕ ದೃಷ್ಟಿಕೋನ ಇವೆರಡೂ ಮೊದಲನೆಯ ಸಮ್ಮೇಳನದಲ್ಲಿ ಮುಖಾಮುಖಿಯಾಗಿರುವುದು ಕನ್ನಡ ವಿಶ್ವವಿದ್ಯಾಲಯವು ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನೆಯನ್ನು ಪರಿಭಾವಿಸಿದ ನಿಲುವನ್ನು ಸೂಚಿಸುತ್ತದೆ. ಮಾತ್ರವಲ್ಲದೆ ಕರ್ನಾಟಕದಲ್ಲಿ ಈ ಶಿಸ್ತು ಮುಂದಿನ ದಿನಗಳಲ್ಲಿ ಹೊಂದಬೇಕಾದ ಹೊಸ ಆಯಾಮಗಳ ಕುರಿತ ದಿಕ್ಸೂಚಿಯಾಗಿದೆ.

'ಅಖಿಲ ಕರ್ನಾಟಕ ಎರಡನೆಯ ಹಸ್ತಪ್ರತಿ ಸಮ್ಮೇಳನ'ವು ೨೦೦೪ರಲ್ಲಿ ಸಂಕೇಶ್ವರದ ಶ್ರೀ ಶಿವಯೋಗೇಶ್ವರ ಕಲಾ, ವಿಜ್ಞಾನ ಹಾಗೂ ಪಟ್ಟಣ ಪಂಚಾಯ್ತಿ ವಿಜ್ಞಾನ ಮಹಾವಿದ್ಯಾಲಯದ ಸಹಯೋಗದಲ್ಲಿ ನಡೆಯಿತು. ಈ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹಿರಿಯ ವಿದ್ವಾಂಸ ಎನ್. ಬಸವಾರಾಧ್ಯ ಅವರು ವಹಿಸಿಕೊಂಡಿದ್ದರು. ಕನ್ನಡ ವಿಶ್ವವಿದ್ಯಾಲಯದ ಆರಂಭಿಕ ಕುಲಪತಿಗಳಾದ ಚಂದ್ರಶೇಖರ ಕಂಬಾರ ಅವರು ಸಮ್ಮೇಳನದ ಉದ್ಘಾಟನೆ ಮಾಡಿದರು. ಮಾನ್ಯ ಕುಲಪತಿಗಳಾದ ಬಿ.ಎ. ವಿವೇಕರೈ ಅವರು ಅಧ್ಯಕ್ಷತೆ ವಹಿಸಿದ್ದರು. ಈ ಸಮ್ಮೇಳನದ ಮುಖ್ಯ ಚರ್ಚೆಯನ್ನು ನಾಲ್ಕು ರೀತಿಯಲ್ಲಿ ರೂಪಿಸಲಾಗಿತ್ತು. ಒಂದು ಕನ್ನಡದ ಮೊದಲ ಪ್ರಾಧ್ಯಾಪಕ ಮತ್ತು ಹಿರಿಯ ಸಂಶೋಧಕರಾದ ಕೆ.ಜಿ. ಕುಂದಣಗಾರರ ಕುರಿತು. ಎರಡು, ಕನ್ನಡ ಹಸ್ತಪ್ರತಿಗಳ ಸಾಂಸ್ಕೃತಿಕ ಸಂಕಥನದ ಕುರಿತು, ಮೂರು, ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದ ಎನ್. ಬಸವಾರಾಧ್ಯರ ಸಾಹಿತ್ಯ ಸೇವೆ ಕುರಿತು. ನಾಲ್ಕು, ಬೆಳಗಾವಿ ಜಿಲ್ಲೆಯ ಹಸ್ತಪ್ರತಿ ಸಂಪತ್ತು ಕುರಿತು. ಹೀಗೆ ಎರಡು ದಿನದ ಈ ಚಿಂಥನ ಮಂಥನದಲ್ಲಿ ಹಿರಿಯ ಮತ್ತು ಕಿರಿಯ ತಲೆಮಾರಿನ ಸುಮಾರು ೨೦ಕ್ಕೂ ಹೆಚ್ಚು ವಿದ್ವಾಂಸರು ಗುಣಾತ್ಮಕ ಚರ್ಚೆಗಳನ್ನು ನಡೆಸಿಕೊಟ್ಟರು. ಹಸ್ತಪ್ರತಿ ಅಧ್ಯಯನಕ್ಕೆ ಹೊಸ ಒಳವುಗಳನ್ನು ಚರ್ಚೆಯಲ್ಲಿ ಕಂಡುಕೊಳ್ಳಲಾಯಿತು.

'ಅಖಿಲ ಕರ್ನಾಟಕ ಮೂರನೆಯ ಹಸ್ತಪ್ರತಿ ಸಮ್ಮೇಳನ'ವನ್ನು ದಿನಾಂಕ ಸೆಪ್ಟೆಂಬರ್ ೧೬ ಮತ್ತು ೧೭, ೨೦೦೫ ರಂದು, ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರದ ಸಹಯೋಗದಲ್ಲಿ ವಿಜಾಪುರದಲ್ಲಿ ಆಯೋಜಿಸಿತ್ತು. ಕರ್ನಾಟಕದ ಖ್ಯಾತ ಸಂಶೋಧಕರೂ, ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳೂ

ಆದ ಎಂ.ಎಂ. ಕಲಬುರ್ಗಿ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆಯಿತು. ೧. ಫ.ಗು. ಹಳಕಟ್ಟಿ ಸಾಹಿತ್ಯ ೨. ಲೌಕಿಕಶಾಸ್ತ್ರ ಸಾಹಿತ್ಯ ೩. ವಿಜಾಪುರ ಜಿಲ್ಲೆಯ ಹಸ್ತಪ್ರತಿ ಸಂಪತ್ತು ಮತ್ತು ೪. ಹಸ್ತಪ್ರತಿ – ಗ್ರಂಥಸಂಪಾದನೆಗೆ ಎಂ.ಎಂ. ಕಲಬುರ್ಗಿ ಅವರ ಕೊಡುಗೆ ಎಂಬ ನಾಲ್ಕು ಗೋಷ್ಠಿಗಳನ್ನು ಏರ್ಪಡಿಸಿ ಹಸ್ತಪ್ರತಿ ಮತ್ತು ಗ್ರಂಥ ಸಂಪಾದನಾ ಕ್ಷೇತ್ರದ ಅರಿವನ್ನು ವಿಸ್ತರಿಸುವ ಪ್ರಯತ್ನ ಈ ಸಮ್ಮೇಳನದಲ್ಲಿ ನಡೆಯಿತು.

'ಅಖಿಲ ಕರ್ನಾಟಕ ನಾಲ್ಕನೆಯ ಹಸ್ತಪ್ರತಿ ಸಮ್ಮೇಳನ'ವನ್ನು ದಿನಾಂಕ ೨೭ ಮತ್ತು ೨೮ ಸೆಪ್ಟೆಂಬರ್ ೨೦೦೬ರಂದು ತುಮಕೂರಿನ ಶ್ರೀ ಸಿದ್ಧಗಂಗಾ ಶಿಕ್ಷಣ ಸಂಸ್ಥೆಯ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು. ಈ ಸಮ್ಮೇಳನದಲ್ಲಿ ಆರ್. ನರಸಿಂಹಾಚಾರ್ ಸಾಹಿತ್ಯ ಸಂಸ್ಕರಣೆ, ಲೌಕಿಕಶಾಸ್ತ್ರ ಹಸ್ತಪ್ರತಿಗಳು, ತುಮಕೂರು ಜಿಲ್ಲೆಯ ಹಸ್ತಪ್ರತಿ ಸಂಪತ್ತು, ಸಮ್ಮೇಳನಾಧ್ಯಕ್ಷರಾದ ಬಿ.ಎಸ್. ಸಣ್ಣಯ್ಯನವರ ಸಾಧನೆ ಕುರಿತು ವಿಶೇಷ ಉಪನ್ಯಾಸ ಏರ್ಪಡಿಸಲಾಗಿತ್ತು. ಹಿರಿಯ ವಿದ್ವಾಂಸರಾದ ಕನ್ನಡ ಕವಿಚರಿತಕಾರರಾದ ಆರ್. ನರಸಿಂಹಾಚಾರ್ ಅವರ ಸಮಗ್ರ ಸಾಹಿತ್ಯವನ್ನು ಹೊಸ ದೃಷ್ಟಿಕೋನದಿಂದ ಚರ್ಚಿಸಲಾಯಿತು. ಗಜಶಾಸ್ತ್ರ, ಜೋತಿಷ್ಯಶಾಸ್ತ್ರ, ಕಾಮಶಸ್ತ್ರ ಹಾಗೂ ರಟ್ಟಮತಶಾಸ್ತ್ರಗಳ ಕುರಿತ ಪ್ರಬಂಧಗಳು ಮಂಡಿಸಲಾಗಿತು. ಲೌಕಿಕಶಾಸ್ತ್ರ ಅಧ್ಯಯನದ ಹೊಸ ಮಾಹಿತಿಗಳನ್ನು ಮೊದಲ ಬಾರಿಗೆ ಈ ಸಮ್ಮೇಳನದ ವಿಷಯವಾಗಿ ಸೇರಿವೆ. ಹಾಗೆಯೇ ತುಮಕೂರು ಜಿಲ್ಲೆಯ ಹಸ್ತಪ್ರತಿಗಳ ವಿಶೇಷತೆಯನ್ನು ಗುರುತಿಸುವ ಲೇಖನಗಳು ಕೂಡ ಕುತೂಹಲಕರವಾಗಿದ್ದು ಜೊತೆಗೆ ಈ ಸಮ್ಮೇಳನದ ಅಧ್ಯಕ್ಷರಾದ ಬಿ.ಎಸ್. ಸಣ್ಣಯ್ಯನವರ ಕೊಡುಗೆಯನ್ನು ಸ್ಥೂಲವಾಗಿ ಚರ್ಚಿಸಲಾಗಿದೆ.

'ಅಖಿಲ ಕರ್ನಾಟಕ ಐದನೆಯ ಹಸ್ತಪ್ರತಿ ಸಮ್ಮೇಳನ'ವನ್ನು ದಿನಾಂಕ ೨೯ ಮತ್ತು ೩೦, ಡಿಸೆಂಬರ್ ೨೦೦೭ರಂದು ಸೇಡಂನ ಶ್ರೀ ಕೊತ್ತಲಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ, ಶೇಠ ಶ್ರೀ ತುಳಸಿರಾಮ ಗಿಲಡಾ ನೃಪತುಂಗ ಪ್ರಥಮದರ್ಜೆ ಮಹಾವಿದ್ಯಾಲಯದ ಸಹಯೋಗದಲ್ಲಿ ಏರ್ಪಡಿಸಲಾಯಿತು. ಈ ಸಮ್ಮೇಳನವು ಗೊರೇಬಾಳ ಹನುಮಂತರಾಯರ ಸಾಹಿತ್ಯ ಸಂಸ್ಕರಣೆ, ಲೌಕಿಕಶಾಸ್ತ್ರದ ಹಸ್ತಪ್ರತಿಗಳು, ಗುಲಬರ್ಗಾ ಜಿಲ್ಲೆಯ ಹಸ್ತಪ್ರತಿ ಸಂಪತ್ತು ಮತ್ತು ಸಮ್ಮೇಳನಾಧ್ಯಕ್ಷರಾದ ಬಿ.ವಿ. ಮಲ್ಲಾಪುರ ಅವರ ಸಾಧನೆ ಕುರಿತು ವಿಶೇಷ ಉಪನ್ಯಾಸ – ಹೀಗೆ ನಾಲ್ಕು ಭಾಗಗಳನ್ನು ಒಳಗೊಂಡಿದೆ. ದಾಸಸಾಹಿತ್ಯ ಸಂಪಾದನೆಗೆ ಗೊರೇಬಾಳರ ಕೊಡುಗೆ ಅಪಾರವಾದುದು. ಅವರ ಸಮಗ್ರ ಸಾಹಿತ್ಯವನ್ನು ಹೊಸ ದೃಷ್ಟಿಕೋನದಿಂದ ಚರ್ಚಿಸಲಾಗಿದೆ. ಕೃಷಿಶಾಸ್ತ್ರ, ಖಗೋಳಶಾಸ್ತ್ರ ಹಾಗೂ ಸಮಾಧಿಕ್ರಿಯಾಶಾಸ್ತ್ರಗಳ ಕುರಿತು ಸಂಪ್ರಬಂಧಗಳು ಮಂಡಿತಗೊಂಡಿವೆ. ಲೌಕಿಕಶಾಸ್ತ್ರ ಅಧ್ಯಯನಕ್ಕೆ ಹೊಸ ಮಾಹಿತಿಗಳನ್ನು ಮೊದಲಬಾರಿಗೆ ಸೇರಿಸಲಾಯಿತು. ಹಾಗೆಯೇ ಗುಲಬರ್ಗಾ ಜಿಲ್ಲೆಯ ಹಸ್ತಪ್ರತಿಗಳ

ವಿಶೇಷತೆಯನ್ನು ಗುರುತಿಸುವ ಪ್ರಬಂಧಗಳು ಮಂಡನೆಯಾಗಿರುವಂತಹದ್ದು ಕುತೂಹಲಕರ ಸಂಗತಿ. ಜೊತೆಗೆ ಈ ಸಮ್ಮೇಳನದ ಅಧ್ಯಕ್ಷರಾದ ಬಿ.ವಿ. ಮಲ್ಲಾಪುರ ಅವರ ಕೊಡುಗೆಯನ್ನು ಸ್ಥೂಲವಾಗಿ ಚರ್ಚಿಸಲಾಗಿದೆ.

'ಅಖಿಲ ಕರ್ನಾಟಕ ಆರನೆಯ ಹಸ್ತಪ್ರತಿ ಸಮ್ಮೇಳನ'ವನ್ನು ಫೆಬ್ರವರಿ, ೨೦೧೦ರಂದು ಬಸವನ ಬಾಗೇವಾಡಿಯ ಬಿ.ಎಲ್.ಡಿ.ಇ. ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು. ಈ ಸಮ್ಮೇಳನದಲ್ಲಿ ಶಿ.ಶಿ. ಬಸವನಾಳರ ಸಾಹಿತ್ಯ, ಲೌಕಿಕಶಾಸ್ತ್ರದ ಹಸ್ತಪ್ರತಿಗಳು, ಬಸವನಬಾಗೇವಾಡಿ ಪರಿಸರದ ಹಸ್ತಪ್ರತಿ ಸಂಪತ್ತು ಮತ್ತು ಸಮ್ಮೇಳನಾಧ್ಯಕ್ಷರಾದ ಸಿ. ಮಹಾದೇವಪ್ಪ ಅವರ ಸಾಧನೆ ಕುರಿತು ವಿಶೇಷ ಉಪನ್ಯಾಸ ಏರ್ಪಡಿಸಲಾಗಿತ್ತು. ಶಿಕ್ಷಣ, ಪತ್ರಿಕೋದ್ಯಮ, ವಚನಸಾಹಿತ್ಯ, ಕಾವ್ಯಸಾಂಪಾದನೆ, ಲಕ್ಷಣಗ್ರಂಥಗಳ ಸಂಪಾದನೆಗೆ ಶಿ.ಶಿ. ಬಸವನಾಳರ ಕೊಡುಗೆ ಅಪಾರವಾದುದು. ಅವರ ಸಾಹಿತ್ಯದ ಸಮಗ್ರ ಅವಲೋಕನ ಇಲ್ಲಿ ಸಾಧ್ಯವಾಗಿದೆ. ಯೋಗ, ಗಣಿತ, ನೀತಿ ಹಾಗೂ ಪ್ರಶ್ನಶಾಸ್ತ್ರ ಹಸ್ತಪ್ರತಿಗಳ ವಿಶೇಷತೆಯನ್ನು ಮೊದಲ ಬಾರಿಗೆ ದಾಖಲಿಸಲಾಗಿದೆ. ಹಾಗೆಯೇ ಬಸವನಬಾಗೇವಾಡಿ ಪರಿಸರದ ಹಸ್ತಪ್ರತಿಗಳ ಸಮೀಕ್ಷೆಯನ್ನು ಮಾಡಲಾಗಿದೆ. ಈ ಸಮ್ಮೇಳನದ ಅಧ್ಯಕ್ಷರಾದ ಸಿ.ಮಹಾದೇವಪ್ಪ ಅವರು ಹಸ್ತಪ್ರತಿ, ಗ್ರಂಥಸಂಪಾದನೆ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆಯನ್ನು ಈ ಸಮ್ಮೇಳನದಲ್ಲಿ ಮೆಲುಕು ಹಾಕಲಾಗಿದೆ.

'ಅಖಿಲ ಕರ್ನಾಟಕ ಏಳನೆಯ ಹಸ್ತಪ್ರತಿ ಸಮ್ಮೇಳನ'ವನ್ನು ೧ ಮತ್ತು ೨, ಏಪ್ರಿಲ್, ೨೦೧೧ರಂದು ಸುತ್ತೂರಿನ ಜ. ಶ್ರೀ. ವೀರಸಿಂಹಾಸನ ಮಹಾಸಂಸ್ಥಾನ ಮಠದ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು. ಈ ಹಸ್ತಪ್ರತಿ ಸಮ್ಮೇಳನದಲ್ಲಿ ಶಿ.ಚ. ನಂದೀಮಠ ಸಾಹಿತ್ಯ ಸ್ಮರಣೆ, ಶಾಸ್ತ್ರಸಾಹಿತ್ಯ ಹಸ್ತಪ್ರತಿಗಳು, ಮೈಸೂರು ಪರಿಸರದ ಹಸ್ತಪ್ರತಿ ಸಂಪತ್ತು ಮತ್ತು ಸಮ್ಮೇಳನಾಧ್ಯಕ್ಷರಾದ ಬಿ.ವಿ. ಶಿರೂರ ಅವರ ಸಾಧನೆ ಕುರಿತು ಚರ್ಚಿಸಲಾಯಿತು. ನಂದೀಮಠರು ಕರ್ನಾಟಕ ಕಂಡ ಒಬ್ಬ ಅಪರೂಪದ ಶಿಕ್ಷಣ ತಜ್ಞರು. ಅವರ ವೀರಶೈವ ಸಂಬಂಧಿ ಧಾರ್ಮಿಕ ಕೃತಿಗಳು ಎಂಬ ಕೃತಿಗಳು ಮೂಲ ಆಕರಗಳು. ಹೀಗಾಗಿ ಅವರ ಸಮಗ್ರ ಸಾಹಿತ್ಯ ಬದುಕನ್ನು ಚರ್ಚಿಸಿರುವುದು ಇಲ್ಲಿ ಸಮಯೋಚಿತ. ಜಲಶಾಸ್ತ್ರ, ಶಕುನಶಾಸ್ತ್ರ, ರತ್ನಶಾಸ್ತ್ರ, ಮುಲ್ಲಾ ಶಾಸ್ತ್ರ ಕುರಿತ ಸಂಪ್ರಬಂಧಗಳು ಕುತೂಹಲಕಾರಿಯಾಗಿ ಚರ್ಚಿತವಾಗಿವೆ. ಹಾಗೆಯೇ ಮೈಸೂರು ಪರಿಸರದ ಹಸ್ತಪ್ರತಿಗಳ ವಿಶೇಷತೆ, ಸಮ್ಮೇಳನಾಧ್ಯಕ್ಷರ ಸಾಹಿತ್ಯ ಕೊಡುಗೆಗಳನ್ನು ಇಲ್ಲಿ ಸಂಯೋಜಿಸಲಾಗಿದ್ದು ಈ ಸಮ್ಮೇಳನದ ವಿಶೇಷತೆಯಾಗಿದೆ.

'ಅಖಿಲ ಕರ್ನಾಟಕ ಎಂಟನೆಯ ಹಸ್ತಪ್ರತಿ ಸಮ್ಮೇಳನ'ವನ್ನು ದಿನಾಂಕ ೦೧ ಮತ್ತು ೦೨. ಫೆಬ್ರವರಿ. ೨೦೧೨ರಂದು ಶಿವಮೊಗ್ಗದ ಬೆಕ್ಕಿನ ಕಲ್ಮಠದ ಗುರುಬಸವ ಅಧ್ಯಯನ

ಪೀಠದ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು. ಈ ಸಮ್ಮೇಳದಲ್ಲಿ ಶ್ರೀ ಚೆನ್ನಮಲ್ಲಿಕಾರ್ಜುನರ ಸಾಹಿತ್ಯ ಸ್ಮರಣೆ, ಶಾಸ್ತ್ರ ಸಾಹಿತ್ಯದ ಹಸ್ತಪ್ರತಿಗಳು, ಶಿವಮೊಗ್ಗ ಜಿಲ್ಲೆಯ ಹಸ್ತಪ್ರತಿ ಸಂಪತ್ತು ಮತ್ತು ಗೌ.ಮ ಉಮಾಪತಿಶಾಸ್ತ್ರಿಯವರು ಹಸ್ತಪ್ರತಿ ಮತು ಗ್ರಂಥಸಂಪಾದನಾ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳ ಕುರಿತು ಗೊಷ್ಟಿಗಳನ್ನು ಎರ್ಪಡಿಸಲಾಗಿತ್ತು. ಖಡ್ಗ, ಬಾಣಗಾರಿಕೆ, ಭೈಷಜ್ಯ, ನಾಡಿಶಾಸ್ತ್ರ, ಹಾಗೂ ಕವಿರಾಜಮಾರ್ಗಗಳಂತಹ ಶಾಸ್ತ್ರ ಗ್ರಂಥಗಳನ್ನು ಕುರಿತು ಈ ಸಮ್ಮೇಳನದಲ್ಲಿ ಚರ್ಚಿಸಲಾಗಿದೆ.

'ಅಖಿಲ ಕರ್ನಾಟಕ ಒಂಬತನೆಯ ಹಸ್ತಪ್ರತಿ ಸಮ್ಮೇಳನ'ವನ್ನು ದಿನಾಂಕ ೧೬ ಮತ್ತು ೧೭, ಫೆಬ್ರವರಿ, ೨೦೧೭ರಂದು ಬಿ.ಕೆ. ಹೀರೆಮತ್ ರವರ ಸರ್ವಾಧ್ಯಕ್ಷತೆಯಲ್ಲಿ ಬಾದಾಮಿ ತಾಲ್ಲೂಕಿನ ಕೆರೂರಿನಲ್ಲಿ ನಡೆದ ಸಮ್ಮೇಳನವಾಗಿದೆ. ಈ ಸಮ್ಮೇಳನದಲ್ಲಿ ಬಿ.ಕೆ ಹೀರೆಮತ್‌ರ ಬದುಕು ಬರಹಗಳನ್ನು, ಕುರಿತು ವಿಶೇಷ ಚರ್ಚೆನಡೆಸಲಾಗಿದೆ. ವಿಶೇಷವಾಗಿ ಕನ್ನಡ ಹಸ್ತಪ್ರತಿಗಳು, ಕುಶಲಕರ್ಮಿ ವರ್ಗಗಳು ಕುರಿತು ವಿವಿಧ ನೆಲೆಯಲ್ಲಿ ಚರ್ಚಿಸಿದ್ದು. ಬಾಗಲಕೋಟೆ ಪರಿಸರದ ಹಸ್ತಪ್ರತಿ ನೆಲೆಗಳನ್ನು ಕುರಿತು ಮತ್ತು ಹಸ್ತಪ್ರತಿ ನಿರ್ಮಾಣ ಕೇಂದ್ರಗಳಾಗಿ ಮಠಮಾನ್ಯಗಳು, ಎಂಬ ವಿಷಯದ ಮೇಲೆ ವಿದ್ವತ್‌ಪೂರ್ಣ ಚರ್ಚೆಗಳಾದವು. ಒಟ್ಟಿನಲ್ಲಿ ಹಸ್ತಪ್ರತಿಗಳನ್ನು ನಿರ್ಮಿಸಿದ ಮತ್ತು ಪೋಷಿಸಿದ ನೇಪಥ್ಯ ಕಲಾವಿದರ ಕುರಿತು ನಾಡಿನ ವಿವಿಧ ವಿದ್ವಾಂಸರುಗಳು ಗಂಭೀರವಾಗಿ ಚರ್ಚಿಸಿದ್ದು ಈ ಸಮ್ಮೇಳನದ ವಿಶೇಷತೆಯಾಗಿದೆ.

'ಅಖಿಲ ಕರ್ನಾಟಕ ಹತ್ತನೆಯ ಹಸ್ತಪ್ರತಿ ಸಮ್ಮೇಳನ'ವನ್ನು ದಿನಾಂಕ ೦೪ ಮತ್ತು ೦೫, ಫೆಬ್ರವರಿ, ೨೦೧೪ರಂದು ಧಾರವಾಡದ ಜೆ.ಎಸ್.ಎಸ್ ಕಲಾಭವನದಲ್ಲಿ ನಡೆಯಿತು. ಕನ್ನಡ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಪತಿಗಳಾದ ಚಂದ್ರಶೇಖರ ಕಂಬಾರರ ಸರ್ವಾಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನದಲ್ಲಿ ಕನ್ನಡದ ಮೊಟ್ಟ ಮೊದಲ ಬಾರಿಗೆ ಸಾಹಿತ್ಯ, ಸಾಂಸ್ಕೃತಿಕ ವಲಯ ಮತ್ತು ಸಾಹಿತ್ಯೇತರ ವಲಯಗಳ ಪಠ್ಯವಾಗಿ ಪರಿಭಾವಿಸಿ ಅವು ಅನುಸಂಧಾನಿಸಿದ ನೆಲೆಗಳ ಕುರಿತು ಒಂದು ಪೂರ್ಣಪ್ರಮಾಣದ ಚರ್ಚೆಯನ್ನು ಮಾಡಲಾಯಿತು. ನಾಡಿನ ವಿವಿಧ ಜ್ಞಾನಶಿಸ್ತುಗಳ ಅನೇಕ ಜನ ವಿದ್ವಾಂಸರು ಪಠ್ಯ ಮತು ಪ್ರತೀಕರಣ ನೆಲೆಗಳ ಕುರಿತು ವಿಸ್ತಾರವಾಗಿ ಚರ್ಚಿಸಿದ್ದಾರೆ. ಈ ಸಮ್ಮೇಳನದಲ್ಲಿ ಹಸ್ತಪ್ರತಿಗಳನ್ನು ಒಂದು ವಿಶಾಲ ಸಾಂಸ್ಕೃತಿಕ ತಳಹದಿಯ ಮೇಲೆ ಮುಕ್ತವಾಗಿ ಚರ್ಚಿಸುವ ಪ್ರಯತ್ನವಾಗಿದೆ. ಕನ್ನಡ ಭಾಷೆ ಹಾಗೂ ಸಂಸ್ಕೃತಿಗಳು ಚಲನಶೀಲವೂ ಹಾಗೂ ಸ್ವಯಂ ಚೈತನ್ಯವುಳ್ಳವೂ ಆಗಿರುವ, ಸಾವಿರಾರು ವರ್ಷಗಳ ಇತಿಹಾಸವಿರುವ ಪರಿಕಲ್ಪನೆಗಳು, ಇಂಥ ಸಾಹಿತ್ಯ ಹಾಗೂ ಸಂಸ್ಕೃತಿ ನಿರ್ಮಾಣ ಹಾಗೂ ಪ್ರಸಾರದಲ್ಲಿ ತೊಡಗಿದ್ದ ನಮ್ಮ ಕವಿ, ಲಿಪಿಕಾರರು, ಪೋಷಕರು,

ಗಮಕಿಗಳು, ಕೀರ್ತನಕಾರರು, ಟೀಕಾಕಾರರು ಕನ್ನಡ ಭಾಷೆ ಹಾಗೂ ಸಂಸ್ಕೃತಿಗಳನ್ನು ಪುನರುಜೀವನಗೊಳಿಸುವ ಸಂಕಲ್ಪ ಮತ್ತು ಶ್ರದ್ಧೆಯಿಂದ ದುಡಿದವರು. ಅದರಲ್ಲೂ ವಚನಕಾರರು, ದಾಸರು, ಹಾಗೂ ತತ್ವಪದಕಾರರಂತಹ ತೋಂಡಿತನ ಪ್ರಧಾನವಾದ ಭಕ್ತ ಕವಿಗಳಲ್ಲಿ ಇದೂ ಇನ್ನೂ ಉಜ್ವಲವಾಗಿ ಕಾಣುವಂಥದ್ದು. ಹೊಸ ಸಾಹಿತ್ಯಕ ಭಾಷೆಯನ್ನು ಹಾಗೂ ಹೊಸ ಸಾಹಿತ್ಯಕ ರೂಪಗಳನ್ನು ಇವರು ಶೋಧಿಸಿದರು. ಹಸ್ತಪ್ರತಿಗಳ ಒಡಲೊಳಗೆ ಅಂದರೆ ಕನ್ನಡ ಸಂವೇದನೆಯ ಒಳಗೆ ಕೇಳಿಬರುವ 'ಹಲವು ಕನ್ನಡಂಗಳ್' ಸುಳಿವ ಶಾಸನ' 'ಹೊಸತಾಗಿ ವಿರಚಿಸಿದೆ' ಸಕಲ ಜನಹಿತಾರ್ಥವಾಗಿ ಹೇಳಿದೆ' 'ಕೇಳುಜನಮೇಜಯಧರಿತ್ರಿ' ಕೇಳಿದವರಿಗೂ ಹೇಳಿದವರಿಗೂ ಸನ್ಮಂಗಲ ವಾಗಲಿ' ಇತ್ಯಾದಿ ಧ್ವನಿಗಳು ಹಸ್ತಪ್ರತಿಗಳ ನಿರ್ದಿಷ್ಟ ಲಿಖಿತ ರೂಪಕ್ಕಿಂತ ಅದರ ಸಂವಹನ ಹಾಗೂ ಪ್ರಯೋಜನದ ಬಹುಮುಖಿ ಸಾಧ್ಯತೆಗಳನ್ನು ಹೇಳುತ್ತವೆ. ಕನ್ನಡ ಸಾಹಿತ್ಯ ಲಿಖಿತ ರೂಪಕ್ಕಿಂತ ಮುನ್ನವೇ ಜನರ ನಾಲಿಗೆಯ ಮೇಲೆ ಹುಟ್ಟಿ ಬೆಳೆದದ್ದು ಇಲ್ಲಿ ಕಾಣುತ್ತದೆ. ಆದರೆ ನಮ್ಮ ಅಧ್ಯಯನದ ಕ್ರಮಗಳು ಇಂಥ ಸೃಜನಶೀಲವಾದ ವಿಸ್ತೃತ ಸಂವೇದನೆಗಳನ್ನು ಸವರಿ ಏಕಾಕೃತಿಗೊಳಿಸುವ, ಶುದ್ಧಗೊಳಿಸುವ ಕೆಲಸದಲ್ಲಿ ನಿರತವಾಗುತ್ತ ಬಂದವು. ಕವಿಕೇಂದ್ರಿತ, ಕೃತಿಕೇಂದ್ರಿತ, ಪಠ್ಯಕೇಂದ್ರಿತ, ಜಾತಿಕೇಂದ್ರಿತವೆಂದು ನಿರ್ದಿಷ್ಟಗೊಳಿಸಿ, ಜ್ಞಾನ ಹಾಗೂ ಅದರ ಪ್ರತಿನಿಧೀಕರಣಗಳ ಮೇಲೆ ಇಂಥ ಶೈಕ್ಷಣಿಕ ಚಿಂತನೆಗಳು ಸಾಧಿಸಿರುವ ಪ್ರಾಬಲ್ಯವನ್ನು ಪ್ರಶ್ನೆಮಾಡುವುದು ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿತ್ತು.

'ಅಖಿಲ ಕರ್ನಾಟಕ ಹನ್ನೊಂದನೆಯ ಹಸ್ತಪ್ರತಿ ಸಮ್ಮೇಳನ'ವನ್ನು ದಿನಾಂಕ ೩೦ ಮತ್ತು ೩೧, ಅಕ್ಟೋಬರ್, ೨೦೧೪ರಂದು ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದಯಿತು. ಈ ಸಮ್ಮೇಳನದಲ್ಲಿ ಹಳೆಯ ಮತ್ತು ಹೊಸ ತಲೆಮಾರಿನ ವಿವಿಧ ಅಧ್ಯಯನ ಶಿಸ್ತುಗಳ ವಿದ್ವಾಂಸರು ತಮ್ಮ ವಿಚಾರವನ್ನು ಮಂಡಿಸಿದಲ್ಲದೇ ಅರ್ಥಪೂರ್ಣವಾದ ಸಂವಾದವನ್ನು ನಡೆಸಿದ್ದಾರೆ. ವಿಶೇಷವಾಗಿ ಈ ಸಮ್ಮೇಳನದಲ್ಲಿ ನಡುಗನ್ನಡ ಸಾಹಿತ್ಯ ಮತ್ತು ಅಧುನಿಕ ಸಾಹಿತ್ಯದ ಕಾಲಘಟ್ಟಗಳಲ್ಲಿ ಪಠ್ಯಗಳ ಸಂಗ್ರಹ, ಸಂಪಾದನೆ, ಮುದ್ರಣ ಹಾಗೂ ವಿಶ್ಲೇಷಣೆಗಳನ್ನು ಮರುನಿರ್ವಚಿಸುವ ಪ್ರಯತ್ನ ಮಾಡಲಾಯಿತು. ಆ ಮೂಲಕ ಶಾಸ್ತ್ರೀಯ ಮತ್ತು ಧಾರ್ಮಿಕ ಒತ್ತಾಸೆಗಳು ಕನ್ನಡ ಪಠ್ಯಗಳನ್ನು ಎದುರುಗೊಂಡ ವಿವಿಧ ಸಾಧ್ಯತೆ ಮತ್ತು ಮಿತಿಗಳನ್ನು ಕುರಿತು ಅನುಸಂಧಾನ ಮಾಡಲಾಯಿತು. ಸಮ್ಮೇಳನದ ಸರ್ವಾಧ್ಯಕ್ಷರಾದ ದೇ. ಜವರೇಗೌಡರಂತಹ ಹಿರಿಯರಿಂದ ಹಿಡಿದು ಕೆ.ವಿ ನಾರಾಯಣ ಅವರ ಸಮಾರೋಪ ನುಡಿಗಳವರೆಗೆ ಗ್ರಂಥಸಂಪಾದನೆಗೆ ಮತ್ತು ಅದರ ವಿವಿಧ ನೆಲೆಗಳನ್ನು ಹೊಸ ತಿಳುವಳಿಕೆಯೊಂದಿಗೆ ಎದುರು ಬದುರಾಗಿಸುವ ಸಮರ್ಥ ಕೆಲಸ ಮಾಡಿದ್ದಾರೆ. ಪಠ್ಯದಲ್ಲಿ

ಕಾಣುವ ಪ್ರಕ್ಷೇಪ ಅಥವಾ ನಿರಾಕಾರಿತ ರೂಪಗಳನ್ನು ದೋಷಗಳನ್ನಾಗಿ ಗ್ರಹಿಸದೇ ಒಂದು ಪಠ್ಯವನ್ನು ಆಯಾ ಕಾಲದ ಸಾಹಿತ್ಯಿಕ ಹಾಗೂ ಸಾಹಿತ್ಯೇತರ ವಲಯಗಳು ಅನುಸಂಧಾನವನ್ನು ಮಾಡಿದ ಪ್ರತಿಕ್ರಿಯಿಸಿದ ಮತ್ತು ಪುನರ್ ರಚನೆ ಮಾಡಿಕೊಂಡು ಪ್ರಕ್ರಿಯಾತ್ಮಕ ನೆಲೆಯಲ್ಲಿ ವಿಶ್ಲೇಷಿಸಿಕೊಳ್ಳಲಾಗಿದೆ.

'ಅಖಿಲ ಕರ್ನಾಟಕ ಹನ್ನೆರಡನೆಯ ಹಸ್ತಪ್ರತಿ ಸಮ್ಮೇಳನ'ವನ್ನು ದಿನಾಂಕ ೪ ಮತ್ತು ೫, ಡಿಸೆಂಬರ್, ೨೦೧೫ರಂದು ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಕೇಂದ್ರ, ಉಜಿರೆಯ ಹಾ.ಮಾ.ನಾ. ಸಂಶೋಧನ ಕೇಂದ್ರ ಹಾಗೂ ಎಸ್.ಡಿ.ಎಂ ಪದವಿ ಕಾಲೇಜಿನ ಕನ್ನಡ ವಿಭಾಗದ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಎರ್ತೂರು ಶಾಂತಿರಾಜಶಾಸ್ತ್ರೀ ಸಾಹಿತ್ಯ ಸಂಸ್ಮರಣೆ, ಮಾರ್ಗ ಸಾಹಿತ್ಯ ಪರಿಷ್ಕರಣಗಳು, ದಕ್ಷಿಣ ಕನ್ನಡ ಜಿಲ್ಲೆಯ ಹಸ್ತಪ್ರತಿ ಸಂಪತ್ತು, ಹಾಗೂ ವೀರಣ್ಣ ರಾಜೂರ ಅವರ ಸಾಹಿತ್ಯ ಸಾಧನೆ ಕುರಿತು ಈ ಸಮ್ಮೇಳನದಲ್ಲಿ ಚರ್ಚಿಸಲಾಗಿದೆ.

'ಅಖಿಲ ಕರ್ನಾಟಕ ಹದಿಮೂರನೆಯ ಹಸ್ತಪ್ರತಿ ಸಮ್ಮೇಳನ'ವನ್ನು ದಿನಾಂಕ ೦೭ ಮತ್ತು ೦೮, ಅಕ್ಟೋಬರ್ ೨೦೧೬ರಂದು ಗದುಗಿನ ಜಗದ್ಗುರು ತೋಂಟದಾರ್ಯ ಪದವಿ ಕಾಲೇಜಿನ ಸಹಯೋಗದಲ್ಲಿ ನಡೆಯಿತು. ಕನ್ನಡದ ಪ್ರಸಿದ್ಧ ವಿದ್ವಾಂಸರಾಗಿದ್ದ ಎಂ.ಎಸ್. ಸುಂಕಾಪುರ ಅವರ ಸಮಗ್ರ ಸಾಹಿತ್ಯ ಕುರಿತು ಮತ್ತು ಗದಗ ಜಿಲ್ಲೆಯ ಹಸ್ತಪ್ರತಿಗಳ ಸಮೀಕ್ಷೆ, ಪ್ರಾಚೀನ ಕನ್ನಡ ಕಾವ್ಯಗಳ ಪರಿಷ್ಕರಣೆಯ ಇತಿಹಾಸ, ಪರಿಷ್ಕರಣೆಯ ಸಾಮ್ಯತೆ – ಭಿನ್ನತೆಗಳ ಕುರಿತು ಚರ್ಚಿಸಲಾಗಿಯಿತು. ಹಾಗೆಯೇ ಸಮ್ಮೇಳನಾಧ್ಯಕ್ಷರ ಸಾಹಿತ್ಯ ಸಾಧನೆಯ ಕುರಿತು ಚರ್ಚಿಸಿರುವುದು ಗಮನಾರ್ಹ ಸಂಗತಿ.

'ಅಖಿಲ ಕರ್ನಾಟಕ ಹದಿನಾಲ್ಕನೆಯ ಹಸ್ತಪ್ರತಿ ಸಮ್ಮೇಳನ'ವನ್ನು ದಿನಾಂಕ ೨೩ ಮತ್ತು ೨೪, ೨೦೧೮ರಂದು ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಎಸ್. ಶಿವಣ್ಣ ಅವರ ಸಾಹಿತ್ಯ ಸ್ಮರಣೆ, ದೇಸಿ ಸಾಹಿತ್ಯ ಕೃತಿಗಳ ಪರಿಷ್ಕರಣೆ ಅಧ್ಯಯನ, ಬಳ್ಳಾರಿ ಜಿಲ್ಲೆಯ ಬಯಲಾಟದ ಹಸ್ತಪ್ರತಿಗಳ ಕುರಿತು ಚರ್ಚಿಸಲಾಯಿತು. ವಿಶೇಷ ಉಪನ್ಯಾಸವಾಗಿ ಸಮ್ಮೇಳನದ ಸರ್ವಾಧ್ಯಕ್ಷರಾದಂತಹ ಎಂ.ಪಿ. ಮಂಜಪ್ಪಶೆಟ್ಟಿ ಅವರ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಗೆ ನೀಡಿರುವ ಕೊಡುಗೆಯನ್ನು ಕುರಿತು ಚರ್ಚಿಸಲಾಯಿತು.

'ಅಖಿಲ ಕರ್ನಾಟಕ ಹದಿನೈದನೆಯ ಹಸ್ತಪ್ರತಿ ಸಮ್ಮೇಳನ'ವು ದಿನಾಂಕ ೧೩ ಮತ್ತು ೧೪, ಅಕ್ಟೋಬರ್, ೨೦೧೮ರಂದು ಆ.ನೇ. ಉಪಾಧ್ಯೆ ವಿಸ್ತರಣಾ ಕೇಂದ್ರ, ಭರತೇಶ ಶಿಕ್ಷಣ ಸಂಸ್ಥೆ ಬೆಳಗಾವಿಯಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಗ್ರಂಥಸಂಪಾದನೆಗೆ ವಿದ್ವಾಂಸರ

ಸಾಧನೆ, ಪ್ರಾಚೀನ ಅಲಂಕಾರಶಾಸ್ತ್ರ, ಸಾಹಿತ್ಯ ಪರಿಷ್ಕರಣೆ ಮತ್ತು ಅಧ್ಯಯನ, ಬೆಳಗಾವಿ ಜಿಲ್ಲೆಯ ಬಯಲಾಟದ ಹಸ್ತಪ್ರತಿಗಳ ಸರ್ವೇಕ್ಷಣೆ ಮತ್ತು ಅಧ್ಯಯನಗಳ ಮತ್ತು ಹಂಪಾ ನಾಗರಾಜಯ್ಯ ಅವರ ಸಾಹಿತ್ಯ ಸಂಪಾದನೆ ಕುರಿತು ಚರ್ಚೆಗಳಾದವು.

'ಅಖಿಲ ಕರ್ನಾಟಕ ಹದಿನಾರನೆಯ ಹಸ್ತಪ್ರತಿ ಸಮ್ಮೇಳನ'ವು ದಿನಾಂಕ ೨೫ ಮತ್ತು ೨೬, ಫೆಬ್ರವರಿ ೨೦೨೦ರಂದು ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಆರ್.ಸಿ. ಹೀರೆಮಠ್ ಅವರ ಸಾಹಿತ್ಯ ಸ್ಮರಣೆ ಮತ್ತು ಸಮ್ಮೇಳನಾದ ಸರ್ವಾಧ್ಯಕ್ಷರಾದ ಟಿ.ಎನ್. ನಾಗರತ್ನರವರು ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಗೆ ನೀಡಿರುವ ಕೊಡುಗೆಯನ್ನು ಕುರಿತು ಚರ್ಚಿಸಲಾಗಿದೆ. ವಿಶೇಷವಾಗಿ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯ ಇತ್ತೀಚಿನ ಒಲವುಗಳು ಎಂಬ ವಿಷಯದ ಕುರಿತು ಚರ್ಚಿಸಲಾಗಿದ್ದು ಹಸ್ತಪ್ರತಿ ಅಧ್ಯಯನಕ್ಕೆ ಹೊಸ ಆಯಾಮ ನೀಡುವಂತದ್ದು.

'ಅಖಿಲ ಕರ್ನಾಟಕ ಹದಿನಾರನೆಯ ಹಸ್ತಪ್ರತಿ ಸಮ್ಮೇಳನ'ವು ದಿನಾಂಕ ೪ ಮತ್ತು ೫ನೆಯೆ ನವೆಂಬರ್, ೨೦೨೦ರಂದು ಸರಕಾರಿ ಪ್ರಥಮ ದರ್ಜೆ ಕಾಲೇಜು, ಸ್ನಾತ್ತಕೋತ್ತರ ಕೇಂದ್ರ ಗದಗದಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಎಂ. ಮರಿಯಪ್ಪಭಟ್ಟರ ಸಾಹಿತ್ಯ ಸ್ಮರಣೆ, ಪ್ರಾಚೀನ ಕನ್ನಡ ಕಾವ್ಯ ಓದು ಮತ್ತು ವ್ಯಾಖ್ಯಾನದ ಅಗತ್ಯ, ಪ್ರಾಚೀನ ಕನ್ನಡ ಸಾಹಿತ್ಯ ಪ್ರಕಟಣಾ ಸಂಸ್ಥೆಗಳು ಈ ವಿಷಯಗಳ ಬಗ್ಗೆ ಹಿರಿಯ ಮತ್ತು ಕಿರಿಯ ಸಂಶೋಧಕರು ಮರುವ್ಯಾಖ್ಯಾನಿಸುವ ಪ್ರಯತ್ನ ಮಾಡಿದರು.

'ಅನೇಕ ಭಾಷೆ ಹಾಗೂ ಭಾಷಾ ಪ್ರಭೇದ ಇತ್ಯಾದಿ ಪ್ರಭಾವಗಳಿರುವ ಹಾಗೂ ನಾನಾ ಮಜಲುಗಳಿಂದ ರೂಪಿತವಾದ ಸಾಹಿತ್ಯ ಸಂಸ್ಕೃತಿಯೊಂದಕ್ಕೆ ಏಕರೂಪಿ ಪಠ್ಯೀಕರಣ ನೆಲೆ ವಿರೋಧಾಭಾಸವಾದದ್ದು" ಎಂದು ಗೂಗಿವಾ ಥಿಯಾಂಗೊ ಹೇಳುತ್ತಾನೆ'.[೯] ಪಠ್ಯ ಕೇವಲ ಲಿಪಿಕಾರನಿಂದ ಪ್ರತೀಕರಣಗೊಳ್ಳುತ್ತದೆ ಅಥವಾ ಲಿಖಿತಗೊಳ್ಳುತ್ತದೆ ಎನ್ನುವ 'ತಿಡುವಿಕೆ' ಪ್ರಧಾನವಾದ ಅಧೀನ ಧೋರಣೆಗಳಿಂದ ಹಾಗೂ ಮೂಲ ಶುದ್ಧ, ಪ್ರಮಾಣಿಕ ಎನ್ನುವ ಪಾಂಡಿತ್ಯ ಪ್ರಧಾನ ನೆಲೆಗಳಿಂದ ಹೊರಬಂದು ಕನ್ನಡ ಸಂಸ್ಕೃತಿ ಇಂಥ ಧೋರಣೆಗಳನ್ನು ನಿರಾಕರಿಸಿದ ಹಾಗೂ ಪರ್ಯಾಯ ಮಾರ್ಗಗಳನ್ನು ಕಂಡುಕೊಂಡು ಬೆಳೆದ ರೀತಿಯನ್ನು ಗುರುತಿಸುವ ಪ್ರಯತ್ನ ಈ ಸಮ್ಮೇಳನಗಳ ಮುಖ್ಯ ಉದ್ದೇಶವಾಗಿದೆ ಎಂಬುದನ್ನು ಕಾಣಬಹುದು. ಹಸ್ತಪ್ರತಿಗಳನ್ನು ಕೇವಲ ಗತಕಾಲದ ಆಕರಗಳನ್ನಾಗಿ ನೋಡದೆ ಅದನ್ನು ಮಧ್ಯಕಾಲೀನ ಸಾಂಸ್ಕೃತಿಕ ಆಕರಗಳನ್ನಾಗಿ ವಿಶ್ಲೇಷಣೆಗೆ ಅಳವಡಿಸುತ್ತಿರುವುದು ಗಮನಿಸುವಂಥದ್ದು. ಅಂಥ ವಿಭಿನ್ನ ಹಾಗೂ ವಿಶಿಷ್ಟ ಕೆಲಸವಾಗಿ ಹಸ್ತಪ್ರತಿ ಸಮ್ಮೇಳನಗಳಾಗಿದ್ದು, ಸಾಂಪ್ರದಾಯಿಕ

ಅಧ್ಯಯನಗಳಿಗಿಂತ ಭಿನ್ನವಾದ ಹಲವು ಗಂಭೀರ ಚಿಂತಕರ ಚಿಂತನೆಗಳು ಇಲ್ಲಿ ಸಂಕಲಿತಗೊಂಡಿವೆ. ಸಾಂಪ್ರದಾಯಿಕ ವಿದ್ವತ್ ಹಾಗೂ ವಿದ್ವಾಂಸರೊಂದಿಗೆ ಈ ಕಾಲದ ಚಿಂತನೆ ಹಾಗೂ ಚಿಂತಕರು ಒಂದೇ ವೇದಿಕೆಯಲ್ಲಿ ಅನುಸಂಧಾನ ಮಾಡಿದ ಈ ಕ್ರಮ ಅರ್ಥಪೂರ್ಣವಾದುದು. ಪಠ್ಯ ಹಾಗೂ ಪ್ರತೀಕರಣದ ಕಲ್ಪನೆಯನ್ನು ಸಮಾಜ, ಸಾಹಿತ್ಯ, ಸಂಸ್ಕೃತಿ, ವಿವಿಧ ಲಲಿತಕಲೆ ಹಾಗೂ ಅಂಗಕಲೆಗಳೊಂದಿಗೆ ಮುಖಾಮುಖಿ ಮಾಡುವ ಮೂಲಕ 'ಶುದ್ಧ ಹಾಗೂ ಪ್ರಮಾಣಿತ' ಎನ್ನುವ ಚಿಂತನೆಯ ನೆಲೆಗಳನ್ನು ದಾಟಿ ಹಸ್ತಪ್ರತಿ ಹಾಗೂ ಗ್ರಂಥ ಸಂಪಾದನೆಯ ಚರ್ಚೆಗಳನ್ನು ಬೆಳಸಲಾಗಿದೆ. ಬಹುಶಿಸ್ತೀಯ ಹಾಗೂ ಅಂತರ್ ಶಿಸ್ತೀಯವಾದಂಥ ಇಂಥ ಅಧ್ಯಯನಗಳು ಹಸ್ತಪ್ರತಿ ಅಧ್ಯಯನ ಕ್ಷೇತ್ರದಲ್ಲಿ ಹೊಸ ಸಂಚಲನ ಮೂಡಿಸುತ್ತವೆ.

ಸಂವಾದ

ವಿಚಾರ ಸಂಕಿರಣ ಸಮ್ಮೇಳನ ಹಾಗೂ ಕಾರ್ಯಾಗಾರಗಳು ಒಂದು ವಿಶಾಲ ವಿಷಯ ಹಾಗೂ ಸಮೂಹ ಪ್ರಧಾನ ಚರ್ಚೆಗಳಾಗಿ ತನ್ನ ಇರುವಿಕೆಯನ್ನು ಸ್ಥಾಪಿಸಿದೆ. ವಿಶೇಷ ಉಪನ್ಯಾಸಗಳು ಇದಕ್ಕಿಂತ ಭಿನ್ನವಾದ ಸ್ವರೂಪವನ್ನು ಪಡೆದವುಗಳಾಗಿದ್ದು, ಇದರ ಉದ್ದೇಶ ಒಂದು ಖಚಿತ ಹಾಗೂ ಸೂಕ್ತ ವಿಷಯ ಕುರಿತು ಗೊತ್ತಾದ ವಿದ್ವಾಂಸರೊಬ್ಬರು ತಮ್ಮ ಗಂಭಿರವಾದ ಮತ್ತು ಆಳವಾದ ಅಧ್ಯಯನದ ಪ್ರಚಲಿತಗಳನ್ನು ಕಟ್ಟಿಕೊಡುವಂಥದ್ದಾಗಿದೆ. ಆಯಾ ಕ್ಷೇತ್ರದ ಅಧ್ಯಯನಶೀಲ ವಿದ್ವಾಂಸರನ್ನು ಗುರುತಿಸಿ ಅವರಿಂದ ವಿದ್ವತ್‌ಪ್ರಧಾನ ಉಪನ್ಯಾಸ ಏರ್ಪಡಿಸುವುದರ ವಿಶೇಷ ಉಪನ್ಯಾಸದ ಹಿಂದಿರುವ ಉದ್ದೇಶ. ಇದು ವಿಶ್ವವಿದ್ಯಾಲಯಗಳು ನಾಡಿನಲ್ಲೂ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದರಲ್ಲಿ ನಾಡಿನ ಹಿರಿಯರು, ಕಿರಿಯ ವಿದ್ವಾಂಸರು ಭಾಗವಹಿಸುವ ಮೂಲಕ ಹಸ್ತಪ್ರತಿ ಮತ್ತು ಗ್ರಂಥ ಸಂಪಾದನಾ ಶಿಸ್ತನ್ನು ಹೊಸ ಬಗೆಯ ವಿಶ್ಲೇಷಣೆಗೆ ಒಳಪಡಿಸುವುದು ವಿಶೇಷವಾಗಿದೆ. ಉದಾಹರಣೆಗೆ 'ಹಸ್ತಪ್ರತಿಶಾಸ್ತ್ರ ಪ್ರಸ್ತುತತೆ' ಕುರಿತು ಬಿ.ಆರ್. ಹಿರೇಮಠ, ಕನ್ನಡ ಲೌಕಿಕಶಾಸ್ತ್ರ ಕಾವ್ಯಗಳು ಎನ್.ಎಸ್. ತಾರನಾಥ ಕವಿರಾಜಮಾರ್ಗದ ಹಸ್ತಪ್ರತಿ ಕುರಿತು ಸೀತಾರಾಮ ಜಾಗೀರದಾರ ಮಧ್ಯಕಾಲೀನ ಕನ್ನಡ ಸಾಹಿತ್ಯ ಕುರಿತು ಕೆ. ಕೇಶವಶರ್ಮ ಅವರು ನಡೆಸಿಕೊಟ್ಟರು. ಹೀಗೆ ಹಸ್ತಪ್ರತಿ ಗ್ರಂಥಸಂಪಾದನೆ ಕುರಿತು ನಡೆದ ಸಂವಾದಗಳು ಹೊಸ ರೀತಿಯ ವಾಗ್ವಾದಗಳಿಗೆ ದಾರಿ ಮಾಡಿಕೊಟ್ಟವು.

ಈಗೆ ಆರಂಭದಿಂದ ಹಿಡಿದು ಇಲ್ಲಿಯತನಕ ನಾಡಿನ ವಿವಿಧ ಸಾಂಸ್ಕೃತಿಕ ಭಾಗಗಳಲ್ಲೂ ವೈವಿಧ್ಯಮಯವಾದ ಪರಿಸರದಲ್ಲಿ ವಿಭಿನ್ನ ಶಿಸ್ತುಗಳ ವಿದ್ವಾಂಸರು ಮತ್ತು ಆಸಕ್ತರೊಂದಿಗೆ ಸಂವಾದ ಮಾಡುವ ಮೂಲಕ ಒಂದು ಸಾಂಸ್ಕೃತಿಕ ಚಿಂತನೆಯ ಸ್ವರೂಪವನ್ನು ಈ ಕ್ಷೇತ್ರದಲ್ಲಿ

ಹುಟ್ಟು ಹಾಕಿದೆ. ಗ್ರಂಥಸಂಪಾದನೆ ಮತ್ತು ಹಸ್ತಪ್ರತಿಗಳ ಕ್ಷೇತ್ರಗಳಲ್ಲಿ ಅರ್ಥಪೂರ್ಣ ಸೇವೆಗೈದ ಪರಿಣತರಾದ ಹಿರಿಯ ವಿದ್ವಾಂಸರೊಂದಿಗೆ ಚರ್ಚೆ ಅವರ ಅನುಭವ ಹಾಗೂ ಚಿಂತನೆಗಳನ್ನು ವ್ಯಕ್ತಗೊಳಿಸುವ ಭಾಗವಾಗಿ ಹಲವಾರು ವಿಚಾರಗಳ ಮೇಲೆ ಸಂವಾದ ನಡೆಸಿ ಹಸ್ತಪ್ರತಿಗಳ ಅಧ್ಯಯನ ಹೊಸ ಒಳವುಗಳನ್ನು ವಿದ್ವಾಂಸರು ತಿಳಿಸುವು ಗಮನಾರ್ಹ ಸಂಗತಿಯಾಗಿದೆ.

ಸಂದರ್ಶನ

ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯ ಕುರಿತು ಹಿರಿಯ ವಿದ್ವಾಂಸರ ಜೊತೆಗೆ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಚರ್ಚಿಸಿರುವ ಫಲಿತವೇ ಸಂದರ್ಶನ. ಈ ಸಂದರ್ಶನ ಭಾಗವಾಗಿ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯ ಅಧ್ಯಯನಕ್ಕೆ ಹೊಸ ತಿರುವು ಸಿಕ್ಕಿರುವುದು ಗಮನಿಸಬಹುದು.

ವೀರೇಶ ಬಡಿಗೇರ ಅವರು ಹಸ್ತಪತ್ರಿ ಅಧ್ಯಯನ ಪತ್ರಿಕೆಗಾಗಿ ಮಾಡಿದ ಸಂದರ್ಶನಗಳಲ್ಲಿ ಹೊಸತನವಿರುವುದನ್ನು ಕಾಣಬಹುದು. 'ಗ್ರಂಥಸಂಪಾದನೆ ಎನ್ನುವುದು ಸೃಜನಶೀಲ ಸಂಶೋಧನೆ' ಎಂಬ ವಿಚಾರ ಕುರಿತು ಸಂವಾದ ಬಹುಮುಖ್ಯವಾದದ್ದು. ಹಿರಿಯ ಸಂಶೋಧಕರೂ, ಸಂಸ್ಕೃತಿ ಚಿಂತಕರೂ ಆದ ಎಂ.ಎಂ. ಕಲಬುರ್ಗಿ ಅವರೊಂದಿಗೆ ಈ ಸಂವಾದ ಮಾಡಲಾಗಿದೆ. ಈ ಸಂವಾದವು ಪೂರ್ವಕಲ್ಪಿತ ಸೈದ್ಧಾಂತಿಕ ಮಾದರಿಯದಾಗಿರದೆ ಪ್ರಕ್ರಿಯಾತ್ಮಕ ಸ್ವರೂಪದ್ದಾಗಿದೆ. ಏಕೆಂದರೆ ಬಹುಮುಖ್ಯವಾಗಿ ಎಂ.ಎಂ. ಕಲಬುರ್ಗಿಯವರ ವ್ಯಕ್ತಿ ಸ್ವಭಾವ ಹಾಗೂ ಕನ್ನಡಪರ ಚಿಂತನೆಗಳಲ್ಲಿಯೇ ಸಿದ್ಧ ಚೌಕಟ್ಟನ್ನು ನಿರಾಕರಿಸುವ ನೆಲೆಗಳಿವೆ ಎಂಬುದು ಮುಖ್ಯವಾದ ವಿಚಾರ. ಈ ಹಿನ್ನೆಲೆಯಲ್ಲಿ ಇಲ್ಲಿನ ಸಂವಾದ ಮತ್ತು ಅದರ ಫಲಿತಗಳು ತುಂಬಾ ಹೊಸ ಆಲೋಚನೆಗಳತ್ತ ನಮ್ಮ ಗಮನ ಸೆಳೆಯುತ್ತವೆ.

'ಬಹುಮುಖ್ಯವಾಗಿ ಹಸ್ತಪ್ರತಿ ಗ್ರಂಥಸಂಪಾದನೆ ಹಾಗೂ ಸಂಪಾದನೆಯ ವಿಧಾನಗಳು ಅವುಗಳ ಮಿತಿಗಳು ಅಕ್ಷರ ಪಾತಳಿಯಿಂದಾಗಿ ಕನ್ನಡ ಪಠ್ಯಗಳ ಪೂರ್ಣಪ್ರಮಾಣದ ಸಂವಹನದಲ್ಲಿ ಹುಟ್ಟಿಕೊಂಡ ವ್ಯತ್ಯಗಳು, ಪಠ್ಯಗಳು ಚಾರಿತ್ರಿಕ ಮತ್ತು ಶಬ್ದಸಂಸ್ಕರಿತ ಸಂಪಾದನೆ ಗಿಂತ ಸಂಸ್ಕೃತಮುಖಿ ಸಂಪಾದನೆಗೆ ಒತ್ತು ನೀಡಬೇಕೆನ್ನು ಕಳಕಳಿ ಹೀಗೆ ಹತ್ತು ಹಲವು ಸೂಕ್ಷ್ಮ ವಿಚಾರಗಳ ಕಡೆಗೆ ಗಮನ ಸೆಳೆದಿದ್ದಾರೆ. ಕನ್ನಡ ಪಠ್ಯಗಳ ಸಂಪಾದನೆಯ ವಿಧಾನಗಳನ್ನೇ ಮರುಪರಿಶೀಲಿಸಬೇಕೆನ್ನುವ ಮೂಲಕ ಕನ್ನಡದ್ದೇ ಆದ ಒಂದು ಆಲೋಚನಾ ಕ್ರಮವನ್ನು ರೂಢಿಸಿಕೊಳ್ಳಬೇಕೆನ್ನುವ ಅಗತ್ಯದ ಕಡೆಗೆ ಇಲ್ಲಿನ ಅವರ ಮಾತುಗಳು ಗಮನ ಸೆಳೆಯುತ್ತವೆ'.[೧೦]

ಪಠ್ಯವೊಂದರ ರಚನೆ ಪುನಾರಚನೆ ಹಿಂದಿನ ಸಹವರ್ತಿ ಚಿಂತನೆಗಳು ಎಂಬ ವಿಷಯ ಕುರಿತು ವೀರೇಶ ಬಡಿಗೇರ ಅವರು 'ಕೆ.ವಿ. ನಾರಾಯಣ' ಅವರೊಂದಿಗೆ ನಡೆಸಿದ ಸಂವಾದ

ಮತ್ತೊಂದು ಸ್ವರೂಪದ್ದು. ಹಿರಿಯ ವಿದ್ವಾಂಸರು ಸಂಸ್ಕೃತಿ ಚಿಂತಕರೂ ಭಾಷಾಶಾಸ್ತ್ರಜ್ಞರೂ ವಿಮರ್ಶಕರೂ ಆದ ಕೆ.ವಿ. ನಾರಾಯಣ ಅವರೊಂದಿಗಿನ ಈ ಸಂವಾದದ ತುಂಬ ವಿಶಿಷ್ಟವಾದದು. ಕೆ.ವಿ. ನಾರಾಯಣ ಅವರ ಒಟ್ಟು ಆಲೋಚನಾ ಕ್ರಮವೇ ಸಿದ್ಧ ಚೌಕಟ್ಟನ್ನು ನಿರಾಕರಿಸುವ ಮತ್ತು ಹೊಸ ಅರ್ಥ ವಿಸ್ತಾರಗಳನ್ನು ಒಳನೋಟಗಳನ್ನು ಹುಂಗಟ್ಟಿಸುವ ನೆಲೆಯದ್ದು. ಕನ್ನಡ ಸಾಹಿತ್ಯ ಸಂಸ್ಕೃತಿ ಹಸ್ತಪ್ರತಿ ಗ್ರಂಥಸಂಪಾದನೆ ಭಾಷೆ ಹೀಗೆ ಹಲವು ಆಯಾಮಗಳಲ್ಲಿ ಇಲ್ಲಿನ ಸಂವಾದ ಸಾಧ್ಯವಾಗಿದೆ. ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆಗೆ ಸಂಬಂಧಿಸಿದಂತೆ ಹಲವು ಹೊಸ ರೀತಿಯ ಸೂಕ್ಷ್ಮ ಸಂಗತಿಗಳನ್ನು ತೆರೆದು ತೋರಿದ್ದಾರೆ. ಗ್ರಂಥಸಂಪಾದನೆಯಲ್ಲಿ ಈಗಾಗಲೇ ಪ್ರತಿಷ್ಠಿತವಾಗಿರುವ ಮೂಲಪಠ್ಯ ಪ್ರಮಾಣೀಕೃತ ಪಠ್ಯ ಇವುಗಳನ್ನು ಕುರಿತಂತೆ ಗುಣಾತ್ಮಕವಾದ ಮತ್ತು ಮರುಚಿಂತನೆಗೆ ಪ್ರೇರಣೆ ನೀಡುವ ಹೊಳವುಗಳನ್ನು ಕೊಟ್ಟಿದ್ದಾರೆ. ಶಾಬ್ದಿಕ ಸಂಪಾದನೆಗಿಂತ ಸಂಸ್ಕೃತಿಮುಖಿ ಸಂಪಾದನೆ ಹೆಚ್ಚು ಬೆಳೆಯುಳ್ಳದ್ದು. ಏಕಮುಖಿ ಪಠ್ಯದ ಸಂಪಾದನೆಗಿಂತ ಬಹುಮುಖಿ ಪಠ್ಯದ ಸಂಪಾದನೆ ಹಾಗೂ ಸಹವರ್ತಿ ಚಿಂತನೆ ನಡೆಯಬೇಕು. ಲಿಪಿಕಾರರನ್ನು ಪಠ್ಯದಲ್ಲಿನ ದೋಷಗಳಿಗೆ ಕಾರಣರೆಂದು ಹೇಳುವ ಬದಲು ಅವರನ್ನು ಆಯಾ ಕಾಲದ ಭಾಷಿಕ ಸಂಕಥನಕಾರರೆಂದು ಗುರುತಿಸಿದರೆ ಹಸ್ತಪ್ರತಿಗಳ ಅಧ್ಯಯನಕ್ಕೆ ಹೊಸ ವಿಸ್ತಾರ ಸಾಧ್ಯವಾಗುತ್ತದೆ ಎನ್ನುವ ಹಲವು ರೀತಿಯ ವಿಶಿಷ್ಟ ಸಂಗತಿಗಳನ್ನು ತೆರೆದು ತೋರಿದ್ದಾರೆ.

"ಕನ್ನಡ ಹಸ್ತಪ್ರತಿಗಳು ಜೀವನ ಶ್ರದ್ಧೆಯ ಫಲಿತಗಳು" ಎಂಬ ವಿಷಯ ಕುರಿತು ವೀರೇಶ ಬಡಿಗೇರ ಅವರು ಬಿ.ಕೆ. ಹಿರೇಮಠ ಅವರೊಂದಿಗೆ ಮಾಡಿದ ಸಂವಾದ ಮತ್ತೊಂದು ಬಗೆಯದ್ದು. ಹಿರಿಯ ವಿದ್ವಾಂಸರು ಹಸ್ತಪ್ರತಿಶಾಸ್ತ್ರದಲ್ಲಿ ವಿಶೇಷ ಕೆಲಸ ಮಾಡಿದವರೂ ಆದ ಬಿ.ಕೆ. ಹಿರೇಮಠ ಅವರೊಂದಿಗೆ ಈ ಸಂವಾದ ಪೂರ್ವಕಲ್ಪಿತ ಮಾದರಿಗಿಂತ ಭಿನ್ನವಾದ ಸ್ವರೂಪದ್ದಾಗಿದೆ. ಹಸ್ತಪ್ರತಿಗಳನ್ನು ಬರೀ ಸಂಪಾದನೆಗೆ ಮಾತ್ರ ಯೋಗ್ಯವೆಂದು ಬಳಸುವ ಸಂದರ್ಭದಲ್ಲಿ ಅವುಗಳಿಗೊಂದು ಜೀವನ ಶ್ರದ್ಧೆಯ ಮತ್ತು ಸಂಸ್ಕೃತಿ ಸಂಕಥನವನ್ನು ತಂದುಕೊಟ್ಟವರು ಸ್ವತಃ ಚಿತ್ರಕಲಾವಿದರೂ ಬಣ್ಣಗಾರಿಕೆ ಬಲ್ಲವರೂ ಆದ ಶ್ರೀಯುತರು. ಹಸ್ತಪ್ರತಿಗಳ ಕಲಾತ್ಮಕ ವಿನ್ಯಾಸ ಕುರಿತು ವಿಶೇಷ ಬೆಳಕು ಚೆಲ್ಲಿದರು. ಅವರ ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ ಕೃತಿಯು ಹಸ್ತಪ್ರತಿಶಾಸ್ತ್ರ ಕ್ಷೇತ್ರದಲ್ಲಿ ಒಂದು ಹೊಸ ರೀತಿಯ ಸಂಚಲನೆಯನ್ನು ಉಂಟು ಮಾಡಿತು. ಹಸ್ತಪ್ರತಿಗಳನ್ನು ಬರೀ ಶುಷ್ಕ ಪಠ್ಯಗಳನ್ನಾಗಿ ಸಂಗ್ರಹ ಯೋಗ್ಯವಸ್ತುಗಳನ್ನಾಗಿ ಕಾಣದೆ ಅವುಗಳಲ್ಲಿ ಸಂಸ್ಕೃತಿಯ ಶ್ರದ್ಧೆ ಅಡಗಿದೆ, ಅವು ಕನ್ನಡ ಸಂಸ್ಕೃತಿಯ ಜೀವನ ಶ್ರದ್ದೆಯ ಫಲಿತಗಳು. ಇವುಗಳನ್ನು ಬರೆದ ಲಿಪಿಕಾರರು ಒಂದು ಕಪಿ ಪರಂಪರೆಯನ್ನು ಜೀವಂತಗೊಳಿಸಿಕೊಂಡು ಬಂದವರು ಎನ್ನುವ

ಮೂಲಕ ಹಸ್ತಪ್ರತಿ ಗಳನ್ನು ಕನ್ನಡ ಸಂಸ್ಕೃತಿಯ ಜೀವನ ಚಿತ್ರಣಗಳನ್ನಾಗಿ ಕಾಣಬೇಕೆನ್ನುವ ಮೂಲಕ ಮಾತುಗಳನ್ನು ಆಡುವ ಮೂಲಕ ಇಲ್ಲಿ ಸಂವಾದವನ್ನು ಗುಣಾತ್ಮಕವಾಗಿಸಿದ್ದಾರೆ'.[೧೧]

"ಪಾಠಾಂತರ ಅನ್ನೋದಕ್ಕೆ ಸಾಮಾಜಿಕ ಕಾರಣಗಳಿರುತ್ತವೆ" ಎಂಬ ವಿಷಯ ಕುರಿತು ವೀರೇಶ ಬಡಿಗೇರ ಅವರು ಕಿ.ರಂ. ನಾಗರಾಜರೊಂದಿಗೆ ಸಂವಾದ ನಡೆಸಿದ್ದಾರೆ. 'ಕಿ.ರಂ. ನಾಗರಾಜ ಅವರು ಸಂವಹನಶೀಲ ಚಿಂತಕರಲ್ಲಿ ಒಬ್ಬರು. ಸಂಸ್ಕೃತಿ ಜಾನಪದ ಸಮಕಾಲೀನ ಶೈಕ್ಷಣಿಕ ವಾತಾವರಣ ಹಸ್ತಪ್ರತಿ ಗ್ರಂಥಸಂಪಾದನೆ ವಿಮರ್ಶೆ ಮುಂತಾದ ಕ್ಷೇತ್ರಗಳ ಕುರಿತು ಇಲ್ಲಿ ತಮ್ಮ ವಿಚಾರಧಾರೆಯನ್ನು ಹರಿಬಿಟ್ಟಿದ್ದಾರೆ. ಹಸ್ತಪ್ರತಿ ಸಂಚಿಕೆಗೆಂದು ಅವರೊಂದಿಗೆ ಮಾತಿಗಿಳಿದಾಗ ಹಸ್ತಪ್ರತಿ ಹಾಗೂ ಗ್ರಂಥಸಂಪಾದನೆ ಕುರಿತು ಅವರು ಹೇಳಿದ ಸೂಕ್ಷ್ಮ ಸಂಗತಿಗಳು ಆ ಕ್ಷೇತ್ರ ಕುರಿತು ಹೊಸದಾಗಿ ಚಿಂತನೆಗೆ ಹೆಚ್ಚುವಂತಾಗಿದೆ. ಇಲ್ಲಿನ ಸಂದರ್ಶನ ಒಂದು ರೀತಿ ಉದ್ದೇಶಪೂರಿತ ಹಾಗೂ ಪೂರ್ವ ತಯಾರಿಯಿಂದ ಕೂಡಿದ ಅಕಡೆಮಿ ಶಿಸ್ತಿಗಿಂತ ಭಿನ್ನವಾದದ್ದು. ಇಲ್ಲಿ ಒಟ್ಟು ಸಾಹಿತ್ಯ ಹಾಗೂ ಸಂಸ್ಕೃತಿ ಚಿಂತನೆಗಳು ಹಿಡಿದಿರುವ ದಾರಿಗಳು ಸಾಗಬೇಕಾದ ದಿಕ್ಕುಗಳು, ಮಾಡಿಕೊಳ್ಳಬೇಕಾದ ತಯಾರಿಗಳ ಬಗ್ಗೆ ಕಾಳಜಿ ವಹಿಸುತ್ತವೆ'.[೧೨]

'ಎಫ್.ಟಿ. ಹಳ್ಳಿಕೇರಿಯವರು ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯಲ್ಲಿ ಪರಿಣಿತಿ ಹೊಂದಿದ ವಿದ್ವಾಂಸರೊಂದಿಗೆ ಸಂದರ್ಶನ ಮಾಡಿದ್ದಾರೆ. ಬಿ.ಎಸ್. ಸಣ್ಣಯ್ಯ ಅವರು ಹಸ್ತಪ್ರತಿ ಸರ್ವೇಕ್ಷಣೆ ಸಂಗ್ರಹ, ಸಂರಕ್ಷಣೆ ಹಾಗೂ ಪರಿಷ್ಕರಣೆಯಲ್ಲಿ ವಿಶೇಷ ಪರಿಣಿತಿ ಹೊಂದಿ ವಿರಳ ವಿದ್ವಾಂಸರಲ್ಲಿ ಬಿ.ಎಸ್. ಸಣ್ಣಯ್ಯ ಅವರು ಒಬ್ಬರು. ಅವರು ಹಸ್ತಪ್ರತಿ ಸಂಗ್ರಹ ಸಂಪಾದನೆ ಅನುಭವ ಮತ್ತು ಒಡನಾಟ ಹಾಗೂ ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಕುರಿತು ಸಂವಾದ ಇದಾಗಿದೆ'.[೧೩] ಈಗೆ ಹಸ್ತಪ್ರತಿ ವಿದ್ವಾಂಸರಾದ ಬಿ.ಎಸ್. ಸಣ್ಣಯ್ಯ, ಸಿ. ಮಹಾದೇವಪ್ಪ, ಜಿ.ಜಿ. ಮಂಜುನಾಥ, ಟಿ.ಎನ್. ನಾಗರತ್ನ ಅವರ ಜೀವನ ಹಸ್ತಪ್ರತಿ ಕ್ಷೇತ್ರದ ಪ್ರೇರಕ ಶಕ್ತಿ, ಸಂಗ್ರಹ ಸಂಪಾದನೆಯ ಅಡತಡೆಗಳು ಮತ್ತು ಹೊಸ ಸಾಧ್ಯತೆಗಳನ್ನು ಕುರಿತು ಸಂವಾದಿಸಿದ್ದನ್ನು ಇಲ್ಲಿ ಕಾಣಬಹುದು.

ಅಧ್ಯಯನಶೀಲ ಸಜ್ಜನ ವ್ಯಕ್ತಿ ಬಿ.ಫ್ಹಿ. ಶಿರೂರ ಕುರಿತು ಕೆ. ರವೀಂದ್ರನಾಥ ಸಂವಾದದಲ್ಲಿ ವಿದ್ವಾಂಸರ ಜೀವನ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯ ಕ್ಷೇತ್ರಕ್ಕೆ ನಿಡಿದ ಕೊಡುಗೆ ಹಾಗೂ ಅವರ ವೃತ್ತಿಜೀವನ ಬದುಕಿನ ಹಲವು ಸಂಗತಿಗಳನ್ನು ಕುರಿತು ಸಂದರ್ಶಸಿದ್ದು, ಹಸ್ತಪ್ರತಿ ಸಂಗ್ರಹ ಮಾಹಿತಿಯ ಕುರಿತು ಚರ್ಚಿಸಿರುವುದನ್ನು ಕಾಣಬಹುದು.

ಎಸ್.ಎಸ್. ಅಂಗಡಿ ಅವರು ಎಂ. ಚಿದಾನಂದಮೂರ್ತಿಯವರೊಂದಿಗೆ ಸಂವಾದ ಮಾಡಿ ಅನೇಕ ಅಧ್ಯಾಪಕರು ವಿದ್ವಾಂಸರಗಳ ಸಂವಾದ ನಡೆಸಿರುವ ಪರಿಣಾಮ ಹಸ್ತಪ್ರತಿ

ಸಂಗ್ರಹ ಸಂಪಾದನೆ ಅಧ್ಯಯನ ಕ್ಷೇತ್ರದಲ್ಲಿ ಭಿನ್ನ ಭಿನ್ನ ನೆಲೆಯ ಅಧ್ಯಯನಗಳು ನಡೆಯುತ್ತಿರುವದನ್ನು ನಾವು ಗಮನಿಸಬೇಕಾಗಿದ್ದು ಈ ಸಂದರ್ಶನದಿಂದ ತಿಳಿಯಪಡಿಸುವ ವಿಷಯವೆನೆಂದರೆ ಹಸ್ತಪ್ರತಿಗಳ ಒಡಲೊಳಗೆ ಸಂಸ್ಕೃತಿಯ ಚಹರೆಗಳು ಇದ್ದು, ಅವುಗಳ ಅಧ್ಯಯನಕ್ಕೆ ತೊಡಗಿದ ಬಹುಪಠ್ಯೀಯ ಆಯಾಮಗಳು ನಮಗೆ ದೊರಕುತ್ತವೆ. ವಂಶ ಅಂಶ ಈ ಸಂದರ್ಶನದ ಮುಖ್ಯ ಭಾಗವಾಗಿದೆ.

೬.೫. ಅನೌಪಚಾರಿಕ ವಲಯಗಳಲ್ಲಿನ ಅಧ್ಯಯನಗಳು

ಪ್ರಯೋಗ, ಪ್ರಯೋಜನ ಮತ್ತು ಸಂಯೋಜನ ಮುಖಿಯಾದ ಕನ್ನಡ ಹಸ್ತಪ್ರತಿಗಳು ಬಹುವಿಧ ಜ್ಞಾನ ಶಿಸ್ತನ್ನು ಗರ್ಭಿಕರಿಸಿಕೊಂಡಂಥವು. ಸಾಹಿತ್ಯವೆಂದು ಪರಿಗಣಿಸುವ ಪ್ರಧಾನ ವಿಷಯಗಳಿಂದ ಹಿಡಿದು ವಿಷವೈದ್ಯ ಪಶುವೈದ್ಯ, ಆಯುರ್ವೇದ ಶಿಲ್ಪಶಾಸ್ತ್ರ, ಮಾಟ-ಮಂತ್ರ, ಹಾಡು, ಶಕುನ, ಲೆಕ್ಕಪತ್ರ, ರಸವಿದ್ಯೆ, ವಶೀಕರಣ, ಮಳೆ-ಬೆಳೆ, ಪ್ರಶ್ನೆ, ಭವಿಷ್ಯ, ಜೋತಿಷ್ಯ ವಾಸ್ತು, ನಿಧಿಶಾಸ್ತ್ರ, ಅಡುಗೆ, ಆರೋಗ್ಯ, ಜಲಶಾಸ್ತ್ರ, ಯೋಗಶಾಸ್ತ್ರ, ಕೃಷಿ ಖಡ್ಗಶಾಸ್ತ್ರ ಇಂಥ ಹಲವು ಹತ್ತು ಸಂಗತಿಗಳನ್ನು ಒಳಗೊಂಡಿವೆ. ಇವೆಲ್ಲ ಜನರಿಂದ ಜನರ ಅಗತ್ಯಗಳಿಗಾಗಿಯೇ ರೂಪಗೊಂಡಂಥವು. ಇವೆಲ್ಲವುಗಳಿಗೂ ಪ್ರಾದೇಶಿಕ ಧಾರ್ಮಿಕ, ರಾಜಕೀಯ, ಆರ್ಥಿಕ, ಲಿಂಗ ಹಾಗೂ ಜಾತಿ ಇತ್ಯಾದಿ ಆಯಾಮಗಳಿವೆ. ಹೀಗಾಗಿ ಇಂಥ ಕೃತಿಗಳನ್ನು ಕೇವಲ ಶುದ್ಧ ಶಾಸ್ತ್ರದ ಮೂಲಕ ಅಥವಾ ಕೃತಿ ಕರ್ತೃನಿಷ್ಠ ನೆಲೆಯ ಪರಿಶೀಲನೆಗಿಂತ ಭಿನ್ನವಾದ ಅನುಸಂಧಾನದಡಿಯಲ್ಲಿ ಮುಖಾಮುಖಿ ಮಾಡಬೇಕಾಗಿದೆ. ವಿಶೇಷವಾಗಿ ಸಾಂಸ್ಕೃತಿಕ ಮಾನವಶಾಸ್ತ್ರದ ಅಧ್ಯಯನ ನೆಲೆಗಳಿಂದ ವಿಶ್ಲೇಷಿಸುವ ಅಗತ್ಯವಿದೆ.

ಜೋತಿಷ್ಯ

ಜೋತಿಷ್ಯಶಾಸ್ತ್ರವು ಅನಂತತೆಯ ಶಕ್ತಿಯನ್ನು ಅರಿಯುವ ಆಕಾಶಮುಖಿ ಜ್ಞಾನವಾಗಿದೆ. ಈ ಅರ್ಥದಲ್ಲಿ ವಾಸ್ತುಶಾಸ್ತ್ರ ಜೀವಮುಖಿ ಶಾಸ್ತ್ರವಾದರೆ ಜೋತಿಷ್ಯ ಶಾಸ್ತ್ರವು ಗಗನಮುಖಿ ಶಾಸ್ತ್ರವಾಗಿ ನಿತ್ಯ ನಿರಂತರ ಮತ್ತು ಪರಿವರ್ತನಶೀಲವಾದ ಸೌರವ್ಯೂಹ ಚಲನೆಯನ್ನಾಧರಿಸಿದ ಈ ಜ್ಞಾನಶಾಖೆಯು ತತ್ವಶಾಸ್ತ್ರ ಮತ್ತು ಮತಧರ್ಮಗಳನ್ನಾಧರಿಸಿದ ಬಳಿಕ ವ್ಯಾಖ್ಯಾನ ಹಾಗೂ ವ್ಯವಹರಿಕೆ ತೀರ್ಮಾನಗಳಿಂದಾಗಿ ಇಂದು ಶುಷ್ಕಶಾಸ್ತ್ರವಾಗಿ ಪರಿವರ್ತಿತವಾಗಿದೆ. ಮಾನವ ಶೋಷಣೆಯ ಹಲವು ಮುಖಗಳು ಈ ಶಾಸ್ತ್ರಕ್ಕೆ ಇದು ಕೂಡಿಕೊಂಡಿವೆ. ಅಭಾದಿತವಾದ ಅಂತಿಮ ಸತ್ಯವನ್ನು ಹೇಳುತ್ತೇವೆನ್ನುವ ನೆಲೆಗಳು ಲೌಕಿಕ ಮುಖಿಯಾದ ಜ್ಞಾನವನ್ನು ಪಾರಲೌಕಿಕಗೊಳಸಿವೆ. ಅತಿಮಾನುಷಗೊಳಿಸಿವೆ. ಇಲ್ಲಿ ಗಮನಿಸರಬೇಕಾದ ಸಂಗತಿ ಎಂದರೆ ಜ್ಯೋತಿಷ್ಯಶಾಸ್ತ್ರದ ಮೂಲ ಆಕರ ಮತ್ತು ಅದರ ಪರಿಣಾಮ ಭೌತಸ್ವರೂಪದ್ದಾಗಿದೆ. ಹೀಗಾಗಿ ಇದಕ್ಕೆ ಕಾರಣ ಕೂಡ ಭೌತವಸ್ತುವೆ ಆಗಿದೆ.

ಜ್ಯೋತಿಷ್ಯಶಾಸ್ತ್ರವು ಕೇವಲ ಪದಾರ್ಥ ಜಗತ್ತಿನ ಲಕ್ಷಣಗಳನ್ನು ತಿಳಿದುಕೊಳ್ಳಲು ಸಹಕಾರಿಯಾದ ತಂತ್ರದಲ್ಲಿ ಅದು ಸಂಕೀರ್ಣವಾದ ಮಾನವ ಸಮಾಜದಲ್ಲಿನ ಅಂತರ್ಗತವಾದ ಸಮಸ್ಯೆಗಳನ್ನು ತಿಳಿಯಲು ಮತ್ತು ಪರಿಹರಿಸಿಕೊಳ್ಳಲು ಇರುವ ಪರಿಣಾಮಕಾರಿ ಮಾಧ್ಯಮವಾಗಿದೆ. ಮನುಷ್ಯನ ಮನಸ್ಸು ಸಂಕೀರ್ಣ ಸ್ವಭಾವವುಳ್ಳದ್ದು. ಇದನ್ನು ಒಂದು ಸೂತ್ರದಿಂದ ಪರಿಮಿತಿಗೊಳಿಸಲು ಸಾಧ್ಯವಿಲ್ಲ. ಮಿತಿಗಳ ಒತ್ತಡಕ್ಕೆ ಸಿಲುಕಿ ದುಃಖಪಡುವ ನಾವು ಅನಂತ ಪರಿಮಿತಿಯಲ್ಲಿ ಆಶ್ರಯ ಕೋರುತ್ತೇವೆ. ನಮ್ಮ ಜೀವನದ ಅನೇಕ ಕಡೆಗಳಲ್ಲಿ ಪರಿಮಿತವಾದುದರ ಒತ್ತಡ ಕಾಣುತ್ತೇವೆ. ಜ್ಯೋತಿಷ್ಯಶಾಸ್ತ್ರದಲ್ಲಿ ನಾವು ನೋಡುವ ಕೇಳುವ ವಿವಿಧ ವಿವರಗಳು ಇಂಥ ನಾನಾರೂಪದ ಒತ್ತಡಗಳ ಅವಿರ್ಭಾವಗಳೇ ಹೊರತು ಬೇರೆನು ಅಲ್ಲ ಯಾವುದೇ ಒಂದು ವ್ಯಾದಿಗೆ ಅಥವಾ ಸಮಸ್ಯೆಗೆ ಔಷಧಿ ಅಥವಾ ಪರಿಹಾರ ಹುಡುಕುವ ನೆಲೆಯೊಂದಾದರೆ ಇದು ಎಲ್ಲರಿಗೂ ಏಕೆ ಲಭ್ಯವಿಲ್ಲ? ಲಭ್ಯವಾಗುವಂತೆ ಮಾಡುವುದು ಹೇಗೆ. ಇರುವ ಅಡಚಣೆಗಳನ್ನು ನಿವಾರಿಸಿಕೊಳ್ಳುವುದು ಹೇಗೆ ಎಂದು ಮಾನವ ಸಮಸ್ಯೆಗಳಿಗೆ ಸ್ಪಂದಿಸುವ ಎರಡು ಮುಖಗಳು ಇದಕ್ಕಿದೆ. ಜ್ಞಾನದ ಸ್ವರೂಪದ ಈ ಕ್ರಿಯಾಜ್ಞಾನವು ಇಂದು ಲಾಭದಾಯಕ ಜ್ಞಾನಶಾಕೆಯಾಗಿ ಜಡಗೊಂಡಿದೆ. ಚಲನಶೀಲ ಮತ್ತು ವೈಚಾರಿಕವಾದ ಇಂಥ ಅರಿವಿನ ಪ್ರಮೇಯಗಳನ್ನು ಪ್ರಭಾವಿ ಮತಧರ್ಮಗಳು ಯಾವಾಗಲೂ ಸಂಸ್ಕೃತೀಕರಿಸಿ ತನ್ನ ನಿಟ್ಟಿನಿಂದ ಅರ್ಥೈಸಲು ಹಾತೋರೆಯುತ್ತಿರುತ್ತವೆ ಅದನ್ನು ಪ್ರಶ್ನಾತೀತಗೊಳಿಸುತ್ತದೆ.

ಪ್ರಾಚೀನ ಕಾಲದಿಂದಲು ಜೋತಿಷ್ಯ ಜನಮುಖಿಯಾಗಿ ಹುಟ್ಟಿಕೊಂಡಿರುವುದನ್ನು ನಾವು ಅದರ ಪ್ರಾಚೀನತೆ ಸ್ವರೂಪಗಳನ್ನು ನೋಡಿದಾಗ ತಿಳಿಯುತ್ತದೆ. ಆದರೆ ಆಧುನಿಕ ಯುಗದಲ್ಲಿ ವೈಭವೀಕರಿಸಿ ಕೆಲವು ಒಂದು ವರ್ಗದ ಜ್ಞಾನವಾಗಿ ಬಿಂಬಿಸಿ ವ್ಯಾಪರೀಕರಣದ ರೀತಿಯಲ್ಲಿ ನಡೆಯುತ್ತಿದೆ. ಜನಸಾಮಾನ್ಯರಿಂದ ದೂರ ಉಳಿದಿದೆ. ಜೋತಿಷ್ಯದ ಕೆಲವೊಂದು ಮೂಲ ಹಸ್ತಪ್ರತಿಗಳನ್ನು ಓದಿದಾಗ ಪೂರ್ವದಲ್ಲಿ ಅದೊಂದು ಶೋಷಣೆಯ ಮಾಧ್ಯಮವಾಗಿ ಬರೆದೆ ಖಗೋಳದ ಚಲನವಲನಗಳನ್ನು ಅರಿಯುವ ಮತ್ತು ಬದುಕುವ ನಿಸರ್ಗದಲ್ಲಿ ನಡೆಯುವ ಬದಲಾವಣೆಗಳಿಗೆ ಮನುಷ್ಯ ತನ್ನನ್ನು ಹೊಂದಿಸಿಕೊಳ್ಳಲುವ ಮನುಷ್ಯನ ಸಮಸ್ಯೆಗಳಿಗೆ ಸ್ಪಂದಿಸುವ ಅರಿವಾಗಿ ಇದ್ದದು ಸ್ಪಷ್ಟವಾಗುತ್ತದೆ. ಪಂಚಭೂತಗಳಿಂದ ನಿಲುಟಗೊಂಡ ಶರೀರನ್ನು ಪಂಚಭೂತಗಳೊಂದಿಗೆ ಹೊಂದಿಸಿಕೊಂಡು ಬದುಕುವ ಜೀವನ ನೆಲೆಯಾಗಿ ಜೋತಿಷ್ಯ ಕಾಣುತ್ತದೆ. ಹೆಚ್ಚಿನ ಸಂದರ್ಭದಲ್ಲಿ ಮನುಷ್ಯನ ಮನಸ್ಸು ಮತ್ತು ಆರೋಗ್ಯದ ಸಮಸ್ಯೆಗಳಿಗೆ ತಿಳುವಳಿಕೆ ಮತ್ತು ಪರಿಹಾರೋಪಾಯ ಮಾರ್ಗಗಳನ್ನು ಸೂಚಿಸುವ ಸಂಗತಿಯಾಗಿ ಇದ್ದದ್ದು ಕಂಡುಬರುತ್ತದೆ.

'ಜೋತಿಷ್ಯವನ್ನು ಮಾನವ ಪ್ರಗತಿಯ ಉಪಕರಣವೆಂದು ಭಾಪಿಸಿದರೆ ನಮ್ಮ ಮಹತ್ವವನ್ನೇ ಹೆಚ್ಚು ಮಾಡಿಕೊಡಲಾಗುತ್ತದೆ. ಶಾಸ್ತ್ರ ನಮಗೆ ಮೌಲ್ಯ ಕಟ್ಟುವುದಕ್ಕೆ ಬದಲಾಗಿ ನಾವೇ

ಶಾಸ್ತ್ರಕ್ಕೆ ಮೌಲ್ಯ ಕಟ್ಟುವಂತಾಗುತ್ತದೆ. ದೇವರ ಕುರಿತು ತುಕಾರಂ ಹೇಳಿದ ಮಾತೊಂದು ಇಲ್ಲಿ ಪ್ರಸ್ತುತ ಎನಿಸುತ್ತದೆ. ನಾವು ಪಾಪಕ್ಕೆ ಬೀಳುವುದು ನಿನ್ನ ಅದೃಷ್ಟ ಅಥವಾ ಭಾಗ್ಯ. ನಾವು ನಿನಗೆ ಒಂದು ರೂಪ ಮತ್ತು ನಾಮವನ್ನು ಕೊಟ್ಟಿದ್ದೇವೆ. ನೀನು ಒಂಬಟ್ಟಿಗ ಮತ್ತು ಅಮೂರ್ತನಾಗಿದ್ದಾಗ ನಾವಲ್ಲದೆ ನಿನ್ನನ್ನು ಯಾರು ಲೆಕ್ಕ ಮಾಡುತ್ತಿದ್ದರು. ಕತ್ತಲು ಬೆಳಕನ್ನು ಪ್ರಕಾಶಿಸುವಂತೆ ಮಾಡುತ್ತದೆ. ಧ್ವನಂತರಿಯನ್ನು ಪ್ರಕಾಶಕ್ಕೆ ತಂದ್ದು ರೋ ಅಮೃತಕ್ಕೆ ಮೌಲ್ಯ ಕಟ್ಟುವುದು ವಿಷ ಓ ದೇವನೆ ತಿಳಿ ನಾವು ಬದುಕಿರುವುದರಿಂದ ನಿನಗೆ ದೈವತ್ವ ಆರೋಪಿತ ಆಗಿದೆ[೧೪] ಎನ್ನುವ ಮಾತು ಜೋತಿಷ್ಯಶಾಸ್ತ್ರಕ್ಕೆ ಬಹಳ ಅನ್ವಯಿಸುತ್ತದೆ. ಭೂಮಿ ಭೂಗೋಳ ಮನುಷ್ಯ ಮತ್ತು ಆತನ ಫಲಪ್ರಣೀತ ಗುಣದಿಮದಾಗಿ ಜೋತಿಷ್ಯಶಾಸ್ತ್ರಕ್ಕೆ ಅಸ್ತಿತ್ವವಿದೆಯೇ ಹೊರತು ಅದು ತನ್ನಷ್ಟಕ್ಕೆ ತಾನೇ ಸ್ವತಂತ್ರ ಅಥವಾ ಮಾನವಾತೀತವಾದುದಲ್ಲ. ಜೋತಿಷ್ಯವೇ ನಮ್ಮ ಅಸ್ತಿತ್ವವನ್ನು ನಿರ್ಧರಿಸುತ್ತವೆನ್ನುವುದು ಸರಿಯಾದುದಲ್ಲ. ಸತತ ಪರಿಶ್ರಮ ಫಲ ಕುತೂಹಲಗಳು ನಮ್ಮನ್ನು ಉನ್ನತ ಮಟ್ಟಕ್ಕೆ ಏರಿಸಬಲ್ಲವೇ ಹೊರತು ಯಾವುದೇ ಶಾಸ್ತ್ರದ ನಿಯಮಗಳಲ್ಲ. ಕಾರ್ಯಶೀಲನು ತನ್ನ ಭವಿಷ್ಯವನ್ನು ತನ್ನ ಸ್ವಯಂ ಆತ್ಮ ಮತ್ತು ಆಂತರಿಕ ಅರಿವಿನ ಸಂಘದಲ್ಲಿ ಕಂಡರೆ ಮಾನಸಿಕ ದುರ್ಬಲನು ಇಂಥ ಜೋತಿಷ್ಯದ ಪರಾವಲಂಬಿ ಪುಟಗಳಲ್ಲಿ ಕಾಣಬಯಸುತ್ತಾನೆ. ಹೆಚ್ಚಿನ ಜನರು ಇಂತಹದ್ದನ್ನೇ ಪ್ರಮಾಣವೆಂದು ನಂಬುತ್ತಾರೆ. ಹೀಗಾಗಿ ಬಹುಶಾಸ್ತ್ರೀಯ ಹಾಗೂ ಬಹುಬಳಕೆಯ ದೇಸಿ ಜ್ಞಾನಪರಂಪರೆಯಾಗಿದ್ದ ಜೋತಿಷ್ಯವು ಏಕಮುಖಿಯಾಗಿ ಮೌಢ್ಯವಾಗಿ ಇಂದು ಜನಪ್ರಿಯಗೊಳ್ಳುತ್ತಿರುವುದು ವಿಚಿತ್ರವಾಗಿದೆ.

ವಾಸ್ತು

ವಾಸ್ತುಶಾಸ್ತ್ರವೆಂದರೆ ದೇಹ ಮತ್ತು ಬುದ್ಧಿಯನ್ನು ಸಂಘಟನಾತ್ಮಕ ನೆಲೆಯಲ್ಲಿ ನಿಸರ್ಗ ಸಹಜವಾದ ವಾತವರಣಕ್ಕೆ ಹೊಂದಿಸಿಕೊಳ್ಳುವುದು ಎಂದರ್ಥ. ಮನುಷ್ಯ ದೇಹದ ಜೈವಿಕ ರಚನೆ ಆರೋಗ್ಯ, ವಿಜ್ಞಾನ, ಜೋತಿಷ್ಯ, ಮಾನವಶಾಸ್ತ್ರ, ಭೂ ಜೀವಶಾಸ್ತ್ರ ಮತ್ತು ವಾಸ್ತುಶಾಸ್ತ್ರಗಳು ಪರಸ್ಪರ ಅರಿತ ಸಂಬಂಧವುಳ್ಳಂಥವು. ಈ ಹಿನ್ನೆಲೆಯಲ್ಲಿ ವಾಸ್ತುಶಾಸ್ತ್ರ ಎಂದರೆ ಅದೊಂದು ಬಹುಶಿಸ್ತೀಯ ಜ್ಞಾನ ಸಂವೇದನೆಗಳ ಕ್ಷೇತ್ರ ಎಂದು ಹೇಳಬಹುದು. ಏನು ಇಲ್ಲದ ಬಯಲಲ್ಲಿ ದಿಕ್ಕುಗಳನ್ನು ಒಳ ಹೊರಗುಗಳನ್ನು ಮೇಲು ಕೆಳಗಡೆಯನ್ನು ಗುರುತಿಸಿ ಮನೆ ಕಟ್ಟುತ್ತೇವೆ. ಈ ಕಟ್ಟುವ ಕೆಲಸವು ನಮ್ಮ ನಾಗರಿಕತೆಯ ಪ್ರಥಮ ಹೆಜ್ಜೆಯಾಗುತ್ತದೆ. ಮನೆ ನಾಗರಿಕತೆಯ ಒಂದು ಸಜೀವ ರೂಪ. ಈ ಸಜೀವ ರೂಪ ಉಸಿರಾಡಬೇಕಾದರೆ ಅದಕ್ಕೆ ಕಿಟಕಿ ಬಾಗಿಲುಗಳ ಅಗತ್ಯವಿರುವಂತೆ ವಾಸಯೋಗ್ಯದ ಮನಸ್ಥಿತಿಯೂ ಬಹುಮುಖ್ಯ ಚರಿತ್ರೆಯಲ್ಲಿ ಮಹಿಳೆಯರು ಉತ್ಪಾದನಾಶೀಲರು ಸೃಜನಶೀಲರೂ ಆಗಿದ್ದರ ಬಗ್ಗೆ ಆಳವಾದದ ಮಾಹಿತಿ ಸಿಗುತ್ತವೆ. ಸಂಸ್ಕೃತಿಯಲ್ಲಿ ಮನೆ ಕಟ್ಟುವ ಕೆಲಸ

ಗೃಹಿಣಿಯ ಎನ್ನುವುದು ವಾಸ್ತು ಶಾಸ್ತ್ರಕ್ಕೆ ಹೊಸ ಆಯಾಮವನ್ನು ನೀಡುವಂಥದ್ದು. ಕಾರಣ ವಾಸ್ತು ನಿರ್ಮಾನಕ್ಕೆ ಬೇಕಾದ ಮೂಲ ಪರಿಕರವೇ ಭೂಮಿ. ಭೂಮಿ ನಮ್ಮ ಸಂಸ್ಕೃತಿಯಲ್ಲಿ ತಾಯಿಯ ಸ್ವರೂಪವನ್ನು ತಾಳಿರುವುದು ಗಮನಾರ್ಹ. ಇಂಥ ಭೂಮಿಯನ್ನು ಗೃಹನಿರ್ಮಾಣದ ಹೊತ್ತಿನಲ್ಲಿ ವಾಸ್ತು ಪುರುಷರು ಬಂದು ಪುರುಷ ಪ್ರಧಾನವಾಗಿ ವ್ಯಾಖ್ಯಾನಿಸಿದ ನೆಲೆಗಳು ಚರ್ಚಾರ್ಹ ಸಂಗತಿಗಳು ಏನೇ ಇರಲಿ ಆಧುನಿಕ ಆವಿಷ್ಕಾರಗಳ ಮಧ್ಯ ಬದುಕುತ್ತಿರುವ ನಾವು ಚರಿತ್ರೆಯ ಒಮ್ಮುಖ ಚಿಂತನೆಗಳಿಗಿಂತ ಸಂಸ್ಕೃತಿಯೊಳಗಿರುವ ಬಹುಮುಖಿಯಾದ ಸಂವೇದನೆಗಳನ್ನು ಅರಿಯುವುದು ಮುಖ್ಯವಾಗಿದೆ.

ಭಾರತೀಯ ವಾಸ್ತುಶಾಸ್ತ್ರದ ಪ್ರಮುಖ ಗ್ರಂಥಗಳನ್ನು ಮತ್ತು ದೃಷ್ಟಾರರ ಮಾತುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವು ಗೃಹವಾಸ್ತುವನ್ನು ಒಂದು ಕ್ರಿಯಾಶೀಲ ಮತ್ತು ನಿಸರ್ಗಮುಖಿಯಾದ ನೆಲಗಳಿಂದ ಗ್ರಹಿಸಿದ್ದು ಸ್ಪಷ್ಟವಾಗುತ್ತದೆ. ಅಂದರೆ ವಾಸ್ತುವನ್ನು ಒಂದು ಜಡ ಪರಿಕಲ್ಪನೆಯನ್ನಾಗಿ ಗ್ರಹಿಸದೆ ಸಂಚಲನಾತ್ಮಕ ಪರಿಕಲ್ಪನೆಯನ್ನಾಗಿ ಗ್ರಹಿಸಿದ್ದು ಎದ್ದು ಕಾಣುತ್ತದೆ. ವಿಚಿತ್ರವೆಂದರೆ ಆಧುನಿಕ ಸಂದರ್ಶನದಲ್ಲಿನ ವಾಸ್ತುಶಾಸ್ತ್ರೀಯ ಅಧ್ಯಯನಗಳ ಮತ್ತು ಆಲೋಚನೆಗಳು ಮನೆಯನ್ನು ಒಂದು ಶುಷ್ಕ ತಾಂತ್ರಿಕವಾದ ಜಡ ಪರಿಕಲ್ಪನೆಯ ನ್ನಾಗಿ ಪರಿಭಾವಿಸಿದ್ದು ಎದ್ದು ಕಾಣುತ್ತದೆ. ಇಲ್ಲಿನ ಮನೆ ಕೇವಲ ನಾಲ್ಕು ಗೋಡೆಗಳ ಆಡಂಭರವಾಗಿ ಒಂದು ಫ್ಯಾಷನ್ ಆಗಿ ಕಾಣುತ್ತದೆ. ರಾಜಕೀಯ ಅಸ್ತಿರತೆ ವೈಚಾರಿಕತೆಯ ಅನುಭವ ಜೀವನ ಮೌಲ್ಯಗಳ ಪತನ ಆತ್ಮ ವಿಶ್ವಾಸದ ಕೊರತೆ ದಿಢೀರ ಶ್ರೀಮಂತಿಕೆ ಮಾನಸಿಕ ತೊಳಲಾಟಗಳಂತಹ ಸಂಗತಿಗಳು ನವ ಶ್ರೀಮಂತ ವರ್ಗದಲ್ಲಿ ಈ ಶಾಸ್ತ್ರವನ್ನು ಜನಪರಿಯಗೊಳಿಸುತ್ತಿವೆ. ಅದೇ ರೀತಿ ನಾಯಿಕೊಡೆಗಳಂತೆ ವಾಸ್ತು ಪ್ರವೀಣರೆನ್ನುವ ಕೋಟಾ ಶಾಸ್ತ್ರಜ್ಞರನ್ನು ಪೋಷಿಸಿ ಬೆಳೆಸುತ್ತಿಸುತ್ತಿದ್ದೇವೆ. ಗಳಿಯ ಮಾಧ್ಯಮವಾಗಿ ಹಿಂದೆಂದೂ ಕಾದ ಜನಪ್ರಿಯತೆಯನ್ನು ವಾಸ್ತುಶಾಸ್ತ್ರಗಳಿಸುತ್ತಿದೆ. ಜೀವಪರವಾದ ದೇಶಿ ಜ್ಞಾನ ಪರಂಪರೆಯೊಂದನ್ನು ಜೀವ ವಿರೋಧಿ ನೆಲೆಯಾಗಿ ಹಾಗೂ ಶೋಷಣೆಯ ಮಾಧ್ಯಮವಾಗಿ ಬಳಸಲಾಗುತ್ತಿದೆ. ಇಂಥ ವಾಸ್ತುಶಾಸ್ತ್ರ ಕೃತಿಗಳು ಅನೇಕ ಪರಿಸರ ಕಾಳಜಿ ಮೂಡಿಬಂದಿದ್ದು, ಮಂದಕಡಿ ವಿಧನಗಳು, ಆಯುಧಗಳ ಬಳಕೆ, ಮರದ ಆಯುಧ ವಿಧಾನಗಳು, ಮನೆ ಸುತ್ತಮುತ್ತ ಮರಗಳಿರುವ ಲಕ್ಷಣ, ಮರದ ಸ್ವರೂಪ ಹೀಗೆ ವಾಸ್ತುಶಾಸ್ತ್ರ ಕೃತಿಗಳ್ಲಲಿ ಕಾಣುವ ಪರಿಸರ ಸ್ನೇಹಿ ಸಂಗತಿಗಳ ಕುರಿತು ವೈಜ್ಞಾನಿಕ ರೀತಿಯ ಗಂಭೀರ ಅಧ್ಯಯನ ನಡೆಯಬೇಕಾಗಿದೆ. ನಿಸರ್ಗ ಸಮ್ಮುಖ ಕ್ರಿಯೆಗಳಿಂದ ದೊರೆಯುವ ಗಾಳಿ, ಬೆಳಕುಗಳಂಥ ಪ್ರಯೋಜನಗಳನ್ನು ಪಡೆದುಕೊಂಡು ಆರೋಗ್ಯಪೂರ್ಣ ಬದುಕನ್ನು ನಡೆಸಬೇಕಾದ ಪಂಚಭೂತಾತ್ಮಕ ಪರಿಕಲ್ಪನೆ ಇಲ್ಲದೇ ಯಾಕೆಂದರೆ ದೇಶಿ ಜ್ಞಾನ ಪರಂಪರೆಯಲ್ಲಿ ವಾಸ್ತು ಎಂದರೆ ಕೇವಲ ಗೋಡೆ, ಕಿಟಕಿ, ಬಾಗಿಲುಗಳಂಥ ಘನವಸ್ತುಗಳ ಅಧ್ಯಯನವಲ್ಲ. ಅದು ಆ ಭೌಗೋಳಿ ಪರಿಸರದಲ್ಲಿ

ಬದುಕಿನ ಜನಸಮುದಾಯಗಳ ಜೀವ ಸಂಕುಲಗಳ ಸಾಂಸ್ಕೃತಿಕ ಪರಂಪರೆಯನ್ನು ಅರ್ಥಮಾಡಿಕೊಳ್ಳುವುದಾಗಿದೆ. ವ್ಯಕ್ತಿಯ ಆಗು-ಹೋಗು ಆರೋಗ್ಯಗಳನ್ನು ನಿರ್ಧರಿಸುವ ಈ ಶಾಸ್ತ್ರವು ಇದೊಂದು ಭೂ ಜೀವಶಾಸ್ತ್ರವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಶಕುನ

ಕಾವ್ಯೋತ್ತರ ಶಾಸ್ತ್ರಗಳಲ್ಲಿ ಶಕುನಶಾಸ್ತ್ರವು ಪ್ರಮುಖವಿರುವುದು. ಜೋತಿಷ್ಯ ಶಾಸ್ತ್ರದ ಒಂದು ಭಾಗವಾಗಿ ಈ ಶಾಸ್ತ್ರ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಜನಪರ ನಂಬಿಕೆ ಹಾಗೂ ಮೂಢನಂಬಿಕೆಯ ಭಾಗವಾಗಿ ಶಕುನ ರೂಪುಗೊಂಡಿದ್ದು, ಕರ್ಮ, ಗ್ರಹ ನಕ್ಷತ್ರ ಇತ್ಯಾದಿ ಕಾರ್ಯಕಾರಣ ಸಂಬಂಧವನ್ನು ಹೇಳಲಾಗುತ್ತದೆ. ಹೀಗೆ ಹೇಳುವುದಕ್ಕೆ ಯಾವುದೇ ಖಚಿತ ಆಧಾರಗಳಿಲ್ಲ. ಜನಪದ ನಂಬಿಕೆಗಳು ಮತ್ತು ಆಚರಣೆಗಳು, ವಿಜ್ಞಾನ ಪೂರ್ವಯುಗದ ವಿಜ್ಞಾನವೆಂದು ಮಾನವಶಾಸ್ತ್ರಜ್ಞರು ಹೇಳುತ್ತಾರೆ. ಈ ವಿಜ್ಞಾನವನ್ನು ಕೇವಲ ಅರ್ಥಹೀನವೆಂದು ತಳ್ಳಿಹಾಕುವುದರಲ್ಲಿ ಅರ್ಥವಿಲ್ಲ. ಮಾನವನ ಮನೋಧರ್ಮದ ವಿಕಾಸವನ್ನು ತಿಳಿಯಬೇಕಾದರೆ ಶಕುನವನ್ನು ಮಾನವಶಾಸ್ತ್ರ ಸಮಾಜಶಾಸ್ತ್ರ, ಮನಶಾಸ್ತ್ರ ಮುಂತಾದ ಶಾಸ್ತ್ರಗಳ ಹಿನ್ನೆಲೆಯಲ್ಲಿ ಅಧ್ಯಯನಿಸುವುದು ಅಗತ್ಯವಿದೆ.

ಇತರೆ

ಈಗ ಮೇಲೆ ಚರ್ಚಿಸಿದಂತೆ ಪ್ರಯೋಗ ಪ್ರಯೋಜನ ಮತ್ತು ಸಂಯೋಜನಮುಖಿಯಾದ ಹಸ್ತಪ್ರತಿಗಳು ಬಹುವಿಧ ಜ್ಞಾನ ಶಿಸ್ತುಗಳನ್ನು ಗರ್ಭೀಕರಿಸಿಕೊಂಡಂಥವು. ಸಾಹಿತ್ಯವೆಂದು ಪರಿಗಣಿಸುವ ಪ್ರಧಾನ ವಿಷಯಗಳಿಂದ ಹಿಡಿದು ವೈದ್ಯಶಾಸ್ತ್ರ ಶಿಲ್ಪಶಾಸ್ತ್ರ, ಜ್ಯೋತಿಷ್ಯ, ಶಕುನ, ವಾಸ್ತುಶಾಸ್ತ್ರಗಳಂತೆ ಇನ್ನೂ ಅನೇಕ ಶಾಸ್ತ್ರಗಳಿಂದು ಅಂತವುಗಳಲ್ಲಿ ಕೃಷಿ, ಖಡ್ಗಶಾಸ್ತ್ರ, ನೀತಿಶಾಸ್ತ್ರ, ಜಲಶಾಸ್ತ್ರ, ಪ್ರಶ್ನಾಶಾಸ್ತ್ರ, ಗಜಶಾಸ್ತ್ರ, ಸೂಪಶಾಸ್ತ್ರ, ಅಶ್ವಶಾಸ್ತ್ರ, ಮಾಟ ಮಂತ್ರ ಹೀಗೆ ಇಂಥ ಹಲವು ಹತ್ತು ಸಂಗತಿಗಳನ್ನು ಒಳಗೊಂಡಿವೆ. ಇವೆಲ್ಲ ಜನರಿಂದ ಜನರ ಅಗತ್ಯಗಳಿಗಾಗಿಯೇ ರೂಪುಗೊಂಡಂಥವು. ಇವೆಲ್ಲವುಗಳಿಗೂ ಪ್ರಾದೇಶಿಕ ಧಾರ್ಮಿಕ, ರಾಜಕೀಯ, ಆರ್ಥಿಕ, ಲಿಂಗ, ಜಾತಿ ಇತ್ಯಾದಿ ಆಯಾಮಗಳಿದ್ದು, ಹೀಗಾಗಿ ಇಂಥ ಕೃತಿಗಳನ್ನು ಕೇವಲ ಶುದ್ಧಶಾಸ್ತ್ರದ ಮೂಲಕ ಅಥವಾ ಕೃತಿ ಕರ್ತೃನಿಷ್ಟ ನೆಲೆಯ ಪರಿಶೀಲನೆಗಿಂತ ಭಿನ್ನವಾದ ಅನುಸಂದಾನದಡಿಯಲ್ಲಿ ಮುಖಾಮುಖಿ ಮಾಡಬೇಕಾಗಿದೆ. ವಿಶೇಷವಾಗಿ ಸಾಂಸ್ಕೃತಿಕವಾಗಿ ಮಾನವಶಾಸ್ತ್ರ, ಸಮಾಜಶಾಸ್ತ್ರ, ಮನಶಾಸ್ತ್ರ ಮುಂತಾದ ಶಾಸ್ತ್ರಗಳ ಅಧ್ಯನ ನೆಲೆಗಳಿಂದ ವಿಶ್ಲೇಷಿಸುವ ಅಗತ್ಯವಿದೆ.

"ವೀರೇಶ ಬಡಿಗೇರ ಅವರು ಈ ಶಾಸ್ತ್ರ ಕೃತಿಗಳನ್ನು ಕುರಿತು ಭವದಕೋಳೆ ಮತ್ತು ಫಲಾಪೇಕ್ಷೆ, ನೆಲದ ಜಲದ ವ್ಯಾಖ್ಯಾನ, ಕ್ರಿಯೆ ಮತ್ತು ಆರೋಗ್ಯ, ಅನುಮಾನ ಮತ್ತು

ಅನುಸಂಧಾನ ಎಂಬ ಶೀರ್ಷಿಕೆಯಡಿಯಲ್ಲಿ ಈ ಶಾಸ್ತ್ರ ಕೃತಿಗಳನ್ನು ಅಧ್ಯಯಿಸುವುದರಿಂದ ಜನಮುಖಿ ಅಧ್ಯಯನ ಮಾಡಬಹುದು ಎಂಬ ಅಭಿಪ್ರಾಯ ಹೇಳಿರುವಂತೆ ಕಾಣುತ್ತದೆ.'[೧೫]

ಭವದ ಕೊಳೆ ಮತ್ತು ಫಲಾಪೇಕ್ಷೆ:

ಹಸ್ತಪ್ರತಿಗಳು ಜನ ಬದುಕಿನ ದಿನಿತ್ಯದ ಸಂಕಟ ಮತ್ತು ಸಂಭ್ರಮದ ಭಾಗವಾಗಿ ಜೀವಂತವಾಗಿದ್ದಂಥವು. ಅನುದಿನ ಚಿಂತನೆಯನ್ನು ಹುರುಗೊಳಿಸುತ್ತಿದ್ದವು. ಕುಮಾರವ್ಯಾಸ ಭಾರತದ ವಿರಾಜಪರ್ವದಂತಹ ಕಥಾಭಾಗಗಳು ಮಳೆ-ಬೆಳೆಯಂತಹ ಕೃಷಿ ಪ್ರಧಾನ ಸಂಸ್ಕೃತಿಯ ಸಂಕಥನಗಳಾಗಿಯೇ ಜನಮಾನಸದಲ್ಲಿ ಜೀವಂತವಾಗಿ ಉಳಿದುಬಂದವು. ಮಳೆ ಬರದಿದ್ದಾಗ ಈ ಕಥಾ ಭಾಗವನ್ನು ಪಠಣ ಮತ್ತು ಪ್ರವಚನ ಮಾಡಿಸುವ ಮೂಲಕ ಜನ ತಮ್ಮ ಸಮಸ್ಯೆಗೆ ಪರಿಹಾರವನ್ನು ಕಾಣುತ್ತಿದ್ದರು. ಈ ಕಾರಣಕ್ಕಾಗಿಯೇ ಕುಮಾರವ್ಯಾಸ ಭಾರತ ಅತ್ಯಂತ ಜನಪ್ರಿಯ ಸಂಸ್ಕೃತಿಯ ನಿರೂಪವಾಗಿ ಬೆಳೆದು ಬಂದಿತು. ಹೀಗೆ ಲಿಖಿತ ಪಠ್ಯವನ್ನು ಮೌಖಿಕವಾಗಿ ವಂಶಪಾರ್‍ಯಂಪರವಾಗಿ ಮುನಿಯ ಜನಮಾಜಯನಿಗೆ ಹೇಳುತ್ತಿರುವುದು ಕೂಡ ಭವದ ಕರ್ಮ ಕಳೆದು ಕೇಳುತ್ತಿರುವ ಸಲುವಾಗಿ ಶಾಪಮುಕ್ತವಾಗುವ ಹಂಬಲದಿಂದಾಗಿ ಅಂದರೆ ಲಿಖಿತ ಪಠ್ಯಗಳೆಲ್ಲವೂ ಮೌಖಿಕವಾಗುತ್ತ ವಾಚಕ ರೀತಿಗೆ ಒಳಪಡುವಾಗಲೆಲ್ಲ ಭವದ ಕೊಳೆಯನ್ನು ಕಳೆದುಕೊಳ್ಳಲು ಫಲಾಪೇಕ್ಷೆಗಳನ್ನು ಸಿದ್ಧಿಸಿಕೊಳ್ಳಲು ಹಂಬಲಿಸುತ್ತದೆ. ಕೃತಿವಾಚನದಿಂದ ದುರಂಗವೆಂಬ ಕತ್ತಲೆ ಹರಿದು ಅವರ ದೃಷ್ಟಿಯೆಂಬ ಕನ್ನೈದಿಲಿ ಅರಳುತ್ತದೆ. ಯಶೋಧರ ಚರಿತತೆಯೆಂಬ ಚಂದ್ರದಯಿಂದ(ಜನ್ನ ಪುಣ್ಯ ಭೋಗಜಯ ನಿತ್ಯಯುವಂರ ಶ್ರೀಯಮಂ ನಂದೀಶಗಣದೊಡೆಯ ಪಂಪಾ ಪುರಾಧೀಶ್ವರಂ ಮಡುವವನು ಹರಿಹರ ಎನ್ನುವುದು ಕವಿ ಲಿಪಿಕಾರ ಮತ್ತು ವಾಚಕ ನಂಬಿಕೆಯಾಗಿತ್ತು.

ನೆಲ ಜಲದ ವ್ಯಾಖ್ಯಾನ:

'ರಟ್ಟಮತ, ಶಿಲ್ಪಶಾಸ್ತ್ರ, ಪ್ರಶ್ನೆಶಾಸ್ತ್ರ ಮಾಡಿ ಮಂತ್ರ, ಜೋತಿಷ್ಯ, ಆಯುರ್ವೇದ ಮುಂತಾದ ಹಸ್ತಪ್ರತಿಗಳು ಕರ್ನಾಟಕದ ನೆಲ-ಜಲ ನಿಸರ್ಗ ಮತ್ತು ಜನ ಬದುಕಿನ ಪ್ರಯೋಗಶೀಲ ವ್ಯಾಖ್ಯಾನಗಳಾಗಿವೆ. ಭೂಮಿ ಋತುಮಾನ ಮಳೆ, ಬೆಳೆ, ಸೂರ್ಯ, ಚಂದ್ರ, ನಕ್ಷತ್ರ, ರಾಶಿಫಲ, ಶಕುನ, ದನಕರು, ಎತ್ತು, ಎಮ್ಮೆ, ಬೀಜ, ಗೊಬ್ಬರ, ಗ್ರಹಣ ಮುಂತಾದ ಪ್ರಾಕೃತಿಕ ಚಲನೆಗಳಿಗೂ ಮತ್ತು ಮಾನವರಿಗೂ ಇರುವ ಸಾವಯವ ಸಂಬಂಧವನ್ನು ಕಟ್ಟಿಕೊಡುತ್ತವೆ'.[೧೬] ರಟ್ಟಮತ ಕೃತಿ ಪ್ರದೀಪಿಕೆಯಂಥ ಕೃತಿಗಳು ಯಾವ ಯಾವ ಮಳೆಗೆ ಯಾವ ಯಾವ ಮಣ್ಣಿನಲ್ಲಿ ಯಾವ ಯಾವ ಬೀಜಗಳನ್ನು ಹೇಗೆ ಎಷ್ಟೆಷ್ಟು ಪ್ರಮಾಣದಲ್ಲಿ ಬಿತ್ತಬೇಕು ಎಂಥ ಎತ್ತುಗಳಿರಬೇಕು, ಉಳುಮೆ ಮಾಡುವವನ ಲಕ್ಷಣಗಳೇನು, ಅವನ ಉಡುಗೆ ತೊಡುಗೆಗಳೇನು, ಎತ್ತುಗಳ ಬಣ್ಣ ಯಾವುದು, ಉಳುಮೆ ಮಾಡುವ ಹಾಗೂ ನೆಲ ಹದಮಾಡುವ ವಿಧಾನ ಇತ್ಯಾದಿ ಪ್ರಯೋಗಶೀಲ ಹಾಗೂ ಪ್ರತ್ಯಾಕ್ಷನುಭವದ ಸಂಗತಿಗಳನ್ನು ಹೇಳುತ್ತವೆ.

ಕ್ರಿಯೆ ಮತ್ತು ಆರೋಗ್ಯ:

ಮಾಟ, ಮಂತ್ರ, ಯಂತ್ರ, ತಂತ್ರದಂತಹ ಹಸ್ತಪ್ರತಿಗಳು ಜನಸಂಸ್ಕೃತಿ ಯನ್ನು ಬಿಂಬಿಸುವ ಮತ್ತೊಂದು ರೀತಿಯ ಆಕರಗಳಾಗಿವೆ. ಬಾಲಗ್ರಹಪೀಢೆ, ಸ್ತ್ರೀ ವಶೀಕರಣ, ವಿವಿಧ ದೈಹಿಕ ರೋಗಗಳಿಗೆ ಔಷಧೀಯ ಕೊಡುವುದು, ಚೀಟಿ, ದಾರ, ತಾಯತ ಮಾಡಿಕಟ್ಟುವುದು ಮುಂತಾದ ದಿನ ಬದುಕಿನಲ್ಲಿ ಆಚರಣೆಯ ರೂಪದಲ್ಲಿ ಬೇರು ಬಿಟ್ಟಿವೆ. ನಿದಿಕ್ಷೇಪ ಸಂತಾನ ಫಲ, ವೈರಿನಾಶ, ಭಾನಾಮತಿ, ನರಬಲ, ತಾಂತ್ರಿಕ ಹರಕೆಗಳು ಆ ಕಾಲದ ಸಂತಾನ ಮತ್ತು ಸಮೃದ್ಧಿಯ ಆಚರಣೆಗಳಾಗಿದ್ದವು. ಹಸ್ತಪ್ರತಿಯೊಂದರಲ್ಲಿ ನಾರಾಧನೆ, ಕರಗ, ಬಾದುಜ್ಞ ಪರ್ವ, ಗಣರಾಧನೆ, ಗಣಗೆಶಾಸ್ತ್ರ ಇತ್ಯಾದಿ ಇವು ಗುಪ್ತ ಹಾಗೂ ತಾತ್ರಿಕ ಆಚರಣೆಗಳಾಗಿದ್ದು ಅವುಗಳಿಗೆ ರಾಜಾಶ್ರಯ ದೊರೆತಿದ್ದ ಬಗ್ಗೆ ಉಲ್ಲೇಖವಿದೆ.

ಮಂತ್ರವಾದಿ ಮಾಂತ್ರಿಕ ಮಂತ್ರವಾದಿನಿ ಇವರೆಲ್ಲ ಪ್ರಾಚೀನ ಸಮಾಜದ ಅವಿಭಾಜ್ಯ ಅಂಗವಾಗಿದ್ದು, ಸಾಂಸ್ಕೃತಿಕವಾಗಿ ಜನಸಮುದಾಯವನ್ನು ಮುನ್ನಡೆಸುವಲ್ಲಿ ಇವರು ಪ್ರಮುಖರಾಗಿದ್ದು, ಹೀಗೆ ಮಾಟಮಂತ್ರ ಯಂತ್ರ, ತಂತ್ರದಂತಹ ಹಸ್ತಪ್ರತಿಗಳು ಜನಸಂಸ್ಕೃತಿಯ ಭಾಗವಾಗಿ ರಚನೆಯಾಗಿದ್ದು, ಅವುಗಳ ಅಧ್ಯಯನ ಈ ನಿಟ್ಟಿನಲ್ಲಿ ನಡೆಯಬೇಕಿದೆ.

ಅನುಮಾನ ಮತ್ತು ಅನುಸಂಧಾನ:

ಜೋತಿಷ್ಯ ವಾಸ್ತು ಶಕುನ, ಭವಿಷ್ಯ ಇವು ಮನುಷ್ಯ ಭಾವನೆಯನ್ನು ವಿಕೃತಗೊಳಿಸುವ ಅಥವಾ ಅನ್ಯೆತಿಕಗೊಳಿಸಿದ ಸಂಗತಿಗಳಲ್ಲಿ ಬದಲಾಗಿ ದೃಢಗೊಳಿಸುವ ಹಾಗೂ ಧೈರ್ಯ ತುಂಬುವ ಮನೋವೈಜ್ಞಾನಿಕ ಪ್ರಕ್ರಿಯೆಗಳು ಮನುಷ್ಯನ ಭೌತಿಕ ಹಾಗೂ ಮಾನಸಿಕ ಸ್ತರಗಳ ಅಥವಾ ಭಾವನಾತ್ಮಕ ಹಾಗೂ ಕ್ರಿಯಾಶೀಲ ಅಸ್ತಿತ್ವಗಳ ಆಧಾರದ ಮೇಲೆ ಈ ಎಲ್ಲ ಅರಿವಿನ ಕ್ರಿಯೆಗಳು ನಿಂತಿವೆ. ಮನಸ್ಸು ಪ್ರಕ್ಷಬದ್ಧವಾದ ಅಥವಾ ಹೊಯ್ದಾಡಿದಾಗ ಏನೇ ಘಟನೆಗಳು ಸಂಭವಿಸಿದರು ಅದಕ್ಕೆ ಸಹ ಸಂಬಂಧಗಳನ್ನು ಆರೋಪಿಸಲಾಗುತ್ತದೆ.

ಹೀಗೆ ಮನಸ್ಸು ವಿಚಲಿತವಾದಗ ಘಟನೆಗಳು ಶಕುನಗಳು, ಸಂಭವಿಸಬಹುದು ಅಥವಾ ಘಟನೆಗಳು ಶಕುನಗಳು ಸಂಭವಿಸಿದ ನಂತರ ಮನಸ್ಸು ವಿಚಲಿತವಾಗಬಹುದು. ಒಟ್ಟಾರೆಯಾಗಿ ಫಲಾಫಲಗಳನ್ನು ನೀರಿಕ್ಷಿಸುವ ನೆಲೆಯನ್ನು ಇಲ್ಲಿ ಕಾಣುತ್ತೇವೆ. ಮನುಷ್ಯನಲ್ಲಿನ ರಜೋ ಮತ್ತು ತಮೋಗುಣಗಳು ಮನಸ್ಸಿನಲ್ಲಿ ಇಂಥ ಪ್ರಕ್ಷುಬ್ದತೆಗೆ ಕಾರಣ ಎನ್ನುವುದು ಮನೋವೈಜ್ಞಾನಿಕ ಇಂಗಿತವಾಗಿದೆ.

ವಾಸ್ತು ಮತ್ತು ಜೋತಿಷ್ಯದ ಹಸ್ತಪ್ರತಿಗಳು ಕಟ್ಟುವ ಕೆಲಸವೇ ನಮ್ಮ ನಾಗರಿಕತೆಯ ಮೊದಲ ಹೆಜ್ಜೆ. ಮನೆ ನಾಗರಿಕತೆಯ ಒಂದು ಸಂಜೀವರೂಪ. ಈ ಸಜೀವ ಉಸಿರಾಡ

ಬೇಕೆಂದರೆ ಅದಕ್ಕೆ ಕಿಟಕಿ ಬಾಗಿಲುಗಳು ಅಗತ್ಯವಿರುತ್ತವಂತೆ. ವಾಸಯೋಗ ಮನಸ್ಥಿತಿಯು ಬಹುಮುಖ್ಯ. ಇಂಥ ಭೂಗೋಳ ಮತ್ತು ವಾಸಸ್ಥಳದ ವೈಜ್ಞಾನಿಕ ಚಿಂತನೆಯ ರೂಪವೇ ವಾಸ್ತು ಮತ್ತು ಜೋತಿಷ್ಯ. ಭೂಮೇಲ್ಮೈ ಲಕ್ಷಣಗಳಿಗೆ ಅನುಗುಣವಾಗಿ ಜಾಂಗಲ(ಒಣಭೂಮಿ), ಅನೂಪ(ಫಲವತ್ತಾದ) ಹಾಗೂ ಸಾಧಾರಣವೆಂದೂ ಗಿಡ, ಮರ, ಪ್ರಾಣಿ, ಪಕ್ಷಿ, ಸರೀಸೃಪಗಳು ವಾಸಿಸುವ ಸ್ಥಳವನ್ನು ಅನುಸರಿಸಿ ಪೂರ್ಣ ಸುಪದ್ಮಾ, ಭದ್ರ, ಧೂಮ್ರಾ ಎಂದು ವಿಂಗಡಿಸಲಾಗುತ್ತದೆ. ನಿವೇಶನದ ಆಯ್ಕೆಗೆ ಸಂಬಂಧಿಸಿದಂತೆ ಪೂರ್ವ ತಗ್ಗಾಗಿಯೂ ನೈರುತ್ಯ ಉತ್ತವಾಗಿಯೂ ಆಗ್ನೇಯ ಮತ್ತು ವಾಯುವ್ಯ ಮೂಲೆಗಳು ಸ್ವಲ್ಪ ಸಮಯವಾಗಿಯೂ ನಿವೇಶನ ಪಶ್ಚಮ ಮತ್ತು ದಕ್ಷಿಣ ದಕ್ಕಿಗೆ ಬೆಟ್ಟಗುಡ್ಡಗಳಿರಬೇಕೆಂದು ಶಾಸ್ತ್ರಗ್ರಂಥಗಳು ಹೇಳುತ್ತವೆ. ಮೇಲಿನ ವಿವರಗಳು ಸಕಲ ಜೀವಸಂಕಲನವನ್ನೇ ಮನುಷ್ಯನ ಇರುವಿಕೆಯೊಂದಿಗೆ ಬೆಸೆಯುತ್ತವೆ. ಆದರೆ ಇಂದು ವಾಸ್ತವ ಮತ್ತು ಜೋತಿಷ್ಯದ ಹೆಸರಿನಲ್ಲಿ ಶುಭ ಅಶುಭ, ರಾಹು, ಕೇತು ಎನ್ನುವ ಮಿಥ್ಯಜ್ಞಾನದ ಮೂಲಕ ಮೂಢನಂಬಿಕೆಯನ್ನು ಬಿತ್ತಿ ಜನರನ್ನು ತತ್ತರಿಸುವಂತೆ ಮಾಡಲಾಗುತ್ತದೆ.

ಮನೆ ಮರ ಕಡಿವ ಲಕ್ಷಣ ಎನ್ನುವ ಅಧ್ಯಾಯದಲ್ಲಿ ಮರ ಕಡಿಯಬೇಕಾದರೆ ಮೊದಲು ಮರದ ಹತ್ತಿರ ಹೋಗಿ ಹಾಲು ಜೇನು ತುಪ್ಪ ಎರೆದು ಆಹ್ವಾನ ನೀಡಿ ಸಕಲ ದೇವತೆಗಳನ್ನು ನೆನೆದು ಮರದ ಕ್ಷಮೆ ಕೋರಿ ಬರಬೇಕು. ಕಡಿವ ಕೂಡಲಿಯನ್ನು ಮಸೆದು ಅದರ ಬಾಯಿಗೆ ತುಪ್ಪ ತೊಡೆದು ಕಡಿದರೆ ಮರ ಹದವಾಗಿ ಹರಿಯುವುದಲ್ಲದೆ ಹುಳಿಯದು ಮತ್ತೆ ಹುಳ ಹತ್ತದು ಅದೇ ರೀತಿ ಬಿಳಿ, ಅರಡಿದ ಮರ, ಹೂ ಹಣ್ಣು ಒಡ್ಡುವ ಮರ ಹಕ್ಕಿ ಪಕ್ಷಿ ಗೂಡುಕಟ್ಟಿದ ಮರ ಋಷಿ ಮುನಿಗಳು ವಾಸವಾಗಿದ್ದ ಮರ ಇತ್ಯಾದಿ ಮರಗಳನ್ನು ಕಡಿಯಬಾರದು. ವಾಸ್ತು ಮತ್ತು ಜೋತಿಷ್ಯದ ಹಸ್ತಪ್ರತಿಗಳಲ್ಲಿ ಸಿಗುವ ಇಂಥ ಸ್ವಾನುಭವ ಹಾಗೂ ಜೀವಪರ ನಿಲುವುಗಳು ಭೂಮಿಗಿರುವ ಗುರುತ್ವಾರ್ಷಣೆ ಹಾಗೂ ಆಯಸ್ಕಾಂತೀಯ ಶಕ್ತಿಗಳೊಂದಿಗೆ ಮನುಷ್ಯ ದೇಹದಲ್ಲಿರುವ ಕಾಂತೀಯ ಶಕ್ತಿಗಳು ಪರಸ್ಪರ ಹೊಂದಿಕೊಂಡು ಪ್ರಕೃತಿಯಲ್ಲಿನ ಜೀವ ಜಂತುಗಳೊಂದಿಗೆ ಸಹಭಾಳ್ವೆ ನಡೆಸಬೇಕಾದ ರೀತಿಯನ್ನು ಹೇಳುತ್ತವೆ.

ಭೂಮಿ, ಭೂಗೋಳ, ಖಗೋಳ ಪ್ರಕೃತಿ ನೆಲ, ಜಲ, ಮನುಷ್ಯ, ಪಶು, ಪಕ್ಷಿಗಳೊಂದಿಗೆ ಪ್ರತ್ಯೇಕ್ಷ ಹಾಗೂ ಸಾವಯವ ಸಂಬಂಧವನ್ನು ಬೆಸೆಯುವ ಕಾರಣಕ್ಕಾಗಿ ಮೇಲಿನ ಜ್ಞಾನಶಾಸ್ತ್ರಗಳಿಗೆ ಅಸ್ತಿತ್ವವಿದೆಯೇ ಹೊರತು ಅವು ಯಾವ ಸ್ವತಂತ್ರ ಅಥವಾ ಮಾನವಾತೀತವಾದವಲ್ಲ. ಸಂಕೀರ್ಣವಾದ ಮನುಷ್ಯನ ಮನಸ್ಸು ಅಪರಿಮಿತ ಆಸೆ ಅನಿಶ್ಚಿತೆ ಮತ್ತು ಪರ್ಯಾಯಗಳ ಆಯ್ಕೆಯಲ್ಲಿ ಅಧೀರಗೊಳ್ಳುತ್ತದೆ. ಇಂಥ ಅನಿಶ್ಚಿತತೆ ಮತ್ತು ಅಭದ್ರತೆ ಅವನ್ನನು ಪರಾವಲಂಬಿಯಾಗಿಸುತ್ತದೆ. ಅಷ್ಟೇ ಪ್ರಮಾನದಲ್ಲಿ ಪರ್ಯಾಯ ಮತ್ತು ಸ್ವತಃ ಪರಿಹಾರಗಳ ಹುಡುಕಾಟದಲ್ಲಿ

ತೋಡಗಿಸುತ್ತದೆ. ಈ ಹುಡುಕಾಟದ ಪ್ರತ್ಯೇಕ್ಷಾನುಭವದ ಫಲಿತಗಳೇ ಕೃತಿ ರೂಪದಲ್ಲಿ ದಾಖಲಾಗಿರುವುದು. ಅವು ಅನುಮಾನ ಮತ್ತು ಅನುಸಂಧಾನ ರೂಪದಲ್ಲಿರುವುದು ಸ್ಥಳೀಯ ಜ್ಞಾನಪರಂಪರೆಗಳ ವೈಜ್ಞಾನಿಕ ಹಾಗೂ ವೈಚಾರಿಕ ನೆಲೆಗಳನ್ನು ಹೇಳುತ್ತವೆ.

ಒಟ್ಟಾರೆಯಾಗಿ ಕನ್ನಡ ಸಾಹಿತ್ಯದಲ್ಲಿ ಕಾಣಸಿಗುವ ಲೌಕಿಕ ಮತ್ತು ಅಲೌಕಿಕ ಶಾಸ್ತ್ರ ಗ್ರಂಥಗಳ ಪ್ರಮಾಣ ಮತ್ತು ಪ್ರಯೋಜನ ದೃಷ್ಟಿಯಿಂದ ಪ್ರಮುಖವಾಗಿವೆ. ಲೌಕಿಕ ಬದುಕಿಗೆ ಆಸರೆಯಾಗಿ ಪ್ರಾಚೀನ ಕಾಲದಲ್ಲಿ ರಚನೆಯಾದ ಗಜಶಾಸ್ತ್ರ, ಅಶ್ವಶಾಸ್ತ್ರ, ಸೂಪಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ವಾಸ್ತು, ಕಾಮ, ವೈದ್ಯಶಾಸ್ತ್ರ ಮುಂತಾದ ಶಾಸ್ತ್ರಗಳ ಅಧ್ಯಯನಗಳು ನಡೆದಿದ್ದು ಮತ್ತು ನಡೆಯುವ ಅವಶ್ಯಕತೆ ಇದೆ. ಈ ಎಲ್ಲಾ ಶಾಸ್ತ್ರ ಕೃತಿಗಳಲ್ಲಿ ಪ್ರಸ್ತಾಪಗೊಂಡಿರುವ ವಿಚಾರಗಳನ್ನು ಒಂದೆಡೆ ಕಲೆಹಾಕಿ ಸಾಂಸ್ಕೃತಿಕವಾಗಿ ವಿಶ್ಲೇಷಣೆಗೆ ಒಳಪಡಿಸಬಹುದು. ಬಹುಮುಖ್ಯವಾಗಿ ಮೌಖಿಕ ಸಂಪ್ರದಾಯ ಮತ್ತು ಪ್ರಕೃತಿಯನ್ನು ಹೆಚ್ಚು ಒಳಗೊಂಡಿರುವ ದೇಶಿ ಶಾಸ್ತ್ರಗ್ರಂಥಗಳು ಸಾಹಿತ್ಯ ವಲಯದಲ್ಲಿ ಲೌಕಿಕ ಸಾಹಿತ್ಯ ಎಂದು ಕರೆಸಿಕೊಳ್ಳುವ ಮೂಲಕ ಉಪೇಕ್ಷೆಗೆ ಒಳಗಾಗಿದೆ. ಇಂದು ದೊರಕುವ ನೂರಾರು ಹಸ್ತಪ್ರತಿಗಳು ಒಂದು ನಂಬಿಕೆ ಪ್ರಧಾನವಾದ ಮನುಷ್ಯ ಬದುಕಿನ ಸಂಗತಿಗಳನ್ನು ಎತ್ತಿ ಹೇಳುತ್ತವೆ. ಈ ಕನ್ನಡ ಶಾಸ್ತ್ರ ಕೃತಿಗಳ ಹಸ್ತಪ್ರತಿಗಳು ವೈದಿಕಶಾಹಿ ಮತ್ತು ವಸಾಹತುಶಾಹಿ ಗುಂಗಿನಿಂದ ಹೊರಬಂದು ಜನ ಸಮುದಾಯವನ್ನು ತಮ್ಮೆಡೆಗೆ ಬರುವಂತೆ ಈ ಪರಂಪರೆಯ ಪ್ರಾಯೋಗಿಕ ನೆಲೆಯನ್ನು ಬಿತ್ತರಿಸಲು ಸಾಕ್ಷಿಯಾಗಿದೆ. ಹೀಗೆ ಭಾರತೀಯ ಪರಂಫರೆಯ ಕುರಿತು ಅನೇಕ ಶಾಸ್ತ್ರಗಳು ಸಮಾಜದ ಸಹಜ ಬೆಳವಣಿಗೆಯೊಂದಿಗೆ ತಳಕು ಹಾಕಿಕೊಂಡು ಶುದ್ದ ಮತ್ತು ಪಾವಿತ್ರ್ಯದ ಹೆಸರಿನಲ್ಲಿ ಸಾಮಾಜಿಕ ವಾಸ್ತವಗಳನ್ನು ಅದರ ಬಹುಕೋನಗಳನ್ನು ಧಿಕ್ಕರಿಸಿ ಯಾವಾಗಲೂ ಕ್ರಿಯೆ ಮತ್ತು ಅರಿವು ಬುದ್ಧಿ ಮತ್ತು ಭಾವದ ಸಂಯೋಜನೆಯಿಂದ ಸೃಷ್ಟಿ ಕ್ರಿಯೆಯ ದಾರಿ ಗಳನ್ನು ರೂಢಿಸಿಕೊಂಡು ಹೋಗುತ್ತಿವೆ. ಇವುಗಳು ಬಹುಮುಖ್ಯ ಗುಣವೇ ಪ್ರಯೋಜನ ಮುಖಿಯಾದದ್ದು. ಈ ಜನೋಪಕಾರಿ ಕೃತಿಗಳು ಸಂಸ್ಕೃತಿಮುಖಿ ನಿರ್ವಚನ ದೃಷ್ಟಿಯಿಂದ ಮುಖ್ಯವಾದಂಥವು. ಇವುಗಳ ಸಾಂಸ್ಕೃತಿಕ ಅಧ್ಯಯನದ ಪರಿಕಲ್ಪನೆಯಲ್ಲಿ ಸಮಾಜದ ಹಲವು ಕ್ಷೇತ್ರಗಳಲ್ಲಿ ಪ್ರಭಾಶಾಲಿ ಸ್ಥಾನ ಪಡೆದಿದೆ. ಇವುಗಳ ಸೃಷ್ಟಿಯ ಹಿಂದೆ ಆಯುರಾರೋಗ್ಯ ಸಂತಾನ ಪ್ರಾಪ್ತಿ, ಜೀವನಸುಖ, ಮೋಕ್ಷ, ಸಂಪಾದನೆಯಂಥ ಬಹುಮುಖಿ ಉದ್ದೇಶಗಳು ನಿಹಿತವಾಗಿವೆ.

ಈ ಮೇಲಿನ ವಿಷಯದಂತೆ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಪ್ರಯೋಗ ಮತ್ತು ಜನಮುಖಿ ಕೃತಿಗಳಾದ ಗಜಶಾಸ್ತ್ರ, ಕೃಷಿಶಾಸ್ತ್ರ, ಸೂಪಶಾಸ್ತ್ರ, ವೈದ್ಯಶಾಸ್ತ್ರ, ಜಲಶಾಸ್ತ್ರ, ಜ್ಯೋತಿಷ್ಯ, ಪ್ರಶ್ನೆಶಾಸ್ತ್ರ, ಶಕುನ ಶಿಲ್ಪಶಾಸ್ತ್ರಗಳಂತಹ ಕೃತಿಗಳು ಮತ್ತು ಹಸ್ತಪ್ರತಿಗಳ

ಕುರಿತು ಲೇಖನ ರೂಪಿ ಹಾಗೂ ಸಂಶೋಧನೆ ಮಾದರಿ ಅಧ್ಯಯನಗಳು ನಡೆದಿದ್ದು, ಈ ಅಧ್ಯಯನಗಳು ಕೂಡ ಸಾಂಸ್ಕೃತಿಕಮುಖಿ ಅಧ್ಯಯನದುದ್ದೇಶ ಚರ್ಚಿತವಾಗಿದೆ ಎಂಬುದು ಮುಖ್ಯವಾದ ಸಂಗತಿ. ಇಂತಹ ಕೃತಿಗಳು ಆಧುನಿಕ ಸಂದರ್ಭದಲ್ಲಿ ವೈದಿಕಶಾಹಿ ಮತ್ತು ವಸಾಹತುಶಾಹಿ ಗುಂಗಿನಲ್ಲಿ ಇವುಗಳನ್ನು ನೋಡಲಾಗುತ್ತಿತ್ತು. ಪ್ರಸ್ತುತ ಸಂದರ್ಭವೂ ಕೂಡಾ ಆಗಿದೆ. ವೈದಿಕಶಾಹಿ ಮತ್ತು ವಸಾಹತುಶಾಹಿ ಗುಂಗಿನಿಂದ ಹೊರಬಂದು ಜನಸಮುದಾಯ ತಮ್ಮೊಡನೆ ಬರುವಂತೆ ಜನಮುಖಿ ಅಧ್ಯಯನಗಳು ನಡೆಯುವ ಅಗತ್ಯವಿದೆ.

ಅಡಿಟಿಪ್ಪಣಿಗಳು

೧. ವೀರೇಶ ಬಡಿಗೇರ(ಸಂ), ಹಸ್ತಪ್ರತಿ ವ್ಯಾಸಂಗ ೧೪, ಪು.೭೭; ೨೦೧೫

೨. ಅದೇ, ಪು.೭೮; ೨೦೧೫

೩. ಅದೇ, ಪು.೭೮; ೨೦೧೫

೪. ಪಂ.ಭಾ. ಹನ್ನೆರಡನೇಯ ಆಶ್ವಾಸ, ಉಧೃತ; ವೀರೇಶ ಬಡಿಗೇರ, ಹಸ್ತಪ್ರತಿ ವ್ಯಾಸಂಗ ೧೪, ಪು.೭೯; ೨೦೧೫

೫. ಪಂ.ಭಾ., ಹದಿನಾಲ್ಕನೇ ಆಶ್ವಾಸ, ಪೂರ್ವೋಕ್ತ, ಪು.೭೯; ೨೦೧೫

೬. ಅದೇ, ಪು.೭೯; ೨೦೧೫

೭. ಅದೇ, ಪು.೮೦; ೨೦೧೫

೮. ಅದೇ, ಪು.೨೮; ೨೦೦೬

೯. ಅಗ್ರಹಾರ ಕೃಷ್ಣಮೂರ್ತಿ, ಉಧೃತ ವೀರೇಶ ಬಡಿಗೇರ, ಹಸ್ತಪ್ರತಿ ವ್ಯಾಸಂಗ ೧೪, ಪು.೨೦; ೨೦೧೫

೧೦. ವೀರೇಶ ಬಡಿಗೇರ, ಪ್ರತಿಸಂಸ್ಕೃತಿ, ಪು.೧೭೭; ೨೦೧೫

೧೧. ಅದೇ, ಪು.೨೦೫; ೨೦೧೫

೧೨. ಅದೇ, ಪು.೨೩೮; ೨೦೧೫

೧೩. ಹಳ್ಳಿಕೇರಿ ಎಫ್.ಟಿ., ಕಂಠಪತ್ರ–೩, ಪು.೩೩೧, ೨೦೧೪

೧೪. ವೀರೇಶ ಬಡಿಗೇರ, ಹಸ್ತಪ್ರತಿ ಸಂಕಥನ, ಪು.೮೯–೯೦; ೨೦೧೪

೧೫. ವೀರೇಶ ಬಡಿಗೇರ, ಹೋದ ಹೆಜ್ಜೆಯ ಕಾಣಬಾರದು, ಪು.೧೮೯–೧೯೫; ೨೦೨೦

೧೬. ಅದೇ, ಪು.೧೯೦

ಅಧ್ಯಾಯ: ಏಳು

ಸಮಾರೋಪ

ಅಧ್ಯಾಯ: ಏಳು

ಸಮಾರೋಪ

ಭಾರತದಾದ್ಯಂತ ನಡೆದ ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ ಹಾಗೂ ಅಧ್ಯಯನದ ನೆಲೆಗಳನ್ನು ಗಮನಿಸಿದಾಗ ಆರಂಭದಲ್ಲಿ ಅದು ಪ್ರಾಚ್ಯವಸ್ತುಗಳ ಸಂಗ್ರಹದ ಭಾಗವಾಗಿ ಆರಂಭವಾದದ್ದು ಎದ್ದು ಕಾಣುತ್ತದೆ. ೧೮ನೆಯ ಶತಮಾನದ ಮಧ್ಯಭಾಗದಿಂದ ೧೯ನೆಯ ಶತಮಾನದ ಮಧ್ಯಭಾಗದವರೆಗೆ ಈ ಅಧ್ಯಯನದ ನೆಲೆಗೆ ಒಂದು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಮಹತ್ವ ಬಂದಿತು. ವಿಶೇಷವಾಗಿ ದಕ್ಷಿಣ ಭಾರತದ ರಾಜ್ಯಗಳಲ್ಲಿ ಹಸ್ತಪ್ರತಿಗಳು ಅಭಿಜಾತ ಸಾಹಿತ್ಯ ಸಂಸ್ಕೃತಿಯ ಭಾಗವಾಗಿ ಸಂಪಾದನೆಗೊಂಡವು. ಬಹುಮುಖ್ಯವಾಗಿ ಸಂಗ್ರಹ ಹಾಗೂ ಪ್ರಕಟ ಈ ಕಾಲದ ವಿದ್ವತ್ತಿನ ಮುಖ್ಯ ಆಸಕ್ತಿಯಾಗಿತ್ತು. ವಸ್ತುಸಂಗ್ರಹಾಲಯಗಳು ಹಸ್ತಪ್ರತಿಭಂಡಾರಗಳ ಭಾಗವಾದ ಹಸ್ತಪ್ರತಿಗಳು ಸೂಚಿರೂಪದಲ್ಲಿ ಬೆಳಕು ಕಂಡವು. ಈ ಸೂಚಿಗಳು ಮುಂದೆ ಹೊಸ ಹೊಸ ರೂಪದಲ್ಲಿ ಪ್ರಕಟಗೊಂಡವು. ಸರಕಾರಿ ಸಂಸ್ಥೆಗಳು ಅರೇಸರಕಾರಿ ಹಾಗೂ ಖಾಸಗಿ ಸಂಸ್ಥೆಗಳು, ಮಠಮಾನ್ಯಗಳು ಆಯಾ ಮತಧರ್ಮದ ಸೂಚಿಗಳನ್ನು ತಯಾರಿಸಿದವು. ಬಯಲಾಟ, ಯಕ್ಷಗಾನದ ಹಸ್ತಪ್ರತಿಗಳು ಕಲ್ಲಚ್ಚಿನ ಪ್ರತಿಗಳ ಸೂಚಿಗಳು ಪ್ರಕಟಗೊಂಡ ಮುಂದಿನ ಅಧ್ಯಯನಕ್ಕೆ ಕಾರಣವಾದವು.

ಮಿಶಿನರಿಗಳು ದೇಶಿ ವಿದ್ವಾಂಸರು, ದೇಶಿ ಮಠಮಾನ್ಯಗಳು ಸಂಘಸಂಸ್ಥೆಗಳು, ವ್ಯಕ್ತಿಗಳು ವಿಶ್ವವಿದ್ಯಾಲಯಗಳು ಹಸ್ತಪ್ರತಿಗಳನ್ನು ತನ್ನದೇ ಆದ ಅಗತ್ಯದ ಹಿನ್ನೆಲೆಯಲ್ಲಿ ವೈವಿಧ್ಯಮಯವಾಗಿ ಎದುರುಗೊಂಡಿದ್ದು, ಹಸ್ತಪ್ರತಿ ಇಂದು ಒಂದು ಪ್ರತ್ಯೇಕ ಅಧ್ಯಯನ ಶಿಸ್ತಾಗಿ ಬೆಳೆಯಬಲ್ಲಷ್ಟು ಸಾಮರ್ಥ್ಯ ಒದಗಿಸಿದವು.

ಮಾಹಿತಿ ಪ್ರಧಾನ ಈ ಅಧ್ಯಯನವು ಬ್ರಿಟಿಷರ ವ್ಯಾಪಾರ ಹತಾಸಕ್ತಿಗಳನ್ನು ಗಟ್ಟಿಗೊಳಿಸಿತು. ಅದೇ ಹೊತ್ತಿಗೆ ಸ್ಥಳೀಯ ಬಹುಮುಖಿ ಸಂಸ್ಕೃತಿಯ ನೆಲೆಗಳು ಹಿಂದೆ ಬಿದ್ದವು. ಸಾಹಿತ್ಯ, ವ್ಯಾಕರಣ, ಲಕ್ಷಣ ಗ್ರಂಥಗಳು ಕೆಲವು ಮಾತ್ರ ಪಂಡಿತಮಾನ್ಯ ಕೃತಿಗಳಾಗಿ ಜನಸಂಸ್ಕೃತಿಯ ಭಾಗವಾಗಿದ್ದ ಹಲವು ಕೃತಿಗಳು ಉಪೇಕ್ಷೆಗೊಂಡವು. ಸ್ಥಳೀಯ ಚರಿತ್ರೆಯನ್ನು ಸಶಕ್ತವಾಗಿ ಕಟ್ಟುವ ಹಲವು ಜೀವಂತ ಕೃತಿಗಳು ಮೌಢ್ಯತೆಯ ದೀಕ್ಷೆ ಪಡೆದವು. ಇದರಿಂದ ಕನ್ನಡ ಸಾಹಿತ್ಯ ಚರಿತ್ರೆ ಎನ್ನುವುದು ಸವರಲ್ಪಟ್ಟ ಮರವಾಗಿ ಬಗೆಲೊಡೆಯದೆ ಬಂಜೆಯಾಯಿತು.

ಒಟ್ಟಿನಲ್ಲಿ ಹಸ್ತಪ್ರತಿ ಸಂಗ್ರಹ ಸಂರಕ್ಷಣೆ ಅಧ್ಯಯನ ನಡೆದ ಸಂದರ್ಭದ ಹಿಂದಿನ ಒತ್ತಡಗಳು ರಾಷ್ಟ್ರೀಯವಾದಿ ಚಳುವಳಿ, ಜನಾಂಗೀಯ ಸಿದ್ಧಾಂತಗಳು, ಕ್ರಿಶ್ಚಿಯಾನಿಟಿಯ ಚಟುವಟಿಕೆಗಳು, ಪ್ಲಾಸಿಕದನ, ಮಹಾಯುದ್ಧ, ಇಂಡೋ ಚೈನಾ ಯುದ್ದಗಳು, ಸುಧಾರಣವಾದ ಇವೆಲ್ಲ ಜಾತಿ ಹಾಗೂ ಭಾಷಾಶಾಸ್ತ್ರವನ್ನು ತಮ್ಮ ಧೋರಣೆಗಳ ಅನುಷ್ಠಾನಕ್ಕೆ ಪರಿಣಾಮಕಾರಿಯಾಗಿ ಬಳಸಿಕೊಂಡವು. ಇದರಿಂದ ಜನಾಂಗದ ಸಿದ್ಧಾಂತಕ್ಕೆ ಭಾಷಾಶಾಸ್ತ್ರೀಯ ಸಮರ್ಥನೆಯನ್ನು ನೀಡುವ ಮೂಲಕ ಬ್ರಾಹ್ಮಣ-ಶೂದ್ರ, ಮೇಲು-ಕೀಳು, ಶುದ್ಧ-ಅಶುದ್ಧ, ಪ್ರಮಾಣ-ಅಪ್ರಮಾಣ ಇತ್ಯಾದಿ ಸೀಳು ಕಲ್ಪನೆಯನ್ನು ಬೆಳಸಲಾಯಿತು. ಇದು ಇಂದಿಗೂ ಹಸ್ತಪ್ರತಿಗಳ ಸಂಗ್ರಹ ಸಂಪಾದನೆ ಅಧ್ಯಯನಗಳಲ್ಲಿ ಕಾಣುತ್ತಿರುವ ಸಂಗತಿಯಾಗಿದೆ. ಇದನ್ನು ಮೀರಿ ಹೊರಬಂದಾಗ ಮಾತ್ರ ಹಸ್ತಪ್ರತಿಗಳ ಅಧ್ಯಯನಕ್ಕೆ ಒಂದು ಹೊಸ ಆಯಾಮ ದಕ್ಕುತ್ತದೆ.

